ಕರ್ನಾಟಕ ಸರ್ಕಾರ



ವಿಜಯನಗರ ಅಧ್ಯಯನ

ಸಂಪುಟ–೨೧

ಸಂಪಾದಕರು
ಟಿ. ವೆಂಕಟೇಶ್
ಡಾ. ಆರ್. ಗೋಪಾಲ್

ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು–2019

ವಿಜಯನಗರ ಅಧ್ಯಯನ

ಸಂಪುಟ – ೨೧

ಸಂಪಾದಕರು

ಟಿ. ವೆಂಕಟೇಶ್

ಡಾ. ಆರ್. ಗೋಪಾಲ್

ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ

ವಸ್ತುಪ್ರದರ್ಶನ ಆವರಣ, ಮೈಸೂರು – 570 010

2019

VIJAYANAGARA ADHYAYANA (Vol. 21)
Edited by T. Venkatesh & Dr. R. Gopal, Published by The Commissioner, Department of Archaeology, Museums and Heritage, Mysore - 570 010

First Impression : 2020

Pages : xx+228=248

No. of Copies : 1000

Price : Rs. 250/-

Paper Used : 80 GSM Maplitho

Book Size : 1/4 Crown

Cover Page : Purushotham

Printed at :
LK Press Inc
188, 3rd Cross, Rajadhani Layout
Adakamaranahalli
Bangalore North - 562 123
Mobile : 8762966760

ಬಿ.ಎಸ್. ಯಡಿಯೂರಪ್ಪ
ಮುಖ್ಯಮಂತ್ರಿ

ವಿಧಾನಸೌಧ
ಬೆಂಗಳೂರು – 560 001

ಕರ್ನಾಟಕ ಸರ್ಕಾರ

ಸಂಖ್ಯೆ : ಮುಮಂ/ಮಾಕಾ/174/2019

ದಿನಾಂಕ : 09–01–2020

ಸಂದೇಶ

ಪುರಾತತ್ವ ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆಯು ಹಂಪಿ ಉತ್ಸವದ ಸಂದರ್ಭದಲ್ಲಿ ವಿಜಯನಗರ ಅಧ್ಯಯನ ಕುರಿತು ವಿಚಾರ ಸಂಕಿರಣವನ್ನು ಆಯೋಜಿಸಿ, ಮಂಡನೆಯಾದ ಪ್ರಬಂಧಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸುತ್ತಿರುವುದು ಸಂತಸದ ವಿಚಾರ.

ವಿಶ್ವಪರಂಪರೆಯ ತಾಣವಾಗಿರುವ ವಿಜಯನಗರದ ರಾಜಧಾನಿಯಾಗಿದ್ದ ಹಂಪಿಯು ಸಮಕಾಲೀನ ಪ್ರಪಂಚದ ಇತಿಹಾಸದಲ್ಲಿ ತನ್ನದೇ ವಿಶಿಷ್ಟ ಸ್ಥಾನವನ್ನು ಉಳಿಸಿಕೊಂಡಿದೆ. ಇಂದಿಗೂ ಹಂಪಿಯ ಕುರಿತು ಅಧ್ಯಯನ ಅವಿರತವಾಗಿ ಸಾಗಿರುವುದು ಅದರ ವ್ಯಾಪ್ತಿ ಮತ್ತು ಪ್ರಾಮುಖ್ಯತೆಗೆ ಹಿಡಿದ ಕನ್ನಡಿ.

ಹಂಪಿಯ ಗತವೈಭವದ ಕುರಿತು ವ್ಯಾಪಕ ಮಾಹಿತಿಯನ್ನು ಪುಸ್ತಕ ರೂಪದಲ್ಲಿ ಲಭ್ಯವಾಗಿಸಿರುವುದು ವಿದ್ಯಾರ್ಥಿಗಳಿಗೆ, ಯುವಜನತೆಗೆ, ಇತಿಹಾಸ ಅಧ್ಯಯನಕಾರರಿಗೆ, ವಿದ್ವಾಂಸರಿಗೆ ಅಧ್ಯಯನಕ್ಕೆ ಸಹಕಾರಿಯಾಗುವುದು.

ವಿಚಾರ ಸಂಕಿರಣದ ಆಯೋಜಕರಾದ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಆಯುಕ್ತರು, ನಿರ್ದೇಶಕರು ಮತ್ತು ಸಿಬ್ಬಂದಿಗಳಿಗೆ ನನ್ನ ಅಭಿನಂದನೆಗಳು.

(ಬಿ.ಎಸ್. ಯಡಿಯೂರಪ್ಪ)

ಸಿ.ಟಿ. ರವಿ
ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ,
ಸಕ್ಕರೆ ಸಚಿವರು ಹಾಗೂ ಚಿಕ್ಕಮಗಳೂರು
ಜಿಲ್ಲಾ ಉಸ್ತುವಾರಿ ಸಚಿವರು

ಕೊಠಡಿ ಸಂಖ್ಯೆ : 344, 3ನೇ ಮಹಡಿ
ವಿಧಾನಸೌಧ, ಬೆಂಗಳೂರು – 560 001
ದೂರವಾಣಿ : 080–2225 1568
2203 3426
ಇ–ಮೇಲ್ : ctrtourism@gmail.com

ಸಂಖ್ಯೆ : ಪ್ರಕಸಂಸಸ/285/2020

ದಿನಾಂಕ : 8–1–2020

ಸಂದೇಶ

ಕರ್ನಾಟಕ ಇತಿಹಾಸದಲ್ಲಿ, ವಿಜಯನಗರ ಸಾಮ್ರಾಜ್ಯದ ಕೀರ್ತಿ ಕೇವಲ ಭಾರತದಲ್ಲಿ ಮಾತ್ರವಲ್ಲದೆ ಮಧ್ಯ ಏಷಿಯಾ, ಶ್ರೀಲಂಕಾ ಮೊದಲಾದ ಬಹುದೂರದ ರಾಷ್ಟ್ರಗಳವರೆಗೂ ಹಬ್ಬಿತ್ತು. ವಿಜಯನಗರದ ಬೇರೆ ಬೇರೆ ಅರಸರ ಕಾಲದಲ್ಲಿ ಸಂದರ್ಶಿಸಿದ ದೇಶ ಮತ್ತು ವಿದೇಶಗಳ ಪ್ರವಾಸಿಗರು ವಿಜಯನಗರ ಸಾಮ್ರಾಜ್ಯದ ವೈಭವ, ಕಲೆ, ಸಂಪ್ರದಾಯ, ಹಬ್ಬ – ಹರಿದಿನಗಳು, ರಾಜನ ವ್ಯಕ್ತಿತ್ವ, ಆಡಳಿತ ಕ್ರಮ, ಸೈನ್ಯ ಅದರ ಚಲನವಲನಗಳು ಇತ್ಯಾದಿ ಹತ್ತು ಹಲವು ವಿಷಯಗಳ ವಿವರಗಳನ್ನು ದಾಖಲಿಸಿದ್ದಾರೆ.

ಪ್ರವಾಸೋದ್ಯಮ ಸಚಿವಾಲಯದ ಅಡಿಯಲ್ಲಿ ಬರುವ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯು ಕಳೆದ ಇಪ್ಪತ್ತನಾಲ್ಕು ವರ್ಷಗಳಿಂದ ವಿಜಯನಗರ ಅಧ್ಯಯನ ಮಾಲಿಕೆಯ ವಿಚಾರ ಸಂಕಿರಣಗಳನ್ನು ಆಯೋಜಿಸಿಕೊಂಡು ಬರುತ್ತಿದೆಯಲ್ಲದೆ, ವಿಚಾರ ಸಂಕಿರಣಗಳಲ್ಲಿ ಮಂಡಿತವಾದ ಸಂಪ್ರಬಂಧಗಳನ್ನು ಗ್ರಂಥರೂಪದಲ್ಲಿ ಸಂಪಾದಿಸಿ, ಅದನ್ನು ನಿರಂತರವಾಗಿ ಹೊರತರುತ್ತಿರುವುದು ಹೆಮ್ಮೆಯ ಸಂಗತಿ.

ಈ ಬಗೆಯ ಸಂಶೋಧನ ಕಾರ್ಯವು ವಿಜಯನಗರ ಸಾಮ್ರಾಜ್ಯದ ವ್ಯಾಪ್ತಿಯಲ್ಲಿದ್ದ ದಕ್ಷಿಣ ರಾಜ್ಯಗಳಿಗಿಂತ ಕರ್ನಾಟಕ ಸರ್ಕಾರದ ಪುರಾತತ್ವ ಇಲಾಖೆ ಹಾಗೂ ಇತರ ವಿಶ್ವವಿದ್ಯಾಲಯಗಳು ತೋರಿರುವ ಆಸಕ್ತಿ ಪ್ರಶಂಸನೀಯವಾದದ್ದು. ಇದಕ್ಕಾಗಿ ವಿಶೇಷವಾಗಿ ವಿಚಾರ ಸಂಕಿರಣದ ಆಯೋಜಕರಾದ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಆಯುಕ್ತರು, ನಿರ್ದೇಶಕರು ಮತ್ತು ಇಲಾಖೆಯ ಸಿಬ್ಬಂದಿಯನ್ನು ಹಾಗೂ ಇಡೀ ಸಂಪುಟದ ಎಲ್ಲಾ ಸಂಪಾದಕರುಗಳನ್ನು ಅಭಿನಂದಿಸುತ್ತೇನೆ.

ಈ ಸಂಪುಟವನ್ನು ಓದುಗರು ಹಾಗೂ ಇತಿಹಾಸಕಾರರು ಮತ್ತು ಅಧ್ಯಯನಾಸಕ್ತರು ಆದರದಿಂದ ಸ್ವಾಗತಿಸುತ್ತಾರೆಂದು ಭಾವಿಸಿದ್ದೇನೆ.

(ಸಿ.ಟಿ. ರವಿ)

ಪ್ರಸ್ತಾವನೆ

ವಿಜಯನಗರ ಸಾಮ್ರಾಜ್ಯದ ಬಗೆಗಿನ ಶಾಸ್ತ್ರೀಯ ಅಧ್ಯಯನ ಪ್ರಾರಂಭವಾಗಿ ಒಂದು ಶತಮಾನವೇ ಆಗಿದ್ದರೂ ಇನ್ನೂ ಮೊಗೆಯುತ್ತಿರುವ ಚಿಲುಮೆಯಂತೆ ಅಧ್ಯಯನಗಳು ನಡೆಯುತ್ತಲೇ ಇದೆ. ಈ ಅಧ್ಯಯನಗಳಲ್ಲಿ ಬಹುತೇಕವು ಸತತವಾಗಿ ಪ್ರಕಟವಾಗಿದ್ದು, ಆ ಮಹಾನ್ ಸಾಮ್ರಾಜ್ಯದ ರಾಜಕೀಯ, ಆರ್ಥಿಕತೆ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಪರಂಪರೆಯ ಭವ್ಯ ಪರಿಚಯವನ್ನು ಮಾಡಿಕೊಡುತ್ತದೆ. ಇಂತಹ ಮಹಾನ್ ಸಾಮ್ರಾಜ್ಯದ ಅವಶೇಷಗಳು, ಸ್ಮಾರಕಗಳು ಅನೇಕ ಚದರ ಕಿಲೋಮೀಟರ್‌ಗಳಷ್ಟು ಪ್ರದೇಶದಲ್ಲಿ ಹರಡಿದೆ. ಇವುಗಳ ಸಂರಕ್ಷಣಾ ಕಾರ್ಯವನ್ನು ಭಾರತೀಯ ಪುರಾತತ್ವ ಇಲಾಖೆಯ ಸಹಯೋಗದೊಂದಿಗೆ ಕರ್ನಾಟಕ ರಾಜ್ಯದ ಪುರಾತತ್ತ್ವ ಇಲಾಖೆಯು 1979ರಲ್ಲಿ ಪ್ರಾರಂಭಿಸಿತು. ಈ ಯೋಜನೆಯ ಅಂಗವಾಗಿ ನಡೆದ/ನಡೆಯುತ್ತಿರುವ ಕಾರ್ಯಗಳು ವಿಶ್ವಸಮುದಾಯದ ಗಮನವನ್ನು ಸೆಳೆದು ವಿಶ್ವಪಾರಂಪಾರಿಕ ಸ್ಥಳವಾಗಿ ಗುರುತಿಸಲ್ಪಟ್ಟಿದೆ. ಇದರ ಅಂಗವಾಗಿ ಪ್ರತಿವರ್ಷವೂ ಕರ್ನಾಟಕ ಸರ್ಕಾರದ ವತಿಯಿಂದ ಹಂಪಿ ಉತ್ಸವವೂ ನಡೆಯುತ್ತಿರುವುದು ಗಮನಾರ್ಹವಾದ ಅಂಶವಾಗಿದೆ.

ಈ ಹಿನ್ನೆಲೆಯಲ್ಲಿ ನಮ್ಮ ಪುರಾತತ್ತ್ವ ಇಲಾಖೆಯ ವತಿಯಿಂದ 1994-95ನೆಯ ಸಾಲಿನಿಂದ ವರ್ಷ ವರ್ಷವೂ ವಿಜಯನಗರ ಅಧ್ಯಯನವೆಂಬ ಹೆಸರಿನಲ್ಲಿ ವಿಚಾರಸಂಕಿರಣಗಳನ್ನು ಯಶಸ್ವಿಯಾಗಿ, ಹಂಪೆಯಲ್ಲಿಯೇ ನಡೆಸಿಕೊಂಡು ಬರಲಾಗುತ್ತಿದೆ. ಈ ವಿಚಾರಸಂಕಿರಣಗಳು ಕೆಲವೊಮ್ಮೆ ಬದಲಾದ ವೇಳಾಪಟ್ಟಿಗಳಲ್ಲಿ ನಿರಂತರವಾಗಿ ನಡೆದು, ಆಯಾ ವರ್ಷಗಳಲ್ಲಿ ಸಂಶೋಧಕರಿಂದ ಮಂಡನೆಯಾದ ಸಂಪ್ರಬಂಧಗಳು, ಮರುವರ್ಷದ ಉತ್ಸವದ ಸಮಯದಲ್ಲಿ ಪುಸ್ತಕ ರೂಪದಲ್ಲಿ, ವಿಜಯನಗರ ಅಧ್ಯಯನವೆಂಬ ಹೆಸರಿನಲ್ಲಿ ಪ್ರಕಟವಾಗುತ್ತಿದೆ. ಇದರಲ್ಲಿನ ಸಂಪ್ರಬಂಧಗಳು ಶಾಸನಗಳು, ನಾಣ್ಯಗಳು, ವಾಸ್ತುಶಿಲ್ಪ, ಶಿಲ್ಪಕಲೆ, ಸಾಹಿತ್ಯ ಮುಂತಾದ ವಿಷಯಗಳನ್ನು ಅಧಿಕರಿಸಿಕೊಂಡಿರುವುದಾಗಿದೆ.

ಪ್ರಸ್ತುತ ಪ್ರಕಟವಾಗುತ್ತಿರುವ ವಿಜಯನಗರ ಅಧ್ಯಯನ, ಸಂಪುಟ-21ರಲ್ಲಿ ಮೇಲಿನ ವಿಷಯಗಳನ್ನು ಒಳಕೊಂಡಿರುವ ಅನೇಕ ಸಂಪ್ರಬಂಧಗಳಿವೆ. ಕೆಲವು ಸಂಪ್ರಬಂಧಗಳಲ್ಲಿ ಅನೇಕ ಪ್ರಮುಖವಾದ ಹೊಸ ಶೋಧಗಳು ದಾಖಲಾಗಿರುವುದು ಗಮನಿಸಬೇಕಾದ ಸಂಗತಿಯಾಗಿದೆ. ಮಂಡನೆಯಾದ ಸಂಪ್ರಬಂಧಗಳಲ್ಲಿ ಬಹುತೇಕವನ್ನು ಇಲ್ಲಿ ಸೇರ್ಪಡೆ ಮಾಡಲಾಗಿದೆ. ಇಲಾಖೆಯ ಉದ್ದೇಶ, ಇತಿಮಿತಿಗಳ ಹಿನ್ನೆಲೆಯಲ್ಲಿ ಮತ್ತು ಪ್ರಬಂಧಗಳ ರೂಪುರೇಷೆಗಳ ಹಿನ್ನೆಲೆಯಲ್ಲಿ ಕೆಲವನ್ನು ಅನಿವಾರ್ಯವಾಗಿ ಸೇರ್ಪಡೆ ಮಾಡಲು ಸಾಧ್ಯವಾಗಿರುವುದಿಲ್ಲ. ಸಂಶೋಧಕರು ನೀಡಿರುವ ಸಂಪ್ರಬಂಧಗಳಲ್ಲಿರುವ ಕೆಲವೊಂದು ಅಚ್ಚಿನ ದೋಷಗಳು, ಅನಗತ್ಯವೆನಿಸುವಂತಹ ವಿವರಗಳು ಇತ್ಯಾದಿಗಳನ್ನು ಇಲ್ಲಿ ಸರಿಪಡಿಸಲಾಗಿದೆ. ಇಷ್ಟನ್ನು ಬಿಟ್ಟರೆ ಹೆಚ್ಚಿನ ತಿದ್ದುಪಡಿಗಳನ್ನು ಮಾಡಲು ಹೋಗಿಲ್ಲ. ಈ ಪುಸ್ತಕದ ಕರಡನ್ನು ನೋಡಿಕೊಟ್ಟ ಡಾ. ಪಿ.ವಿ. ಕೃಷ್ಣಮೂರ್ತಿ ಹಾಗೂ ಡಾ. ಕಾರ್ತೀಕ್‌ರವರಿಗೆ ಇಲಾಖೆಯು ಆಭಾರಿಯಾಗಿದೆ. ಇಂತಹ ಸಂಪುಟವನ್ನು ಸಂಪಾದಿಸಿ ಹೊರತರುವಲ್ಲಿ ಇಲಾಖೆಯ ಅಧಿಕಾರಿಗಳು ಹಾಗೂ ಹಲವರು ಸಂಶೋಧಕ ವಿದ್ವಾಂಸರುಗಳು ತಮ್ಮ ಅಮೂಲ್ಯ ನೆರವನ್ನು ನೀಡಿರುತ್ತಾರೆ. ಜೊತೆಗೆ ಉಪನಿರ್ದೇಶಕರ ಕಚೇರಿ, ಕಮಲಾಪುರ (ಹಂಪಿ) ಇಲ್ಲಿನ ಪ್ರಭಾರಿ ಉಪನಿರ್ದೇಶಕರಾಗಿದ್ದ ಶ್ರೀ ಶಿವಪ್ಪ ಹಾಗೂ ಪುರಾತತ್ವ ಸಹಾಯಕರಾದ ಡಾ. ಮಂಜನಾಯ್ಕ ಹಾಗೂ ಇನ್ನಿತರ ಸಿಬ್ಬಂದಿ ವರ್ಗದವರು ಹಾಗೂ ಕೇಂದ್ರ ಕಚೇರಿಯ ಸಹಾಯಕ

ನಿರ್ದೇಶಕರಾದ ಡಾ. ಮಂಜುಳ ಮತ್ತು ಪುರಾತತ್ವ ಸಹಾಯಕರಾದ ಶ್ರೀ ಎಲ್.ಎನ್. ಗೌಡ ಇತರ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಕೂಡ ಅಮೂಲ್ಯ ಸಹಕಾರವನ್ನು ನೀಡಿರುತ್ತಾರೆ. ವಸ್ತುಸಂಗ್ರಹಾಲಯಗಳ ನಿರ್ದೇಶಕರಾದ ಡಾ. ಆರ್. ಗೋಪಾಲ್ ಅವರು ಈ ಸಂಪುಟದ ಸಂಪಾದಕತ್ವದ ಹೊಣೆಯನ್ನು ಹೊತ್ತುಕೊಂಡು ಅಚ್ಚುಕಟ್ಟಾಗಿ ನಿಭಾಯಿಸಿರುತ್ತಾರೆ ಮತ್ತು ಈ ಸಂಪುಟವು ಹೊರಬರುವಲ್ಲಿ ಬಹಳವಾಗಿ ಶ್ರಮಿಸಿರುತ್ತಾರೆ. ಈ ಪುಸ್ತಕದ ಮುದ್ರಣದ ಕಾರ್ಯವನ್ನು ಎಲ್.ಕೆ. ಪ್ರೆಸ್ ಇಂಕ್ ವಹಿಸಿಕೊಂಡು ಸುಂದರವಾಗಿ ಮುದ್ರಿಸಿ ಕೊಟ್ಟಿರುತ್ತಾರೆ. ಇವರೆಲ್ಲರಿಗೂ ಅಭಿನಂದನೆಗಳು ಸಲ್ಲಿಸುತ್ತಾ, ಈ ಗ್ರಂಥವನ್ನು ಎಲ್ಲರೂ ಆದರದಿಂದ ಸ್ವಾಗತಿಸುತ್ತಾರೆಂದು ಆಶಿಸಲಾಗಿದೆ.

– **ಶ್ರೀ ಟಿ. ವೆಂಕಟೇಶ್** ಕೆ.ಎ.ಎಸ್.
ಆಯುಕ್ತರು
ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ
ಮೈಸೂರು

ಕರ್ನಾಟಕ ಇತಿಹಾಸ ಅಕಾಡೆಮಿ (ರಿ.)
ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ ಆವರಣ, 3ನೇ ಮುಖ್ಯರಸ್ತೆ, ನ.ರಾ. ಕಾಲೋನಿ, ಬೆಂಗಳೂರು-560 019
Karnataka Itihasa Academy (R.)
B.M.Shri Smaraka Prathistana, 3rd Main Road, NR Colony, Bengaluru-560 019

ಮುನ್ನುಡಿ

ವಿಜಯನಗರ ಅಧ್ಯಯನ ಸಂಪುಟಗಳು ಕರ್ನಾಟಕ ಪುರಾತತ್ವ, ವಸ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯಿಂದ ಹೊರತರುತ್ತಿರುವ ಸಂಪುಟಗಳು ಸಂಶೋಧಕರಿಗೆ ಮಹಾನ್ ಆಕರಗಳಾಗಿವೆ. ವಾರ್ಷಿಕವಾಗಿ ನಡೆಯುವ ಹಂಪಿ ಉತ್ಸವದ ಅಂಗವಾಗಿ ಹಂಪೆಯಲ್ಲಿ ವಿಜಯನಗರ ಸಾಮ್ರಾಜ್ಯವನ್ನು ಕುರಿತಂತೆ ವಿಚಾರಸಂಕಿರಣವನ್ನು ಇಲಾಖೆ ಏರ್ಪಡಿಸುತ್ತಾ ಬಂದಿದ್ದು, ಪ್ರತಿವರ್ಷವೂ ವಿಜಯನಗರ ಸಾಮ್ರಾಜ್ಯಕ್ಕೆ ಸಂಬಂಧಿಸಿದ ಹೊಸ ಹೊಸ ವಿಷಯಗಳ ಮಂಡನೆ ಪ್ರತಿ ವಿಚಾರ ಸಂಕಿರಣದಲ್ಲಿ ಮಂಡನೆಯಾಗುತ್ತದೆ. ಅವುಗಳ ಸಂಪಾದಿತ ಕೃತಿಗಳೇ ಈ ವಿಜಯನಗರ ಅಧ್ಯಯನ ಸಂಪುಟಗಳು. ಇದುವರೆವಿಗೆ ವಿದ್ವಾಂಸರು ತಮಗೆ ದೊರೆತ ಶಾಸನ, ವಿದೇಶಿಯರ ಬರವಣಿಗೆ, ಸಾಹಿತ್ಯ ಕೃತಿಗಳನ್ನು ಆಧರಿಸಿ ವಿಜಯನಗರ ಇತಿಹಾಸವನ್ನು ರಚಿಸಿದ್ದರು. ಆದರೆ ಈ ವಿಚಾರ ಸಂಕಿರಣಗಳಲ್ಲಿ ಇದುವರೆಗೆ ರಚಿತವಾದ ಸಿದ್ಧ ಇತಿಹಾಸಕ್ಕೆ ಪೂರಕ ವಿವರಗಳು, ಹೊಸಸಂಗತಿಗಳು ಸೇರ್ಪಡೆಯಾಗಿವೆ. ಹಂಪೆಯನ್ನೇ ಕುರಿತಂತೆ ಅನೇಕ ಹೊಸ ವಿಷಯಗಳು ಈ ವಿಚಾರ ಸಂಕಿರಣಗಳಲ್ಲಿ ಮಂಡನೆಯಾಗಿವೆ. ವಿಜಯನಗರ ಕಾಲದ ಅನೇಕ ಶಾಸನಗಳ ಮರು ಓದು, ಅರ್ಥೈಸುವಿಕೆಗಳೇ ಅಲ್ಲದೇ ಸ್ಥಳಗಳನ್ನು ನಿಖರವಾಗಿ ಗುರುತಿಸುವ ಕಾರ್ಯವೂ ಈ ಲೇಖನಗಳಿಂದಾಗುತ್ತಿದೆ.

ಈ ವಿಚಾರ ಸಂಕಿರಣಗಳಲ್ಲಿ ನಾಡಿನ ಪ್ರಖ್ಯಾತ ವಿದ್ವಾಂಸರಲ್ಲದೆ ಪಿಎಚ್.ಡಿ. ವಿದ್ಯಾರ್ಥಿಗಳೂ ಪ್ರಬಂಧ ಮಂಡಿಸುವ ಮೂಲಕ ವಿಜಯನಗರ ಇತಿಹಾಸಕ್ಕೆ ತಮ್ಮದೇ ಆದ ಕಾಣಿಕೆ ನೀಡಿದ್ದಾರೆ. ವಿಜಯನಗರ ಸಂಪುಟಗಳು ಆರಂಭದಲ್ಲಿ ಕೆಲವು ಲೇಖನಗಳಷ್ಟೇ ಸೀಮಿತವಾಗಿದ್ದವು. ಈಗ ವಿಜಯನಗರದ ಇತಿಹಾಸವನ್ನು ಅನೇಕ ಆಯಾಮಗಳಿಂದ ಅಧ್ಯಯನ ನಡೆಸುತ್ತಿರುವುದರಿಂದ ವಿಜಯನಗರ ಅಧ್ಯಯನ ಸಂಪುಟದ ಗಾತ್ರವೂ ದೊಡ್ಡದಾಗಿದೆ.

ಈ ಸಂಪುಟಗಳಲ್ಲಿ ಮಂಡಿತವಾದ ಲೇಖನಗಳು ಕೇವಲ ವಿಜಯನಗರದ ಅರಸರಿಗೆ ಮಾತ್ರ ಸೀಮಿತವಾಗಿರದೆ ಕರ್ನಾಟಕದಾದ್ಯಂತ ವಿಜಯನಗರದ ಅರಸರು ಮತ್ತು ಅವರ ಮಂಡಳಿಕರು, ಅಧಿಕಾರಿಗಳು, ವಿಜಯನಗರೋತ್ತರ ಕಾಲದ ಅರಸರು ನಡೆಸಿದ ಆಳ್ವಿಕೆಗಳ ಬಗ್ಗೆಯೂ ಈ ಸಂಪುಟಗಳಲ್ಲಿ ಲೇಖನಗಳು ಪ್ರಕಟವಾಗಿದ್ದು ವಿಜಯನಗರ ಕಾಲದ ರಾಜಕೀಯ, ಸಾಮಾಜಿಕ ಮತ್ತು ಸಾಂಸ್ಕೃತಿಕ ಇತಿಹಾಸದ ಮರು ರಚನೆಯ ಬಗ್ಗೆ ಚಿಂತಿಸಬೇಕಾದ ಅವಸರವಿದೆ.

ಈ ಲೇಖನಗಳೇ ಅಲ್ಲದೆ ಪ್ರತಿ ವಿಚಾರ ಸಂಕಿರಣದಲ್ಲಿ ಒಬ್ಬರು ಸರ್ವಾಧ್ಯಕ್ಷರನ್ನು ಆಯ್ಕೆ ಮಾಡಿ ಅವರ ಉಪನ್ಯಾಸವನ್ನು ಈ ಸಂಪುಟಗಳಲ್ಲಿ ಮುದ್ರಿಸಿದ್ದು, ಇವು ಮುಂದಿನ ಅಧ್ಯಯನ ಹಾಗೂ ಯುವ ಪೀಳಿಗೆಯ ಅಧ್ಯಯನಕ್ಕೆ ದಾರಿದೀಪವಾಗುತ್ತವೆ. ಇಂತಹ ವೈವಿಧ್ಯಮಯ ಲೇಖನಗಳನ್ನು ಒಳಗೊಂಡಿರುವ ವಿಜಯನಗರ ಅಧ್ಯಯನ ಸಂಪುಟಗಳು ವಿಜಯನಗರ ಇತಿಹಾಸದ ಪುನಾರಚನೆಯಲ್ಲಿ ಪ್ರಮುಖ ಆಕರಗಳಾಗಿ ನಿಲ್ಲುತ್ತವೆಯೆಂಬುದರಲ್ಲಿ ಯಾವ ಸಂಶಯವೂ ಇಲ್ಲ.

ಈ ಸಂಪುಟಗಳನ್ನು ಹೊರತರುವಲ್ಲಿ ಶ್ರಮಿಸುತ್ತಿರುವ ಪ್ರಾಚ್ಯವಸ್ತು, ವಸ್ತು ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆಯ ಆಯುಕ್ತರು, ನಿರ್ದೇಶಕರು ಹಾಗೂ ಸಿಬ್ಬಂದಿಗಳನ್ನು ಗೌರವಪೂರ್ವಕವಾಗಿ ಅಭಿನಂದಿಸುತ್ತೇನೆ.

ಡಿಸೆಂಬರ್ 2019
ಬೆಂಗಳೂರು

(ಅಧ್ಯಕ್ಷರು)
ಕರ್ನಾಟಕ ಇತಿಹಾಸ ಅಕಾಡೆಮಿ (ರಿ.)
ಬೆಂಗಳೂರು

21ನೇ ವಿಜಯನಗರ ಅಧ್ಯಯನ ವಿಚಾರ ಸಂಕಿರಣ ಸಮ್ಮೇಳನದ ಅಧ್ಯಕ್ಷ ಭಾಷಣ

– ಡಾ. ಸಿ.ಎಸ್. ವಾಸುದೇವನ್

ಸನ್ಮಾನ್ಯರೆ,

21ನೆಯ ವಿಜಯನಗರ ಅಧ್ಯಯನ ವಿಚಾರ ಸಂಕಿರಣವನ್ನು ಉದ್ಘಾಟಿಸಿದ ಕರ್ನಾಟಕ ಸರ್ಕಾರದ ಸನ್ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರಾದ ಶ್ರೀಮತಿ ಉಮಾಶ್ರೀ ಅವರೇ, ಸಮಾರಂಭದ ಅಧ್ಯಕ್ಷತೆ ವಹಿಸಿರುವ ವಿಜಯನಗರ ವಿಧಾನಸಭಾ ಕ್ಷೇತ್ರದ ಶಾಸಕರಾದ ಸನ್ಮಾನ್ಯ ಶ್ರೀ ಆನಂದ್ ಸಿಂಗ್ ಅವರೆ, ಮುಖ್ಯ ಅತಿಥಿಗಳಾದ ಕರ್ನಾಟಕ ಸರ್ಕಾರದ ಕಾರ್ಮಿಕ ಸಚಿವರು ಹಾಗೂ ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವರಾದ ಸನ್ಮಾನ್ಯ ಶ್ರೀ ಸಂತೋಷ್ ಎಸ್. ಲಾಡ್ ಅವರೆ, ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳು ಹಾಗೂ ಪುರಾತತ್ವ, ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆಯ ಆಯುಕ್ತರಾದ ಡಾ. ಎನ್. ಮಂಜುಳಾ ಅವರೆ, ಪುರಾತತ್ವ, ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆಯ ಪುರಾತತ್ವ ನಿರ್ದೇಶಕರು ಮತ್ತು ವಸ್ತುಸಂಗ್ರಹಾಲಯ ನಿರ್ದೇಶಕರಾದ ಡಾ. ಆರ್. ಗೋಪಾಲ್ ಅವರೆ, ಇಲಾಖೆಯ ಉಪನಿರ್ದೇಶಕರಾದ ಡಾ. ಶಿವಪ್ಪನವರೆ, ಇಲಾಖೆಯ ಎಲ್ಲಾ ಸಿಬ್ಬಂದಿಯವರೆ, ತಮ್ಮ ಸಂಶೋಧನ ಪ್ರಬಂಧಗಳನ್ನು ಮಂಡಿಸಲು ನಾಡಿನ ವಿವಿಧೆಡೆಯಿಂದ ಆಗಮಿಸಿರುವ ವಿದ್ವಜ್ಜನರೆ, ಇಲ್ಲಿ ನೆರೆದಿರುವ ಹಿರಿಯರೆ, ಕಿರಿಯರೆ ಮತ್ತು ಎಲ್ಲಾ ಬಂಧುಗಳೆ, ಮೊದಲಿಗೆ ಹಂಪಿಯ ಮತ್ತು ವಿಜಯನಗರದರಸರ ಅಧಿದೇವತೆಯಾದ ಶ್ರೀ ವಿರೂಪಾಕ್ಷ ಮತ್ತು ಪಂಪಾದೇವಿಗೆ ವಂದಿಸುತ್ತಾ ವಿಜಯನಗರ ಅಧ್ಯಯನದ 21ನೆಯ ವಿಚಾರ ಸಂಕಿರಣ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿಕೊಳ್ಳುವಂತಹ ಜವಾಬ್ದಾರಿಯನ್ನು ನನಗೆ ನೀಡಿ ಗೌರವಿಸಿರುವುದಕ್ಕೆ ನಾನು ಇಲಾಖೆಗೆ ಗೌರವಪೂರ್ವಕವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಅದನ್ನು ನಿಭಾಯಿಸುವಷ್ಟು ಅರ್ಹ ನಾನೆಂದು ಭಾವಿಸುವುದಿಲ್ಲ. ಏಕೆಂದರೆ ವಿಜಯನಗರದ ಸಂಶೋಧನೆಯಲ್ಲಿ ಅಂಬೆಗಾಲಿಡುತ್ತಿರುವ ಒರ್ವ ಸಂಶೋಧನಾರ್ಥಿ ಎಂದೇ ಭಾವಿಸುತ್ತೇನೆ. ವಿಜಯನಗರ ಅಧ್ಯಯನವು ವಿಶಾಲ ಸಾಗರವಿದ್ದಂತೆ ಅದರಲ್ಲಿನ ಒಂದು ಬೊಗಸೆಯಷ್ಟು ನೀರನ್ನು ಮಾತ್ರವೇ ತೆಗೆದಿರುವೆನೆಂಬುದು ನನ್ನ ಅನಿಸಿಕೆ. ಎಷ್ಟು ಮೊಗೆದರೂ ಬತ್ತಿ ಬರಡಾಗದ ನೀರು ವಿಜಯನಗರ ಕುರಿತಾದ ವಿಷಯಗಳು (Vijayanagara Studies is a fathomless ocean and I have just touched the tip of an iceberg). ವಿಜಯನಗರ ಅಧ್ಯಯನಗಳಿಗೆ ಸಂಬಂಧಿಸಿದಂತೆ ಅನೇಕ ಸಂಶೋಧನೆಗಳನ್ನು ನೆರವೇರಿಸಿ ಹೊಸ ವಿಷಯಗಳತ್ತ ಬೆಳಕನ್ನು ಚೆಲ್ಲಿ ಕಿರಿಯ ಮತ್ತು ಯುವ ಸಂಶೋಧಕರಿಗೆ ಹೊಸ ಮಾರ್ಗಗಳನ್ನು ತೋರಿದ ಎಲ್ಲಾ ಮಹನೀಯರಿಗೆ ವಂದಿಸುತ್ತಾ ವಿಜಯನಗರ ಅಧ್ಯಯನ ಕುರಿತಂತೆ ನನ್ನ ಕೆಲವು ವಿಚಾರಗಳನ್ನು ಮತ್ತು ಅನಿಸಿಕೆಗಳನ್ನು ತಮ್ಮೊಂದಿಗೆ ಹಂಚಿಕೊಳ್ಳಬಯಸುವೆ.

ವಿಜಯನಗರವನ್ನು ಕುರಿತಾದ ವಿಚಾರ ಸಂಕಿರಣವು ಅಂದಿನ ವಿಜಯನಗರ ಸಾಮ್ರಾಜ್ಯದ ರಾಜಧಾನಿ ಹಂಪಿಯಲ್ಲೇ ಜರುಗುತ್ತಿರುವುದು ಗಮನಾರ್ಹ. ಕರ್ನಾಟಕವನ್ನು ಆಳಿದ ಅನೇಕ ಅರಸುಮನೆತನಗಳಲ್ಲಿ ವಿಜಯನಗರ ಅರಸುಮನೆತನವು ತನ್ನದೇ ಆದ ವಿಶಿಷ್ಟ ಸ್ಥಾನವನ್ನು ಇತಿಹಾಸದಲ್ಲಿ ಪಡೆದುಕೊಂಡಿದೆ. ವಿಜಯನಗರವನ್ನು ಹೊರತುಪಡಿಸಿ ಯಾವುದೇ ಅರಸುಮನೆತನವನ್ನು ಕುರಿತಾದ ನಿರಂತರ ಅಧ್ಯಯನವು ಆಗಿಲ್ಲ. ಭಾರತ ಮತ್ತು ಕರ್ನಾಟಕವನ್ನು ಆಳಿದ ಅರಸುಮನೆತನಗಳಾದ ಬಾದಾಮಿ ಚಲುಕ್ಯ, ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ, ಹೊಯ್ಸಳರು ಮುಂತಾದ ಅರಸುಮನೆತನಗಳವರು ಅನೇಕ ಕೊಡುಗೆಗಳನ್ನು ನೀಡಿದ್ದರೂ ಅವರ ಕುರಿತಾದ ಅಧ್ಯಯನವು ಸೀಮಿತವಾಗಿ ಜರುಗಿದ್ದು ವಿಜಯನಗರದಷ್ಟು ನಡೆದಿಲ್ಲ. ಆ ಅರಸುಮನೆತನಗಳಿಗೆ ಸಂಬಂಧಿಸಿದಂತೆ ವಿಶೇಷ ಸಂದರ್ಭಗಳಲ್ಲಿ ವಿಶೇಷ ವಿಚಾರ ಸಂಕಿರಣಗಳು ನಡೆದಿವೆ. ಆದರೆ ವಿಜಯನಗರ ಕುರಿತಾದ ಅಧ್ಯಯನವು ಮೂರು ದಶಕಗಳಿಂದ ನಡೆಯುತ್ತಲಿದೆ. ವಿಜಯನಗರವನ್ನು ರಾಬರ್ಟ್ ಸೀವೆಲ್ ಅವರು 'ಎ ಫರ್‌ಗಾಟೆನ್ ಎಂಪೈರ್' ಎಂದು ಕರೆದರೋ ಪ್ರಾಯಶಃ ಅಂದಿನಿಂದ ಈ ಸಾಮ್ರಾಜ್ಯವನ್ನು ಜನರು ಮತ್ತು ವಿದ್ವಾಂಸರುಗಳು 'ಎಂದೂ ಮರೆಯದೆ' ತಮ್ಮ ಸ್ಮೃತಿಯಲ್ಲಿ ಉಳಿಸಿಕೊಂಡಿದ್ದಾರೆ. ಇದನ್ನು ಜೀವಂತವಾಗಿರಿಸಿರುವುದು ಕರ್ನಾಟಕ ರಾಜ್ಯದ ಪುರಾತತ್ವ, ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆ. ಕಳೆದ ಎರಡು ದಶಕಗಳಿಂದ ವಿಜಯನಗರ ಅಧ್ಯಯನ ಕುರಿತ ವಿಚಾರ ಸಂಕಿರಣವನ್ನು ಏರ್ಪಡಿಸುತ್ತಾ ಬಂದಿದೆ. ಇದರೊಂದಿಗೆ ವಿಚಾರ ಸಂಕಿರಣದಲ್ಲಿ ಮಂಡಿತವಾದ ವಿದ್ವತ್ ಪ್ರಬಂಧಗಳನ್ನು ಪ್ರಕಟಿಸುತ್ತಾ ಬಂದಿರುವುದು ಬಹು ದೊಡ್ಡ ಸಾಧನೆ. ಸಂಶೋಧಕರು, ಇತಿಹಾಸ ಪ್ರಿಯರು ಮತ್ತು ವಿಷಯಾಸಕ್ತರಲ್ಲಿ ಆಸಕ್ತಿಯನ್ನು ಹುಟ್ಟಿಸಿ ಕುತೂಹಲ ಕೆರಳಿಸಿ ಉತ್ತೇಜಿಸುವಂತಹ ಲೇಖನಗಳು ಮತ್ತು ಸಂಶೋಧನೆಗಳಿಂದ ಎಲ್ಲರನ್ನು ಆಕರ್ಷಿಸುವಲ್ಲಿ ಹಾಗೂ ಕ್ರಿಯಾಶೀಲರಾಗಿಸುವಲ್ಲಿ ಶ್ರಮಿಸಿರುವ ಇಲಾಖೆಯ ಎಲ್ಲಾ ಸಿಬ್ಬಂದಿಗಳಿಗೆ ಗೌರವಪೂರ್ವಕ ನಮನಗಳು.

ಇತ್ತೀಚೆಗೆ ಪ್ರಚಲಿತವಾಗಿ ಬಳಸುವ ಸರಸ್ವತಿ ಕಣಿವೆ ಅಥವಾ ಸಿಂಧೂಕೊಳ್ಳ ಸಂಸ್ಕೃತಿ ಅಥವಾ ಹರಪ್ಪಾ ಸಂಸ್ಕೃತಿಯು ಶೋಧಗೊಂಡ ತರುವಾಯ ಇಂದಿಗೂ ನಿರಂತರವಾಗಿ, ಕುತೂಹಲವನ್ನು ಕೆರಳಿಸುತ್ತಾ ಅದರ ಅಧ್ಯಯನ ಮತ್ತು ಸಂಶೋಧನೆಯಲ್ಲಿ ತೊಡಗಿಸಿಕೊಳ್ಳುವಂತೆ ಮಾಡಿರುವುದು ತಮಗೆಲ್ಲಾ ತಿಳಿದಿರುವ ಸಂಗತಿ. ಆ ಸಂಸ್ಕೃತಿಯ ಅಧ್ಯಯನವನ್ನು ಹೊರತುಪಡಿಸಿದರೆ ವಿಜಯನಗರಕ್ಕೆ ಸಂಬಂಧಿಸಿದ ಅಧ್ಯಯನವು ಮಾತ್ರ ಅಷ್ಟೇ ಕುತೂಹಲವನ್ನು ಕೆರಳಿಸಿ ವಿಷಯಾಸಕ್ತರು ಅದರ ಅಧ್ಯಯನ ಮತ್ತು ಸಂಶೋಧನೆಯಲ್ಲಿ ತೊಡಗಿಸಿಕೊಂಡಿರುವರು. ಭಾರತದ ಬೇರೆ ಯಾವ ಸಂಸ್ಕೃತಿಯ ಅಧ್ಯಯನವು ಈ ಮಟ್ಟದ ತೀವ್ರತೆಯನ್ನು ಪಡೆದುಕೊಂಡಿಲ್ಲ. ಇಂದಿಗೂ ಹರಪ್ಪಾ ಕುರಿತ ಸಂಶೋಧನೆಗಳು ಜಾಗತಿಕ ಮಟ್ಟದಲ್ಲಿ ಸಂಶೋಧಕರನ್ನು ಆಕರ್ಷಿಸುತ್ತಲಿದೆ. ಅದರಂತೆ ವಿಜಯನಗರ ಅಧ್ಯಯನವು ಸಹ ಆಕರ್ಷಿಸುತ್ತಲಿದೆ ಎಂಬುದನ್ನು ತಾವು ಮನಗಂಡಿರುತ್ತೀರಿ. ವಿಜಯನಗರಕ್ಕೆ ಅಂದು ಭೇಟಿ ನೀಡಿದ ವಿದೇಶಿ ಪ್ರವಾಸಿಗರು ತಮ್ಮ ಅನುಭವಗಳನ್ನು ಮತ್ತು ಅಂದಿನ ಸಮಕಾಲೀನ ಜೀವನವನ್ನು ತಮ್ಮ ಪ್ರವಾಸಿ ಕಥಾನಕಗಳಲ್ಲಿ ದಾಖಲಿಸಿರುವರು. ಅವರಂತೆಯೇ ಇಂದಿಗೂ ಸಹ ವಿಜಯನಗರ ಕುರಿತಾದ ಸಂಶೋಧನೆಯನ್ನು ಕೈಗೊಳ್ಳಲು ಅನೇಕ ವಿದೇಶಿ ವಿದ್ವಾಂಸರು ಆಕರ್ಷಿತರಾಗಿ ತಮ್ಮದೇ ಆದ ಕೊಡುಗೆಗಳನ್ನು ನೀಡಿರುವರು. ಅವರುಗಳಲ್ಲಿ ಪ್ರಮುಖರೆಂದರೆ ಜಾನ್ ಫ್ರಿಟ್ಜ್, ಜಾರ್ಜ್ ಮಿಷೆಲ್, ಅನ್ನಡಲ್ಲಪಿಕ್ಕೊಲ್ಲಾ, ನೊಬೊರೊ ಕರಾಶಿಮಾ, ಡೆನ್‌ಕಿಸನ್, ಮುಂತಾದವರು. ವಿಜಯನಗರ ಸಾಮ್ರಾಜ್ಯವು ಇಂದಿನ ದಕ್ಷಿಣ ಭಾರತದ ಎಲ್ಲಾ ರಾಜ್ಯಗಳನ್ನು ಒಳಗು ಮಾಡಿಕೊಂಡು ಆಳ್ವಿಕೆ ನಡೆಸಿದರ ಫಲಶ್ರುತಿಯಾಗಿ ವಿಜಯನಗರ ಮತ್ತು ಅದರ ಅರಸರು ತಮ್ಮವರು ಎಂಬ ಬಲವಾದ ಪ್ರತಿಪಾದನೆಯಿದೆ. ಬಹುಮುಖ್ಯವಾಗಿ ನಮ್ಮ ನೆರೆಯ ರಾಜ್ಯದ ಆಂಧ್ರಪ್ರದೇಶವು (ಇಂದು ಆಂಧ್ರಪ್ರದೇಶ ಮತ್ತು ತೆಲಂಗಾಣ) ವಿಜಯನಗರ ಕುರಿತು ವಿಶೇಷ ಅಭಿಮಾನ ಹೊಂದಿ ಅದು ನಮ್ಮದು ಎಂದು ಹೇಳಿಕೊಳ್ಳುತ್ತದೆ. ಅದನ್ನು ತಮ್ಮದಾಗಿಸಿಕೊಳ್ಳುವಂತಹ ಪ್ರಯತ್ನಗಳು ಇಲ್ಲದಿಲ್ಲ.

ಇವೆಲ್ಲವನ್ನೂ ಪರಿಗಣಿಸುತ್ತಾ ರಾಬರ್ಟ್ ಸೀವೆಲ್ ಅವರ ಕೃತಿಯಿಂದ ವಿಜಯನಗರ ಅಧ್ಯಯನ ಪ್ರಾರಂಭಗೊಂಡಿತೆಂಬುದರಲ್ಲಿ ಎರಡು ಮಾತಿಲ್ಲ. ಆದರೆ ಅವನ ಪೂರ್ವದಲ್ಲಿಯೇ ವಿಜಯನಗರ ಕುರಿತ ಮೊದಲ

ಅಧ್ಯಯನವನ್ನು ನಡೆಸಿದರೂ, ಅದರ ಕುರಿತ ವಿಚಾರಗಳು ಹೆಚ್ಚಾಗಿ ಪ್ರಚುರವಾಗದಿರುವುದು ಖೇದನೀಯ. ನಂತರ ವಿಜಯನಗರ ಸ್ಥಾಪನೆಯ 600ನೇ ವರ್ಷಾಚರಣೆಯು 1936ರಲ್ಲಿ ಹಂಪಿಯಲ್ಲಿ ಜರುಗಿದ್ದು ಅದರ ತರುವಾಯ ಅದು ಅಜ್ಞಾತವಾಗಿಯೇ ಉಳಿದು ಎಲ್ಲರ ಗಮನವನ್ನು ಅಷ್ಟಾಗಿ ಸೆಳೆಯಲಿಲ್ಲ. ಇದೇ ಕಾಲಘಟ್ಟದಲ್ಲಿ ಅಂದರೆ ಸರಿ ಸುಮಾರು ಒಂದು ಶತಮಾನದ ಹಿಂದೆ ಮದ್ರಾಸು ಪ್ರೆಸಿಡೆನ್ಸಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಬ್ರಿಟಿಷ್ ಆಡಳಿತಾಧಿಕಾರಿಗಳು ತಮ್ಮ ಪ್ರಾಂತ್ಯದಲ್ಲಿನ ಸ್ಮಾರಕಗಳ ದಾಖಲಾತಿಯನ್ನು ಮಾಡುವುದರೊಂದಿಗೆ ಅವುಗಳ ಸಂರಕ್ಷಣಾ ಕೆಲಸವನ್ನು ಮಾಡಿರುವರು. ಅದರ ಫಲವೇ ಇಂದು ನಾವು ಹಂಪಿಯಲ್ಲಿ ಕಾಣುತ್ತಿರುವ ಬಹುತೇಕ ಸ್ಮಾರಕಗಳು.

ಕಳೆದ ಶತಮಾನದ ಎಪ್ಪತ್ತರ ದಶಕದ ಮಧ್ಯದಿಂದ ಹಂಪಿಯು ಮತ್ತೊಮ್ಮೆ ಎಲ್ಲರ ಗಮನ ಸೆಳೆಯಲು ಪ್ರಾರಂಭಿಸಿತು. ಭಾರತೀಯ ಪುರಾತತ್ವ ಸರ್ವೇಕ್ಷಣ ಮತ್ತು ರಾಜ್ಯ ಪುರಾತತ್ವ ಇಲಾಖೆಯವರು ಸಂಯುಕ್ತವಾಗಿ ಹಂಪಿ ರಾಷ್ಟ್ರೀಯ ಯೋಜನೆಯನ್ನು ಪ್ರಾರಂಭಿಸಿದರು. ಇವರೊಂದಿಗೆ ವಿದೇಶಿ ವಿದ್ವಾಂಸರುಗಳು ಕೈಜೋಡಿಸಿ ಹಂಪಿಯ ಮತ್ತು ವಿಜಯನಗರ ಅಧ್ಯಯನಕ್ಕೆ ಉತ್ತಮ ತಳಹದಿಯನ್ನು ಒದಗಿಸಿದರು. ಅಂದಿನಿಂದಲೂ ಈ ಅಧ್ಯಯನ ಕಾರ್ಯವು ಅವ್ಯಾಹತವಾಗಿ ಮುಂದುವರಿದಿರುವುದು ಗಮನಾರ್ಹವಾಗಿದೆ. 1986ರಲ್ಲಿ ವಿಶ್ವಪರಂಪರಾ ತಾಣವಾಗಿ ಯುನೆಸ್ಕೋ ಮಾನ್ಯತೆ ನೀಡುವುದರ ಮೂಲಕ ಹಂಪಿಯನ್ನು ವಿಶ್ವದ ಗಮನಕ್ಕೆ ತರಲಾಯಿತು.

ವಿಜಯನಗರದ ರಾಜಕೀಯ ಇತಿಹಾಸ, ಸಮಾಜ, ಆರ್ಥಿಕತೆ, ಧರ್ಮ, ವಾಸ್ತುಶಿಲ್ಪ, ಮೂರ್ತಿಶಿಲ್ಪ, ಶಾಸನ, ನಾಣ್ಯ, ಕೋಟೆ ಕೊತ್ತಲ, ಪ್ರಾಚ್ಯವಸ್ತು ಅವಶೇಷ, ಜನಪದ, ಐತಿಹ್ಯ, ನಂಬಿಕೆ, ಇತ್ಯಾದಿ ವಿಷಯಗಳ ಕುರಿತು ಅನೇಕ ವಿದ್ವಾಂಸರುಗಳು ಹೊಸ ಶೋಧಗಳನ್ನು ಮಾಡಿ ಸಾಕಷ್ಟು ಬೆಳಕನ್ನು ಚೆಲ್ಲಿರುವರು. ಇವುಗಳ ಸ್ಥೂಲ ಪರಿಚಯವನ್ನು ಇಲ್ಲಿ ಮಾಡಿಕೊಳ್ಳುವುದು ಸೂಕ್ತವೆಂದು ಭಾವಿಸುವೆ. ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್ ಅವರ ನಂತರ ವಿಜಯನಗರದ ರಾಜಕೀಯ ವ್ಯವಸ್ಥೆ (Polity) ಕುರಿತಂತೆ ನೀಲಕಂಠಶಾಸ್ತ್ರಿ ಮತ್ತು ಇತರರ ಬರವಣಿಗೆಗಳನ್ನು ಹೊರತುಪಡಿಸಿದರೆ ಬರ್ಟನ್ ಸ್ಪೈನ್ ಅವರ Segmentary State Theoryಯು ಇತಿಹಾಸಕಾರರಲ್ಲಿ ಹೊಸ ಸಂಚಲನವನ್ನು ಉಂಟುಮಾಡಿತು. ಸ್ಪೈನ್ ಅವರು ಈ ವಾದವನ್ನು ಮಂಡಿಸುವ ಪೂರ್ವದಲ್ಲಿ ಇದ್ದ ವಿಜಯನಗರದ ರಾಜ್ಯ–ರಾಜಕೀಯ ವ್ಯವಸ್ಥೆಯ ಪುನರ್ ಅವಲೋಕನ ಮಾಡುವ ಮತ್ತು ಅದನ್ನು ಸಂಪೂರ್ಣವಾಗಿ ಅರಿಯುವ ಪ್ರಯತ್ನಗಳು ಆಗಿರಲಿಲ್ಲ. ಅವರ ವಾದವನ್ನು ಪುರಸ್ಕರಿಸಿ, ಪುಷ್ಟೀಕರಿಸುವ ನಿಟ್ಟಿನಲ್ಲಿ ಕೆಲವು ಕೆಲಸಗಳು ಆದವು. ಬರ್ಟನ್ ಸ್ಪೈನ್ ಅವರ ವಾದವನ್ನು ಜಪಾನಿನ ಟೋಕ್ಯೋ ವಿಶ್ವವಿದ್ಯಾಲಯದ ನೊಬೊರೊ ಕರಾಶಿಮಾ ಅವರು ವಿದ್ವಾಂಸರ ಒಂದು ತಂಡದೊಂದಿಗೆ ಒರೆಗಲ್ಲಿಗೆ ಹಚ್ಚುವ ಪ್ರಯತ್ನವನ್ನು ಮಾಡಿದರು. ದಕ್ಷಿಣ ಭಾರತದ ಎಲ್ಲಾ ಭಾಷೆಗಳಲ್ಲಿರುವ ವಿಜಯನಗರ ಅರಸರ ಕಾಲದ ಶಾಸನಗಳೆಲ್ಲವನ್ನು ಕೂಲಂಕಷವಾಗಿ ಅಧ್ಯಯನ ಮಾಡಿ ಶಾಸನಾಧಾರಿತವಾಗಿ ಬರ್ಟನ್ ಸ್ಪೈನ್ ಅವರ ವಾದಕ್ಕಿಂತ ಭಿನ್ನವಾದ ವಾದವನ್ನು ಮಂಡಿಸುವಲ್ಲಿ ಯಶಸ್ಸನ್ನು ಕಂಡರು. ಆದರೆ ಇವರಿಬ್ಬರ ವಾದಗಳನ್ನು ವಸ್ತುನಿಷ್ಠವಾಗಿ ವಿಜಯನಗರದ ರಾಜಕೀಯ ಮತ್ತು ಆಡಳಿತ ವ್ಯವಸ್ಥೆಯನ್ನು ಪುನಾರಚಿಸುವ ಜರೂರಿದೆ. ವಿಜಯನಗರ ಕುರಿತು ಇವರು ನಡೆಸಿದ ಅಧ್ಯಯನಗಳು ಗಮನಾರ್ಹವಾಗಿದೆ. ಕರಾಶಿಮಾ ಅವರು ವಿಜಯನಗರದ ಕಂದಾಯ ಮತ್ತು ಆರ್ಥಿಕವ್ಯವಸ್ಥೆಯ ಹೊಸ ಮಗ್ಗಲುಗಳನ್ನು ತಮ್ಮ ಅಧ್ಯಯನದಲ್ಲಿ ತೋರಿರುತ್ತಾರೆ.

ದಕ್ಷಿಣ ಭಾರತದಲ್ಲಿ ವಿಜಯನಗರ ಕಾಲದ ಶಾಸಗಳು ಅಧಿಕ ಸಂಖ್ಯೆಯಲ್ಲಿ ದೊರಕಿವೆ. ಅವುಗಳು ಸಂಸ್ಕೃತ, ಕನ್ನಡ, ತೆಲುಗು ಮತ್ತು ತಮಿಳು ಭಾಷೆಗಳಲ್ಲಿವೆ. ಸಂಸ್ಕೃತ ಮತ್ತು ತಮಿಳು ಭಾಷೆಗಳನ್ನು ಹೊರತುಪಡಿಸಿದರೆ ಕನ್ನಡ ಮತ್ತು ತೆಲುಗು ಭಾಷೆಯ ಶಾಸನಗಳು ಅಧಿಕ ಸಂಖ್ಯೆಯಲ್ಲಿ ದೊರಕಿರುವುದು ಗಮನಾರ್ಹ. ವಿಜಯನಗರ ಶಾಸನಗಳ ಸಂಪುಟಗಳನ್ನು ಅನೇಕರು ಸಂಕಲಿಸಿ ಪ್ರಕಟಿಸಿದ್ದಾರೆ. ಅವರುಗಳಲ್ಲಿ ಮುಖ್ಯವಾಗಿ ಡಾ. ಶ್ರೀನಿವಾಸ ರಿತ್ತಿ, ಡಾ. ಬಾ.ರಾ. ಗೋಪಾಲ, ಡಾ. ಪರಬ್ರಹ್ಮಶಾಸ್ತ್ರಿ, ಮುಂತಾದವರು. ಇವರೊಂದಿಗೆ ಮತ್ತಷ್ಟು ವಿದ್ವಾಂಸರುಗಳು ವಿಜಯನಗರ ಅರಸುಮನೆತನದ ಒಂದು ಮನೆತನಕ್ಕೆ ಸೇರಿದ (ಸಂಗಮ) ಶಾಸನಗಳು, ಒರ್ವ ಅರಸನ ಕಾಲದ ಶಾಸನಗಳು, ಒಂದು ನಿರ್ದಿಷ್ಟ ಪ್ರದೇಶದ

ಶಾಸನಗಳು ಮತ್ತು ಒಂದು ದೇವಾಲಯದಲ್ಲಿ ದೊರಕಿರುವ ಶಾಸನಗಳನ್ನು ಸಹ ಸಂಕಲಿಸಿ ಪ್ರಕಟಿಸಿ ಆಕರವಾಗಿ ನೀಡಿರುವರು. ಇವುಗಳು ವಿವಿಧ ಇಲಾಖೆಗಳು ಹೊರತರುತ್ತಿರುವ ಶಾಸನಗಳ ವಾರ್ಷಿಕ ವರದಿಗಳು ಮತ್ತು ವಿಶ್ವವಿದ್ಯಾಲಯಗಳು ಹೊರತರುತ್ತಿರುವ ಶಾಸನ ಸಂಪುಟಗಳು ಮತ್ತು ತತ್ಸಮಾನ ಪ್ರಕಟಣೆಗಳಿಗೆ ಪೂರಕವಾಗಿವೆ. ಇವೆಲ್ಲವೂ ವಿಜಯನಗರದ ಇತಿಹಾಸವನ್ನು ಸಮರ್ಪಕವಾಗಿ ಕಟ್ಟಲು ಸಹಾಯಕವಾಗಿವೆ.

ಇವುಗಳೊಂದಿಗೆ ಹೊಸ ಶಾಸನ ಶೋಧಗಳು ವಿಜಯಗನಗರ ಇತಿಹಾಸದ ಮೇಲೆ ಬೆಳಕನ್ನು ಚೆಲ್ಲಿದೆ. ಅವುಗಳಲ್ಲಿ ಕೆಲವನ್ನು ಉದಹರಿಸುವುದಾದರೆ ಕಾಮಿಡಿಹಳ್ಳಿಯ ಶಾಸನವು ಕೃಷ್ಣರಾಯನ (ಕೃಷ್ಣದೇವರಾಯ) ಪತ್ನಿಯರಲ್ಲಿ ಒಬ್ಬಳಾದ ಚಿನ್ನಾದೇವಿಯ ಮೂಲವನ್ನು ಕುರಿತು ತಿಳಿಸುತ್ತದೆ. ಇದರಂತೆಯೇ ವಿದ್ಯಾರಣ್ಯರ ಕುರಿತ ತಾಮ್ರಪಟ ಶಾಸನವು ವಿಜಯನಗರದ ಸ್ಥಾಪನೆ ಮತ್ತು ಯತಿಗಳ ಪಾತ್ರವನ್ನು ನಮ್ಮ ಮುಂದಿಡುತ್ತವೆ. ಶಾಸನಗಳ ಪುನರ್ ಪರಿಶೀಲನೆ ಮತ್ತು ಕೂಲಂಕಷ ಅಧ್ಯಯನಗಳಿಂದಲೂ ಸಹ ಅನೇಕ ವಿಚಾರಗಳ ಮರುಚಿಂತನೆಗೆ ಅವಕಾಶಗಳನ್ನು ಒದಗಿಸಿವೆ. ಕೃಷ್ಣರಾಯನ ಮಗ ತಿರುಮಲನು ವಿಷಪ್ರಾಶನದಿಂದ ಮಡಿದನೆಂಬ ಪ್ರಚಲಿತ ನಂಬಿಕೆಯನ್ನು ವಿಜಯನಗರದ ಕಾಲದ ಎರಡು ಶಾಸನಗಳ ಅಧ್ಯಯನದ ಮೂಲಕ ಅವನು **premature baby** ಎಂಬುದನ್ನು ಸಾಬೀತಾಗಿರುವುದು ಹಾಗೂ ಅವನದು ಸಹಜ ಸಾವು ಎಂಬ ಅಂಶವು ಕುತೂಹಲಕಾರಿ ಮತ್ತು ಗಮನೀಯ. ಕೃಷ್ಣರಾಯನು ಉದಯಗಿರಿಯನ್ನು ಗೆದ್ದ ತರುವಾಯ ಅಲ್ಲಿಂದ ವಿಜಯದ ಸಂಕೇತವಾಗಿ ಅವನು ಬಾಲಕೃಷ್ಣನ ವಿಗ್ರಹವನ್ನು ಉಪಾಯವಾಗಿ ತಂದನೆಂಬ ಅಂಶವನ್ನು ಸಂಸ್ಕೃತ ಭಾಷೆಯ ಶಾಸನವು ಉಲ್ಲೇಖಿಸಿದರೆ, ಅದರ ಕನ್ನಡ ಭಾಷೆಯ ಪ್ರತಿಯಲ್ಲಿ 'ಉಪಾಯ' ಎಂಬ ಪದದ ಬಳಕೆ ಇಲ್ಲದಿರುವುದು ಕುತೂಹಲಕಾರಿ ಅಂಶ. ಬಾಲಕೃಷ್ಣನ ವಿಗ್ರಹವನ್ನು ರಾಜಧಾನಿಗೆ ತಂದು ದೇವಾಲಯ ನಿರ್ಮಿಸಿ ಅದನ್ನು ಪ್ರತಿಷ್ಠಾಪಿಸಿ ಅದರ ನಿರ್ವಹಣೆಗೆ ಅತ್ತಿವಟೆ ಗ್ರಾಮವನ್ನು ದಾನವಾಗಿ ನೀಡುತ್ತಾನೆ. ಅತ್ತಿವಟೆ ಗ್ರಾಮದಲ್ಲಿ ದೊರಕಿರುವ ಈ ಶಾಸನದ ಪ್ರತಿಯು ಒಂದು ಬಂಡೆಗಲ್ಲಿನ ಮೇಲಿದ್ದು ಅದರಲ್ಲಿ ಬಾಲಕೃಷ್ಣನ ರೇಖಾಚಿತ್ರವಿರುವುದು ಗಮನಾರ್ಹ. ಹಂಪಿಯ ಶಾಸನಗಳು ಹಸಿರುವಾಣಿ ಸುಂಕ, ಜಲಸಾರಿಗೆ, ಇತ್ಯಾದಿ ವಿಷಯಗಳು ಕುರಿತು ಮಾಹಿತಿಗಳನ್ನು ನೀಡುತ್ತವೆ. ಇಂತಹ ಹಲವಾರು ಶಾಸನಗಳ ಆಧಾರಗಳಿಂದ ವಿಜಯನಗರದ ಅಧ್ಯಯನವನ್ನು ಮುಂದುವರಿಸಬೇಕಿರುವುದು ಇಂದಿನ ಅಗತ್ಯ. ಅದರ ಮೂಲಕ ಆಧಾರರಹಿತ ಪ್ರಚಲಿತ ನಂಬಿಕೆಗಳನ್ನು ದೂರ ಮಾಡಿ ವಸ್ತುನಿಷ್ಠ ಇತಿಹಾಸ ಅರಿಯಬಹುದಾಗಿದೆ.

ದೇವಾಲಯಗಳ ನಿರ್ಮಾಣವು ಸತತವಾಗಿ ನಡೆದುಕೊಂಡು ಬಂದಿರುವ ಪ್ರಕ್ರಿಯೆ. ಅನೇಕ ಪ್ರಯೋಗಗಳನ್ನು ಮತ್ತು ಸುಧಾರಣೆಗಳನ್ನು ವಾಸ್ತುಶಿಲ್ಪಿಗಳು ಮಾಡಿಕೊಂಡೇ ಬಂದಿರುವರು. ಇದು ವಿಜಯನಗರ ಕಾಲದಲ್ಲಿಯೂ ಮುಂದುವರಿಯಿತು. ಅನೇಕ ವಿಶೇಷತೆಗಳಿಂದ ಕೂಡಿರುವ ವಿಜಯನಗರ ಕಾಲದ ವಾಸ್ತು ಮತ್ತು ಮೂರ್ತಿಶಿಲ್ಪಗಳ ಕುರಿತ ಅಧ್ಯಯನಗಳು ಸಾಕಷ್ಟು ನಡೆದಿವೆ. ಮುಖ್ಯವಾಗಿ ವಿಜಯನಗರದ ಅರಸರ ಪೂರ್ವದಲ್ಲಿ ಪ್ರಚಲಿತವಿದ್ದ ಶೈಲಿಯನ್ನು ಬಿಟ್ಟು ದ್ರಾವಿಡ ಶೈಲಿಯನ್ನು (ಮುಖ್ಯವಾಗಿ ಚೋಳರ ಶೈಲಿ) ಅನುಕರಿಸಿರುವುದನ್ನು ಕಾಣಬಹುದು. ಇದರೊಂದಿಗೆ ಅನೇಕ ವಾಸ್ತು ಭಾಗಗಳು ಮತ್ತು ವಾಸ್ತುಶಿಲ್ಪದ ಅಂಗಗಳು ದೇವಾಲಯಗಳಲ್ಲಿ ಸೇರಿಸಲಾಯಿತು. ಇದನ್ನು ಪ್ರಯೋಗವೆಂದು ಕರೆಯಬಹುದು. ಅಂತಹ ಪ್ರಯೋಗದ ಉದಾಹರಣೆಗಳನ್ನು ಕರ್ನಾಟಕದ ಉದ್ದಕ್ಕೂ ಗಮನಿಸಬಹುದಾಗಿದೆ. ರಾಜಧಾನಿ ಹಂಪಿಯಲ್ಲಿ ಮತ್ತು ರಾಜ್ಯದ ಕೆಲವು ಮುಖ್ಯ ನಾಡು ಅಥವಾ ಪಟ್ಟಣಗಳಲ್ಲಿಯೂ ಇವುಗಳನ್ನು ಕಾಣಬಹುದು. ವಿಜಯನಗರ ವಾಸ್ತುಶಿಲ್ಪ ಕುರಿತ ಕೆಲವು ಸಂಶೋಧನೆಗಳು ನಡೆದಿದ್ದು ಅವುಗಳು ಪುಸ್ತಕ ರೂಪದಲ್ಲಿ ಪ್ರಕಟಗೊಂಡಿವೆ. ದೇವಾಲಯ ವಾಸ್ತುಶಿಲ್ಪದ ಅಧ್ಯಯನ ಹೊಸ ದೃಷ್ಟಿಕೋನಗಳಲ್ಲಿ ನಡೆಯಬೇಕಿದೆ. ದೇವಾಲಯ ವಾಸ್ತುಶಿಲ್ಪದೊಂದಿಗೆ ರಕ್ಷಣಾ ವಾಸ್ತು ಮತ್ತು ಲೌಕಿಕ ವಾಸ್ತುವಿನ ಕುರಿತ ಅಧ್ಯಯನಗಳು ಬೆರಳೆಣಿಯಷ್ಟು ಇವೆ. ಈ ನಿಟ್ಟಿನಲ್ಲಿ ಸಂಶೋಧಕರು ಗಮನಹರಿಸಬೇಕಿದೆ.

ಇದರಂತೆಯೇ ವಿಜಯನಗರ ಕಾಲದಲ್ಲಿ ರೂಪುಗೊಂಡ ಮೂರ್ತಿಶಿಲ್ಪ ಮತ್ತು ವರ್ಣಚಿತ್ರಗಳ ಬಗೆಗೆ ವಿವರ ಮತ್ತು ಆಳವಾದ ಅಧ್ಯಯನಗಳು ನಡೆದಿವೆ. ಒಂದು ನಿರ್ದಿಷ್ಟ ಪ್ರದೇಶದ ಮೂರ್ತಿಶಿಲ್ಪಗಳು ಅಥವಾ ದೇವಾಲಯಗಳಲ್ಲಿರುವ ಮೂರ್ತಿಶಿಲ್ಪಗಳ ಅಧ್ಯಯನಗಳು ಸಂಶೋಧಕರಿಗೆ ಲಭ್ಯವಿದೆ. ಮೂರ್ತಿಶಿಲ್ಪಗಳ ವೈವಿಧ್ಯಮಯತೆ ಮತ್ತು ಶಿಲ್ಪಿಯು

ಮೂರ್ತಿಶಿಲ್ಪಗಳ ರಚನೆಯಲ್ಲಿ ತೊಡಗಿಸಿಕೊಳ್ಳುವಾಗ ಬಳಸಿದ ಶಿಲ್ಪಶಾಸ್ತ್ರ ಗ್ರಂಥಗಳು, ತಂತ್ರಜ್ಞತೆ ಮತ್ತು ಸ್ವಾತಂತ್ರ್ಯ ಮತ್ತು ಸೃಜನಶೀಲತೆಯ ಕುರಿತ ಅಧ್ಯಯನಗಳು ಸಂಶೋಧಕರ ಗಮನ ಸೆಳೆದು ಪ್ರಸ್ತುತ ನಡೆಯುತ್ತಲಿವೆ. ವಿಜಯನಗರ ಕಾಲದ ವರ್ಣಚಿತ್ರಗಳು ದೊರಕುತ್ತಿರುವುದು ಕೆಲವೊಂದು ಪ್ರದೇಶಗಳಲ್ಲಿ ಮಾತ್ರವೇ. ಅವುಗಳು ಸ್ವಾಭಾವಿಕವಾಗಿಯೇ ಕಾಲಾಂತರದಲ್ಲಿ ಮಂಕಾಗಿ ಕಣ್ಮರೆಯಾಗುತ್ತಲಿವೆ. ಅಳಿದುಳಿದ ಅಂತಹ ವರ್ಣಚಿತ್ರಗಳ ಪೂರ್ಣಪ್ರಮಾಣದ ಅಧ್ಯಯನಗಳು ತೀರಾ ಅಲ್ಪ ಪ್ರಮಾಣದಲ್ಲಿ ಮಾತ್ರ ನಡೆದಿವೆ. ಹಂಪಿಯಲ್ಲಿರುವ ವರ್ಣಚಿತ್ರಗಳಲ್ಲಿನ ವರ್ಣಗಳು, ಅವುಗಳ ಸಂಯೋಜನೆ, ವೇಷ ಭೂಷಣ, ಆಭರಣ ಇತ್ಯಾದಿಗಳನ್ನು ಗಣಕಯಂತ್ರದಲ್ಲಿ ಮರುಸೃಷ್ಟಿಸುವ ಪ್ರಯತ್ನವನ್ನು ಕೇಂದ್ರ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯವರು ಮಾಡಿರುವುದು ಮೆಚ್ಚತಕ್ಕ ವಿಷಯ.

ಇಲ್ಲಿಯವರೆಗೆ ದೊರಕಿರುವ ವಿಜಯನಗರ ಕಾಲದ ನಾಣ್ಯಗಳ ಕುರಿತಂತೆ ನಡೆದ ಅಧ್ಯಯನ ಕೆಲವೊಂದು ನಿಯತಕಾಲಿಕೆಗಳಲ್ಲಿ ಪ್ರಕಟಗೊಂಡಿವೆಯಾದರೂ ಅವು ಒಂದೆಡೆ ದೊರಕುವಂತೆ ಮಾಡುವುದು ಅತ್ಯಗತ್ಯ. ಹೊಸ ಶೋಧಗಳ ಫಲಿತವಾಗಿ ಇಂದು ಅಧಿಕ ಸಂಖ್ಯೆಯ ನಾಣ್ಯಗಳು ಸಂಶೋಧಕರ ಮುಂದಿದೆ. ನಾಣ್ಯ ಶಾಸ್ತ್ರದ ಬೆಳವಣಿಗೆಯ ಹಂತದಲ್ಲಿ ನಾಣ್ಯಗಳ ಭೌತಿಕ ವಿವರಗಳನ್ನು ಮಾತ್ರವೇ ದಾಖಲಿಸಿ ಯಾದಿಗಳನ್ನು (Catalogues) ತಯಾರಿಸಲಾಗುತ್ತಿತ್ತು. ಆದರೆ ಬದಲಾದ ಅಧ್ಯಯನ ಮತು ವೈಜ್ಞಾನಿಕ ವಿಧಾನಗಳಿಂದ ನಾಣ್ಯಗಳನ್ನು ವ್ಯವಸ್ಥಿತವಾಗಿ ಅಧ್ಯಯನ ಮಾಡುವ ಸಾಧ್ಯತೆಗಳಿವೆ. ವಿಜಯನಗರ ಕಾಲದಲ್ಲಿ ಚಲಾವಣೆಯಲ್ಲಿದ್ದ ಅನೇಕ ನಾಣ್ಯಗಳು ಮತ್ತು ಮೌಲ್ಯಗಳ ನಾಣ್ಯಗಳು ದೊರಕಿವೆ. ಅವುಗಳ ಮೇಲೆ ಮೌಲ್ಯಗಳು ಮುದ್ರಿತವಾಗಿಲ್ಲ. ಆದರೆ ಶಾಸನಗಳು ನಾಣ್ಯಗಳ ಮೌಲ್ಯವನ್ನು ಶಾಸನಗಳು ಉಲ್ಲೇಖಿಸುವುದರಿಂದ ವಿಜಯನಗರ ಕಾಲದ ನಾಣ್ಯಗಳ ಮೌಲ್ಯವನ್ನು ನಿರ್ಧರಿಸಬಹುದಾಗಿದೆ. ವಿಜಯನಗರ ಕಾಲದ ಶಾಸನಗಳು ಟಂಕಸಾಲೆಯ ಕುರಿತ ಮಹತ್ವದ ಮಾಹಿತಿಗಳನ್ನು ಉಲ್ಲೇಖಿಸಿರುವುದು ಗಮನಾರ್ಹ. ಉದಾಹರಣೆಗೆ ಬಾರಕೂರು, ಮಂಗಳೂರು, ತಿರುಪತಿ, ಗುತ್ತಿ, ತಾಡಪತ್ರಿ, ಮಧುರೆ ಇತ್ಯಾದಿ ಟಂಕಸಾಲೆಗಳು. ಕೆಲವು ಶಾಸನಗಳು ನಾಣ್ಯಗಳ ಮೌಲ್ಯವನ್ನು ಉಲ್ಲೇಖಿಸಿವೆ. ಉದಾಹರಣೆಗೆ ಅರ್ಧ ಕಾಟಿ ಗದ್ಯಾಣ, ಕಾಟಿ ಹೊನ್ನು, ಅರ್ಧ ವರಹ, ಚಕ್ರ ಗದ್ಯಾಣ, ಚಕ್ರಪಣಂ, ಇತ್ಯಾದಿಗಳು. ವಿಶೇಷ ಸಂದರ್ಭಗಳಲ್ಲಿ ಹೊರಡಿಸಿದ (commemorative coins) ನಾಣ್ಯಗಳು ಅಂದಿನ ಸಮಕಾಲೀನ ರಾಜಕೀಯ, ಆರ್ಥಿಕ, ಧಾರ್ಮಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳನ್ನು ತೋರುವ ಕನ್ನಡಿಯಾಗಿವೆ. ವಿಜಯನಗರ ಕಾಲದ ನಾಣ್ಯಗಳ ಪೂರ್ಣ ಅಧ್ಯಯನ ಇನ್ನೂ ಶೈಶಾವಸ್ಥೆಯಲ್ಲಿವೆ ಎಂದೇ ಹೇಳಬಹುದು.

ವಿಜಯನಗರಕ್ಕೆ ಅಂದು ಭೇಟಿ ನೀಡಿದ ವಿದೇಶಿಯರು ನಾಣ್ಯಗಳ ಕುರಿತು ನೀಡಿರುವ ಮಾಹಿತಿಯು ಅಮೂಲ್ಯವಾದದ್ದು. ಅವರು ನೀಡಿರುವ ಮಾಹಿತಿಯಂತೆ ಟಂಕಸಾಲೆಯಲ್ಲಿ ನಾಣ್ಯಗಳನ್ನು ಟಂಕಿಸಲಾಗುತ್ತಿತ್ತು. ಅದರೊಂದಿಗೆ ವಿವಿಧ ದೇಶಗಳ ವಿವಿಧ ಬಗೆಯ ನಾಣ್ಯಗಳನ್ನು ವಿನಿಮಯ ಮಾಡಿಕೊಳ್ಳುತ್ತಿದ್ದರೆಂದು ಅಬ್ದುಲ್ ರಜಾಕ್ ದಾಖಲಿಸಿದ್ದಾನೆ. ಅಂತಹ ವಿನಿಮಯಗಳನ್ನು ಮಾಡುವವರು (Bureu de exchange) ತಮ್ಮ ಬಳಿ ಒಂದು ಸಣ್ಣ ತಕ್ಕಡಿ ಮತ್ತು ತೂಕದ ಬಟ್ಟುಗಳನ್ನು ಇಟ್ಟುಕೊಂಡಿರುತ್ತಿದ್ದರು. ಇದು ಅತ್ಯಂತ ನಿಖರವಾಗಿ ಒಂದು ಕೂದಲೆಳೆಯನ್ನು ಸಹ ತೂಕ ಮಾಡುವ ಸಾಮರ್ಥ್ಯದ್ದಾಗಿತ್ತು. ಅವರು ಒರೆಗಲ್ಲು (Touchstone) ಮತ್ತು ಮೇಣದಂತಹ ವಸ್ತುವನ್ನು ಇಟ್ಟುಕೊಂಡಿರುತ್ತಾರೆ ಮತ್ತು ಇವುಗಳಿಂದ ನಾಣ್ಯದ ತೂಕ ಮತ್ತು ಶುದ್ಧತೆಯನ್ನು ಪರೀಕ್ಷಿಸುತ್ತಾರೆ ಎಂದು ದಾಖಲಿಸಿದ್ದಾರೆ. ಈ ಪರಿಣಿತರು ಅವರ ವಸ್ತುಗಳನ್ನು ಸಣ್ಣ ಪೆಟ್ಟಿಗೆಗಳಲ್ಲಿ ಇಟ್ಟುಕೊಂಡಿರುತ್ತಾರೆ. ಅದರ ಮೂಲಕ ಪರೀಕ್ಷಿಸಿ ವಿನಿಮಯ ಮಾಡಿಕೊಳ್ಳುತ್ತಿದ್ದರು ಎಂದು ಬಾರ್ಬೋಸನು ವಿವರಿಸಿದ್ದಾನೆ. ಇದಕ್ಕೆ ಪುಷ್ಟಿ ನೀಡುವಂತೆ ಹಂಪಿಯಲ್ಲಿ ನಡೆದ ಉತ್ಖನನದಲ್ಲಿ ಅನೇಕ ಮಹತ್ವದ ಪುರಾವೆಗಳು ದೊರಕಿವೆ. ಅವುಗಳು – Touch stone, Pounder, Grinding stone, pestle, crucibles, etc.

ವಿಜಯನಗರ ಮತ್ತು ವಿಜಯನಗರೋತ್ತರ ಕಾಲಘಟ್ಟಗಳಲ್ಲಿ ರಚನೆಯಾದ ಹಲವಾರು ಸಾಹಿತ್ಯ ಕೃತಿಗಳು ವಿಜಯನಗರ ಕುರಿತಾದ ಅನೇಕ ಮಹತ್ವದ ವಿಚಾರಗಳನ್ನು ಕಣ್ಣಿಗೆ ಕಟ್ಟುವಂತೆ ವಿವರಿಸಿರುವುದು ಗಮನಾರ್ಹ. ಅಂದಿನ ಸಮಕಾಲೀನ ವಿವಿಧ ಪ್ರಕಾರಗಳ ಸಾಹಿತ್ಯದ ರಚನೆಗಳು ವಿಜಯನಗರ ಸ್ಥಾಪನೆಯಾದ ದಿನದಿಂದಲೂ ಕಾಣಬಹುದು. ಅದು ವಿಜಯನಗರದ

ಸ್ಥಾಪನೆ, ಅವನತಿ ಮತ್ತು ಅದರ ನಂತರದ ದಿನಗಳನ್ನು ಸಹ ಬಣ್ಣಿಸಿವೆ. ಈ ಕುರಿತ ಕೆಲಸಗಳು ಸಾಕಷ್ಟು ನಡೆದಿವೆ ಮತ್ತು ನಡೆಯುತ್ತಲಿವೆ. ಅವುಗಳನ್ನು ಒಂದೆಡೆಗೆ ತರುವ ಪ್ರಯತ್ನಗಳನ್ನು ಮಾಡಬೇಕಿದೆಯಷ್ಟೆ. ಕನ್ನಡ ಭಾಷೆಯಲ್ಲಿ ಮಾತ್ರವಲ್ಲದೇ ತೆಲುಗು, ಸಂಸ್ಕೃತ ಮತ್ತು ತಮಿಳು ಭಾಷೆಯ ಅನೇಕ ಕೃತಿಗಳು ಮತ್ತು ರಚನೆಗಳು ನಮಗೆ ಹಲವಾರು ಮಹತ್ವದ ವಿಷಯಗಳನ್ನು ತಿಳಿಸುವಲ್ಲಿ ಸಹಕಾರಿಯಾಗಿವೆ. ಎರಡು ಪ್ರಕಾರಗಳ ಸಾಹಿತ್ಯವು ವಿಜಯನಗರಕ್ಕೆ ಅನ್ವಯಿಸುತ್ತವೆ. ಅವುಗಳು ದೇಶಿ ಸಾಹಿತ್ಯ ಮತ್ತೊಂದು ವಿದೇಶಿ ಸಾಹಿತ್ಯ. ಸಮಕಾಲೀನ ಕಾಲಘಟ್ಟದಲ್ಲಿ ರಚಿತವಾದ ಕೃತಿಗಳು ವಿಜಯನಗರದ ವಸ್ತುಸ್ಥಿತಿಯನ್ನು ತಿಳಿಸುತ್ತವೆ. ವಿದೇಶಿ ಸಾಹಿತ್ಯವೆಂದು ಕರೆದಿರುವುದು ವಿದೇಶಿಯರು ಇಲ್ಲಿಗೆ ಭೇಟಿ ನೀಡಿದಾಗ ತಾವು ಕಂಡದ್ದನ್ನು ಪ್ರತ್ಯಕ್ಷದರ್ಶಿಗಳಾಗಿ ದಾಖಲಿಸಿರುವುದನ್ನು ನಮ್ಮ ನೆಲದ ಸೊಗಡಿನಲ್ಲಿ ಮೂಡಿ ಬಂದ 'ಕರ್ಣಾಟಭಾರತ ಕಥಾಮಂಜರಿ'ಯು ಮೂಲತಃ ಮಹಾಭಾರತದ ಕಥೆಯನ್ನು ಆಧರಿಸಿದ್ದರೂ ಅದರಲ್ಲಿನ ವಿವರಗಳು ವಿಜಯ(ಗಜ)ನಗರವನ್ನು ಹೋಲುತ್ತದೆಯಲ್ಲವೆ.

ವಿಜಯನಗರ ಇತಿಹಾಸಕ್ಕೆ ಸಂಬಂಧಿಸಿದಂತೆ ಅರಬ್, ಪರ್ಶಿಯನ್ ಮತ್ತು ಉರ್ದು ಭಾಷೆಯಲ್ಲಿರುವ ಸಾಹಿತ್ಯವನ್ನು ಅಷ್ಟಾಗಿ ಇತಿಹಾಸಕಾರರು ಬಳಸಿಕೊಂಡಿಲ್ಲ. ಇದರೊಟ್ಟಿಗೆ ಬುಸಾತೀನೆ ಸಾಲತೀನೆ, ಬಹಮನಿ ಸುಲ್ತಾನರ ಸಂಸ್ಥಾನದಲ್ಲಿ ರಚನೆಯಾದ ಸಾಹಿತ್ಯವನ್ನು ಮತ್ತು ಪೋರ್ತುಗೀಸ್‌ನ ಮೂಲ ದಾಖಲೆಗಳನ್ನು ನಾವು ಬಳಸಿಕೊಂಡು ದೇಶಿ ಸಾಹಿತ್ಯ ಮತ್ತಿತರೆ ಆಕರಗಳೊಂದಿಗೆ ತೌಲನಿಕವಾಗಿ ನೋಡಬೇಕಿದೆ. ಇದರಿಂದ ವಿಜಯನಗರದ ಇತಿಹಾಸ ಮತ್ತು ಆ ಕಾಲಘಟ್ಟದ ಇನ್ನೊಂದು ಮುಖವು ನಮಗೆ ದೊರಕುವುದರೆಂಬುದಲ್ಲಿ ಅನುಮಾನವಿಲ್ಲ. ಇದು ವಿಭಿನ್ನ perspective ನೀಡುತ್ತದೆ. ಉದಾಹರಣೆಗೆ ಅಳಿಯ ರಾಮರಾಯನ ಅಂತ್ಯದ ಕುರಿತು ಇರುವ ಭಿನ್ನ ನಿರೂಪಣೆಗಳು ಸಾಕ್ಷಿಯಾಗಿವೆ.

ಇತರೆ ಸಾಹಿತ್ಯ ಪ್ರಕಾರಗಳಾದ ಕೈಫಿಯತ್ತು, ಬಖೈರುನಾಮ, ತಾಳೆಗರಿ ಹಸ್ತಪ್ರತಿಗಳು, ಕಾಗದದ ಹಸ್ತಪ್ರತಿಗಳು, ಪುರಾಣಗಳು, ಸ್ಥಳಪುರಾಣಗಳ ಕುರಿತು ನಾನು ಇಲ್ಲಿ ಚರ್ಚಿಸುವುದಿಲ್ಲ. ಏಕೆಂದರೆ ಇವುಗಳು ಅಪಾರ ಪ್ರಮಾಣದ ಮಾಹಿತಿಯ ಮಹಾಪೂರವನ್ನೇ ನಮಗೆ ಹರಿಸುತ್ತವೆ.

ಜಾನಪದ ಸಾಹಿತ್ಯ, ನಂಬಿಕೆ, ಆಚರಣೆ, ಐತಿಹ್ಯ, ಲಾವಣಿ, ಗಾದೆ, ಒಗಟು, ಚಾಟು, ಪರಂಪರೆ, ಇತ್ಯಾದಿಗಳು ಒದಗಿಸುವ ಆಕರಗಳ ಪ್ರಮಾಣವು ಅಗಾಧ ಮತ್ತು ಅನನ್ಯ. ಇವುಗಳನ್ನು ಬಳಸಿಕೊಳ್ಳುವಾಗ ಸಂಶೋಧಕರು ಎಚ್ಚರ ವಹಿಸುವುದು ಅತ್ಯಗತ್ಯ. ಅತ್ಯಂತ ವಿವೇಚನಯುಕ್ತವಾಗಿ ಆಕರಗಳನ್ನು ಬಳಸಿಕೊಂಡು ಉಳಿದ ಆಕರಗಳೊಂದಿಗೆ ಹದವಾಗಿ ಮತ್ತು ತೌಲನಿಕವಾಗಿ ಸಮೀಕರಿಸಿದಾಗ ಮಾತ್ರವೆ ವಿಜಯನಗರ ಇತಿಹಾಸಕ್ಕೆ ಒಂದು ಹೊಸ ರೂಪ ನೀಡಿದಂತಾಗುತ್ತದೆ. ಸಂಶೋಧಕರು ಇತ್ತೀಚಿಗೆ ಅವುಗಳತ್ತ ಗಮನಹರಿಸುತ್ತಿರುವುದು ಸಂತಸದ ಸಂಗತಿ. ಎನ್. ವೆಂಕಟರಮಣಯ್ಯನವರು ಈ ಎಲ್ಲಾ ಪ್ರಕಾರದ ಆಕರಗಳನ್ನು ಬಳಸಿ ವಿಜಯನಗರ ಇತಿಹಾಸವನ್ನು ರಚಿಸಿರುವುದನ್ನು ಕಾಣಬಹುದು.

ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್ ಅವರು ಒಂದು ಶತಮಾನದ ಹಿಂದೆ ಅಂದರೆ 1900ರ ಪ್ರಾರಂಭದ ದಶಕದಲ್ಲಿ ರಚಿಸಿದ ಕೃತಿ 'Sources of Vijayanagara History' ಗಮನಾರ್ಹವಾದದ್ದು. ಅಂದು ಅವರಿಗೆ ಲಭ್ಯವಿದ್ದ ಆಕರಗಳನ್ನು ಕುರಿತು ಕೃತಿಯಲ್ಲಿ ವಿವರಿಸಿದ್ದಾರೆ. ಒಂದು ಶತಮಾನದ ನಂತರ ವಿಜಯನಗರ ಇತಿಹಾಸಕ್ಕೆ ಸಂಬಂಧಿಸಿದ ಆಕರಗಳು ಹಲವು ಪ್ರಕಾರ ಮತ್ತು ಪರಿಮಾಣಗಳಲ್ಲಿವೆ. ಅವುಗಳನ್ನು ಸಮನ್ವತೆಯಿಂದ ಮತ್ತು ವಿವೇಚನಾಯುಕ್ತವಾಗಿ ಬಳಸಿಕೊಳ್ಳುವುದು ಸಂಶೋಧಕರ ಮುಂದಿರುವ ಬಹು ದೊಡ್ಡ ಸವಾಲು.

ಆಕರಗಳು ಅಧಿಕವಾಗಿ ದೊರಕುತ್ತಿದ್ದಂತೆ ಅವುಗಳ ಬಳಕೆ ಮತ್ತು ವಿಶ್ಲೇಷಣಾ ಕ್ರಮಗಳಲ್ಲಿಯೂ ಬದಲಾವಣೆಯಾಗಿವೆ. ಮೊದಲಿಗೆ ರಾಜಕೀಯ ಇತಿಹಾಸಕ್ಕೆ ಹೆಚ್ಚು ಆದ್ಯತೆಯನ್ನು ನೀಡಲಾಗುತ್ತಿತ್ತು. ನಂತರ ಸಾಮಾಜಿಕ, ಆರ್ಥಿಕ, ಧಾರ್ಮಿಕ ಇತಿಹಾಸ ರಚನೆಯ ಕಾಲಘಟ್ಟ, ಅದರ ಮುಂದುವರಿಕೆಯ ಭಾಗವಾಗಿ ತಳಸಮುದಾಯದ (Subaltern) ಅಧ್ಯಯನಗಳತ್ತ ಇತಿಹಾಸಕಾರರ ಒಲವು ಮೂಡಿರುವುದನ್ನು ವಿಜಯನಗರ ಕುರಿತ ಲೇಖನಶಾಸ್ತ್ರವನ್ನು ಅವಲೋಕಿಸಿದರೆ ಕಾಣಬಹುದು. ಎಡ ಮತ್ತು ಬಲಪಂಥೀಯ ವಾದಗಳು, ಭಾಷಾಭಿಮಾನದ ದೃಷ್ಟಿಕೋನದಿಂದಲೂ ಇತಿಹಾಸವನ್ನು ನಿರ್ಮಿಸುವ ಕಾರ್ಯಗಳು

ಆಗಿಲ್ಲದೆ ಇಲ್ಲ. ಪ್ರಸ್ತುತ ದಿನಗಳಲ್ಲಿ ಸಂಶೋಧನೆಯು Macro ದಿಂದ Micro ಕಡೆಗೆ – ಸೂಕ್ಷ್ಮ ಅಧ್ಯಯನಗಳ ಕಡೆಗೆ ಸಾಗುತ್ತಲಿವೆ. ಇಂದು ಸಂಶೋಧನೆಗಳು Objective Assessment (ವಸ್ತುನಿಷ್ಠತೆ) ಮತ್ತು ವಸ್ತು ಪರಿಮಾಣತೆಯತ್ತ (Qunatification) ಹೆಜ್ಜೆಯನ್ನು ಇಡುತ್ತಲಿದೆ. ಆಕರಗಳನ್ನು ಪರಿಮಾಣೀಕರಿಸಿದಾಗ ದೊರಕುವ ಅಂಕಿ–ಅಂಶಗಳ ಮೂಲಕ ಇತಿಹಾಸವನ್ನು ಪುನರ್ ರಚಿಸುವ ಕಾಲಘಟ್ಟದಲ್ಲಿ ನಾವಿದ್ದೇವೆ. ಇದರ ಬಳಕೆಗೆ ವಿವಿಧ ವಿಜ್ಞಾನಶಾಖೆಗಳನ್ನು ಬಳಸಿಕೊಂಡು ಅಂತರ್‌ಶಿಸ್ತೀಯ ಅಧ್ಯಯನಗಳನ್ನು ನಡೆಸಬೇಕಿದೆ. ಜನಾಂಗೀಯ ಶಾಸ್ತ್ರ, ಜನಾಂಗೀಯ ವಿವರಣಾಶಾಸ್ತ್ರ, ಸಂಖ್ಯಾಶಾಸ್ತ್ರ (Statistics), ಗಣಕಯಂತ್ರ (Computers,) Simulative methods, ಇತ್ಯಾದಿಗಳು ಇಂದಿನ ಸಂಶೋಧಕರಿಗೆ ಸುಲಭವಾಗಿ ದೊರಕುತ್ತಿರುವುದರಿಂದ ಇವುಗಳ ಬಳಕೆಯು ಅನಿವಾರ್ಯವೂ ಹೌದು ಮತ್ತು ಅಗತ್ಯವೂ ಹೌದು.

ವಿಜಯನಗರ ಸಾಮ್ರಾಜ್ಯದ ಬಗೆಗೆ ಸಾಕಷ್ಟು ಗ್ರಂಥಗಳು ಮತ್ತು ಬಿಡಿ ಲೇಖನಗಳು ಇವೆಯೆಂದು ಯಾರಿಗಾದರೂ ಭಾವನೆ ಬರಬಹುದು. ಒಂದು ಅರ್ಥದಲ್ಲಿ ಅದು ನಿಜವೇ ಇರಬಹುದು. ಆದರೆ ಇದು ವ್ಯವಸ್ಥಿವಾದ ಅಧ್ಯಯನ ಅಲ್ಲ ಎಂಬುದು ನಿಜ. ವೈಯಕ್ತಿಕವಾಗಿ ವಿದ್ವಾಂಸರು ಹಾಗೂ ಸಂಶೋಧಕರು ತಮಗೆ ಇಷ್ಟವಾದ ವಿಷಯವನ್ನು ಕುರಿತು ಬರೆಯುವುದು ಅಪೇಕ್ಷಣೀಯವಾದರೂ ಸಮಗ್ರ ಚಿತ್ರಣದಲ್ಲಿ ಆ ಲೇಖನಕ್ಕೆ ತೀರ ಮಿತವಾದ ವ್ಯಾಪ್ತಿ ಇರುತ್ತದೆ. ಹಾಗಾಗಿ ಎಂತಹ ಒಳ್ಳೆಯ ಲೇಖನವಾದರೂ ಓದುಗರ ಮೇಲೆ ಮತ್ತು ಸಮಗ್ರ ಇತಿಹಾಸದ ಮೇಲೆ ಪರಿಣಾಮಕಾರಿಯಾದ ಪ್ರಭಾವವನ್ನು ಬೀರುವುದಿಲ್ಲ.

ಇವುಗಳ ಬಳಕೆಯ ಉದ್ದೇಶವು ವಿಜಯನಗದ ಇತಿಹಾಸವನ್ನು ವಸ್ತುನಿಷ್ಠವಾಗಿ ಪುನಾರಚಿಸುವುದಾಗಿದೆ. ಕಾಲಾಕಾಲಕ್ಕೆ ದೊರಕುವ ಆಕರಗಳನ್ನು ಸಮರ್ಪಕವಾಗಿ ಇತಿಹಾಸವನ್ನು ಬಳಸಿಕೊಂಡು ಪುನರ್ವಿಮರ್ಶೆ ಮತ್ತು ಪುನರ್ವ್ಯಾಖ್ಯಾನ ಮಾಡುತ್ತಾ ಪುನಾರಚಿಸುವುದೇ ಆಗಿದೆ. ಇತಿಹಾಸವನ್ನು ವೈಭವೀಕರಿಸುವುದು ಸಲ್ಲದು. ಅದರಂತೆಯೇ ಇತಿಹಾಸ ಕಾಲಘಟ್ಟದ ಸಮಕಾಲೀನ ಸಮಾಜವನ್ನು ಏಕಪಕ್ಷೀಯವಾಗಿ ಕಡೆಗಣಿಸಿ ನೋಡುವುದು ಸೂಕ್ತವಲ್ಲ. ಕಾಲದ ಅಗತ್ಯತೆಗಳಿಗೆ ಅನುಗುಣವಾಗಿ ಸಮಾಜವು ತನ್ನನ್ನು ತಾನೇ ರೂಪಿಸಿಕೊಳ್ಳುತ್ತಲಿರುತ್ತವೆ. ಇಂದಿನ ಸಾಮಾಜಿಕ ಕಾಲಘಟ್ಟದಲ್ಲಿ ನಿಂತ ನಾವು ಅಂದಿನ ಸಮಾಜದ ರೀತಿ ರಿವಾಜುಗಳನ್ನು ಅಳೆದು ಟೀಕಿಸುವುದು ಸಮಂಜಸವಲ್ಲ.

ನಾನು ಇಷ್ಟರವರೆಗೆ ತಮ್ಮೊಂದಿಗೆ ಹಂಚಿಕೊಂಡ ವಿಷಯಗಳು ವಿಜಯನಗರ ಇತಿಹಾಸ ಮತ್ತು ಅದರ ಅಧ್ಯಯನ ಕುರಿತಾದ ಒಂದು ಸ್ಥೂಲ ಪರಿಚಯವಷ್ಟೆ. ಸಂಶೋಧಕರ ಮುಂದಿರುವ ಸವಾಲುಗಳು ಹಲವು ಹತ್ತು ಬಗೆಯಿಂದ ಕೂಡಿವೆ. ಅಪಾರ ಪ್ರಮಾಣದ ಆಕರಗಳ ಬಳಕೆಯು ಮುಖ್ಯ. ವಿಜಯನಗರ ಸಾಮ್ರಾಜ್ಯಕ್ಕೆ ಸಂಬಂಧಿಸಿದಂತೆ ದೊರಕಿರುವ ವಸ್ತು ಅವಶೇಷಗಳ ಅಧ್ಯಯನವು ಸಹ ಅಷ್ಟೇ ಮುಖ್ಯ ವಿಜಯನಗರ ಕಾಲಘಟ್ಟದ ಮಧ್ಯಯುಗೀನ ಪ್ರಾಕ್ತನ ನೆಲೆಗಳ ಉತ್ಖನನದಿಂದ ದೊರಕಿರುವ ವಸ್ತು ಅವಶೇಷಗಳು ಸಹ ವಿಜಯನಗರ ಇತಿಹಾಸಕ್ಕೆ ಕೊಡುಗೆಗಳನ್ನು ನೀಡಿವೆ. ಬೆರಳೆಣಿಕೆಯಷ್ಟು ಅಂತಹ ನೆಲೆಗಳು ಉತ್ಖನನವಾಗಿರುವುದರಿಂದ ಸಂಶೋಧಕರ ಕೆಲಸವು ಸಾಧ್ಯವಾದಷ್ಟು ಮಟ್ಟಿಗೆ ಸುಗಮವಾಗಿದೆ ಎಂದು ಹೇಳಬಹುದು. ಕರ್ನಾಟಕದಲ್ಲಿರುವ ಹಂಪಿ, ತಲಕಾಡು, ಬಾರಕೂರು, ತಮಿಳುನಾಡಿನ ಜಿಂಜಿ, ಕಂಚಿ, ಇತ್ಯಾದಿ ನೆಲೆಗಳಲ್ಲಿ ಉತ್ಖನನಗಳು ನಡೆದಿವೆ ಹಾಗೂ ಅವುಗಳ ಉತ್ಖನನ ವರದಿಗಳು ಪೂರ್ಣ ಪ್ರಮಾಣದಲ್ಲಿ ಪ್ರಕಟಗೊಂಡರೆ ವಸ್ತು ಅವಶೇಷಗಳ ಮೂಲಕ ವಿಜಯನಗರವನ್ನು ಅರಿಯಬಹುದಾಗಿದೆ.

ವಿಜಯನಗರ ಅಧ್ಯಯನದ ಚರ್ಚೆಯು ಹಂಪಿಯನ್ನು ಕುರಿತು ಉಲ್ಲೇಖಿಸದಿದ್ದರೆ ಅಪೂರ್ಣವೆಂದು ಭಾವಿಸುವೆ. ಕಳೆದ ಎರಡು ದಶಕಗಳಿಂದ, ಈ ವಿಚಾರ ಸಂಕಿರಣದಷ್ಟೇ ವಯಸ್ಸು, ಹಂಪಿ ಪರಿಸರದಲ್ಲಿಯೇ ಸಂಶೋಧನೆಯನ್ನು ನಡೆಸುತ್ತಿರುವುದರಿಂದ ವಿಜಯನಗರ ರಾಜಧಾನಿ ಹಂಪಿಯ ಪುರಾತತ್ತ್ವ ಮತ್ತು ಇತಿಹಾಸವನ್ನು ಕುರಿತಂತೆ ಕೆಲವು ವಿಷಯಗಳನ್ನು ತಮ್ಮೊಂದಿಗೆ ಹಂಚಿಕೊಳ್ಳುತ್ತೇನೆ. ಈಗಾಗಲೇ ಪ್ರಸ್ತಾಪಿಸಿದಂತೆ ಹಂಪಿಯು ಕಳೆದ ಶತಮಾನದ ಮಧ್ಯದವರೆಗೆ ಅಂದರೆ 1950ರವರೆಗೆ ಹೆಚ್ಚು ಕಡಿಮೆ ಅಜ್ಞಾತವಾಗಿಯೇ ಇದ್ದಿತು. 1970ರದಶಕದಲ್ಲಿ ಮುಂಚೂಣಿಗೆ ಬಂದಿತು.

ಆದುದರಿಂದ ಇಂದು ನಮಗೆ ತೀರ ಅವಶ್ಯಕವಾಗಿ ಬೇಕಾಗಿರುವುದು ವಿಜಯನಗರವನ್ನು ಕುರಿತಾದ ಸಮಗ್ರ ಅಧ್ಯಯನದ ವ್ಯವಸ್ಥಿತ ಯೋಜನೆ. ಸುಮಾರು ಇಪ್ಪತ್ತು – ಇಪ್ಪತ್ತೈದು ಸಂಪುಟಗಳಲ್ಲಿ ವಿಜಯನಗರವನ್ನು ಕುರಿತಾದ ಎಲ್ಲಾ ವಿಷಯಗಳನ್ನು ಒಳಗೊಂಡ ಬೃಹತ್ ಸಂಪುಟ ಇಲಾಖೆಯ ಆಶ್ರಯದಲ್ಲಿ ವಿಜಯನಗರ ಸಮಗ್ರ ಅಧ್ಯಯನ/ ಸಂಶೋಧನ ಕೇಂದ್ರ ಸ್ಥಾಪನೆಯಾಗಬೇಕು. ಹಿರಿಯ ಕಿರಿಯ ವಿದ್ವಾಂಸರನ್ನು, ಯುವ ಸಂಶೋಧಕರನ್ನು ಕೂಡಿಸಿಕೊಂಡು ಅವರವರ ಪರಿಣತಿಗೆ ತಕ್ಕಂತೆ ವಿಷಯಗಳನ್ನು ಅವರಿಗೆ ನೀಡಿ ಕ್ಷೇತ್ರಕಾರ್ಯಕ್ಕೆ ಅನುಗುಣ ಏರ್ಪಾಡುಗಳನ್ನು ಮಾಡಿ ಇಂತಹ ಸಂಪುಟಗಳನ್ನು ಬರೆಸಬೇಕು. ಖಂಡಿತವಾಗಿ ಇದು ಅಂತರ್ ಶಿಸ್ತೀಯ ಅಧ್ಯಯನವಾಗಬೇಕು. ಇತಿಹಾಸಕಾರರಿಗೆ ಹೆಚ್ಚಿನ ಪಾಲು ದೊರಕಿದರೂ ಇಲ್ಲಿ ಎಲ್ಲಾ ಭಾಷೆಗಳನ್ನು ಬಲ್ಲ ಮತ್ತು ಪರಿಣಿತ ವಿದ್ವಾಂಸರುಗಳನ್ನು ಮತ್ತು ವಿವಿಧ ಶಾಖೆಯ ವಿದ್ವಾಂಸರನ್ನು ಒಗ್ಗೂಡಿಸಿ ಪ್ರಯತ್ನ ಮಾಡಬೇಕು. ಈ ನಿಟ್ಟಿನಲ್ಲಿ ಕಳೆದ ಇಪ್ಪತ್ತು ವರ್ಷಗಳಿಂದ ಇಲಾಖೆಯು ನಡೆಸುತ್ತಿರುವ ವಿಜಯನಗರ ಅಧ್ಯಯನ ವಿಚಾರ ಸಂಕಿರಣವು ಅರ್ಥಪೂರ್ಣ ಕೊಡುಗೆಯನ್ನು ನೀಡಿದೆಯೆಂದರೆ ಅತಿಶಯೋಕ್ತಿಯಾಗಲಾರದು.

ಪರಿವಿಡಿ

01. ಹಂಪಿ ಪರಿಸರದಲ್ಲಿ ಕುರುಬನ ಚಿತ್ರಗಳು

– ಡಾ. ಎಫ್.ಟಿ. ಹಳ್ಳಿಕೇರಿ

ವಿಶ್ವದ ಐತಿಹಾಸಿಕ ಪರಂಪರೆಯ ತಾಣಗಳಲ್ಲಿ ಒಂದಾದ ಹಂಪಿಯು ವೈವಿಧ್ಯಮಯ ಶಿಲ್ಪಕಲೆ–ವಾಸ್ತುಶಿಲ್ಪವನ್ನು ಒಳಗೊಂಡಿರುವ ಪ್ರದೇಶ. ಇಲ್ಲಿರುವ ದೇವಾಲಯಗಳು ಮೂರ್ತಿಶಿಲ್ಪಗಳು ನಮಗೆ ಸಾಕ್ಷಿಯಾಗಿ ನಿಂತಿವೆ. ಅರಸ, ಅರಸು ಪರಿವಾರ, ಅರಮನೆಗೆ ಸಂಬಂಧಿಸಿದ ಶಿಲ್ಪಗಳಲ್ಲದೇ ಶ್ರೀಸಾಮಾನ್ಯನ ಬದುಕಿನ ವಿವಿಧತೆಯನ್ನು ಕಲೆಯ ಮೂಲಕ ತಿಳಿಸಿರುವುದನ್ನು ಕಾಣಬಹುದು. ತಲೆಯ ಮೇಲಿನಿಂದ ಪಾದದವರೆಗೆ ಹೊದ್ದಕೊಂಡ ಕಂಬಳಿ, ಕೈಯಲ್ಲಿ ಒಂದು ಉದ್ದದ ಕೋಲು ಹಿಡಿದುಕೊಂಡಿರುವ ವ್ಯಕ್ತಿಯೊಬ್ಬನ ಚಿತ್ರವನ್ನು ಹಂಪಿ ಪರಿಸರದ ದೇವಾಲಯಗಳ ಗೋಡೆ ಕಂಬಗಳಲ್ಲಿ ಕೆತ್ತಲಾಗಿದೆ. ಈ ಹಿನ್ನೆಲೆಯಲ್ಲಿ ಆ ಚಿತ್ರಗಳ ವಿಶೇಷತೆಯನ್ನು ಗುರುತಿಸುವುದುದ ಈ ಸಂಪ್ರಬಂಧದ ಮುಖ್ಯ ಉದ್ದೇಶವಾಗಿದೆ.

ಮೊದಲು ಚಿತ್ರಗಳಿರುವ ದೇವಾಲಯಗಳ ವಿವರಗಳು ಹೀಗಿವೆ :

1. ಹಂಪಿಯ ವಿರೂಪಾಕ್ಷ ದೇವಾಲಯದ ಎಡಗಡೆ ಬಾಗಿಲಿನಿಂದ ಸ್ವಲ್ಪ ಮುಂದಕ್ಕೆ ಹೋದರೆ ಪುಷ್ಕರಣಿ ಪಕ್ಕದಲ್ಲಿ ನಿಂತಿರುವ ಮಂಟಪದ ಕಂಬದ ಮೇಲಿರುವ ಚಿತ್ರ.
2. ವಿಜಯವಿಠಲ ದೇವಸ್ಥಾನದ ಕಲ್ಯಾಣ ಮಂಟಪದ ಕಂಬದಲ್ಲಿರುವ ಚಿತ್ರ.
3. ನೆಲಮಾಳಿಗೆಯ ಶಿವನ ದೇವಾಲಯದ ಕಂಬದ ಮೇಲಿರುವ ಚಿತ್ರ
4. ಮಲಪನಗುಡಿಯ ಮಲ್ಲಿಕಾರ್ಜುನ ದೇವಾಲಯದ ಕಂಬದ ಮೇಲಿರುವ ಚಿತ್ರ.
5. ಮಲಿಯಮ್ಮನ ದೇವಾಲಯದ ಕಂಬದ ಮೇಲಿರುವ ಚಿತ್ರ.
6. ಹೊಸಪೇಟೆಯ ವಿಷ್ಣುದೇವಾಲಯದ ಕಂಬದ ಮೇಲಿರುವ ಚಿತ್ರ.
7. ಬಳ್ಳಾರಿಯ ಕೋಟೆಮಲ್ಲೇಶ್ವರನ ದೇವಾಲಯದ ಪೂರ್ವ ಮತ್ತು ಉತ್ತರ ಮಂಟಪದ ಕಂಬಗಳ ಮೇಲಿರುವ ಚಿತ್ರ.
8. ಕೊಪ್ಪಳ ಜಿಲ್ಲೆಯ ಕನಕಗಿರಿಯ ಕನಕರಾಯ ದೇವಾಲಯದ ಕಂಬದ ಮೇಲಿರುವ ಚಿತ್ರ.
9. ಕೊಪ್ಪಳ ಜಿಲ್ಲೆ ಯಲಬುರ್ಗಾ ತಾಲೂಕಿನ ಕಲ್ಲೂರು ಗ್ರಾಮದ ಕಲ್ಲೇಶ್ವರ ದೇವಾಲಯದ ಕಂಬದ ಮೇಲಿರುವ ಚಿತ್ರ.
10. ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ಲೇಪಾಕ್ಷಿ ದೇವಾಲಯದ ಮುಖ್ಯದ್ವಾರದ ಕಲ್ಲಿನ ಕಂಬದ ಮೇಲಿರುವ ಚಿತ್ರ.

ಈ ಚಿತ್ರಗಳನ್ನು ಗಮನಿಸಿದಾಗ ಇಲ್ಲಿರುವ ವ್ಯಕ್ತಿ ಯಾರು ? ಈತನಿಗೂ ಹಂಪಿ – ವಿಜಯನಗರಕ್ಕೂ ಏನಾದರೂ ಸಂಬಂಧವಿದೆಯೇ ? ಎಂಬ ಪ್ರಶ್ನೆಗಳ ಸಹಜವಾಗಿ ಉದ್ಭವಿಸುತ್ತವೆ. ಸಂಬಂಧವಿರಲೇಬೇಕು. ಸುಮ್ಮಸುಮ್ಮನೇ ಇಂಥ ಚಿತ್ರಗಳನ್ನು ಬಿಡಿಸಲಾಗುವುದಿಲ್ಲ. ಇದರ ಹಿಂದೆ ಒಂದು ಹಿನ್ನಲೆಯಿರಬೇಕು ಮತ್ತು ಸ್ಪಷ್ಟವಾದ ಉದ್ದೇಶವಿರಬೇಕು. ಆ ಹಿನ್ನಲೆ ಮತ್ತು ಉದ್ದೇಶಗಳನ್ನು ಈಗ ವಿಶ್ಲೇಷಿಸಬಹುದು.

ಕುರುಬರ ಆರಾಧ್ಯ ದೈವವಾದ ಬೀರಪ್ಪನ ಸಂಪ್ರದಾಯದಲ್ಲಿ ಕೋಲು–ಕಂಬಳಿ ದೀಕ್ಷೆ ಎಂಬ ಆಚರಣೆಯೊಂದಿದೆ. ಬೀರದೇವರ ಜಾತ್ರೆ–ಉತ್ಸವಗಳಲ್ಲಿ ಈ ಆಚರಣೆ ಈಗಲೂ ಚಾಚೂತಪ್ಪದೇ ನಡೆದುಕೊಂಡು ಬರುತ್ತಿದೆ. ಬೀರದೇವರ ಜಾತ್ರೆಯಲ್ಲಿ ಭಕ್ತರು ಬೀರಪ್ಪನ ಸೇವೆಯನ್ನು ಮಾಡಬೇಕಾಗುತ್ತದೆ. ಅಂಥ ಸೇವೆಯನ್ನು ಮಾಡುವ ಭಕ್ತ(ಈರಗಾರ)ನಿಗೆ ಧಾರ್ಮಿಕ ವಿಧಿ–ವಿಧಾನಗಳೊಂದಿಗೆ ದೀಕ್ಷೆಯನ್ನು ಕೊಡಲಾಗುತ್ತದೆ. ಆ ಸಂದರ್ಭದಲ್ಲಿ ಅವನ(ಭಕ್ತನ) ಕೈಯಲ್ಲಿ ಒಂದು ಕರಿಕಂಬಳಿ, ಒಂದು ಕೋಲನ್ನು ಕೊಡಲಾಗುತ್ತದೆ. ಇದಕ್ಕೆ ಕೋಲುಕಂಬಳಿ ದೀಕ್ಷೆ ಎಂದು ಕರೆಯುತ್ತಾರೆ.

ಕಂಬಳಿ–ಕೋಲು ಕುರುಬರಿಗೆ ಪವಿತ್ರವಾದ ವಸ್ತುಗಳಾಗಿವೆ. ಪ್ರಾಚೀನ ಕಾಲದಿಂದಲೂ ಕೋಲುಕಂಬಳಿಗಳು ಕುರುಬರಿಗೆ ವಿಶಿಷ್ಟವಾದ ವಸ್ತುಗಳು. ಕುರಿಕಾಯಲಿಕ್ಕೆ ಕೋಲುಕಂಬಳಿ ಬೇಕು. ಬೀರಪ್ಪನ ಪೂಜಾರಿಕೆ ಅಥವಾ ಸೇವೆ ಸಲ್ಲಿಸಲು ಕೋಲುಕಂಬಳಿ ಅವಶ್ಯ. ಈಗಲೂ ಕಾಡುಮೇಡುಗಳಲ್ಲಿ ಅಲೆಯುತ್ತ ಕುರಿಕಾಯುತ್ತಿರುವ ಸಂದರ್ಭದಲ್ಲಿ ಕುರಿಗಾಹಿಗಳಿಗೆ ಕೋಲುಕಂಬಳಿ ಅವಶ್ಯವಾಗಿ ಇರಲೇಬೇಕು. ಹೀಗಾಗಿ ಒಂದು ಕಾಲದಲ್ಲಿ ಹಂಪಿ ಪರಿಸರವು ಪಶುಪಾಲಕರ ಮುಖ್ಯ ನೆಲೆಯಾಗಿತ್ತು. ಮೇಲಾಗಿ ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪಿಸಿದವರು ಪಶುಪಾಲಕ ವೃತ್ತಿ ಮಾಡುತ್ತಲಿದ್ದ ಹಕ್ಕಬುಕ್ಕರು ಕುರುಬರು. ಇದಕ್ಕೆ ಅನೇಕ ಆಕರಗಳಲ್ಲಿ ಸಾಕ್ಷಿಗಳಿವೆ. ಈ ಸಾಕ್ಷಿಗಳಿಗೆ ಅಧಿಕೃತತೆಯನ್ನು ತಂದುಕೊಡಲಿಕ್ಕಾಗಿಯೇ ಇಂಥ ಚಿತ್ರಗಳ ಮುಖೇನ ಅಧಿಕೃತತೆಯನ್ನು ತಂದುಕೊಡಲಿಕ್ಕಾಗಿದೆ ಎಂಬುದು ವಿದ್ವಾಂಸರ ಅಭಿಪ್ರಾಯ ಸರಿಯಾಗಿದೆ. ಇಂಥ ಶಿಲ್ಪಗಳನ್ನು ಗಮನಿಸಿಯೇ ರಾ.ಚಿಂ.ಢೇರೆ ಅವರು " ......ಈ ಮಂದಿರ ನಿರ್ಮಿಸುವವರ ಕುಲದ ಸ್ಮರಣೆ ಮಾಡಿಕೊಡಲೆಂದೇ ಎನ್ನುವುದರಲ್ಲಿ ನನಗೆ ಕಿಂಚಿತ್ತೂ ಸಂಶಯವಿಲ್ಲ. ಇಲ್ಲದಿದ್ದರೆ ಇಲ್ಲಿಯ ಮಂದಿರದಲ್ಲಿಯೇ ಅಸಂಖ್ಯ ಕಂಬಗಳ ಮೇಲೆ ಪ್ರಾಯಶಃ ಎಲ್ಲ ದೇವರಮೂರ್ತಿ ಹಾಗೂ ದೈವಲೀಲಾ ಪ್ರಸಂಗಗಳೇ ಗೋಚರಿಸುತ್ತಿರುವಾಗ, ಈ ದೈವತೇತರ ಶ್ರೇಣಿಯ ಕುರುಬನು, ಇಲ್ಲಿ ಶಿಲ್ಪಾಂಕಿತಗೊಳ್ಳಲು ಕಾರಣವೇನು ಎಂಬುದು ಸ್ಪಷ್ಟವಾಗುವುದಿಲ್ಲ. ಕುರುಬ ಮತ್ತು ವಿಠಲ ಈ ಎರಡೂ ಜನಪ್ರಿಯ ಕಲ್ಪನಾಬಂಧದ ದರ್ಶನದಿಂದ ನಮಗೆ ವಿಜಯನಗರ ಸಂಸ್ಥಾಪಕರ ಕುಲ ಹಾಗೂ ಶ್ರದ್ಧೇಯ ಮೂಲವು ಸ್ಪಷ್ಟವಾಗುತ್ತದೆ" ಎಂದು ಹೇಳಿದ್ದಾರೆ (ಶ್ರೀ ವಿಠಲ:ಒಂದು ಮಹಾಸಮನ್ವಯ, ಪುಟ:295). ಈ ಅಭಿಪ್ರಾಯವನ್ನು ಪುರಸ್ಕರಿಸುವಂತೆ ಇಲ್ಲಿನ ಬಹುತೇಕ ಎಲ್ಲ ದೇವಾಲಯಗಳ ಕಂಬ ಅಥವಾ ಗೋಡೆಗಳಲ್ಲಿ ಒಂದಾದರೂ ಇಂಥ ಕುರುಬನ ಚಿತ್ರಗಳನ್ನು ನಾವು ನೋಡಬಹುದು.


ಆಧಾರ ಸೂಚಿ

1. ಎಫ್.ಟಿ.ಹಳ್ಳಿಕೇರಿ(ಸಂ), **ಹಾಲುಮತ ವ್ಯಾಸಂಗ–3,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2011
2. ರಾಮಚಂದ್ರ ಚಿಂತಾಮಣ ಢೇರೆ(ಅನು: ಚಂದ್ರಕಾಂತ ಪೋಕಳೆ), **ಶ್ರೀ ವಿಠಲ:ಒಂದು ಮಹಾಸಮನ್ವಯ,** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, 2002
3. ಲಿಂಗದಹಳ್ಳಿ ಹಾಲಪ್ಪ, **ಹಾಲುಮತ ಹಿರಿಮೆ:ವಿಜಯನಗರ ಸಾಮ್ರಾಜ್ಯ,** ಹಾಲುಮತ ಹಕ್ಕಬುಕ್ಕ ಸಂಸ್ಕೃತಿ ಪ್ರತಿಷ್ಠಾನ, ಬಳ್ಳಾರಿ, 2015

ಛಾಯಾಚಿತ್ರಗಳು



ಹಂಪಿಯಲ್ಲಿರುವ ಕುರುಬನ ಚಿತ್ರ



ಮಲಪನಗುಡಿಯಲ್ಲಿರುವ ಕುರುಬನ ಚಿತ್ರ

02. ಸಿ.ಎಸ್. ಕೊಪ್ಪ ಗ್ರಾಮದ ಅಪ್ರಕಟಿತ ಶಿಲಾಶಾಸನ

– ಆರ್. ಶೇಜೇಶ್ವರ

ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲೂಕಿನ ಹೂಸೂರು ಹೊಬಳಿ ಕಾಗಿನೆಲ್ಲಿ ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿ ಬರುವ ಸಿ.ಎಸ್. ಕೊಪ್ಪ ಗ್ರಾಮವನ್ನು ಸ್ಥಳಿಯರು ಚೌಡನಾಯಕನಕೊಪ್ಪ ಗ್ರಾಮವೆಂದು ಕರೆಯುತ್ತಾರೆ. ಈ ಗ್ರಾಮದಲ್ಲಿ ಸರ್ವೆಕಾರ್ಯ ಕೈಗೊಂಡಾಗ ಗ್ರಾಮದ ಬಲಬದಿಯಲ್ಲಿ ಸರ್ವೆನಂ 48ರ ಮಹಂತೇಶ ಎಂಬುವರ ಹೊಲದಲ್ಲಿ ಸ್ಥಳೀಯರು ಬಸವನಕಲ್ಲು ಎಂದು ಕರೆಯುವ ಜಾಗದಲ್ಲಿ ನಂದಿಕಲ್ಲು ಇತ್ತು, ಈ ನಂದಿಕಲ್ಲು ಸಂಪೂರ್ಣವಾಗಿ ಮುಚ್ಚಿಹೊಗಿ ಸ್ವಲ್ಪ ಭಾಗ ಮಾತ್ರ ಕಂಡುಬರುತ್ತಿತ್ತು. ಇದನ್ನು ಅಗೆಸಿದಾಗ ಈ ನಂದಿಕಲ್ಲಿನ ಎಡ ಹಾಗೂ ಹಿಂಭಾಗದಲ್ಲಿ ಶಿಲಾಶಾಸನವು ಕಂಡುಬಂದಿತು, ಈ ನಂದಿಕಲ್ಲು ಗ್ರಾನೈಟ್ ಕಲ್ಲಿನಿಂದ ಕೂಡಿದ್ದು ಮೂರು ಅಡಿ ಎತ್ತರ ಹಾಗೂ ಒಂದು ಅಡಿ ಆಗಲವಾಗಿದ್ದು ಚೌಕಕಾರವಾಗಿದೆ ಮೇಲ್ಭಾಗದಲ್ಲಿ ನಂದಿಯಿದ್ದು ಅಲಂಕೃತಗೊಂಡಿದೆ, ನಂದಿಕಲ್ಲಿನ ಮುಂಭಾಗದಲ್ಲಿ ಪದ್ಮವಿದೆ, ಈ ನಂದಿಕಲ್ಲು ಉತ್ತರಕ್ಕೆ ಮುಖಮಾಡಿದೆ, ಇದು ಗಡಿಕಲ್ಲು ಆಗಿರುತ್ತದೆ. ಇದನ್ನು ಮೊದಲು ಯಾರೋ ನಿಧಿಕಳ್ಳರು ನಿಧಿ ಆಸೆಗೆ ಅಗೆದಿದ್ದರು ನಂತರ ಇದನ್ನು ನಾವೇ ಇಲ್ಲಿ ನಿಲ್ಲಿಸಿದೆವು ಎಂದು ಸ್ಥಳೀಯರು ಹೇಳುತ್ತಾರೆ.

ಈ ನಂದಿಕಲ್ಲಿನ ಎಡಭಾಗದಲ್ಲಿ ಶಾಸನವಿದ್ದು ಇದು ಇಪ್ಪತ್ತು ಸಾಲಿನಿಂದ ಕೂಡಿದ್ದು ಮೊದಲಿನ ಎರಡು ಸಾಲುಗಳ ಎಡಭಾಗದಲ್ಲಿ ಸ್ವಲ್ಪಭಾಗ ತ್ರುಟಿತವಾಗಿದೆ, ಹಿಂಭಾಗದಲ್ಲಿ ಶಾಸನವು ಮುಂದುವರೆದು ಐದು ಸಾಲುಗಳಿಂದ ಕೂಡಿದೆ, ಒಟ್ಟಾರೆಯಾಗಿ ಇಪ್ಪತೈದು ಸಾಲಿನ ಶಾಸನವಾಗಿದ್ದು ಕನ್ನಡ ಭಾಷೆ ಹಾಗೂ ಕನ್ನಡ ಲಿಪಿಯಲ್ಲಿದೆ.

ಶಾಸನದ ಪಾಠ

1. ಶಾಲಿವಾಹನ ಶಕವ [ರು ಷ]
2. 1461 ನೆಯ ವಿಕಾ [ರಿ ಸಂ]
3. ವಛರದ ಶ್ರಾವಣ ಬ1
4. ದ ಗುರುವಾರದ ಘಳಿಗೆ
5. 13 !! ಅಚ್ಯುತರಾ
6. ಯ ಮಲಸಂಣ . .
7. . . . . . ಕಾರು [ಕು ರು]
8. ನಾಡ ಲಿಂಗಣ ನಾ
9. ಯಕರ ಅಪ್ಪಣೆ

10. ಯಲಿ ! ಅಣಜೆ
11. ಯ ಕೆಂಚನಾ
12. ಯಕರ ಮಕ
13. ಳು (ಅಪಣ) ನಾ
14. ಯಕರು ! ಚಉ
15. ಡಿ ನಾಯಕನ ಕೊ
16. ಪದಲಿ ! ಉದ
17. . . . .
18. . . . ಸ್ವಗ್ಗರ
19. . . ಸಕಲ
20. ಸಾಂಬ್ರಾಜ್ಯ
21. ಯಾಗಬೇಕೆಂದು
22. ವೃಷಬನ ಪ್ರ
23. ತಿಷ್ಠೆ ಮಾಡಿದರು
24. ಶುಭಮಸ್ತು
25. ಶ್ರೀ.

ಶಾಸನದ ಸಾರಾಂಶ

ಈ ಶಾಸನವು ವಿಜಯನಗರ ಕಾಲದ ಶಾಸನವಾಗಿದ್ದು ತುಳುವ ವಂಶದ ಅಚ್ಯುತರಾಯನ ಕಾಲದ ಶಾಸನವಾಗಿದೆ, ಅಚ್ಯುತರಾಯನ ಕಾಲವು ಕ್ರಿ.ಶ.1529 ರಿಂದ 1542 ಅವಧಿಯಲ್ಲಿ ಕಂಡುಬರುತ್ತದೆ, ಪ್ರಸ್ತುತ ಶಾಸನವು ಅಚ್ಯುತರಾಯನ ಅಳ್ವಿಕೆಯ ಕಾಲದ್ದಾಗಿದ್ದು ಇವರ ಸಾಮಂತರಾಗಿ ಅಳ್ವಿಕೆ ಮಾಡುತ್ತಿದ್ದ ಕಾರುನಾಡ ಲಿಂಗಣ್ಣನಾಯಕರ ಅಪ್ಪಣೆಯಂತೆ ಅಣಜೆಯ ಕೆಂಚನಾಯಕರ ಮಕ್ಕಳಾದ ಅಪ್ಪಣ ನಾಯಕರು ಕ್ರಿ.ಶ. 1539 ರಲ್ಲಿ ಚವುಡಿನಾಯಕನ ಕೊಪ್ಪದಲ್ಲಿ ಪುಣ್ಯವಾಗಲೆಂದು ವೃಷಭ(ನಂದಿ)ವನ್ನು ಪ್ರತಿಷ್ಠಾಪಿಸಿದರು ಎಂದು ಈ ಶಾಸನವು ತಿಳಿಸುತ್ತದೆ. ಆದರೆ ಈಗ ಈ ಶಾಸನವಿರುವ ನಂದಿಕಲ್ಲಿನಲ್ಲಿ ನಂದಿ ವಿಗ್ರಹವು ಮುರಿದುಬಿದ್ದಿರುವುದು ಕಂಡುಬರುತ್ತದೆ. ಈ ನಂದಿಕಲ್ಲಿನ ಶಾಸನವಿರುವ ಪಕ್ಕದಲ್ಲೆ ವಿಜಯನಗರ ಕಾಲದ ಸುಂದರವಾದ ಗಣಪತಿಯು ಕಂಡುಬರುತ್ತದೆ, ಇದು ಎರಡು ಅಡಿ ಉದ್ದ ಒಂದು ಅಡಿ ನಾಲ್ಕು ಇಂಚು ಅಗಲವಾಗಿದೆ. ಒಟ್ಟಾರೆಯಾಗಿ ಈ ಶಾಸನವು ವಿಜಯನಗರ ಕಾಲದ ಶಾಸನವೆಂದು ತಿಳಿಯಬಹುದಾಗಿದೆ.

(ಕೃತಜ್ಞತೆ: ಕ್ಷೇತ್ರಕಾರ್ಯದಲ್ಲಿ ಸಹಕರಿಸಿದ ಸಿ.ಎನ್. ಕೊಪ್ಪ ಗ್ರಾಮಸ್ಥರು ಹಾಗೂ ಈ ಪ್ರಬಂಧವನ್ನು ರಚನೆ ಮಾಡುವಲ್ಲಿ ಸಹಕರಿಸಿದ ಡಾ. ಜಗದೀಶ ಹಾಗೂ ಆಯುಕ್ತರು ಪುರಾತತ್ತ್ವ ಸಂಗ್ರಹಾಲಯಗಳು ಪರಂಪರೆ ಇಲಾಖೆ ಮೈಸೂರು ಇವರುಗಳಿಗೆ ಅಭಾರಿಯಾಗಿರುತ್ತೇನೆ)









03. ಹಂಪಿ ಶಾಸನದಲ್ಲಿ ದಶಾವತಾರಗಳ ಉಲ್ಲೇಖ

– ಡಾ. ಪದ್ಮಜಾ ದೇಸಾಯಿ

ಹಂಪಿಯಲ್ಲಿ ದೊರೆತ ಈ ಶಾಸನವು ಕೋದಂಡರಾಮ ದೇವಾಲಯದ ಹಿಂಬದಿಯ ವಿಷ್ಣು ದೇವಾಲಯದ ಪ್ರವೇಶದ ಎರಡು ಕಡೆಯಲ್ಲಿರುವ ಶಾಸನ. ಈ ಶಾಸನವು ತೆಲುಗು ಲಿಪಿ, ತೆಲುಗು ಮತ್ತು ಸಂಸ್ಕೃತ ಭಾಷೆ ಶಾಸನದಲ್ಲಿ ಉಕ್ತವಾದ ಕಾಲವು ಶಕ 1478, ರಲ್ಲಿ ಸಂವತ್ಸರ, ಕಾರ್ತಿಕ ಶು 12 ಶುಕ್ರವಾರವೆಂದಿದ್ದು ಇದು ಕ್ರಿ.ಶ. 15–10–1556ರ ಶುಕ್ರವಾರಕ್ಕೆ ಸಮವಾಗುತ್ತದೆ.

ಈ ಶಾಸನವು ಸದಾಶಿವರಾಯನ ಆಳ್ವಿಕೆಯಲ್ಲಿ ಕೋದಂಡ ಋಷಿಗೋತ್ರದ ಅಪ್ಪಿಶೆಟ್ಟಿಯ ಮೊಮ್ಮಗನೂ, ಪಾಪಿಶೆಟ್ಟಿ ಮತ್ತು ಪಾಟಮ್ಮನ ಮಗನೂ ಆದ ತಿರುವಾಳಶೆಟ್ಟಿ ಎಂಬುವವನು ಮಾಡಿದ ಸೇವೆಯನ್ನು ತಿಳಿಸುತ್ತದೆ. ಶಾಸನದಲ್ಲಿ ತುಂಗಭದ್ರತೀರದ ಚಕ್ರತೀರ್ಥದಲ್ಲಿ ನೆಲೆಸಿರುವ ವೆಂಕಟೇಶದೇವರ ಅಷ್ಟಕವಿದ್ದು, ದೇವರು ಮತ್ಸ್ಯ, ಕೂರ್ಮ, ವರಾಹ, ನರಸಿಂಹ, ವಾಮನ, ಪರಶುರಾಮ ಕೋದಂಡರಾಮ, ಕೃಷ್ಣ, ಬುದ್ಧ ಮತ್ತು ಕಲ್ಕಿ ಅವತಾರವೆತ್ತಿ ಮಾಡಿದ ಕಾರ್ಯಗಳನ್ನು ಸ್ತುತಿಸುತ್ತದೆ. ಪ್ರತಿ ಪದ್ಯವು "ಶ್ರೀಚಕ್ರತೀರ್ಥನಿಲಯಂ ಭಜೇವೆಂಕಟೇಶಂ" ಎಂದು ಕೊನೆಯಾಗುತ್ತದೆ. ಈ ಶಾಸನವು ಒಟ್ಟು ನಲವತ್ತು ಸಾಲುಗಳನ್ನು ಹೊಂದಿದೆ.2

ಶಾಸನ ಪಠ್ಯ

1. ಶುಭಮಸ್ತು ॥ ಸ್ವಸ್ತಿ ಶ್ರೀ ಜಯಾಭ್ಯುದಯ ಶಾಲಿವಾ
2. ಹನ ಶಕವರ್ಷಂಬುಲು 1478 ಆಗುನೇಟಿ ನಲ ಸಂವತ್ಸರ
3. ಕಾರ್ತಿಕ ಶುಧ 12 ಶು ಶ್ರೀಮನ್ಮ ಹಾರಾಜಾಧಿರಾಜ ರಾಜ
4. ಪರಮೇಶ್ವರ ಶ್ರೀ ಪ್ರತಾಪ ಶ್ರೀ ಸದಾಶಿವದೇವಮಹರಾಯ
5. ಲಿ ಪೃಥ್ವೀರಾಜ್ಯಂ ಚೇಯುಚುಂಡುಂಗಾನು ಕೋದಂಡಋಷಿ ಗೋ
6. ತ್ರಂ ಅಪ್ಪಿಶೆಟ್ಟಿಗಾರಿ ಪೌತ್ರುಡೈನ ಪಾಪಿಶೆಟ್ಟಿಗಾರಿ ಧಂ
7. ರ್ಮ್ಮ ಪತ್ನಿ ಪಾಟುಮಗಾರು ಕೊಮಾರುಡು ತಿರುವಳಶೆಟ್ಟಿ ಸೇವೆ
8. ಶುಭಮಸ್ತು । ಸಂರಕ್ಷಿತುಂ ತಿರುಮಲಾಬಿತ(ಧ) ವೈಶ್ವ(ಶ್ಯ)ವರಂ
9. ಹಿತ್ವಾ ಫಣೀಶ್ವರಗಿರಿಂ ಸಹವಾರ್ಧಿಪುತ್ರ್ಯಂ ಪ್ರಾಬ್ತಂ ಖಗಾದಿ
10. ಪತಿನಾಪಿ ಛ ತುಂಗಭಧ್ರಾಂ ಶ್ರೀಚಕ್ರತೀರ್ಥನಿಲಯಂ ಭಜ ವೆಂಕ
11. ಟೇಶಂ ॥ ವೇದಾನ್ ಪರ್ಯೈಃ ಪ್ರಮುಷಿತಾಂಶ್ಚುತುರೋ ವಿಚೇತುಂ । ಮಾ
12. ಶ್ಯ(ತ್ಸ್ಯ) ವಪುಃ ಶುಲಲಿತಂ ಪ್ರತಿಧಾರಯಂತ್ತಂ ಅಲೋಲಿತಾಪಯೋ

13. ನಿಧಿವಾರಿಪುರಂ ಶ್ರೀ ಚಕ್ರತೀರ್ಥ ನಿಲಯಂ ಭಜ ವೆಂಕಟೇಶಂ ಪಾಥೋ
14. ದಿ ಮಂಥನ ಕೃತಸ್ತ್ರಿದಶೈರೇಷ್ಯೆಃ ಪಾಥೋ ನಿಧೌನಿಹಿತ ಮಂದರ ಶೈ
15. ಲವರ್ಯಂ ಭರ್ತುಂ ಪುನರ್ವ್ವಿಹಿತಕಚ್ಛಪರಾಜ ವೇಷಂ ಶ್ರೀ ಚಕ್ರತೀರ್ಥ
16. ನಿಲಯಂ ಭಜ ವೆಂಕಟೇಶಂ ॥ ಶೌರ್ಯಾತರೇಕ ಶಕಲೀ ಕೃತವಂದ್ಯ
17. ರಶ್ಯಾಧೈತ್ಯಾಧಿಪತ್ಯ ಹನನಾಯಹಮಹಂ ಚ ಮಗ್ನಾ ವದ್ದು
18. ರ್ತಮಾರ್ಜಿತ ವರಾಹವಪುರ್ವ್ವಿಶೇಷಂ । ಶ್ರೀ ಚಕ್ರತೀರ್ಥ ನಿಲಯಂ
19. ಭಜ ವೆಂಕಟೇಶಂ ॥4॥ ಪಿತ್ರಾನಿಜೇನ ಕುಪಾತಿಪರಿಪೀಡ್ಯಮಾನಂ
20. ಪ್ರಹ್ಲಾದಮೇವ ಪರಿರಕ್ಷಿತುಮಾತ್ಮ ಭಕ್ತಂ । ಸ್ತಂಭಾದ್ವಿನಿರ್ಗ್ಗತಂ
21. ತನುಂ ನರಶಿಂಹ್ವರೂಪಂ । ಶ್ರೀ ಚಕ್ರತೀರ್ಥ ನಿಲಯಂ
22. ಭಜ ವೆಂಕಟೇಶಂ ॥ ಅಕ್ರಮ್ಯಸ್ಸ(ಸ)ರ್ವ್ವ ಜಗತೀಮತಿ
23. .... ತ್ಯಂ ವಿಧಂ ಚ್ಚಲಯಿತುಂ
24. ವಲಯ ಜವಾಟಿ
25. ಆದಾಯ ವಾ
26. ಮನ ತನುಂ
27. ಜಿತ ಸ್ಸ(ಸ)ರ್ವ್ವ
28. ಲೋಕಂ । ಶ್ರೀ
29. ಚಕ್ರತೀರ್ಥ ನಿಲ
30. ಯಂ ಭಜ ವೆಂಕ್ಕ
31. ಟೇಶಂ ಶ್ರೀ
32. ಂವ್ರನ್ಮಾರ್ಗಯೋವ ಚರಿತ(ತಂ) ಪೃಥವೀಪತಿನಾಮುತ್ಪಾಟ
33. ನಾಯ ಜನಿತಂ ಜಮದಗ್ನಿ ವಂಶೇ । ಪಾಪೀಯಸಾಂ ಪರಶು ನಿ
34. ರ್ಜಿತ ಕಾರ್ತಕಾರ್ತವೀರ್ಯಂ । ಶ್ರೀ ಚಕ್ರತೀರ್ಥನಿಲಯಂ ಭಜ ವೆಂಕಟೇಶಂ
35. ರಕ್ಷಃ ಪ್ರಲಂಬಪುರ ಯೂಥಕಲಿನ್ ವೆಜೇತುಂ ಕ್ಲೃಪ್ತಾವತಾರಮಖಿಲೈ
36. ರಭಿವಂದ್ಯಮಾನೊ । ಕೋದಂಡರಾಮ ಹಲಭೃನ್ಕಲಿ ಕಲ್ಕಿರೂಪಂ ಶ್ರೀ
37. ಚಕ್ರತೀರ್ಥ ನಿಲಯಂ ಭಜ ವೆಂಕಟೇಶಂ ಶ್ರೀವೆಂಕಟಾಷ್ಟಕಮಿದಂಪ್ರಿ
38. ಯಮೀಶ್ವರಸ್ಯ ಯೋ ವಾಪರೇಲ್ಲಿಖತಿ ಪೃಚ್ಛತಿ ಭಕ್ತಿಯುಕ್ತಃ । ದಾರ್ಯೆ ಸ್ಸು
39. ತೈಸ್ಸಖಲು ವಿಂದತಿ ದೀರ್ಘಮಾಯುರತ್ಯಾಂ ಶ್ರೀಯಮುಪೈತಿ ವಿಧೂ
40. ತರೋಗಃ ॥ ಶ್ರೀ ॥ ತಿರುಮಲವಣಿಗೀಂದ್ರಂ ರಕ್ಷಿತುಂ ತುಂಗಭದ್ರಾ ತಟಭು

ಈ ಶಾಸನದಲ್ಲಿ ದಶಾವತಾರಗಳ ಉಲ್ಲೇಖವನ್ನು ಕಾಣಬಹುದು. ದಶಾವತಾರಗಳ ಕಲ್ಪನೆಯನ್ನು ಭಗವದ್ಗೀತೆಯಲ್ಲಿ ಕೃಷ್ಣನು ಅರ್ಜುನನಿಗೆ ವಿವರಿಸುತ್ತಾನೆ. ದಶಾವತಾರಗಳ ಬಗ್ಗೆ ಪುರಾಣಗಳಲ್ಲಿ ಬರುವ ಐತಿಹ್ಯಗಳು ಈ ಅವತಾರಗಳ ಬಗ್ಗೆ ವಿವರಣೆಯನ್ನು ನೀಡುತ್ತವೆ.

ಹಿಂದೂ ದೇವತೆಗಳಲ್ಲಿ ವಿಷ್ಣುವು ಪ್ರಮುಖ ದೇವತೆಯಾಗಿದ್ದಾನೆ. ವಿಷ್ಣುವು ಭೂಮಿಯಲ್ಲಿರುವ ಜೀವಿಗಳನ್ನು ರಕ್ಷಿಸಲು ಅವತಾರ ಎತ್ತಿದನು. 'ಅವ' ಎಂಬ ಶಬ್ದವು ಕೆಳಗೆ ಎಂಬ ಅರ್ಥವನ್ನು ನೀಡುತ್ತದೆ. 'ತಾರ' ಎಂಬ ಶಬ್ದವು ಪ್ರಕಟಗೊಳ್ಳು ಎಂಬ ಅರ್ಥ ನೀಡುತ್ತದೆ.[3]

ರಾಮಾಯಣ ಮಹಾಭಾರತದಲ್ಲಿ ಈ ಅವತಾರಗಳ ಬಗ್ಗೆ ವಿವರಣೆಯನ್ನು ನೀಡಲಾಗಿದೆ. ಆದರೆ ಪುರಾಣಗಳಾದ, ವಿಷ್ಣು ಪುರಾಣ, ಮತ್ಸ್ಯಪುರಾಣ, ಭಾಗವತ ಪುರಾಣವು ವಿಷ್ಣುವಿನ ಅವತಾರಗಳ ಬಗ್ಗೆ ತಿಳಿಸಿವೆ. ಪುರಾಣಗಳಲ್ಲಿ ಬರುವ ಕಥೆಗಳಲ್ಲಿ ವಿಷ್ಣು ಮತ್ತು ರಾಕ್ಷಸರ ನಡುವೆ ನಡೆದ ರಾಕ್ಷಸ ವಧ ಪ್ರಸಂಗಗಳಲ್ಲಿ ವಿಷ್ಣುವು ಹತ್ತು ಅವತಾರಗಳನ್ನು ತಾಳಿದನು.

ಶತಪಥ ಬ್ರಾಹ್ಮಣದಲ್ಲಿ ಉಲ್ಲೇಖಿಸಿರುವ ಅವತಾರಗಳು ಮತ್ಸ್ಯ, ಕೂರ್ಮ ಮತ್ತು ವಾಮನ ಅವತಾರದ ಐತಿಹ್ಯಗಳು, ತೈತ್ತಿರೀಯ ಸಂಹಿತೆಯು ವರಾಹ ಅವತಾರದ ಕಥೆ ತಿಳಿಸುತ್ತದೆ. ತೈತ್ತಿರೀಯ ಆರಣ್ಯಕವು ನರಸಿಂಹನ ಅವತಾರದ ಬಗ್ಗೆ ವಿವರಿಸುತ್ತದೆ. ಮಹಾಭಾರತದ (ನಾರಾಯಣೀಯ ಭಾಗವು) ಹತ್ತು ಅವತಾರಗಳ ಬಗ್ಗೆ ವಿವರಿಸುತ್ತದೆ. ವರಾಹ, ನರಸಿಂಹ, ವಾಮನ, ಕೃಷ್ಣ ರಾಮ (ಭಾರ್ಗವ), ಶ್ರೀರಾಮ(ರಾಘವ), ಹಂಸ, ಮತ್ಸ್ಯ, ಕೂರ್ಮ ಮತ್ತು ಕಲ್ಕಿ. ವಿಷ್ಣು ಪುರಾಣವು ಮತ್ಸ್ಯ, ಕೂರ್ಮ, ವರಾಹ, ನರಸಿಂಹ, ವಾಮನ, ಪರಶುರಾಮ, ರಾಮಕೃಷ್ಣ, ಪರಶುರಾಮ ಮತ್ತು ಕಲ್ಕಿ ಅವತಾರಗಳ ಬಗ್ಗೆ ವಿವರಿಸುತ್ತದೆ. ಈ ರೀತಿಯಾಗಿ ಪುರಾಣಗಳಲ್ಲಿ ವಿಷ್ಣುವಿನ ದಶಾವತಾರದ ಉಲ್ಲೇಖಗಳು ಇವೆ.4

ದಶಾವತಾರಗಳನ್ನು ಶಾಸನಾಧಾರದ ಸಾಕ್ಷಿಗಳಲ್ಲಿ ತೋರಿಸಲಾಗಿದೆ. ಅದರಲ್ಲಿ (Stereotype List Of Dashavtar) ಸ್ಥಿರಾಕ್ಷರದ ಅಚ್ಚು ದಕ್ಷಿಣ ಭಾರತದಲ್ಲಿ ಸಮ್ಮಿಳಿಸಲಾಗಿದೆ. ಮಹಾಬಲಿಪುರಂನಲ್ಲಿರುವ (ಕ್ರಿ.ಶ.6–7 ಶತಮಾನ) ಪಲ್ಲವರ ಕಾಲದ ಶಾಸನವು ದಶಾವತಾರದ ಉಲ್ಲೇಖವನ್ನು ನೀಡುತ್ತದೆ.

ಮತ್ಸ್ಯ, ಕೂರ್ಮ, ವರಾಹ, ನರಸಿಂಹ, ವಾಮನ, ರಾಮ (ಜಮದಾಗ್ನಿ), ರಾಮ(ದಾಶರತಿ), ರಾಮ(ಬಲಭದ್ರ), ಬುದ್ಧ ಮತ್ತು ಕಲ್ಕಿ. ಈ ಅವತಾರಗಳ ಉಲ್ಲೇಖವಿದೆ. ಸಾಮಾನ್ಯವಾಗಿ ಕರ್ನಾಟಕದಲ್ಲಿ ಈ ಪಟ್ಟಿಯಲ್ಲಿರುವ ವಿವರಣೆ ಇದೆ ಮತ್ತು ಶಿಲ್ಪಗಳಲ್ಲಿ ತೋರಿಸಲಾಗುತ್ತದೆ. ಕೆಲವು ಸಮಯ ಕೃಷ್ಣನ ಬದಲಾಗಿ ಬಲಭದ್ರನನ್ನು ತೋರಿಸಲಾಗಿದೆ.[5]

ದಶಾವತಾರಗಳ ಶಿಲ್ಪಗಳಲ್ಲಿ ವರಾಹ, ನರಸಿಂಹ, ವಾಮನ, ಕೃಷ್ಣನನ್ನು ಹೆಚ್ಚಾಗಿ ತೋರಿಸಲಾಗಿದೆ. ಉಳಿದವುಗಳನ್ನು ಗೌಣಗೊಳಿಸಲಾಗಿದೆ ರಾಮನಿಗೆ ಪ್ರಮುಖ ಸ್ಥಾನವನ್ನು ವಿಜಯನಗರ ಕಾಲದಲ್ಲಿ ನೀಡಲಾಗಿದೆ. ರಾಮನಿಗಾಗಿ ಇರುವ ಪ್ರಸಿದ್ಧ ಪ್ರಾಚೀನ ದೇವಾಲಯ ಹಜಾರರಾಮ ದೇವಾಲಯ.

ವಿಜಯನಗರದ ದೇವಾಲಯಗಳಲ್ಲಿ ಹೆಚ್ಚಾಗಿ ವಿಷ್ಣುವಿನ ದಶಾವತಾರಗಳನ್ನು ತೋರಿಸಲಾಗಿದೆ. ವಿಜಯನಗರದ ಶಿಲ್ಪಿಗಳು ದಶಾವತಾರ ಶಿಲ್ಪಗಳನ್ನು ಕೆತ್ತುವ ಅಭಿರುಚಿಯನ್ನು ಹೊಂದಿದ್ದರು. ದಶಾವತಾರ ದೇವತೆಗಳ ಪೂಜೆ ಪ್ರಚಲಿತದಲ್ಲಿತ್ತು ಎಂದು ತಿಳಿದುಬರುತ್ತದೆ.

ಈ ಶಾಸನವು ವಿಷ್ಣುವಿನ ದಶಾವತಾರಗಳ ಬಗ್ಗೆ ವಿವರಿಸುತ್ತದೆ. ವಿಜಯನಗರದ ಶಾಸನದಲ್ಲಿ ಮೊಟ್ಟಮೊದಲ ಶಾಸನವಾಗಿದೆ ಎಂದು ಹೇಳಿದರೆ ತಪ್ಪಾಗಲಾರದು.

ವಿಜಯನಗರದಲ್ಲಿ ದಶಾವತಾರ ದೇವತೆಗಳಿಗೆ ಪ್ರತ್ಯೇಕವಾದ ದೇವಾಲಯಗಳು ಇದ್ದುದಕ್ಕೆ ಸಾಕ್ಷಿಯಾಗಿರುವ ಉಗ್ರನರಸಿಂಹ ಎಂದು ಕರೆಯುವ ದೇವಾಲಯ, ವರಾಹ ದೇವಾಲಯ, ಮತ್ಸ್ಯಾವತಾರದ ದೇವಾಲಯ, ರಾಮ, ಕೃಷ್ಣ ಹೀಗೆ ದೇವಾಲಯಗಳು ನಿರ್ಮಾಣವಾಗಿವೆ. ಆದರೆ ಈ ಶಾಸನದ ಉಲ್ಲೇಖದ ಪ್ರಕಾರ ಹತ್ತು ಅವತಾರಗಳಿಗೆ ಒಂದೊಂದು ದೇವಾಲಯಗಳು ಇರುವ ಸಾಧ್ಯತೆ ಇದೆ, ವಿಜಯನಗರದ ಅರಸರು ವೈಷ್ಣವ ಧರ್ಮವನ್ನು ಪೋಷಿಸಿ ಮತ್ತು ಆಯಾ ದೇವತೆಗಳಿಗೆ ದೇವಾಲಯವನ್ನು ನಿರ್ಮಿಸಲು ಸ್ಫೂರ್ತಿಯನ್ನು ನೀಡಿದ್ದಾರೆ ಎಂಬುದು ಇಲ್ಲಿ ತಿಳಿದುಬರುವ ಸಂಗತಿ.

ಒಟ್ಟಿನಲ್ಲಿ ವಿಜಯನಗರದ ಅರಸರು ಧಾರ್ಮಿಕತೆಯನ್ನು ಪ್ರಜೆಗಳಲ್ಲಿ ಬೇರುರೂವಂತೆ ಮಾಡಲು ದೇವರ ಸ್ಮರಣೆ ಸದಾ ಮನಸ್ಸಿನಲ್ಲಿರುವಂತೆ ಇಂತಹ ನಿರ್ಮಿತಿಗಳನ್ನು ರಚಿಸುವುದು ಮತ್ತು ಶಾಸನಗಳನ್ನು ಬರೆಸುವುದು ಅವರ ಅಭಿರುಚಿಯಾಗಿತ್ತು.

ಆಧಾರಸೂಚಿ ಮತ್ತು ಟಿಪ್ಪಣಿಗಳು

1. ಪಿ.ಬಿ. ದೇಸಾಯಿ, 'ಕರ್ನಾಟಕದ ಇತಿಹಾಸ', ಪು.20–22.
2. 'ಕನ್ನಡ ವಿಶ್ವವಿದ್ಯಾಲಯ ಶಾಸನ' ಸಂಪುಟ 3, ಹಂಪಿ ಶಾಸನಗಳು, ಶಾಸನ ಸಂಖ್ಯೆ: 136, ಪು : 110.
3. ಅದೇ,. ಪು : 111
4. ಕೆ.ಎಮ್.ಸುರೇಶ, 'ಸ್ಕಲ್ಚರಲ್ ಆರ್ಟ್ ಆಫ್ ಹಂಪಿ' ಪು : 210–212.
5. ಶ್ರೀನಿವಾಸ ಪಾಡಿಗಾರ, 'ವಿಷ್ಣು ಕಲ್ಟ್ ಇನ್ ಕರ್ನಾಟಕ' ಪು : 158–160.

04. ನಿಂಬಾಪುರದ ಸೌಮ್ಯ ಸೋಮೇಶ್ವರ ದೇವಾಲಯದಲ್ಲಿರುವ ನಟರಾಜ ಉಬ್ಬು ಶಿಲ್ಪ

– ಶ್ರೀ ಶ್ರೀಶೈಲ ಮನಗುತ್ತಿ

ತುಂಗಭದ್ರಾ ನದಿಯ ದಕ್ಷಿಣ ದಂಡೆಯ ಮೇಲೆ ಮತ್ತು ತಳವಾರಘಟ್ಟಕ್ಕೆ ಪೂರ್ವದಲ್ಲಿ ಸೌಮ್ಯಸೋಮೇಶ್ವರ ದೇವಾಲಯವಿದೆ. "ನಿಂಬಾಪುರದ ಕಪಿಲಾಶ್ರಮದ ಬಳಿ ಬಂಡೆಯ ಮೇಲಿರುವ ಕ್ರಿ.ಶ. 1450ರ ಶಾಸನವು, ಪ್ರೌಢದೇವರಾಯನ ಕಾಲಕ್ಕೆ ಸೇರಿದ್ದು, ಆತನ ಆದೇಶದ ಮೇರೆಗೆ ರಾಯಪಣ್ಣಯ್ಯನು ಸೋಮಲಾಪುರವೆಂಬ ಹಳ್ಳಿಯನ್ನು ನಿರ್ಮಿಸಿ, ಅಲ್ಲಿ ಸೌಮ್ಯಸೋಮೇಶ್ವರ ದೇವರನ್ನು ಪ್ರತಿಷ್ಠಾಪಿಸುತ್ತಾನೆ. ಅಲ್ಲದೇ ದೀಪಸ್ತಂಭವನ್ನು ಮತ್ತು ಸಂಧ್ಯಾ ಮಂಟಪವನ್ನು ನಿರ್ಮಿಸಿ, ಆ ದೇವರ ಸೇವೆಗಾಗಿ ಕರಿಯಹಳ್ಳಿಯನ್ನು ದತ್ತಿ ಬಿಡುತ್ತಾನೆ ಎಂದು ತಿಳಿಸುತ್ತದೆ. ಈ ಶಾಸನವು ನಾಗರಿ ಲಿಪಿಯಲ್ಲಿದ್ದು, ಸಂಸ್ಕೃತ ಮತ್ತು ಕನ್ನಡ ಎರಡು ಭಾಷೆಗಳಲ್ಲಿ ಬರೆಯಲ್ಪಟ್ಟಿದೆ. ಈ ಶಾಸನಾಧಾರದಿಂದ ದೇವಾಲಯವು ಇಮ್ಮಡಿ ಪ್ರೌಢದೇವರಾಯನಿಂದ ಕ್ರಿ.ಶ. 1450ರಲ್ಲಿ ನಿರ್ಮಾಣವಾಗಿರುವುದು ಸ್ಪಷ್ಟವಾಗುತ್ತದೆ"[1]. ಈ ದೇವಾಲಯವು ಪೂರ್ವಾಭಿಮುಖವಾಗಿದ್ದು, ಗರ್ಭಗೃಹ, ಅಂತರಾಳ ಮತ್ತು ನವರಂಗವನ್ನು ಹೊಂದಿದೆ. ಸದ್ಯದ ದಿನಗಳಲ್ಲಿ ಶಿಥಿಲಾವಸ್ಥೆಯಲ್ಲಿದ್ದು, ಜೀರ್ಣೋದ್ಧಾರಕ್ಕೆ ಸಿದ್ಧಗೊಳ್ಳುತ್ತಿದೆ.

ಪ್ರಸ್ತುತ ಪ್ರಬಂಧದಲ್ಲಿ ಇಲ್ಲಿಯ ನಟರಾಜ ಶಿಲ್ಪದ ಪ್ರತಿಮಾ ಲಕ್ಷಣಗಳನ್ನು ಗುರುತಿಸಿ, ಈ ನಟರಾಜ ಶಿಲ್ಪದ ಶಿವತಾಂಡವ ನೃತ್ಯವು ನಾಟ್ಯದ ಯಾವ ಪ್ರಭೇದಕ್ಕೆ ಸೇರುತ್ತದೆ, ಮತ್ತು ಈ ನಾಟ್ಯಭಂಗಿಯಿಂದ ಪ್ರೇರಣೆಗೊಂಡ ವಿಶೇಷ ಅಂಶಗಳನ್ನು ಚರ್ಚಿಸುವುದು ಮುಖ್ಯ ಉದ್ದೇಶವಾಗಿದೆ.

ನಟರಾಜ ಉಬ್ಬು ಶಿಲ್ಪದ ಪ್ರತಿಮಾ ಲಕ್ಷಣಗಳು ಮತ್ತು ನಾಟ್ಯ ಭಂಗಿ :

ನಿಂಬಾಪುರದ ಸೌಮ್ಯಸೋಮೇಶ್ವರ ದೇವಾಲಯದ ನವರಂಗದ ನಾಲ್ಕನೇ ಕಂಬದ ಮೇಲ್ಭಾಗದಲ್ಲಿ ಪೂರ್ವ ದಿಕ್ಕಿಗೆ ಈ ಉಬ್ಬು ಶಿಲ್ಪವನ್ನು ಕೆತ್ತಲಾಗಿದೆ. ಈ ಶಿಲ್ಪವು ಅಲಂಕರಣವಿಲ್ಲದ ಸರಳ ಪ್ರಭಾವಳಿಯಲ್ಲಿದೆ. ಈ ಶಿಲ್ಪವು ಪೀಠದ ಮೇಲಿರುವ ಅಪಸ್ಮಾರ ಪುರುಷನ ಮೇಲೆ ನಾಟ್ಯ ಭಂಗಿಯಲ್ಲಿದೆ. ಈ ಶಿಲ್ಪವು ನಾಲ್ಕು ಕೈಗಳನ್ನು ಹೊಂದಿದ್ದು, ಅವುಗಳು ಈ ಕೆಳಗಿನಂತಿವೆ.

* **ಕ್ರಮವಾಗಿ ನಟರಾಜನ ಬಲಭಾಗದ ಕೈಗಳು :**
  ಬಲ ಮೇಲಿನ ಕೈ – ಡಮರು
  ಬಲ ಕೆಳಗಿನ ಕೈ – ಅಭಯ ಹಸ್ತ.
* **ಎಡ ಭಾಗದ ಕೈಗಳು :**
  ಎಡ ಮೇಲಿನ ಕೈ – ಅಗ್ನಿ
  ಎಡ ಕೆಳಗಿನ ಕೈ – ಗಜಹಸ್ತ ಅಥವಾ ದಂಡಹಸ್ತ

"ಸಾಮಾನ್ಯವಾಗಿ ನಾಟ್ಯ ಮೂರ್ತಿಗಳಲ್ಲಿ ಈ ಹಸ್ತ ಮುದ್ರೆಯನ್ನು ಕಾಣುತ್ತೇವೆ. ಬಹುಶಃ ಶಿಲ್ಪಿಯು ನಾಟ್ಯಶಾಸ್ತ್ರದ ಹಸ್ತಮುದ್ರೆಗಳನ್ನು ಅನುಕರಿಸಿ ಈ ನಟರಾಜ ಶಿಲ್ಪವನ್ನು ಕೆತ್ತಲು ತನ್ನ ಸ್ವಂತ ಬುದ್ಧಿವಂತಿಕೆಯನ್ನು ಬಳಸಿಕೊಂಡಿರುವುದನ್ನು ಕಾಣುತ್ತೇವೆ. ನಾಟ್ಯ ಶಾಸ್ತ್ರಕ್ಕೂ ಮತ್ತು ಶಿಲ್ಪ ಶಾಸ್ತ್ರಕ್ಕೂ ಅವಿನಾಭಾವ ಸಂಬಂಧವಿರುವುದು ಈ ನಟರಾಜ ಶಿಲ್ಪದ ನಾಟ್ಯ ಭಂಗಿಯನ್ನು ವೀಕ್ಷಿಸಿದಾಗ ತಿಳಿದುಬರುವ ಸಂಗತಿಯಾಗದೆ"[2]. "ನಟರಾಜನ ಬಲಗಾಲು ಅಪಸ್ಮಾರ ಪುರುಷನ ಮೇಲಿದೆ. ಎಡಗಾಲು ಊರ್ಧ್ವಜಾನುಭಂಗಿಯಲ್ಲಿದೆ. (ಈ ಕಾಲು ಬಲಗಾಲಿನ ಮಂಡೆಯವರೆಗೆ ಎತ್ತಿದೆ) ಈ ನಟರಾಜ ಶಿಲ್ಪದ ನಾಟ್ಯ ಭಂಗಿಯು "ಆನಂದತಾಂಡವ" ಅಥವಾ "ಭುಜಂಗಾತ್ರಾಸಿತ ಭಂಗಿ" ಎಂದು ಕರೆಯುವ ನಾಟ್ಯದ ಪ್ರಭೇದಕ್ಕೆ ಸೇರುತ್ತದೆ ಎಂಬುದು ಈ ಶಿಲ್ಪದ ಪ್ರತಿಮಾ ಲಕ್ಷಣಗಳನ್ನು ಮತ್ತು ನಾಟ್ಯದ ಸ್ವರೂಪವನ್ನು ಸೂಕ್ಷ್ಮವಾಗಿ ಗಮನಿಸಿ ಅಧ್ಯಯನಕ್ಕೆ ಒಳಪಡಿಸಿದಾಗ ತಿಳಿದುಬರುವ ಸಂಗತಿಯಾಗಿದೆ"[3]. "ಭರತನ ನಾಟ್ಯ ಶಾಸ್ತ್ರದಲ್ಲಿ ಬಳಸಿರುವ ಕರಣವಾದ ಊರ್ಧ್ವಜಾನು ಕರಣವನ್ನು ಅಳವಡಿಸಿಕೊಂಡು ಕೆತ್ತಲಾಗಿದೆ. ಇಂಥಹ ಶಿಲ್ಪಗಳ ಕೆತ್ತನೆಯನ್ನು ಮಾಡುವ ಕುಶಲತೆಯನ್ನು ಅರಿತ ವಿಜಯನಗರದ ರೂವಾರಿಗಳ ಕೈಚಳಕ ಮೆಚ್ಚುವಂತಹದ್ದಾಗಿದೆ"[4].

ಆಭರಣಗಳು ಮತ್ತು ವಸ್ತ್ರವಿನ್ಯಾಸ :

ಈ ನಟರಾಜ ಉಬ್ಬು ಶಿಲ್ಪವು ಜಟಾಮಕುಟ, ಕೊರಳಹಾರ, ಕಂಠಹಾರ, ಯಜ್ಞೋಪವೀತ, ಉದರಬಂಧ, ತೋಳ್ಬಂದಿ, ಕೈಗಡಗಗಳು, ಕಾಲ್ಗಡಗಗಳನ್ನು ಹೊಂದಿದ್ದು, ಕಿವಿಯಲ್ಲಿ ವೃತ್ತಕುಂಡಲಗಳಿವೆ. ಶಿವನು ಧರಿಸುವ ವಸ್ತ್ರವಾದ ವ್ಯಾಘ್ರಜಿನವಿದೆ.

ಈ ನಾಟ್ಯ ಭಂಗಿಯಿಂದ ಪ್ರೇರಣೆಗೊಂಡ ವಿಶೇಷ ಅಂಶಗಳು :

ಸಕಲ ಜಗತ್ತನೆಲ್ಲ ಆವರಿಸಬಲ್ಲ ಅಗ್ನಿಸ್ಥಂಭವಾಗಿ ಮೆರೆದ ಶಿವನು, ಭೂಮಿಯನ್ನೇ ವೇದಿಕೆಯನ್ನಾಗಿರಿಸಿಕೊಂಡು, ಜಗತ್ತಿನ ದುಷ್ಟತನವನ್ನು ಮೆಟ್ಟಿ ನಾಟ್ಯವಾಡುತ್ತಾನೆ. ಜಗತ್ತಿನ ಸಕಲ ಕಾರ್ಯಗಳಿಗೆ ಕಾರಣನಾದ ಶಿವನು ಸಂಗೀತ, ನೃತ್ಯ ಮತ್ತು ವಾದ್ಯ ಮುಂತಾದ ಸಕಲ ಕಲೆಗಳಿಗೆ ಅಧಿದೇವನಾದ ಶಿವನ ಕೈಯಲ್ಲಿ ಡಮರು, ತ್ರಿಶೂಲಗಳು ಹಸ್ತಭೂಷಣಗಳಾಗಿವೆ. ಶಿವನ ನರ್ತನ ಮತ್ತು ಅಭಿನಯದಲ್ಲಿ ಪ್ರಧಾನವಾಗಿ ನಾಲ್ಕು ರೀತಿಯ ಅಭಿವ್ಯಕ್ತಿಗಳಿರುತ್ತವೆ.

(1) ಅಂಗಿಕ – ಅಂಗಗಳನ್ನು ಉಪಯೋಗಿಸಿ ಮಾಡುವುದು

(2) ವಾಚಿಕ – ಮಾತಿನ ಮೂಲಕ ಅಭಿವ್ಯಕ್ತಿಸುವುದು

(3) ಆಹಾರ್ಯ – ವೇಷ–ಭೂಷಣಗಳನ್ನು ಧರಿಸುವುದು

(4) ಭಾವಾಭಿನಯ – ಕೇವಲ ಮುಖಮುದ್ರೆಯಲ್ಲಿಯೇ ಅಂತರಂಗದ ಭಾವಗಳನ್ನು ವ್ಯಕ್ತಪಡಿಸುವುದು

ಮಹಾದೇವ ಹೀಗೆ ಈ ನಾಲ್ಕು ಅಭಿನಯಗಳನ್ನು ಮಾಡುತ್ತಾನೆ. ಇಡೀ ಸೃಷ್ಟಿಯ ಚರಾಚರ ವಸ್ತುಗಳೆಲ್ಲವು ಶಿವನ ಅಂಗಿಕಾಭಿನಯ, ಜಗತ್ತಿನ ಎಲ್ಲಾ ಭಾಷೆಗಳು ನಾದತರಂಗಗಳೂ ಅವನ ವಾಚಿಕಾಭಿನಯ, ಸೂರ್ಯ, ಚಂದ್ರ ಮುಂತಾದ ಗ್ರಹ–ನಕ್ಷತ್ರಗಳು ಅವನ ಆಹಾರ್ಯ ಎಂದರೆ ಅವನ ಅಲಂಕಾರ, ವಿಶ್ವದ ಸತ್, ಎಂದರೆ ಇರುವು ಅವನ ಸಾತ್ವಿಕಾಭಿನಯಕ್ಕೆ ಸಂಕೇತ. ಹೀಗೆ ಶಿವನ ಪಾಲಿಗೆ ಅವನ ನರ್ತನವೇ ಜಗತ್ತಿನ ಎಲ್ಲಾ ವಿವರಗಳಾಗಿವೆ. ನಟರಾಜನ ಸ್ವರೂಪದಲ್ಲಿ ತೋರುವ ಶಿವತಾಂಡವವೇ ನಿರಂತರ ನಡೆಯುತ್ತಿರುವ ಸೃಷ್ಟಿ–ಸ್ಥಿತಿ–ಲಯಗಳಿಗೆ ಸಂಕೇತ. ಶಿವನ ಮಹಾನಟ ಸ್ವರೂಪದಲ್ಲಿ ಭಾರತೀಯ ಆಧ್ಯಾತ್ಮಿಕತೆ ಮತ್ತು ಕಲಾ ಮೀಮಾಂಸೆಯ ಅನನ್ಯ ಸಂಬಂಧವನ್ನು ಸ್ಥಾಪಿಸಲಾಗಿದೆ. ವೇದಗಳಲ್ಲಿ ಶಿವತ್ವದ ಉಲ್ಲೇಖಗಳಿವೆ, ರುದ್ರ ಎಂಬ ಹೆಸರಿನಿಂದ ಪ್ರಸಿದ್ಧನಾಗಿದ್ದಾನೆ.

ಶಿವನ ಆನಂದತಾಂಡವ ನೃತ್ಯವು ಅವನ ಪಂಚಕೃತ್ಯಗಳಾದ ಸೃಷ್ಟಿ, ಸ್ಥಿತಿ, ಸಂಹಾರ, ತಿರೋಭಾವ ಮತ್ತು ಅನುಗ್ರಹಗಳನ್ನು ಸೂಚಿಸುತ್ತದೆ. ಈ ವಿಶ್ವದ ಚಟುವಟಿಕೆಯೇ ಈ ನೃತ್ಯದ ಕೇಂದ್ರ ಬಿಂದುವಾಗಿದೆ. ಶಿವನು ಸ್ಮಶಾನವಾಸಿಯಾಗಿದ್ದು, ರುದ್ರಭೂಮಿಯಲ್ಲಿ ಭೂತ ಪ್ರೇತಗಣದೊಡನೆ ತಾಂಡವನೃತ್ಯ ಮಾಡುತ್ತಾನೆ ಎಂಬ ನಂಬಿಕೆ ಇದೆ. ಲಯಕರ್ತನಾದ ಶಿವನ ನೆಲೆಯಾದ ರುದ್ರಭೂಮಿಯು, (ಕೇವಲ ಜೀವಜಂತುಗಳ ಅಂತ್ಯಕ್ರಿಯೆ ನಡೆಯುವ ರುದ್ರಭೂಮಿಯಾಗಿರದೇ)– ಅರಿಷಡ್ವರ್ಗಗಳ

ನೆಲೆಯಾದ ಮನುಷ್ಯನ ಮನವಾಗಿದೆ. ಶಿವನು ಭಕ್ತನ ಮನೋವೇದಿಕೆಯ ಮೇಲೆ ನರ್ತಿಸಿ, ಮನದಲ್ಲಿದ್ದ ಮೋಹ ಪಾಶವನ್ನು ಲಯಗೊಳಸುತ್ತಾನೆ. ಭಕ್ತನ ಮನದಲ್ಲಿದ್ದ ರಾಗದ್ವೇಷಗಳೆಂಬ ಅಪಸ್ಮಾರನನ್ನು ಮೆಟ್ಟುವುದರಿಂದ, ಭಕ್ತನು ಭವ ಪಾಶದಿಂದ ಮುಕ್ತನಾಗುತ್ತಾನೆ. ಹೀಗೆ ನಟರಾಜನ ತಾಂಡವನೃತ್ಯದ ಕಲ್ಪನೆಯು ಮುಕ್ತಿಯ ಮಾರ್ಗವಾಗಿದೆ. ಶಿವನ ಈ ನೃತ್ಯವು ಅನಾದಿ, ಅನಂತವಾಗಿದ್ದು, ನಿರಂತರವಾಗಿ ನಡೆದಿದೆ. "ಶಂಕರಾಚಾರ್ಯರು, ಭಕ್ತರ ಮನದಲ್ಲಿ ನಿತ್ಯವು ನಡೆಯುವ ಶಿವತಾಂಡವವನ್ನು ಹೀಗೆ ವಿವರಿಸುತ್ತಾರೆ. 'ಯಾರಿಗೆ ದಿನನಿತ್ಯದ ಸಂಜೆಯೂ ಮಳೆಗಾಲವಾಗುತ್ತದೋ, ಶಿವನು ಬಾರಿಸಿದ ಮೃದಂಗದ ಧ್ವನಿಯೇ ಮೋಡದ ಗುಡುಗಾಗಿ, ದೇವತೆಗಳ ಕುತೂಹಲದ ನೋಟವೇ ಮಿಂಚಾಗಿ, ಭಕ್ತರು ಸುರಿಸುವ ಆನಂದಭಾಷ್ಪವೇ ಮಳೆಯಾಗಿರುತ್ತದೆ. ಹೀಗೆ ಶಿವತಾಂಡವ ನೀಲಕಂಠವನ್ನು ಭಜಿಸುತ್ತೇನೆ'. ಎಂದು ತಿಳಿಸಿದ್ದಾರೆ".[5]

ಸಾಮಾನ್ಯವಾಗಿ ಎಲ್ಲಾ ಐತಿಹಾಸಿಕ ಸ್ಥಳಗಳಲ್ಲಿ ದೇವಸ್ಥಾನಗಳು, ಶಿಲ್ಪಗಳು ಇರುವುದು ನಮ್ಮ ಗಮನಕ್ಕೆ ಬಂದಿರುತ್ತದೆ. ಆದರೆ ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾದ ಹಂಪಿ ಹಾಗೂ ಇಲ್ಲಿರುವ ದೇವಾಲಯಗಳು ಮತ್ತು ಶಿಲ್ಪಗಳು ಬಹುವಿಶಿಷ್ಟ ಹಾಗೂ ವೈವಿಧ್ಯಮಯವಾಗಿವೆ. ಅದಕ್ಕೆ ಮುಖ್ಯ ಕಾರಣ ಹಂಪಿ ಮೂಲತಃ ಪ್ರಾಚೀನ ಪುಣ್ಯಕ್ಷೇತ್ರ ಎಂಬುದರಲ್ಲಿ ಸಂಶಯವಿಲ್ಲ. ಇದನ್ನು ಪುಷ್ಟೀಕರಿಸುವಂತೆ ಈ ಪ್ರದೇಶದಲ್ಲಿ ಕಂಡುಬರುವ ಪುರಾಣ ಘಟನೆಗಳಾದ ಶಿವಪುರಾಣ, ವಿಷ್ಣುಪುರಾಣ, ಮತ್ತು ಮಹಾಕಾವ್ಯಗಳಾದ ರಾಮಾಯಣ, ಮಹಾಭಾರತ ಮತ್ತು ಭಾಗವತದಂತಹ ವಿಚಾರಗಳು ಈ ಸ್ಥಳವನ್ನು ಕೇಂದ್ರವಾಗಿರಿಸಿಕೊಂಡಿರುವುದು, ಈ ಸ್ಥಳದ ಮಹತ್ವವನ್ನು ಹೆಚ್ಚಿಸಿವೆ.

ಒಟ್ಟಾರೆಯಾಗಿ ದೇವಾಲಯಗಳ ಉಬ್ಬುಶಿಲ್ಪಗಳು ದೇವಾಲಯದ ಸೌಂದರ್ಯ ಮತ್ತು ಅಲಂಕರಣಕ್ಕೆ ಸೀಮಿತಗೊಳ್ಳದೆ ಧರ್ಮಪ್ರಚಾರ ಹಾಗೂ ಅದರಾಚೆಗಿನ ಹಲವಾರು ಮಹತ್ವದ ವಿಚಾರಗಳನ್ನು ಒಳಗೊಂಡಿರುತ್ತವೆ ಎಂಬುದನ್ನು ಈ ಅಪರೂಪದ ಶಿಲ್ಪಗಳ ಮೂಲಕ ಅರಿಯಬಹುದಾಗಿದೆ. ಇಡೀ ಜಗತ್ತೇ ಶಿವನ ನರ್ತನ ಸ್ಥಳ ಎಂಬ ಕಲ್ಪನೆ ಅದ್ಭುತವಾಗಿದೆ. ಮನುಕುಲದ ಧಾರ್ಮಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಮೌಲ್ಯಗಳ ದಿಗ್ದರ್ಶನದ ಹಲವಾರು ಮಜಲುಗಳು ಶಿಲ್ಪ ಸಂಸ್ಕೃತಿಯಲ್ಲಿ ಅಭಿವ್ಯಕ್ತಿಗೊಂಡಿವೆ ಎಂಬುದರಲ್ಲಿ ಸಂಶಯವಿಲ್ಲ.

ಆಧಾರಸೂಚಿ ಮತ್ತು ಟಿಪ್ಪಣಿಗಳು :

1. ಕೆ.ಎಂ. ಸುರೇಶ, ವಾಸುದೇವ ಬಡಿಗೇರ, ಎಸ್.ವೈ. ಸೋಮಶೇಖರ ಮತ್ತು ಮಾಡಲಗೇರಿ ಕೊಟ್ರೇಶ, ಕರ್ನಾಟಕ ದೇವಾಲಯಗಳ ಕೋಶ–ಬಳ್ಳಾರಿ ಜಿಲ್ಲೆ ಪು. 56–59.
2. ಟಿ. ಎ. ಗೋಪಿನಾಥರಾವ್, 'ಎಲಿಮೆಂಟ್ಸ್ ಆಫ್ ಹಿಂದೂ ಐಕನೋಗ್ರಫಿ'. ಭಾಗ 2 ಸಂಪುಟ 2 ಪು. 252–254.
3. ಎಸ್. ಕೆ. ರಾಮಚಂದ್ರರಾವ್, ಮೂರ್ತಿ ಶಿಲ್ಪದ ನೆಲೆ ಹಿನ್ನೆಲೆ, ಪು. 120–121
4. ನಂದಗೋಪಾಲ ಚೂಡಾಮಣಿ. 'ಶಿಲೆ–ಕಲೆ', ಪು. 175
5. ಕೆ. ವಸಂತಲಕ್ಷ್ಮೀ, 'ಕರ್ನಾಟಕದ ಶೈವ ಶಿಲ್ಪಗಳು', ಪು. 126–127.


(ಕೃತಜ್ಞತೆ: ಈ ಸಂಶೋಧನಾತ್ಮಕ ಸಂಪ್ರಬಂಧ ರಚಿಸಲು ಮಾರ್ಗದರ್ಶನ ನೀಡಿದ ಶ್ರೀಮತಿ ಪಿ. ಬಿ. ಪಾಟೀಲ, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಹುಕ್ಕೇರಿ, ಶ್ರೀ ಆರ್. ಎಂ. ಮಠದ, ಕ್ಷೇತ್ರ ಸಮನ್ವಯಾಧಿಕಾರಿಗಳು ಹುಕ್ಕೇರಿ ಹಾಗೂ ತಾಂತ್ರಿಕ ನೆರವು ನೀಡಿದ ಶ್ರೀ ಮಹಾವೀರ ಚೌಗಲಾ ಇವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ)










PX 3



05. ಶ್ರೀ ಪುರಂದರದಾಸರ ಸಾಹಿತ್ಯದಲ್ಲಿ ಜಲವಿಜ್ಞಾನ–ತಂತ್ರಜ್ಞಾನ

– ಡಾ. ಹರಿಹರ ಶ್ರೀನಿವಾಸರಾವ್



ಇಂದು ನಾವು ಜಲ–ವಿಜ್ಞಾನ ಅಥವಾ ಹೈಡ್ರಾಲಜಿ ಎಂದು ಕರೆಯುವ ಜ್ಞಾನದ ಅನೇಕ ಅಂಶಗಳನ್ನು ಪ್ರತ್ಯಕ್ಷ್ಯವಾಗಿ ಮತ್ತು ಕೆಲವೊಮ್ಮೆ ಪರೋಕ್ಷ್ಯವಾಗಿ ದಾಸ ಸಾಹಿತ್ಯದ ಮಹಾಮೇರು ಹಾಗೂ "ಕರ್ನಾಟಕ ಸಂಗೀತದ ಪಿತಾಮಹ"ರೆನಿಸಿರುವ ಶ್ರೀಪುರಂದರದಾಸರ (ಕಾಲ ಕ್ರಿ.ಶ.1485–1565) ಹಾಡುಗಳಲ್ಲಿ ಗುರುತಿಲು ಬರುತ್ತದೆ.

ಸಂಗೀತವು ಒಂದು ಸಾರ್ವಕಾಲಿಕ ಅತ್ಯಂತ ಪ್ರಭಾವಿ ಮಾಧ್ಯಮ. ಇದಕ್ಕೆ ತಿಳಿಯಾದ ಕಸ್ತೂರಿ ಕಂಪಿನ ಕನ್ನಡದ ಪದಗಳನ್ನು ಬಳಸಿ, ಶಾಸ್ತ್ರೀಯ ಚೌಕಟ್ಟನ್ನು ಒದಗಿಸುವ ನಿಟ್ಟಿನಲ್ಲಿ ಸಂಗೀತದ ಬಾಲಪಾಠಗಳನ್ನು ಪ್ರಾರಂಭಿಸುವಾಗಲೇ "ಪಿಳ್ಳಾರಿಗೀತೆ" ಗಳನ್ನು ದಾಸರು ರಚಿಸಿರುತ್ತಾರೆ. ಗಣೇಶನ ಸ್ತುತಿಯಲ್ಲಿಯೇ ಬರುವ"ಲಂಬೋದರ ಲಕುಮಿಕರ । ಕರುಣ "ಸಾಗರ" ಕರಿವದನ । ನಂತರ ಬರುವ "ಕೆರೆಯ ನೀರನು ಕೆರೆಗೆ ಚೆಲ್ಲಿ ವರವ ಪಡೆದವರಂತೆ ಕಾಣಿರೋ" ಎನ್ನುವ ಸರಳ ಕನ್ನಡ ಗಾದೆಯನ್ನೇ ಆಧಾರ ವಾಗಿಟ್ಟುಕೊಂಡಿರುವ ಈ ಹಾಡಿನಲ್ಲಿ ಬರುವ ಕೆಲವು ಜಲವಿಜ್ಞಾನ–ತಂತ್ರಜ್ಞಾನದ ಅಂಶಗಳನ್ನು ಹೀಗೆ ವಿಶ್ಲೇಷಣೆ ಮಾಡಲಾಗಿದೆ.

ಕೆರೆ ಎನ್ನುವುದು ಒಂದು ಮಾನವನಿಂದಲೇ ನಿರ್ಮಿತ ವಾಗುವ ಜಲತಾಣ (Water Body). ಕೆರೆಯ ನೀರನ್ನು ಕೆರೆಗೆ ಚೆಲ್ಲುವುದು ಎನ್ನುವುದರಲ್ಲಿ ಬೇರೆ ಬೇರೆ ಅರ್ಥಗಳು ಹುಟ್ಟುತ್ತವೆ. ಹಿಂದೂ ಸಂಪ್ರದಾಯದಂತೆ ಇದು ಸ್ನಾನವಾದ ನಂತರ ಕೆರೆಯಲ್ಲಿಯೇ ನಿಂತು ಗಾಯತ್ರಿ ದೇವಿಗೆ ಮಾಡುವ ಒಂದು ಪ್ರಾರ್ಥನೆ. ಅದುವೇ "ಸಂಧ್ಯಾವಂದನೆ" ಎಂದು ಬೇರೆ ಹೇಳಬೇಕಾಗಿಲ್ಲ. ಸ್ನಾನ ದೇಹದ ಹೊರಗಿನ ಶುದ್ಧಿಗೆ ಆದರೆ ಮನಸ್ಸಿನ ಕೊಳೆ ತೊಳೆದು ಸಂಕಲ್ಪ ಸಿದ್ಧಿಗೆ (Mind concentration and its results) ಗಾಯಿತ್ರಿ ಮಂತ್ರ ಎನ್ನುವುದು ಸು–ಸ್ಪಷ್ಟ.

ಹೊರನೋಟಕ್ಕೆ ಕೆರೆಯ ನೀರನ್ನೇ ತೆಗೆದು ಕೊಂಡು ಕೆರೆಗೆ ಚೆಲ್ಲುವುದು ಎಂದೆನಿಸಿದರೂ ಪ್ರಕೃತಿಮಾತೆ ನಮಗೆ ಕರುಣಿಸಿದ ಜೀವ ಜಲವಾದ ನೀರನ್ನು ಮತ್ತೆ ಆಕೆಗೇ ಅರ್ಪಿಸುವ ಉದಾತ್ತ ಮನೋಭಾವ. ಆದರೆ ಇದನ್ನೇ ಆಧಾರವನ್ನಾಗಿಸಿಕೊಂಡು ಪುರಂದರ ದಾಸರು ಮಂದೆ ಹೇಳುವ ಕೆಲವು ಪದಗಳು ಮನುಷ್ಯನ ಅಂತರಂಗ ಬಹಿರಂಗಗಳನ್ನು ಒಂದಾಗಿಸಿ ಪರಮಾತ್ಮನ ಕಡೆಗೆ ಹೊಗುವ ಮಾರ್ಗವನ್ನೇ ಪ್ರತಿ ಪಾದಿಸುವುದು ಹೀಗೆ.

"ಸಂಧ್ಯಾವಂದನೆ ಮಂತ್ರ"ದಲ್ಲಿ ಬರುವ ಸಂಸ್ಕೃತ ಶ್ಲೋಕ : ಆಕಾಶತ್ಪತಿತಂತೋಯಂ ಯಥಾಗಚ್ಛತಿ ಸಾಗರಂ। ಸರ್ವದೇವ ನಮಸ್ಕಾರ ಕೇಶವಂ ಪ್ರತಿಗಚ್ಛತಿ" ಎನ್ನುವಲ್ಲಿ ಜಲಚಕ್ರ (Hydro Cycle)ದ ಗುಟ್ಟನ್ನೇ ರಟ್ಟಾಗಿಸುವ ತಂತ್ರಜ್ಞಾನವಿದೆ.

ಸೂರ್ಯನಿಂದ ಕಾಯಿಸಲಟ್ಟ ನೀರು ಆಕಾಶದಲ್ಲಿ ಆವಿಯಾಗಿ, ಮೋಡವಾಗುತ್ತದೆ. ಅಲ್ಲಿ ವಾಯುವಿನ ಚಲನೆ, ಧೂಳಿನ ಕಣಗಳು ಇತ್ಯಾದಿಗಳಿಂದ ಹನಿಗೂಡಿ ಮಳೆಯ ರೂಪ ತಾಳುವುದು. ಹೀಗೆ ನೆಲಕ್ಕೆ ಬೀಳುವ ನೀರು, ನದಿಯಾಗಿ ಹರಿದು ಸಾಗರವನ್ನು ಸೇರುವಂತೆ, ಜೀವನು ಬೇರೆ ಬೇರೆ ಹೆಸರುಗಳಿಂದ ಉಪಾಸನೆಮಾಡಿದರೂ ಅದು ಕೇಶವನನ್ನೇ ಅಂದರೆ ಒಬ್ಬ ದೇವರಿಗೇ ಸೇರುತ್ತದೆ.

ಜಲಚಕ್ರ (Hydro Cycle) : ಸೂರ್ಯ ಸಮುದ್ರಗಳಲ್ಲಿಯ ನೀರನ್ನು ತನ್ನ ಪ್ರಖರ ಕಿರಣಗಳಿಂದ ಹೀರಿ, ಆವಿಯಾಗಿಸಿ, ಆಕಾಶಕ್ಕೆ ಕಳಿಸುತ್ತಾನೆ. ಗಾಳಿಯಿಂದ ತಂಪಾಗಿ, ಆವಿ ಮೋಡವಾಗುವುದು, ತಕ್ಷಣದ ಉಷ್ಣಾಂಶದಲ್ಲಿ ಉಂಟಾಗುವ ವ್ಯತ್ಯಾಸ ದಿಂದ ಮತ್ತು ಶೀಘ್ರವಾಗಿ ತಂಪಾಗುವುದರಿಂದ (due to Adieabatic Change). ಭೂಮಿಯಲ್ಲಿನ ಬೆಟ್ಟ ಗುಡ್ಡಗಳಲ್ಲಿಯ ಗಿಡ, ಮರಗಳು ಈ ಮೋಡಗಳನ್ನು ಆಕರ್ಷಿಸುವುದರ ಫಲವಾಗಿ ಮಳೆಯಾಗಿ ಭೂಮಿಯನ್ನು ತಲುಪುತ್ತದೆ. "ಹನಿ, ಹನಿಗೂಡಿದ್ರೆ ಹಳ್ಳ" ಎನ್ನುವ ಗಾದೆಯಂತೆ, ಕೆಳಗೆ ಬಿದ್ದ ನೀರು ಗುರುತ್ವಾಕರ್ಷಣೆ (Gravity) ಪ್ರಕ್ರಿಯೆಯಿಂದಾಗಿ ಹಳ್ಳ, ನದಿಗಳಾಗಿ ಹರಿದು ಸಮುದ್ರವನ್ನು ಸೇರುತ್ತದೆ ಎನ್ನುವ ವಿವರ ನೀಡುತ್ತದೆ "ಜಲವಿಜ್ಞಾನದ ಜಲಚಕ್ರ".

ಹೀಗೆ ಪ್ರಕೃತಿಯ ವರದಾನವಾಗಿ ಬಂದ ನೀರನ್ನು ಮತ್ತೆ ಪ್ರಕೃತಿಗೇ ದಾನವಾಗಿ ಕೊಟ್ಟು ತಾನೂ ಉದ್ಧಾರವಾಗಿ ಸಮಾಜವನ್ನೂ ಉದ್ಧರಿಸಿ ಕೊನೆಗೆ ಕೇಶವನ ಸನ್ನಿಧಿಗೆ ಸೇರ ಬೇಕು. ಇಂತಹ "ಜೀವನ ದರ್ಶನ"ವನ್ನು "ಜಲದರ್ಶನ"ದ "ಮೂಲಕ ಮಾರ್ಮಿಕವಾಗಿ, ಅತ್ಯಂತ ಸುಲಭ ಸಾಮಾನ್ಯ ಶಬ್ದಗಳಲ್ಲಿ ಸಂವಾಹಿ(Communicate)ಯಾಗಿಸಿದ್ದಾರೆ ಶ್ರೀ ಪುರಂದರ ದಾಸರು. ಸಂಧ್ಯಾವಂದನೆ ಮಾಡುವಾಗ ಈ ಭಾವವನ್ನು ತಳೆದರೆ ಇಂದಿನ ಎಲ್ಲ "ತಲ್ಲಣಗಳಿಗೆ" ಶೀಘ್ರ ಪರಿಹಾರ ದೊರೆತು ಮೈ ಮನಸ್ಸುಗಳು ಪ್ರಫುಲ್ಲವಾಗುವುದರಲ್ಲಿ ಸಂಶಯವಿಲ್ಲ. ಇದರ ಅನುಭವ ಬರಲೊಮ್ಮೆ ಸ್ವತಃ ಪ್ರತಿಯೊಬ್ಬರೂ ಕೆರೆ, ಬಾವಿ, ಪುಷ್ಕರಣಿ ಇತ್ಯಾದಿ ನೈಸರ್ಗಿಕ ಮೂಲಗಳಲ್ಲಿ ಮಿಂದು, ಸಂಧ್ಯಾವಂದನೆ ಮಾಡಿ ಅರಿಯ ಬಹುದು.

"ಹರಿಯ ಕರುಣದೊಳಾದ ಭಾಗ್ಯವ ಹರಿ ಸಮರ್ಪಣೆ ಮಾಡಿ ಬದಕಿರೋ"

ಜಲಂ ಜೀವನಂ (Water is Life)

"ಜಲಂ ಜೀವನಂ" ಎಂದರೆ ಜಲವಿದ್ದರೇ ಜೀವದ ಉಗಮ, ವಿಕಾಸ ಎನ್ನುವುದು ಋಗ್ವೇದದ ಒಳ್ನುಡಿ. ನಮ್ಮ ದೇಶದ ಜಲಸಂಪನ್ಮೂಲ ಇಲಾಖೆಯ (Ministry of Water Resources) ಧ್ಯೇಯವಾಕ್ಯವೂ ಇದೇ ಆಗಿದೆ. ವಿಶ್ವದ ಇಡೀ ಜೀವ ಜಾಲದ ಸೂತ್ರದಂತಿರುವ ಈ ಮಾತುಗಳನ್ನು ದಾಸರು ಕೆಲವು ಸಾಲುಗಳಲ್ಲೇ ಹಿಡಿದಿಟ್ಟಿರುವುದು ಹೀಗೆ. (ಪುರಂದರ ಸಾಹಿತ್ಯ ದರ್ಶನ ಸಂ.1, ಪು.335, ಪ್ರಕಟಣೆ: ಸಂಸ್ಕೃತಿ ನಿರ್ದೇಶನಾಲಯ, 1985)

ನೀಲ ಮೇಘವ ಪೋಲುವ ಕೂಸು। ನೀಲದ ಬಾವುಲಿ ಇಟ್ಟಿತು ಕೂಸು। ನೀರಿನ ತೀರದಿ ಕುಳಿತಿತ್ತು ಕೂಸು। ನೀರಿನ ದಡದಿಂದ್ಹೋಗ್ಯಾದೆ ಕೂಸು। .... "ಅಂಡದೊಳಗೆ ಹರಿದಾಡುವ (Sperm which flows in the Liquid prevailing in the Fetus) ಕೂಸು"ಪ್ರಚಂಡ ಪುರಂದರ ವಿಠ್ಠಲ ಕೂಸು ॥5॥ ಕೂಸಿನ ಕಂಡೀರ್ಯಾ ಗೋಪಾಲ ಕೃಷ್ಣನ ಕಂಡೀರ್ಯಾ.

ಈ ಮೇಲಿನ ರಚನೆ ಮಾಡಿರುವುದು ಪಂಢರಪುರದಲ್ಲಿ ಎನ್ನುವುದು ವಿದ್ವಾಂಸರ ಅಭಿಮತ (ಅದೇ.ಪು.351). ಭೀಮಾನದಿಯು ಇಲ್ಲಿಯ ಭೂಗೋಳಿಕ ಸನ್ನಿವೇಶದಲ್ಲಿ ಚಂದ್ರನ ಆಕಾರದಲ್ಲಿ ಬಳಸಿಕೊಂಡು ಹೋಗುವುದರಿಂದ ಅದಕ್ಕೆ ಚಂದ್ರಭಾಗಾ ನದಿ ಎನ್ನುವ ಅನ್ವರ್ಥನಾಮವಿದ್ದು ಈಗಿನ ಮಹಾರಾಷ್ಟ್ರದ ಅತ್ಯಂತ ವಿಶೇಷ ಪುಣ್ಯ ತೀರ್ಥ ಕ್ಷೇತ್ರ ಎನಿಸಿದೆ. ಇಲ್ಲಿಂದ ವಿಠ್ಠಲನನ್ನು ಪುರಂದರ ದಾಸರು ಹಂಪೆ ಅಂದರೆ ಆಗಿನ ವಿಜಯ ನಗರಕ್ಕೆ ಕರೆದುಕೊಂಡು ಹೋದರೆನ್ನುವ ನಂಬಿಕೆಯೂ ಇದೆ.

ಜಲ ನೆಲೆಗಳು (Water Bodies and their Topography)

ನೀರಿನ ಆಕರಗಳಾದ ವಾಪಿ, ಕೂಪ, ತಟಾಕ, ಪುಷ್ಕರಣಿ, ಮಡು, ಮುಂತಾದವುಗಳನ್ನು ಶಾಸ್ತ್ರ / ಚಾರಿತ್ರಿಕ ಗ್ರಂಥಗಳಾದ ವರಹಾ ಮಿಹಿರನ ವೃಹತ್ ಸಂಹಿತೆ (ಸು.6ನೇ ಶತಮಾನ, ಸಂಸ್ಕೃತ), ಚಾವುಂಡರಾಯನ ಲೋಕೋಪಕಾರ (ಸು.ಕ್ರಿ.ಶ. 1025 ಕನ್ನಡ ಕೃತಿ) ಎರಡನೇ ಸೋಮೇಶ್ವರನ ಮಾನಸೋಲ್ಲಾಸ (ಸು. 12ನೇ ಶ.ಮಾ.ಸಂ.), ಕೆಳದಿ ಶಿವಪ್ಪನಾಯಕನ ಶಿವತತ್ವ ರತ್ನಾಕರ (ಸು.17ನೇ ಶ.ಮಾ.ಸಂ.) ಇತ್ಯಾದಿಗ್ರಂಥಗಳಲ್ಲಿ ಹೇಳಲಾಗಿದೆ. ಈ ನೀರ ನೆಲೆಗಳು ಕೆಲವೊಮ್ಮೆ ಪ್ರಾಸಂಗಿಕವಾಗಿ ಸಾಹಿತ್ಯ, ಸಂಗೀತ, ಚಿತ್ರ ಕಲೆ, ಶಿಲ್ಪ ಕಲೆ ಇವುಗಳಲ್ಲಿ ಕಂಡು ಬರುತ್ತವೆ. ಜ್ಞಾನಿಗಳು, ಶರಣರು, ದಾಸರು, ಅನುಭವ ಮತ್ತು ಅನುಭಾವಿಗಳು, ಇಂತಹ ನೀರಿನ ಆಕರಗಳನ್ನು ತಮ್ಮ ಸಾಹಿತ್ಯ, ಕಲೆ, ಸಂಗೀತ, ನಾಟಕ, ಜನಪದ ಸಾಹಿತ್ಯ, ಇತ್ಯಾದಿ ಕೃತಿಗಳಲ್ಲಿಯೂ ಹಿಡಿದಿಟ್ಟಿದ್ದಾರೆ. ಈ ನೆಲೆಯಿಂದ ಪುರಂದರ ದಾಸರು ಏನನ್ನು ಹೇಳಿದ್ದಾರೆ ಎನ್ನುವುದನ್ನು ಈಗ ತಿಳಿಯೋಣ.

ಮಾನಸೋಲ್ಲಾಸ, ಅಷ್ಟಾಂಗ ಹೃದಯ ಸೂತ್ರಸ್ಥಾನ ಅಧ್ಯಾಯ 5, ಸರ್ವಾಂಗ ಸುಂದರ ಟೀಕೆಯಲ್ಲಿ ಇರುವ ವಾಪಿ, ಕೂಪ, ತಟಾಕ, ಪುಷ್ಕರಣಿ ಮುಂತಾದವುಗಳ ಬಗೆಗೆ ಹೀಗೆ ಹೇಳಲಾಗಿದೆ.

ಕೂಪ : ಸೇದುವ ಬಾವಿಗೆ ಕೂಪ ಎಂದು ಹೆಸರು. ಇದು ಮಾನವ ನಿರ್ಮಿತ. ಭೂಮಿಯನ್ನು ಆಳವಾಗಿ ತೋಡಿ ಕೆಳಗಿನಿಂದ ಮೇಲಕ್ಕೆ ಸುತ್ತಲೂ ಇಟ್ಟಿಗೆ, ಕಲ್ಲು, ಮಣ್ಣು ಅಥವಾ ಗಾರೆಯಿಂದ ಗೋಡೆ ಕಟ್ಟಿರುವುದನ್ನು ಕೂಪ ಎನ್ನಲಾಗಿದೆ.

ವಾಪಿ : ಒಂದು ಕಡೆಯಿಂದ ನೀರಿನ ಸಮೀಪಕ್ಕೆ ಇಳಿದು ಹೋಗಲು ದಾರಿಯುಳ್ಳ ಬಾವಿಗೆ ವಾಪೀ ಅಥವಾ ವಾಪಿಕಾ ಎನ್ನುವರು.

ಪುಷ್ಕರಣಿ : ಚಚ್ಚೌಕವಾಗಿ ತೋಡಿರುವ ಮತ್ತು ನಾಲ್ಕೂ ಕಡೆಗಳಿಂದಲೂ ನೀರಿಗೆ ಇಳಿಯಲು ಅನುಕೂಲವಿರುವ ಜಲಾಶಯಕ್ಕೆ ಪುಷ್ಕರಣಿ ಎಂದು ಹೆಸರು.

ಸ್ವಾಮಿ ಪುಷ್ಕರಣಿ : ನೋಡು ನೋಡು ವೆಂಕಟೇಶ । ನೋಡು ನೋಟವ ಅವನು ಆಡುವಾಟವ । ಬೇಟೆಗಾಗಿ ಹೊರಟು ಬಂದ ಪ್ರಖ್ಯಾತವ । (ಪುರಂದರ ಸಾಹಿತ್ಯ ದರ್ಶನ ಸಂ.1 ಪು. 331, 335, 336) ಅಡವಿಯೊಳಗೆ ದಾರಿಲ್ಲೆಂದು ಜುಲ್ಮೆಮಾಡಿದ । ಸ್ವಾಮಿ ಜುಲ್ಮೆಮಾಡಿದ ॥57॥

"ಸ್ವಾಮಿ ಪುಷ್ಕರಣಿ" ತೀರದಲ್ಲಿ ವಾಸಮಾಡಿದ॥58॥ "ಕೋನೇರಿ"ಶರಣು ವೇಂಕಟರಮಣ ನಿನ್ನ। ಚರಣವ ನಂಬಿದೆ ನಾನು ॥ಪ॥ (ಪು.323)

"ಸ್ವಾಮಿ ಪುಷ್ಕರಣಿ ತೀರ್ಥ"ಪಾಪವಿನಾಶಿನಿ ತೀರ್ಥ ಚಿತ್ರ. 1 ಪಾಪವಿನಾಶಿನಿ ತೀರ್ಥಚಿತ್ರ. 2 ತಿರುಮಲ ಬೆಟ್ಟದಲ್ಲಿರುವ ಇನ್ನೊಂದು ಜಲ ಶುದ್ಧ ಸಿದ್ಧ ಜಲಧಾರೆ

'ಪಾಪವಿನಾಶಿನಿ ತೀರ್ಥ'। ನಮ್ಮ ಪಾತಕವ ಪರಿಹರಿಸೆ। ಶ್ರೀವೇಂಕಟಗಿರಿ ಶ್ರೀನಿವಾಸ । "ಕೋನೇರಿ" ತೀರ್ಥಾಧಿವಾಸ ನಿವಾಸ ॥2॥

ಕೋನೇರಿ : ಸ್ವಾಮಿ ಪುಷ್ಕರಣಿ ತೀರ್ಥವನ್ನೇ ಇಲ್ಲಿ ಕೋನೇರಿ(ಕೋನೇರು) ಎಂದು ಕರೆಯಲಾಗಿದೆ. ಕೋಣ+ಏರು>ಕೋಣೇರು> ಕೋನೇರು. ಪ್ರತಿ ಮೂಲೆಯಲ್ಲಿಯೂ ಇರುವ ಕಲ್ಲುಗಳ ಕೋಣ(Angle)ಗಳನ್ನೂ ಸುವ್ಯವಸ್ಥಿತವಾಗಿ, ಓರಣವಾಗಿ ಜೋಡಿಸಿ, ಒಪ್ಪವಾಗಿ ಕಾಣುವಂತೆ ಈ ಪುಷ್ಕರಣಿಯನ್ನು ರಚಿಸಿರುತ್ತಾರೆ. ಈ ಕೊಳದ ಹೆಸರನ್ನು ಮರಾಠಿ ಭಾಷೆಯಲ್ಲಿ ಕೋನೇರಿ ಎಂದೇ ಕರೆಯುತ್ತಾರೆ (ಪು.274). ಈ ಕೊಳದ ದಂಡೆಯ ಮೇಲೆಯೇ ವೇಂಕಟೇಶ್ವರನ ದೇವಸ್ಥಾನವಿದೆ.

ಹಂಪೆಯ ಮಹಾನವಮಿ ದಿಬ್ಬದ ಪುಷ್ಕರಣಿ

ಇಂತಹುದೇ ಒಂದು ದೊಡ್ಡ ಪುಷ್ಕರಣಿಯನ್ನು ಹಂಪೆಯ ಮಹಾನವಮಿ ದಿಬ್ಬದ ಹತ್ತಿರ ಎಂಬತ್ತರ ದಶಕದಲ್ಲಿ ಕೇಂದ್ರ ಪುರಾತತ್ವ ಇಲಾಖೆಯವರು ಹೊಸದಾಗಿ ಕಂಡುಹಿಡಿದು, ಉತ್ಖನನ ಮಾಡಿ ಮತ್ತೆ ಸರಿಯಾದ ಸುಸ್ಥಿತಿಯಲ್ಲಿ ಪುನರ್ ನಿರ್ಮಾಣ ಮಾಡಿರುತ್ತಾರೆ. ಇದು ಹಲವು ವಿಶೇಷಗಳನ್ನು ಒಳಗೊಂಡಿದೆ. ಇಲ್ಲಿಯ ಪ್ರತಿ ಕಲ್ಲಿನ ಮೇಲೆಯೂ ಅದರ ಸಂಖ್ಯೆಯನ್ನೂ ಕನ್ನಡದ ಅಂಕೆಗಳಿಂದ ಗುರುತಿಸಿರುತ್ತಾರೆ. ಯಾವ ಯಾವ ಕಲ್ಲನ್ನು ಯಾವ ಯಾವ ಮೂಲೆಗಳಿಗೆ ಹೊಂದಿಸಬೇಕೆನ್ನುವ ದಿಕ್ಕುಗಳನ್ನು ಕನ್ನಡದ ಲಿಪಿಯಲ್ಲಿಯೇ ಬರೆದಿರುತ್ತಾರೆ. ಈಗಲೂ ಪುರಾತತ್ವ ಇಲಾಖೆಯವರು ಒಂದು ಕಟ್ಟಡವನ್ನು ಪುನರ್ ನಿರ್ಮಾಣ ಮಾಡುವಾಗ ಇಂತಹ ನಿಯಮಗಳನ್ನೇ ಅನುಸರಿಸುತ್ತಾರೆ ಎನ್ನವುದು ಅಂದಿನವರ ತಂತ್ರಜ್ಞಾನದ ಜಾಣ್ಮೆಗೆ ಬಲವಾದ ಸಾಕ್ಷಿಯನ್ನೊದಗಿಸುತ್ತದೆ. ತಂತ್ರಜ್ಞರ ಹೇಳಿಕೆಯ ಪ್ರಕಾರ ಇದನ್ನು ಬೇರೆ ಕಡೆ ನಿರ್ಮಿಸಿ ತಂದು ನಂತರ ಇಲ್ಲಿ ಜೋಡಿಸಲಾಗಿದೆ ! ಏಕೆಂದರೆ ಇದು ಹಸಿರು ಕಣಶಿಲೆಗಳಿಂದ ನಿರ್ಮಿಸಿರುವಂಥಾದ್ದಾಗಿದೆ. ಈ ರೀತಿಯ ಶಿಲೆಗಳು ಹಂಪೆಯ ಪರಿಸರದಲ್ಲಿ ಕಂಡು ಬರುವುದಿಲ್ಲ. ಹಂಪೆಯಲ್ಲಿ ಹೆಚ್ಚಾಗಿ ಸಿಗುವುದೆಲ್ಲ ಗಟ್ಟಿ ಬಿಳಿ ಕಣಗಳುಳ್ಳ ಗ್ರ್ಯಾನೈಟ್ ಶಿಲೆಗಳು.

"ಪಾಪವಿನಾಶಿನಿ ತೀರ್ಥ" – ಇದು ತಿರುಮಲ ದೇವಸ್ಥಾನದಿಂದ 7 ಕಿ.ಮೀ. ದೂರದಲ್ಲಿದೆ. ಇಲ್ಲಿ ಇನ್ನೂ ಸ್ವಲ್ಪ ಮರಗಳು ಇರುವುದರಿಂದ ಅವುಗಳ ಬೇರಿನಿಂದ ಹರಿದು ಬರುವ ನೀರೂ ಸ್ವಚ್ಛವಾಗಿಯೇ ಇದೆ. ಇತ್ತೀಚೆಗೆ ಈ ನೀರನ್ನು ಒಟ್ಟಾಗಿಸಿ ಕಟ್ಟೆಯ ಮೇಲಿನಿಂದ ಬೀಳುವ ಹಾಗೆ ಧಾರೆಯನ್ನಾಗಿ ಪರಿವರ್ತಿಸಿ ಸಾರ್ವಜನಿಕರಿಗೆ ಸ್ನಾನ ಮಾಡಲು ಅನುಕೂಲವಾಗುವಂತೆ ಮಾಡಿರುತ್ತಾರೆ. ನೀರಿನ ಗುಣ ಪರೀಕ್ಷೆ ಮಾಡಲಾಗಿ ಇದರಲ್ಲಿಯ ಪಿ.ಎಚ್. ಅಂಶ 6.5 ರಿಂದ 7.5ರ ಒಳಗೇ ಇರುವುದು ಕಂಡು ಬಂದಿದೆ. ಗಿಡ ಮರಗಳಿರುವ ಪ್ರದೇಶವಾಗಿರುವುದರಿಂದಾಗಿ ಹೊಸ ಆಮ್ಲಜನಕದ ಉತ್ಪತ್ತಿಯಾಗಿ ನೀರಿನಲ್ಲಿ ಕರಗಲ್ಪಡುವುದರಿಂದ ನೀರಿನ ಹೆಚ್ಚಿನ ರುಚಿಗೆ ಕಾರಣವಾಗಿದೆ.

ಕೇವಲ ಕೊಳ, ಪುಷ್ಕರಣಿ, ಇತ್ಯಾದಿ ಜಲ ಆಕರಗಳನ್ನು ನಿರ್ಮಿಸಿದ ಮಾತ್ರಕ್ಕೆ ಅವನ್ನು ತೀರ್ಥ ಎಂದು ಕರೆಯಲಾಗುತ್ತಿರಲಿಲ್ಲ. ಅವುಗಳ ಸುತ್ತಲೂ ವೃಕ್ಷಾಯುರ್ವೇದ ಇತ್ಯಾದಿ ಗ್ರಂಥಗಳಲ್ಲಿ ಉಲ್ಲೇಖಿಸಿರುವ, ಆಲ, ಅರಳಿ ಮುಂತಾದ ಮರಗಳನ್ನು ಬೆಳೆಸಬೇಕು. ನಂತರ ಶಾಸ್ತ್ರಗಳಲ್ಲಿ ಹೇಳಿರುವ ಅನೇಕ ವಿಧಿ ವಿಧಾನಗಳನ್ನು ನೆರವೇರಿಸಿ, ದಾನ ಇತ್ಯಾದಿಗಳನ್ನು ನೀಡಿ ನಂತರ ಇಂತಹ ಜಲ ತಾಣಗಳನ್ನು "ತೀರ್ಥ" ಎಂದು ಸಾರ್ವಜನಿಕರ ಸಮ್ಮುಖದಲ್ಲಿ ಉದ್ಘೋಷಿಸಲಾಗುತ್ತಿತ್ತು. ಇದಕ್ಕೆ ಒಂದೆರಡು ಉದಾಹಣೆಗಳನ್ನು ಶಾಸನಗಳ ಮೂಲಕವೇ ತಿಳಿಯಬಹುದಾಗಿದೆ. ಕ್ರಿ.ಶ.1380 "ವರ್ತೆಕುಂಡ" ಎನ್ನುವ ಜಲ ತಾಣ ಒಂದನ್ನು ಬದ್ದೆಯ ನಾಯಕ ಎಂಬ ಬೇಟೆಗಾರ, ಯಡವಂಕ ಎಂಬಲ್ಲಿ ಇದ್ದ ಊಟೆಯ ಬಳಿ ನಿರ್ಮಿಸಿದ. ಅವನು ಎರಡನೆಯ ಹರಿಹರ ಅರಸನ ಆಸ್ಥಾನದ ಸೇವಕನಾಗಿದ್ದ. ಈ ಊಟಿ ಬಾವಿಯನ್ನು ಮೈಲಾರ ದೇವರ ಪವಿತ್ರ ಅಭಿಷೇಕದ ನೀರಿಗೆಂದೇ ಅಗೆಸಲಾಗಿತ್ತು. ಹೀಗಾಗಿ ಆ ದೇವರನ್ನೂ "ವರ್ತಿಯ ಮೈಲಾರದೇವ" ನೆಂದೇ ಕರೆಯಲಾಯಿತು. ಅದೇ ಸಮಯದಲ್ಲಿ ದೇವಸ್ಥಾನದ ಆಜ್ಞೇಯ ಭಾಗದಲ್ಲಿ ಆಲದ ಮರಗಳನ್ನೂ ನೆಡಲಾಯಿತು. ಮೇಲೆ ತಿಳಿಸಿದಂತೆ ಈ ಬಾವಿಯನ್ನು ದೇವಸ್ಥಾನದ ಧಾರ್ಮಿಕ ಕಾರ್ಯಗಳಿಗೆ ಮಾತ್ರ ಉಪಯೋಗಿಸಲಾಗುತ್ತಿತ್ತು. ಈ ಶಾಸನವು ಹಂಪಿಯಲ್ಲಿದೆ (Vijayanagar - Progress of Research, Vol.III, Mysore 1991 105p, 49 & 50). ಮತ್ತೊಂದು ಶಾಸನವು ಭಕ್ತರ ನಾಗಪ್ಪ ಎಂಬುವವನು ಒಂದು ಬಾವಿಯನ್ನೂ ಹಾಗೂ ಅದರ ಬಳಿಯಲ್ಲಿ ಒಂದು ಅಶ್ವಥ ವೃಕ್ಷವನ್ನು ಕೂಡ ನಡೆಸಿದನು. "ಈ ಕಾರಣದಿಂದಾಗಿ ಈ ಸ್ಥಳವನ್ನು ತೀರ್ಥವೆಂದೇ ಭಾವಿಸಿದ್ದರು". ಈ ದಾಖಲೆಯನ್ನೂ ಹಂಪೆಯಿಂದಲೇ ಪಡೆಯಲಾಗಿದೆ (Vijayanagar - Progress of Research, Vol.III, Mysore 1991 No.27).P33).

ಸ್ವಾಮಿ ಪುಷ್ಕರಣಿಯ ಹೆಸರನ್ನು ಪುರಂದರದಾಸರು ಅನೇಕ ಕಡೆ ಬಳಸಿದ್ದಾರೆ ಎನ್ನುವುದಕ್ಕೆ ಇನ್ನೊಂದು ಉದಾಹರಣೆ ಹೀಗಿದೆ (ಪು.313 ಹಾಡು 120). "ಏಸು ಜನ್ಮದ ಪುಣ್ಯ ಬಂದ್ದೊದಗಿತೋ "ಶ್ರೀಸ್ವಾಮಿ ಪುಷ್ಕರಣಿಯಲಿ" ಸ್ನಾನ ಜಪ ತಪವ ಮಾಡಿ ವರಹ ದೇವರ ನೋಡಿ ॥ಪ॥"

ದೇವಖಾತ : ಪುಷ್ಕರಣಿಯು ಮಾನವ ನಿರ್ಮಿತ; ಅದು ನೈಸರ್ಗಿಕವಾಗಿದ್ದರೆ, ಅದಕ್ಕೆ ದೇವಖಾತ ಎನ್ನುವರು.

ದೀರ್ಘಿಕಾ : ದೀರ್ಘವಾಗಿರುವ ಜಲಾಶಯಕ್ಕೆ ದೀರ್ಘಿಕಾ ಎಂದು ಹೆಸರು. ಆದರೆ ಅಮರ ಕೋಶದಲ್ಲಿ ಮಾತ್ರ ಇದನ್ನು ವಾಪೀ ಎಂದೇ ಕರೆದಿದ್ದಾರೆ. ಇದು ಅಷ್ಟು ಸರಿಯಲ್ಲ.

ಕುಲ್ಯಾ : ವಿಶಾಲವಾದ ಜಲಾಶಯವೇ ಕುಲ್ಯಾ. ಇದು ಕೃತ್ರಿಮವಾಗಿ ರಚಿಸಿರುವಂತಹುದು. ಸರಿತ್ ಎಂತಲೂ ಕರೆದಿರುತ್ತಾರೆ.

ಸರಃ : ನದಿಯಿಂದ ಅಥವಾ ಬೆಟ್ಟದಿಂದ ಜಿನುಗಿ ಬಂದ ನೀರು ಒಂದುಕಡೆ ಸೇರಿ, ತಾವರೆಗಳಿಂದ ತುಂಬಿ ವಿಸ್ತೃತ ಜಲಾಶಯವಾಗಿದ್ದರೆ ಅದಕ್ಕೆ "ಸರ" ಎನ್ನುವರು. ಸರಸ್ಸಿಗೆ ಕಾಸಾರ, ಸರಸಿ ಎನ್ನುವ ಹೆಸರುಗಳೂ ಇವೆ.

ತಡಾಗ : ಮನುಷ್ಯನಿಂದ ಕೃತಕವಾಗಿ ನಿರ್ಮಿತವಾದ ಸರೋವರಕ್ಕೆ ಅಥವಾ ತಾವರೆ ಕೊಳಕ್ಕೆ ತಡಾಗ ಎಂದು ಹೆಸರು. ಇದರಲ್ಲಿ ಪ್ರತಿ ವರುಷವೂ ಹೊಸ ಹೊಸ ನೀರು ಹೊರಗಿನಿಂದ ಸೇರುವಂತೆ ಮಾಡಬೇಕಾಗುತ್ತದೆ.

ವೇಶನ್ತ : ಸಣ್ಣ ತಡಾಗಗಳನ್ನು ವೇಶನ್ತಗಳೆನ್ನುವರು.

ಚೌಂಣ್ಡೀ : ಬಂಡೆಕಲ್ಲುಗಳ ಮಧ್ಯೆ ನೀರು ನಿಂತು ಬಳ್ಳಿಗಳಿಂದ ತುಂಬಿರುವ ಜಲಾಶಯಗಳಿವು.

ಪ್ರಸ್ರವಣಂ : ಬೆಟ್ಟದ ಸಾಲು ಪ್ರದೇಶಗಳಲ್ಲಿ ಕಾಣಬರುವ ಅನೇಕ ಬಗೆಯ ನೀರಿನ ಝರಿಗಳ ಹೆಸರು ಪ್ರಸ್ರವಣ.

ಉದ್ಭಿದಂ : ನೆಲದಿಂದ ಚಿಮ್ಮುವ ಜಲ ಬುಗ್ಗೆಗಳನ್ನು "ಉದ್ಭಿದಂ"ಎಂದು ಕರೆಯಲಾಗಿದೆ. ಉದಾ.ಗೆ ಡಾ. ದ.ರಾ.ಬೇಂದ್ರೆಯವರ ಇಳಿದುಬಾ ತಾಯಿ ಕವಿತೆಯಲ್ಲಿ ಉದ್ಭುಧ್ಧ ಶುದ್ಧ ನೀರೆ (ಗಂಗಾವತರಣ) ಎನ್ನುವ ಸಾಲು ಒಂದಿದೆ.

ನದೀ : ಯಾವುದು ನೀರಿನ ಭೌತಗುಣವಾದ ಹರಿಯುವ, ಅಥವಾ ಚಲನ ಶೀಲತೆಯ ಗುಣವನ್ನು ಪ್ರತಿನಿಧಿಸುತ್ತದೆಯೋ ಅದೇ ನದಿ. ಪುರಂದರ ದಾಸರ ಹಾಡಿನಲ್ಲಿ ಬರುವ ಎರಡು ಉದಾಹರಣೆಗಳು ಹೀಗಿವೆ :

ಗಂಡಕಿ ನದಿ : ಜಯಪಾಂಡುರಂಗ ನಾ ನಿನ್ನ ಮನಕೆ ಬಾರೆನೆ ॥ಪ॥ "ಗಣಿಕೆ ಗಂಡಕಿಯ ಅಗಣಿತ ಪಾಪವ ಕಳೆದು । ವೈಕುಂಠದಲ್ಲಿ ನಿಲಿಸಿದ್ಯೋ, ಜಯ ಪಾಂಡುರಂಗ "॥6॥ (ಪುರಂದರ ಸಾಹಿತ್ಯ ದರ್ಶನ ಸಂ.1 ಪು.353). ನೀರು ದೇಹ, ಮನಸ್ಸಿನ ಶುದ್ಧಿಗೆ ಮಾತ್ರವಲ್ಲ. ಅದು ಜನ್ಮಾಂತರದ ಪಾಪವನ್ನೇ ತೊಳೆಯುತ್ತದೆ ಎನ್ನುವುದು ನಮ್ಮ ನಂಬಿಕೆ. ದೇಹದ ಆಸೆಗೆ ಅನೇಕರನ್ನು ಕೂಡಿ ಪಾಪದ ಕೂಪವೇ ಆಗಿದ್ದ ವೇಶ್ಯೆ ಗಂಡಕಿ ಎನ್ನುವ ಸ್ತ್ರೀ. ಆದರೆ ಅದರ ಅರಿವಾದ ಕ್ಷಣದಿಂದಲೇ ಭಗವಂತನ ನಾಮವನ್ನು ತೆಗೆದುಕೊಂಡು, ತಪಸ್ಸನ್ನು ಆಚರಿಸಿ ಕೇವಲ ಒಂದು ಜನ್ಮದ ಪಾಪವನ್ನೇ ಅಲ್ಲದೇ ತನ್ನಲ್ಲಿಯೇ ನಾರಾಯಣ ಸ್ವರೂಪೀ ಸಾಲಿಗ್ರಾಮಗಳನ್ನೇ ಉತ್ಪಾದಿಸಿ ಇಂದಿಗೂ ಜಗತ್ತಿನ ಎಲ್ಲ ಜನರನ್ನೂ ಪಾವನ ಗೊಳಿಸುವ ಶುದ್ಧ-ಸಿದ್ಧ ಜಲವಾಹಿನಿಯಾಗಿದ್ದಾಳೆ ಗಂಡಕಿ. ಕೊನೆಗೆ ವೈಕುಂಠದಲ್ಲಿ ಶಾಶ್ವತ ಮುಕ್ತಿ ಪಡೆದಿದ್ದಾಳೆ ಪಾಂಡುರಂಗನ ನಾಮದಿಂದ ಎನ್ನುತ್ತಾರೆ ಅಪರೋಕ್ಷ ಜ್ಞಾನಿಗಳಾದ ಪುರಂದರದಾಸರು. ಈ ಪ್ರಸಂಗ ದಿಂದ ಹೊರನೋಟದಲ್ಲಿಯೇ ಕಂಡು ಬರುವ ಅಂಶವೆಂದರೆ ಭಗವಂತನ ನಾಮ ಕೀರ್ತನೆಯ ಮೂಲಕ ನೆಲ- ಜಲ ಮಾಲಿನ್ಯಗಳನ್ನೂ ಶುಧ್ಧೀಕರಿಸಲು ಬರುತ್ತದೆ ಎನ್ನುವ ಸಂದೇಶವಿರುವಂತೆ ತೋರುತ್ತದೆ. ಏಕೆಂದರೆ ಜಪಾನಿನ ಹ್ಯಾಡೋ ಇತ್ಯಾದಿ ಸಂಸ್ಥೆಗಳು ಬುದ್ಧ ಬಿಕ್ಕುಗಳು ಹೇಳುವ ಮಂತ್ರಗಳಿಂದಾಗಿ ಇದು ಸಾಧ್ಯ ಎನ್ನುವುದರ ಕುರಿತಾದ ಅಧ್ಯಯನಗಳನ್ನು ಈಗಾಗಲೇ ಕೈಗೆತ್ತಿಕೊಂಡಿವೆ. ಇದರ ವಿವರ ಅಂತರ್‌ಜಾಲದ ಮೂಲಕ ಲಭ್ಯವಿದೆ. ರಷ್ಯಾ, ಚೀನಗಳಲ್ಲೂ ಇಂತಹ ಪ್ರಯತ್ನಗಳು ನಡೆದಿದ್ದು ಇನ್ನೂ ಪ್ರಾಯೋಗಿಕ ಹಂತದಲ್ಲಿವೆ.

ಜಪಾನಿನ ವಿಜ್ಞಾನಿ ಡಾ.ಮಸರು ಎಮಟೋ ಅವರು ಕಲುಷಿತ (Polluted Water) ನೀರಿನ ಕೆಲವು ಹನಿಗಳನ್ನು ತೆಗೆದುಕೊಂಡು ಅವುಗಳಿಗೆ ಪ್ರಾರ್ಥನೆಯ ಕೆಲವು ಶಬ್ದಗಳನ್ನು ಉಚ್ಚರಿಸಿ ನಂತರ ಶೈತ್ಯೀಕರಿಸಿದರು. ಹೀಗೆ ಉಂಟಾದ ಮಂಜಿನ ಹನಿಗಳನ್ನು ಕತ್ತಲೆ ಕಿರಣ ಕಂಡು ಹಿಡಿಯುವ ಸೂಕ್ಷ್ಮ ದರ್ಶಕದ (Dark field Microscope) ಮೂಲಕ ಛಾಯಾ ಚಿತ್ರಗಳನ್ನು ತೆಗೆದು ಪರಿಶೀಲಿಸಿದರು. ಚಿತ್ರ 1 ರಲ್ಲಿ ತೋರಿಸಿದಂತೆ ಪ್ರಾರ್ಥನೆಯ ಶಬ್ದಗಳನ್ನು ಹೇಳದೇ ಇದ್ದಾಗ

ನೀರಿನ ಕಣಗಳ (Molecular) ಚಿತ್ರ ಯಾವುದೇ ಒಂದು ನಿರ್ದಿಷ್ಟ ವಿನ್ಯಾಸ ಹೊಂದಿರುವುದಿಲ್ಲ. ಆದರೆ ಪ್ರಾರ್ಥನೆ ಶಬ್ದಗಳ ಉಚ್ಚಾರಣೆಯ ನಂತರ ಚಿತ್ರ. 2 ರಲ್ಲಿ ತೋರಿಸಿರುವಂತೆ ನಿಖರವಾದ, ನಿರ್ದಿಷ್ಟ ರೂಪವನ್ನು ಹೊಂದಿದ್ದಷ್ಟೇ ಅಲ್ಲದೇ ಕಲುಷಿತ ನೀರು ಆಶ್ಚರ್ಯಕರ ರೀತಿಯಲ್ಲಿ ಶುದ್ಧವಾಗಿರುವುದು ಕಂಡು ಬಂದಿತು. ಇದರ ವಿವರಗಳಿಗೆ ಅಂತರ್ ಜಾಲವನ್ನು ನೋಡಿ. (Can water be affected by our words? Dr. Masaru Emoto, a Japanese scientist)

ಕೂಡಲಿಯಲ್ಲಿರುವ ತುಂಗಭದ್ರಾನದಿ (ಪು.251) ರಾಗ: ಭೂಪಾಳಿ ತಾಳ: ಝಂಪೆ

ತುಂಗೆ ಮಂಗಳ ತರಂಗೆ ॥ಪ॥ ಹರಿಯ ಸರ್ವಾಂಗೆ ಜಯ ಜಯತು ಜಯ ಜಯ ತುಂಗಭದ್ರೆ ॥ಅ.ಪ॥ ಆದಿಯಲ್ಲೊಬ್ಬ ದೈತ್ಯ ಮೇದಿನಿಯ ಕದ್ದೊಯ್ದು । ಸಾಧಿಸುತ್ತಿರಲವನ ಬೆನ್ನಟ್ಟಿ ಬಿಡದೆ । ಭೇದಿಸುತಲವನ ಭೂಮಿಯನೆತ್ತಿ ಕಾಯ್ದಂಥ । ಆದಿವರಾಹನ ದಾಡೆಗಳಿಂದ ಬಂದೆ ॥1॥ ಜಗವೆಲ್ಲ ಹರಿಮಯ ಶಿಲೆಯೆಲ್ಲ ಶಿವಮಯ । ಮಳಲು ಮಿಟ್ಟೆಗಳೆಲ್ಲ, ಮಣಿಯ ಮಯವು । ಬೆಳೆದಿಪ್ಪ ದರ್ಭೆಗಳು ಸಾಕ್ಷಾತ್ತು ಬ್ರಹ್ಮ ಮಯ । ನಳಿನ ನಾಳವು ಸರ್ವವಿಷ್ಣುಮಯವು ॥2॥ ಇದೆ ವೃಂದಾವನ ಇದೆ ಕ್ಷೀರಾಂಬುಧಿ । ಇದೆ ವೈಕುಂಠಕೆ ಸರಿಯೆಂದೆನಿಸಿದೆ । ಇದೆ ಬದರಿಕಾಶ್ರಮ ಇದೆ ವಾರಾಣಾಸಿಗೆ । ಅಧಿಕೆ ಫಲವನ್ನೀವ ದೇವಿ ॥3॥ ಧರೆಗೆ ದಕ್ಷಿಣ ವಾರಣಾಸಿ ಎನಿಸಿದೆ । ಪರಮ ಪವಿತ್ರೆ ಪಾವನ ಚರಿತೆ ನಿನ್ನ । ಸ್ಮರಣೆ ಮಾತ್ರದಿ ಕೋಟಿ ಜನ್ಮದಘವನು ಕಳೆವ । ಸರಿದು ಸಾಯುಜ್ಯ ಫಲವೀವ ದೇವಿ(ಯೆ) ॥4॥ ಪರಮ ಭಕ್ತ ಪ್ರಹ್ಲಾದಗೊಲಿದು ಬಂದು । ನರಸಿಂಹ ಕ್ಷೇತ್ರವೆಂದೆನಿಸಿ ಮೆರೆದೆ । ಧರೆಯೊಳಧಿಕ ವರ "ಕೂಡಲಿಪುರ"ದಲ್ಲಿ । ವರದ ಪುರಂದರವಿಠಲನಿರಲು ಬಂದೆ ॥5॥

"ಕೂಡಲಿಪುರ" ತುಂಗ ಭದ್ರಾ ನದಿಗಳ ಸಂಗಮ ಸ್ಥಾನ ತುಂಗ ಭದ್ರಾನದಿಗಳು ಸೇರುವಲ್ಲಿ ಕಟ್ಟಲಾಗಿರುವ ಸಣ್ಣ ದೇವಸ್ಥಾನ

ಶಿವಮೊಗ್ಗ ಜಿಲೆಯಲ್ಲಿ, ಶಿವಮೊಗ್ಗೆಗೆ ಒಂಬತ್ತು ಮೈಲು ದೂರವಿರುವ ಈ ಊರು ತುಂಗಾ ಮತ್ತು ಭದ್ರಾ ಎನ್ನು ಎರಡು ನದಿಗಳು ಕೂಡುವ ಸಂಗಮ ಸ್ಥಾನ. ಹೀಗೆಂದೇ ಈ ಸ್ಥಳಕೆ ಕೂಡಲಿ ಎಂದು ಹೆಸರಾಗಿದೆ. ಈ ಎರಡೂ ನದಿಗಳು ಪಶ್ಚಿಮ ಘಟ್ಟಗಳ ಸಹ್ಯಾದ್ರಿ ಶ್ರೇಣಿಯಲ್ಲಿರುವ ವರಾಹ ಪರ್ವತದ ಗಂಗಾಮೂಲ ಎನ್ನುವಲ್ಲಿ ಹುಟ್ಟುತ್ತವೆ. ಆದರೆ ಬೇರೆ ಬೇರೆಯಾಗಿ ಹರಿದು, ಕೂಡಲಿಯಲ್ಲಿ ಕೂಡಿಕೊಂಡು ಮುಂದೆ ತುಂಗಭದ್ರಾ ಎನ್ನುವ ಹೆಸರಿನಿಂದ 500 ಮೈಲಿಗಳಷ್ಟು ಹರಿದು, ಆಂಧ್ರ ಪ್ರದೇಶದ ಕರ್ನೂಲಿನ ಹತ್ತಿರ ಕೃಷ್ಣಾ ನದಿಯನ್ನು ಸೇರುತ್ತದೆ. ವರಾಹಪರ್ವತವೇ ವರಾಹ(ಹಂದಿಯ) ರೂಪದಲ್ಲಿದೆಯೆಂದೂ ಅದರ ಎರಡೂ ಕೋರೆ ದಾಡೆಗಳಿಂದ ತುಂಗ ಮತ್ತು ಭದ್ರಾ ನದಿಗಳೂ ಹಾಗೂ ಕಣ್ಣಿನಿಂದ ನೇತ್ರಾವತಿ ಎನ್ನುವ ನದಿಯೂ ಹುಟ್ಟುವುದೆದೆಂದು ನಂಬಿಕೆ. ಕೂಡಲಿಯಲ್ಲಿ ನಾರಸಿಂಹ ಮತ್ತು ರಾಮೇಶ್ವರ ದೇವಾಲಯಗಳಿವೆ. ವಿಜಯ ನಗರದ ಅರಸನಾಗಿದ್ದ ಕೃಷ್ಣದೇವರಾಯನು ಇದೇ ಊರಿನಲ್ಲಿದ್ದ ನಾರಾಯಣ ಯತಿಗಳಿಗೆ ಆರಗ ಸೀಮೆಯ ಐದು ಗ್ರಾಮಗಳನ್ನು ದಾನವಾಗಿ ಕೊಟ್ಟ ಶಾಸನವಿದೆ. ಈ ಶಾಸನದ ಕಾಲ ಕ್ರಿ.ಶ.1527. ಅಂದರೆ ಪುರಂದರದಾಸರು ಜೀವಿಸಿದ್ದಕಾಲವೇ. ಅದ್ವೈತ ಪರಂಪರೆಯ ಸಂಸ್ಥಾಪಕರಾಗಿದ್ದ ಆದಿಶಂಕರರು, ಶೃಂಗೇರಿಗೆ ಹೋಗುವ ಮೊದಲು ಇಲ್ಲಿ ತಂಗಿದ್ದರೆಂದು ಪ್ರತೀತಿ ಇದೆ. ಶೃಂಗೇರಿ ಮಠದ ಶಾಖಾ ಮಠವೂ ಇಲ್ಲಿದೆ.

ಆಧಾರ : ಹರಿಯುವ ನೀರನ್ನು ಕಟ್ಟಿ ಹಾಕಿದಾಗ ಉಂಟಾಗುವ ಜಲಾಶಯವೇ ಆಧಾರ. ಉದಾಹರಣೆಗೆ ದೊಡ್ಡ ಜಲ ಸಂಗ್ರಹಕ್ಕೆ ಅಣೆಕಟ್ಟು, ಎಂದು ಕರೆಯುತ್ತಾರೆ. ಶಾಸನಗಳಲ್ಲಿ ಸೇತು ಬಂಧ ಎನ್ನುವ ಪ್ರಯೋಗವೂ ಇದೆ. ಚಿಕ್ಕ ತೊರೆ ಅಥವಾ ಹಳ್ಳಗಳಿಗೆ ಎದುರಾಗಿ ಕಟ್ಟುವ ಕಟ್ಟಡವನ್ನು "ಕಟ್ಟೆ"ಎನ್ನುವರು.

ನಿಪಾನ : ಬಾವಿಯ ಹತ್ತಿರ ಗುಂಡಿಗಳನ್ನು ಮಾಡಿ, ಇಲ್ಲವೇ, ಕಲ್ಲಿನ ತೊಟ್ಟಿಗಳನ್ನಿಟ್ಟು ಅವುಗಳಲ್ಲಿ ನೀರನ್ನು ತುಂಬಿದರೆ, ಅದಕ್ಕೆ "ನಿಪಾನ" ಎನ್ನುವರು. "ನಿಪಾನ"ಕ್ಕೆ ಆವಾಹ, ಉಪಕೂಪ (ಸಣ್ಣಬಾವಿ), ಜಲಾಶಯ /ಜಲಾಗಾರ ಎಂಬ ಹೆಸರುಗಳೂ ಇವೆ.

ಆವಾಲಗಳು : ವೃಕ್ಷಗಳ ಬಳಿಯಲ್ಲಿ ನೀರು ನಿಂತಿರುವ ಪಾತಿಗಳಿಗೆ "ಆವಾಲ"ಗಳೆನ್ನುವರು.

ಅಳುವುದ್ಯಾತಕೊ ರಂಗ । ಬಾಲಕತನದಲಿ ಗೋಪಾಲಕರೊಡಗೂಡಿ। "ಕಾಳಿಂದಿ" (ಉತ್ತರ ಪ್ರದೇಶ)"ಮಡುವನು" ಕಲಕಿದ ಕಾರಣ ಕಾಲು ಉಳುಕಿತೇ ರಂಗಯ್ಯ ॥2॥.

ಮಡುವು, ಪುಷ್ಕರಣಿ, ಕೆರೆ ("ಕೆರೆಯ ನೀರನು ಕೆರೆಗೆ ಚೆಲ್ಲಿ"), ನದಿ, ತೀರ್ಥ, ಇತ್ಯಾದಿ ನೀರಿನ ಆಕರಗಳು ಪುರಂದರ ದಾಸರ ಸಾಹಿತ್ಯದಲ್ಲಿ ಹೀಗೆ ಉಲ್ಲೇಖಿತವಾಗಿದ್ದು. ಮಡುವು, ಕೆರೆ ಇವು ಅಚ್ಚ ಕನ್ನಡ ದೇಸೀಯ ಶಬ್ದಗಳಾಗಿವೆ.

ನೀರಿಗೆ ಹೋಗುವುನ್ನೇ ಒಂದು ನೆಪವಾಗಿ ಇಟ್ಟುಕೊಂಡು ಒಂದು ಅತ್ಯಂತ ಸರಳ ಶಬ್ದ ಚಿತ್ರವನ್ನು ಕೊಡುತ್ತಲೇ ನೀರಿನಗುಣ, ಅದನ್ನು ತುಂಬಿಕೊಂಡು ಬರುವ ವಿಧಾನ, ಅದನ್ನು ಇರಿಸ ಬೇಕಾದ ಕೊಡ ಇತ್ಯಾದಿಗಳನ್ನು ಹೇಳುವ ರೀತಿ ಅನನ್ಯವಾಗುವುದು ಹೀಗೆ:

ತಾರಕ್ಕ ಬಿಂದಿಗೆ ನೀರಿಗೆ ಹೋಗುವೆ ತಾರೇ ಬಿಂದಿಗೆಯಾ ॥ಪ॥ ಬಿಂದಿಗೆ ಒಡೆದರೆ ಒಂದೇ ಕಾಸು ತಾರೇ ಬಿಂದಿಗೆಯಾ ॥ಅ॥ ರಾಮ ನಾಮವೆಂಬ ರಸಉಳ್ಳ ನೀರಿಗೆ ತಾರೇ ಬಿಂದಿಗೆಯಾ । ಕಾಮಿನಿಯರ ಕೂಡೆ ಏಕಾಂತವಾಡೇನು ತಾರೇ ಬಿಂದಿಗೆಯಾ॥1॥ ಗೋವಿಂದ ಯೆಂಬುವ ಗುಣವುಳ್ಳನೀರಿಗೆ ತಾರೇ ಬಿಂದಿಗೆಯಾ॥2॥ ಬಿಂದು ಮಾಧವನ ಘಟ್ಟಕ್ಕೆ ಹೋಗುವೆ ತಾರೇ ಬಿಂದಿಗೆಯಾ । ಪುರಂದರ ವಿಠ್ಠಲಗೆ ಅಭಿಷೇಕ ಮಾಡುವೆ ತಾರೇ ಬಿಂದಿಗೆಯ ॥3॥

ಇಲ್ಲಿ ರಸ ಉಳ್ಳ ನೀರು, ಗುಣವುಳ್ಳ ನೀರನ್ನು ಯಾವುದರಲ್ಲಿ ತುಂಬಿ ತರಬೇಕು? ಯಾವ ಸ್ಥಳದಲ್ಲಿ ನೀರನ್ನು ಸಂಗ್ರಹಿಸಬೇಕು ಎನ್ನುವುದನ್ನು ಪುರಂದರ ದಾಸರು ಹೇಳಿರುತ್ತಾರೆ. ಸಾಮಾನ್ಯವಾಗಿ ನೀರನ್ನು ತಾಮ್ರದ ಕೊಡಗಳಲ್ಲೇ ಸಂಗ್ರಹಿಸಿ ತರಬೇಕು. ತಾಮ್ರದ ಕೊಡ ಅಥವಾ ಕೊಳಗದಲ್ಲಿಯ ನೀರು ಕುಡಿಯಲು ಶ್ರೇಷ್ಠ. ಹೇಗೆಂದರೆ ಚೆನ್ನಾಗಿ ತಿಕ್ಕಿ ತೊಳೆದ ತಾಮ್ರದ ನೀರಿನಲ್ಲಿ ದೇಹಕ್ಕೆ ಬೇಕಾಗುವ ಹೆಚ್ಚು ತಾಮ್ರದ ಅಂಶಗಳಿರುತ್ತವೆ. ಇವು ದೇಹದ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ ; ತಂಪಾಗಿರುವುದರಿಂದ ದೇಹದ ಉಷ್ಣಾಂಶದಲ್ಲಿ ಉಂಟಾಗುವ ಬದಲಾವಣೆಗಳನ್ನು ನಿಯಂತ್ರಿಸುತ್ತದೆ. ನೀರನ್ನು ತುಂಬುವ ಜಾಗ ಕೂಡಾ ಮಹತ್ವದ್ದು. ನೀರು ಹೆಚ್ಚು ಬಂಡಾಗಿರುವ ಅಥವಾ ಮಣ್ಣಿನ ಕಣ(Sedimentation)ಗಳಿಂದ ತುಂಬಿದ್ದರೆ ಅದರಲ್ಲಿ ಮನುಷ್ಯನಿಗೆ ಬೇಡವಾದ ರೋಗಗಳನ್ನು ಉಂಟು ಮಾಡುವಂಥ ವೈರಾಣುಗಳು ಅತಿ ಶೀಘ್ರವಾಗಿ ಬೆಳವಣಿಗೆಯನ್ನು ಹೊಂದುತ್ತವೆ. ಉದಾ. ಕಾಲರಾ, ಝಾಂಡಿಸ್ ಇತ್ಯಾದಿ. ತಿಳಿಯಾದ ಹರಿಯುವ ನೀರಿನಲ್ಲಿ, ಆಮ್ಲಜನಕ ಹೆಚ್ಚಾಗಿ ಮತ್ತು ಸುಲಭವಾಗಿ ಕರಗ ಬಲ್ಲುದು. ಹೀಗಾಗಿ ಕುಡಿಯುವ ನೀರು ಹೆಚ್ಚು ರುಚಿಯಾಗಿರುತ್ತದೆ. ಅಲ್ಲದೇ ಬೇಳೆ ತರಕಾರಿ ಇತ್ಯಾದಿಗಳು ಬೇಗ ಬೆಂದು ಅಡುಗೆಗೆ ಹೆಚ್ಚಿನ ಸ್ವಾದ/ರುಚಿ ಉಂಟಾಗುತ್ತದೆ. ಎಷ್ಟೇ ಬಂಗಾರ, ಬೆಳ್ಳಿ ಪಾತ್ರೆಗಳಿದ್ದರೂ ದೇವರ ಅಭಿಷೇಕಕ್ಕೆ ನಾವು ಇಂದಿಗೂ ನೀರು ತರುವುದು ತಾಮ್ರದ ಬಿಂದಿಗೆಯಲ್ಲಿಯೇ. ಆಯುರ್ವೇದ, ಇತ್ಯಾದಿ ವೈದ್ಯಕೀಯಶಾಸ್ತ್ರಗಳಲ್ಲಿ ತಾಮ್ರ ಪಾತ್ರೆಯಲ್ಲಿ ನೀರಿನ ಸಂಗ್ರಹಣೆಯನ್ನು ಏಕೆ ಮಾಡ ಬೇಕು ಎನ್ನುವುದರ ಬಗೆಗೆ ಮಾಹಿತಿ ದೊರೆಯುತ್ತದೆ. ಲೇಖನ ಭಾರದಿಂದಾಗಿ ಇಲ್ಲಿ ಅದನ್ನು ಪ್ರಸ್ತಾಪಿಸಲಾಗಿಲ್ಲ.

ಜಲ ವಿಜ್ಞಾನದಲ್ಲಿ ನೀರಿನ ಗುಣ ಮಟ್ಟಕ್ಕೆ ಹೆಚ್ಚಿನ ಮಹತ್ವವಿದೆ. ಅದರ ಪರಿಭಾಷೆಯಲ್ಲಿ ಪ್ರಮುಖವಾಗಿ ಕುಡಿಯುವ ನೀರಿಗೆ ಇರಲೇ ಬೇಕಾದ ಅಂಶಗಳೆಂದರೆ ಪಿ.ಎಚ್, ಕಂಡಕ್ಟಿವಿಟಿ, ನೀರಿನಲ್ಲಿ ಕರಗಿರುವ ಆಮ್ಲಜನಕದ ಪ್ರಮಾಣ, ಕೋರೈಡ್‌ಗಳು, ಸಲ್ಫೈಡ್, ಸಲ್ಫೈಟ್, ಹಾರ್ಡನೆಸ್ ಅಂದರೆ ಅದು ಮೃದು ನೀರೇ ಅಥವಾ ಗಡಸು ನೀರೇ? ಎನ್ನುವುದು. ನೀರಿಗೆ ಗಡಸುತನ ಅಥವಾ ಮೃದುತ್ವ ಪ್ರಾಪ್ತವಾಗುವುದು ಅದರಲ್ಲಿ ಕರಗಿರುವ ಕ್ಯಾಲ್ಷಿಯಂ ಕಾರ್ಬೋನೇಟ್/ ಬೈಕಾರ್ಬೋನೇಟ್‌ಗಳಿಂದ. ನೀರಿನಲ್ಲಿ ಈ ಮೇಲಿನ ಅಂಶಗಳ ಪ್ರಮಾಣ ಹೆಚ್ಚು ಅಥವಾ ಕಡಿಮೆಯಾಗುವುದರಿಂದ ಶೇಕಡಾ 65 ಭಾಗ ರೋಗಗಳು ಉಂಟಾಗುತ್ತವೆ.

"ತುಳಸಿ ಮತ್ತು ಪುರಂದರದಾಸರು"

'ಒಂದು ದಳ ಶ್ರೀತುಳಸಿ ಬಿಂದು ಗಂಗೋದಕ' ಎಂದು ಶ್ರೀ ಪುರಂದರದಾಸರು (ಕಾಲ ಕ್ರಿ.ಶ.1485–1565) ಐದು ನೂರುವರ್ಷಗಳ ಹಿಂದೆಯೇ 'ಜಲ ಶುದ್ಧೀಕರಣ ಕ್ರಿಯೆ'ಯಲ್ಲಿ ತುಳಸಿಯ ಪಾತ್ರವನ್ನು ಉಲ್ಲೇಖಿಸಿದ್ದಾರೆ. ಈ ಸೂತ್ರವನ್ನೇ ಆಧರಿಸಿ ನೀರಿನ ಮೂರು ಮಾದರಿಗಳನ್ನು ರಸಾಯನಿಕ ಪರೀಕ್ಷೆಗಳಿಗೆ ಒಳಪಡಿಸಿದಾಗ ಬಂದ ಫಲಿತಾಂಶವು ಹೀಗಿದೆ:

1ನೇ ಮಾದರಿ : 1 ಲೀಟರ್ ಡಿಸ್ಟಲ್ಡ್ ವಾಟರ್ + 4 ತುಳಸೀ ದಳ

2ನೇಮಾದರಿ: 1ಲೀಟರ್ ಕಾವೇರಿ ಜಲ+ 4 ತುಳಸೀದಳ

3ನೇಮಾದರಿ : 1 ಲೀಟರ್ ಕಾವೇರಿ ಜಲ + 4 ತುಳಸೀ ಬೀಜದ ತೆನೆಗಳು.

ಮೇಲಿನ ಪಟ್ಟಿಯಿಂದ ತಿಳಿದು ಬಂದ ಅಂಶಗಳು

1. ಪಿ.ಎಚ್. ಪ್ರಮಾಣ ಮೂರನೇ ಮಾದರಿ 1 ಮತ್ತು 2 ನೆಯ ಮಾದರಿಗಳಿಗಿಂತ 3 ನೆಯ ಮಾದರಿಯಲ್ಲಿ 0.23 ಪ್ರಮಾಣದಷ್ಟು ಹೆಚ್ಚಾಗಿದೆ. ಅದು ಕುಡಿಯುವ ನೀರಿನ ಪ್ರಮಾಣ ಪಿ.ಎಚ್. 6.5 ನಿಂದ 8.5 ಮಿತಿಯ ಒಳಗೇ ಇದೆ.
2. ಕಂಡಕ್ಟಿವಿಟಿ ಅಂದರೆ ವಿದ್ಯುತ್ ನಿರೋಧಕ ಶಕ್ತಿ, ಮೊದಲಿನ ಮಾದರಿಗಿಂತ 329 ಮೋಹ್ಸ್/ಸೆಂ.ಮೀ. ಹೆಚ್ಚಿದೆ. ತುಳಸಿಯ ದಳ ಮತ್ತು ತೆನೆಗಳನ್ನು ಉಪಯೋಗಿಸಿದಾಗ ಕರಗಿದ ಲವಣಾಂಶಗಳು ಇಷ್ಟು ಹೆಚ್ಚಿನ ಪ್ರಮಾಣದಲ್ಲಿ ನಮಗೆ ದೊರೆಯುತ್ತವೆ.
3. ಈ ಲವಣಗಳಲ್ಲಿ ಮುಖ್ಯವಾದವು. ಮೆಗ್ನೀಷಿಯಂ 1.27 ಪಿ.ಪಿ.ಎಂ, 2.06 ಪಿ.ಪಿ.ಎಂ ಗಳಷ್ಟು ಹೆಚ್ಚಿನ ಮೆಗ್ನೀಷಿಯಂ ಅಂಶ ತುಳಸೀ ತೆನೆಗಳಿಂದ ಲಭ್ಯವಾಗುತ್ತದೆ.
4. ಕ್ಯಾಲ್ಷಿಯಂ ಕಾರ್ಬೋನೇಟ್ ಅಂಶ 114 ಪಿ.ಪಿ.ಎಂ ಗಳಷ್ಟು ಹೆಚ್ಚಾಗಿ ದೊರೆಯುವುದು.
5. ನೀರಿನಲ್ಲಿ ಕರಗಿರುವ ಆಮ್ಲಜನಕದ ಪ್ರಮಾಣ 2.36 ಮಿ.ಗ್ರಾಂ/ಲೀ. ಇದ್ದು ಈ ನೀರನ್ನು ಉಪಯೋಗಿಸುವುದರಿಂದ ಸುಮಾರು 3 ಮಿ.ಗ್ರಾಂ/ಲೀ. ನಷ್ಟು ಪ್ರಮಾಣದಲ್ಲಿ ನಮಗೆ ಹೆಚ್ಚಿನ ಪ್ರಾಣವಾಯುವು ದೊರೆಯುತ್ತದೆ.

"ತುಳಸಿ ಸಸ್ಯದ ವೈಜ್ಞಾನಿಕತೆ"

(1) ಜೀವರಸಾಯನ ಶಾಸ್ತ್ರದಲ್ಲಿ ತುಳಸಿ – ಕ್ರೋಮಿಯಂನ ಪಾತ್ರ (Role of Chromium in Bio-Chemisty)

ಹಿಂದೂ ಸಂಪ್ರದಾಯದಲ್ಲಿಯ ಪದ್ಧತಿಗಳು ತುಳಸಿಯ ರಹಸ್ಯವನ್ನು ಅಡಗಿಸಿಟ್ಟ (code)ಗಳಾಗಿವೆ. ಇದಕ್ಕೊಂದು ಉದಾಹರಣೆಯಾಗಿ ಮೂಲವಸ್ತುವಾದ ಕ್ರೋಮಿಯಂನ್ನು ತೆಗೆದುಕೊಳ್ಳೋಣ. ಇಂದಿನ ಪಿರಿಯಾಡಿಕ್ ಟೇಬಲ್‌ನಲ್ಲಿ

104 ಪ್ರಮುಖ ಮೂಲವಸ್ತುಗಳನ್ನು ಗುರ್ತಿಸಿದ್ದಾರೆ. ಇವುಗಳಲ್ಲಿ ಮನುಷ್ಯ ಮತ್ತು ಪ್ರಾಣಿಗಳಲ್ಲಿ 18 ಮೂಲವಸ್ತುಗಳು ಪ್ರಾಣಿಗಳ ಆರೋಗ್ಯ ಮತ್ತು ಬೆಳವಣಿಗೆಗೆ ಅತ್ಯಾವಶ್ಯಕವಾಗಿವೆ. ಈ ಮೂಲ ವಸ್ತುಗಳ ಬೆಳವಣಿಗೆಯ ಪ್ರತಿ ಘಟ್ಟದಲ್ಲಿಯೂ ಮತ್ತು ಜೀವ ದ್ರವ್ಯ (Metabolic) ಕ್ರಿಯೆಗಳಲ್ಲಿ ಅವಶ್ಯವಾಗಿ ಪೂರೈಕೆಯಾಗ ಬೇಕಾಗುತ್ತದೆ. ಈ ಮೂಲವಸ್ತುಗಳಲ್ಲದೆ ದೇಹ ಜೈವಿಕ ಚಕ್ರವು ಬೆಳೆಯುವ ಹಂತ (Vegetative)ದಿಂದ ಪ್ರಾರಂಭವಾಗಿ ಪುನರುತ್ಪತ್ತಿಯ (X-productive) ಹಂತದ ಅತ್ಯಗತ್ಯವಾಗಿ ಬೇಕಾಗುವ ಅಂಶಗಳಾಗಿವೆ. ಈ 22 ಮುಖ್ಯ ವಸ್ತುಗಳು ಈ ಕೆಳಗಿನಂತಿವೆ :

C, O – ಅತಿ ಮುಖ್ಯವಾದವುಗಳು (ಕಾರ್ಬನ್, ಆಕ್ಸಿಜನ್)

NPK (ನೈಟ್ರೇಟ್, ಫಾಸ್ಫರಸ್, ಪೊಟ್ಯಾಷಿಯಂ) – ಪ್ರಮುಖ ಮೂಲವಸ್ತುಗಳು.

Ca, Mg, S (ಕ್ಯಾಲ್ಷಿಯಂ, ಮೆಗ್ನೀಷಿಯಂ, ಸಲ್ಫರ್) – (Oligo) ಮೂಲವಸ್ತುಗಳು.

Zn, Cu, Fe, Mn (ಸತು, ತಾಮ್ರ, ಕಬ್ಬಿಣ, ಮ್ಯಾಂಗನೀಸ್) – (Minor Elements) ವಿರಳ ಮೂಲವಸ್ತುಗಳು.

Cr, Si, Co, L, Cl, Fl, Fe, B (ಕ್ರೋಮಿಯಂ, ಸಿಲಿಕಾ, ಕೋಬಾಲ್ಟ್, ಲೆಡ್, ಕ್ಲೋರೈಡ್, ಫ್ಲೋರೈಡ್, ಕಬ್ಬಿಣ ಬೋರಾನ್) ಮೂಲವಸ್ತುಗಳು.

ಮೇಲಿನ ಮೂಲವಸ್ತುಗಳಲ್ಲಿ ಇಲ್ಲಿ ಉಪಯೋಗಕ್ಕೆ ಬರುವಂತಹ ಮೂಲವಸ್ತುಗಳ ಬಗ್ಗೆ ಮಾತ್ರ ವಿವರಿಸಲಾಗಿದೆ. NPKಗಳು ಪ್ರಮುಖ ಮೂಲ ವಸ್ತುಗಳಾಗಿದ್ದು, ಸಸ್ಯಗಳಲ್ಲಿಯ ಬೆಳವಣಿಗೆ ಪ್ರಮಾಣ ಮತ್ತು ಪುನರುತ್ಪತ್ತಿಯ ಬೆಳವಣಿಗೆಗೆ ಕಾರಣವಾಗುವಂತಹ ಪೌಷ್ಠಿಕಾಂಶಗಳು, (Proteins) ಪ್ರೋಟೀನ್, ಕಾರ್ಬೋಹೈಡ್ರೇಟ್ ಮತ್ತು ಕೊಬ್ಬಿನ ಅಂಶಗಳ ಉತ್ಪತ್ತಿಗೆ ಪ್ರಾಣಿ ಹಾಗೂ ಸಸ್ಯ ಪ್ರಪಂಚಗಳೆರಡಕ್ಕೂ ಅತ್ಯವಶ್ಯಕವಾದ ಅಂಶಗಳಾಗಿವೆ.

ತೃತೀಯ ಹಂತ (ಓಲಿಗೊ) ಮೂಲ ವಸ್ತುಗಳು ಅಥವಾ ಎರಡನೆಯ ಹಂತದ ಮೂಲ ವಸ್ತುಗಳು, ದ್ಯುತಿ ಸಂಶ್ಲೇಷಣ ಕ್ರಿಯೆಗೆ ಅಲ್ಪಪ್ರಮಾಣದಲ್ಲಷ್ಟೇ ಬಳಕೆಯಾಗುತ್ತದೆ. ಇದಲ್ಲದೇ ಪ್ರಾಣಿ ಅಥವಾ ಮನುಷ್ಯರಲ್ಲಿಯ ಮೂಳೆ ಹಾಗೂ ಇನ್ನಿತರ ದೈಹಿಕ ಕಾರ್ಯಗಳಿಗೂ ಓಲಿಗೊ ಮೂಲ ವಸ್ತುಗಳು ಅವಶ್ಯಕವಾಗಿ ಬೇಕಾಗುತ್ತದೆ. ಈ ಕಡಿಮೆ ಬೇಡಿಕೆ ಅಥವಾ ವಿರಳ (trace) ವಸ್ತುಗಳೂ, ಪ್ರಾಣಿ, ಸಸ್ಯಶರೀರವಿಜ್ಞಾನ ಜೀವಕಣ (physiological), ಜೀವದ್ರವ್ಯ (metabolic), ರಸಾಯನಿಕ ಕಿಣ್ವ (enzymatic) ಹಾಗೂ ಇನ್ನಿತರ ಜೀವಕಣಗಳ ಉತ್ಕರ್ಷಣ ಕ್ರಿಯೆಗಳಿಗೆ ಕಾರಣವಾಗುತ್ತದಲ್ಲದೆ ದೇಹಭಾಗಗಳಿಗೆ ನಿರ್ದಿಷ್ಟ ಸ್ವರೂಪವನ್ನು ಒದಗಿಸುವ ಕ್ರಿಯೆಯನ್ನು ಜರುಗಿಸುತ್ತವೆ.

ದೇಹದಲ್ಲಿಯ ಕೊಬ್ಬಿನ ಅಂಶ (ಕೋಲಿಸ್ಟ್ರಾಲ್)ವನ್ನು ನಿಯಂತ್ರಿಸಲು ಕ್ರೋಮಿಯಂ (Chromium) ಎಂಬ ವಿರಳ ಮೂಲವಸ್ತುವಿನ ಪಾತ್ರವನ್ನು ವಿವರಿಸಲಾಗಿದೆ. ಮೇಲೆ ಹೇಳಿದ ಎಲ್ಲ 21 ಮೂಲ ವಸ್ತುಗಳನ್ನು ತುಳಸಿಯು ಸರಿಯಾದ ಪ್ರಮಾಣದಲ್ಲಿ (doses) ಹೀರಿಕೊಳ್ಳುತ್ತದೆ. ಅಲ್ಲದೆ, "ಭಾರತೀಯ ಗಣಿವಿಜ್ಞಾನದ ಅಧ್ಯಯನದ ಪ್ರಕಾರ ತುಳಸಿಯು ಮಣ್ಣಿನಲ್ಲಿರುವ ಕ್ರೋಮಿಯಂ (Chromium) ಅಂಶವನ್ನು ಹೆಚ್ಚಾಗಿ ಹೀರಿಕೊಳ್ಳುವ ಸಾಮರ್ಥ್ಯವನ್ನು ಹೊಂದಿದ್ದು ಅದನ್ನು ಕ್ರೋಮಿಯಂ ಗುರ್ತಿಸುವ ಸಸ್ಯ (Index plant) ಎಂದೇ ಹೇಳುತ್ತದೆ. ಇದನ್ನೇ ಇನ್ನೊಂದು ರೀತಿಯಲ್ಲಿ ಹೇಳಬಹುದಾದರೆ ಎಲ್ಲಿ ತುಳಸಿ ಬೆಳೆಯುತ್ತದೆಯೋ ಅಲ್ಲಿ ಕ್ರೋಮಿಯಂ ಮೂಲವಸ್ತುವಿದೆ ಎಂದೇ ಅರ್ಥ". ಹೀಗಾಗಿ ಸಿಲಿಕಾನ್‌ನಲ್ಲಿನ (Si4+) ಅಯಾನುಗಳಿಗೆ ಪರ್ಯಾಯವಾಗಿಯೂ ಬಳಸಲು ಬರುತ್ತದೆ. ಜೀವ–ರಸಾಯನಶಾಸ್ತ್ರದ ಸಂಶೋಧನೆ ನಡೆಸಿದ ಅಮೇರಿಕನ್ ಸೊಸೈಟಿ ಆಫ್ ಸಾಯಿಲ್ ಸೈನ್ಸಸ್ (American Society of Soil Sciences) ಸಂಸ್ಥೆಯವರು ಮನುಷ್ಯನ ಜೀವದ್ರವ್ಯ ಮತ್ತು ಕ್ರೋಮಿಯಂಗಳ ಸಂಬಂಧವನ್ನು ಹೇಳುತ್ತಾರೆ. ಇದರ ಪ್ರಕಾರ ಕ್ರೋಮಿಯಂ ಮೂಲವಸ್ತುವು ಕೋಲಿಸ್ಟ್ರಾಲ್‌ನ ನಿರ್ವಹಣೆ ಮತ್ತು ನಿಯಂತ್ರಣದಲ್ಲಿ ಮಹತ್ತರ ಪಾತ್ರವನ್ನು ವಹಿಸುತ್ತಾ ರಕ್ತ ಪರಿಚಲನೆಯ ಕ್ರಮವನ್ನು ನಿಯತಗತಿಯಲ್ಲಿ ಇಡುತ್ತದೆ.

ವಿದೇಶಗಳಲ್ಲಿ ತುಳಸಿಯ ಉಪಯೋಗ : ಪಾಶ್ಚಾತ್ಯ ದೇಶಗಳಲ್ಲಿ ತುಳಸಿಯ ವಿಭಿನ್ನ ಉಪಯೋಗಗಳು ಕಂಡುಬರುತ್ತವೆ. ಪ್ರಾಚೀನ ಗ್ರೀಕ್ ಸಂಸ್ಕೃತಿಯಲ್ಲಿ ಈ ಸಸ್ಯದ ಅತಿ ಹೆಚ್ಚಿನ ವಾಸನೆಯನ್ನು ಶಾಪವೆಂದು ಕರೆಯುತ್ತಾರೆ. ಆದರೆ ರೋಮನ್ನರು ಈ ವಾಸನೆಯ ಇಬ್ಬರ ನಡುವಿನ ಆತ್ಮೀಯತೆಯನ್ನು ಬೆಸೆಯುವ ಪ್ರೀತಿಯ ಸಂಕೇತವಾಗಿ ಸ್ವೀಕರಿಸಿದ್ದಾರೆ. ಏನೇ ಆಗಲೀ ತುಳಸಿಯು ಪ್ರಪಂಚದಾದ್ಯಂತ ಬಹುಕಾಲದಿಂದಲೂ ವ್ಯಾಪಕಗೊಂಡ ಒಂದು ಸಸ್ಯವಾಗಿದೆ.

ಟೋಮ್ಯಾಟೋದ ಸ್ಲೈಸ್‌ಗಳ ಮೇಲೆ ತುಳಸಿಯ ಹಿಟ್ಟನ್ನು ಚಿಮುಕಿಸಿ ಹಸಿ ಅಥವಾ ಬೇಯಿಸಿ ಅಥವಾ ಅದರ ರಸದೊಂದಿಗೆ ಮಿಶ್ರಣ ಮಾಡಿ ಉಪಯೋಗಿಸುವ ಪರಿಪಾಠವೂ ಇದೆ. ಹಾಗೆಯೇ ಆಲೂಗಡ್ಡೆಯ ಸಾಲಾಡ್ ಮತ್ತು ಸೂಪ್‌ಗಳಲ್ಲಿಯೂ ಬಳಸುತ್ತಾರೆ.

ಸಿಲೋನ್ ದೇಶದಲ್ಲಿ ವೀಳೆಯ ಎಲೆಗೆ ಬದಲಾಗಿ ತುಳಸಿಯನ್ನು ಉಪಯೋಗಿಸುವರು. ಆಫ್ರಿಕಾದಲ್ಲಿ ಸೊಳ್ಳೆ ಓಡಿಸಲು, ಮಲೇಷ್ಯಿಯಾದಲ್ಲಿ ಹಾವಿನ ವಿಷಕ್ಕೆ ಮದ್ದಾಗಿಯೂ ತುಳಸಿಯ ಉಪಯೋಗಕಾರಕ ಗುಣವನ್ನು ಬಳಸಿಕೊಳ್ಳುತ್ತಾರೆ.

ತುಳಸಿ ಮತ್ತು ಆಯುರ್ವೇದ : ಶ್ರೀಚಕ್ರದತ್ತನು ನಮ್ಮ ದೇಶದ ಆಯುರ್ವೇದ ಪದ್ಧತಿಯಲ್ಲಿ ತುಳಸಿಯನ್ನು ಕುರಿತಾದ ಅನೇಕ ಉಪಯೋಗಗಳ ಬಗೆಗೆ ತಿಳಿಸುತ್ತಾನೆ. ದೇಹದ ಶೀತ, ಕಫ, ಎದೆನೋವುಗಳಿಗೆ ತುಳಸಿ ಕೊಂಬೆಗಳ ಬಳಕೆಯನ್ನು

15 ದಿನಗಳ ತನಕ ಮಾಡಬೇಕೆಂದಿದ್ದಾನೆ. ತುಳಸಿಯ ಬೀಜಗಳನ್ನು ಪುಡಿಯಾಗಿ ಜೇನುತುಪ್ಪದೊಂದಿಗೆ 1:1 ಪ್ರಮಾಣದಲ್ಲಿ ಸೇವಿಸಿದಾಗ ಗನೋರಿಯಾ ಮುಂತಾದ ಲೈಂಗಿಕ ಕಾಯಿಲೆಗಳಿಗೂ ಮದ್ದಾಗಿ ಬಳಸಲು ಬರುತ್ತದೆ. ಹೊಯ್ಸಳ ರಾಜವಂಶದ ವೀರಬಲ್ಲಾಳ ಕ್ರಿ.ಶ.1185ರಲ್ಲಿ ಶಾಸನವೊಂದನ್ನು ತುಂಗಭದ್ರ ನದಿಯ ದಂಡೆಯ ಮೇಲೆ ತುಳಸಿ ಬೃಂದಾವನವನ್ನು ನಿರ್ಮಿಸಲು ಕೊಟ್ಟ ದತ್ತಿಯ ಪ್ರಸ್ತಾಪವಿದೆ.

(1) **ಹೊಟ್ಟೆಶೂಲೆಗೆ :** ಜೈಫಳದ ಹಣ್ಣುಗಳು ಮತ್ತು ತುಳಸಿಯ ಎಲೆಗಳನ್ನು ಚೆನ್ನಾಗಿ ಪುಡಿಮಾಡಿ ಒಂದೆರಡು ಚಿಟುಕೆ ಪೌಡರನ್ನು ಶುದ್ಧ ತುಪ್ಪದ ಜೊತೆಗೆ ಸೇರಿಸಿ ಒಂದು ಟೀ ಚಮಚದಷ್ಟು ಪ್ರಮಾಣದಲ್ಲಿ ದಿನಕ್ಕೆರಡು ಬಾರಿ ತೆಗೆದುಕೊಂಡರೆ ಒಂದೇ ದಿನದಲ್ಲಿ ಹೊಟ್ಟೆನೋವು ಶಮನವಾಗುತ್ತದೆ.

(2) **ಡಯೇರಿಯಾ :** ಮೇಲೆ ಹೇಳಿದಂತೆಯೇ ಔಷಧವನ್ನು ತಯಾರಿಸಬೇಕು.

(3) **ಕುಷ್ಟರೋಗ :** ತುಳಸಿಯ ಬೇರನ್ನು ಹಾಲಿನಲ್ಲಿ ನೆನೆಸಿಟ್ಟು ಸೂರ್ಯನ ಕಿರಣಗಳಲ್ಲಿ ಒಣಗಿಸಿ, ನಂತರ ಕುಷ್ಟರೋಗದಿಂದ ಬಳಲುವ ವ್ಯಕ್ತಿಗೆ ತೋಳಿಗೆ ಕಟ್ಟುವುದರಿಂದ ಈ ರೋಗ ನಿವಾರಣೆಯಾಗುತ್ತದೆ.

(4) **ಶೀಲೀಂದ್ರ ರೋಗ (Fungal Infection)** ತುಳಸಿಯ ಎಲೆಗಳು ಮತ್ತು ಟರ್ಮಿನಾಲಿಯ ಚಿಭುಲಾಗಳನ್ನು ಸೇರಿಸಿ ಪೇಸ್ಟನ್ನು ತಯಾರಿಸಬೇಕು. ಹೀಗೆ ತಯಾರಿಸಿದ ಪೇಸ್ಟನ್ನು ಬೆಚ್ಚಗೆ ಮಾಡಿ ಯಾವ ಭಾಗದಲ್ಲಿ ಶೀಲೀಂದ್ರ ರೋಗ ಉಂಟಾಗಿದೆಯೋ ಆ ಜಾಗದಲ್ಲಿ ದಿನಕ್ಕೊಂದು ಬಾರಿ ಪೂರ್ತಿ ಗುಣ ಹೊಂದುವವರೆಗೆ ಹಚ್ಚಬೇಕು.

(5) **ಹೊಟ್ಟೆಯನ್ನು ತಣ್ಣಗೆ ಇಡುವುದು :** ತುಳಸಿಯ ಬೀಜಗಳನ್ನು ಕೆಲ ನಿಮಿಷಗಳ ಕಾಲ ತಣ್ಣೀರಿನಲ್ಲಿ ನೆನೆ ಇಟ್ಟು ದಿನ ಕ್ಕೊಂದು ಬಾರಿ ಉಪಯೋಗಿಸಿದರೆ ಉಷ್ಣತೆಯು ಕಡಿಮೆಯಾಗಿ ಹೊಟ್ಟೆಯು ತಣ್ಣದಾಗುತ್ತದೆ.

(6) **ಮಕ್ಕಳಿಗೆ ನಿದ್ರೆ :** ತುಳಸಿಯ ಗಿಡ, ಎಲೆ, ಕಾಂಡಗಳನ್ನು ಅರೆದು ಪೇಸ್ಟನ್ನು ತಯಾರಿಸಿ ಮಕ್ಕಳ ಮೈಗೆ ಹಚ್ಚಿದರೆ ಚೆನ್ನಾಗಿ ನಿದ್ರೆ ಬರುತ್ತದೆ.

ತುಳಸಿ – ಸತುವಿನ ಅಂಶ (Zinc) ಮತ್ತು ಸಿಹಿಮೂತ್ರ ರೋಗ ವಿಧಾನ

ಮೂರು ವರ್ಷಗಳ ನಿರಂತರ ವ್ಯವಸಾಯ ಹೆಚ್ಚು ಬೆಳೆಯಬೇಕೆನ್ನುವ ಭರಾಟೆ ಹಾಗೂ ಕೆಲವೇ ರಸಾಯನಿಕಗಳ ಅತಿ ಹೆಚ್ಚಿನ ಉಪಯೋಗದಿಂದಾಗಿ ಮಣ್ಣಿನಲ್ಲಿರುವ ಅನೇಕ ಜೀವನಾವಶ್ಯಕವಾದ ಅಂಶಗಳು ಕಡಿಮೆಯಾಗುತ್ತಿರುವುದನ್ನು ನ್ಯಾಷನಲ್ ಬ್ಯೂರೋ ಆಫ್ ಸಾಯಿಲ್ ಸರ್ವೇ (National Bureau of Soil Survey) ಮತ್ತು ಲ್ಯಾಂಡ್ ಯೂಸ್ ಪ್ಲಾನಿಂಗ್ (ICAR) ಸಂಸ್ಥೆಯಿಂದ ನಡೆಸಿರುವ ಅಧ್ಯಯನಗಳಿಂದ ತಿಳಿದುಬರುತ್ತದೆ. ಮೃಣ್‌ವಿಜ್ಞಾನಿ ಡಾ। ಎನ್.ಜಿ. ರಘುಮೋಹನ್ ಅವರು ನಡೆಸಿದ ಅಧ್ಯಯನ ಪ್ರಕಾರ 'ಸತು'ವಿನ (zinc) ಸತ್ವವೂ ಮಣ್ಣಿನಲ್ಲಿ ಕಡಿಮೆಯಾಗಿರುವ ಜೀವನಾವಶ್ಯಕ ವಸ್ತುಗಳಲ್ಲಿ ಒಂದು. ಇದು ಸಿಹಿಮೂತ್ರ ರೋಗಕ್ಕೆ ಸಂಬಂಧಿಸಿದೆ. ನಮಗೆಲ್ಲ ಈಗ ಸಾಮಾನ್ಯವಾಗಿ ತಿಳಿದಿರುವಂತೆ ಮೂತ್ರಪಿಂಡಗಳಲ್ಲಿ ಉತ್ಪತ್ತಿಯಾಗುವ ಇನ್‌ಸುಲೀನ್ (Insulin) ಎನ್ನುವ ಹಾರ್ಮೋನ್ ರಕ್ತದಲ್ಲಿರುವ ಸಕ್ಕರೆಯನ್ನು ನಿಯಂತ್ರಿಸುತ್ತದೆ. ಮೂತ್ರಪಿಂಡಗಳಲ್ಲಿ ಉತ್ಪತ್ತಿಯಾಗುವ ಈ ಇನ್‌ಸುಲೀನ್‌ನನ್ನು ತಯಾರಿಸಲು ಎರಡು ಗ್ರಾಂಗಳಷ್ಟು ನಾರಿನ ಅಂಶವು ಕಾರಣ. ಇದೊಂದು ಜೀವದ್ರವ್ಯ (metabolic) ರಸಾಯನಿಕ ಕ್ರಿಯೆ. ಈ ಕ್ರಿಯೆಗಳು ಸುಗಮವಾಗಿ ಸಾಗುವುದು ಸಾಕಷ್ಟು ಪ್ರಮಾಣದಲ್ಲಿ ಸತುವಿದ್ದರೆ ಮಾತ್ರ ನಡೆಯುತ್ತದೆ. ಈ ಮೂಲ ವಸ್ತುವಿನ ಕೊರತೆಯಿರುವ ಭೂಮಿಯಲ್ಲಿ ವಾಸಿಸುವ ಜನರಾಗಲೀ ಪ್ರಾಣಿಗಳಾಗಲೀ ಅಲ್ಲಿ ಬೆಳೆಯುವ ಧಾನ್ಯ, ಸೊಪ್ಪು, ತರಕಾರಿ ಇತ್ಯಾದಿಗಳನ್ನು ಸೇವಿಸುತ್ತಾರಾದ್ದರಿಂದ ಈ ಸತುವಿನ ಜೀವಸತ್ವದ ಕೊರತೆಯಿಂದ ಬಳಲುತ್ತಾ, ಸಿಹಿಮೂತ್ರ ರೋಗಕ್ಕೆ ಗುರಿಯಾಗುತ್ತಾರೆ. ಈ ಸತುವಿನ ಅಂಶವು ಮಣ್ಣಿನ ಪಿ.ಎಚ್.ಗೂ ಸಂಬಂಧ ಹೊಂದಿದೆ. ಹೀಗಾಗಿ ಎಲ್ಲಿ ಕಪ್ಪುಮಣ್ಣು ಹೆಚ್ಚಾಗಿರುತ್ತದೆಯೋ ಅಂತಹ ಎಡೆಗಳಲ್ಲಿ ಕ್ಷಾರೀಯ ಅಂಶವು ಹೆಚ್ಚಾಗಿ ಈ ಸತುವಿನ ಅಂಶವು ನಾಶ ಹೊಂದುತ್ತದೆ.

ಸಿಹಿಮೂತ್ರರೋಗ ನಿಧಾನವಾಗಿ ತುಳಸಿ : ತುಳಸಿ ಒಂದು ಅಚ್ಚರಿಯ ಸಸ್ಯ. ಇದು ಬೇರೆ ಎಲ್ಲಾ ಸಸ್ಯಗಳಿಗಿಂತ ಸತುವನ್ನು ಹೆಚ್ಚಾಗಿ ಭೂಮಿಯಿಂದ ಹೀರಿಕೊಳ್ಳಬಲ್ಲದು. ಈ ಕೆಳಗಿನ ಅಧ್ಯಯನದಿಂದ ಈ ವಿಷಯವು ತಿಳಿದು ಬಂದಿದೆ.

40 ಜನ ಎರಡನೆಯ ವಿಧದ ಸಕ್ಕರೆ ಕಾಯಿಲೆಯಿಂದ (Type II diabetic) ನರಳುತ್ತಿರುವವರನ್ನು 4 ವಾರಗಳ ಕಾಲ2.5 ಗ್ರಾಂ ಪ್ರಮಾಣದ ತುಳಸಿಯ ಪುಡಿ (powder)ಯನ್ನು ಒಂದು ವಾರ ಬಿಟ್ಟು ಇನ್ನೊಂದು ವಾರದಂತೆ ಸೇವಿಸಲು ಕೊಡಲಾಯಿತು. 4ನೇ ವಾರ ತಪಾಸಣೆ ನಡೆಸಿದಾಗ ಶೇಕಡಾ 17.6% ರೋಗಿಗಳಲ್ಲಿ ಊಟಕ್ಕೆ ಮುಂಚಿನ ಗ್ಲುಕೋಸ್ (fasting blood glucose) ಮತ್ತು ಊಟಕ್ಕೆ ನಂತರದ (post prandial blood glucose) 73% ದಷ್ಟು ಕಡಿಮೆಯಾಗಿರುವುದು ಕಂಡುಬಂದಿತು.

ನೀರಿನ ಗುಣ : ನಮ್ಮ ಶಾಸ್ತ್ರ ಇಲ್ಲಿ ಮಾರುವುದಲ್ಲ । ಸುಮ್ಮನಿದ್ದರೆ ಯಾರು ಕೇಳುವರಿಲ್ಲ ॥ಪ॥ ಹೆಣ್ಣಿಗೆ ಜಾರತ್ವ ಗುಣತರವಲ್ಲ । ತಣ್ಣೀರು ಬೇಸಿಗೆ ಗುಣ ತೋರಲಿಲ್ಲ । ಘನ್ನ ಪುರಂದರವಿಠಲನ ಭಕ್ತರೆ । ಅನ್ಯಾಯವರಿಯದೆ ಭವ ನೀಗುವಿರಲ್ಲ॥ (ಪು.139). ಅನ್ಯಾಯವರಿಯದೆ– ಇದು ಸಾಧನಾ ಶರೀರವೆಂಬುದನ್ನು ಅರಿತುಕೊಳ್ಳದೆ ಸಂಸಾರ ಸಾಗರದಲ್ಲಿ ಮುಳುಗಿರುವುದು ತರವಲ್ಲ; ಅದು ಬಾಳ್ವೆಯನ್ನು ವ್ಯರ್ಥವಾಗಿ ಕಳೆದಂತಾಗುತ್ತದೆ.

ಹಿಂದೂ ದೇಶದ ನೀರಿನ ಕೆಲವು ಭೂ ವೈಜ್ಞಾನಿಕ ಸ್ಥಳನಾಮಗಳು : ಪಂಢರಪುರ (ಮಹಾರಾಷ್ಟ್ರ), ವೇಲಾಪುರ(ಬೇಲೂರು ಕರ್ನಾಟಕ), ಕಾಳಿಂದಿ (ಉತ್ತರ ಪ್ರದೇಶ), ಸ್ವಾಮಿ ಪುಷ್ಕರಣಿ (ತಿರುಪತಿ,ಆಂಧ್ರ ಪ್ರದೇಶ) ಕೊಲ್ಲಾಪುರ (ಮಹರಾಷ್ಟ್ರ) ಇತ್ಯಾದಿ., ಊರುಗಳ ಉಲ್ಲೇಖವಿರುವ ದೇವರ ನಾಮಗಳು.

ಬೇಲೂರಿನಲ್ಲಿರಚನೆ(ಪು.357,359) ಅಳುವುದ್ಯಾತಕೊ ರಂಗ । ಬಾಲಕತನದಲಿ ಗೋಪಾಲಕರೊಡಗೂಡಿ। "ಕಾಳಿಂದಿ" (ಉತ್ತರ ಪ್ರದೇಶ)"ಮಡುವನು""ಕಲಕಿದ" (Producing the Sediment) ಕಾರಣ ಕಾಲು ಉಳುಕಿತೇ ರಂಗಯ್ಯ ॥2॥ ತುರುವ ಕಾಯಲು ಪೋಗೆ ಭರದಿ "ಇಂದ್ರ ಮಳೆಗರೆಯೆ" । ಬೆರಳಲಿ ಬೆಟ್ಟವ ನೆತ್ತಿದ ಕಾರಣ । ಬೆರಳು ಉಳುಕಿತೆ ನಿನಗೆ ರಂಗಯ್ಯ ॥3॥ ಶರಣು "ವೇಲಾಪುರದ ಚೆಲುವ ಚೆನ್ನಿಗರಾಯ "। (ಕ್ರಿ.ಶ.1117)ಪರಿಪರಿ ವಿಧದಿಂದ ಶರಣರ ಪೊರೆಯುವ ವರದ ಪುರಂದರ ವಿಠ್ಠಲರಾಯ ॥5॥

ಬೇಲೂರು ಯಗಚಿ ನದಿಯ ದಂಡೆಯ ಮೇಲೆ ಇದೆ. ಸಮುದ್ರ ಮಥನ ಸಂದರ್ಭದಲ್ಲಿ ರಾಕ್ಷಸರಿಗೆ ಅಮೃತದ ಭಾಗ ಕೊಡದಿರುವ ಸಲುವಾಗಿ ವಿಷ್ಣುವು ಮೋಹಿನಿಯಂತೆ ಮೈ ದಳೆದು ಬಂದುದು ಈ ಮೂರ್ತಿಯ ಹಿನ್ನೆಲೆ. ಈ ವಿಜಯ ನಾರಾಯಣನು (ಶಾಸನೋಕ್ತ ಹೆಸರು ಎಪಿಗ್ರಾಫಿಯಾ ಕರ್ನಾಟಿಕಾ, ಹಾಸನ ಸಂಪುಟ). ಈ ವಿಗ್ರಹವು ತುಂಬಾ ಲಾವಣ್ಯ ಪೂರ್ಣವಾಗಿರುವುದರಿಂದ "ಚೆಲುವ ಚೆನ್ನ"" ಚೆನ್ನಿಗರಾಯ" ಎನ್ನುವ ಹೆಸರುಗಳೂ ಇವೆ.

"ನೋಡು ನೋಡು ವೆಂಕಟೇಶ । ನೋಡು ನೋಟವ ಅವನು ಆಡುವಾಟವ । ಬೇಟೆಗಾಗಿ ಹೊರಟು ಬಂದ ಪ್ರಖ್ಯಾತವ । (ಪು.331,335, 336) ಅಡವಿಯೊಳಗೆ ದಾರಿಲ್ಲೆಂದು ಜುಲ್ಮೆಮಾಡಿದ । ಸ್ವಾಮಿ ಜುಲ್ಮೆಮಾಡಿದ ॥57॥ "ಸ್ವಾಮಿ ಪುಷ್ಕರಣಿ"ತೀರದಲ್ಲಿ ವಾಸಮಾಡಿದ॥58॥ "ಕೊಲ್ಲಾಪುರ" ದಲ್ಲಿ ತನ್ನ ನಾರಿಯಿಟ್ಟನೆ। ಸ್ವಾಮಿ ನಾರಿ ಇಟ್ಟನೆ॥60॥ "ಪನ್ನಗಾದ್ರಿಪತಿ" ನಮಗೆ ನೀ ಗತಿ ।ಯೆಂಬುವ ಮತಿಯರಿತ ಈ ಸ್ಥಿತಿ ॥ಪ॥ (ಪು.337, ಪನ್ನಗ=ಹಾವು, ಶೇಷ, ಅದ್ರಿ=ಬೆಟ್ಟ;ಶೇಷಾಚಲಪತಿ ವಿವರ)

ಶರಣು "ವೇಂಕಟರಮಣ" (ತಿರುಪತಿ) ನಿನ್ನ । ಚರಣವ ನಂಬಿದೆ ನಾನು ॥ಪ॥(ಪು.322) ದೇಶಧಿಕವಾದ ನಮ್ಮ । ಶೇಷಗಿರಿಯಲಿ ವಾಸ । ಶ್ರೀವೇಂಕಟಗಿರಿ ತಿರುಮಲೇಶ ॥3॥ ತಿರುಪತಿ ವೆಂಕಟ ರಮಣ(ಪು.270)

ಸಾರಂಶ : ಮೇಲೆ ಪ್ರಸ್ತುತಪಡಿಲಾಗಿರುವ ಸಂ–ಪ್ರಬಂಧದ ಸಾರವನ್ನು ಕೆಳಗಿನಂತೆ ಸಂಗ್ರಹಿಸಲಾಗಿದೆ.

1) "ಕರ್ನಾಟಕ ಸಂಗೀತದ ಪಿತಾಮಹ"ರೆನಿಸಿರುವ ಶ್ರೀಪುರಂದರದಾಸರ(ಕಾಲ ಕ್ರಿ.ಶ.1485–1565)ರಚಿಸಿರುವ ಹಾಡುಗಳಲ್ಲಿ ಮೊದಲನೆಯದೆನಿಸುವ ಪಿಳ್ಳಾರಿಗೀತೆಗಳಲ್ಲಿಯೇ ಜಲ ವಿಜ್ಞಾನದ ಸೂಚಿಪದ "ಸಾಗರ" ಬಳಸಿದ್ದಾರೆ. ನಂತರದ

"ಕೆರೆಯ ನೀರನು ಕೆರೆಗೆ ಚೆಲ್ಲಿ" ಎನ್ನುವಲ್ಲಿ ಕನ್ನಡದ ಗಾದೆಯನ್ನೇ ಬಳಸಿರುತ್ತಾರೆ. ಅಷ್ಟೇ ಅಲ್ಲದೇ ಮುಂದುವರೆದು " ವರವ ಪಡೆದವರಂತೆ ಕಾಣಿರೋ" ಪ್ರಕೃತಿ ನೀಡಿದ್ದನ್ನು ಆಕೆಗೇ ಸಮರ್ಪಿಸಿ ಉದ್ಧಾರವಾಗ ಬಹುದೆನ್ನುವುದನ್ನು ಇಂದು ನಾವು ಸಂಗೀತವನ್ನು ಬಳಸಿ ಹೇಳಿದಾಗ ಎಂತಹ ಕಷ್ಟ ಕರವಾದುದನ್ನೂ ಸುಲಭವಾಗಿ ಜನರ ಮನಸ್ಸಿಗೆ ನಾಟುತ್ತದೆ ಎನ್ನುವುದನ್ನು ಸ್ಪಷ್ಟಪಡಿಸಿರುತ್ತಾರೆ. ಇದು ಕನ್ನಡ ದೇಸೀ ನುಡಿಯ ವೃದ್ಧಿ–ಸಂವೃದ್ಧಿಗಳಿಗೆ ದಾಸರು ತೋರಿಸಿ ಕೊಟ್ಟ ವಿಭಿನ್ನ ಹೊಸ ಆಯಾಮ. "ಜಲ ಚಕ್ರದ" ವಿವರಗಳ ಸಂಕಲಿತ ಸ್ವರೂಪ.

2) ಜೀವ ಜಾಲದ ಇರುವಿಕೆ ಬೆಳವಣಿಗೆ ಆಗುವುದೇ ನೀರಿನ ಮೂಲಕ. ನೀರಿಲ್ಲದೇ ಜೀವ–ಜೀವನ–ಇಲ್ಲ (No water no life) ಎನ್ನುವ ಜೀವ ವಿಜ್ಞಾನದ (Bio-Scientific) ಸೂತ್ರವನ್ನೇ ಹೀಗೆ ಪ್ರಸ್ತುತ ಪಡಿಸಿರುವುದನ್ನು ಇಂದಿನ ವಿಜ್ಞಾನ ಕ್ಷೇತ್ರಕ್ಕೆ ಅವರ ಕೊಡುಗೆಯಲ್ಲದೇ ಮತ್ತೇನು? : ನೀಲ ಮೇಘವ ಪೋಲುವ ಕೂಸು ।.... "ಅಂಡದೊಳಗೆ ಹರಿದಾಡುವ (Sperm which flows in the Liquid prevailing in the Fetus) ಕೂಸು"ಪ್ರಚಂಡ ಪುರಂದರ ವಿಠ್ಠಲ ಕೂಸು.

3) ತೀರ್ಥ ಕ್ಷೇತ್ರವನ್ನು ಸಂದರ್ಶಿಸುವ ನೆಲೆಯಿಂದಲೇ, "ಜಲತಾಣ"ಗಳಾದ ಇಂದಿಗೂ ಕಂಡು ಬರುವ "ಸ್ವಾಮಿ ಪುಷ್ಕರಣಿ", ಆಕಾಶಗಂಗೆ, ಇತ್ಯಾದಿಗಳನ್ನು ತಿಳಿಸುವುದರಿಂದ ಅವು ಈಗ ಎಲ್ಲಿವೆ ಎನ್ನುವ "ಭೂ ವೈಜ್ಞಾನಿಕ ಸ್ಥಳ ಚಿತ್ರಣ"ಗಳನ್ನು ಒದಗಿಸಿರುತ್ತಾರೆ.

4) ನೀರಿನಗುಣಮಟ್ಟ (Water Quality)ವನ್ನು ಹೇಗೆ ಹೆಚ್ಚಿಸಲು ಬರುತ್ತದೆ ಎನ್ನಲು ಒಂದು ಉತ್ತಮ ಉದಾಹರಣೆ: "ಒಂದು ದಳ ಶ್ರೀ ತುಳಸಿ ಬಿಂದು ಗಂಗೋದಕ".

5) ಇಂತಹ ಅನೇಕ ಅಂತರ್ ಶಿಸ್ತೀಯ ಆಯಾಮಗಳನ್ನು ಒಳಗೊಂಡ ಕನ್ನಡದ ಭಾಷೆಯ, ಕರ್ನಾಟಕಕ್ಕೆ ದಾಸ ಸಾಹಿತ್ಯದ ಹಿರಿಮೆಯನ್ನು, ಜೀವ– ದೇವರ ಸಾಮಿಪ್ಯ ಸಾರ್ಥಕ್ಯಗಳನ್ನು ಪ್ರಚುರ ಪಡಿಸಿರುವ ಶ್ರೀ ಪುರಂದರ ದಾಸರು ಪ್ರಾತಃ ಸ್ಮರಣೀಯರು.

ಆಧಾರ ಸೂಚಿ :

1. *ಪುರಂದರ ಸಾಹಿತ್ಯ ದರ್ಶನ* ಸಂ.1 ಪ್ರ. ಸಂಸ್ಕೃತಿ ನಿರ್ದೇಶನಾಲಯ, 1985.
2. *ಮಾನಸೋಲ್ಲಾಸ, ಅಷ್ಟಾಂಗ ಹೃದಯ ಸೂತ್ರಸ್ಥಾನ ಅಧ್ಯಾಯ* 5, ಸರ್ವಾಂಗ ಸುಂದರ ಟೀಕೆ
3. *Can water be affected by our words?* Dr. Masaru Emoto, a Japanese scientist
4. *Vijayanagar - Progress of Research,* Vol.III, Mysore 1991
5. *ಕರ್ನಾಟಕದಲ್ಲಿ ಜಲವಿಜ್ಞಾನ (ಶಾಸನ ಮತ್ತು ಸಾಹಿತ್ಯ ಕೃತಿಗಳ ಆಧಾರಿತ)* ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಪ್ರಸ್ತುತ ಪಡಿಸಲಾಗಿರುವ ಅಪ್ರಕಟಿತ ಮಹಾಪ್ರಬಂಧ– ಡಾ. ಹರಿಹರ ಶ್ರೀನಿವಾಸರಾವ್

ಚಿತ್ರ ಸಹಕಾರ : ಶ್ರೀಮತಿ ಎಸ್. ಮಾಲತಿ ರಾವ್ ಮತ್ತು ಸತ್ಯನಾರಾಯಣ, ಫಿಲ್ಮಂ ಡಿವಿಜನ್, ಕೇಂದ್ರೀಯ ಸದನ, ಬೆಂಗಳೂರು.

06. ವಿರೂಪಾಕ್ಷ ದೇವಾಲಯದ ಕನಕಗಿರಿ ಗೋಪುರದ ನಿರ್ಮಾತೃ ರಾಯಣರಾಜ

– ಡಾ. ಎಸ್.ವೈ. ಸೋಮಶೇಖರ್

ಹಂಪೆಯ ಪ್ರಾಚೀನ ಹಾಗೂ ಪ್ರಸಿದ್ಧ ದೇವಾಲಯವೆಂದರೆ ವಿರೂಪಾಕ್ಷ ದೇವಾಲಯವಾಗಿದೆ. ಈ ದೇವಾಲಯವು ಕ್ರಿ.ಶ. 699ರ ಹೊತ್ತಿಗೆ ಅಸ್ತಿತ್ವದಲ್ಲಿತ್ತು. ಇದು ಕಾಲಾಂತರದಲ್ಲಿ ಜೀರ್ಣೋದ್ಧಾರಗೊಳ್ಳುತ್ತಾ ಬಂದಿರುವುದು ಚರಿತ್ರಾರ್ಹ ಸಂಗತಿ. ಈ ದೇವಾಲಯವು ಗರ್ಭಗೃಹ, ಅಂತರಾಳ, ಸಭಾಮಂಟಪಗಳಿಂದ ಆರಂಭವಾಗಿ ಮುಂದೆ ನವರಂಗ, ಮಹಾಮಂಟಪ(ರಂಗಮಂಟಪ), ಬಲಿಪೀಠ, ಧ್ವಜಸ್ತಂಭ, ದೀಪಸ್ತಂಭ, ಪರಿವಾರ ದೇವತಾಗೃಹಗಳು, ಅಡಿಗೆಸಾಲೆ ಮೊದಲಾದವುಗಳನ್ನು ಹೊಂದಿರುವುದು ನೈಜನೀಯ. ಅಂತೆಯೇ ಈ ದೇವಾಲಯದಲ್ಲಿ ಎರಡು ಪ್ರಾಕಾರಗಳು, ಮೂರು ಮಹಾದ್ವಾರ ಗೋಪುರಗಳನ್ನೂ ಕಾಣಬಹುದು. ಇವುಗಳನ್ನು ರಾಯಗೋಪುರಗಳೆಂದೇ ಕರೆಯುವುದು ರೂಢಿ. ಇವುಗಳನ್ನು ಪ್ರತ್ಯೇಕ ಹೆಸರುಗಳಿಂದಲೂ ಕರೆಯಲಾಗುತ್ತದೆ. ಪೂರ್ವಾಭಿಮುಖವಾಗಿ ಇರುವ ಮುಖ್ಯ ದ್ವಾರಗೋಪುರವನ್ನು ಶಾಸನಗಳಲ್ಲಿ ಹಿರಿಯಗೋಪುರವೆಂದೂ, ಇದು ಬಿಷ್ಟಪ್ಪಯ್ಯ ಗೋಪುರವೆಂದೂ ಕರೆಯಲಾಗುತ್ತದೆ. ಒಳಭಾಗದಲ್ಲಿ ಬರುವ ಇನ್ನೊಂದು ಚಿಕ್ಕದಾದ ಗೋಪುರವು ರಾಯಗೋಪುರವಾಗಿದ್ದು, ಇದನ್ನು ಕೃಷ್ಣದೇವರಾಯ ತನ್ನ ಪಟ್ಟಾಭಿಷೇಕದ ಸಂದರ್ಭದಲ್ಲಿ ಕಟ್ಟಿಸಿದನೆಂಬುದು ಶಾಸನದಿಂದ ದೃಢವಾಗುವುದು. ಹಾಗೆಯೇ ಮೂರನೆಯ ಹಾಗೂ ಉತ್ತರಾಭಿಮುಖವಾಗಿರುವ ಗೋಪುರವನ್ನು ಕನಕಗಿರಿ ಗೋಪುರವೆಂದು ಇಂದು ಕರೆಯಲಾಗುತ್ತದೆ. ಆದರೆ ಈ ಗೋಪುರದ ಹೆಸರು ಮತ್ತು ಅದರ ನಿರ್ಮಾಣದ ಬಗೆಗೆ ಇದುವರೆಗೆ ಖಚಿತವಾದ ಅಧ್ಯಯನಗಳು ನಡೆದಿರುವುದಿಲ್ಲ. ನಡೆದಿದ್ದರೂ ಅವುಗಳಿಗೆ ಅಧಿಕೃತ ಆಕರಗಳೊಂದಿಗೆ ಸ್ಪಷ್ಟಪಡಿಸಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಪ್ರಸ್ತುತ ವಿಷಯವನ್ನು ವಿವಿಧ ಆಕರಗಳೊಂದಿಗೆ ಚರ್ಚಿಸಿ ಖಚಿತ ನಿರ್ಧಾರಕ್ಕೆ ಬರುವ ಪ್ರಯತ್ನವನ್ನು ಮಾಡಲಾಗಿದೆ.

ಇದುವರೆಗಿನ ಅಧ್ಯಯನಗಳಲ್ಲಿ ಕನಕಗಿರಿ ಗೋಪುರವನ್ನು ಕಟ್ಟಿಸಿದ ಬಗೆಗೆ ಕೆಲವು ಅಧ್ಯಯನಗಳು ನಡೆದಿರುವೆ. ಅವುಗಳಲ್ಲಿ "ಕನಕಗಿರಿ ಗೋಪುರ ನಿರ್ಮಾಣ ಕಾಲ ಮತ್ತು ಕರ್ತೃ: ಒಂದು ಪರಿಶೀಲನೆ" ಎಂಬ ಪ್ರಬಂಧದಲ್ಲಿ ಶರಣಬಸಪ್ಪ ಕೋಲ್ಕಾರ ಅವರು ಚರ್ಚಿಸುತ್ತಾ ಕನಕಗಿರಿ ಗೋಪುರದ ನಿರ್ಮಾಣ ಕಾಲವನ್ನು ಕ್ರಿ.ಶ. 1510 ರಿಂದ 1535 ಎಂದೂ, ಈ ಗೋಪುರವನ್ನು ಕನಕಗಿರಿ ಪಾಳೆಯಗಾರ ನವಾಬ ಉಡುಚನಾಯಕನು ಕಟ್ಟಿಸಿದನೆಂಬ ತೀರ್ಮಾನಕ್ಕೆ ಬಂದಿದ್ದಾರೆ. ಇದಕ್ಕೆ ಅವರು ಇಂದು ಕರೆಯುತ್ತಿರುವ ಕನಕಗಿರಿ ಎಂಬ ಹೆಸರು ಹಾಗೂ ಐತಿಹ್ಯಗಳ ಆಕರಗಳನ್ನು ನೀಡಿದ್ದಾರೆ.[1] ಇವರನ್ನು ಹೊರತುಪಡಿಸಿದರೆ ಕನಕಗಿರಿ ಗೋಪುರದ ನಿರ್ಮಾಣದ ಬಗೆಗೆ ಹೆಚ್ಚಿನ ಅಧ್ಯಯನಗಳು ನಡೆದಿರುವುದಿಲ್ಲ.

ಈ ಹಿನ್ನೆಲೆಯಲ್ಲಿ ಆರಂಭಗೊಂಡ ಪ್ರಸ್ತುತ ಅಧ್ಯಯನಕ್ಕೆ ಕನಕಗಿರಿ ಗೋಪುರದ ಮಹಾದ್ವಾರದ ಕಂಬವೊಂದರ ಮೇಲಿರುವ ರಾಯಣರಾಜ ಎಂಬ ಶಾಸನ ಹಾಗೂ ಅದರ ಪಕ್ಕದಲ್ಲಿ ಕೆತ್ತಲಾದ ಸುಂದರವಾಗಿ, ಆಳವಾಗಿ ಕಡೆಯಲಾದ

ಉಬ್ಬುಶಿಲ್ಪಗಳು ಕುತೂಹಲ ಉಂಟುಮಾಡಿದವು ಎಂಬುದನ್ನು ಹೇಳಲೇಬೇಕು. ಇದಕ್ಕೆ ಪೂರಕವೆನ್ನುವಂತೆ ಇದೇ ಗೋಪುರದ ಉತ್ತರ ದಿಕ್ಕಿನಲ್ಲಿರುವ ಗಾರೆಗಚ್ಚಿನಲ್ಲಿ ಮಾಡಲಾದ ಕೈಮುಗಿದು ನಿಂತ ಸ್ತ್ರೀ ಮತ್ತು ಪುರುಷ ಶಿಲ್ಪಗಳು ಹಾಗೂ ಪುರುಷಶಿಲ್ಪದ ಕೆಳಗೆ ಬರೆಯಲಾದ ತಿಂಮಣ ಎಂಬ ಹೆಸರುಗಳು ಅಧ್ಯಯನಕ್ಕೆ ಇನ್ನಷ್ಟು ಮಾಹಿತಿಗಳು ಲಭ್ಯವಾಗಿ ಅಧ್ಯಯನದಲ್ಲಿ ಇನ್ನಷ್ಟು ಆಸಕ್ತಿಯನ್ನು ಕೆರಳಿಸಿದವೆಂದರೆ ಅತಿಶಯೋಕ್ತಿಯಾಗಲಾರದು.

ವಿಜಯನಗರದ ಇತಿಹಾಸದಲ್ಲಿ ಕ್ರಿ.ಶ.1516 ರಿಂದ 1573ರವರೆಗೆ ಶಾಸನಗಳಲ್ಲಿ ಈ ಮೇಲಿನ ಹೆಸರಾದ ರಾಯಣರಾಜ, ರಾಯೊಡೆಯ, ರಾಯನೃಪ ಎಂಬ ಹೆಸರುಗಳು ಉಲ್ಲೇಖವಾಗಿವೆ. ರಾಯಣರಾಜ ಎಂಬುವವನ ಉಲ್ಲೇಖ ಕೃಷ್ಣದೇವರಾಯನ ಕ್ರಿ.ಶ. 1516ರ ಶಾಸನ ಹಾಗೂ ಅಚ್ಯುತರಾಯನ ಕ್ರಿ.ಶ.1532ರ ಶಾಸನಗಳಲ್ಲಿ ಕಂಡುಬರುತ್ತದೆ. ಈ ಶಾಸನಗಳು ಹಾಸನ ತಾಲೂಕಿನ ಬಿಟ್ಟುಗೊಂಡಹಳ್ಳಿ[2], ಚನ್ನರಾಯಪಟ್ಟಣ ತಾಲೂಕಿನ ನುಗ್ಗೇಹಳ್ಳಿ[3], ಆಂಧ್ರಪ್ರದೇಶದ ಚಂದ್ರಗಿರಿ ಬಳಿಯ ಕಾಳಹಸ್ತೀಶ್ವರ ದೇವಾಲಯ[4] ಮತ್ತು ತಮಿಳುನಾಡಿನ ಕಂಚಿಯ ಅರುಳಾಳ್ ಪೆರುಮಾಳ್[5] ದೇವಾಲಯಗಳಲ್ಲಿವೆ.

ಕೃಷ್ಣದೇವರಾಯನ ಕ್ರಿ.ಶ. 1516ರ ಬಿಟ್ಟುಗೊಂಡಹಳ್ಳಿ ಶಾಸನದಲ್ಲಿ "ಶ್ರೀ ವೀರಪ್ರತಾಪ ಕ್ರುಷ್ಣರಾಯ ಮಹಾರಾಯರು ಗಜಪತಿಯ ಮೇಲೆ ದಂಡಯಾತ್ರೆಯ ಮಾಡಿ ಜಯಸ್ತಂಭವನೆತ್ತಿಸಿ ಬಹಾಗ ಅವರ ದಾಳವಾಯಿಗಳು ಆತ್ರೇಯಗೋತ್ರದ ಸೋಮವಂಶದ ಅಳಿಯ ತಿಂಮರಸ ಒಡೆಯರ ಮಕ್ಕಳು ಆಕಲ್ಪಂ ವಿರೂಪಾಂಬಿಕಾ ಪರಿವ್ರಿಡ ಶ್ರೀ ತಿಂಮರಾಜಾತ್ಮಜೋ ಜಿಯಾತ್ ಶ್ರೀ ಭುವನಯಿಕ ವೀರವಿರುದೋ ರಾಯಕ್ಷಮಾವಲ್ಲಭಃ .... ಯಿಂತೀ ಬಿರುದಾವಳಿಯನುಳ್ಳ ರಾಯವೊಡೆಯರ ಕೊಮಾರ ಧನಂಜಯರಾಯವೊಡೆಯರು ಕೊಟ್ಟ ಆಘ್ರಾರದ ಕ್ರಮವೆಂತೆಂದರೆ..." ಎಂದು ಹೇಳುತ್ತಾ, "ಹಾಸನದ ಸ್ಥಳದ ಬಿಟ್ಟುಗೊಂಡನಹಳ್ಳಿಗೆ ಪ್ರತಿನಾಮಧೇಯವಾದ ಧನಂಜಯ ಗ್ರಾಮದ ಚತುಸೀಮೆಯ ವಿವರ" ಎಂದಿದೆ. ಇದೇ ಶಾಸನದ ಕೊನೆಯಲ್ಲಿ "....ತಿಪ್ಪಣ ಜೋಯಿಸರ ಮಕ್ಕಳು ಚನ್ನದೀಕ್ಷಿತರಿಗೆ ಆತ್ರೇಯ ಗೋತ್ರದ ತಿಂಮರಾಜಗಳ ರಾಯಣರಾಜಗಳ ಧನಂಜಯ ರಾಜಗಳು ಸಹಿರಣ್ಯೋದಕ ದಾನಾಪೂರ್ವದಿ ನಿಂಮ ಕುಲಪಾರಂಪರೆಯಾಗಿ ಸುಖದಲಿ ಅನುಭವಿಸಿರಿ ಎಂದು ಕೊಟ್ಟ ಆಘ್ರಾರ" ಎಂದಿದೆ. ಇದರಿಂದ ಧನಂಜಯರಾಜನ ತಂದೆ ರಾಯೊಡೆಯ ಎಂಬುದು ಹಾಗೆಯೇ ಅವನ ಅಜ್ಜ ಮತ್ತು ಅಜ್ಜಿ ಅಳಿಯ ತಿಂಮರಾಜ ಮತ್ತು ವಿರೂಪಾಂಬಿಕೆ ಎಂಬುದು ಸ್ಪಷ್ಟವಾಗುತ್ತದೆ. ಅಲ್ಲದೆ ಅಳಿಯ ತಿಮ್ಮರಸನು ಕೃಷ್ಣದೇವರಾಯನ ದಳವಾಯಿಯಾಗಿದ್ದನೆಂಬುದೂ, ಇವರು ಆತ್ರೇಯ ಗೋತ್ರಕ್ಕೆ ಸೇರಿದವರೆಂಬುದೂ ಇದೇ ಶಾಸನದಿಂದ ದೃಢವಾಗುವುದು.

ಚನ್ನರಾಯಪಟ್ಟಣ ತಾಲೂಕಿನ ನುಗ್ಗೇಹಳ್ಳಿಯ ಶಾಸನವೂ ಕೂಡ ದಳವಾಯಿ ತಿಮ್ಮರಾಜ ಮತ್ತು ವಿರೂಪಾಂಬಿಕೆ ಹಾಗೂ ರಾಯನೃಪನನ್ನು ಉಲ್ಲೇಖಿಸುತ್ತಾ ಕೊನೆಯಲ್ಲಿ "ಸೋಮ ವಂಶೋದ್ಭವ ತಿಂಮರಾಜ ವಿರೂಪಾಂಬಿಕಾವರ ಕುಮಾರ ಗಜಬೇಟೆರಾಜಗಳೂ ಶ್ರೀ ತಿರುವೇಂಗಳನಾಥ ದೇವರ ಪ್ರತಿಷ್ಟೆಯ ಮಾಡಿ ಕಟ್ಟಿಗೆಯಹಳಿಯನೂ ಧಾರೆಯನೆರೆದು ಕೊಟ್ಟರು"[4] ಎಂದಿದೆ. ಇಲ್ಲಿ ರಾಯಣರಾಜನಿಗೆ ಗಜಬೇಟೆರಾಜ ಎಂಬ ಹೆಸರು(ಬಿರುದು) ಇದ್ದುದನ್ನು ಕಾಣಬಹುದು. ಅಲ್ಲದೆ ರಾಯಣರಾಜನು ಈ ಹೊತ್ತಿಗಾಗಲೇ ದೇವಾಲಯವನ್ನು ಕಟ್ಟಿಸುವ ಮತ್ತು ಹಳ್ಳಿಯೊಂದನ್ನು ದಾನವಾಗಿ ನೀಡುವಷ್ಟು ಪ್ರಬಲ ಅಧಿಕಾರಿಯಾಗಿದ್ದನು. ಅಲ್ಲದೆ ಇವನು ನುಗ್ಗಿಹಳ್ಳಿ ನಾಡಿನ ಆಡಳಿತವನ್ನು ಕೃಷ್ಣದೇವರಾಯನ ಆಳ್ವಿಕೆಯಲ್ಲಿ ನೋಡಿಕೊಳ್ಳುತ್ತಿದ್ದನೆಂಬುದು ಗೊತ್ತಾಗುತ್ತದೆ.

ಆದರೆ ಕೃಷ್ಣದೇವರಾಯನ ನಂತರ ಬಂದ ಅಚ್ಯುತರಾಯನ ಪಟ್ಟಾಭಿಷೇಕದ ಸಮಯ ಅಂದರೆ ಕ್ರಿ.ಶ. 1529ರಲ್ಲಿ ಇದೇ ರಾಯಣರಾಜನು ಪ್ರತಿರೋಧ ಒಡ್ಡಿದನೆಂಬ ಹಾಗೂ ನಂತರ ಶರಣಾಗತನಾದ ಸಂಗತಿಯನ್ನೂ ಕ್ರಿ.ಶ.1532ರ ಶಾಸನಗಳು ವ್ಯಕ್ತಪಡಿಸಿವೆ. ಆಂಧ್ರಪ್ರದೇಶದ ಚಂದ್ರಗಿರಿ ಹಾಗೂ ತಮಿಳುನಾಡಿನ ಕಂಚಿಯ ಶಾಸನಗಳಲ್ಲಿ ಹೇಳುವಂತೆ, "...ಅಚ್ಚುತರಾಯ ಮಹಾರಾಯರು ವಿರೋಧಿ ಸಂವತ್ಸರದ ಕಾರ್ತೀಕ ಬಹುಲ 5ಲು ಕಾಲಹಸ್ತಿಗೆ ಬಿಜಯಮಾಡಿಸಿ ಕಾಲಹಸ್ತೀಶ್ವರನ ಸೇವೆಯನುಮಾಡಿ ಶ್ರೀ ಕಾಲಹಸ್ತೀಶ್ವರ ಸನ್ನಿಧಿಯಲು ಪಟ್ಟಾಭಿಷೇಕವನು ಮಾಡಿಕೊಂಡು ಮೇಲುನಾಡ ದೊರೆಗಳು ನುಗ್ಗೆಹಳ್ಳಿ ರಾಯಣರಾಜಗಳು ಉಮ್ಮತ್ತೂರು ಮಲ್ಲರಾಜಗಳು ವೇಂಕಟಾದ್ರಿನಾಯಕ ಮುಂತಾದ ಪಾಳಯದ ನಾಯಕ

ಮಕ್ಕಳನು ಶರಣಾದವರನು ಪಾಲಿಸಿ ಭೂಗತರಾದ ಮನ್ನೆಯರನು ರಕ್ಷಿಸಿ ತಿರುವಡಿ ರಾಜ್ಯಕೆ ಮನ್ನೆಯರನು ದಳವಾಯವನು ಕಳುಹಿಸಲಾಗಿ ತಿರುವಡಿಯ ಕಯ್ಯಲು ಕಪ್ಪವನು ತೆಗದುಕೊಂಡು ಪಾಂಡ್ಯರಾಜನ ಕುಮಾರತಿಯನು ಈಸಕೊಂಡು ತುಂಮಿಚ್ಯನು ಸಾಲುವ ನಾಯಕರನು ಆಜ್ಞೆಯನು ಮಾಡಿಸಿ ತಾಂಬ್ರಪರ್ಣಿಯಲು ಜಯಸ್ತಂಭವನು ಹಾಕಿಸಿ..."" ಎಂದಿವೆ. ಈ ಮೇಲಿನ ಶಾಸನಗಳಿಂದ ರಾಯಣರಾಜನು ನುಗ್ಗಿಹಳ್ಳಿಯ ನಾಡನ್ನು ನೋಡಿಕೊಳ್ಳುತ್ತಿದ್ದನೆಂಬುದು ದೃಢವಾಗುತ್ತದೆ. ಅಲ್ಲದೆ ಅಚ್ಯುತರಾಯನ ಪಟ್ಟಾಭಿಷೇಕದ ಸಮಯದಲ್ಲಿ ವಿರೋಧವನ್ನು ವ್ಯಕ್ತಪಡಿಸಿದವರಲ್ಲಿ ರಾಯಣರಾಜನೂ ಒಬ್ಬನಾಗಿದ್ದನೆಂಬುದು ಗಮನಾರ್ಹ ಸಂಗತಿ.

ನುಗ್ಗೇಹಳ್ಳಿ ನಾಡನ್ನು ಆಳುತ್ತಿದ್ದ ರಾಯಣರಾಜನ ಮನೆತನದ ಅನೇಕರ ಹೆಸರುಗಳು ಹಾಸನ ಜಿಲ್ಲೆಯ ಸೀಗೆ, ಶಾಂತಿಗ್ರಾಮ, ನುಗ್ಗೇಹಳ್ಳಿಯ ಶಾಸನಗಳಲ್ಲಿ ವ್ಯಕ್ತವಾಗಿವೆ. ಶಾಂತಿಗ್ರಾಮ ಕ್ರಿ.ಶ.1573ರ ಶಾಸನದಲ್ಲಿ ಸೋಮವಂಶದ ತಿರುಮಲರಾಜನ ಕೊಮಾರ ನುಗ್ಗಿಹಳಿ ರಾಯೊಡೆಯರ ಕೊಮಾರ ಇಂಧುಸೇಖರ ರಾಜಗಳ ಕೊಮಾರ ಬಸವರಾಜಯದೇವ ಮಹಾಅರಸು ಎಂಬುದಾಗಿ ಹೇಳಿದೆ.6 ಹಾಗೆಯೇ ಕ್ರಿ.ಶ. 1596ರ ಶಾಸನದಲ್ಲಿ ನುಗ್ಗೇಹಳ್ಳಿಯ ವೀರರಾಜವೊಡೆಯರ ಮಕ್ಕಳು ಚಿಕ್ಕವೀರರಾಜಯನವರು ಎಂದಿದೆ. ಈ ಮೇಲಿನ ಶಾಸನಗಳಲ್ಲಿ ವ್ಯಕ್ತವಾಗುವ ವಂಶಾವಳಿಗಳು ರಾಯಣರಾಜ ಮತ್ತು ಅವನ ಮಗ ಧನಂಜಯರಾಜನ ನಂತರದ ಆಳ್ವಿಕೆಯನ್ನು ಪ್ರತಿನಿಧಿಸುತ್ತವೆ. ಒಟ್ಟಿನಲ್ಲಿ ಈ ಮೇಲಿನ ವಂಶಾವಳಿಯ ಹಿನ್ನೆಲೆಯಲ್ಲಿ ಕನಕಗಿರಿ ಗೋಪುರದಲ್ಲಿ ಉಲ್ಲೇಖವಾಗಿರುವ ರಾಯಣರಾಜನು ಮೂಲತಃ ನುಗ್ಗೇಹಳ್ಳಿಯವನಾಗಿದ್ದು, ಇವನು ಕೃಷ್ಣದೇವರಾಯ ಮತ್ತು ಅಚ್ಯುತರಾಯರ ಆಳ್ವಿಕೆಯಲ್ಲಿ ಪ್ರಮುಖ ಅಧಿಕಾರಿಯಾಗಿದ್ದನೆಂಬುದು ಸ್ಪಷ್ಟವಾಗುತ್ತದೆ. ಹಾಗೆಯೇ ಇವನ ತಂದೆ ತಿಮ್ಮರಾಜ ಮತ್ತು ತಾಯಿ ವಿರೂಪಾಂಬಿಕೆಯರಾಗಿದ್ದರು.

ಈ ಮೇಲಿನ ವಿವರಗಳ ಹಿನ್ನೆಲೆಯಲ್ಲಿ ಕನಕಗಿರಿ ಗೋಪುರದಲ್ಲಿರುವ ಭಕ್ತಶಿಲ್ಪ ಮತ್ತು ಅವನು ರಾಯಣರಾಜನೆಂಬುದು; ಗೋಪುರದ ಮೇಲಿನ ತಿಮ್ಮಣ್ಣ ಮತ್ತು ಅದರ ಮೇಲಿನ ಗಾರೆಶಿಲ್ಪ ತಿಮ್ಮರಾಜನೆಂಬುದು; ತಿಮ್ಮಣ್ಣನ ಎಡಬದಿಯಲ್ಲಿ ಇರುವ ಕೈಮುಗಿದು ನಿಂತ ಸ್ತ್ರೀಶಿಲ್ಪವು ರಾಯಣರಾಜನ ತಾಯಿ ವಿರೂಪಾಂಬಿಕೆ ಎಂಬುದನ್ನು ದೃಢಪಡಿಸಬಹುದಾಗಿದೆ.

ಒಟ್ಟಿನಲ್ಲಿ ವಿರೂಪಾಕ್ಷ ದೇವಾಲಯದ ಕನಕಗಿರಿ ಗೋಪುರವನ್ನು ವಿಜಯನಗರದ ಪ್ರಮುಖ ಅಧಿಕಾರಿಗಳಲ್ಲಿ ಒಬ್ಬನಾದ ರಾಯಣರಾಜನು ಕಟ್ಟಿಸಿದ್ದನು. ತಾನು ಕಟ್ಟಿಸಿದ ಈ ಗೋಪುರದಲ್ಲಿ ತನ್ನ ತಂದೆ–ತಾಯಿಗಳನ್ನು ಗಾರೆಶಿಲ್ಪ ಹಾಗೂ ಶಾಸನದ ಮೂಲಕ ಚಿರಸ್ಥಾಯಿಯಾಗಿ ಮಾಡಿಸಿದನು. ಹಾಗೆಯೇ ತನ್ನ ಶಿಲ್ಪವನ್ನೂ ಮಹಾದ್ವಾರದ ಕಂಬದ ಮೇಲೆ ಕೆತ್ತಿಸಿ ಅದರ ಪಕ್ಕದಲ್ಲಿ ತನ್ನ ಹೆಸರನ್ನೂ ನಮೂದಿಸುವ ಮೂಲಕ ಕನಕಗಿರಿ ಗೋಪುರವನ್ನು ತಾನೇ ಕಟ್ಟಿಸಿದೆನೆಂಬುದಕ್ಕೆ ಅಧಿಕೃತ ಕುರುಹನ್ನು ದಾಖಲಿಸುವ ಪ್ರಯತ್ನವನ್ನು ಮಾಡಿದ್ದಾನೆ. ಹಾಗೆಯೇ ಈ ಗೋಪುರವನ್ನು ಕಟ್ಟಿದ ಕಾಲ ಕೃಷ್ಣದೇವರಾಯನ ಆಳ್ವಿಕೆ ಅವಧಿ ಕ್ರಿ.ಶ. 1530 ಹೊತ್ತಿಗೆ ರಾಯಣರಾಜನು ನಿರ್ಮಿಸಿದನೆಂಬುದಂತೂ ಸ್ಪಷ್ಟ.

ಆಧಾರ ಸೂಚಿ ಮತ್ತು ಟಿಪ್ಪಣಿಗಳು

1. **ವಿಜಯನಗರ ಅಧ್ಯಯನ,** ಸಂಪುಟ 5, 2000, ರಾಜ್ಯ ಪ್ರಾಚ್ಯವಸ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು
2. **ಎಪಿಗ್ರಾಫಿಯ ಕರ್ನಾಟಕ,** ಸಂಪುಟ–8, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಸಂಖ್ಯೆ–219, ಪು.432–433,
3. **ಎಪಿಗ್ರಾಫಿಯ ಕರ್ನಾಟಕ,** ಸಂಪುಟ–10, 1984, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಸಂಖ್ಯೆ–118, ಪು.556
4. ಗಣೇಶ್, ಕೆ.ಆರ್., ಶೇಷಶಾಸ್ತ್ರಿ, 2001, ಆರ್., **ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ 5,** ಆಂಧ್ರಪ್ರದೇಶದ ಕನ್ನಡ ಶಾಸನಗಳು–1, ಸಂಖ್ಯೆ.248, ಪು.270–274
5. ಗೋಪಾಲ್, ಬಾ.ರಾ., ಗೋಪಾಲರಾವ್, ಎಚ್.ಎಸ್., ಕೃಷ್ಣಮೂರ್ತಿ ಪಿ.ವಿ., 2000, **ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ 4,** ತಮಿಳುನಾಡಿನ ಕನ್ನಡ ಶಾಸನಗಳು, ಸಂಖ್ಯೆ.16–17 ಪು.21–25
6. **ಎಪಿಗ್ರಾಫಿಯ ಕರ್ನಾಟಕ,** ಸಂಪುಟ–8, 1984, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಸಂಖ್ಯೆ–60, ಪು.404–405



ರಾಯಣರಾಜ ಕಟ್ಟಿಸಿದ ಕನಕಗಿರಿ ಗೋಪುರ, ವಿರೂಪಾಕ್ಷ ದೇವಾಲಯ, ಹಂಪಿ



ನುಗ್ಗೇಹಳ್ಳಿಯ ರಾಯಣರಾಜ

07. ವಿಜಯನಗರ ಕಾಲದ ಪಾಪಯ್ಯ ಮತ್ತು ಪಾಪನಾಯಕನಹಳ್ಳಿಯ ಚಾರಿತ್ರಿಕ ಮಹತ್ವ

– ಡಾ. ವಿರೂಪಾಕ್ಷಿ ಪೂಜಾರಹಳ್ಳಿ

ಆನೆಗೊಂದಿ ಮತ್ತು ಹಂಪಿ ಪರಿಸರದಲ್ಲಿ ವಿಜಯನಗರ ಕಾಲದ ಸ್ಮಾರಕಗಳು, ಜನವಸತಿ ನೆಲೆಗಳು, ಬೇಚರಾಕ್ ಗ್ರಾಮಗಳಲ್ಲದೆ ಹಟ್ಟಿ, ಹಳ್ಳಿ, ಗ್ರಾಮ, ಪಟ್ಟಣ, ನಗರಗಳು ತಮ್ಮದೇ ಆದ ಚಾರಿತ್ರಿಕ ಮಹತ್ವವನ್ನು ಹೊಂದಿರುವುದು ಗಮನಾರ್ಹ. ಇಂಥ ಐತಿಹಾಸಿಕ ಗ್ರಾಮಗಳ ಪೈಕಿ ಪಾಪನಾಯಕನಹಳ್ಳಿ ಮತ್ತು ಕೊಂಡನಾಯಕನಹಳ್ಳಿ ಪ್ರಮುಖವಾಗಿವೆ. ಇವೆರಡು ಗ್ರಾಮಗಳು ನಾಯಕನ ಹೆಸರಿನಲ್ಲಿರುವುದು ವಿಶೇಷ. ಹಂಪಿ ಪರಿಸರದಲ್ಲಿ ಕಮಲಾಪುರ, ಆನೆಗೊಂದಿ, ಬುಕ್ಕಸಾಗರ, ರಾಮಸಾಗರ, ವೆಂಕಟಾಪುರ, ಮುದ್ದಾಪುರ, ನಾಗಲಾಪುರ, ಬೆನಕಾಪುರ, ಸಣಾಪುರ, ಮುದ್ಲಾಪುರ, ವಿರುಪಾಪುರ ಮೊದಲಾದ ಸ್ಥಳಗಳನ್ನು ಶೋಧನೆ ಮತ್ತು ಸಂಶೋಧನೆಗೊಳಪಡಿಸುವ ಅಗತ್ಯವಿದೆ. ಇಲ್ಲಿನ ಒಂದೊಂದು ಸ್ಥಳಕ್ಕೂ ಒಂದೊಂದು ಬಗೆಯ ಚಾರಿತ್ರಿಕ ಮಹತ್ವ ಇರುವುದು ವಾಸ್ತವ.

ಪ್ರಸ್ತುತ ಪ್ರಬಂಧದಲ್ಲಿ ವಿಜಯನಗರ ಕಾಲದ ಶಾಸನಗಳಲ್ಲಿ ಕಂಡುಬರುವ ಪಾಪಯ್ಯ ಎಂಬ ವ್ಯಕ್ತಿ ಯಾರು? ಈತನ ಬಗೆಗಿನ ಐತಿಹಾಸಿಕ ಮಹತ್ವ ಏನು? ಪಾಪನಾಯಕನಹಳ್ಳಿಯ ಗ್ರಾಮ/ಸ್ಥಳೀಯ ಚರಿತ್ರೆಯ ಮಹತ್ವವನ್ನು ತಿಳಿಸುವ ಉದ್ದೇಶವಿದೆ.

'ಪಾಪಯ್ಯ' ಎಂಬ ಹೆಸರು ಶಾಸನ ಹಾಗೂ ಕೈಫಿಯತ್ತುನಲ್ಲಿದ್ದು, ಈತ ಯಾರು? ಸಾಧನೆ ಏನು? ಕಾಲಮಾನ ಯಾವುದು? ವಂಶಪರಂಪರೆ ಏನು? ಸ್ಮಾರಕಗಳು ಮತ್ತು ಮೌಖಿಕ ಚರಿತ್ರೆ ಹೇಳುವ ವಿಚಾರಗಳನ್ನು ಇಲ್ಲಿ ಜಿಜ್ಞಾಸೆಗೊಳಪಡಿಸಲಾಗಿದೆ. ಹಾಗಾಗಿ ಇವುಗಳ ವಾಸ್ತವವನ್ನು ಅರಿತು ಜನತೆಗೆ ತಿಳಿಸುವ ಉದ್ದೇಶವಿದೆ. ಕಮಲಾಪುರ ಪಟ್ಟಣದ ಈಶಾನ್ಯಕ್ಕಿರುವ ಎಚ್.ಪಿ.ಸಿ ಕ್ಯಾಂಪಿನ (ವರದರಾಜಮ್ಮನ ಪಟ್ಟಣ–ಪಟ್ಟಾಭಿರಾಮ ದೇವಾಲಯದ ಪಶ್ಚಿಮ) ಪಶ್ಚಿಮಕ್ಕಿರುವ ಬೇಟೆಗಾರರ ಹೆಬ್ಬಾಗಿಲು (ಮಾಲ್ಯವಂತ ರಘುನಾಥ ದೇವಾಲಯದ ಆಗ್ನೇಯಕ್ಕೆ) ಸಮೀಪದಲ್ಲಿ ಶಾಸನ ದೊರೆತಿದೆ. ಶಿಥಿಲವಾದ ದೇವಾಲಯದ ಮುಂದೆ ನಿಲ್ಲಿಸಿರುವ ಕಲ್ಲಿನ ಮೇಲೆ 'ವಿಜಯನಗರ ಕೃಷ್ಣರಾಯ ಮಹಾರಾಯ ಸರ್ವಧಾರಿ: ಪುಷ್ಯ ಬ 10 ಸೋಮವಾರ ಕ್ರಿ.ಶ. 1529 ಜನವರಿ 5 ಮಂಗಳವಾರ ಅರಸನ ಪಾಲಿಸುತ್ತಾ ಪಾಪಯ್ಯ ಎಂಬುವ ವ್ಯಕ್ತಿ ದೇವಸ್ಥಾನ ಕಟ್ಟಿಸುತ್ತಾನೆ' (ವಿಜಯನಗರ ಪ್ರೊಗ್ರೆಸ್ ರಿಪೋರ್ಟ್ 1991–92 ಸಂ–4) ಎಂದು ತಿಳಿದುಬರುತ್ತದೆ.[1]

ದೇವಸ್ಥಾನ ಕಟ್ಟಿಸುವ ಕಾರ್ಯ ಮಾಡುವ ಪಾಪಯ್ಯ ಯಾರು? ಈತನ ಸ್ಥಾನ–ಮಾನ ಏನು? ಎಂಬ ಬಗ್ಗೆ ಉಲ್ಲೇಖವಿಲ್ಲ. ಬೇಡನಾಯಕರೇ ವ್ಯಾಪಕವಾಗಿ ನೆಲಸಿರುವ ಕಮಲಾಪುರ ಪರಿಸರದಲ್ಲಿ ಪಾಪಯ್ಯ ಎಂಬ ವ್ಯಕ್ತಿ ಜವಾಬ್ದಾರಿ ಸ್ಥಾನದಲ್ಲಿದ್ದಂತೆ ಕಂಡುಬರುತ್ತದೆ.

ಪಾಪಯ್ಯ ಎಂಬುವನು ಸೈನಿಕನೊ, ದಂಡನಾಯಕನೋ, ಅಮರನಾಯಕನೋ ಅಥವಾ ಈ ಭಾಗದ ಸಾಮಂತನೋ, ಅಧಿಕಾರಿಯೋ/ಪಾಳೆಯಗಾರನೋ ಎಂದು ಊಹಿಸಲು ಆಧಾರಗಳಿವೆ. ಇದಕ್ಕೆ ಮೌಖಿಕ ಚರಿತ್ರೆ ಸತ್ಯಕ್ಕೆ ಹತ್ತಿರವಾದ ಸಂಗತಿಯನ್ನು ತಿಳಿಸುತ್ತದೆ. ಹಂಪಿ ಜಾನಪದ ಕೃತಿಯಲ್ಲಿ 'ವಿಜಯನಗರ ಸಂಸ್ಥಾನದ ಸಂಸ್ಥಾಪಕರಾದ ಹಕ್ಕ–ಬುಕ್ಕರು

ಬೇಡರಾಗಿದ್ದರೆಂದೂ ಅವರು ಪೂರ್ವದಲ್ಲಿ ಕಂಪಿಲನ ಜೊತೆಗಿದ್ದರೆಂದೂ ಬೇಡರು ಹೇಳಿಕೊಳ್ಳುತ್ತಾರೆ. ಉಳಿದಂತೆ ಕೊಂಡನಾಯಕನು ಪ್ರಸಿದ್ಧ ಸೇನಾಪತಿಯೂ ಪಾಪಿನಾಯಕನೂ ಪ್ರಸಿದ್ಧ ಸಂತನೂ ಆಗಿದ್ದನೆಂದು ಅವರು ವಾದಿಸುತ್ತಾರೆ. ಆದರೆ ಬೇಡನಾಯಕರಲ್ಲಿ ಕೊಂಡನಾಯಕನ ಬಗೆಗೆ ಯಾವುದೇ ಕತೆಗಳಿಲ್ಲ. ಪಾಪಿನಾಯಕನ ಬಗೆಗೆ ಮಾತ್ರ ಅವರಲ್ಲಿ ಸಾಕಷ್ಟು ಕತೆಗಳಿವೆ ಎಂಬ ಮಾತನ್ನು ಇಲ್ಲಿ ಪರಿಶೀಸಬೇಕಿದೆ.'[2]

ಪಾಪಯ್ಯನಿಗೆ ಜನಪದರು ಪಾಪನಾಯಕ ಎಂದು ಕರೆದಿರುವ ಶಕ್ಯತೆಯಿದೆ. ವಿಜಯನಗರ ಸಾಮ್ರಾಜ್ಯದ ರಾಜ್ಯಾಡಳಿತದಲ್ಲಿ ರಾಜನು ಅಧಿಕಾರ ಸ್ಥಾನಕ್ಕೆ ಬರುವ ಪೂರ್ವದಲ್ಲಿ ಚಿಕ್ಕಪುಟ್ಟ ಅಧಿಕಾರ ಸ್ಥಾನದ ಅನುಭವ ಹೊಂದಿರಬೇಕಿತ್ತು. ಡಾ.ಪಿ.ಬಿ. ದೇಸಾಯಿ ಅವರು ತಿಳಿಸುವಂತೆ 'ಹರಿಹರನ ತಮ್ಮ ಮಹಾಮಂಡಲೇಶ್ವರ ಬುಕ್ಕರಾಯ ಮಹಾಮಂಡಲೇಶ್ವರ ಕಂಪಣ್ಣನು... ಉದಯಗಿರಿ ರಾಜ್ಯ (ನೆಲ್ಲೂರು, ಕಡಪಾ ಸೀಮೆ) ನೆಲ್ಲೂರು ರಾಜಧಾನಿಯಾಗಿ ಕಂಪಣ್ಣನ ಮಗ 2ನೇ ಸಂಗಮ ಉದಯಗಿರಿ ರಾಜ್ಯ ಮಾರಪ್ಪ ಆರಗ (ಮಾಲೆ) ರಾಜ್ಯಕ್ಕೆ ಒಡೆಯನಾದ ಬಗ್ಗೆ ತಿಳಿಸುತ್ತಾರೆ.'[3] ಈ ಕಾಲದಲ್ಲಿ ಮುಳಬಾಗಿಲು, ಪೆನುಗೊಂಡ, ಚಂದ್ರಗಿರಿ ಮೊದಲಾದ ರಾಜ್ಯಗಳಿದ್ದವು.

ಈ ಮೇಲಿನ ಎರಡು ಸಂಗತಿಗಳನ್ನು ಗಮನಿಸಿದರೆ, ರಾಜಪರಿವಾರದವರು ಮಾತ್ರ ಉನ್ನತ ಹುದ್ದೆ ಮತ್ತು ಅಧಿಕಾರ ಹೊಂದಿದ್ದು ವೇದ್ಯವಾಗುತ್ತದೆ. ಪಾಪಯ್ಯನು ಇಂಥ ಸೀಮೆಗೆ ಅಧಿಕಾರಿಯೋ ಅಥವಾ ಅಮರನಾಯಕನೋ ಆಗಿರಬೇಕು. ಅಂಥ ಪ್ರದೇಶ ಈಗಿನ ಜಗಲೂರು ಸೀಮೆ ಇರಬೇಕು. ಮತ್ತು ಈತ ಶಾಸನ ಹಾಕಿಸುವಂಥ ಅಧಿಕಾರ ಹೊಂದಿದ್ದನೆಂದರೆ ಉನ್ನತ ಹುದ್ದೆಯಲ್ಲಿರಬೇಕೆಂದು ತಿಳಿಯಬಹುದು. ಈ ಬಗ್ಗೆ ಹೆಚ್ಚಿನ ವಿವರಗಳು ಲಭ್ಯವಿಲ್ಲ. ಆದರೂ ಪಾಪಯ್ಯ/ ಪಾಪನಾಯಕ/ಸೂರ್ಯದೇವ ಪಾಪಯ್ಯ/ಕೋರೆಲು ಪಾಪನಾಯಕ/ಪರದೇಶಿ ಪಾಪಯ್ಯ/ ದಾವರ್ಲ ಪಾಪನಾಯಕ/ ಸೂರ್ಯಪಾಪಯ್ಯ ಎಂಬ ಹೆಸರುಗಳಿಂದ ಕರೆಯುವ ಏಕೈಕ ವ್ಯಕ್ತಿ ಜಗಳೂರು ಪಾಪನಾಯಕ. ಈತ ಹಂಪಿ ಪರಿಸರದಲ್ಲಿ ನೆಲಸಿದ್ದ ಬಗ್ಗೆ ಗ್ರಾಮವೊಂದು ನಿರ್ಮಾಣಗೊಂಡಿದೆ ಎಂದರೆ ಅತಿಶಯೋಕ್ತಿಯಲ್ಲ. ಏಕೆಂದರೆ ಒಬ್ಬ ವ್ಯಕ್ತಿ ಬಗ್ಗೆ ಹಂಪಿ ಪರಿಸರದಲ್ಲಿ ಶಾಸನ, ಬೇರೆ ಕಡೆ ಸ್ಮಾರಕಗಳು ಆತನ ಹೆಸರಿನಲ್ಲಿದ್ದರೆ, ಗ್ರಾಮವೊಂದು ಆತನ ಹೆಸರಲ್ಲಿ ನಿರ್ಮಾಣಗೊಂಡಿರುವುದು ಐತಿಹಾಸಿಕ ಸತ್ಯ. ಈ ಬಗ್ಗೆ ಹೊಸಪೇಟೆ ತಾಲೂಕು ದರ್ಶನದಲ್ಲಿ ಪಾಪಿನಾಯಕನಹಳ್ಳಿಗೆ ಸಂಬಂಧಿಸಿದಂತೆ ಸ್ಥಳೀಯರು ಈ ರೀತಿ ತಿಳಿಸುತ್ತಾರೆ. 'ವಿಜಯನಗರ ಕಾಲದಲ್ಲಿ ಈ ಊರಿನ ಕಂದಾಯ ವಸೂಲಿ ಹಕ್ಕನ್ನು ಪಾಪಯ್ಯ ಎಂಬ ಪಾಳೆಯಗಾರನಿಗೆ ವಹಿಸಲಾಗಿತ್ತು. ಆದುದರಿಂದ ಈ ಹಳ್ಳಿಗೆ ಪಾಪ(ಪಿ)ನಾಯಕನಹಳ್ಳಿ ಎಂಬ ಹೆಸರು ಬಂದಿದೆ. ಇಲ್ಲಿ ದೊರೆತಿರುವ ಕ್ರಿ.ಶ. 1532ರ ಅಚ್ಯುತರಾಯನ ಶಾಸನದಲ್ಲಿ 'ನಿಡುಗಲ ಆಲಿಯಾಸ್ ಅಪಿನಾಯಕಪುರ ಎಂಬ ಸರ್ವಮಾನ್ಯ ಅಗ್ರಹಾರದ ಉಲ್ಲೇಖವಿದೆ. ಬಹುಶಃ ಪಾಪಿನಾಯಕನಹಳ್ಳಿ ಗ್ರಾಮದ ಮೊದಲ ಸ್ಥಳನಾಮ ನಿಡುಗುಲ ಎಂದಿದ್ದು ನಂತರ ಅಪಿನಾಯಕನಪುರಂ ಆಗಿ, ಈಗ ಪಾಪಿನಾಯಕನಹಳ್ಳಿ ಆಗಿದೆ.'[4] ವೆಂಕಟಪತಿರಾಯನ ಕಾಲದಲ್ಲಿ ಕ್ರಿ.ಶ. 1742ರ ಇಲ್ಲಿನ ಶಾಸನವು ಮಾದಿನಾಯಕನಹಳ್ಳಿಯನ್ನು ಕವಿರಾಜ ಮೊಮ್ಮಗನಿಗೆ ಉಂಬಳಿ ಕೊಟ್ಟದ್ದನ್ನು ಗಮನಿಸಿದರೆ ಇಲ್ಲಿ ಪಾಪನಾಯಕನಹಳ್ಳಿಯನ್ನು ಪಾಪಯ್ಯ ಎಂಬ ಕಂದಾಯ ವಸೂಲಿ ಮಾಡುವ ಅಧಿಕಾರಿ ಹಾಗೂ ಸಂತನಿಂದ ಕರೆದಿರುವುದು ಜನರ ಪ್ರೀತಿಯ ದ್ಯೋತಕವಾಗಿದೆ.

ಪಾಪಿನಾಯಕನಹಳ್ಳಿ ಎಂಬ ಗ್ರಾಮ ಹೊಸಪೇಟೆಯಿಂದ ಪೂರ್ವಕ್ಕೆ 11 ಕಿ.ಮೀ. ಹಾಗೂ ಬಳ್ಳಾರಿಯಿಂದ ಪಶ್ಚಿಮಕ್ಕೆ 51 ಕಿ.ಮೀ. ಅಂತರದಲ್ಲಿದೆ. ಪ್ರಸ್ತುತ ಗ್ರಾಮ ಪಂಚಾಯಿತಿ ಕೇಂದ್ರ ಹಾಗೂ ಜಿಲ್ಲಾ ಪಂಚಾಯತ್ ಕ್ಷೇತ್ರವಾಗಿರುವ ಪಾಪಿನಾಯಕನಹಳ್ಳಿ ಎಲ್ಲ ಸಮುದಾಯ, ಎಲ್ಲ ಧರ್ಮೀಯರಿಂದ ಕೂಡಿದೆ. ಶತಮಾನಗಳ ಹಿಂದಿನ ಗ್ರಾಮದೇವತೆಗಳು, ಶಿಥಿಲಗೊಂಡಿರುವ ಕೋಟೆ, ವೀರಗಲ್ಲು ಇತರ ಸ್ಮಾರಕಗಳು ಈ ಗ್ರಾಮದ ಮಹತ್ವವನ್ನು ಇಮ್ಮಡಿಗೊಳಿಸಿದ್ದು ಸ್ಪಷ್ಟ. ಪಾಪಿನಾಯಕನಹಳ್ಳಿ ಐತಿಹಾಸಿಕ ಗ್ರಾಮ ಎಂಬುವುದಕ್ಕೆ ಇಲ್ಲಿರುವ ಅಂಕಲಮ್ಮ, ಈಶ್ವರ, ವೆಂಕಟೇಶ್ವರ, ಹನುಮಪ್ಪ, ವೀರಪ್ಪ, ಬಸವಣ್ಣ, ಮಾರೆಮ್ಮ, ಕೆಂಚಮ್ಮ, ದುರ್ಗಮ್ಮ, ಗುಂಡಪ್ಪ ಇತರ ದೇವರ ಗುಡಿಗಳೇ ಸಾಕ್ಷಿ. ಗ್ರಾಮದ ಉತ್ತರಕ್ಕೆ ಬೆಟ್ಟವಿದ್ದು ಕೋಟೆ, ಬುರುಜುಗಳನ್ನು ನಿರ್ಮಿಸಲಾಗಿದೆ.

ಒಬ್ಬ ಉನ್ನತ ಅಧಿಕಾರಿ ವಿಜಯನಗರ ಕಾಲದಲ್ಲಿ ಇಲ್ಲಿದ್ದನೆಂಬುದಕ್ಕೆ ಕುರುಹುಗಳಿವೆ. ಆದರೆ ಗ್ರಾಮ ನಿರ್ಮಾಣವಾದರೂ ಆ ವ್ಯಕ್ತಿಯ ಹೆಸರಲ್ಲಿ (ಪಾಪನಾಯಕ/ಪಾಪೇದೇವರು) ಗುಡಿ ಇಲ್ಲದಿರುವುದು ವಿಶೇಷ ಹಾಗೂ ಕುತೂಹಲ ಮೂಡಿಸಿದೆ. ವಿಜಯನಗರ ಕಾಲದಲ್ಲಿ ಅಂಕಲಾದೇವಿ, ಮಾಂಕಾಳಮ್ಮ, ನೂಕಲಪರಮೇಶ್ವರಿ, ನಾಂಚರಮ್ಮ, ಗಾಳೆಮ್ಮ, ಎಕ್ಕಲಾದೇವಿ, ಮಾರೆಮ್ಮ, ದುರ್ಗಮ್ಮ, ಚೌಡಿ ಇತರೆ ದೇವತೆಗಳ ಆರಾಧನೆಯಿತ್ತು.[5] ಇದು ಆರಂಭ ಕಾಲದಲ್ಲಿತ್ತು. ಕೃಷ್ಣದೇವರಾಯನ ಕಾಲಕ್ಕೆ ಸ್ಥಳೀಯ ದೇವತೆ–ವ್ಯಕ್ತಿಗಳ ಆರಾಧನೆ ಕಡಿಮೆ ಆಯಿತು. ಏಕೆಂದರೆ ತಮಿಳುನಾಡು, ಆಂಧ್ರಪ್ರದೇಶ ಮತ್ತು ಒರಿಸ್ಸಾ ರಾಜ್ಯಗಳಲ್ಲಿ ಕೃಷ್ಣದೇವರಾಯ ಹೆಚ್ಚು ಸೇನಾ ಕಾರ್ಯಾಚರಣೆ, ಧಾರ್ಮಿಕ ಪ್ರವಾಸಗಳನ್ನು ಕೈಗೊಂಡಿದ್ದಕ್ಕೆ ಆಧಾರಗಳಿವೆ.[6]

ಪಾಪನಾಯಕನ ಬಗೆಗೆ ದೇಶಿಯ ಮತ್ತು ವಿದೇಶಿ ಸಾಹಿತ್ಯ ಆಕರಗಳಲ್ಲಿಯೂ ಮಾಹಿತಿ ಲಭ್ಯವಿದೆ. ವಿದೇಶಿ ಬರಹಗಳನ್ನು ಅಧ್ಯಯನ ಮಾಡಿದ ರಾಬರ್ಟ್ ಸಿವಿಲ್ ಅವರು 'ಮರೆತು ಹೋದ ಮಹಾಸಾಮ್ರಾಜ್ಯ: ವಿಜಯನಗರ' ಎಂಬ ಕೃತಿಯಲ್ಲಿ ವಿದೇಶಿ ಯಾತ್ರಿಕರು ತಿಳಿಸುವ ದಳವಾಯಿಗಳ ಹೆಸರುಗಳಿವೆ. ಅವರುಗಳೆಂದರೆ, ಗಪನಾಯಿಕ್, ಲೆಪನಾಯಿಕ್, ಚಿನಪನಾಯಿಕ್, ಅದಪನಾಯಿಕ್, ಬಜಪನಾಯಿಕ್‌ರ ಹೆಸರುಗಳಿವೆ.[7] ಇವರು ಹೆಚ್ಚಾಗಿ ತೆಲುಗು ನಾಡಿನಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಇವರಲ್ಲಿ ಲೆಪನಾಯಿಕ್‌ನೇ ಪಾಪನಾಯಕ ಇರಬೇಕೆಂದು ಊಹಿಸಬಹುದಾಗಿದೆ. ಇದಕ್ಕೆ ಹೋಲುವಂತೆ ಬೇಟೆಕಾರರ ಹೆಬ್ಬಾಗಿಲ ಹತ್ತಿರ ಎಚ್.ಪಿ.ಸಿ ಜಲಾಶಯದ ಪಶ್ಚಿಮಕ್ಕಿರುವ ಶಾಸನವು ಸಹಾ ತೆಲುಗಿನಲ್ಲಿದ್ದು, ಕೃಷ್ಣದೇವರಾಯನ (1529 ಜನವರಿ 5 ಮಂಗಳವಾರ) ಕಾಲಕ್ಕೆ ಸೇರಿದೆ. ಅರಸನ ಧರ್ಮ ಮತ್ತು ಪಾಪಯ್ಯ ದೇವಸ್ಥಾನ ಕಟ್ಟಿಸಿದ್ದನ್ನು ಇದು ತಿಳಿಸುತ್ತದೆ. ಅಧಿಕಾರಿ, ದಂಡನಾಯಕ, ದಳವಾಯಿ ಮತ್ತು ಅಮರನಾಯಕ ಸ್ಥಾನದಲ್ಲಿದ್ದ ವ್ಯಕ್ತಿಯಿಂದ ಮಾತ್ರ ಶಾಸನ ಹಾಕಿಸಲು ಸಾಧ್ಯ. ಪಾಪಯ್ಯನು ದೇವಸ್ಥಾನ ಕಟ್ಟಿಸಿದ್ದು ಆತ ಸನ್ಯಾಸಿ ಆಗಿರುವ ಶಕ್ಯತೆಯಿದೆ. ಈ ಬಗೆಗಿನ ಲಿಖಿತ ಮತ್ತು ಮೌಖಿಕ ಆಕರಗಳು ಪಾಪಯ್ಯನನ್ನು ಹೆಚ್ಚಾಗಿ ಸಂತನಾಗಿ ಬಿಂಬಿಸಿರುವುದು ಸ್ಪಷ್ಟ.

ವಿಜಯನಗರ ಕಾಲದ (ಕೃಷ್ಣದೇವರಾಯ) ಒಂದು ಶಾಸನವು ಸ್ಪಷ್ಟವಾಗಿ ಪಾಪಯ್ಯ ಎಂದು ಉಲ್ಲೇಖಿಸಿದೆ. ಆನಂತರ ಅಚ್ಯುತರಾಯ, ವೆಂಕಟಪತಿ ದೇವರಾಯನ ಕಾಲದಲ್ಲಿ ಪಾಪಯ್ಯನ ಉಲ್ಲೇಖಗಳು ಕಂಡುಬರುತ್ತವೆ. ವಿಜಯನಗರೋತ್ತರ ಕಾಲದಲ್ಲಿಯು ಸಹಾ ಪಾಪಯ್ಯ, ಪಾಪನಾಯಕನ ಹೆಸರುಗಳು ಪ್ರಚಲಿತದಲ್ಲಿದ್ದವು.

ವಿಜಯನಗರ ಕಾಲದಲ್ಲಿ ಮಂತ್ರಿ, ಅಧಿಕಾರಿ, ಅಮರನಾಯಕ, ದಳವಾಯಿ, ದಂಡನಾಯಕ ಮೊದಲಾದ ಜವಾಬ್ದಾರಿಯುತ ಸ್ಥಾನಮಾನ ಹೊಂದಿರುವ ವ್ಯಕ್ತಿಗಳು ಸಾಮ್ರಾಜ್ಯದ ಬೇರೆ ಬೇರೆ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಸಂಗಮ, ಸಾಳುವ, ತುಳುವ ವಂಶಗಳ ಅವಧಿಯಲ್ಲಿ ಇವರು ದಕ್ಷತೆ ಮತ್ತು ಪ್ರಾಮಾಣಿಕ ಸೇವೆ ಮಾಡುವವರಾಗಿದ್ದರು. ಅರವೀಡು ವಂಶದ ಅವಧಿಯಲ್ಲಿ ಸ್ವಾತಂತ್ರ್ಯರಾಗಲು ಪ್ರಯತ್ನಿಸಿದ್ದು ಸ್ಪಷ್ಟ. ಇಂಥ ಸಂದರ್ಭದಲ್ಲಿ ಸಂಘರ್ಷಗಳು ಪ್ರತಿಯೊಬ್ಬ ನಾಯಕರು ತಮ್ಮದೇ ಆದ ಸೈನಿಕ ಬಲವನ್ನು ಹೊಂದಿದ್ದರು. ಅವರುಗಳೆಂದರೆ:

ಗೊಬ್ಬೂರಿ ಜಗ್ಗರಾಯ – 20,000 ಸೈನ್ಯ (1614)

ವೇಲುಗೋಟಿ ಎಚ್ಚಮನಾಯಕ – 16,000 ಸೈನ್ಯ (1615)

ಅರವೀಡು ರಾಮದೇವ

ತಂಜಾವೂರು, ವೇಲುಗೋಟಿ (ತೋಪುರ), 100000 ಸೈನ್ಯ (1617)

ಗೊಬ್ಬೂರಿ/ಮಧುರೆ/ಸೆಂಜಿ 100000 ಸೈನ್ಯ (1617) (ತೋಪುರ)

ತಂಜಾವೂರು 40,000 ಸೈನ್ಯ (1656)

ಮಧುರೆ 40,000 ಸೈನ್ಯ (1662)

ಹೀಗೆ ಸೈನ್ಯವನ್ನು ಹೊಂದಿದ್ದವರು ಇದ್ದದು ಗಮನಾರ್ಹ.[8]

ಈ ಮೇಲೆ ಗಮನಿಸಿದಂತೆ ಎಲ್ಲೂ ಪಾಪನಾಯಕನಾಗಲಿ, ಬೇಡರ ಪಡೆ, ಖಾಸ ಬೇಡರ ಪಡೆ, ಮೀಸಲು ಪಡೆಗಳ ಉಲ್ಲೇಖವಿಲ್ಲ. ವೇಲುಗೋಟಿ ಎಚ್ಚಮನಾಯಕನಿಗೆ ಹತ್ತಿರದ ಸಂಬಂಧಿಗಳು ಸೈನ್ಯದ ಹೊಣೆ ಹೊತ್ತ ಉದಾಹರಣೆಗಳಿವೆ. ವೇಲುಗೋಟಿ ಕಸ್ತೂರಿ ರಂಗನಾಯಕ ಎರಡನೇ ವೆಂಕಟನ ಸಾಮಂತನಾಗಿದ್ದ. ಈಗಿನ ಆಂಧ್ರಪ್ರದೇಶದ ನೆಲ್ಲೂರು, ವೆಂಕಟಗಿರಿ, ತಿರುಪತಿ ಮತ್ತು ಕಾಳಹಸ್ತಿ ಭಾಗದಲ್ಲಿ ಇವನಿದ್ದ. ವೆಂಕಟಪತಿ ದೇವರಾಯನ ಕಾಲದಲ್ಲಿ ಸುಲ್ತಾನರ ಕಿರುಕುಳ, ಶತ್ರುಗಳ ಉಪಟಳವಿತ್ತು. ಮಾಂಡಲಿಕರು, ಸಾಮಂತರು, ಪಾಳೆಯಗಾರರು, ಸ್ವತಂತ್ರರಾಗಲು ಹವಣಿಸಿದರು. ಈ ಕಾರಣಕ್ಕಾಗಿ ಸಂಘರ್ಷ ಮತ್ತು ಹೋರಾಟಗಳಾಗುತ್ತವೆ. ಕಾಳಹಸ್ತಿ ಸಮೀಪ ವೆಂಕಟನಾಯಕ (ಎಚ್ಚಮನಾಯಕ) ಆಳ್ವಿಕೆ ಮಾಡುತ್ತಿದ್ದ. ಕಸ್ತೂರಿ ರಂಗ, ಎಚ್ಚಮ ವಿಜಯನಗರದ ಅರಸರ ಪರ ಇದ್ದು ಪ್ರಾಮಾಣಿಕತೆ ಮೆರೆದರು. ವೆಲ್ಲೂರಿನ ಲಿಂಗಮನಾಯಕ, ಚಿನ್ನ ಬೊಮ್ಮನಾಯಕ, ಜಿಂಜಿಯ ಮಾಂಡಲಿಕರ ಕೃಷ್ಣಪ್ಪನಾಯಕ, ತಿರುಮಲೆಯ ದೇವಪ್ಪನಾಯಕ ಇವರೆಲ್ಲ ವಿಜಯನಗರ ಕಾಲದ ಅಮರನಾಯಕರಾಗಿದ್ದರು. ಇವರಲ್ಲಿ ತಿರುಮಲೆಯ ದೇವಪ್ಪ ಪಾಪನಾಯಕ ಎಂಬುವನೇ ಪಾಪಯ್ಯನಿಗೆ ಸಂಬಂಧವಿರಬೇಕು. ಅಥವಾ ಪಾಪನಾಯಕ ತಿರುಪತಿ ಯಾತ್ರೆ ಮಾಡುವ ಪ್ರಸಂಗ ಬರುತ್ತದೆ. ಆ ಸಂದರ್ಭದಲ್ಲಿ ಈ ಪ್ರದೇಶದ ಅಮರನಾಯಕನಾಗಿರುವ ಸಾಧ್ಯತೆಯಿದೆ.

ಮತ್ತೊಂದು ದಾಖಲೆಯ ಪ್ರಕಾರ ನಾಯಕನಹಟ್ಟಿ ಪಾಳೆಯಗಾರರ ವಂಶವೃಕ್ಷದಲ್ಲಿ ಕಾಟೇಮಲ್ಲ ನಾಯಕನ ಮಗ ಸೂರದೇವ ಪಾಪನಾಯ್ಕ ಎಂದು, ಅದೇ ವಂಶಾವಳಿಯಲ್ಲಿ ತೊರ್‍ರಲ ಮಲ್ಲನಾಯ್ಕನ ಮಗ ಜಗಳೂರು ಪಾಪನಾಯಕ ಸಂತತಿ ಇಲ್ಲ ಎಂದು ಉಲ್ಲೇಖಿಸಲಾಗಿದೆ.[9] ಇಲ್ಲಿ ಸಾಮಂತನಾಯಕನಾಗಿ ಆಳ್ವಿಕೆ ಮಾಡಿದ ಬಗ್ಗೆ ಪರಿಶೀಲಿಸಬೇಕಿದೆ. ಎರಡು ಬಾರಿ ಇಲ್ಲಿ ಸೂರದೇವ ಪಾಪನಾಯ್ಕ, ಜಗಳೂರು ಪಾಪನಾಯಕ ಎಂಬ ಉಲ್ಲೇಖಗಳು ಒಬ್ಬ ವ್ಯಕ್ತಿಗೆ ಸೇರಿಲ್ಲ. ಹಾಗಾಗಿ ಇಬ್ಬರೂ ಬೇರೆ ಬೇರೆ ಇರಬೇಕು. 'ಪಾಪಯ್ಯ' ಎಂಬ ವ್ಯಕ್ತಿ ಅಮರನಾಯಕತನಕ್ಕೆ ಸೇರಿರುವ ಸಾಧ್ಯತೆಯಿದೆ ಎಂದು ಹೇಳಬಹುದು.[10] ಚಿತ್ರದುರ್ಗ ಜಿಲ್ಲೆ ಹಿರಿಯೂರು ತಾಲೂಕಿನ ಹರತಿ ಗ್ರಾಮದಲ್ಲಿ ಹಿಂದೆ ಎನುಮಲ ವಂಶದ ಪಾಳೆಯಗಾರರು ಆಳ್ವಿಕೆ ನಡೆಸಿದ್ದಾರೆ. ಇವರಲ್ಲಿ ಪಾಲನಾಯಕ ಮತ್ತು ಎರಬಾಪೆನಾಯಕ ಎಂಬ ಅರಸರು ಆಳ್ವಿಕೆ ಮಾಡಿದ ಉದಾಹರಣೆಗಳಿವೆ.[11] ನಾಯಕನಹಟ್ಟಿ ಪಾಳೆಯಗಾರರ ಮೂಲ ಪುರುಷ ಕಾಟಮಲ್ಲನಾಯಕ. ಇವನಿಗೆ ಮೂರು ಜನ ಗಂಡುಮಕ್ಕಳಿದ್ದರು. ಹಿರಿಯವನು ಸೂರದೇವನ ಪಾಪನಾಯ್ಕ, ಮಧ್ಯದವನು ತೊರ್‍ರಲ ಮಲ್ಲನಾಯಕ, ಕೊನೆಯವನು ಗಾದರ್‍ರಿ ಪಾಲನಾಯಕ ಎಂದು ತಿಳಿಯುತ್ತದೆ. ಇದೇ ಲೇಖಕರು ಮಧ್ಯದ ತೊರ್‍ರೆಲ ಮಲ್ಲನಾಯ್ಕನ ಮಗ ಜಗಳೂರು ಪಾಪನಾಯಕನಾಗಿದ್ದು, ಮ್ಯಾಸಬೇಡ ಜನಾಂಗದ ಮತ್ತೊಬ್ಬ ಸಾಂಸ್ಕೃತಿಕ ವೀರ (ಮೊದಲ ವೀರ ಗಾದರಿ ಪಾಲನಾಯಕ) ಎಂದು ಗುರುತಿಸಿದ್ದಾರೆ.[12] ಇವನು ಜಗಲೂರಿನಲ್ಲಿ ಸಮಾಧಿ ಆಗಿದ್ದರಿಂದ ಜಗಳೂರಜ್ಜನೆಂತಲೂ ಪ್ರಸಿದ್ಧಿಯಾಗಿರುತ್ತಾನೆ. ಹೀಗೆ ಪಾಪನಾಯಕ ವಿಜಯನಗರ ಕಾಲದಲ್ಲಿ ಹಂಪಿಯಲ್ಲಿದ್ದವನಿಗೂ ಈ ಪಾಳೆಯಗಾರರ ಅವಧಿಗೂ ವ್ಯತ್ಯಾಸವಿದ್ದಂತಿದೆ.

ವಿಜಯನಗರೋತ್ತರ ಕಾಲದಲ್ಲಿ ಪಾಪನಾಯಕ ಎಂಬ ಹೆಸರು ಹೆಚ್ಚು ಪ್ರಚಲಿತಕ್ಕೆ ಬರುತ್ತದೆ. 'ವಿಜಯನಗರದ ವೆಂಕಟಪತಿ ಅರಸರನಿಗೆ ಕ್ರಮೇಣ ಶತ್ರುಗಳ ಕಾಟ ಹೆಚ್ಚಾಗಿತ್ತು. ಕಸ್ತೂರಿ ರಂಗ, ವೇಲುಗೋಟಿ ಎಚ್ಚಮನಾಯಕ ರಾಜನ ಶತೃಗಳನ್ನು ಸದೆಬಡಿದು ಅನೇಕ ಯುದ್ಧಗಳಲ್ಲಿ ರಾಜನಿಗೆ ಜಯ ತಂದುಕೊಟ್ಟರು. ಗುತ್ತಿ, ಕಂದನವೋಲು, ಗಂಡಕೋಸಿ, ವೇಲೂರುಗಳಲ್ಲಿ ಯುದ್ಧ ನಡೆದು ವಿಜಯನಗರದ ವೆಂಕಟಪತಿಗೆ ವೇಲುಗೋಟಿ ವಂಶ ನಿಷ್ಠೆಯನ್ನು ತೋರಿತು. ಉತ್ತರ ಮೆರೂರಿನಲ್ಲಿ ಯುದ್ಧ ನಡೆದು ಅರವೀಡು ವೆಂಕಟಪತಿಗೆ ಜಯಸಿಕ್ಕಿತು. ಪೆರಿಮೇಟಿ, ಚಂಗಲಪೇಟೆ, ವೇಲೂರಿನವರೆಗೂ ಮಧುರಾಂತಕಮ್‌ನ ಹತ್ತಿರ ಪಾಳೆಯವನ್ನು ಸ್ಥಾಪಿಸಿ, ಉತ್ತರ ಮೆರೂರಿನಲ್ಲಿ ಕೋಟೆ ಕಟ್ಟಿಸಿದ. ವೆಂಕಟಪತಿ ವೇಲುಗೋಟಿ ಎಚ್ಚಮನಿಗೆ ಹೊಸ ಪ್ರದೇಶಗಳ ಹೆಚ್ಚಿನ ಜವಾಬ್ದಾರಿ ಕೊಟ್ಟ. ಶತ್ರುಗಳನ್ನು ಹಿಮ್ಮೆಟ್ಟಿಸಿದ. ವೆಲ್ಲೂರಿನ ದೊರೆ ಲಿಂಗಮನಾಯಕನನ್ನು ಮಟ್ಟ ಹಾಕುವುದಾಗಿತ್ತು. ವೆಲ್ಲೂರಿನ ಲಿಂಗಮನಾಯಕ ಎಚ್ಚಮನ ವಿರೋಧಿಯಾಗಿದ್ದ, ಒಂದು ಒಕ್ಕೂಟವನ್ನು ಸ್ಥಾಪಿಸಿದ. ಅದು ಅರಾಡಿನಾಗಮ ನಾಯಕ, ಪಾಳೆಯಗಾರ ಮತ್ತು ಅವನ ಭಾವ ಮೈದುನ ಖ್ಯಾತ ವೀರನಾದ ದಾವಲಪಾಪನಾಯಕ. ದಾವಲ ಪಾಪನಾಯಕನು ಯುದ್ಧಕ್ಕೋಸ್ಕರವಾಗಿ ಕುದುರೆ, ಸೈನ್ಯ ಮತ್ತು ಆನೆಗಳನ್ನೊಳಗೊಂಡ ಒಂದು ಬೃಹತ್

ಪಕ್ಷವನ್ನು ಸಂಘಟಿಸಿದ್ದನು. ಯುದ್ಧಕ್ಕೋಸ್ಕರ ಆನೆ ಮತ್ತು ಕುದುರೆಗಳನ್ನು ಜಿಂಜಿ ಮತ್ತು ತಂಜಾವೂರುಗಳಿಂದ ತಂದು ಅವುಗಳದೇ ಸೈನ್ಯವನ್ನು ಸಂಘಟಿಸಿದನು. ದಾವರ್ಣಪಾಪನಾಯಕನು ಎಚ್ಚಮನಾಯಕನನ್ನು ನೇರ ಯುದ್ಧದಲ್ಲಿ ಎದುರಿಸಲು ತೀರ್ಮಾನಿಸಿದ್ದ. ಆದರೆ ದಾವರ್ಣ ಪಾಪನಾಯಕ ಈ ಯುದ್ಧದ ತೀರ್ಮಾನವು ಎಚ್ಚಮನನ್ನು ಎದುರಿಸಿದ ವಿಷಯವು ಅಸಾಧಾರಣವಾದುದಲ್ಲ. 1601 ಮೇ 1ರಂದು ಎಚ್ಚಮನಾಯಕನು ತಮ್ಮನಾದ ಸಿಂಗಮನಾಯಕನೊಂದಿಗೆ ಆಕ್ರಮಣವನ್ನು ಮಾಡಿದ. ಇಬ್ಬರಿಗೂ ಯುದ್ಧ ನಡೆದು ರುಂಡ-ಮುಂಡಗಳು ಚೆಂಡಾಡಿ ರಕ್ತದ ಕೋಡಿ ಹರಿಯಿತು. ಎಚ್ಚಮನಿಗೆ ವಿಜಯ ಲಭಿಸಿತು. ಅರವೀಡು ವೆಂಕಟಪತಿದೇವರಾಯನು ವಿಜಯೋತ್ಸವ ಹಬ್ಬ ಆಚರಿಸಿದನು. ಎಚ್ಚಮನಾಯಕ ಚಂಗಲಪೇಟೆ, ವೇಲೂರು, ಮಧುರಾಂತಕನಣನ ಬಳಿ ಪಾಳೆಯಪಟ್ಟು ಸ್ಥಾಪಿಸಿ ಸ್ಮಾರಕಗಳನ್ನು ನಿರ್ಮಿಸಿದ. ಗೊಬ್ಬೂರಿ ಜಗರಾಯನು ಮತ್ತು ವೆಂಕಟಪತಿ ದೇವರಾಯನಿಗೂ ತೋಪುರ ಯುದ್ಧವಾಯಿತು. ವೇಲುಗೋಟಿ ಎಚ್ಚಮನಾಯಕನಿಗೂ ದಾಮರ್ಲ ಚನ್ನಪ್ಪನಾಯಕನಿಗೂ ಯುದ್ಧವಾಗುತ್ತದೆ. 1616 ಡಿಸೆಂಬರ್‌ನಲ್ಲಿ ಕಾವೇರಿ ನದಿ ಹತ್ತಿರ ತೋಪುರ ಬಳಿ ಯುದ್ಧವಾಗಿ, ಜಗರಾಯ ಸತ್ತುಹೋದನು. ದಾಮರ್ಲವಂಶ ಅರವೀಡು ವಂಶದ ಸ್ನೇಹ ಬಯಸಿತು. ಸಣ್ಣ ಸಣ್ಣ ರಾಜ್ಯಗಳು ಹುಟ್ಟಿಕೊಂಡರೂ, ಅರವೀಡು ಆಳ್ವಿಕೆಯಲ್ಲಿ ವೇಲುಗೋಟಿ ಮತ್ತು ದಾಮರ್ಲ ವಂಶಗಳು ಪ್ರಬಲವಾಗಿದ್ದವು. ವಿಜಯನಗರ ಸಾಮ್ರಾಜ್ಯವನ್ನಾಳಿದ ನಾಲ್ಕು ವಂಶಗಳಲ್ಲಿ ಕೆಲವು ವ್ಯಕ್ತಿ, ಸಮುದಾಯ, ಪ್ರದೇಶಗಳು ನಿರ್ಣಾಯಕ ಪಾತ್ರ ವಹಿಸಿವೆ.

ಪಾಪಯ್ಯ ಎಂಬ ವ್ಯಕ್ತಿ ವಿಜಯನಗರ ಕೃಷ್ಣದೇವರಾಯನ ಆಳ್ವಿಕೆಯಲ್ಲಿ ದಂಡನಾಯಕ ಅಥವಾ ಅಮರನಾಯಕ ಆಗಿರುವ ಸಾಧ್ಯತೆಯಿದೆ. ಏಕೆಂದರೆ ರಾಜನ ಧರ್ಮಕ್ಕೆ ಪುಣ್ಯವಾಗಲೆಂದು ಪಾಪಯ್ಯ ದೇವಸ್ಥಾನ ನಿರ್ಮಾಣ ಮಾಡಿಸುತ್ತಾನೆ. ಹಾಗಾಗಿ ಈತ ಪ್ರಭಾವಿ ವ್ಯಕ್ತಿ ಇರಬೇಕು. ಈತನ ಸಾಧನೆ, ಪವಾಡಗಳಿಂದಲೇ ಹಲವು ಹೆಸರುಗಳಿಂದ ಕರೆದಿರಬೇಕು. ತುಳುವ ಅವಧಿಯಲ್ಲಿ ಪಾಪಯ್ಯ, ಪಾಪನಾಯಕ ಎಂದು ಅರವೀಡು ಅವಧಿಯಲ್ಲಿ ದ್ಯಾವರ್ಲು ಪಾಪನಾಯಕ, ಪರದೇಶಿ ಪಾಪನಾಯಕ, ಸೂರ್ಯಪಾಪನಾಯಕ, ಪಾಪಜ್ಜ, ಜಗಳೂರಜ್ಜ, ಜಗಳೂರು ಪಾಪನಾಯಕ ಎಂದು ಆಯಾ ಪ್ರಾದೇಶಿಕತೆಗೆ ತಕ್ಕಂತೆ ಕರೆದಿರಬೇಕು.

ಪಾಪಯ್ಯ ದಂಡನಾಗಿದ್ದು, ರಾಜದ್ರೋಹದ ಅಪರಾಧವೋ/ ಇನ್ಯಾವ ಕಾರಣವೋ ರಾಜಧಾನಿ ಕೇಂದ್ರದಿಂದ ಗಡಿಪಾರು ಹೊಂದಿರಬೇಕು. ಪ್ರಾಮಾಣಿಕ ವ್ಯಕ್ತಿ, ಪವಾಡ ಪುರುಷನಾದ ಕಾರಣ ಈತನ ಸ್ಮರಣಾರ್ಥ ಪಾಪನಾಯಕನಹಳ್ಳಿ ಎಂಬ ಗ್ರಾಮಕ್ಕೆ ನಾಮಕರಣ ಮಾಡಿರಬೇಕು.

ವಿಜಯನಗರ ಕಾಲದಲ್ಲಿದ್ದ ಸಂಘಟನೆ ಮತ್ತು ಹೋರಾಟಕ್ಕೆ ಅಮರ ನಾಯಕರೇ ಕಾರಣ. ಇವರಲ್ಲಿ ಅರವೀಡು ವಂಶವನ್ನು ಚಂದ್ರಗಿರಿಯಲ್ಲಿ ಅಧಿಕಾರಕ್ಕೆ ತರಲು ಪ್ರಾಮಾಣಿಕ ಹೋರಾಟ ಮಾಡಿದ್ದು ಎಚ್ಚಮನಾಯಕ. ಇಂಥವರ ವಿರುದ್ಧ ಬೇರೊಬ್ಬರನ್ನು ಸಿಂಹಾಸನಕ್ಕೆ ತರಲು ಜಗ್ಗರಾಯ ಪ್ರಯತ್ನ ಮಾಡಿದ್ದ. ಇವನಿಗೆ ಸಹಾಯ ಮಾಡಿ ಯುದ್ಧದಲ್ಲಿ ಹೋರಾಡಲು ಶಕ್ತಿ ತುಂಬಿದವನು ದ್ಯಾವರ್ಲ ಪಾಪನಾಯಕ. ಈ ಪಾಪನಾಯಕನೇ ಹಂಪಿಯಿಂದ ಹೊರಟು ದಶಮಾಪುರ, ಜಗಳೂರು, ಚಳ್ಳಕೆರೆಗಳ ಮೂಲಕ ತಿರುಪತಿ ಯಾತ್ರೆ ಮಾಡುತ್ತಾನೆ. ಆನಂತರ ಪವಾಡ ಪುರುಷ, ಸನ್ಯಾಸಿಯಾಗಿ ಜನಪ್ರಿಯವಾಗುತ್ತಾನೆ. ವಿಜಯನಗರದ ಪಾಪಯ್ಯ ಮತ್ತು ಜಗಳೂರು ಪಾಪನಾಯಕ ಒಂದೇ ಆಗಿರಬೇಕೆಂದು ಊಹಿಸಬಹುದು.

1. ಪ್ರಸ್ತುತ ಪ್ರಬಂಧ ವಿಜಯನಗರ ಕಾಲದ ಹಂಪಿ-ಕಮಲಾಪುರ ಪರಿಸರದ ವ್ಯಕ್ತಿ ಮತ್ತು ಸ್ಥಳನಾಮಕ್ಕೆ ಸಂಬಂಧಿಸಿದೆ.
2. ಪಾಪಯ್ಯ ವಿಜಯನಗರದಲ್ಲಿದ್ದು, ಆನಂತರ ಬೇರೆ ಬೇರೆ ಕಡೆ ನೆಲಸಿದ್ದ. ಅಧಿಕಾರದಲ್ಲಿದ್ದಾಗ ಸಾಧನೆ ಮಾಡಿ, ಪವಾಡ ಪುರುಷನಾಗಿದ್ದಾನೆ.
3. ನಿಡುಗುಲ ಗ್ರಾಮಕ್ಕೆ ಪಾಪನಾಯಕಪುರ, ಹಳ್ಳಿ ಎಂದು ಅನಂತರದ ಅರಸರು ನಾಮಕರಣ ಮಾಡಿರುತ್ತಾರೆ.
4. ಹಂಪಿ, ಕಮಲಾಪುರ, ಪಾಪಿನಾಯಕನಹಳ್ಳಿ, ದಶಮಾಪುರ, ಚಳ್ಳಕೆರೆ, ತಿರುಪತಿ ಮೊದಲಾದ ಯಾತ್ರಾಸ್ಥಳಗಳು ಪ್ರಾಮುಖ್ಯತೆ ಪಡೆದಿವೆ.

5. ಈವರೆಗೆ ಪಾಪನಾಯಕ ಮತ್ತು ಗಾದರಿಪಾಲನಾಯಕ ಅಣ್ಣ ತಮ್ಮಂದಿರೆಂದು ನಂಬಲಾಗಿತ್ತು. ಇಲ್ಲಿ ವೃತ್ತಿ ಮತ್ತು ಸೇವೆಯಲ್ಲಿ ಬೇರೆ ಬೇರೆ ಎಂದು ತಿಳಿಯುತ್ತದೆ.
6. ಅಮರನಾಯಕ, ದಳಪತಿ, ದಂಡನಾಯಕ ಮನೆತನಗಳಂತೆ ಪಾಪಯ್ಯನ ಮನೆತನ ಇಲ್ಲಿರಬೇಕು. ಆತನ ತಂದೆ ಸೂರಪ್ಪ (ರಾಜ ಅನ್ನಯ್ಯ) ಇರಬೇಕು.
7. ವೇಲುಗೋಟಿ ಕಸ್ತೂರಿ ರಂಗಪ್ಪನಾಯಕನಂತೆ ಮಗ ವೇಲುಗೋಟಿ ಎಚ್ಚಮನಾಯಕ ಪ್ರಾಮಾಣಿಕತೆಯಿಂದ ಹೋರಾಡುತ್ತಾನೆ.
8. ಸೂರ್ಯನ ಆರಾಧನೆ ವಿಜಯನಗರ ಸಾಮ್ರಾಜ್ಯದಲ್ಲಿತ್ತು ಎಂಬುವುದಕ್ಕೆ ಸೂರ್ಯಶಿಲ್ಪ, ದೇವಾಲಯಗಳೇ ಸಾಕ್ಷಿ. ಸೂರ್ಯವಂಶದವರು ತಮ್ಮ ಹೆಸರಿನ ಮುಂದೆ ಸೂರೆ ದೇವಯ್ಯನು, ಸೂರ್ಯ ಪಾಪಯ್ಯನು ಒಂದೇ ಎಂದು ಕರೆದುಕೊಳ್ಳುತ್ತಾರೆ.
9. ಪಾಪನಾಯಕನಹಳ್ಳಿಯಲ್ಲಿರುವ ಸ್ಮಾರಕಗಳು ಒಬ್ಬ ಸಾಮಂತ ಅಥವಾ ಅಧಿಕಾರಿ ಆಳಿದ ಬಗ್ಗೆ ಕುರುಹುಗಳಾಗಿ ಸಾಬೀತು ಪಡಿಸುತ್ತವೆ.
10. ಒಟ್ಟಾರೆ ಹೇಳುವುದಾದರೆ ಕೃಷ್ಣದೇವರಾಯನ ಕಾಲದ ಪಾಪಯ್ಯ ಒಬ್ಬ ದಂಡನಾಯಕನಾಗಿದ್ದು ಅನಂತರ ದೈವತ್ವಕ್ಕೇರಿಸಲಾಗಿದೆ. ಆ ಹಿನ್ನೆಲೆಯಲ್ಲಿ ಪಾಪನಾಯಕನಹಳ್ಳಿಗೆ ಆತನ ಹೆಸರನ್ನು ಮರು ನಾಮಕರಣ ಮಾಡಲಾಗಿದೆ.

ಪಾಪನಾಯಕನ ಹೆಸರಿನ ಗ್ರಾಮಗಳು ಉದಯವಾಗಲು ಪಾಪನಾಯಕ ಎಂಬ ಪವಾಡ ಪುರುಷ (ಹೋರಾಟಗಾರ ಹಾಗೂ ಅಧಿಕಾರಿ) ಕಾರಣವಾಗಿದ್ದಾನೆ. ಈ ಬಗ್ಗೆ ಅಧ್ಯಯನ ಮಾಡಿರುವ ದಶಮಾಪುರ ಗ್ರಾಮದ ಡಾ.ಎಂ.ಕೆ. ದುರುಗಪ್ಪ ಹೀಗೆ ವಿವರಿಸಿದ್ದಾರೆ. 'ದಶಮಾಪುರ ಗ್ರಾಮದ ಸ್ಥಾಪನೆಗೆ ಸಂಬಂಧಿಸಿದ ಕಂಚಿನ ಪತ್ರಗಳು ಎಂಬ ಲೇಖನದಲ್ಲಿ (ಇತಿಹಾಸ ದರ್ಶನ ಸಂ–18, ಪು–124–126) ಹಗರಿಬೊಮ್ಮನಹಳ್ಳಿ ತಾಲೂಕು (ಬಳ್ಳಾರಿ ಜಿಲ್ಲೆ) ದಶಮಾಪುರ ಗ್ರಾಮ ಸ್ಥಾಪನೆ ಮಾಡಿದ ವಂಶಸ್ಥರ ವಿವರವಿದೆ. ಕ್ರಿ.ಶ. 1449ರಲ್ಲಿ ಜರಿಮಲೆ ಪಾಳೆಯಗಾರರ ಲೂಟಿಗೆ ಅಂಜಿ ತುಂಗಭದ್ರ ದಕ್ಷಿಣ ಕರ್ನಾಟಕ ಮಧ್ಯದ ದಟ್ಟ ಅರಣ್ಯ ಪ್ರದೇಶದ ಪಾಲನಹಳ್ಳಿ ಎಂಬ ಮ್ಯಾಸರಹಟ್ಟಿಯಲ್ಲಿ ಪಾಲಯ್ಯ, ಬೋರಯ್ಯ ಮತ್ತು ದೊಡ್ಡ ಪಾಲಯ್ಯ ಎಂಬುವರು ಅಜ್ಞಾತದಲ್ಲಿದ್ದರು. ಇವರು ತಮ್ಮ ನಿತ್ಯ ಕರ್ಮದಂತೆ ಬೇಟೆಯಲ್ಲಿ ತೊಡಗಿರುವಾಗ ಯುಗಾದಿ ಅಮವಾಸ್ಯೆಯಂದು ಬೇಟೆಯಾಡಲು ಪಾಲನಹಳ್ಳಿ ಪಶ್ಚಿಮ ದಿಕ್ಕಿಗೆ ಪ್ರಯಾಣ ಬೆಳೆಸಿದರು. ಅಲ್ಲಿ ಬೇಟೆ ನಾಯಿಗಳನ್ನು ಮೊಲಗಳು ಹೆದರಿಸಿ ನಿಂತಿರುವ ದೃಶ್ಯವನ್ನು ಕಂಡು ಇವರು ಬೆರಗಾದರು. ಈ ವಿಷಯ ಶ್ರೀ ಗುರು ಸಿದ್ಧ ಸ್ವಾಮಿಗಳಿಗೆ ವಿಷಯ ತಿಳಿಸಿದರು. ಅವರು ಗಂಡುಮೆಟ್ಟಿನ ಭೂಮಿ ಎಂದು 18 ಗುಡಿಸಲುಗಳನ್ನು ನಿರ್ಮಿಸಿ ಕೆಲವರು ಅಲ್ಲಿ ನೆಲಸಿದರು. ಗುರುಗಳಿಗೆ ಒಂದು ಮಠವನ್ನು ಕಟ್ಟಿಕೊಟ್ಟರು. ಹೊಸ ಗ್ರಾಮಕ್ಕೆ 'ದಶಮಾಪುರ' ಎಂದು ಕರೆದರು. ಬೇಡ ಜನಾಂಗದ ಪಾಳೆಯಗಾರರಾದ ಜರಿಮಲೆಯವರು ಅದೇ ಸಮುದಾಯಕ್ಕೆ ಅನ್ಯಾಯ ಮಾಡಿರುವುದಕ್ಕೆ ಲೇಖಕರು ಪತ್ತೆ ಹಚ್ಚಿದ್ದಾರೆ.[13] ಅಜ್ಞಾತದಲ್ಲಿದ್ದ ಪಾಲಯ್ಯ ಸಹೋದರರು ಬೇಡರೆ ಆಗಿದ್ದರು. ಮ್ಯಾಸರಹಟ್ಟಿ, ಪಾಲಯ್ಯನಹಳ್ಳಿಯಾಗಿ ಈಗ ದಶಮಾಪುರ ಆಗಿದೆ. ಆದರೆ ಪಾಲನಹಳ್ಳಿ, ಮ್ಯಾಸರಹಟ್ಟಿಯನ್ನು ಚಲ್ಮನಹಳ್ಳಿ, ಈಚಲು, ಚಲಪ್ಪನಹಳ್ಳಿ ಎಂದು ಕರೆಯುವರು. ಇಲ್ಲಿ ಮ್ಯಾಸ ನಾಯಕ ಬುಡಕಟ್ಟಿನ ಸಹೋದರರು ಗ್ರಾಮ ನಿರ್ಮಾಣದಲ್ಲಿ ಕ್ರಮವಹಿಸಿದಂತೆ ಪಾಪಯ್ಯನ ಹೆಸರಲ್ಲಿ ಪಾಪಿನಾಯಕನಹಳ್ಳಿ ಗ್ರಾಮ ನಿರ್ಮಾಣವಾದ ಇತಿಹಾಸವನ್ನು ಗಮನಿಸುವುದು ಸೂಕ್ತವೆನಿಸಿದೆ.

ಪಾಪಿನಾಯಕನಹಳ್ಳಿ ಚಾವಡಿಯ ಮುಂದಿರುವ ಶಾಸನದಲ್ಲಿ ಶಾಲಿವಾಹನ ಶಕ ವರ್ಷ 1433ನೆಯ ಪ್ರಜಾಪತಿ, ಚೈತ್ರ ಶು. 13 ಬುಧವಾರ (ಕ್ರಿ.ಶ. 12.3.1511) ಕೃಷ್ಣರಾಯನು ನಾನಾ ಗೋತ್ರದ ಮಹಾಜನಗಳಿಗೆ ನಾರಿಸೀಮೆಯ ಹರಿಪದೇವನಹಳ್ಳಿಯನ್ನು ಕೃಷ್ಣ ರಾಯಪುರವೆಂದು ಮರುನಾಮಕರಣ ಮಾಡಿ ದಾನ ನೀಡಿದ ವಿವರವಿದೆ.[14] ಮೂಲ ಹೆಸರುಗಳನ್ನು ಬದಲಿಸಿ ರಾಜನ ಹೆಸರನ್ನು (ಮರುನಾಮಕರಣ) ಇಟ್ಟಿರುವುದು ಸ್ಪಷ್ಟ.

ಇದೇ ಗ್ರಾಮದ ಅಂಕಾಲಮ್ಮನ ಗುಡಿಯ ಮಂಟಪದ ಕಂಬದಲ್ಲಿನ ಶಾಸನವು ತೆಲುಗು ಭಾಷೆಯಲ್ಲಿದ್ದು, ತ್ರುಟಿತಗೊಂಡಿದೆ. ಶಾಲಿವಾಹನ ಶಕವರ್ಷ 1454ನೆಯ ನಂದನ, ಶ್ರಾವಣ, ಬ. 30 ಗುರುವಾರ ಕ್ರಿ.ಶ. 1.8.1532 ಅಚ್ಯುತ ದೇವರಾಯನ

ಕಾಲದಲ್ಲಿ ನಿಡುಗಲ ಅಥವಾ ಅಪಿನಾಯಕನ ಪುರವನ್ನು ಆರುಗೊಂಡ ಅಂಕಾಲದೇವಿಯ ಅಮೃತಪಡಿಗೆ ತಲಾರಿ ತಿಮ್ಮನಾಯಕನು ನೀಡುತ್ತಾನೆ.[15] ಪಾಪಿನಾಯಕನಹಳ್ಳಿ ವಿಜಯನಗರ ಪೂರ್ವದಲ್ಲಿ ನಿಡುಗಲ ಎಂಬ ಹೆಸರನ್ನು ಹೊಂದಿತ್ತು. ಸ್ಥಳೀಯ ವ್ಯಕ್ತಿ ಪಾಪಯ್ಯನಿಂದ ಅಪಿನಾಯಕಪುರ ಎಂದು ಮರು ನಾಮಕರಣ ಪಡೆಯಿತು. ಅಂದಿಗೆ ಗ್ರಾಮದ ಉಸ್ತುವಾರಿಯನ್ನು ತಳವಾರ ನೋಡಿಕೊಳ್ಳುತ್ತಿದ್ದ. ಪಾಪಯ್ಯನಾಯಕ ಸ್ಥಳೀಯ ಅಧಿಕಾರಿಯಾಗಿದ್ದದ್ದು ಸ್ಪಷ್ಟ. ಹಂಪಿ ಪರಿಸರದಲ್ಲಿ ನೆಲಸಿದ್ದ ಪಾಪಯ್ಯ ಅಥವಾ ಪಾಪನಾಯಕ ರಾಜದ್ರೋಹ ಎಸಗಿದ ಕಾರಣಕ್ಕೋ ಏನೋ ಅಥವಾ ಬೇರೆ ಸೀಮೆಗಳ ಜವಾಬ್ದಾರಿಯನ್ನು ಕೊಟ್ಟಿರಬೇಕು. ಹಾಗಾಗಿ ದೇಶ ಸಂಚಾರ ಮಾಡುವುದು ಕಂಡುಬರುತ್ತದೆ. ಹಂಪಿ, ಕಮಲಾಪುರ, ಪಾಪಿನಾಯಕನಹಳ್ಳಿ, ಜಗಳೂರು, ಚಳ್ಳಕೆರೆ (ಗೋರ್ಲಕಟ್ಟೆ) ತಿರುಪತಿ ಮೊದಲಾದ ಸ್ಥಳಗಳೊಡನೆ ಇವನಿಗೆ ನಂಟಿದೆ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ, ಪಾಪಿನಾಯಕನಹಳ್ಳಿ ಗ್ರಾಮದಲ್ಲಿ ಅಂಕಾಲದೇವಿ, ಮಾಂಕಾಳಮ್ಮ, ನೂಕಲ ಪರಮೇಶ್ವರಿ, ನಾಂಚರಮ್ಮ, ಗಾಳೆಮ್ಮ, ಎಕ್ಕಲಾದೇವಿ, ಮಾರಮ್ಮ, ದುರ್ಗಮ್ಮ, ಚೌಡಿ ಇತರ ದೇವತೆಗಳ ಆರಾಧನೆಯು ಇತ್ತು.[16] ಇಲ್ಲಿ ಪಾಪನಾಯಕ ದೇವಾಲಯವಾಗಲಿ, ಶಾಸನವಾಗಲಿ ದೊರೆತಿಲ್ಲದಿರುವುದು ಖೇದಕರ ಸಂಗತಿ.

ಒಟ್ಟಾರೆ ಹೇಳುವುದಾದರೆ, ವಿಜಯನಗರ ಕಾಲದಲ್ಲಿ ಪಾಪಯ್ಯ ಅಥವಾ ಪಾಪನಾಯಕ ಎಂಬ ಅಧಿಕಾರಿ ಇಂದಿನ ಬೇಟೆಗಾರರ ಹೆಬ್ಬಾಗಿಲು ಪ್ರದೇಶದಲ್ಲಿ ಶಾಸನ ಹಾಕಿಸಿದ್ದು ಸ್ಪಷ್ಟ.[17] ಇವನ ಸಾಹಸ ಮತ್ತು ಅಧಿಕಾರಕ್ಕೆ ಸಂಬಂಧಿಸಿದಂತೆ ಬೇರೆ ವರ್ಗಾವಣೆ ಆಗಿರುವ ಸಾಧ್ಯತೆಯಿದ್ದು, ಇಂದಿನ ಪಾಪಿನಾಯಕನಹಳ್ಳಿಯಲ್ಲಿ ಸುಂಕ ವಸೂಲು ಮಾಡುವ ಅಧಿಕಾರಿಯಾಗಿ, ಪವಾಡ ಪುರುಷನಾಗಿದ್ದನು. ಹಾಗಾಗಿ ಪಾಪಿನಾಯಕನಹಳ್ಳಿ ಎಂಬ ಹೆಸರು ಬಂದಿದೆ. ಇಲ್ಲಿಂದ ಕ್ರಮೇಣ ಜಗಳೂರು, ಗೋರ್ಲಕಟ್ಟೆ, ತಿರುಪತಿ ಯಾತ್ರೆ ಮಾಡಿ ಬಂದ ಕಾರಣ ಪ್ರಸಿದ್ಧ ವ್ಯಕ್ತಿಯಾಗಿ ಜಗಪತಿರಾಯ ಎಂಬ ಪಾಳೆಯಗಾರನಿಂದ ಜಗಳೂರಿನಲ್ಲಿ ಕಾಲವಾಗುತ್ತಾನೆ. ಸ್ಥಳೀಯ ಮತ್ತು ಮೌಖಿಕ ಚರಿತ್ರೆಯಲ್ಲಿ ಪಾಪಯ್ಯ ಮತ್ತು ಪಾಪನಾಯಕನಹಳ್ಳಿ ಎಂಬ ಎರಡು ಸಂಗತಿಗಳು ಮಹತ್ತವಾಗಿರುವುದು ಸ್ಮರಣೀಯ.[18] ಆಯಾ ಪ್ರಾದೇಶಿಕತೆಗೆ ತಕ್ಕಂತೆ ಈತನ ಅನುಯಾಯಿಗಳು ದೈವತ್ವಕ್ಕೇರಿಸಿ ಜಗಳೂರಜ್ಜ, ಪಾಪಯ್ಯ, ಪಾಪನಾಯಕ ಎಂದು ಇಂದಿಗೂ ಆರಂಭಿಸುವ ರೂಢಿ ಮತ್ತು ಸಂಪ್ರದಾಯಗಳಿವೆ.

ಆಧಾರ ಸೂಚಿ ಮತ್ತು ಟಿಪ್ಪಣಿಗಳು

1. ಚನ್ನಬಸಪ್ಪ ಎಸ್ ಪಾಟೀಲ (ಸಂ) **ವಿಜಯನಗರ (ಹಂಪೆಯ) ಶಾಸನಗಳು,** ಪಾಪಯ್ಯ ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, 1996, ಪು. 111 (ಶಾ.ಸಂ. 389)
2. ಪುರುಷೋತ್ತಮ ಬಿಳಿಮಲೆ, ಚಲುವರಾಜು, **ಹಂಪಿ ಜಾನಪದ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 1996, ಪು. 106
3. ಪಿ.ಬಿ. ದೇಸಾಯಿ, **ವಿಜಯನಗರ ಸಾಮ್ರಾಜ್ಯ,** ಇತಿಹಾಸ ಸಂಶೋಧನಾ ಮಂಡಲ, ಧಾರವಾಡ, ಪು. 26
4. ವಿವಿಧ ಲೇಖಕ/ಸಂಪಾದಕರು, **ಹೊಸಪೇಟೆ ತಾಲೂಕು ದರ್ಶನ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2001, ಪು. 81
5. ಕೆ.ಎಸ್. ಶಿವಣ್ಣ (ಸಂ) **ಸಮಗ್ರ ಕರ್ನಾಟಕ ಚರಿತ್ರೆ,** ಸಂಪುಟ–3, 1997, ಪು. 353
6. ನೋಡಿ, ಅದೇ, ಪು. 218
7. ರಾಬರ್ಟ್ ಸಿವೆಲ್ (ಮೂಲ) ಸದಾನಂದ ಕನವಳ್ಳಿ (ಅನು), **ಮರೆತು ಹೋದ ಮಹಾಸಾಮ್ರಾಜ್ಯ** ವಿಜಯನಗರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 1993, ಪು. 391–393
8. ಸಿಂಬಲ್ಸ್ ಆಫ್ ಸಬ್‌ಸ್ಟೆನ್ಸ್, ಪು. 237
9. ಲಕ್ಷ್ಮಣ್ ತೆಲಗಾವಿ (ಸಂ), **ಜರಿಮಲೆ ಸಂಸ್ಥಾನದ ವಂಶಾವಳಿ,** 'ಚಂದ್ರವಳ್ಳಿ', ಪು. 37
10. ನೋಡಿ: ಎನ್. ವೆಂಕಟರಮಣಯ್ಯ, **ವಿಜಯನಗರ ಆರಿಜಿನ್ ಆಫ್ ದಿ ಸಿಟಿ ಆಂಡ್ ದ ಎಂಪೈರ್,** ಏಷಿಯನ್ ಎಜುಕೇಷನಲ್ ಸರ್ವಿಸಸ್, ನವದೆಹಲಿ, 1990, ಪು. 108–111
11. ವಸು ಎಂ.ವಿ., **ದಕ್ಷಿಣ ಕರ್ನಾಟಕದ ಅರಸು ಮನೆತನಗಳು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2001, ಪು. 161
12. ಅದೇ ಪು. 76+77+78+79

13. ಎಂ.ಕೆ. ದುರುಗಪ್ಪ, **ದಶಮಾಪುರ ಗ್ರಾಮಸ್ಥಾಪನೆಗೆ ಸಂಬಂಧಿಸಿದಂತೆ ಕಂಚಿನ ಪತ್ರಗಳು, ಇತಿಹಾಸ ದರ್ಶನ,** 2003, ಸಂ–18, ಪು 124–126
14. **ಬಳ್ಳಾರಿ ಜಿಲ್ಲೆಯ ಶಾಸನ ಸಂಪುಟ–1,** A.R. No.745, 1924,sii vol-IX, pt-II, No. 699
15. **ಬಳ್ಳಾರಿ ಜಿಲ್ಲೆಯ ಶಾಸನ ಸಂಪುಟ,** ಚನ್ನಬಸಪ್ಪ ಎಸ್. ಪಾಟೀಲ್ (A.R. No.744, 1922,sii XVI, No. 699) ಸಂ.446 (ಆ್ಯರಿ ಸೌ ಇಎ 1922–23, ಸಂ–1922ರ 744 ಸೌಇಇ XVI ಸಂ.99) ಗಮನಿಸಬಹುದಾಗಿದೆ.
16. ಕೆ.ಎಸ್. ಶಿವಣ್ಣ (ಸಂ) **ಕರ್ನಾಟಕ ಸಮಗ್ರ ಚರಿತ್ರೆ** ಸಂಪುಟ–3, ಪು. 353
17. ಹಂಪಿ–ಕಮಲಾಪುರ ಪರಿಸರದಲ್ಲಿ ನೆಲಸಿರುವ ಮ್ಯಾಸನಾಯಕರು ಇಂದಿಗೂ ಪಾಪಯ್ಯ, ಪಾಪನಾಯಕ, ಪಾಪಜ್ಜ, ಪಾಪೇಶಿ, ಪಾಪಮ್ಮ, ಪಾಪಕ್ಕ ಎಂಬ ಹೆಸರುಗಳನ್ನು ಇಟ್ಟುಕೊಳ್ಳುತ್ತಾರೆ. ಅಲ್ಲದೆ ಇವರು ತಮ್ಮ ಹಿರಿಯರ ಹಬ್ಬವನ್ನು ಮಾಡುವಾಗ ಪಾಪೇ ದೇವರು, ಪರದೇಶಿ ಪಾಪಯ್ಯ, ಸೂರ್ಯ ದೇವ ಪಾಪನಾಯಕ, ಕೋರೇಲು ಪಾಪಯ್ಯ, ಜಗಳೂರಜ್ಜ ಎಂದೆಲ್ಲ ಕರೆದು ಆರಾಧಿಸುವ ಪದ್ಧತಿಯಿದೆ. ಕೋರ್ಲ ಮಲ್ಲಿನಾಯಕ ಮತ್ತು ಬಾಳೆದ ಪಟ್ಟಮ್ಮ ಪಾಪನಾಯಕನ ತಂದೆ ತಾಯಿಗಳು. ಇವರಿಗೆ ಸೂರಪ್ಪನಾಯಕ ಚಿಕ್ಕಪ್ಪನಾಗಬೇಕೆಂದು, ಇವನಿಗೆ ಸೂರಪರಾಜ, ಸೂರೇದೇವ ಮೊದಲಾದ ಹೆಸರುಗಳಿವೆ. ಕಮಲಾಪುರ ಪಟ್ಟಣದ ದಿ. ಗಲಗಲ್ಲು ಸೂರಯ್ಯನ ಮಗ ಡಾ. ಪಾಪಯ್ಯ ಜಗಳೂರು ಪಾಪಯ್ಯನ ಹೆಸರನ್ನು ಇಟ್ಟುಕೊಂಡರೆ, ಇವರ ಅಣ್ಣ ಚಾರ್ಟಡ್ ಅಕೌಂಟೆಂಟ್ ಜಿ. ಸೂರಪ್ಪ ಎಂದು ಹೆಸರನ್ನು ಹೊಂದಿದ್ದಾರೆ. ಸೂರಯ್ಯ ಮತ್ತು ಪಾಪಯ್ಯನಿಗೆ ಹೆಸರಲ್ಲಿ ಅವಿನಾಭಾವ ಸಂಬಂಧವಿದೆ. ಬೇಡರಲ್ಲಿ ಸೂರೇ ದೇವರು ಮತ್ತು ಪಾಪೇದೇವರು ಪ್ರತ್ಯಕ್ಷವಾಗಿದ್ದರೂ ಒಂದೇ ಗುಡಿಯಲ್ಲಿರುವುದು ವಿಶೇಷ.
18. ನೋಡಿ: ವಿರೂಪಾಕ್ಷಿ ಪೂಜಾರಹಳ್ಳಿ, 2002, **ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ವೀರರು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಆಧಾರ ಸೂಚಿ

- Burtontstein: 1997, **Vijayanagara,** Cambridge University Press, (Reprint) New Delhi
- Nilakanta Sastri K.A., 2009, **The illustrated History of South India,** Oxford University Press, New Delhi.
- ರಾಬರ್ಟ್ ಸಿವೆಲ್ (ಅನು) ಸದಾನಂದ ಕನವಳ್ಳಿ: 1992, **ಮರೆತುಹೋದ ಮಹಾಸಾಮ್ರಾಜ್ಯ ವಿಜಯನಗರ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ಎಸ್.ಬಿ. ತಿಪ್ಪನಾಯಕ: 1997, **ಜಗಳೂರು ಪಾಪಜ್ಜ,** ಕಾನಕಟ್ಟೆ (ಪು 1 ರಿಂದ 70ರವರೆಗೆ ಅಪ್ರಕಟಿತ)
- ಚನ್ನಬಸಪ್ಪ ಎಸ್. ಪಾಟೀಲ, 1996, **ವಿಜಯನಗರದ (ಹಂಪೆಯ) ಶಾಸನಗಳು,** ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.
- ಚನ್ನಬಸಪ್ಪ ಎಸ್. ಪಾಟೀಲ (ಸಂ), 1997, **ಬಳ್ಳಾರಿ ಜಿಲ್ಲೆಯ ಶಾಸನಗಳು,** (ಕರ್ನಾಟಕ ಶಾಸನ ಸಂ–2) ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.
- ದೇವರಕೊಂಡಾರೆಡ್ಡಿ (ಸಂ), 1998, **ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ–1,** ಬಳ್ಳಾರಿ ಜಿಲ್ಲೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
- ಮಹದೇವ ಸಿ., ಇತರರು, 2002, **ಹೊಸಪೇಟೆ ತಾಲ್ಲೂಕು ದರ್ಶನ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ರಾಜನ ರಾಜಣ್ಣ, 27.9.1982, **ನಾಯಕ ಜನಾಂಗದ ಇತಿಹಾಸ,** ಚಳ್ಳಕೆರೆ, (ಜಗಳೂರು ಪಾಪನಾಯಕ– ಪುಟ 55 ರಿಂದ 72ರವರೆಗೆ)
- **ಇತಿಹಾಸ ದರ್ಶನ,** ಸಂ 18, 2003, ಕರ್ನಾಟಕ ಇತಿಹಾಸ ಅಕಾಡೆಮಿ (ರಿ) ಬೆಂಗಳೂರು (ದಶಮಾಪುರ ಗ್ರಾಮ ಸ್ಥಾಪನೆಗೆ ಸಂಬಂಧಿಸಿದ ಕಂಚಿನ ಪತ್ರಗಳು, ದುರುಗಪ್ಪ ಎಂ.ಕೆ., ಪು. 124–126)
- ಪಂಡಿತ ರೇವಣ್ಣ ಕವಿಗಳು, 1959, **ವಾಲ್ಮೀಕರ ಪುರಾಣವು,** ದ್ವಾಮವ್ವನಹಳ್ಳಿ,
- ವಿರೂಪಾಕ್ಷಿ ಪೂಜಾರಹಳ್ಳಿ, 2016, **ವೇಲುಗೋಟಿ ಎಚ್ಚಮನಾಯಕನ ಕಥನ,** ಯೋಜನೆ ಹಸ್ತಪ್ರತಿ, ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ವಿರೂಪಾಕ್ಷಿ ಪೂಜಾರಹಳ್ಳಿ, 2002, **ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ವೀರರು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. 104
- ಶಿವಣ್ಣ ಕೆ.ಎಸ್. (ಸಂ), 1997, **ಸಮಗ್ರ ಕರ್ನಾಟಕ ಚರಿತ್ರೆ, ಸಂ–3,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

08. ಆರಾಧ್ಯಶಂಕರ ಕವಿಯ ಗುರು ಮಲ್ಲೇಶನ ಸ್ಥಳ ಯಾವುದು?

– ಡಾ. ಕೆ. ರವೀಂದ್ರನಾಥ

ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ಚಾರಿತ್ರಿಕ ಕಾವ್ಯಗಳಿಗೆ ವಿಶೇಷ ಮನ್ನಣೆಯಿದೆ. ಈ ಮನ್ನಣೆಗೆ ಕಾರಣ 15ನೇ ಶತಮಾನದ ನಂತರ ವಿಜಯನಗರದ ಪತನದ ಹಾದಿ ವಿಸ್ತಾರವಾದಂತೆ; ಏಕೀಕೃತ ಸಾಮ್ರಾಜ್ಯಶಾಹಿ ವ್ಯವಸ್ಥೆ ಒಡೆದು ಸಣ್ಣಪುಟ್ಟ ಪಾಳೆಯಗಾರರ ಮನೆತನಗಳು ಹುಟ್ಟಿಕೊಂಡ ಸಂದರ್ಭದಲ್ಲಿ ಪಾಳೆಯಗಾರರ ಮನೆತನಗಳ ದಾನ–ದತ್ತಿ–ಸಾಮಾಜಿಕ ಕೆಲಸ ಕಾರ್ಯಗಳಂತೆ; ಸಾಂಸ್ಕೃತಿಕ ಆಯಾಮಗಳನ್ನು ಪ್ರತಿನಿಧಿಸುವ ಆಕರಗಳ ರಚನೆ ನಿಂತುಹೋಯಿತು. ಇಂಥ ಸಂದರ್ಭದಲ್ಲಿ ಗ್ರಂಥಸ್ಥವಾಗಿ ದಾಖಲಾಗಬೇಕಿದ್ದ ಇತಿಹಾಸ; ಕಂಠಸ್ಥವಾಗಿ ಶ್ರೀಸಾಮಾನ್ಯರ ನಾಲಿಗೆಯಲ್ಲಿ ಉಳಿಯಿತು. ಕಿವಿಯಿಂದ ಕಿವಿಗೆ ಪ್ರಸಾರವೂ ಆಯಿತು. ಈ ಕಂಠಸ್ಥ ಚರಿತ್ರೆಯನ್ನೇ ಕಾವ್ಯವಾಗಿ ರಚಿಸುವುದರ ಮೂಲಕ ಚರಿತ್ರೆಯ ಪುನರ್ ರಚನೆಗೆ ಕವಿಗಳೂ ಕಾರಣರಾದರು. ಅವುಗಳಲ್ಲಿ ಈಗಾಗಲೇ ವಿದ್ವಾಂಸರಿಗೆ ತಿಳಿದಿರುವಂತೆ ಪಾಂಚಾಳ ಗಂಗನ ಕುಮಾರರಾಮನ ಸಾಂಗತ್ಯ, ಬಾಲಕುಮಾರರಾಮನ ಸಾಂಗತ್ಯ, ನಿಂಬಸಾಮಂತ ಚರಿತೆ, ಗುಂಡಬ್ರಹ್ಮಯ್ಯಗಳ ಚರಿತೆ, ಮೊಲ್ಲೆಬೊಮ್ಮಯ್ಯಗಳ ಕಾವ್ಯಗಳು ಮುಖ್ಯವಾಗಿವೆ.

ಇಂಥ ಚಾರಿತ್ರಿಕ ದೇಶೀ ಕಾವ್ಯಗಳಲ್ಲಿ ಓರಂಗಲ್ಲಿನ ಕಾಕತೀಯ ಅರಸರ ಪ್ರತಾಪರುದ್ರ ಹಾಗೂ ಆತನ ಮಗ ಗಣಪತಿರಾಯನ ಕಾಲದಲ್ಲಿದ್ದ ಗುಂಡಬ್ರಹ್ಮಯ್ಯರ ಕಾವ್ಯವೂ ಒಂದು. ಗುಂಡುಬ್ರಹ್ಮಯ್ಯ ಶಿವಶರಣರು ಓರಂಗಲ್ಲಿಗೆ ಅರೆದಾರಿಯಲ್ಲಿರುವ 'ಗವಚಪುರ'ದವರು. ಮೊರೆಹೊಕ್ಕವರ ಕೊಡೆನೆಂಬ ವೀರವ್ರತದಿಂದ ಶೂಲಕ್ಕೆ ಆಹುತಿಯಾದ ಈ ಶರಣರು ಕುಮಾರರಾಮನಂಥ ವೀರನಿಗೆ ಆದರ್ಶವಾಗಿ ಕಂಡಿರಬೇಕು. ಹೀಗಾಗಿ ಇಂಥವರ ಬದುಕನ್ನು ಶೂಲದ ಹಬ್ಬದ ಮೂಲಕ ಕನ್ನಡ ನಾಡಿನಲ್ಲಿ ಪ್ರಸಾರಿಸುವ ಕಾರ್ಯಕ್ಕೆ ಕುಮಾರರಾಮ ಸಾಂಸ್ಕೃತಿಕ ವಲಯದಲ್ಲಿ ಮಾಡಿರಬೇಕು. ಓರಂಗಲ್ಲಿನ ಮೂಲದ ಇವರು ಕುಮಾರರಾಮನ ಕಾಲಕ್ಕೆ ಕನ್ನಡ ನಾಡಿನಾದ್ಯಂತ ಅದರಲ್ಲೂ ಕುಮ್ಮಟದುರ್ಗದ ಪರಿಸರದಲ್ಲಿ ಆಚರಣೆ–ಆರಾಧನೆಗಳ ಮೂಲಕ ಜನಮಾನಸದಲ್ಲಿ ಉಳಿದಿರಬೇಕು. ಇಂಥ ಜನಜನಿತವಾದ ಕಥೆಯನ್ನೇ ಕುರಿತು ಕನ್ನಡದಲ್ಲಿ ಆರು ಕೃತಿಗಳು ಹುಟ್ಟಿಕೊಂಡಿವೆ. ಅವುಗಳಲ್ಲಿ ಚೆನ್ನಕವಿಯ ಗುಂಡುಬ್ರಹ್ಮಯ್ಯಗಳ ತ್ರಿಪದಿ, ಓದಿಸುವ ಮಡಿವಾಳಯ್ಯನ ಗುಂಡುಬ್ರಹ್ಮಯ್ಯನ ಚೌಪದಿ, ಕಾಶೀಪತಿಯ ಗುಂಡುಬ್ರಹ್ಮಯ್ಯನ ಸಾಂಗತ್ಯ, ಆರಾಧ್ಯ ಶಂಕರನ ಶರಣರಿಗೆ ಶರಣಾರ್ಥಿ ನಾಂದ್ಯ, ನೀಲಗಾರರ ಹಾಡಿನ ಘನಪತಿರಾಯನ ಕಥೆ ಮತ್ತು ಅನಾಮಿಕ ಕವಿಯ ಗುಂಡುಬ್ರಹ್ಮಯ್ಯಗಳ ಗದ್ಯ.

ಉಲ್ಲೇಖಿತ ಐದು ಜನ ಕವಿಗಳಲ್ಲಿ ಶರಣರಿಗೆ ಶರಣಾರ್ಥಿ ನಾಂದ್ಯ ಕಾವ್ಯ ಬರೆದ ಆರಾಧ್ಯ ಶಂಕರನ ಸ್ಥಳ ಯಾವುದು ಎಂಬ ಸಮಸ್ಯೆ ಹಾಗೂ ಚರ್ಚೆ ನನ್ನ ಪ್ರಬಂಧದ ಆಶಯವಾಗಿದೆ.

ಶರಣರಿಗೆ ಶರಣಾರ್ಥಿ ನಾಂದ್ಯ ಕಾವ್ಯ ಬರೆದ 'ಹರಕೃತಿಯ ವಿಸ್ತರಿಸಿದಾರಾಧ್ಯ ಲೋಲಶಂಕರ' ಎಂದೂ 'ಪ್ರೇಮದಿಂ ಬಲಗೊಂಡು ಪೇಳ್ವೆ ಚೇರಮಾಂಕನ ಕಾವ್ಯವನು' ಎಂದಿದ್ದಾನೆ. ಅಂದರೆ ಶರಣರಿಗೆ ಶರಣಾರ್ಥಿ ನಾಂದ್ಯ ಕೃತಿಯ ಇನ್ನೊಂದು ಹೆಸರು ಚೇರಮಾಂಕನ ಕಾವ್ಯ. ಆದರೆ ಅರವತ್ಮೂರು ಶಿವಭಕ್ತರಲ್ಲಿ ಒಬ್ಬನಾದ ಚೇರಮಾಂಕನ ಕುರಿತು ಈ

ಕಾವ್ಯದಲ್ಲಿ ಉಲ್ಲೇಖವಿಲ್ಲ. ಬದಲಾಗಿ ನಿಷ್ಠೆ, ತತ್ವ, ಸಿದ್ಧಾಂತ, ಭಕ್ತಿಗೆ ಬದ್ಧರಾಗಿ ಬದುಕಿದ ಶರಣರ ಕಥೆಗಳ ಸಂಕಲನವೆಂಬಂತೆ ಆರಾಧ್ಯ ಶಂಕರ ಇದನ್ನು ರಚಿಸಿದ್ದಾನೆ. ಒಂದರ್ಥದಲ್ಲಿ ಪ್ರೌಢರಾಯನ ಹೆಸರಿಟ್ಟು ಶರಣರ ಕಥೆಗಳನ್ನು ಹೆಣೆದ ಅದ್ರೀಶ ಕವಿಯ ಪ್ರೌಢರಾಯನ ಕಾವ್ಯ ಜಾತಿಗೆ ಈ ಕೃತಿ ಸೇರುತ್ತದೆ. ಅದೇನೇ ಇರಲಿ ಶರಣರಿಗೆ ಶರಣಾರ್ಥಿ ಕೃತಿ ಬರೆದ ಆರಾಧ್ಯ ಶಂಕರನ ಗುರುವಾದ ಮಲ್ಲೇಶನ ಸ್ಥಳ ಯಾವುದಿರಬಹುದು ಎಂಬುದು ಇಲ್ಲಿಯ ಸಮಸ್ಯೆಯಾಗಿದೆ.

ಮುನಿವರನು ಋಷಿಶೃಂಗನಾಶ್ರಯದ ಮಧ್ಯದೊಳು
ಘನತರದ ತುಂಗೆಭದ್ರೆಯ ತಡಿಯೊಳುಟ್ಟಿರುವ
ವಿನಯದಿಂರಾಜಿಸುವ ಶೃಂಗಪುರ ಪಟ್ಟಣವು
ಮನುಮುನಿಗಳೆರಗಿ ಪಡಮಡುವ ಮಲ್ಲೇಶ್ವರನ ಚರಣಕಮಲಾಧರನೂ॥

ಪೇಳುತಿರ್ದನು ಬಳಿಕ ಆರಾಧ್ಯ ಶಂಕರನು
ಕೇಳುತಿರ್ದನು ಭೂಪ ಅತಿ ಹರುವ ಕೊನರುತಲಿ
ದಾಳಿಸುವ ಜಿಹ್ವೆಯೋಳು ಹರಕೃತಿಯ ವಿಸ್ತರಿಸಿ
ಮೇಳೈಸಿ ಶರಣ ಕುಲಗಡಣದೊಗ್ಗಿನೊಳಲ್ಲಿ ಭವನು ತಲೆದೂಗಲೂ॥

ಈ ಪದ್ಯಗಳಿಂದ ಆರಾಧ್ಯ ಶಂಕರ ಕವಿಯ ಗುರು ಮಲ್ಲೇಶನು ತುಂಗಭದ್ರೆಯ ದಂಡೆಯಲ್ಲಿರುವ ಋಷಿಶೃಂಗಾಶ್ರಮದ ಮಲ್ಲೇಶ್ವರ. ಈತನ ಊರು ಶೃಂಗಪುರ ಪಟ್ಟಣ. ಈತನ ಶಿಷ್ಯ ಆರಾಧ್ಯ ಶಂಕರ ಕವಿ. ಪ್ರಾಯಶಃ ಶೃಂಗಪುರವೆಂದರೆ ಮೊನಚಾದ, ಎತ್ತರವಾದ, ಗುಮ್ಮಟವನ್ನೊಳಗೊಂಡ ಪುರ ಆಗಿರಬಹುದೆ? ಎಂದು ಪ್ರಶ್ನಿಸಿಕೊಳ್ಳುವುದಾದರೆ ಗುಮ್ಮಟಪುರ>ಕುಮ್ಮಟಪುರ ಆಗಿರಬೇಕು. ಹೀಗಾಗಿ ಕ್ರಿ.ಶ. 1650 ಸುಮಾರಿನಲ್ಲಿ ಬದುಕಿದ್ದ ಈತ ಆಗಾಗಲೇ ಹಂಪಿ, ಕಂಪ್ಲಿ ಪರಿಸರದಲ್ಲಿ ಜನಜನಿತವಾಗಿದ್ದ 'ಗುಂಡಬ್ರಹ್ಮಯ್ಯರ' ಕಥೆಯನ್ನೊಳಗೊಂಡಂತೆ ಹಲವು ಶರಣರ ಕಥೆಗಳನ್ನು ಹೆಣೆದು ಅಂಥ ಶರಣರಿಗೆ ಶರಣಾರ್ಥಿ ಸಮರ್ಪಿಸಿದ್ದಂತಿದೆ. ಈ ಹಿನ್ನಲೆಯಲ್ಲಿ ಆರಾಧ್ಯ ಶಂಕರ ಕವಿ ಹಂಪಿ ಪರಿಸರದಲ್ಲಿರುವ ಶೃಂಗಪುರ ಅಂದರೆ ಕುಮ್ಮಟದುರ್ಗದವನಾಗಿರಬೇಕೆಂಬುದು ನನ್ನ ನಿಲುವು ಎಂಬುದನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ.

09. ವಿಜಯನಗರದ ಶಿಲ್ಪಕಲೆ ಮತ್ತು ಚಿತ್ರಕಲೆಗಳಲ್ಲಿ ಜನಸಂಸ್ಕೃತಿ

- ಡಾ. ಎಸ್. ಚಿನ್ನಸ್ವಾಮಿ ಸೋಸಲೆ

ಸಾಮಾನ್ಯವಾಗಿ ಯಾವುದೇ ಹೊಸ ಸಾಮ್ರಾಜ್ಯವಾಗಲಿ ಅಥವಾ ಸಂಸ್ಥಾನವಾಗಲಿ ಸ್ಥಾಪನೆಯಾದಮೇಲೆ ಮೊದಲು ಕೈಗೊಳ್ಳುತ್ತಿದ್ದಂತಹ ಕಾರ್ಯವೆಂದರೆ ದೇವಾಲಯಗಳ ನಿರ್ಮಾಣ. ಇಲ್ಲವೇ ಆಗಲೇ ಅಸ್ಥಿತ್ವದಲ್ಲಿದ್ದಂತಹ ದೇವಾಲಯಗಳಿಗೆ ದತ್ತಿಗಳನ್ನು ಕೊಡುವುದು, ಜೀರ್ಣೋದ್ಧಾರ ಮಾಡಿಸುವ ಕಾರ್ಯದಲ್ಲಿ ತೊಡಗುವುದು. ಏಕೆಂದರೆ ಹೊಸ ಅರಸರಿಗೆ ಇದರಿಂದ ಸಾಮಾನ್ಯ ಜನತೆಯು ಉತ್ತಮ ಬೆಂಬಲ ನೀಡಲೆಂದು ಕೈಗೊಳ್ಳುತ್ತಿದ್ದಂತಹ ತಂತ್ರಜ್ಞಾನಿತ್ವವೂ ಆಗಿರಬಹುದು. ಅಥವಾ ಬಹುಮುಖ್ಯವಾಗಿ ಶ್ರೇಣೀಕೃತ ವ್ಯವಸ್ಥೆಯಲ್ಲಿ ಪ್ರಥಮ ಸ್ಥಾನದಲ್ಲಿ ತಮ್ಮನ್ನು ತಾವೇ ಗುರುತಿಸಿಕೊಂಡು, ತಮ್ಮನ್ನು ದೇವರ ಮಕ್ಕಳೆಂದು ಹೇಳಿಕೊಂಡಿದ್ದ ಬ್ರಾಹ್ಮಣರನ್ನು ಸಂತೃಪ್ತಿ ಪಡಿಸಲು ಸಹ ಈ ಕಾರ್ಯಗಳಿಗೆ ಮುಂದಾಗುತ್ತಿದ್ದರು. ಇದರ ಜೊತೆಗೆ ತಮ್ಮ ರಾಜಕೀಯ ಚಟುವಟಿಕೆಗಳಿಗೆ ಜನ ಸಾಮಾನ್ಯರ ಬೆಂಬಲ ಪಡೆಯಲು ಮಾಡುತ್ತಿದ್ದಂತಹ ಯುಕ್ತಿಯೆಂದು ಹೇಳಿದರೆ ತಪ್ಪಾಗದು. ಈ ಮೇಲಿನ ತಂತ್ರಕ್ಕೆ ವಿಜಯನಗರದರಸರು ಹೊರತಾಗಿರಲಿಲ್ಲ. ಸಾಮ್ರಾಜ್ಯದ ಪ್ರಾರಂಭದ ವಂಶದವರಾದಂತಹ ಸಂಗಮರು ಈ ಮೇಲಿನ ತಂತ್ರ ಹಾಗೂ ಉಪಯೋಗವನ್ನು ಹೆಚ್ಚಿನ ಪ್ರಮಾಣದಲ್ಲಿಯೇ ಪಡೆದರು. ಮೊದಲಿಗೆ ಇವರು ಈಗಾಗಲೇ ರಾಜ್ಯದಾದ್ಯಾಂತ ವಿಶಾಲವಾಗಿ ತನ್ನದೆಯಾದಂತಹ ಶೈಲಿಯಲ್ಲಿ ಶಿಲ್ಪಕಲೆ ಹಾಗೂ ಚಿತ್ರಕಲೆಗಳ ಸಂಸ್ಕೃತಿಯನ್ನು ಅಭಿವೃದ್ಧಿ ಇದರಿಂದಾಗಿ ಇವರೆಲ್ಲರಿಗಿಂತಲೂ ಭಿನ್ನವಾದಂತಹ ಪಡಿಸಿದರು. ಶೈಲಿಯ ಹುಡುಕಾಟದಲ್ಲಿ ವಿಜಯನಗರದರಸರು ತೊಡಗಿದರು. ಹೊಯ್ಸಳರು ತಮ್ಮ ದೇವಾಲಯಗಳನ್ನು ಬಳಪದ ಕಲ್ಲಿನಿಂದ ನಿರ್ಮಿಸಿದ್ದಾರೆ. ಈ ಕಲ್ಲು ಸ್ವಲ್ಪ ಮೃದುವಾದುದರಿಂದ ಸೂಕ್ಷ್ಮ ಕೆತ್ತನೆಗೆ ಹೆಚ್ಚಿನ ಅನುಕೂಲಕರವಾಗಿದ್ದಿತ್ತು. ಅಂದರೆ ಬಳಪದ ಕಲ್ಲು ದಕ್ಷಿಣ ಕರ್ನಾಟಕದಲ್ಲಿ ಮಾತ್ರ ಹೇರಳವಾಗಿ ದೊರಕುತ್ತಿದ್ದಿತು. ವಿಜಯನಗರ ರಾಜಧಾನಿಯ ಸುತ್ತಲೂ ಸುಲಭವಾಗಿ ದೊರಕುತ್ತಿದ್ದದ್ದು ವರಟು ಕಲ್ಲುಗಳು ಅಥವಾ ಬೆಣಚುಕಲ್ಲು, ಇದರಿಂದಾಗಿ ಇವರಿಗೆ ಸುಮಾರು ವರ್ಷಗಳು ಯಾವ ತರಹದ ಕಲ್ಲಿನಿಂದ ದೇವಾಲಯಗಳನ್ನು ಕಟ್ಟಿಸಬೇಕೆನ್ನುವ ಪ್ರಶ್ನೆಯನ್ನು ಎದುರಿಸಬೇಕಾಯಿತು. ಕೊನೆಗೆ ದಕ್ಷಿಣ ಕರ್ನಾಟಕದಿಂದ ಬಳಪದ ಕಲ್ಲನ್ನು ಹಂಪಿಯವರೆಗೆ ಸಾಗಿಸುವುದು ಕಷ್ಟಕರವಾದ ಕೆಲಸವಾದುದರಿಂದ ನೈಸರ್ಗಿಕವಾಗಿಯೇ ತನ್ನ ಸುತ್ತಮುತ್ತಲೇ ಹೇರಳವಾಗಿ ದೊರಕುತ್ತಿದ್ದತಂಹ ಬೆಣಚು ಕಲ್ಲುಗಳನ್ನೇ ದೇವಾಲಯದ ನಿರ್ಮಾಣದ ಕಾರ್ಯಕ್ಕೆ ಉಪಯೋಗಿಸಿರುವುದು ಕಂಡುಬರುತ್ತದೆ. ಈ ನಿರ್ಧಾರದಿಂದಾಗಿಯೇ ಇಂದಿಗೂ ನಾವು ನೋಡುತಿರುವಂತಹ ಬೃಹತ್ ದೇವಾಲಯಗಳು ಹಂಪಿಯಲ್ಲಿ ನಿರ್ಮಾಣವಾದದ್ದು.

ಡಾ. ಎಸ್. ರಾಜಶೇಖರ್‌ರವರು ಹೇಳುವ ಹಾಗೆ, ವಿಜಯನಗರದರಸರಿಗಿಂತಲೂ ಹಿಂದೆಯೇ ಹಂಪಿಯ ಹೇಮಕೂಟ ಬೆಟ್ಟದ ಮೇಲೆ ಅನೇಕ ಬೆಣಚು ಕಲ್ಲಿನ ದೇವಾಲಯಗಳು ನಿರ್ಮಾಣವಾಗಿದ್ದವು. ಏಕೆಂದರೆ ವಿಜಯನಗರ ಸ್ಥಾಪನೆಯ ಕೆಲವೇ ಕೆಲವು ವರ್ಷಗಳ ಹಿಂದೆಯಷ್ಟೆ ಹೇಮಕೂಟದಲ್ಲಿಯೇ ವೀರ ಕಂಪಿಲರಾಯನು ತ್ರಿಕೂಟ ದೇವಾಲಯವೊಂದನ್ನು ನಿರ್ಮಿಸಿದ್ದನು ಎಂಬುದಕ್ಕೆ ಶಾಸಾನಾಧಾರಗಳಿವೆ. ಮುಂದುವರೆದು ಹೇಳುವ ಹಾಗೆ ಪ್ರಾರಂಭದಲ್ಲಿ ವಿಜಯನಗರದ ಅರಸರು ಸಾಮ್ರಾಜ್ಯದ ವಿಸ್ತರಣೆಯಲ್ಲಿ ತೊಡಗಬೇಕಾಯಿತು. ಉತ್ತರದಿಂದ ಮುಸಲ್ಮಾನರು, ಸುತ್ತಮುತ್ತಲಿನ ಪಾಳ್ಯಗಾರರ

ಸಂಸ್ಥಾನಗಳನ್ನು ಸೋಲಿಸುವ ಸಲುವಾಗಿ ಅಪಾರವಾದಂತಹ ಹಣದ ಅವಶ್ಯಕತೆ ಇದ್ದಿತೆಂದು, ಆದ್ದರಿಂದ ಕಡಿಮೆ ಖರ್ಚಿನಲ್ಲಿ ಉತ್ತಮವಾಗಿ ಬಾಳಿಕೆ ಬರುವಂತಹ ಬೆಣಚುಕಲ್ಲಿನ ದೇವಾಲಯಗಳು, ಹಾಗೂ ಸ್ಮಾರಕಗಳ ನಿರ್ಮಾಣವೇ ಸರಿ ಎಂದು ನಿರ್ಧರಿಸಿ ಸಾಧ್ಯವಾಗಿಸಿದಂತೆ ಕಂಡು ಬರುತ್ತದೆ. ಎಂಬ ಮಾತು ನಿಜ ಅನ್ನಿಸುತ್ತದೆ. ಈ ನಡುವೆ ಕ್ರಿ.ಶ.1348ರ ತರುವಾಯದಿಂದಲೇ ವಿಜಯನಗರದರಸರು ತಮಿಳು ಪ್ರದೇಶಗಳನ್ನು ತಮ್ಮ ಅಧೀನಕ್ಕೆ ತೆಗೆದುಕೊಂಡರೆಂದು ಸಾಹಿತ್ಯಾಧಾರಗಳಿಂದ ತಿಳಿದುಬರುತ್ತದೆ. ಕ್ರಿ.ಶ. 1363ರಲ್ಲಿ ವೀರ ಕಂಪಣ್ಣನು ಸಂಭುವರಾಯ ಅರಸ ರಾಜನಾರಾಯಣನನ್ನು ಸೋಲಿಸಿ ಮಧುರೈಯನ್ನು ವಶಪಡಿಸಿಕೊಂಡನು (ಇದರ ಬಗ್ಗೆ ಅವನ ಪತ್ನಿಯೇ ರಚಿಸಿರುವಂತಹ ಸಂಸ್ಕೃತ ಭಾಷೆಯ "ವೀರ ಕಂಪರಾಯಚರಿತಂ" ಅಥವಾ ಮಧುರಾ ವಿಜಯಂ, ಹೆಚ್ಚಿನ ಬೆಳಕನ್ನು ಚೆಲ್ಲುತ್ತದೆ). ಇದರಿಂದಾಗಿ ಸುಮಾರು ಕ್ರಿ.ಶ. 1371ರಷ್ಟೊತ್ತಿಗೆ ದಕ್ಷಿಣ ಭಾರತದ, ಅದರಲ್ಲಿಯೂ ತಮಿಳು ಪ್ರದೇಶಗಳು ವಿಜಯನಗರದರಸರ ಆಳ್ವಿಕೆಗೆ ಒಳಪಟ್ಟಿದ್ದಿತ್ತು. ವಿಜಯನಗರದರಸರು ಅಲ್ಲಿ ಮೊದಲಿಗೆ ತಮಿಳು ನಾಡಿನ ಅನೇಕ ದೇವಾಲಯಗಳನ್ನು ಜೀರ್ಣೋದ್ಧಾರ ಮಾಡಿಸುವ ಕಾರ್ಯವನ್ನು ಕೈಗೊಂಡು ಜನರ ಪ್ರೀತಿ ಹಾಗೂ ಸಹಾನುಭೂತಿಯನ್ನು ಸಂಪಾದಿಸಲು ಪ್ರಾರಂಭಿಸಿದರು. ಹಿಂದೆ ಇದ್ದಂತಹ ತಮಿಳು ನಾಡಿನ ದೇವಾಲಯಗಳು ಚೋಳರು ಹಾಗೂ ಪಾಂಡ್ಯರಿಂದ ನಿರ್ಮಾಣವಾಗಿದ್ದು ಅವು ಸಹ ಬಹುತೇಕ ಬೆಣಚುಕಲ್ಲಿನಿಂದ ನಿರ್ಮಿತವಾದವುಗಳೇ ಆಗಿದ್ದವು. ಈ ದೇವಾಲಯಗಳ ಸೌಂದರ್ಯ, ವಿನ್ಯಾಸ ಮತ್ತು ವಿಶಿಷ್ಟ ಶೈಲಿಯಿಂದ ವಿಜಯನಗರದರಸರು, ಸಾಮಂತರು, ದಂಡನಾಯಕರುಗಳು ಆಕರ್ಷಿತರಾದರು. ಆದರಿಂದಾಗಿಯೇ ವಿಜಯನಗರದ ಅರಸರು ಬೆಣಚುಕಲ್ಲಿನ ದೇವಾಲಯಗಳ ನಿರ್ಮಾಣಕ್ಕೆ ನಿರ್ಧರಿಸಿದಾಗ ಸಹಜವಾಗಿಯೇ ತಮ್ಮ ದೇವಾಲಯಗಳನ್ನು ತಮಿಳು ವಾಸ್ತುಶೈಲಿ, ಎಂದರೆ ದ್ರಾವಿಡ ಶೈಲಿಯಲ್ಲಿ ಕಟ್ಟಲು ನಿರ್ಧರಿಸಿದರು. ರಾಜಧಾನಿ ಹಂಪಿಯಲ್ಲಿ ಈ ಶೈಲಿಯ ದೇವಾಲಯಗಳನ್ನು ನಿರ್ಮಿಸಲು ತಮಿಳುನಾಡಿನಿಂದಲೇ ಶಿಲ್ಪಿಗಳನ್ನು ಕರೆತಂದಿರಬಹುದೆಂದು ಕೆಲವು ವಿದ್ವಾಂಸರು ಅಭಿಪ್ರಾಯಪಡುತ್ತಾರೆ.

ಮೇಲೆ ತಿಳಿಸಿದಂತೆ ವಿಜಯನಗರದ ಅರಸರ ಕಾಲದಲ್ಲಿಯೇ ಕನ್ನಡ ನಾಡಿನಲ್ಲಿ ದ್ರಾವಿಡ ಶೈಲಿಯ ದೇವಾಲಯಗಳು ನಿರ್ಮಾಣವಾಗಿರಲಿಲ್ಲ. ಅವರಿಗಿಂತಲೂ ಪೂರ್ವದಲ್ಲಿಯೇ ಹೊಯ್ಸಳರು, ನೊಳಂಬರು, ಚೋಳರು ಕರ್ನಾಟಕದ ಪ್ರದೇಶಗಳನ್ನು ಆಳುವಾಗ ದ್ರಾವಿಡ ಶೈಲಿಯಲ್ಲಿ ಅನೇಕ ದೇವಾಲಯಗಳನ್ನು ನಿರ್ಮಿಸಿದರು. ಉದಾ: ಕೋಲಾರದ ಕೋಲಾರಮ್ಮ ದೇವಸ್ಥಾನ; ತಲಕಾಡಿನ ಕೀರ್ತಿ ನಾರಾಯಣ ದೇವಾಲಯ (ಕ್ರಿ.ಶ.1117); (ತಲಕಾಡಿನ ಈ ದೇವಾಲಯವೂ ಬೆಣಚುಕಲ್ಲಿನಿಂದಲೇ ನಿರ್ಮಿತವಾಗಿದೆ) ಕಂಬದಹಳ್ಳಿಯ ಪಂಚಕೂಟ ಬಸದಿಗಳು; ಆವನಿಯ ಲಕ್ಷ್ಮಣೇಶ್ವರ, ರಾಮೇಶ್ವರದ ದೇವಾಲಯಗಳು ದ್ರಾವಿಡ ಶೈಲಿಯಲ್ಲಿಯೇ ಇರುವುದು ಕಂಡುಬರುತ್ತದೆ. ಅಷ್ಟೇ ಅಲ್ಲದೆ ಕ್ರಿ.ಶ.1035ರಲ್ಲಿ ಚೋಳ ಅರಸ ರಾಜೇಂದ್ರ ಚೋಳನ ದಂಡನಾಯಕನೊಬ್ಬನಿಂದ ಜೀರ್ಣೋದ್ಧಾರಗೊಂಡಂತಹ ಕೋಲಾರದ ಕೋಲಾರಮ್ಮ ದೇವಾಲಯ, ಮಾಲೂರು ಪಟ್ಟಣದಲ್ಲಿರುವ ನಾರಾಯಣ ದೇವಾಲಯ; ತಲಕಾಡಿನ ರಾಜರಾಜೇಶ್ವರಿ ದೇವಾಲಯ; ಮಾರೆಹಳ್ಳಿಯ ಲಕ್ಷ್ಮೀನರಸಿಂಹ ದೇವಾಲಯ ಮತ್ತು ಪುಂಗನೂರಿನ ಗೋಪಿಕೃಷ್ಣ ದೇವಾಲಯ; ತಿಪಟೂರಿನಲ್ಲಿರುವ ರಾಜಾಧಿರಾಜನ ಕಾಲದಲ್ಲಿ ಕಟ್ಟಿರಬಹುದಾದಂತಹ ಚೋಳೇಶ್ವರ ದೇವಾಲಯ; ಮೊದಲನೆಯ ಕುಲೋತ್ತುಂಗನ ಕಾಲದಲ್ಲಿ ನಿರ್ಮಿಸಿದ್ದಂತಹ ಕನ್ನಂಬಾಡಿಯ ಕಲ್ಲೇಶ್ವರ ದೇವಾಲಯ; ಯಳಂದೂರಿನ ಸೋಮೇಶ್ವರ ದೇವಾಲಯ; ಎಡತೊರೆಯ ಅರ್ಕೇಶ್ವರ ಮತ್ತು ವಿಘ್ನೇಶ್ವರ ದೇವಾಲಯ; ಉತ್ತನೂರಿನ ವರದರಾಜ ದೇವಾಲಯ; ತಿರುಮಕೂಡಲು ನರಸೀಪುರದ ಅಗಸ್ತ್ಯೇಶ್ವರ ದೇವಾಲಯ; ಸೋಸಲೆಯ ಹೊನ್ನಾದೇವಿ ಮೂಗೂರಿನ ತಿಬ್ಬಾದೇವಿ ದೇವಾಲಯಗಳೆಲ್ಲವೂ ಸಹ ದ್ರಾವಿಡಶೈಲಿಯ ದೇವಾಲಯಗಳೇ.

ದೇವಾಲಯಗಳ ನಿರ್ಮಾಣದಲ್ಲಿ ನಮ್ಮ ಶಿಲ್ಪಗಳು ಅನುಸರಿಸಿಕೊಂಡು ಬಂದಿರುವ ಸಾಂಸ್ಕೃತಿಕ ಶೈಲಿಯನ್ನು ಮೂರು ವಿಭಾಗಗಳಾಗಿ ವಿಂಗಡಿಸಬಹುದು.

1. ನಾಗರ ಶೈಲಿ ಅಂದರೆ ಬುಡದಿಂದ ತುದಿಯವರೆವಿಗೂ ಚೌಕೋನವಾಗಿರುವುದು (ಕೆಳಗಿನಿಂದ ಮೇಲಿನವರೆಗೂ)

2. ದ್ರಾವಿಡ ಶೈಲಿ 'ಗ್ರೀವ'ದಿಂದ ಮೇಲಕ್ಕೆ ಆರು ಅಥವಾ ಎಂಟು ಮುಖಗಳಿರುವುದು (ಗರ್ಭಗುಡಿಯ ಮೇಲಿನ ಕಟ್ಟಡದಿಂದ)
3. ವೇಸರ ಶೈಲಿ ದೇವಾಲಯದ ಶೈಲಿಯೇ ವೃತ್ತಾಕಾರವಾಗಿರುವುದು ('ಗ್ರೀವ' ದಿಂದ ಮೇಲೆ ವೃತ್ತಾಯತ, ಅರ್ಧವೃತ್ತ, ಗಜಪೃಷ್ಠಿ, ದ್ವಾಶ್ರವೃತ್ತ) ಈ ರೀತಿಯ ಎಲ್ಲಾ ದೇವಾಲಯಗಳನ್ನು ವೇಸರ ಶೈಲಿ ಎಂದು ಕರೆಯುತ್ತಾರೆ.

ಇದರಲ್ಲಿ ವಿಜಯನಗರದ ಅರಸರು ದ್ರಾವಿಡ ಶೈಲಿಯನ್ನು ಅನುಸರಿಸಿಕೊಂಡು ಬೃಹತ್ ದೇವಾಲಯಗಳನ್ನು ನಿರ್ಮಿಸಲು ಪ್ರಾರಂಭಿಸಿದರು. ಹಾಗೆಯೇ ಹಿಂದೆ ಇದ್ದಂತಹ ಹಳೇ ದೇವಾಲಯಗಳ ಜೀರ್ಣೋದ್ಧಾರದ ಕಾರ್ಯವೂ ಸಹ ನಡೆಯಲು ಪ್ರಾರಂಭವಾಯಿತು. ವಿಜಯನಗರದ ಅರಸರು ದೇವಾಲಯಗಳನ್ನು ವಿಶಾಲವಾದಂತಹ ಜಾಗದಲ್ಲಿ ವಿಸ್ತಾರವಾಗಿ ನಿರ್ಮಿಸುತ್ತಿದ್ದರು. ಕಾರಣವೆಂದರೆ ಅಂದು ಪ್ರತಿಯೊಂದು ಧಾರ್ಮಿಕ ಕಾರ್ಯಾಚರಣೆಗಳು, ರಾಜ, ಯುವರಾಜರ ಪಟ್ಟಾಭಿಷೇಕಗಳು, ರಾಜ ಪರಿವಾರದವರ ಮದುವೆ, ಸಮಾರಂಭಗಳು, ನಾಡ ಹಬ್ಬಗಳು, ಸಂಗೀತ, ನಾಟ್ಯ ಪ್ರದರ್ಶನಗಳೆಲ್ಲವೂ ಈ ದೇವಾಲಯಗಳಲ್ಲಿಯೇ ನಡೆಸಲಾಗುತ್ತಿದ್ದುದರಿಂದ.

ಸಾಂಸ್ಕೃತಿಕ ಜೀವನದ ಮೇಲೆ ಬೆಳಕು ಚೆಲ್ಲುವ ವಾಸ್ತುಶಿಲ್ಪ ಸಂಸ್ಕೃತಿ

ಶತಮಾನಗಳಿಂದಲೂ ಕರ್ನಾಟಕ ಅಲ್ಲದೆ ಭಾರತ ದೇಶದಲ್ಲಿಯೇ ದೇವಾಲಯವು ಒಂದು ಧಾರ್ಮಿಕ ಹಾಗೂ ಕೆಲಜನರ ಸಾಮಾಜಿಕ ಸಂಸ್ಥೆಯಾಗಿ ಬೆಳೆದು ಬಂದಿದೆ. ದೇವಾಲಯವೇ ಅಂದು ವಿದ್ಯಾಕೇಂದ್ರ, ಧಾರ್ಮಿಕ ಕೇಂದ್ರ ಹಾಗೂ ಸಂಗೀತ ಮುಂತಾದ ಲಲಿತಕಲೆಗಳಿಗೆ ಆಶ್ರಯ ನೀಡುವ ತಾಣವಾಗಿದ್ದಿತು. ಇದಕ್ಕಾಗಿಯೇ ಇವುಗಳಿಗೆ ಹೆಚ್ಚಿನ ಮಹತ್ವ ಕೊಡಲಾಗಿದ್ದಿತು. ಜೀವನಕ್ಕೆ ಅವಲಂಬಿಸಿರುವಂತಹ ಮನೆ ಹಾಗೂ ರಾಜಧಾನಿಯಲ್ಲಿ ರಾಜಪರಿವಾರದವರು ವಾಸಿಸುವ ಅರಮನೆಗಳು ಶಾಶ್ವತವಾಗಿ ಉಳಿಯಬಹುದಾದಂತಹ ಕಲ್ಲಿನ ಕಟ್ಟಡಗಳಾಗಿರಲಿಲ್ಲ, ಈ ಹಿನ್ನೆಲೆ ಅವು ನಸಿಶಿಹೋಗಿವೆ. ಆದರೆ ದೇವಾಲಯಗಳನ್ನು ಮಾತ್ರ ಶಾಶ್ವತವಾಗಿ ಉಳಿಯಲು ಕಲ್ಲಿನಿಂದ ಕಟ್ಟಿಸಿದರು. ಇದಕ್ಕೆ ವಿಜಯನಗರದ ಸಾಮ್ರಾಜ್ಯದ ಹಂಪಿಯಲ್ಲಿ ಕಂಡುಬರುವಂತಹ ದೇವಾಲಯಗಳೇ ಸಾಕ್ಷಿ. ಇದಕ್ಕೆ ನಿದರ್ಶನವೆಂಬಂತೆ ರಾಜರ ಅರಮನೆಗಳೆಲ್ಲವೂ ನೆಲಸಮವಾಗಿರುವುದು ಇಲ್ಲಿ ಕಂಡುಬರುತ್ತದೆ.

ಇಂದು ನಾವು ದೇವಾಲಯಗಳನ್ನು ಅಧ್ಯಯನ ಮಾಡುವಾಗ ದೇವಾಲಯದ ಮೇಲಿರುವ ಪೂಜ್ಯತೆ ಹಾಗೂ ಭಕ್ತಿಯಿಂದಾಗಿ ಅದನ್ನು ಮಾನವನ ದೇಹದ ಭಾಗಗಳೊಂದಿಗೆ ಗುರ್ತಿಸಿಕೊಳ್ಳುವುದು ವಾಡಿಕೆಯಾಗಿದೆ. ಪಾದ, ಚರಣ, ಆಂಘ್ರಿ, ಜಂಘ, ಕಟಿ, ಕುಕ್ಷಿ, ಗ್ರೀವ, ಕಂಠ, ಶಿಖರ, ಶಿರ, ಮಸ್ತಕ, ಮುಖ, ವಕ್ತ್ರ, ನಾಸಿಕ ಇತ್ಯಾದಿ ಇತ್ಯಾದಿ ಹೆಸರುಗಳನ್ನು ಕೊಟ್ಟಿರುವುದು ಕಂಡುಬರುತ್ತದೆ. ಮೇಲಿನ ಹೆಸರುಗಳನ್ನು ಗುರ್ತಿಸುವುದಕ್ಕೂ ಮೊದಲು ಅಸ್ತಿತ್ವಕ್ಕೆ ಬಂದುದು ಕೇವಲ ಗರ್ಭಗೃಹ ಮಾತ್ರ. ದೇವರನ್ನು ಈ ಕೋಣೆಯಲ್ಲಿ ಇಟ್ಟು ಪೂಜಿಸುತ್ತಿದ್ದರು. ಗರ್ಭಗೃಹದ ಮೇಲೆಯೇ ಒಂದು ಶಿಖರವನ್ನು ಎತ್ತರಿಸಿ ಕಟ್ಟುತ್ತಿದ್ದರು. ಇದಕ್ಕೆ ವಿಮಾನ ಎಂದು ಹೆಸರು. ಕಟ್ಟಡದ ತಳಹದಿಯಿಂದ ಪ್ರಾರಂಭವಾಗಿ ಭಿತ್ತಿ (ಗೋಡೆ), ಪದ (ಕಂಭ), ಬೋದಿಗೆ (ಪ್ರಸ್ತರ), ಕಂಠ (ಗ್ರೀವ) ಮತ್ತು ಶಿಖರಗಳನ್ನೊಳಗೊಂಡ ಎಲ್ಲ ಭಾಗಗಳಿಗೂ ವಿಮಾನವೆಂದು ಹೆಸರಿದೆ. ಶಿಖರದ ಮೇಲೆ ಸ್ತೂಪಿ ಇರುತ್ತದೆ. ಇದು ಕವುಚಿದ ಬೋಗುಣಿ ಅಥವಾ ಗಂಟೆಯಾಕಾರದಲ್ಲಿದ್ದು ಮೇಲುಗಡೆ ಒಂದು ಕಳಶವಿರುತ್ತದೆ. ಶಿಖರದ ಬುಡದಲ್ಲಿ ಮುಂದಕ್ಕೆ ಚಾಚಿದ ಭಾಗವಿದ್ದು ಅದರ ಮೇಲೆ ತೆರೆದ ಬಾಯಿ ನರಸಿಂಹ ಮುಖದಂತಹ ಆಕೃತಿ ಇರುತ್ತದೆ. ಇದಕ್ಕೆ ಕೀರ್ತಿಮುಖ ಎಂದು ಕರೆಯಲಾಗಿದ್ದು, ಈ ಕೀರ್ತಿ ಮುಖದ ಮಧ್ಯೆ ಒಮ್ಮೊಮ್ಮೆ ಶಿಲ್ಪಗಳನ್ನು ಕೆತ್ತಿರುವುದು ಕಂಡುಬರುತ್ತದೆ. ಗರ್ಭಗೃಹದ ಮುಂದಕ್ಕೆ ಹೊಂದಿಕೊಂಡಂತಿರುವುದು ಅಂತರಾಳ. ಇದು ಸಾಮಾನ್ಯವಾಗಿ ಆಯಾಕಾರವಾಗಿರುತ್ತದೆ. ಇದನ್ನೇ ಸುಕನಾಸಿಯೆಂದೂ, ಅರ್ಧಮಂಟಪವೆಂದೂ ಕರೆಯುವ ರೂಢಿ ಇದೆ. ನವರಂಗ ಎಂಬುದು ಈ ಅಂತರಾಳದ ಮುಂದುಗಡೆಗೆ ಸೇರಿಸಲಾದ ಭಾಗ. ಮೇಲೆ ವರ್ಣಿಸಿರುವ ಎಲ್ಲಾ ರೀತಿಯ ದೇವಾಲಯಗಳೂ ಸಹ ವಿಜಯನಗರದ ಹಿಂದಿನ ಕಾಲದ ವಾಸ್ತು ಶಿಲ್ಪದ ಕೆಲವು ಪ್ರಮುಖ ಲಕ್ಷಣಗಳು.

ವಿಜಯನಗರದರಸರ ಕಾಲದಲ್ಲಿ ಮೇಲಿನವುಗಳೆಲ್ಲ ಕೆಲವು ಬದಲಾವಣೆ ಗಳಾದುವಲ್ಲದೆ, ಹಲವಾರು ಹೊಸ ಹೊಸ ಅಂಶಗಳೂ ಸೇರಿಕೊಂಡು ಶಿಲ್ಪಕಲೆಯಲ್ಲಿ "ವಿಜಯನಗರ ಶೈಲಿ" ಎಂಬ ಹೊಸ ಶೈಲಿಯನ್ನೇ ಹುಟ್ಟು ಹಾಕಿತ್ತು. ಅದಕ್ಕಾಗಿಯೇ ಸಂಗೀತ, ಲಲಿತಕಲೆ ಮುಂತಾದವುಗಳಿಗೆ ವಿಶೇಷವಾದಂತಹ ಪ್ರೋತ್ಸಾಹ ನೀಡಲಾಯಿತ್ತು. ದೇವಾಲಯದಲ್ಲಿ ದುಃಖ ಮತ್ತು ರೌದ್ರಕರವಾದತಂಹ ಪ್ರಸಂಗಗಳನ್ನು ಚಿತ್ರಿಸಬಾರದೆಂದೂ, ನಮ್ಮ ಹಿರಿಯರ ದೃಷ್ಟಿಯಲ್ಲಿ ದೇವಾಲಯಗಳು ಸಕಲ ಕಲಾ ಪ್ರದರ್ಶನ ಶಾಲೆಗಳಾದುದರಿಂದ ಅಲ್ಲಿ ಕಾಮ (ಮಿಥುನ ಶಿಲ್ಪ)ಕಲಾ ಪ್ರದರ್ಶನಕ್ಕೂ ವಿಜಯನಗರದ ಅರಸರು ಅವಕಾಶ ಕಲ್ಪಿಸಿದ್ದರು. ಹಾಗೆಯೇ ಉತ್ಕೃಷ್ಟವಾದಂತಹ ಕಲೆಯಲ್ಲಿಯೇ ನಿಜವಾದಂತಹ ದೇವಾಂಶವಿದೆ ಇದು ಎಂದೆಂದಿಗೂ ಆನಂದದಾಯಕ ವಾದದ್ದು ಹಾಗೂ ನಿಷ್ಠೆಗೆ ಪ್ರಮುಖ ಸಾಧನವಾದುದೆನ್ನುವ ಮನೋಭಾವನೆಹೊಂದಿದ್ದರು. ಇದಕ್ಕೆ ಸಾಕ್ಷಿಯೆಂಬಂತೆ ಇಂದಿಗೂ ಹಂಪಿಯ ದೇವಾಲಯಗಳಲ್ಲಿ ಶಿಲ್ಪ, ಚಿತ್ರ, ನೃತ್ಯ, ನಾಟ್ಯಗಳು ಅವ್ಯಕ್ತ ಸೌಂದರ್ಯವನ್ನು ವ್ಯಕ್ತಗೊಳಿಸುತ್ತಾ ನಿಂತಿರುವುದೆ ಸಾಕ್ಷಿ ಆಗಿದೆ.

ಮೊದಲು ಇಂಥಹ ದೇವಾಲಯಗಳನ್ನು ನಿರ್ಮಿಸಲು, ದೇವಾನುದೇವತೆಯರನ್ನು ಕಲ್ಲಿನಲ್ಲಿ ಕಡೆದು ಸುಂದರ ರೂಪನೀಡಲು, ದೇವಾಲಯದ ಪ್ರತಿಯೊಂದು ಹಂತವನ್ನು ಸುಂದರವಾದ ಕೆತ್ತನೆಯಿಂದ ನಿರ್ಮಿಸಬೇಕಾದರೆ ಸಾಂಸ್ಕೃತಿಕವಾಗಿ ಶಿಲ್ಪಿಯು ವಿವಿಧ ಶಾಸ್ತ್ರಗಳ ಪ್ರವೀಣನಾಗಿರಲೇಬೇಕಾಗುತ್ತದೆ. ಉದಾಹರಣೆಗೆ :

1. **ಶಿಲ್ಪಿಯು ಒಬ್ಬ ಯೋಗಿಯಾಗಿ :** ಭಾರತೀಯ ಶಿಲ್ಪಿಯು ಒಬ್ಬ ಯೋಗಿ, ಶಾಂತಿಯನ್ನು ನೀಡುವ, ಆನಂದಕರವಾದಂತಹ ದೃಶ್ಯವು ಆ ಶಿಲೆಯಲ್ಲಿ ಕೆತ್ತಿ ಮೂಡಿಸುವ ಹಾಗೆ ಪರಿವರ್ತಿಸುವಲ್ಲಿ ಶಿಲ್ಪಿಯು ಪ್ರಮುಖವಾಗಿ ಒಬ್ಬ ಯೋಗಿ ಯಾಗಿರುತ್ತಾನೆ. ಅವನು ಎಲ್ಲೊ ತನ್ನ ಬಾಹ್ಯ ಸೌಂದರ್ಯವನ್ನು ಪ್ರಕಟಿಸಲು ಪ್ರಯತ್ನಿಸದವನಾಗಿರುತ್ತಿದ್ದನು. ಉದಾ: ಬುದ್ಧನ, ಶಿವನ ಧ್ಯಾನಮಗ್ನ ಶಿಲ್ಪಗಳನ್ನು ನಿರ್ಮಿಸುವಾಗ ಈ ಭಾವನೆಗಳು ಮೂಡುವುದು ಸಹಜವಾಗಿ ವ್ಯಕ್ತವಾಗುತ್ತದೆ.
2. **ಶಿಲ್ಪಿಯು ಒಬ್ಬ ಭೂಗರ್ಭಶಾಸ್ತ್ರಜ್ಞನಾಗಿರುತ್ತಾನೆ :** ತಾನು ನಿರ್ಮಿಸುತ್ತಿರುವಂತಹ ಶಿಲ್ಪಕ್ಕೆ (ಅದು ದೇವತಾಮೂರ್ತಿಯಾಗಿರಲಿ ಅಥವಾ ದೇವಾಲಯದ ಕಂಬಗಳಾಗಿರಲಿ) ಈ ಶಿಲೆಯು ಯೋಗ್ಯವಾದುದೆಂದು ಗುರ್ತಿಸುವಲ್ಲಿನ ಸನ್ನಿವೇಶದಲ್ಲಿ ಅವನು ಭೂಗರ್ಭಶಾಸ್ತ್ರದಲ್ಲಿಪ್ರವೀಣನಾಗಿರಲೇಬೇಕು. ಉದಾ : ವಿಠಲಸ್ವಾಮಿ ದೇವಾಲಯದ ಕಂಬಗಳು ಸಪ್ತಸ್ವರಗಳ ನಾದವನ್ನು ಮೀಟುವ ಹಾಗೆ ಮಾಡುವಲ್ಲಿ ಇವನ ಜಾಣ್ಮೇ ಮೂಡಿಸಿರುವುದೇ ಆಗಿದೆ.
3. ಶಿಲ್ಪಿಯು ಒಬ್ಬ ಕವಿಯಾಗಿಯೂ ಈ ಸನ್ನಿವೇಶದಲ್ಲಿ ಕೆಲಸ ಮಾಡುತ್ತಾನೆ. ಹಾಗೂ ಸೌಂದರ್ಯವನ್ನು ಪ್ರೀತಿಸುವವನಾಗಿರುತ್ತಾನೆ.
4. ಈ ಸನ್ನಿವೇಶದಲ್ಲಿ ಶಿಲ್ಪಿಯು ಒಬ್ಬ ದಾರ್ಶನಿಕನಾಗಿ, ವಾಗ್ಮಿಯಾಗಿ, ಪುರಾಣಗಳನ್ನು ಸಮಗ್ರವಾಗಿ ತಿಳಿದು ಕರಗತಮಾಡಿಕೊಂಡಿರುವವನಾಗಿ ಹಾಗೂ ಇದರ ಚಿಂತಕ ನಾಗಿಯೂ ಕಂಡುಬರುತ್ತಾನೆ. ಉದಾ : ಹಜಾರರಾಮ ದೇವಾಲಯದ ಗೋಡೆಯ ಮೇಲೆ ರಾಮಾಯಣ, ಮಹಾಭಾರತ, ಭಗವದ್ಗೀತೆಗಳ ಸುಂದರ ಚಿತ್ರಣವನ್ನು ಶಿಲ್ಪಿಯು ನಿರ್ಮಿಸುವಾಗ ಮೇಲಿನವೆಲ್ಲವೂ ಆಗಿರಲೇಬೇಕಲ್ಲವೆ.
5. ಶಿಲ್ಪಿಯು ವಾಸ್ತುಶಾಸ್ತ್ರಜ್ಞನಾಗಿರುವುದೂ ಮುಖ್ಯವಾಗಿರುತ್ತದೆ. ದೇವಾಲಯದ ನಿರ್ಮಾಣ, ಹಾಗೂ ವಿವಿಧ ರೂಪಗಳು ಎಲ್ಲೆಲ್ಲಿ ಕಂಡುಬರಬೇಕೆಂದು ನಿರ್ಧರಿಸುವ ಸನ್ನಿವೇಶದಲ್ಲಿ ಅವನು ವಾಸ್ತುಶಾಸ್ತ್ರಜ್ಞನಾಗಿರುತ್ತಾನೆ ಎಂಬುದು ಸತ್ಯ.

ಒಬ್ಬ ಶಿಲ್ಪಿಯು ಮೇಲಿನವುಗಳನ್ನೆಲ್ಲವನ್ನು ಮೈಗೂಡಿಸಿಕೊಂಡಿದ್ದರೆ ಮಾತ್ರ ಉತ್ತಮ ದೇವಾಲಯಗಳನ್ನು ನಿರ್ಮಿಸಬಲ್ಲನು. ವಿಜಯನಗರದ ಕಾಲದ ದೇವಾಲಯಗಳನ್ನು ಗಮನಿಸಿದರೆ ಅಂದಿನ ಶಿಲ್ಪಿಗಳು ಮೇಲಿನವುಗೆಲ್ಲವನ್ನೂ ಮೈಗೂಡಿಸಿಕೊಂಡಿದ್ದರೆಂದು ಹೇಳಬಹುದು. ಶಿಲ್ಪಿಯ ಕಲ್ಪನೆಗೆ ಸಹಾಯಕವಾಗುವ ಧ್ಯಾನ ಶ್ಲೋಕಗಳು ದೇಶಿಯ ಶಾಸ್ತ್ರಗಳಲ್ಲಿ ಬೇಕಾದಷ್ಟಿವೆ. ಉದಾ: ಶ್ರೀದೇವಿಯ ಧ್ಯಾನ ಶ್ಲೋಕವನ್ನು ಇಲ್ಲಿ ಉಲ್ಲೇಖಿಸಬಯಸಬಹುದಾದರೆ,

ಅರುಣ ಕಮಲ ಸಂಸ್ಥಾ ತದ್ರಜಃ ಪುಂಜವರ್ಣಾ
ಕರಕಮಲಧೈ ತೇಷ್ಟಾಭೀತಿಯುಗ್ಮಾಂಬುಜಾಚ
ಮಣಿ ಮಕುಟ ವಿಚಿತ್ರಾ ಲಂಕ್ಯಾತಾ ಕಲ್ಪಜಾಲ್ಯೈ;
ಭವತು ಭುವನಮಾತಾ ಸಂತಕಂಶ್ರೀಃ ಶ್ರೀಯೈವಃ *

(ವಿಜಯನಗರದ ಕಲೆ ಮತ್ತು ಸಾಹಿತ್ಯ, ಪುಲುಮಾಲೆ ಶ್ಯಾಮರಾವ್ ಸೌಭಾಗ್ಯ ಲಕ್ಷ್ಯುಪನಿಷತ್)ಎಂದು ಸುಂದರವಾಗಿ ನಿರೂಪಿಸುವ ಈ ಶ್ಲೋಕವು ಸಂಕೇತ ವಿಧ್ಯೆಗೆ ಹೆಚ್ಚಿನ ಒತ್ತು ನೀಡುತ್ತದೆ. ಈ ಸಂಕೇತ ವಿಧ್ಯಯು ಮೂರ್ತಿಗೆ ತಕ್ಕ ರೂಪವನ್ನು, ವಾತಾವರಣವನ್ನು ಕೊಡುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಸಂಕೇತ ವಿಧ್ಯೆಯಿಂದ ಕಲಾವಿದರಿಗೆ ಎರಡು ರೀತಿಯಲ್ಲಿ ಸಾಹಾಯವಾಗುತ್ತಿತ್ತು. ಒಂದನೆಯದಾಗಿ ಶಿಲ್ಪಿಯು ಸ್ಪಷ್ಟವಾಗಿ ಭಾವಿಸಿಕೊಳ್ಳುವುದಕ್ಕೂ ಹಾಗೂ ಎರಡನೆಯದಾಗಿ ಹಾಗೆ ಭಾವಿಸಿಕೊಂಡಂತಹ ವಿಧಾನವನ್ನು ಸ್ಪಷ್ಟವಾಗಿ ಶಿಲ್ಪದಲ್ಲಿ ರೂಪಿಸುವುದಕ್ಕೂ ಸಹಾಯವಾಗುವಂತೆ ಮಾಡುತ್ತಿತ್ತು. ಸಂಕೇತಗಳು ಕಲಾವಿದರಿಗೆ ಯಾವ ವಿಧದಲ್ಲೂ ಬಂಧನವಾಗುವುದಿಲ್ಲ. ಇದಕ್ಕೆ ಬದಲಾಗಿ ಅವನಿಗೆ ಸಹಕಾರಿಯೂ ಮತ್ತು ಅವಶ್ಯಕವೂ ಆಗಿರುತ್ತವೆ. ವಿಜಯನಗರದ ಕಾಲದ ಶಿಲ್ಪಗಳು ಸಹ ಯಾವುದೇ ರೀತಿಯಲ್ಲಿ ಬಂಧನಕ್ಕೆ ಒಳಗಾಗದೆ ಇದ್ದುದರಿಂದಲೇ ಶಿಲ್ಪದಲ್ಲಿ ಆಧ್ಯಾತ್ಮಿಕ ಮತ್ತು ಕಲಾತ್ಮಕವಾದ ಭಾವನೆಗಳನ್ನು ಸರಿಯಾಗಿ ರೂಪಿಸುವುದಕ್ಕೆ ಕಾರಣವಾಗಿದೆ. ಉದಾ : ವೇಣುಗೋಪಾಲನ ವೇಣುವಾದನದ ಬೆರಳಿನ ಮುದ್ರೆಯನ್ನು ರೂಪಿಸಬೇಕಾದರೆ ಸಂಕೇತ ವಿಧ್ಯೆಯು ತಿಳಿಸುವುದೇನೆಂದರೆ ಬೆರಳಾಟದಲ್ಲಿ ಅಭಿನಯದ ಸೌಜನ್ಯದೊಡನೆ ಮನೋಭಾವದ ದಿವ್ಯತೆಯೂ ಮಿಲನವಾಗಬೇಕು ಎಂಬುದನ್ನು. ಇದಕ್ಕೆ ಹೊಯ್ಸಳ ಕಾಲದ ನಂತರ ವಿಜಯನಗರ ಕಾಲದ ಶಿಲ್ಪಿಗಳು ಉತ್ತಮ ನಿದರ್ಶನವಾಗಿವೆ.

ಹಾಗೆ ನೋಡಿದರೆ ಪ್ರಪಂಚದ ಎಲ್ಲಾ ವಸ್ತುಗಳೂ ಆದರಲ್ಲಿಯೂ ಭಾರತೀಯ ಶಿಲ್ಪರಚನಾ ಸಂಸ್ಕೃತಿಯಲ್ಲಂತೂ ಪ್ರತಿಯೊಂದು ಶಿಲ್ಪವು ಪರಮಾತ್ಮನ ಯಾವುದೋ ಒಂದು ಭಾವಕ್ಕೆ ಸಂಕೇತಗಳಾಗಿರುತ್ತವೆ. ಆದುದರಿಂದ ಶಿಲ್ಪಿಗೆ ಅವರವರ ಭಾವವನ್ನು ತಿಳಿಯುವುದಕ್ಕೆ ಆಯಾ ವಸ್ತುವಿನ ಚರಿತ್ರೆಯೇ ಸಂಕೇತವಾಗುತ್ತದೆ ಎಂದು ಹೇಳಬಹುದು. ದೇವತೆಗಳನ್ನು ನಿರ್ಮಿಸುವಾಗಲಂತೂ ಆ ದೇವತೆಗಳ ಸಂಕೇತವನ್ನು ಮೊದಲು ಶಿಲ್ಪಿಯು ಕರಗತ ಮಾಡಿಕೊಂಡಿರಬೇಕಾಗುತ್ತದೆ. ಏಕೆಂದರೆ ಆ ದೇವತೆಯನ್ನು (ಬ್ರಹ್ಮ, ವಿಷ್ಣು, ಮಹೇಶ್ವರ, ರಾಮ, ರಾವಣ, ಸೀತೆ, ಕೃಷ್ಣ, ಬುದ್ಧ, ಮಹಾವೀರ ಹಾಗೂ ವಿವಿಧ ರೀತಿಯ ಸ್ತ್ರೀ ದೇವತೆಗಳು ಹಾಗೂ ಅವುಗಳ ಪುರಾಣ ಕಥೆಗಳು) ಗುರುತಿಸಬೇಕಾದರೆ ಅವರು ಧರಿಸುತ್ತಿದ್ದಂತಹ ಉಡುಪು, ವಸ್ತುಗಳು ಹಾಗೂ ಅವರ ಆಯುಧಗಳು ಸಂಕೇತವಾಗುತ್ತವೆ.

ಸಂಕೇತಗಳನ್ನು ಶಿಲ್ಪಿಯು ಪ್ರಯೋಗಿಸಬೇಕಾದರೂ ಅವನಲ್ಲಿ ಔಚಿತ್ಯವಿರಬೇಕಾಗುತ್ತದೆ. ಏಕೆಂದರೆ ಅವುಗಳನ್ನು ಅನ್ಯೋನ್ಯವಾಗಿ ಪ್ರಯೋಗಿಸಬೇಕಾಗುತ್ತದೆ. ಇಲ್ಲದಿದ್ದರೆ ಶಿಲ್ಪದಲ್ಲಿ ಸೌಂದರ್ಯ ಹಾಗೂ ಸತ್ಯವಾಗಲಿ ಸಂಪೂರ್ಣವಾಗಿ ಲಭಿಸುವುದಿಲ್ಲ. ಪ್ರತಿಯಾಗಿ ಪ್ರತಿಮೆಗೆ ದೋಷಗಳು ಸಂಭವಿಸಲೂಬಹುದು. ಸಂಕೇತಗಳನ್ನು ಅಳವಡಿಸುತ್ತೇನೆಂದು ಅತಿಯಾಗಿ ಪ್ರಯೋಗಿಸಿದರೆ ಪ್ರತಿಮೆಯ ನಿಜಸ್ವರೂಪೂ ಮಾಯವಾಗಬಹುದು. ಆದ್ದರಿಂದ ಕಲಾವಿದನು ಸಮತೂಕವಾದಂತಹ ಪ್ರಯೋಗದಿಂದ ಮಾತ್ರ ಪ್ರತಿಮೆಗೆ ಉತ್ತಮ ಸ್ವರೂಪವನ್ನು ಕೊಡಲು ಸಾಧ್ಯವಾಗುತ್ತದೆ ಎಂಬುದನ್ನು ಮೈಗೂಡಿಸಿಕೊಂಡಿರುವುದು ಅಂದಿನ ಕುಶಲ ಹಾಗೂ ಕೌಶಲ್ಯ ಶಿಲ್ಪಗಳನ್ನು ಗಮನಿಸಿದಾಗ ಕಂಡುಬರುತ್ತದೆ.

ಭಾರತದ ಸಂಸ್ಕೃತಿಯಲ್ಲಿ ದೇವತೆಗಳಿಗೆ ಕೆಲವು ಸಂಕೇತಗಳು ಆಯುಧಗಳ ರೂಪದಲ್ಲಿರುವುದು ಕಂಡುಬರುತ್ತದೆ. ಖಡ್ಗ, ಬಾಣ, ಅಂಕುಶ, ಶೂಲ, ಖಟ್ವಾಂಗ, ತ್ರಿಶೂಲ, ಶಕ್ತಿ, ಪಾಶ, ವಜ್ರ, ಟಂಕ, ಮುಂತಾದ ಆಯುಧಗಳಲ್ಲಿ ಬೇರೆ ಬೇರೆ ದೇವತೆಗಳಿಗೆ ಅವರವರ ಗುಣಗಳಿಗೆ ಅನುಸಾರವಾದ ಆಯುಧಗಳನ್ನು ಕೊಡಲಾಗಿದೆ. ವಾದ್ಯಗಳಲ್ಲಿ ವೀಣೆ, ವೇಣು, ಶಂಖ, ಡಮರುಗ, ಗಂಟೆ, ಡೋಲು, ತಮಟೆ ಮುಂತಾದವುಗಳು ಸಂಕೇತವಾಗಿರುತ್ತವೆ. ಕಮಂಡಲ, ಕನ್ನಡಿಗಳೂ ಬೇರೆ ಬೇರೆ ದೇವತೆಗಳ ಗುಣನಿರೂಪಣೆಗೆ ಅವಶ್ಯಕವಾಗಿವೆ. ಪಶುವರ್ಗದಲ್ಲಿ ಸಿಂಹ, ಎತ್ತು, ಇಲಿ, ಆನೆ, ಕುದುರೆ, ಕೋಳಿ, ಎಮ್ಮೆ, ಆಡು, ಆಮೆ, ಮುಳ್ಳಂದಿ, ಮಕರ, ಕರಡಿ, ಜಿಂಕೆ, ಹಾವು, ಹುಲಿ, ಮುಂತಾದವುಗಳು ಬೇರೆ ಬೇರೆ ದೇವತೆಗಳ

ನಿರೂಪಣೆಯಲ್ಲಿ ಅತ್ಯಂತ ಹೆಚ್ಚಿನ ಅವಶ್ಯಕವಾಗಿರುವುದಾಗಿದೆ. ಮುಖ್ಯವಾಗಿ ದೇವತಾ ಪ್ರತಿಮೆಗಳನ್ನು ಬೇರೆ ಬೇರೆ ಆಸನಗಳಲ್ಲಿ ಕುಳ್ಳಿರಿಸುವುದಕ್ಕೂ ಶಿಲ್ಪಶಾಸ್ತ್ರದ ಪ್ರಮುಖ ಆಧಾರಗಳೇ ಕಾರಣ. ಈ ಆಸನಗಳು ಆಯಾ ದೇವತೆಗಳ ಗುಣಗಳನ್ನು ಅವಲಂಬಿಸಿರುತ್ತವೆ. ಪ್ರಮುಖವಾಗಿ ಕಂಡುಬರುವಂತಹ ದೇವತೆಗಳ ಆಸನಗಳೆಂದರೆ ಕೂರ್ಮಾಸನ, ಮಕರಾಸನ, ಪದ್ಮಾಸನ, ವೀರಾಸನ, ಭದ್ರಾಸನ, ಸಿಂಹಾಸನಗಳೆಂದು ಆರು ಮುಖ್ಯ ಆಸನಗಳಿರುವುದು ಕಂಡುಬರುತ್ತದೆ. ಭಾರತೀಯ ಸಂಸ್ಕೃತಿಯಲ್ಲಿ ಉಡುಗೆಗಳೂ ಸಹ ಪ್ರಮುಖವಾದ ಸಂಕೇತಗಳಾಗಿವೆ. ಕೆಲವು ಉಡುಗೆಗಳು ಇಂದಿನ ಸಮಾಜದ ಕೆಲವು ವರ್ಗದವರೆಂದು ಗುರ್ತಿಸುವ ಹಾಗೆ ದೇವತೆಗಳ ಮೇಲೆ ಇರುವಂತಹ ಉಡುಗೆಯಿಂದಲೂ ಸಹ ಯಾವ ದೇವತೆಯೆಂದು ಗುರ್ತಿಸಲು ಸಹಕಾರಿಯಾಗಿವೆ.

ಮೇಲೆ ಚರ್ಚಿಸಿರುವಂತಹ ಸಂಕೇತ ಕಲೆಯನ್ನು ಸಂಪೂರ್ಣವಾಗಿ ಬಳಸಿ ಕೊಂಡಂತಹ ವಿಜಯನಗರದ ಸಾಂಸ್ಕೃತಿಕ ವಾಸ್ತುಶಿಲ್ಪವನ್ನು ಪ್ರಮುಖವಾಗಿ ಎರಡು ಭಾಗಗಳಾಗಿ ವಿಂಗಡಿಸಬಹುದು. ಅವುಗಳೆಂದರೆ,

1. ಲೌಕಿಕ ವಾಸ್ತುಶಿಲ್ಪ

2. ಧಾರ್ಮಿಕ ವಾಸ್ತುಶಿಲ್ಪ

ಲೌಕಿಕ ಕಟ್ಟಡಗಳು ನಮಗೆ ಕಾಣುವುದು ಹಂಪಿಯಲ್ಲಿಯೇ. ಇದು ಸಾಮ್ರಾಜ್ಯದ ರಾಜಧಾನಿ. ಇಲ್ಲಿ ಅರಸರ ಅರಮನೆ, ಅದಕ್ಕೆ ಸಂಬಂಧಿಸಿದ ಇತರ ಮಂಟಪಗಳು, ಅರಸಿಯರ ಈಜುಕೊಳ, ಕಮಲ ಮಹಲ್, ಆನೆಯಲಾಯಗಳು, ಕಾವಲುಗೋಪುರಗಳು, ದೇವಾಲಯದ ಸಮೀಪದಲ್ಲಿರುವಂತಹ ಮಾರುಕಟ್ಟೆಯ ಸ್ಥಳಗಳನ್ನು ಉದಾಹರಣೆ ನೀಡಬಹುದಾಗಿದೆ. ಏಕೆಂದರೆ; ಈ ಕಟ್ಟಡಗಳ ತಳಪಾಯ ಮಾತ್ರ ಕಲ್ಲಿನಲ್ಲಿ ಕಟ್ಟಲಾಗಿತ್ತು, ಮೇಲಿನಸ್ತರಗಳನ್ನೆಲ್ಲ ಮರಗಳಿಂದಲೂ, ಇಟ್ಟಿಗೆ ಅಥವಾ ಗಾರೆಗಳಿಂದ ಕಟ್ಟಲಾಗಿತ್ತು. ಕಂಬಗಳಿಗೂ ಕಲ್ಲು ಅಥವಾ ಮರವನ್ನು ಉಪಯೋಗಿಸಿರುವುದು ಕಂಡುಬರುತ್ತದೆ. ಕೆಲವು ಕಂಬಗಳ ಒಳಭಾಗಗಳು ಕಲ್ಲಿನದಾಗಿದ್ದು ಅದರ ಸುತ್ತಲೂ ಇಟ್ಟಿಗೆ, ಗಾರೆಗಳನ್ನು ಬಳಸಿ ಕಂಬದ ಗಾತ್ರವನ್ನು ಹೆಚ್ಚಿಸುವ ತಂತ್ರವನ್ನು ಬಳಸಿರುವುದು ಕಂಡುಬರುತ್ತದೆ. ಕಮಾನುಗಳ ಉಪಯೋಗ ಒಂದು ವಿಶೇಷವಾಗಿದೆ.

ಹಂಪಿ ಹಾಗೂ ಸಾಮ್ರಾಜ್ಯದಾದ್ಯಂತ ಇರುವ ದೇವಾಲಯಗಳು ಧಾರ್ಮಿಕ ವಾಸ್ತುಶಿಲ್ಪಕ್ಕೆ ಉದಾಹರಣೆಗಳಾಗಿವೆ. ಇವುಗಳಲ್ಲಿ ಕಂಡುಬಂದಂತಹ ಹೊಸ ಶಿಲ್ಪ ಕಲೆಯಿಂದಾಗಿ ಅಂದು ಸ್ವತಂತ್ರವಾದಂತಹ ವಿಜಯನಗರ ಶೈಲಿ ಎಂದು ಹೆಸರು ಪಡೆಯುವಂತಾಯಿತು. ಹಂಪಿಯ ಅನೇಕ ದೇವಾಲಯಗಳಲ್ಲಿ ಸಾಮಾನ್ಯವಾಗಿ ಗರ್ಭಗೃಹ ಮತ್ತು ಅಂತರಾಳಗಳಿಗೆ ಹೊಂದಿದಂತೆ ಮುಚ್ಚಿದ ಕಂಬಗಳುಳ್ಳ ಪ್ರದಕ್ಷಿಣಾಪಥವಿರುತ್ತದೆ. ಗರ್ಭಗೃಹ ಮತ್ತು ಅಂತರಾಳಗಳಿಗೆ ಸೇರಿದಂತೆ ಒಂದು ಅಧಿಷ್ಠಾನ. ಇದು ಪ್ರಕಾರಕ್ಕಿಂತ ಸ್ವಲ್ಪ ಕೆಳಮಟ್ಟದಲ್ಲಿರುತ್ತದೆ. ಕಂಬಗಳು ಅಲಂಕಾರಿಕ ವಾಗಿರುತ್ತವೆ.

ದೇವರ ಪೂಜೆಗೆ ಸಂಬಂಧಿಸಿದಂತೆ ಹೊಸ ಹೊಸ ಉತ್ಸವಗಳನ್ನು ಅಳವಡಿಸಲಾಯಿತು. ಅಂದರೆ ಸ್ಥಳೀಯ ಸಂಸ್ಕೃತಿಯ ಎಲ್ಲಾ ವೈಶಿಷ್ಟ್ಯಗಳನ್ನು ಸಂರಕ್ಷಿಸಿ, ಪುನಃಶ್ಚೇತನಗೊಳಿಸಿ ವೈಭವೋಪೇತವಾಗಿ ಮಾಡುವುದು ಅಂದಿನ ಅರಸರ ಪ್ರಮುಖ ಕರ್ತವ್ಯವಾಗಿದ್ದಿತ್ತು. ಈ ದಿಕ್ಕಿನಿಂದಾಗಿ ದೇವಾಲಯಗಳು ವಿಶೇಷವಾದ ಆಸಕ್ತಿಯನ್ನು ಪಡೆದವು. ದೇವಾಲಯಗಳ ಗೋಡೆಗಳ ಮೇಲೆ, ಕಂಬಗಳ ಮೇಲೆ ಪೌರಾಣಿಕ, ಕಾವ್ಯಾತ್ಮಕ ಕಥೆಗಳ ಪ್ರಾತ್ಯಕ್ಷಿಕೆಗಳನ್ನು ಮೂಡಿಸಲಾಯಿತು. ಇದಕ್ಕಾಗಿ ಸಾವಿರಾರು ಶಿಲ್ಪಿಗಳು, ರೂವಾರಿಗಳು, ಪರಿಣಿತರುಗಳು ಹಗಲಿರುಳೂ ತಮ್ಮ ಜೀವನವನ್ನು ತೊರೆದು ಶ್ರಮಿಸಿದ್ದರು. ಜೊತೆಗೆ ವೀರತ್ವಕ್ಕೆ, ಶೌರ್ಯಕ್ಕೆ ಹೆಚ್ಚಿನ ಪ್ರೋತ್ಸಾಹ ಕೊಡಲೆಂಬಂತೆ ಆ ಗುಣಗಳೇ ಎದ್ದು ಬರುವಹಾಗೆ ರಾಮ, ಹನುಮಂತ, ಕೃಷ್ಣ, ಭೀಮ, ಅರ್ಜುನ, ಮುಂತಾದವರ ಕೆತ್ತನೆಗಳನ್ನು ಶಿಲ್ಪಗಳಲ್ಲಿ ಮೂಡಿಸಲಾಯಿತು. ಈ ಮೊದಲು ಶಿಲ್ಪಗಳಿಗೆ ಇಂಥಹ ಕಥೆಗಳಾವೂವೂ ಇಷ್ಟು ವಿಪುಲವಾಗಿ ವಸ್ತುಗಳಾಗಿರುವುದು ಕಂಡುಬರುವುದಿಲ್ಲ. ಸೈನ್ಯದ ವಿವಿಧ ಅಂಗಗಳಾದಂತಹ ಕಾಲುದಳ, ಆನೆಗಳು, ಕುದುರೆಗಳು, ಒಂಟೆಗಳು ಇತ್ಯಾದಿಗಳು, ಯುದ್ಧದ ಚಿತ್ರಗಳು, ಆಯುಧಗಳು ಸುಂದರವಾಗಿ ಶಿಲೆಯಲ್ಲಿ ಮೂಡಿ ಬಂದಿರುತ್ತವೆ. ಇದರಿಂದ ಪ್ರಜೆಗಳಲ್ಲಿ ವೀರ ಪೌರುಷದ ಭಾವನೆಯನ್ನು ಹೆಚ್ಚಿಸಬಹುದೆಂಬುವುದು ವಿಜಯನಗರದರಸರ ಭಾವನೆಯಾಗಿದ್ದಿತ್ತು. ಇವು ಪ್ರಜೆಗಳಿಗೆ ಸ್ಫೂರ್ತಿಯನ್ನು ನೀಡಿ, ಅವರು

ದೇಶದ ರಕ್ಷಣೆಗಾಗಿ ಜೀವನವನ್ನು ಮುಡುಪಾಗಿಡಲು ಹೂಡಿದಂತಹ ತಂತ್ರವೆಂದು ಕೆಲವು ಇತಿಹಾಸಗಾರರು ಅಭಿಪ್ರಾಯಪಡುತ್ತಾರೆ. ಅದೇನೆ ಇರಲಿ, ಇಂದಂತು ಅಂದಿನ ಕಾಲದ ಸಂಸ್ಕೃತಿಯನ್ನು ಹೊರ ಚೆಲ್ಲುತ್ತಾ ಭರತಖಂಡದಲ್ಲಿಯೇ ಅಲ್ಲದೆ ಪ್ರಪಂಚಕ್ಕೆ ಕನ್ನಡದ ಕಂಪನ್ನು ಚೆಲ್ಲುತ್ತಾ ನಿಂತಿವೆ.

ಶಿಲ್ಪದಲ್ಲಿ ಸೌಂದರ್ಯದ ಸಂಸ್ಕೃತಿ ಹಾಗೂ ದುಡಿಯುವ ವರ್ಗದ ಸ್ಥಿತಿ – ಗತಿ

ನಮ್ಮ ಕಲೆ ಹಾಗೂ ಸಂಸ್ಕೃತಿ ತತ್ವ ಪ್ರಧಾನವಾದುವುಗಳು ಎಂದು ಇತಿಹಾಸಗಾರರು ಹಾಗೂಸಂಸ್ಕೃತಿ ಚಿಂತಕರು ಹೇಳುತ್ತಾರೆ. ಆದರೆ ಇದನ್ನು ಒಪ್ಪಲು ಸಾಧ್ಯವಾಗದು, ಏಕೆಂದರೆ ಒಂದು ದೃಷ್ಟಿಯಲ್ಲಿ ಈ ಬೃಹತ್ ದೇವಾಲಯಗಳಲ್ಲಿ ಕೆಲವೇ ಕೆಲವು ವರ್ಗದವರಿಗೆ ಮಾತ್ರ ಪ್ರವೇಶ ಹಾಗೂ ಕಾರ್ಯಕ್ರಮಗಳನ್ನು ನೆರವೇರಿಸಲು ಅವಕಾಶವಿದ್ದಿತು. ಶೂದ್ರರು ಹಾಗೂ ಪಂಚಮರು(ದಲಿತರು) ದೇವಾಲಯಗಳ ಬಳಿಯೂ ಸುಳಿದಾಡುವ ಹಾಗಿರಲಿಲ್ಲ. ಈ ದೇವಾಲಯಗಳನ್ನು ನಿರ್ಮಿಸಲು ದಲಿತರು ಹಾಗೂ ಶೂದ್ರರ ಪೂರ್ಣಪ್ರಮಾಣದ ಶ್ರಮವು ಅತ್ಯಾವಶ್ಯಕವಾಗಿ ಬಳಕೆಯಾಗುತ್ತಿದ್ದಿತು. ಆದರೆ ಅವರ ಆರ್ಥಿಕ ಹಾಗೂ ಸಾಮಾಜಿಕ ಜೀವನ ಹೇಳತೀರದಾಗಿದ್ದಿತ್ತು. ಹಂಪಿಯಲ್ಲಿರುವಂತಹ ಸುಂದರವಾದಂತಹ ಬೃಹತ್ ದೇವಾಲಯಗಳನ್ನು ಸಾವಿರಾರು ಶಿಲ್ಪಿಗಳು ಶ್ರಮಿಕರ ಸಹಾಯದಿಂದ ನಿರ್ಮಿಸಿದರೇನೋ ಅಷ್ಟೇ. ಅನಂತರ ಅವರೂ ಸಹ ದೇವಾಲಯದ ಒಳಗಡೆ ಪ್ರವೇಶವನ್ನು ನಿಷೇಧಿಸಲ್ಪಡುತ್ತಿದ್ದರು. ಇಂಥಹ ಬೃಹತ್ ಸುಂದರ ದೇವಾಲಯಗಳನ್ನು ನಿರ್ಮಿಸಿದ್ದಂತಹ ಶಿಲ್ಪಿಗಳ ಜೀವನವೂ ಸಹ ಚಿಂತಾಜನಕವಾಗಿದ್ದಿತು. ಏಕೆಂದರೆ ಇಂಥಹ ಬೃಹತ್ ದೇವಾಲಯಗಳನ್ನು ನಿರ್ಮಿಸಿದ್ದರೂ ಸಹ (ಒಂದೆರಡು ದೇವಾಲಯವನ್ನು ಹೊರತುಪಡಿಸಿ) ಶಿಲ್ಪಿಗಳ ಹೆಸರುಗಳು ಎಲ್ಲೂ ಕಂಡುಬರುವುದಿಲ್ಲ, ಕೇವಲ ದೇವಾಲಯ ಕಟ್ಟಿಸಿದ ರಾಜ, ರಾಣಿ, ಪುರೋಹಿತರ ಹೆಸರುಗಳು ಮಾತ್ರ ರಾರಾಜಿಸುತ್ತವೆ. ತಮ್ಮ ಜೀವನದ ಹಂಗನ್ನೆ ತೊರೆದು ಹಗಲಿರುಳೆನ್ನದೆ ದುಡಿದು ತಮ್ಮ ಬೆವರಿನ ಪ್ರತಿಯೊಂದು ಕಣದಲ್ಲಿಯೂ ಒಂದೊಂದು ಸುಂದರ ಶಿಲ್ಪಗಳನ್ನು ನಿರ್ಮಿಸಿದಂತಹ ಅಂದಿನ ಶಿಲ್ಪಿ ಮಹೋನ್ನರಿಗೆ ಇಂದಿಗೂ ಎಂದೆಂದಿಗೂ ನಾವೆಲ್ಲರೂ ಕೃತಜ್ಞನಾಗಿರಲೇಬೇಕು. ವಿಜಯನಗರದ ಚರಿತ್ರೆಯನ್ನು, ಸಂಸ್ಕೃತಿಯನ್ನು ಅಧ್ಯಯನ ಮಾಡಿದಾಗ ತಕ್ಷಣ ಮೂಡುವ ಪ್ರಶ್ನೆ ಅಥವಾ ಸಂದೇಹವೆಂದರೆ

ವಿಜಯನಗರ ಸಾಮ್ರಾಜ್ಯವು ಸಾಮ್ರಾಜ್ಯದ ವಿಸ್ತರಣೆಯಲ್ಲಿ, ದೇವಾಲಯಗಳ ನಿರ್ಮಾಣದಲ್ಲಿ ಬೃಹತ್ ಸಾಮ್ರಾಜ್ಯವೆಂದು ಗುರುತಿಸಿಕೊಂಡಿತ್ತು. ಆದರೆ ಸಾಮಾಜಿಕವಾಗಿ ಇದೊಂದು ಪುಟ್ಟ ಸಂಸ್ಥಾನದಂತಿತ್ತೆಂದು ಹೇಳುವ, ಸಂದೇಹಗಳು ಸಹಜವಾಗಿಯೇ ಮೂಡುತ್ತವೆ. ಮೇಲೆ ತಿಳಿಸಿದ ಹಾಗೆ ಶಿಲ್ಪಿಗಳು ತಮ್ಮ ಎಷ್ಟೋ ಕಷ್ಟವನ್ನು ಬದಿಗೊತ್ತಿ ಸುಂದರ ಶಿಲ್ಪಗಳನ್ನು, ಅವುಗಳಲ್ಲಿ ಸೌಂದರ್ಯದ ಭಾವನೆಗಳನ್ನು ತುಂಬಿ ನಿರ್ಮಿಸಿದ್ದಾರೆ ಎಂಬುದು ತಿಳಿದಿರುವ ವಿಷಯವೆ. ಅಂದಿನ ಶಿಲ್ಪಿಗಳಿಗೆ ಶಿಲ್ಪದಲ್ಲಿ ಸೌಂದರ್ಯದ ಅಂಗವನ್ನು ಚೆನ್ನಾಗಿ ಅಳವಡಿಸಲು ಪ್ರಾಚೀನ ಕಾಲದಲ್ಲಿಯೇ ಬೆಳಕಿಗೆ ಬಂದಿದ್ದಂತಹ ಚಿತ್ರಲಕ್ಷಣ ಎಂಬ ಬೌದ್ಧ ಗ್ರಂಥವು ಆಧಾರವಾಗಿತೆನ್ನಬಹುದು. ಏಕೆಂದರೆ ಈ ಗ್ರಂಥವು ಶಿಲ್ಪದ ಸೌಂದರ್ಯದ ಬಗ್ಗೆ ಮಾರ್ಗದರ್ಶನ ನೀಡುವಂತಹ ಗ್ರಂಥವಾಗಿ ರೂಪಗೊಂಡಿದೆ. ಈ ಗ್ರಂಥವು ದೇವತೆಗಳಿಗೂ, ರಾಜರಿಗೂ, ಸಾಧಾರಣ ಜನರಿಗೂ, ಪ್ರಾಣಿಗಳನ್ನು ಶಿಲೆಯಲ್ಲಿ ಶಿಲ್ಪಿಯು ನಿರ್ಮಿಸುವಾಗ ಯಾವ ನೀತಿ ನಿಯಮಗಳನ್ನು ಅನುಸರಿಸಬೇಕೆಂದು ಸ್ಪಷ್ಟಪಡಿಸುತ್ತದೆ. ಅಷ್ಟೇ ಅಲ್ಲದೆ ದೇಹದ ಆಕಾರವನ್ನು ವಿಭಜಿಸಿ, ಚಿಕ್ಕಪುಟ್ಟ ಪ್ರಮಾಣಗಳನ್ನು ಕೂಡ ವಿವರಿಸುತ್ತದೆ. ಚಿತ್ರಲಕ್ಷಣವು ಹೇಳುವಂತೆ ಸುಂದರವಾದ ಮುಖವು ಎಲ್ಲಾ ದೃಷ್ಟಿಯಿಂದಲೂ ಆಕರ್ಷಕವಾಗಿರಬೇಕು. ಮುಖವು ತ್ರಿಕೋಣಾಕಾರವಾಗಿಯೂ, ಸೊಟ್ಟಾಗಿಯೂ, ಅಂಡಾಕಾರವಾಗಿಯೂ, ವರ್ತುಳಾ ಕಾರವನ್ನು ಹೋಲುವ ಮುಖಗಳೆ ಇರಬೇಕು. ಆದರೆ ಮನುಷ್ಯರನ್ನು ರಚಿಸುವಾಗ ಆಕಾರದಲ್ಲಿ ಸ್ವಲ್ಪ ಸ್ವಾತಂತ್ರ್ಯವನ್ನು ಸಂದರ್ಭಕ್ಕೆ ತಕ್ಕಂತೆ ಪರಿವರ್ತಿಸಬಹುದೆಂದು ಹೇಳುತ್ತದೆ. ದೇವತೆಗಳಿಗೂ, ರಾಜರಿಗೂ ಸೊಗಸಾದ ನೀಲವರ್ಣದ ಗುಂಗುರು ಕೂದಲು ಅವಶ್ಯಕವಾಗಿರುತ್ತದೆ. ಸ್ತ್ರೀರೂಪವು ಮನೋಹರವಾದ ಅಂಗಗಳ ಸಂಯೋಗ ದಿಂದ ಕೂಡಿರುವುದಾಗಿರುತ್ತದೆ. ಹಾಗೆಯೇ ಅವುಗಳು ಕೋಮಲವಾಗಿಯೂ, ಯೌವನದಿಂದ ಕೂಡಿರುವಂತಹ ಲಕ್ಷಣಗಳು ಸೂಚಿಸುವಂತಿವೆ. ಇವುಗಳೆಲ್ಲದರಲ್ಲಿಯೂ ಸಹ ವಿಜಯನಗರದ ಶಿಲ್ಪಿಗಳು ಮನಮೋಹಕವಾದಂತಹ ತಮ್ಮ ಕೈಚಳಕ ತೋರಿಸಿದ್ದಾರೆ. ಏಕೆಂದರೆ ಅಂದಿನ ಶಿಲ್ಪಿಗಳು ತಮ್ಮ ಮನದಲ್ಲಿ "ಭಾವನಾಸಂಪತ್ತಿಲ್ಲದ ರೂಪವು ಸೌಂದರ್ಯರಹಿತವಾದುಎಂದು" ಮನವರಿಕೆ ಮಾಡಿಕೊಂಡಿದ್ದರುಎನ್ನಬಹುದು.

ಶಿಲ್ಪದ ಸೌಂದರ್ಯದ ಬಗ್ಗೆ ವಾತ್ಸ್ಯಾಯನ ಕಾಮಸೂತ್ರವೂ ಸಹ ಹೆಚ್ಚಿನ ಮಾಹಿತಿ ನೀಡುತ್ತದೆ. ಈ ಗ್ರಂಥವು ಹೆಚ್ಚಾಗಿ ಚಿತ್ರಕಲೆಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಯನ್ನು ದೊರಕಿಸುತ್ತದೆ. ಉದಾ. ಚಿತ್ರದಲ್ಲಿ ಬಣ್ಣ ಹಚ್ಚುವಾಗ ದೇಹದ ವಿವಿಧ ಅಂಗಗಳಿಗೆ ಕೊಡಬೇಕಾದಂತಹ ಬಣ್ಣಗಳು ಯಾವುದೆಂಬುದರ ಅರಿವುಂಟಾಗುವಂತೆ ತಿಳಿಸುತ್ತದೆ. ಇದು ಚಿತ್ರ ರಚನೆಗೆ ಮಾತ್ರ ಅನ್ವಯಿಸುತ್ತದೆಯೇ ವಿನಹಃ ಶಿಲ್ಪಕ್ಕಲ್ಲ. ವಿರುಪಾಕ್ಷ ದೇವಾಲಯದ ಕಲಾ ಮುಂದಿನ ಮೇಲಿನ ವರ್ಣಚಿತ್ರಗಳ ನರ್ತನಾ ಶಾಲೆಯ ವರ್ಣನೆಯಿಂದ ಆ ಅಂಶವು ಸ್ಪಷ್ಟಗೊಳ್ಳುತ್ತದೆ.

ಶಿಲ್ಪಿಯು ತನ್ನ ಅರಿವಿನಲ್ಲಿ ಗ್ರಹಿಸಿರುವ ಹಾಗೆ (ಪುರಾಣಗಳು ಹೇಳುವ ಹಾಗೆ) ಶಿಲ್ಪವನ್ನು ನಿರ್ಮಿಸುತ್ತಿದ್ದನು. ಅವನ್ನು ನಿರ್ಮಿಸಿರುವ ಮೂರ್ತಿಗಳನ್ನು ಮೂರು ಭಾಗಗಳಾಗಿ ಗುರ್ತಿಸಬಹುದು. ನಾರಾಯಣ, ರಾಮ, ವಾಲಿ, ಇಂದ್ರ, ಭಾಗವತ, ಅರ್ಜುನ ಮುಂತಾದವರುಗಳು ನರ ಮೂರ್ತಿಗಳಾದರೆ, ಹಿರಣ್ಯಕಶಿಪು, ವೃತ್ರ, ಹಿರಣ್ಯಾಕ್ಷ, ರಾವಣ, ಕುಂಭಕರ್ಣ, ಮಹಿಷಾಸುರ, ಶರಭ, ನಿಶುಂಭ, ಜರಾಸಂಧ ಮುಂತಾದವರುಗಳು ಅಸುರ ಮೂರ್ತಿಗಳಾಗಿಯೂ, ಭೈರವ, ವೀರಭದ್ರ, ಚಂಡಿ, ನರಸಿಂಹ, ವರಾಹ, ತ್ರಿವಿಕ್ರಮ ಮುಂತಾದವು ಕ್ರೂರ ಮೂರ್ತಿಗಳು, ಹಾಗೆಯೇ ಗೋಪಾಲ, ಬಾಲಕೃಷ್ಣ, ಬಾಲಗಣಪತಿ, ಕುಮಾರ ಸ್ವಾಮಿ ಮುಂತಾದವುಗಳು ಬಾಲಮೂರ್ತಿಗಳಾದರೆ, ವಾಮನ, ಕೃಷ್ಣ ಮುಂತಾದವುಗಳು ಕುಮಾರ ಮೂರ್ತಿಗಳಾಗಿರುತ್ತವೆ, ಮೇಲಿನ ಶಿಲ್ಪಗಳ ವೈವಿಧ್ಯತೆಯನ್ನು ನೀವು ಹಂಪಿಯ ದೇವಾಲಯಗಳಲ್ಲಿ ಸ್ಪಷ್ಟವಾಗಿ ಗಮನಿಸಬಹುದು. ಇದು ಭಾರತೀಯ ಶಿಲ್ಪ ಸಂಸ್ಕೃತಿಯು ಹೌದು.

ವಿಜಯನಗರದ ಶಿಲ್ಪಗಳಲ್ಲಿನ ಭಂಗಿಗಳ ಬಗ್ಗೆ ಚರ್ಚಿಸುವುದಾದರೆ ಅವುಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಕೆಳಕಂಡ ಭಂಗಿಗಳಲ್ಲಿ ಅವುಗಳು ಇರುವುದು ಕಂಡುಬರುತ್ತದೆ. ಅವುಗಳನ್ನು ಏಕಭಂಗಿ, ದ್ವಿಭಂಗಿ, ತ್ರಿಭಂಗಿ, ಅತಿಭಂಗಿಗಳೆಂದು ಹಾಗೂ ವಿವಿಧ ಭಂಗಿಗಳೆಂದು ಗುರ್ತಿಸಬಹುದಾಗಿದೆ. ಸಾಮಾನ್ಯವಾಗಿ ವಿಷ್ಣು ಪ್ರತಿಮೆಗಳು ಸಮಭಂಗಿಯಲ್ಲಿರುತ್ತವೆ. ಶಿವನ ಪ್ರತಿಮೆಗಳು ತ್ರಿಭಂಗಿಯಲ್ಲಿಯೂ ಹಾಗೆಯೇ ಅತಿಭಂಗಿಯಲ್ಲಿಯೂ ಇರುವುದು ಕಂಡುಬರುತ್ತದೆ. ಸ್ಥಾನಿಕ ದೇವಿಯರ ಪ್ರತಿಮೆಗಳು ಏಕ ಅಥವಾ ದ್ವೀತಿಯ ಭಂಗಿಯಲ್ಲಿ ಇರುವುವುಗಳಾಗಿರುತ್ತವೆ. ಇನ್ನೂ ಮುಂದುವರೆದು ಆಸನದ ಬಗ್ಗೆ ಗಮನಿಸಿದರೆ ತಿಳಿದುಬರುವ ಅಂಶವೆಂದರೆ ದೇವತೆಗಳು ಹಾಗೂ ಚಕ್ರವರ್ತಿಗಳು ಹೆಚ್ಚಾಗಿ ಪದ್ಮಾಸನದಲ್ಲಿರುವುದು ಕಂಡು ಬರುತ್ತದೆ. ಭಾರತೀಯ ದೇವತೆಗಳು ಧರಿಸುವ ಮುಕುಟ ಎಷ್ಟೋ ಬಗೆಯವುಗಳಿರುವುದು ಸಂಸ್ಕೃತಿಯ ಒಂದು ಭಾಗವೇ ಆಗಿದೆ. ಉದಾಹರಣೆಗೆ; ವಿಷ್ಣು, ಆದಿರಾಜ, ಸಾರ್ವಭೌಮರಿಗೆ ಕಿರೀಟವೇ ಮುಕುಟವಾದರೆ, ಬ್ರಹ್ಮನಿಗೆ ಜಟಾ ಮಕುಟವಾಗಿರುತ್ತದೆ, ಪಾರ್ವತಿಗೆ ಮನೋನ್ಮನಿ ಮುಕುಟವಾದರೆ, ಸರಸ್ವತಿ, ಮಹಾರಾಣಿಯರು, ಸಾರ್ವಭೌಮಿಯರಿಗೆ ಕೇಶಬಂಧವೇ ಮುಕುಟವಾಗಿರುವುದು ಕಂಡುಬರುತ್ತದೆ. ಇವುಗಳ ಆಧಾರದ ಮೇಲೆಯೇ ನಾವು ಸಂಬಂಧಪಟ್ಟಂತಹ ಶಿಲ್ಪಗಳನ್ನು ಗುರುತಿಸಬಹುದಾಗಿದೆ. ಹೆಚ್ಚಾಗಿ ಕಿರೀಟ ಮುಕುಟವೇ ಉಪಯೋಗದಲ್ಲಿರುವುದು ಕಂಡುಬರುತ್ತದೆ. ಇನ್ನೂ ಶಿಲ್ಪಿಗಳು ಗಂಡು, ಹೆಣ್ಣು, ದೇವಾನುದೇವತೆಗಳ ಶಿಲ್ಪಗಳನ್ನು ನಿರ್ಮಿಸುವಾಗ ಮುಖ, ಕಣ್ಣು, ತುಟಿ, ಕಿವಿ, ಹುಬ್ಬು, ಕೈ – ಕಾಲು, ಎದೆ, ಹೊಟ್ಟೆಗಳ ನಿರ್ಮಾಣದಲ್ಲಿ ಅನುಸರಿಸಿರುವ ರೀತಿಗಳಂತೂ ಅದ್ಭುತವಾಗಿವೆ. ಇದರಿಂದಾಗಿಯೇ ಇವು ಅತ್ಯಂತ ಹೆಚ್ಚಿನ ಸೌಂದರ್ಯವನ್ನು ತಮ್ಮ ಮಡಿಲಿನಲ್ಲಿ ಅಡಗಿಸಿಕೊಂಡು ಇಂದಿಗೂ ದೇಶಿ ಹಾಗೂ ವಿದೇಶಿಯರ ಮುಂದೆ ಮಧ್ಯಕಾಲೀನ ಸಂಸ್ಕೃತಿಯ ಪ್ರತೀಕವಾಗಿ ಮೆರೆಯುತ್ತಿವೆ.

7.3 ವಿಜಯನಗರದ ದೇವಾಲಯಗಳು

ಹಂಪಿ ಅಥವಾ ವಿಜಯನಗರದಲ್ಲಿ ಎಲ್ಲಿ ನೋಡಿದರಲ್ಲಿ ದೇವಾಲಯಗಳು ಕಂಡುಬರುತ್ತವೆ. ಇದನ್ನು ದೇವಾಲಯಗಳ ಉದ್ಯಾನವನ ಎಂದು ಕರೆಯಲಾಗಿದೆ. ಚಿಕ್ಕ ಹಾಗೂ ಬೃಹತ್ ಆಕಾರದ ದೇವಾಲಯಗಳು ತಮ್ಮದೆಯಾದಂತಹ ಸಂಸ್ಕೃತಿಯನ್ನು ತಮ್ಮ ತಮ್ಮ ಮಡಿಲಿನಲ್ಲಿ ಅಡಗಿಸಿಕೊಂಡು ಬೆಚ್ಚಗೆ ಕುಳಿತಿವೆ. ಹಂಪಿಯಲ್ಲಿ ಕಂಡುಬರುವ ದೇವಾಲಯಗಳನ್ನೂ, ವಿರೂಪಾಕ್ಷ, ಹಜಾರರಾಮ, ವಿಜಯವಿಠಲ, ಕೋದಂಡರಾಮ, ಯಂತ್ರೋದ್ಧಾರಕ ಆಂಜನೇಯ ದೇವಸ್ಥಾನ, ಅಚ್ಯುತರಾಯ ದೇವಸ್ಥಾನ, ಸಾಸಿವೆಕಾಳು ಮತ್ತು ಕಡಲೆಕಾಳು ಗಣೇಶ ವಿಗ್ರಹಗಳು, ಕೃಷ್ಣ ದೇವಸ್ಥಾನ, ವಿಷ್ಣುಪಾದ ದೇವಸ್ಥಾನ, ಲಕ್ಷ್ಮೀ ನರಸಿಂಹ,

ಬಡವಿಲಿಂಗ, ಸರಸ್ವತಿ ಗುಡಿ, ಉದ್ದಾನ ವೀರಭದ್ರ ದೇವಾಲಯ, ಚಂಡಿಕೇಶ್ವರ ದೇವಾಲಯ, ಗಾಣಗಿತ್ತಿ ಜೈನ ದೇವಾಲಯ, ಕಮಲಾಪುರದ ಪಟ್ಟಾಭಿರಾಮ ದೇವಾಲಯ, ಅನಂತಶಯನ ಗುಡಿ, ಮಲ್ಲಪ್ಪನಗುಡಿ (ಮಲಪನಗುಡಿ) ಹಾಗೂ ಹೇಮಕೂಟದಲ್ಲಿರುವ ದೇವಾಲಯಗಳ ಸಮೂಹಗಳೆಮದು ಪಟ್ಟಿ ಮಾಡಬಹುದಾಗಿದೆ. ಇವುಗಳಲ್ಲಿ ಅತ್ಯಂತ ಪ್ರಸಿದ್ಧವಾಗಿರುವಂತಹ ಹಾಗೂ ಪ್ರಮುಖವಾಗಿರುವಂತಹ ದೇವಾಲಯಗಳನ್ನು ಮಾತ್ರ ಸಾಂಸ್ಕೃತಿಕ ಹಿನ್ನಲೆಯಿಂದ ಹೇಳುವುದಾದರೆ

1. ವಿರೂಪಾಕ್ಷ ದೇವಸ್ಥಾನ : ಈ ದೇವಾಲಯವು ವಿಜಯನಗರಕ್ಕಿಂತಲೂ ಹಿಂದಿನದೆಂದು ಕಂಡುಬರುತ್ತದೆ. ಕಾರಣ ದೇವಾಲಯದ ಆವರಣದಲ್ಲಿರುವಂತಹ ವಿವಿಧ ಭಾಗಗಳನ್ನು ಬೇರೆ ಬೇರೆ ಕಾಲದಲ್ಲಿ ರಚಿತವಾಗಿರುವುದು, ಮತ್ತೆ ಕೆಲವು ಭಾಗಗಳು ಜೀರ್ಣೋದ್ಧಾರಗೊಂಡಿರುವುದು ಕಂಡುಬರುತ್ತದೆ. ಆದರೆ ಕಲ್ಯಾಣ ಮಂಟಪ, ಹಾಗೂ ಗೋಪುರಗಳನ್ನು ನಿರ್ಮಿಸಿ ದೇವಾಲಯದ ಆವರಣದೊಳಗೇ ಇತರ ಗುಡಿಗಳನ್ನು ಕಟ್ಟಿಸಿದ ಖ್ಯಾತಿಯು ವಿಜಯನಗರದರಸರಿಗೆ ಸಲ್ಲುತ್ತದೆ. ಪಂಪಾಕ್ಷೇತ್ರದ ಉಲ್ಲೇಖವು ಬಾದಾಮಿ ಚಾಲುಕ್ಯರ ಅರಸನಾದಂತಹ ವಿನಯಾದಿತ್ಯನ ತಾಮ್ರ ಶಾಸನದಲ್ಲಿ ಸಿಗುತ್ತದೆ.* (ಬಳ್ಳಾರಿ ಜಿಲ್ಲೆ ಶಾಸನ ಸಂಪುಟ, ಕನ್ನಡ ವಿಶ್ವವಿದ್ಯಾಲಯ, ಹಂಪಿ) ಅದೇ ರೀತಿಯಲ್ಲಿ ಚಾಲುಕ್ಯ ಮನೆತನದ ಐದನೆಯ ವಿಕ್ರಮಾದಿತ್ಯ ಕ್ರಿ.ಶ. 1013ನೆಯ ಶಾಸನವೊಂದರಲ್ಲಿ ಪಂಪಾಪತಿ ಎನಿಸಿದ ಮಹಾಕಾಲನಿಗೆ ಪಲ್ಲವ ವಂಶದ ವೃದ್ಧಮಬ್ಬರಸಿ ಎಂಬಾಕೆ ಭೂದಾನ ಮಾಡಿದಳೆಂದಿದೆ. ಅಂದು ಪಂಪಾಪತಿಗೆ ಮಹಾಕಾಲನೆಂಬ ಹೆಸರಿದ್ದದು ತಿಳಿದು ಬರುತ್ತದೆ. ಕ್ರಿ.ಶ.1199ರಲ್ಲಿ ಹುಟ್ಟಿದ ನಾಗವಂಶದ ಅರಸನಾದ ಕಲಿದೇವನ ಕಾಲದ ಶಾಸನದಲ್ಲಿ ಈ ದೇವರನ್ನು ವಿರೂಪಾಕ್ಷನೆಂದೂ, ದೇವಿಯನ್ನು ಪಂಪಾದೇವಿಯೆಂದೂ ಕರೆಯಲಾಗಿದೆ. ಇವುಗಳ ಆಧಾರದ ಮೆಲೆ ಇದೊಂದು ವಿಜಯನಗರದ ಪೂರ್ವದ ದೇವಾಲಯವೆಂದು ಸ್ಪಷ್ಟವಾಗಿ ಹೇಳಬಹುದು.

ವಿಜಯನಗರ ಸಾಮ್ರಾಜ್ಯವು 1336ರಲ್ಲಿ ಸ್ಥಾಪನೆಯಾದಾಗ ಅಂದಿನ ರಾಜ, ಪ್ರಭು, ದೈವ, ಎಲ್ಲವೂ ಸಹ ವಿರೂಪಾಕ್ಷನೇ ಆಗಿದ್ದನು ಅಂದರೆ ಸಂಸ್ಥಾಪಕ ರಾಜರು ವಿರೂಪಾಕ್ಷನಿಗೆ ಮೇಲಿನ ಸ್ಥಾನ ನೀಡಿದ್ದರು. ಪ್ರವೇಶ ದ್ವಾರದ ಮೇಲೆ ಸುಮಾರು 165 ಅಡಿ ಎತ್ತರದ, (52.6 ಮೀಟರ್) ಒಂಬತ್ತು ಅಂತಸ್ತಿನ ಬೃಹತ್ ಗೋಪುರವಿದೆ. ಇದನ್ನು ಎರಡನೆಯ ದೇವರಾಯನ ಕಾಲದಲ್ಲಿ ನಿರ್ಮಿತವಾಗಿದ್ದುದೆಂದು ಹೇಳಲಾಗಿದೆ. ಇದಕ್ಕೆ ಇನ್ನೊಂದು ಆಧಾರದ ಪ್ರಕಾರ ಬಿಷ್ಟಪ್ಪಯ್ಯ ಎಂಬ ಭಕ್ತನು ಕಟ್ಟಿಸಿದನೆಂದೂ, ಅದಕ್ಕೆ ಇಂದು ಬಿಷ್ಟಪ್ಪಯ್ಯ ಗೋಪುರ ಎಂದು ಸಹ ಕರೆದುಕೊಂಡು ಬರುವ ರೂಢಿಯಿದೆ. ಒಳಗಡೆ ಕೃಷ್ಣದೇವರಾಯನು ಕಟ್ಟಿಸಿದ ಗೋಪುರವು ಅಷ್ಟೇನು ಎತ್ತರವಿಲ್ಲ. ಇದು ಮೂರಂತಸ್ತಿನ ಗೋಪುರ. ಕೃಷ್ಣದೇವರಾಯನು ಪಟ್ಟಾಭಿಷೇಕವಾದ ನೆನಪಿಗೆ ಕಟ್ಟಿಸಿದನೆಂದು ತಿಳಿದುಬರುವ ಈ ಗೋಪುರವು ರಾಯಗೋಪುರ ಎಂದೂ ಕರೆಸಿಕೊಳ್ಳುತ್ತಿದೆ. ಕೃಷ್ಣದೇವರಾಯ ಹೆಚ್ಚಾಗಿ ವೈಷ್ಣವ ದೇವಾಲಯಗಳಿಗೆ ಪ್ರಾಮುಖ್ಯತೆ ನೀಡಿದನೇ ಹೊರತು ಶೈವ ದೇವಾಲಯಗಳ ನಿರ್ಮಾಣಕ್ಕೆ ಹೆಚ್ಚಿನ ಗಮನ ನೀಡದಿರುವುದು ಚಾರಿತ್ರೆ ಮತ್ತು ಸತ್ಯವೇ ಆಗಿದೆ.

ಒಳ ಭಾಗದಲ್ಲಿ ರಂಗಮಂಟಪ (ಕಲ್ಯಾಣಮಂಟಪ)ವಿದ್ದು ಇದು ವಿಜಯನಗರ ಶೈಲಿಯ ಕೈಗನ್ನಡಿಯಂತಿದೆ. ಕಲ್ಯಾಣಮಂಟಪದ ಮೇಲ್ಭಾಗದಲ್ಲಿ ಚಿತ್ರಿಸಿರುವ ವರ್ಣರಂಜಿತವಾದ ಚಿತ್ರಕಲೆ ಅಂದಿನ ಕಾಲದ ಚಿತ್ರಕಲೆಯಿಂದಲೂ ಶೋಭಿಸುತ್ತಾ ನಿಂತಿದೆ.

2. ಅಚ್ಯುತರಾಯ ದೇವರಾಯ : ಸೂಳೆ ಬಜಾರು ಎಂಬ ಪೇಟೆಯ ದಕ್ಷಿಣ ತುದಿಯಲ್ಲಿ ದೊಡ್ಡದಾದ ಅಚ್ಯುತರಾಯ ದೇವಲಾಯವಿದೆ. ಇದು 1539ರಲ್ಲಿ ವಿಜಯನಗರದ ದೊರೆ ಅಚ್ಯುತದೇವರಾಯ ಕಟ್ಟಿಸಿದನೆನ್ನಲಾಗಿದೆ. ಉತ್ತರಾಭಿಮುಖ ವಾಗಿರುವ ಈ ದೇವಾಲಯದಲ್ಲಿ ಅನೇಕ ಭಾಗಗಳಿದ್ದು, ಗರ್ಭಗುಡಿಯಲ್ಲಿದ್ದಂತಹ ದೇವರು ತಿರುವೇಂಗಡನಾಥನೆನ್ನಲಾಗಿದ್ದು ಈ ದೇವಾಸ್ಥಾನಕ್ಕೆ ತಿರುವೇಂಗಡನಾಥ ದೇವಾಲಯವೆಂದೂ ಕರೆಯಲಾಗಿದೆ. ಇಲ್ಲಿಯೂ ಸಹ ವಿಜಯನಗರ ಶೈಲಿಯ ವಾಸ್ತುಗಳಾದಂತಹ ಪೂರ್ವ, ಪಶ್ಚಿಮ ಮತ್ತು ಉತ್ತರ ದಿಕ್ಕುಗಳಲ್ಲಿ ಗೋಪುರಗಳಿವೆ, (ಈಗ ಸ್ವಲ್ಪ ನಶಿಸಿವೆ) ಹೊರ ಒಳ ಅಂಗಗಳಲ್ಲಿ ಎರಡು ಬದಿಗಳಲ್ಲಿಯೂ ಕಂಬಗಳ ಮಂಟಪಗಳಿವೆ, ಮುಚ್ಚಿದ ಪ್ರದಕ್ಷಿಣಪಥ, ಅಂತರಾಳ, ಅರ್ಧಮಂಟಪ ಹಾಗೂ ಅಲಂಕೃತ ಮಹಾಮಂಟಪಗಳು ಒಂದಕ್ಕೊಂದು ಹೊಂದಿಕೊಂಡಿರುವುದು ಕಂಡುಬರುತ್ತದೆ.

3. ವಿಜಯ ವಿಠಲ ದೇವಾಲಯ : ಹಂಪಿಗೆ ಕಳಶಪ್ರಾಯವಾಗಿರುವುದು ಶೈವರ ವಿರೂಪಾಕ್ಷ ದೇವಾಲಯವಾದರೆ, ತಿಲಕ ಪ್ರಾಯವಾಗಿರುವುದು ವೈಷ್ಣಾವರ ವಿಜಯ ವಿಠಲ ದೇವಾಲಯ, ಅಂದರೇ ಈ ಎರಡು ದೇವಾಲಯಗಳೂ ಶೈವ ಹಾಗೂ ವೈಷ್ಣವರ ಗುರುತಿಸುವಿಕೆಯ ಸಂಕೇತಗಳಾಗಿಯೂ ಬೆಳೆದುಬಂದವುಗಳಾಗಿರುವುದು ಚಾರಿತ್ರಿಕ ಸತ್ಯ. ಆದರೆ ಶೈವ ದೇವಾಲಯ ಉಳಿದು ವೈಷ್ಣವ ದೇವಾಲಯ ನಷ್ಟವಾಗಿರುವುದು ಈ ನಾಡಿನಲ್ಲಿ ಶೈವ – ವೈಷ್ಣವರ ಸಾಂಸ್ಕೃತಿಕ ತಿಕ್ಕಾಟವನ್ನು ಬಯಲಿಗೆಳೆಯುತ್ತವೆ.

ಜಗತ್ತಿನಲ್ಲಿಯೇ ಪ್ರಖ್ಯಾತವಾಗಿರುವ ವಿಠಲಸ್ವಾಮಿ ದೇವಾಲಯವು ಕಲಾಕುಶಲತೆಯ ದೃಷ್ಟಿಯಿಂದ ಅತ್ಯಂತ ಸುಂದರವಾದದ್ದಾಗಿದೆ. ಅಲ್ಲಲ್ಲಿ ಹಾಳಾಗಿದ್ದರೂ ಶಿಲ್ಪ ವೈಭವಕ್ಕೆ ಕುಂದು ಬಂದಂತಿಲ್ಲ. (ASIನಿಂದ ಈಗ ದೇವಾಲಯದ ಜೀರ್ಣೋದ್ಧಾರದ ಕೆಲಸ ನಡೆಯುತ್ತಿದೆ) ಕೃಷ್ಣದೇವರಾಯನು 1513ರಲ್ಲಿ ಈ ದೇವಾಲಯವನ್ನು ಕಟ್ಟಿಸಲು ತೊಡಗಿದನೆಂದು ಸಾಹಿತ್ಯ ಹಾಗೂ ಶಾಸನಾಧಾರಗಳಿಂದ ಕಂಡುಬಂದರೂ ಸಹ ಹದಿನಾಲ್ಕನೇ ಶತಮಾನದ ಆದಿ ಭಾಗದಲ್ಲಿ ಈ ದೇವಾಲಯ ಅಸ್ತಿತ್ವದಲ್ಲಿತ್ತೆಂಬುದು ಹರಿಭಟ್ಟನಿಂದ ರಚಿತವಾದ "ಉತ್ತರ ನರಸಿಂಹ ಪುರಾಣಂ" ದಿಂದ ತಿಳಿದುಬರುತ್ತದೆ. ಆದರೆ ಅಂದು ಒಂದು ಚಿಕ್ಕ ದೇವಾಲಯವಾಗಿದ್ದನ್ನು ಕೃಷ್ಣದೇವರಾಯನು ಬೃಹತ್ ದೇವಾಲಯವನ್ನಾಗಿ ನಿರ್ಮಿಸಲು ಪಣತೊಟ್ಟು ಸುಮಾರು ಐವತ್ತು ವರ್ಷಗಳು ಸತತವಾಗಿ ಸಾವಿರಾರು ಶಿಲ್ಪಿಗಳು ಹಗಲಿರುಳು ದುಡಿದ ಇದರ ಫಲವಾಗಿಯೇ ವಿಜಯನಗರದ ವಾಸ್ತುಶಿಲ್ಪವು ಇಲ್ಲಿ ಕಲ್ಲರಳಿ ಹೂವಾಗಿ ಕಂಗೊಳಿಸುತ್ತಿದೆ. ಕೃಷ್ಣದೇವರಾಯನು ಕಳಿಂಗದ ದಿಗ್ವಿಜಯದ ನಂತರ ಈ ದೇವಾಲಯವನ್ನು ಕಟ್ಟಿಸಿದನೆಂದು ಶಾಸನವು ತಿಳಿಸುತ್ತದೆ. ಕೆಲವು ಆಧಾರಗಳು ತಾಳಿಕೋಟೆ ಯುದ್ಧದ ವರೆವಿಗೂ ಇಲ್ಲಿ ವೈಷ್ಣವಾಚರಣೆಯ ಪೂಜೆಗಳು ನಡೆಯುತ್ತಿದ್ದವೆಂದು ತಿಳಿಸುತ್ತವೆ. ತಾಳಿಕೋಟೆ ಯುದ್ಧದ ನಂತರ ವೈಷ್ಣವ ಸಂತತಿಯ ಬ್ರಾಹ್ಮರು ವಾಯುನೂರ ತೋರೆದು ಮೈಸೂರು ಸಂಸಾನದ ಅಶ್ರಯದಿಡೆವರು. ಒಂದರ್ಥದಲ್ಲಿ ರಾಜಾಧ್ರಯ ಪಡೆದು ಶ್ರೀಮಂತವೆನ್ನಿಸಿಕೊಂಡಿದ್ದ ವೈಷ್ಣವ ದೇವಾಲಯಗಳನ್ನು ಶೈವರೆ ನಷ್ಟಪಡಿಸಿರುವುದು ಚರಿತ್ರಿಕ ಸತ್ಯವೇ ಆಗಿದೆ.

ಈ ಬೃಹತ್ ದೇವಾಲಯದಿಂದ ಅಂಗಳದ ಸುತ್ತ ಮಂಟಪದ ಸಾಲುಗಳಿವೆ, ಕಲ್ಯಾಣ ಮಂಟಪ, ಉತ್ಸವ ಮಂಟಪ, ನೂರು ಕಂಬಗಳ ಮಂಟಪ ಮತ್ತು ಮುಂಭಾಗದಲ್ಲಿ ಕಲ್ಲಿನ ರಥ ಇವೆ. ಇಲ್ಲಿನ ಜಗತ್ ವಿಖ್ಯಾತ ಕಲ್ಲಿನ ರಥವನ್ನು ಒಂದೇ ಶಿಲೆಯಿಂದ ಕೆತ್ತಲಾಗಿದೆ. ಇದೊಂದು ಸುಂದರವಾದ ರಚನೆ. ಸಾಮಾನ್ಯವಾಗಿ ವಿಷ್ಣು ದೇವಾಲಯಗಳ ಮುಂದೆ ಗರುಡನಿಗೆಂದು ಒಂದು ಸಣ್ಣ ಗುಡಿಯನ್ನು ಕಟ್ಟುವುದು ವಾಡಿಕೆ, ಇಲ್ಲಿ ಕಲ್ಲಿನ ರಥವೇ ಗರುಡನ ಗುಡಿಯಾಗಿದೆ. ರಥದ ಗರ್ಭಗೃಹದಲ್ಲಿ ಗರುಡನ ವಿಗ್ರಹವಿದೆ. ರಥದ ಮೇಲೆ ಇಟ್ಟಿಗೆಯ ಒಂದು ವಿಮಾನವಿತ್ತೆಂದು 1856ರಲ್ಲಿ ಪ್ರಥಮವಾಗಿ ಹಂಪಿಯ ದೇವಾಲಯಗಳನ್ನು ಛಾಯ ಚಿತ್ರಿಸಿದ ಅಲೇಜ್ಯಾಂಡರ್ ಜೆ. ಗ್ರೀನ್‌ವೆಲ್ ಅವರ ಚಿತ್ರ ಸಾಕ್ಷಿ ಕರಿಸಿದೆ. ಆದರೆ ಇಂದು ಸಂಪೂರ್ಣ ಕಾಣಿಕೆಯಾಗಿದೆ. ಕಲ್ಲಿನ ರಥದಲ್ಲಿ ಸೂಕ್ಷ್ಮ ಕೆತ್ತನೆಯ ಕೆಲಸವನ್ನು ನೋಡಿ, ನಮ್ಮ ಸಂಸ್ಕೃತಿಯು ಎಳೆಎಳೆಯಾಗಿ ಹೊರಹೊಮ್ಮುವಂತೆ ಮಾಡುತ್ತದೆ. ಮಹಾ ಮಂಟಪದಲ್ಲಿ ನಲವತ್ತು ಕಂಬಗಳಿದ್ದು ಅವುಗಳೆಲ್ಲವೂ ಸಹ ಸಮಾನಾಂತರದಲ್ಲಿವೆ. ಒಂದೊಂದು ಕಂಬವೂ ದೊಡ್ಡ ಗಾತ್ರಕ್ಕಿದ್ದು, ಶಿಲ್ಪಕಲೆ ಅಪೂರ್ವವೆನಿಸುತ್ತದೆ. ಸಣ್ಣ ಕಂಬಗಳ ಮೇಲೆ ಮೆಲ್ಲಗೆ ತಟ್ಟಿದಾಗ ಸಂಗೀತದ ಸಪ್ತಸ್ವರಗಳು ಹೊರಹೊಮ್ಮುತ್ತವೆ. ಈ ನಾದ ಮಾಧುರ್ಯದಿಂದ ಶಿಲೆಗಳು ಸಂಗೀತ ಹಾಡುತ್ತಿವೆಯೋ ಎನ್ನುವಂತೆ ಮಾಡುತ್ತದೆ.

4. ಹಜಾರರಾಮ ದೇವಾಲಯ : ಕೃಷ್ಣದೇವರಾಯನು ಹಂಪಿಯಲ್ಲಿ ಕಟ್ಟಿಸಿದ ದೇವಾಲಯಗಳಲ್ಲಿ ಹಜಾರರಾಮ ದೇವಾಲಯವೂ ಒಂದು. ಇದನ್ನು ಅವನ ದಿಗ್ವಿಜಯದ ಸಂಕೇತವಾಗಿ ಕಟ್ಟಿಸಿದ್ದು ಎಂಬ ಅಭಿಪ್ರಾಯವಿದೆ. ಈ ದೇವಾಲಯವು ತನ್ನ ಹರಗೋಡೆ ಹಾಗೂ ಹಜಾರದುದ್ದಕ್ಕೂ ರಾಮಾಯಣಕ್ಕೆ ಸಂಬಂಧಿಸಿದ ಅನೇಕ ಚಿತ್ರಗಳನ್ನು ಹೊಂದಿರುವುದರಿಂದಲೇ ಇದಕ್ಕೆ ಹಜಾರರಾಮ ಎಂದು ಹೆಸರು ಬರಲು ಕಾರಣವೆಂದು ಇತಿಹಾಸಗಾರರು ನಂಬಿದ್ದಾರೆ. ಹಜಾರವೆಂದರೆ ತೆಲುಗು ಹಾಗೂ ಕನ್ನಡದಲ್ಲಿ ಸಭಾಮಂಟಪ ಎಂಬ ಅರ್ಥವಿದೆ. ಹಾಗೆಯೇ ಅರಮನೆಯ ದ್ವಾರಮಂಟಪ ಎಂಬ ಇನ್ನೊಂದು

ಅರ್ಥವೂ ಇದೆ. ಈ ದೇವಾಲಯವು ರಾಜರ ಅರಮನೆಯ ಹೆಬ್ಬಾಗಿಲಿನಲ್ಲಿಯೇ ಇರುವುದರಿಂದ ಈ ಹೆಸರೂ ಬಂದಿರಬಹುದೆಂದು ಕೆಲವರ ಅಭಿಪ್ರಾಯ.

ದೇವಾಲಯದ ಹೊರಗಡೆಯು ಸುಂದರವಾದ ಕಲೆಯಿಂದ ಮೈತುಂಬಿಕೊಂದೆ. ದೇವಾಲಯದ ಒಳಗಡೆ ರಾಮಾಯಣ, ಭಗವದ್ಗೀತೆಗೆ ಸಂಬಂಧಿಸಿದ ಚಿತ್ರಗಳು ಕಂಗೊಳಿಸುತ್ತಿವೆ. ಅವುಗಳಲ್ಲಿ ದಶರಥನಿಗಾಗಿ ಋಷ್ಯಶೃಂಗ ಮುನಿ ಪುತ್ರಕಾಮೇಷ್ಠಿ ಯಾಗ ಮಾಡುತ್ತಿರುವುದು, ಸೀತಾ ಸ್ವಯಂವರ ಸಂದರ್ಭದಲ್ಲಿ ಜನಕಮಹಾರಾಜನ ಪರಿವಾರದವರು ಮಹಾಭಾರತದ ಶಿವಧನುಸ್ಸು ಹೊತ್ತು ತರುತ್ತಿರುವುದು. ಕಿಷ್ಕಿಂದೆಯಲ್ಲಿ ರಾಮನು ಏಳು ತಾಳೆ ವೃಕ್ಷಗಳನ್ನು ಒಂದೇ ಬಿಲ್ಲಿನಿಂದ ತುಂಡು ಮಾಡುತ್ತಿರುವುದು, ಹನುಮಂತನಿಂದ ರಾಮನಿಗೆ ಚೂಡಾಮಣಿ ಪ್ರಧಾನ, ನರಸಿಂಹ ಹಾಗೂ ಅವನ ತೊಡೆಯ ಮೇಲೆ ಲಕ್ಷ್ಮೀ, ಕೃಷ್ಣನ ಲೀಲಾ ದೃಶ್ಯಗಳು, ವಾಲಿ–ಸುಗ್ರೀವರ ಕಾಳಗ ಮೊದಲಾದವುಗಳು ಕಣ್ಣಿಗೆ ಆನಂದ ತರುತ್ತವೆ. ಹೇಳುವುದಾದರೆ ಹೊರಗೋಡೆಯ ಮೇಲೆ ಎಲ್ಲ ಭಾರತೀಯ ದೇವಾನುದೇವತೆಗಳ ಚಿತ್ರವಿರುವುದು ಕಂಡುಬರುತ್ತದೆ. ಬುದ್ಧನಿಗೂ ಇಲ್ಲಿ ಸ್ಥಾನ ದೊರೆತಿರುವುದು ವಿಶೇಷವಾಗಿದೆ.

ದೇವಾಲಯದ ಹೊರಗೋಡೆಗಳಲ್ಲಿಯೂ ಸಹ ಕೆತ್ತನೆಗಳಿರುವುದು ಇಡೀ ದೇವಾಲಯದ ಆನಂದವನ್ನು ಶ್ರೀಮಂತಗೊಳಿಸಿದೆ. ನಮ್ಮ ಸಂಸ್ಕೃತಿಯ ಪ್ರತೀಕಗಳಾಗಿ ಇವು ಇಂದಿಗೂ ಕಂಗೊಳಿಸುತ್ತಿವೆ. ಹೊರ ಗೋಡೆಗಳಲ್ಲಿ ಐದು ಹಂತದಲ್ಲಿ ಚಿತ್ರಗಳಿದ್ದು ಆನೆಗಳು ಹಾಗೂ ಅದರ ಮೇಲೆ ಸವಾರರು, ಕುದುರೆಗಳು ಹಾಗೂ ಅವನ್ನು ಎಳೆದೊಯ್ಯುತ್ತಿರುವ ಪುರುಷರು ಇಲ್ಲವೆ ಸವಾರರುಗಳು, ರಥ ಕಾಲಾಳುಗಳು ಹಾಗೂ ಈಟಿ, ಭರ್ಚಿ ಹಿಡಿದು ಸಾಗುತ್ತಿರುವ ಸೈನಿಕರು, ವಿವಿಧ ಭಂಗಿಯ ನೃತ್ಯಗಾತಿಯರುಗಳನ್ನು ಇಲ್ಲಿನ ಉಬ್ಬು ಶಿಲ್ಪಗಳಲ್ಲಿ ಕಡೆಯಲಾಗಿದೆ. ಹಜಾರರಾಮ ದೇವಾಲಯವು ಭಾರತೀಯ ಸಂಸ್ಕೃತಿಯನ್ನು ಹೊರಚೆಲ್ಲುತ್ತಿರುವ ಒಂದು ಕಲೆಯ ಶಾಲೆ ಎನ್ನಬಹುದಾಗಿದೆ. ದೇವಾಲಯವು ಒಳ ಹಾಗೂ ಹೊರ ಕೆತ್ತನೆಯಿಂದಾಗಿ ಸೌಂದರ್ಯ ಮಯವಾಗಿದೆ.

ಹೇಮಕೂಟ: ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾಗುವುದಕ್ಕೂ ಹಿಂದೆಯೇ, ಆಧಾರಗಳ ಪ್ರಕಾರ ಕಂಪಿಲರಾಯರ ಕಾಲದಲ್ಲಿ ಹಂಪಿಯಲ್ಲಿ ಕೆಲವು ಕದಂಬನಾಗರ ಶೈಲಿಯ (ಸಮಕಟ್ಟಾದ ಅಂತಸ್ತುಗಳ) ದೇವಾಲಯಗಳು ರಚನೆಗೊಂಡವು. ಅವು ಇಂದಿಗೂ ಸುರಕ್ಷಿತವಾಗಿ ಉಳಿದುಕೊಂಡು ಪವಿತ್ರಕ್ಷೇತ್ರವೆನ್ನಿಸಿಕೊಂಡಿವೆ. ಶಿಲ್ಪಿಶಾಸ್ತ್ರರಾದ ಡಾ.ಸಿಂದಗಿ ರಾಜಶೇಖರ ರವರು ಇವುಗಳ ಕಾಲವನ್ನು ಕ್ರಿ.ಶ.1350ರ ಮೊದಲು ನಿರ್ಮಾಣವಾಗಿರಬೇಕೆಂದು ಸೂಚಿಸುತ್ತಾರೆ. ಇದು ಸತ್ಯವೆಂದೂ ಹೇಳಬಹುದಾಗಿದೆ ರಾಜಶೇಖರ್ ಅವರೇ ಗುರುತಿಸುವಂತೆ ಇಲ್ಲಿರುವ ದೇವಾಲಯಗಳು ತಮ್ಮದೇ ಯಾದಂತಹ ವಿಶಿಷ್ಟ ಲಕ್ಷಣಗಳನ್ನು ಹೊಂದಿವೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ,

1. ಗರ್ಭಗೃಹ, ಅರ್ದ ಮಂಟಪ ಮತ್ತು ಮಹಾಮಂಟಪಗಳುಳ್ಳ ಈ ಆಲಯದ ಗರ್ಭಗೃಹವನ್ನು ನೀಳವಾದ, ಆಯಾಕಾರದ, ನುಣುಪುಗೊಳಿಸಿದ ಕಲ್ಲುಗಳಿಂದ ಕಟ್ಟಲಾಗಿದೆ.
2. ಅರ್ಥ ಮಂಟಪ ಮತ್ತು ಮಹಾಮಂಟಪಗಳಲ್ಲಿ ಘನಾಕೃತಿಯ ಭಾರವಾದ ಸರಳವಾದ ಕಂಬಗಳಿವೆ.
3. ಗರ್ಭಗೃಹದ ಮೇಲೆ ಮೆಟ್ಟಲು, ಮೆಟ್ಟಿಲುಗಳಾಗಿ ವಿಸ್ತಾರ ಕಡಿಮೆಯಾಗುತ್ತಾ ಹೋಗುವ ಗೋಪುರಗಳಿರುವುದು.
4. ಬೆಣಚುಕಲ್ಲಿನಲ್ಲಿ ನಿರ್ಮಿಸಿದ ಈ ದೇವಾಲಯಗಳ ಅಧಿಷ್ಠಾನ ಸರಳ ಮತ್ತು ನಿರಲಂಕಾರವಾಗಿದೆ.
5. ಹೊರಗೋಡೆಗಳು ವೈವಿಧ್ಯವಿಲ್ಲದ, ನಿರ್ವಿಶೇಷ ಸಾದಾ ಗೋಡೆಗಳಾಗಿವೆ.
6. ಪ್ರವೇಶ ಮಂಟಪವು ಅರ್ಧತೆರೆದಿದ್ದು ಇದರಲ್ಲಿ ಕೂರಲು ಸುತ್ತಲೂ ಕಲ್ಲಿನ ಕಟ್ಟೆಯಿದೆ. ಇದರ ಮೇಲೆ ಚಿಕ್ಕ ಪ್ರಮಾಣದ ಕಂಬಗಳನ್ನು ಸೇರಿಸಲಾಗಿದೆ.

ಹೇಮಕೂಟದ ಮೇಲಿನ ಈ ದೇವಾಲಯಗಳ ಸಮೂಹ ಶೈವ ಅಥವಾ ಜೈನ ಮೂಲದವಾಗಿದ್ದು ಕ್ರಿ.ಶ.ಒಂಬತ್ತರಿಂದ ಹದಿನಾಲ್ಕನೆ ಶತಮಾನದ ಆರಂಭ ಕಾಲದವರೆಗಿನ ಅವಧಿಯಲ್ಲಿ ಕಟ್ಟಿಸಿರಬಹುದೆಂದು ತಿಳಿಯಬಹುದಾಗಿದೆ. ಇವು

ಹಂಪಿಯ ಪರಿಸರದಲ್ಲಿ ಕಂಡು ಬರುವ ಬಹುಹಿಂದಿನ ರಚನೆಗಳು. ಈ ರಚನೆಯನ್ನು ಹೋಲುವಂತಹ ದೇವಾಲಯಗಳು ಕಮಲಾಪುರದ ಪ್ರವಾಸಿ ಬಂಗಲೆಯ ಸಮೂಪದಲ್ಲಿ ಕಂಡುಬರುತ್ತವೆ. ಇದನ್ನು ಇಂದು ಗಾಣಗಿತ್ತಿ ಗುಡಿಗಳು ಎಂದು ಕರೆಯಲಾಗುತ್ತಿದೆ.

ವಿಜಯನಗರದ ಚಿತ್ರಕಲೆ

ಪ್ರಾಚೀನ ಕಾಲದಿಂದಲೂ ಚಿತ್ರಕಲಾ ಸಂಸ್ಕೃತಿಯು ಮಾನವರಲ್ಲಿ ಮನೆಮಾಡಿದೆ. ಇದಕ್ಕೆ ಶಿಲಾಯುಗದ ಕಾಲದಲ್ಲಿಯೂ ಬಯಲಿನಲ್ಲಿ ಇರುವ ಬಂಡೆಗಳ ಮೇಲೆ ರಚಿಸಿರುವ ರೇಖಾಚಿತ್ರಗಳು ಸಾಕ್ಷಿಯಾಗಿವೆ. ಒಂದು ದೃಷ್ಟಿಯಲ್ಲಿ ಈ ಸಂಸ್ಕೃತಿಯು ಕಣ್ಣಿಗೆ ಕಾಣದ ಕೇವಲ ಆಚರಣೆಗಳಲ್ಲಿ ಮಾತ್ರ ಮನಸ್ಸಿಗೆ ಗೋಚರವಾಗುವ ಕಲ್ಪನೆಯಾಗಿತ್ತೆನ್ನಲೂಬಹುದು. ಈ ಚಿತ್ರಕಲಾ ಸಂಸ್ಕೃತಿಯು ಸಾಮಾನ್ಯವಾಗಿ ಮಾನವ ಜನಾಂಗಗಳು ಎಲ್ಲೆಲ್ಲಿ ಒಟ್ಟೊಟ್ಟಿಗೆ ವಾಸ ಮಾಡಲು ಆರಂಭಿಸಿದರೂ ಅಲ್ಲೆಲ್ಲ ಬೇರೆ ಬೇರೆಯಾಗಿ, ಪ್ರದೇಶಿಕವಾಗಿ ಭಿನ್ನ ಭಿನ್ನ ರೀತಿಯಲ್ಲಿ ಬೆಳೆಯಲಾರಂಭಿಸಿತು. ಕಾಲ ಕಳೆದಂತೆ ಸಂಸ್ಕೃತಿಯು ನಾಗರಿಕತೆಯಾಗಿ ವಿಕಾಸಗೊಂಡಿದು ನಮಗೆಲ್ಲ ತಿಳಿದಿರುವ ವಿಷಯವೇ. ವಿಜಯನಗರದರಸರ ಪೂರ್ವದಲ್ಲಿಯೂ ಚಿತ್ರಕಲೆ ಕಂಡುಬಂದರೂ ಸಹ ಮೇಲೆ ತಿಳಿಸಿದ್ದಂತೆ ಸಂಸ್ಕೃತಿಯಲ್ಲಿ ಬದಲಾವಣೆಗೊಂಡಂತಹ ವಿಜಯನಗರದ ಅರಸರು ನಾಗರಿಕತೆಯಲ್ಲಿ ಬದಲಾವಣೆ ಕಾಣಲಾರಂಭಿಸಿದ್ದರಿಂದ ಕಲೆಗಳೂ ಸಹ ವೈವಿಧ್ಯಮಯವಾಗಿ ಬೆಳೆಯಿತ್ತು. ಅಂದಿನ ಕಲೆಗಾರರು ಕಲೆಯನ್ನು ಕಲೆಗಾಗಿ ಕಲೆ, ಆನಂದಕ್ಕಾಗಿ ಕಲೆ, ಪ್ರವೃತ್ತಿಗಾಗಿ ಕಲೆ ಎಂದು ನಂಬಿದವರಾಗಿದ್ದರು ಎಂದರೆ ತಪ್ಪಾಗದು.

ಹಂಪಿಯ ವಿರೂಪಾಕ್ಷ ದೇವಾಲಯದ ಕಲ್ಯಾಣ ಮಂಟಪದ ಒಳ ಮಾಳಿಗೆಯ ಮೇಲೆ ಕಂಡುಬರುವಂತಹ ಶಿವಪಾರ್ವತಿಯರ ಕಲ್ಯಾಣ ವೈಭವದ ವಿವಿಧ ವರ್ಣಗಳು ಆಂಧ್ರಪ್ರದೇಶದ ಲೇಪಾಕ್ಷಿ ದೇವಾಲಯ ಹಾಗೂ ಮೈಸೂರು ಜಿಲ್ಲೆ ಟಿ. ನರಸೀಪುರ ತಾಲೂಕಿನ ಮುಡುಕುತೊರೆಯ ಮಲ್ಲಿಕಾರ್ಜುನ ಬೆಟ್ಟದಲ್ಲಿರುವ ವರ್ಣ ಚಿತ್ರಗಳನ್ನು ವರತುಪಡಿಸಿದರೆ, ಹಂಪಿಯಲ್ಲಿ ಕಂಡುಬರುವಂತಹ ಇನ್ನಾವ ದೇವಾಲಯಗಳಲ್ಲಿಯೂ ಅಥವಾ ಬೇರೆ ಎಲ್ಲೂ ವಿಜಯನಗರದ ಚಿತ್ರಕಲೆಯು ಕಂಡುಬರುವುದಿಲ್ಲ. ಆದರೆ ಹಂಪಿಗೆ ನದಿಯಿಂದ ಆಚೆಗೆ ಇರುವ ಆನೆಗುಂದಿಯ ಅರಮನೆಯಲ್ಲಿ ಮಾತ್ರ ಚಿತ್ರಕಲೆ ಇರುವುದು ಕಂಡುಬರುತ್ತದೆ. ಇದಕ್ಕೆ ಅಲ್ಲಿನ ಹುಚ್ಚಪ್ಪಯ್ಯ ಮಠ ನಿದರ್ಶನವಾಗಿದೆ. ವಿರೂಪಾಕ್ಷದೇವಾಲಯದ ಕಲ್ಯಾಣ ಮಂಟಪದಲ್ಲಿರುವ ಚಿತ್ರಕಲೆಯು ಪುರಾಣದ ವಿಷಯಗಳನ್ನು ಒಳಗೊಂಡಿದ್ದಾಗಿರುತ್ತದೆ. ಅಲ್ಲಿ ತ್ರಿಪುರ ಸಂಹಾರಿ, ಕಾಮದಹನ ಮೂರ್ತಿ ಮೊದಲಾದಂತಹ ಶಿವನ ರೂಪಗಳುಳ್ಳ ಹಲವು ವರ್ಣ ಚಿತ್ರಗಳು, ಅರ್ಜುನನ ಮತ್ಸ್ಯಬೇದ, ಪಲ್ಲಕ್ಕಿಯಲ್ಲಿ ಕುಳಿತು ಮೆರವಣಿಗೆಯಲ್ಲಿ ಹೋಗುತ್ತಿರುವ ಸನ್ಯಾಸಿಯ ಚಿತ್ರ, ದಶಾವತಾರ, ಶಿವಪಾರ್ವತಿಯರ ಕಲ್ಯಾಣದ ವೈಭವಗಳು ಚಿತ್ರಿತವಾಗಿರುವ ಚಿತ್ರಕಲೆಯಾಗಿದೆ. ಈ ಚಿತ್ರಗಳು ವಿಜಯನಗರದ ಕಾಲದ ಚಿತ್ರಕಲೆಯ ಕುರುಹಾಗಿ ಇಂದಿಗೂ ಉಳಿದಿವೆ.

ವಿಜಯನಗರದ ಚಿತ್ರಕಲೆಯು ಹಂಪಿ ಹಾಗೂ ಆನೆಗುಂದಿಗಳಲ್ಲದೆ ನಾಡಿನ ವಿವಿಧ ಪ್ರದೇಶ ಹಾಗೂ ತಮಿಳುನಾಡಿನ ದೇವಾಲಯಗಳಲ್ಲಿಯೂ ಕಂಡುಬರುತ್ತದೆ. ಇದರಲ್ಲಿ ಪ್ರಮುಖವಾಗಿ ಆಂಧ್ರಪ್ರದೇಶದ ಹಿಂದೂಪುರ ತಾಲೂಕಿನಲ್ಲಿರುವ ಲೇಪಾಕ್ಷಿಯ ಪಾಪನಾಥೇಶ್ವರ ದೇವಾಲಯ, ಇದರ ಕಾಲವನ್ನು ಕ್ರಿ.ಶ.1535 ಎಂದು ಪರಿಗಣಿಸಲಾಗಿದೆ. ಚಿತ್ತೂರು ಜಿಲ್ಲೆಯ ಮದನಪಲ್ಲಿ ತಾಲ್ಲೂಕಿನ ಸೋಮಪಲ್ಲಿಯ ಚೆನ್ನಕೇಶವ ದೇವಾಲಯ, ಇದರ ಕಾಲ ಕ್ರಿ.ಶ.1550; ಕಾಂಚೀಪುರದ ವರದರಾಜಸ್ವಾಮಿಯ ದೇವಸ್ಥಾನ ಇದರ ಕಾಲ ಕ್ರಿ.ಶ.1509 1530; ಕಾಂಚೀಪುರದ ಹತ್ತಿರವಿರುವ ಜಿನಕಂಚಿಯ ವರ್ಧಮಾನ ದೇವಾಲಯದಲ್ಲಿ, ಇದರ ಕಾಲ ಕ್ರಿ.ಶ.1378 1404; ಈ ಪ್ರದೇಶಗಳಲ್ಲಿಯೂ ವಿಜಯನಗರದ ಚಿತ್ರಕಲೆಯು ಉಳಿದುಕೊಂಡು ಅಧ್ಯಯನಕ್ಕೆ ಯೋಗ್ಯವಾಗಿ ಬೆಳೆದು ಬಂದಿದೆ ಎಂದು ಕಲಾ ಇತಿಹಾಸಕಾರರಾದ ಡಾ. ಸಿಂದಗಿ ರಾಜಶೇಖರ್ ಅವರು ದಾಖಲಿಸುತ್ತಾರೆ.

ಲೇಪಾಕ್ಷಿಯ ಪಾಪನಾಥೇಶ್ವರ ದೇವಾಲಯದಲ್ಲಿರುವ ಕೆಲವು ಚಿತ್ರಗಳು ಜೈನ ಶೈಲಿಯಲ್ಲಿ ಮತ್ತೆ ಕೆಲವುಗಳು ತಂಜಾವೂರಿನ ಶೈಲಿಯಲ್ಲಿ ರಚಿಸಲ್ಪಟ್ಟಿರುತ್ತವೆ. ಏಕೆಂದರೆ ತಂಜಾವೂರಿನ ಶೈಲಿಯಲ್ಲಿ ಬಿಡಿಸಿದ ಚಿತ್ರಗಳು ವಿರೂಪಾಕ್ಷ ದೇವಸ್ಥಾನದ

ಚಿತ್ರಗಳನ್ನು ಸಂಪೂರ್ಣವಾಗಿ ಹೋಲುವುವು. ಲೇಪಾಕ್ಷಿಯ ವರ್ಣಚಿತ್ರಗಳನ್ನು ಕರಿ, ಹಸಿರು, ಬೂದಿಬಣ್ಣ, ಹಳದಿ ಮಿಶ್ರಿತ ಕಂದುಬಣ್ಣ ಮತ್ತು ಕಿರಿಮಂಚಿ ಬಣ್ಣಗಳನ್ನು ಬಳಸಿ ಚಿತ್ರಿಸಲಾಗಿದೆ, ಇವು ಇಂದಿಗೂ ಸಹ ಮನಮೋಹಕವಾಗಿವೆ.

ಇತಿಹಾಸಕಾರರ ಪ್ರಕಾರ ಕೃಷ್ಣದೇವರಾಯನ ಕಾಲದಲ್ಲಿ ವಿಜಯನಗರದ ಚಿತ್ರಕಲೆಯು ಉನ್ನತ ಸ್ಥಿತಿಯನ್ನು ಪಡೆದಿದ್ದಿತೆಂದೂ ಅವನ ನಂತರ ಕ್ಷೀಣಿಸತೊಡಗಿತ್ತೆಂದು ಅಭಿಪ್ರಾಯಪಡುತ್ತಾರೆ. 1556ರಲ್ಲಿ ವಿಜಯನಗರದ ನಿರ್ಣಾಯಕ ಯುದ್ಧದ ತರುವಾಯ ಸಾಮ್ರಾಜ್ಯದಲ್ಲಿ ಅಶಾಂತಿ ತುಂಬಿದ ಪ್ರಯುಕ್ತ ಚಿತ್ರಕಲೆಗೆ ಯಾವುದೇ ರೀತಿಯ ಪೋಷಣೆ ದೊರೆಯಲಿಲ್ಲ.

ಕಲೆ ಮತ್ತು ವಾಸ್ತುಶಿಲ್ಪ

ದೇವಾಲಯ ಸಂಸ್ಕೃತಿ

ವಿಜಯನಗರ ಅರಸರ ಕಾಲದಲ್ಲಿ ದೇವಾಲಯಗಳ ನಿರ್ಮಾಣ ಅವಿರತವಾಗಿ ಸಾಗಿತು. ಅಷ್ಟೇ ಬಿರುಸಿನಿಂದ ಇದ್ದ ದೇವಾಲಯಗಳ ವಿಸ್ತರಣೆಯೂ ಆಯಿತು. ಇದಕ್ಕೆ ಕಾರಣ ವೈಧಿಕ ಅಥವ ಬ್ರಾಹ್ಮಣರುಗಳು ತಮ್ಮ ಸ್ವಪ್ರತಿಷ್ಠೆಗಾಗಿ ದೇವಾಲಯಗಳಲ್ಲಿ ನಡೆಯಬೇಕಾಗಿದ್ದ ಅನೇಕ ಧರ್ಮಾಚರಣೆಯ ಎಲ್ಲ ವಿಧಿಗಳನ್ನು ನೆರವೇರಿಸಲು ಸಾಲದಾದುದರಿಂದ ಇವುಗಳ ವಿಸ್ತರಣೆಗೆ ಮುಂದಾದರು. ಈ ಕಾಲದ ದೇವಾಲಯಗಳನ್ನು (ವಿಸ್ತರಿಸಲ್ಪಟ್ಟ ದೇವಾಲಯನ್ನೊಳಗೊಂಡಂತೆ) ರಾಜಧಾನಿ ವಿಜಯನಗರ (ಈಗಿನ ಹಂಪೆ, ನಾಗೇನಹಳ್ಳಿ ಮಲಪನಗುಡಿ, ಕಡ್ಡಿ ರಾಮಪುರ, ಅನಂತಶಯನಗುಡಿ, ಕಮಲಾಪುರ ಮತ್ತು ಹೊಸಪೇಟೆ) ಕುರುಗೋಡು, ಕಪ್ಪುಗಲ್ಲು, ಶ್ರೀರಂಗಪಟ್ಟಣ, ಬೇಲೂರು, ಗದಗ, ಆನೆಗುಂದಿ, ಶ್ರವಣಬೆಳಗೊಳ, ನಂಜನಗೂಡು ಮುಂತಾದ ಕರ್ನಾಟಕದ ಸ್ಥಳಗಳಲ್ಲಿ ಕಾಣಬಹುದು. ಆಂಧ್ರಪ್ರದೇಶ ಮತ್ತು ತಮಿಳುನಾಡುಗಳಲ್ಲಿಯೂ ವಿಜಯನಗರ ಕಾಲದ ನೂರಾರು ದೇವಾಲಯಗಳಿವೆ. ಈ ದೇವಾಲಯಗಳನ್ನು ಗೋರಂಟ್ಲ, ಲೇಪಾಕ್ಷಿ, ಗಂಡಿಕೋಟ, ಪೆನುಗೊಂಡೆ, ಚಂದ್ರಗಿರಿ, ತಿರುಪತಿ, ತಿರುಮಲೆ, ಕದಿರಿ, ತಾಡಪತ್ರಿ, ರಾಯಚೋಟಿ, ಕಾಳಹಸ್ತಿ, ಸೋಮಪಲ್ಲೆ, ಶ್ರೀಶೈಲ, ನಂದ್ಯಾಲ, ಮಹಾನಂದಿ, ಪುಷ್ಪಗಿರಿ, ತ್ರಿಪುರಾಂತಕಂ, ಮಂಗಾಪುರಂ, ಮಾರ್ಕಾಪುರಂ, ಅಹೋಬಲಂ, ನಾಗಲಾಪುರಂ, ನಾರಾಯಣವನಂ, ಜಿಂಜಿ, ತಿರುವಣ್ಣಾಮಲೈ, ಶ್ರೀರಂಗಂ, ತಿರುವಳ್ಳರೈ, ತಿರುವಳಂಜುವೆ, ಪಟ್ಟೇಶ್ವರಂ, ತಿರುಪರುತ್ತಿಕುನಂ, ತಂಜಾವೂರು, ಮಧುರೈ, ತಿರುವಾಳೂರು, ಕುಂಭಕೋಣಂ, ತಿರುಮಲೈ, ಕಾಂಚಿ, ವೇಲೂರು, ತಿರುವಿಳಿಮಲೈ ಮತ್ತು ಆದಿಯ ಮಾನೆ ಕೋಟೆಗಳಲ್ಲಿ ಕಾಣಬಹುದು. ಇವುಗಳಲ್ಲಿ ತಿರುಪತಿ, ಕಾಳಹಸ್ತಿ, ಶ್ರೀರಂಗಂ, ಚಿದಂಬರಂ, ಶ್ರೀಶೈಲ, ತಿರುವಣ್ಣಾಮಲೈ ಮುಂತಾದ ಸ್ಥಳಗಳಲ್ಲಿರುವ ದೇವಾಲಯಗಳು ಹೆಚ್ಚು ಪ್ರಸಿದ್ಧಿಯಾಗಿದ್ದವು.

ಪ್ರಾರಂಭಿಕ ದೇವಾಲಯಗಳು

ಸಂಗಮ ವಂಶದ ಮೊದಲ ಕೆಲವು ದೊರೆಗಳ ಕಾಲದಲ್ಲಿ ಹಂಪಿಯಲ್ಲಿ ದೇವಾಲಯಗಳು ಕದಂಬನಾಗರ ಶೈಲಿಯಲ್ಲಿ ರಚನೆಗೊಂಡವು. ಇವು ಹೆಚ್ಚಾಗಿ ಹೇಮಕೂಟ ಬೆಟ್ಟದ ಮೇಲಿವೆ. ಉಳಿದವು ಕಮಲಾಪುರದ ಹತ್ತಿರ ಇವೆ. ಶಾಸನಗಳು ಸಂಗಮ ದೊರೆಗಳ ಆಳ್ವಿಕೆಯಲ್ಲಿ ಹಂಪಿ ಮತ್ತು ಇತರೆಡೆ ದೇವಾಲಯಗಳ ಮತ್ತು ಬಸದಿಗಳ ನಿರ್ಮಾಣವಾದುದನ್ನು ತಿಳಿಸುತ್ತದೆ. ಕ್ರಿ.ಶ. 1386ರಲ್ಲಿ ಎರಡನೆಯ ಹರಿಹರನ ದಂಡನಾಯಕನಾದ ಇರುಗಪ್ಪ ದಂಡನಾಯಕನು, ವಿಜಯನಗರದಲ್ಲಿ ಕುಂಥುನಾಥನಿಗೆ ಬಸದಿಯೊಂದನ್ನು ಕಟ್ಟಿಸಿದ. ಇವನು ಇದಕ್ಕೆ ಮೊದಲು ಕ್ರಿ.ಶ. 1382 ರಲ್ಲಿ ತಿರುಪರುತ್ತಿಕುನ್ರಂನಲ್ಲಿರುವ ತ್ರೈಲೋಕ್ಯನಾಥ ಬಸದಿಗೆ ಭೂದತ್ತಿ ನೀಡಿದ್ದನಲ್ಲದೇ ಇವನು ಈ ಬಸದಿಯ ಸಂಗೀತ ಮಂಟಪವನ್ನು ನಿರ್ಮಿಸಿದನು. ಈ ಮಂಟಪವನ್ನು ತನ್ನ ಗುರು ಪುಷ್ಪಸೇನನ ಆದೇಶದ ಮೇರೆಗೆ ಕಟ್ಟಿಸಿದಂತೆ ತಿಳಿದುಬರುತ್ತದೆ. ಎರಡನೆಯ ದೇವರಾಯ ನಿರ್ಮಿಸಿದ ಪಾರ್ಶ್ವನಾಥ ಬಸದಿ ಮತ್ತು ಪೆನುಗೊಂಡೆಯಲ್ಲಿರುವ ದೇವಾಲಯಗಳು ಸ್ಥಳೀಯ ಶೈಲಿಯ ವಾಸ್ತುಶಿಲ್ಪಕ್ಕೆ ಒಳ್ಳೆಯ ಉದಾಹರಣೆಗಳು ಮತ್ತು ಕದಂಬನಾಗರ ಶೈಲಿಯ ದೇವಾಲಯಗಳ ಕೆಲವು ಲಕ್ಷಣಗಳನ್ನು ಎತ್ತಿ ತೋರಿಸುತ್ತವೆ.

ಹಂಪೆಯ ಹೇಮಕೂಟ ಬೆಟ್ಟದ ಮೇಲಿರುವ ಕದಂಬನಾಗರ ಶೈಲಿಯಲ್ಲಿರುವ ದೇವಾಲಯಗಳೆಲ್ಲ ಬಹುಶಃ ಕ್ರಿ.ಶ. 1360 ರ ಮೊದಲು ನಿರ್ಮಾಣಗೊಂಡವು. ಇವುಗಳಲ್ಲಿ ಕೆಲವು ಸಂಗಮ ಅರಸರ ಕಾಲಕ್ಕಿಂತ ಮುಂಚಿನವು. ಹೇಮಕೂಟದ ಮೇಲಿರುವ ದೇವಾಲಯಗಳು ವಿಶಿಷ್ಟ ಲಕ್ಷಣಗಳನ್ನು ಹೊಂದಿವೆ. ಇವುಗಳಲ್ಲಿ ಮುಖ್ಯವಾದುವುಗಳು ಹೀಗಿವೆ.

ಈ ಎಲ್ಲಾ ದೇವಾಲಯಗಳು ತ್ರಿಕೂಟ ದೇವಾಲಯ ತಲವಿನ್ಯಾಸವನ್ನು ಹೊಂದಿವೆ. ಮೂರು ಗರ್ಭಗೃಹ, ಮೂರು ಸುಕನಾಸಿ, ಒಂದೇ ನವರಂಗ ಮತ್ತು ಒಂದೇ ಪ್ರವೇಶ ಮಂಟಪವನ್ನು ಹೊಂದಿವೆ. ಬೆಣಚುಕಲ್ಲಿನಲ್ಲಿ ನಿರ್ಮಿಸಿದ ಈ ದೇವಾಲಯಗಳ ಅಧಿಷ್ಠಾನ ಸರಳ ಮತ್ತು ನಿರಲಂಕಾರವಾಗಿದ್ದು ಎತ್ತರವಾಗಿವೆ. ಹೊರಗೋಡೆಗಳು ವೈವಿಧ್ಯವಿಲ್ಲದ, ಸಾದಾ ಗೋಡೆಗಳಾಗಿವೆ. ಆದರೆ ಗೋಡೆಯ ಮಧ್ಯದಲ್ಲಿ, ಅಡ್ಡಪಟ್ಟಿಯೊಂದಿದ್ದು, ಅದರಲ್ಲಿ ಹೂವಿನ ಅಲಂಕರಣವಿದೆ. ಈ ಹೂವುಗಳ ವಿನ್ಯಾಸ ಮತ್ತು ಕಂಡರಣೆ ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಕಂಡುಬರುವ ಹೂವುಗಳ ಶೈಲಿಯನ್ನು ಹೋಲುತ್ತದೆ. ಉದಾಹರಣೆಗೆ, ಇಂಥ ಹೂವುಗಳನ್ನು ಕುರುಗೋಡಿನ ಹನ್ನೆರಡನೆಯ ಶತಮಾನದ ದೇವಾಲಯಗಳಲ್ಲಿ ಕಾಣಬಹುದು. ನವರಂಗದ ವಿನ್ಯಾಸ, ಕಲ್ಯಾಣ ಚಾಲುಕ್ಯ ದೇವಾಲಯಗಳ ನವರಂಗದ ವಿನ್ಯಾಸವನ್ನೇ ಹೋಲುತ್ತದೆ. ನವರಂಗದಲ್ಲಿ ದೇವಕೋಷ್ಠಗಳನ್ನು ಅಳವಡಿಸಲಾಗಿದೆ. ಈ ದೇವಕೋಷ್ಠಗಳು ಆಳವಾಗಿಯೂ, ಎತ್ತರವಾಗಿಯೂ ಇವೆ. ಕಲ್ಯಾಣ ಚಾಲುಕ್ಯರ ದೇವಕೋಷ್ಠಗಳಲ್ಲಿ ಸೂರ್ಯ, ಸಪ್ತಮಾತೃಕೆಯರು, ಗಣೇಶ, ವೀರಭದ್ರ, ಮಹಿಷಾಸುರ ಮರ್ಧಿನಿ ಇತ್ಯಾದಿ ಶಿಲ್ಪಗಳನ್ನಿಡುವುದು ಸರ್ವೇಸಾಮಾನ್ಯವಾಗಿತ್ತು. ಹೇಮಕೂಟದ ದೇವಾಲಯಗಳಲ್ಲಿರುವ ನವರಂಗದ ದೇವಕೋಷ್ಠಗಳು ಈಗ ಬರಿದಾಗಿವೆ.

ಗರ್ಭಗೃಹಗಳ ಮೇಲೆ ಕದಂಬನಾಗರ ಶೈಲಿಯಲ್ಲಿರುವ (ಮೆಟ್ಟಿಲಾಕಾರದ) ಶಿಖರಗಳಿವೆ. ಹತ್ತು ತಳಗಳಿರುವ ಈ ಶಿಖರಗಳು ಇಂದಿಗೂ ಉಳಿದುಕೊಂಡು ಬಂದಿವೆ. ಕದಂಬನಾಗರ ಶೈಲಿಯ ಶಿಖರಗಳುಳ್ಳ ದೇವಾಲಯಗಳ ನಿರ್ಮಾಣ, ಬಾದಾಮಿ ಚಾಲುಕ್ಯರ ಕಾಲದಿಂದಲೂ ಪ್ರಚಲಿತವಿದ್ದು, ಸಣ್ಣ ಪ್ರಮಾಣದ ದೇವಾಲಯಗಳನ್ನು ಕಟ್ಟುವಲ್ಲಿ ಈ ಶೈಲಿಯ ಶಿಖರ ಜನಪ್ರಿಯವಾಗಿತ್ತು. ಅದರಲ್ಲೂ ಜೈನ ಬಸದಿಗಳ ನಿರ್ಮಾಣದಲ್ಲಿ ಹೆಚ್ಚಾಗಿ ಉಪಯೋಗಿಸ ಲಾಯಿತು. ಇದರ ಅರ್ಥ ಭರತೀಯ ಸಾಂಸ್ಕೃತಿಯ ದೇವಾಲಯಗಳಲ್ಲಿ ಈ ಶಿಖರ ಬಳಕೆಯಲ್ಲಿರಲಿಲ್ಲವೆಂದಲ್ಲ. ಕರ್ನಾಟಕದಲ್ಲಿ, ತ್ರಿಕೂಟ ತಲವಿನ್ಯಾಸ ಹಾಗೂ ಏಕಕೂಟ ತಲವಿನ್ಯಾಸ ಹೊಂದಿದ ಕದಂಬನಾಗರ ಶಿಖರಯುಕ್ತ ನೂರಾರು ದೇವಾಲಯಗಳಿವೆ.

ಲಾಂಗಹರ್ಸ್ಟ್ ಮತ್ತು ಅನಂತರದ ಇತಿಹಾಸಕಾರರು, ಈ ದೇವಾಲಯಗಳು ಜೈನ ಬಸದಿಗಳೆಂದು ಹೇಳಿರುವರು. ಇದಕ್ಕೆ ಇವರು ಕೊಡುವ ಕಾರಣ ಕದಂಬನಾಗರ ಶೈಲಿಯ ಶಿಖರ. ಮೇಲೆ ಹೇಳಿದಂತೆ ಜೈನ ಬಸದಿಗಳಲ್ಲಿ ಈ ಶಿಖರ ಹೆಚ್ಚಾಗಿ ಬಳಕೆಯಲ್ಲಿತ್ತು. ಉದಾಹರಣೆಗೆ ಗಾಣಿಗಿತ್ತಿ ಶಿವಾಲಯ ಮೂಲತಃ ಬಸದಿಯಾಗಿರುವುದು ಎಂದು ಹೇಳುವುದೇ ಕದಂಬನಾಗರ ಶಿಖರವನ್ನೊಳ್ಳಗೊಂಡಿರುವುದಕ್ಕಾಗಿಯೇ. ಆದರೆ ಉಳಿದ ದೇವಾಲಯಗಳು ಮೂಲತಃ ಬಸದಿಗಳೆನ್ನುವುದು ಸತ್ಯಕ್ಕೆ ದೂರವಾದ ಸಂಗತಿ. ಶಾಸನಗಳು ಮತ್ತು ಶಿಲ್ಪಗಳು ಈ ದೇವಾಲಯಗಳು ಭಾರತೀಯ ಶೈವ – ವೈಷ್ಣವರ ದೇವಾಲಯಗಳೆಂದು ಖಚಿತ ಪಡಿಸುತ್ತವೆ. ಶಿಖರದ ಪ್ರತಿಯೊಂದು ತಲದ ಮಧ್ಯಭಾಗದಲ್ಲಿ ಫಲಕವೊಂದಿದ್ದು, ಈ ಫಲಕಗಳಲ್ಲಿ ನರಸಿಂಹ ಮುಂತಾದ ದೇವತಾ ಮೂರ್ತಿಗಳಿವೆ. ಈ ದೇವಾಲಯಗಳಲ್ಲಿ ಒಂದೇ ಒಂದು ತೀರ್ಥಂಕರ ಮತ್ತು ಯಕ್ಷ–ಯಕ್ಷಿಯರ ಶಿಲ್ಪಗಳಿಲ್ಲದಿರುವುದು ಈ ಊಹೆಯನ್ನು ಪುಷ್ಠೀಕರಿಸುತ್ತದೆ. ಅಲ್ಲದೇ ಇಲ್ಲಿಯ ಇಂತಹ ದೇವಾಲಯವೊಂದು ವೀರ ಕಂಪಿಲರಾಯನಿಂದ ನಿರ್ಮಿತವಾದುದೆಂದು ಇತಿಹಾಸಕಾರರು ಒಮ್ಮತದ ಅಭಿಪ್ರಾಯವಾಗಿದೆ.

ಗಾಣಗಿತ್ತಿ ಶಿವಾಲಯ ಮೂಲತಃ ಒಂದು ಜೈನ ಬಸದಿ. ಕಾಲಾನುಕ್ರಮದಲ್ಲಿ ಶೈವರು ಈ ದೇವಾಲಯವನ್ನು ತಮ್ಮ ವಶಕ್ಕೆ ತೆಗೆದುಕೊಂಡರು ಎಂಬುವುದು ಜನರ ವಾದ. ಈ ಬಸದಿಯನ್ನು ಇರುಗಪ್ಪ ದಂಡನಾಯಕನು ಕ್ರಿ.ಶ. 1386ರಲ್ಲಿ ಕಟ್ಟಿಸಿ, ಕುಂಥುನಾಥ ತೀರ್ಥಂಕರನನ್ನು ಪ್ರತಿಷ್ಠೆ ಮಾಡಿದ. ಈ ಬಸದಿಯಲ್ಲಿ ಹೇಮಕೂಟದ ಮೇಲಿರುವ ದೇವಾಲಯಗಳಲ್ಲಿ ಕಂಡುಬರುವ ಲಕ್ಷಣಗಳಿವೆ. ಇವು ಸಾದಾ ಗೋಡೆಗಳು ಮುಚ್ಚಿದ ಮುಖ ಮಂಟಪಕ್ಕೆ ಪಕ್ಕದಲ್ಲಿ ಪ್ರವೇಶ ಮಂಟಪದ ಜೋಡಣೆ, ಕದಂಬನಾಗರ ಶೈಲಿಯ ಶಿಖರ, ಬಸದಿಯ ಮುಂದೆ ನಿಲ್ಲಿಸಿರುವ ಏಕಶಿಲಾ ಮಾನಸ್ತಂಭ ಚಚ್ಚೌಕವಾಗಿದ್ದು ಆದರೆ ಸುತ್ತಲೂ ಎತ್ತರವಾದ ಕಟ್ಟೆಯೊಂದನ್ನು ಕಟ್ಟಿಸಿದ್ದಾರೆ. ಸ್ತಂಭದ ಮೇಲೆ ಇರಿಸಲಾಗಿದ್ದ ಯಕ್ಷಮೂರ್ತಿ ಈಗ ಕಂಡುಬರುವುದಿಲ್ಲ.

ವಿಜಯನಗರಶಿಲ್ಪಿ ಸಾಂಸ್ಕೃತಿಯ ಶೈಲಿಗಳ ವಿಶ್ಲೇಷಣೆ

ವಿಜಯನಗರ ಶೈಲಿಯನ್ನು ಒಳಗೊಂಡಿರುವ ದೇವಾಲಯಗಳು ಹಂಪೆ ನಗರದಲ್ಲಿ ಅನೇಕವಿವೆ. ಇವುಗಳಲ್ಲಿ ಮುಖ್ಯವಾದುವುಗಳೆಂದರೆ ಬಾಲಕೃಷ್ಣ (ಕೃಷ್ಣಸ್ವಾಮಿ) ವಿರೂಪಾಕ್ಷ, ವಿಠ್ಠಲ, ಹಜಾರರಾಮ, ಚಂದ್ರಶೇಖರ, ಅಚ್ಯುತರಾಯ, ಪಟ್ಟಾಭಿರಾಮ, ಮಾಲ್ಯವಂತ ರಘುನಾಥ, ಉದ್ದಾನ ವೀರಭದ್ರ, ಚಂಡಿಕೇಶ್ವರ, ಕಡಲೆಕಾಳು ಗಣಪತಿ ಮತ್ತು ಮಲ್ಲಿಕಾರ್ಜುನ ದೇವಾಲಯಗಳು. ಇವುಗಳಲ್ಲಿ ಕೆಲವು ಸಂಗಮರ ಕಾಲದಲ್ಲೇ ಅಸ್ತಿತ್ವದಲ್ಲಿದ್ದವು. ಕೆಲವು ತುಳುವರ ಕಾಲದಲ್ಲಿ ಕಟ್ಟಲ್ಪಟ್ಟಿದ್ದವು. ಈ ದೇವಾಲಯಗಳ ಅಧ್ಯಯನದಿಂದ ವಿಜಯನಗರ ಶೈಲಿಯ ಬಗ್ಗೆ ತಿಳಿದು ಬರುವ ವಿಶಿಷ್ಟ ಲಕ್ಷಣಗಳನ್ನು ಈ ಕೆಳಗಿನಂತೆ ಗುರುತಿಸಬಹುದು.

ಅನೇಕ ಧಾರ್ಮಿಕ ವಿಧಿಗಳನ್ನು ದೇವಾಲಯಗಳಲ್ಲಿಯೇ ನೆರವೇರಿಸಬೇಕಾದುದರಿಂದ, ದೇವಾಲಯದ ತಲವಿನ್ಯಾಸ ಹೆಚ್ಚು ವಿಸ್ತಾರವಾಗಿರಬೇಕಾಗಿತ್ತು. ಈ ದೇವಾಲಯಗಳಲ್ಲಿ ಸಾಮಾನ್ಯವಾಗಿ ಗರ್ಭಗೃಹ, ಪ್ರದಕ್ಷಿಣಾ ಪಥ, ಸುಕನಾಸಿ, ಅರ್ಧಮಂಟಪ, ನವರಂಗ ಮತ್ತು ಮುಖಮಂಟಪ ಗಳಿರುತ್ತಿದ್ದವು. ನವರಂಗಕ್ಕೆ ಮೂರು ಪ್ರವೇಶದ್ವಾರಗಳಿದ್ದು, ಪಕ್ಕದಲ್ಲಿರುವ ಪ್ರವೇಶದ್ವಾರಗಳು, ನವರಂಗವನ್ನು ಚಿಕ್ಕ ದ್ವಾರಮಂಟಪಗಳಿಗೆ ಕೂಡಿಸಿರುತ್ತವೆ. ದೇವಾಲಯದ ಸುತ್ತಲೂ, ನಿರ್ದಿಷ್ಟಪಡಿಸಿದ ದಿಕ್ಕಿನಲ್ಲಿ ಪರಿವಾರ ದೇವತೆಗಳಿಗಾಗಿ ಚಿಕ್ಕ ಗುಡಿಗಳಿರುತ್ತವೆ. ವಿಶಾಲವಾದ ಪ್ರಾಕಾರದ ಸುತ್ತಲೂ ಎತ್ತರವಾದ ಗೋಡೆಯಿದ್ದು ಈ ಪ್ರವೇಶ ಮಂಟಪಗಳ ಮೇಲೆ ಎತ್ತರವಾದ ಗೋಪುರಗಳನ್ನು ಕಟ್ಟಿರುತ್ತಾರೆ. ಅಲ್ಲದೇ ಪ್ರಾಕಾರದಲ್ಲಿ ಕಲ್ಯಾಣಮಂಟಪ, ಉತ್ಸವ ಮಂಟಪಗಳಿರುತ್ತವೆ. ತಮಿಳುನಾಡಿನಲ್ಲಿರುವ ವಿಜಯನಗರದ ದೇವಾಲಯಗಳಲ್ಲಿ ಇನ್ನೂ ಅನೇಕ ಆವರಣದಲ್ಲಿ ಉಯ್ಯಾಲೆ ಮಂಟಪ, ವಸಂತ ಮಂಟಪ, ವಾಹನ ಮಂಟಪ, ಕನ್ನಡಿ ಮಂಟಪ ಮತ್ತು ರಂಗಮಂಟಪಗಳನ್ನು ಕಾಣಬಹುದು. ಮೇಲೆ ಹೇಳಿದ ಹಾಗೆ ವಿಜಯನಗರದ ಕಾಲದಲ್ಲಿ ಈ ಮೊದಲೇ ಇದ್ದ ದೇವಾಲಯಗಳ ವಿಸ್ತರಣೆ ನಡೆಯಿತು. ಇದ್ದ ದೇವಾಲಯಗಳಲ್ಲಿ ಈ ಮಂಟಪಗಳು ಇಲ್ಲದಿದ್ದಾಗ ಅವನ್ನು ಕಟ್ಟಲಾಯಿತು. ಕ್ರಿ.ಶ. 1531 ರಲ್ಲಿ ಕೃಷ್ಣದೇವರಾಯನ ಅಧಿಕಾರಿಯೊಬ್ಬನು ಹಜಾರರಾಮನ ದೇವಾಲಯದಲ್ಲಿ ಉತ್ಸವ ಮಂಟಪವನ್ನು ಕಟ್ಟಿಸಿದ. ಇಂತಹ ತಲವಿನ್ಯಾಸದ ಮೇಲೆ ಕಟ್ಟಿದ ಅದರಲ್ಲೂ ಪರಿವಾರ ದೇವತಾ ಗುಡಿಗಳನ್ನು ಹೊಂದಿದ ದೇವಾಲಯಗಳು ತಮಿಳು ನಾಡಿನಲ್ಲಿ ಸಾಕಷ್ಟಿದ್ದು, ಆ ದೇವಾಲಯಗಳೇ ಹಂಪೆ ವಿಜಯನಗರದ ದೇವಾಲಯಗಳ ತಲವಿನ್ಯಾಸದ ಮೇಲೆ ಪ್ರಭಾವ ಬೀರಿವೆ.

ದೊಡ್ಡ ಗಾತ್ರದ ದೇವಾಲಯಗಳಲ್ಲಿ ಕಂಡುಬರುವ ಲಕ್ಷಣಗಳಲ್ಲಿ ಪ್ರದಕ್ಷಿಣಾಪಥ ಒಂದು. ಗರ್ಭಗೃಹದ ಸುತ್ತಲೂ ಕಟ್ಟಿರುವ ವಿಜಯನಗರ ಕಾಲದ ಪದಕ್ಷರ ಪಥದ ಲಕ್ಷಣದಲ್ಲಿ ಹದಿನಾಲ್ಕನೇ ಶತಮಾನದ ಹಿಂದೆ ಕರ್ನಾಟಕದ ದೇವಾಲಯಗಳಲ್ಲಿ ಕಂಡುಬರುವ ಪ್ರದಕ್ಷಿಣಾಪಥಕ್ಕಿಂತ ತೀರಾ ಭಿನ್ನವಾಗಿವೆ. ಇಂತಹ ಪ್ರದಕ್ಷಿಣಾಪಥವನ್ನು ಬಾಲಕೃಷ್ಣ, ವಿಠ್ಠಲ ಮುಂತಾದ ದೇವಾಲಯಗಳಲ್ಲಿ ನೋಡಬಹುದು. ವಿಜಯನಗರ ಪೂರ್ವದ ಪ್ರದಕ್ಷಿಣಾ ಪಥ ಗರ್ಭಗೃಹದ ಸುತ್ತಲೂ ಇದ್ದು ಇಲ್ಲಿ ನೆಲಗಟ್ಟು ಮತ್ತು ಪ್ರದಕ್ಷಿಣಾಪಥದ ನೆಲಗಟ್ಟು ಒಂದಕ್ಕೊಂದು ಸಮನಾಗಿದೆ. ಇಂತಹ ಪ್ರದಕ್ಷಿಣಾ ಪಥಗಳನ್ನು ಬಾದಾಮಿಯ ಚಾಲುಕ್ಯ ಕಾಲದ ಐಹೊಳೆಯ ಮೇಗುತಿ, ದುರ್ಗ, ಹುಚ್ಚಿಮಲ್ಲಿ ದೇವಾಲಯಗಳಲ್ಲಿ, ಬಾದಾಮಿಯ ಮೇಲಿನ ಶಿವಾಲಯಗಳಲ್ಲಿ, ಪಟ್ಟದಕಲ್ಲಿನ ಸಂಗಮೇಶ್ವರ, ವಿರೂಪಾಕ್ಷ ಮುಂತಾದ ದೇವಾಲಯಗಳಲ್ಲಿ ಕಾಣಬಹುದು. ಅಂದರೆ ಇಲ್ಲಿ ಪ್ರದಕ್ಷಿಣಾ ಪಥದ ನೆಲಗಟ್ಟು ಗರ್ಭಗೃಹದ ನೆಲಗಟ್ಟಿಗೆ ಸಮನಾಗಿರುತ್ತದೆ. ಆದರೆ ವಿಜಯನಗರದ ಪ್ರದಕ್ಷಿಣಾಪಥ ಗರ್ಭಗೃಹದ ನೆಲಗಟ್ಟಿಗಿಂತ ಕೆಳಮಟ್ಟದಲ್ಲಿದ್ದು ಸೋಪಾನವೊಂದರ ಮೂಲಕ ಕೆಳಗಿಳಿಯುವ ವ್ಯವಸ್ಥೆ ಇರುತ್ತದೆ. ಅಲ್ಲದೇ ಗರ್ಭಗೃಹಕ್ಕೂ ಈ ಪ್ರದಕ್ಷಿಣಾಪಥಕ್ಕೂ ಮಧ್ಯ ಸುಮಾರು 2 ಅಡಿ ಖಾಲಿ ಜಾಗ ಇದೆ. ಹೀಗಾಗಿ ಗರ್ಭಗೃಹದ ಗೋಡೆಗಳ ಕೆಳಭಾಗದ ಅಧಿಷ್ಠಾನದ ವಿವಿಧ ಭಾಗಗಳು ಸ್ಪಷ್ಟವಾಗಿವೆ. ವಿಜಯನಗರ ಕಾಲಕ್ಕಿಂತ ಮುಂಚಿನ ಪ್ರದಕ್ಷಿಣಾಪಥ ಗರ್ಭಗೃಹದ ಗೋಡೆಗೆ ಹೊಂದಿ ಕೊಂಡಿರುವುದರಿಂದ ಗರ್ಭಗೃಹಕ್ಕೆ ಅಧಿಷ್ಠಾನವೇ ಇರುವುದಿಲ್ಲವೆಂದೇ ಹೇಳಬಹುದು. ಪ್ರದಕ್ಷಿಣಾಪಥ ಮತ್ತು ಗರ್ಭಗೃಹಗಳನ್ನು ಬೇರೆ ಬೇರೆಯಾಗಿ ಕಟ್ಟಿ ಪ್ರದಕ್ಷಿಣಾಪಥವನ್ನು ಕೆಳಮಟ್ಟದಲ್ಲಿ ಕಟ್ಟುವ ಪ್ರಯತ್ನದಲ್ಲಿಯ ಹಂತವೊಂದನ್ನು ಸಂಗಮ ಅರಸರ ಮೊದಲ ಕೆಲವರ್ಷಗಳಲ್ಲಿ ಕಟ್ಟಿದ ದೇವಾಲಯವೊಂದರಲ್ಲಿ ನೋಡಬಹುದು.

ವಿಜಯನಗರ ದೇವಾಲಯಗಳ ಗರ್ಭಗೃಹ ಸಾಮಾನ್ಯವಾಗಿ ಚೌಕಾಗಿರುತ್ತದೆ. ಆದರೆ ನಿದ್ರಿಸುತ್ತಿರುವ ಅಥವಾ ಒರಗಿರುವ ಭಂಗಿಯಲ್ಲಿರುವ ದೇವತೆಗಾಗಿ ದೇವಾಲಯವನ್ನು ಕಟ್ಟಿಸಿದಾಗ ಮಾತ್ರ ಗರ್ಭಗೃಹ ಆಯತಾಕಾರದಲ್ಲಿರುತ್ತದೆ. ವಿಜಯನಗರದ ಅನಂತಶಯನ ದೇವಾಲಯದ ಗರ್ಭಗೃಹ ಆಯತಾಕಾರವಾಗಿದೆ. ಈ ಗರ್ಭಗೃಹದಲ್ಲಿ ಅನಂತಶಯನ ಮೂರ್ತಿಯನ್ನು ಪ್ರತಿಷ್ಠೆ ಮಾಡಲಾಗಿತ್ತು. ಆಯತಾಕಾರದ ಗರ್ಭಗೃಹವನ್ನು ಕಟ್ಟಿದಾಗ ಆಯತಾಕಾರಕ್ಕೆ ಸರಿಹೋಗುವಂತಹ ಶಿಖರವನ್ನು ಕಟ್ಟಲಾಗುತ್ತಿತ್ತು.

ವಿಜಯನಗರದ ದೇವಾಲಯಗಳು ಎತ್ತರವಾದ ಅಧಿಷ್ಠಾನವನ್ನು ಹೊಂದಿರುತ್ತವೆ. ಹಜಾರರಾಮ ಮತ್ತು ವಿಠ್ಠಲ ದೇವಾಲಯಗಳಲ್ಲಿಯ ಅಧಿಷ್ಠಾನ ವಿವಿಧ ಬಗೆಯ ಭಾಗಗಳನ್ನು ಹೊಂದಿದ್ದು ಕೈ ಬಳೆಯಾಕಾರದ ಭಾಗ ಎದ್ದು ಕಾಣುತ್ತದೆ. ವಿಠ್ಠಲ ದೇವಾಲಯದ ಅಧಿಷ್ಠಾನದ ತೀರ ಕೆಳಗಿನ ಭಾಗದಲ್ಲಿ ಕುದುರೆ ಮತ್ತು ಕುದುರೆ ವ್ಯಾಪಾರಿಗಳ ಶಿಲ್ಪಗಳನ್ನು ಕೆತ್ತಿದ್ದಾರೆ. ಇನ್ನೆರಡು ವಿಶಿಷ್ಟವಾದ ಭಾಗಗಳೆಂದರೆ ಬಹುಮುಖ ಕುಮುದ ಅಥವಾ ತ್ರಿಪಟ್ಟ ಕುಮುದ ಮತ್ತು ಪದ್ಮಭಾಗ. ಅಧಿಷ್ಠಾನದ ಮೇಲ್ಭಾಗದಲ್ಲಿ ಕಪೋತ ಭಾಗ ಸಾಮಾನ್ಯವಾಗಿ ಕಂಡುಬರುತ್ತದೆ. ಚಿಕ್ಕ ಆಕಾರದ ದೇವಾಲಯಗಳಲ್ಲಿ ಗೋಡೆಗಳು ಸರಳವಾಗಿದ್ದರೆ ದೊಡ್ಡ ದೇವಾಲಯಗಳಲ್ಲಿ ಗೋಡೆಗಳು ಹೆಚ್ಚು ಅಲಂಕೃತವಾಗಿರುತ್ತವೆ. ಇಲ್ಲಿ ಹೊರಗೋಡೆಗಳನ್ನು ಸಮಮಟ್ಟದಲ್ಲಿ ವಿಂಗಡಿಸಿರುತ್ತಾರೆ. ಗೋಡೆಯ ಕೆಳಗಿನ ಭಾಗದಲ್ಲಿ ಅಧಿಷ್ಠಾನದಲ್ಲಿ ಕಂಡುಬರುವ ವಿವಿಧ ಭಾಗಗಳನ್ನು ಪುನರಾವರ್ತಿಸಿರುವುದನ್ನು ಕಾಣಬಹುದು. ಇಂತಹ ರಚನೆ ವಿರೂಪಾಕ್ಷ, ವಿಠ್ಠಲ, ಬಾಲಕೃಷ್ಣ, ಪಟ್ಟಾಭಿರಾಮ ಮುಂತಾದ ದೇವಾಲಯಗಳಲ್ಲಿ ಕಂಡುಬರುತ್ತದೆ. ಇದರ ಮೇಲಿನ ಭಾಗದಲ್ಲಿ ಕೋಷ್ಠಗಳು, ಅರ್ಧಕಂಬಗಳು, ಪಂಜರಗಳು, ತೋರಣಗಳು ಮತ್ತು ಮೂರ್ತಿಶಿಲ್ಪಗಳನ್ನು ಅಳವಡಿಸಲಾಗಿದೆ. ಇವುಗಳಲ್ಲಿಯೇ ಅತೀ ವಿಶಿಷ್ಟವಾದುದೆಂದರೆ ಕುಂಭಪಂಜರ. ಕುಂಭಪಂಜರ ದ್ರಾವಿಡ ದೇವಾಲಯಗಳಲ್ಲಿ ಕಂಡುಬರುವ ವಿಶಿಷ್ಟ ಅಲಂಕರಣ. ಹಂಪೆಯ ದೇವಾಲಯಗಳಲ್ಲಿ ವಿವಿಧ ಬಗೆಯ ಕುಂಭಗಳನ್ನು ನೋಡಬಹುದು. ಕೆಲವು ಸಾದಾ ಇದ್ದರೆ ಕೆಲವು ಹೆಚ್ಚು ಅಲಂಕೃತವಾಗಿವೆ. ಈ ಕುಂಭಗಳ ಮೇಲ್ಭಾಗದಿಂದ ಅರ್ಧ ಕಂಬಗಳು ಉದ್ಭವಿಸಿ ಮೇಲಕ್ಕೆ ಹೋಗಿವೆ. ಅರ್ಧಕಂಬದ ತುದಿಯಲ್ಲಿ ಎಲೆಗಳ ಗೊಂಚಲನ್ನು ಬಿಡಿಸಲಾಗಿದೆ. ಶೈವ ಹಾಗೂ ವೈಷ್ಣವರ ದೇವಾಲಯಗಳ ಆರಂಭ ಕಾಲದಲ್ಲಿ ಕುಂಭವು ಲಕ್ಷ್ಮೀ ಅಥವಾ ಸಿರಿ ಸಂಪದದ ಚಿಹ್ನೆಯಾಗಿತ್ತು. ಬರುಬರುತ್ತ ಅದು ಒಂದು ಅಲಂಕಾರವಾಗಿ ಪರಿಣಮಿಸಿತು. ವಿಜಯನಗರದ ದೇವಾಲಯಗಳಲ್ಲಿ ಇದನ್ನು ಹೆಚ್ಚಾಗಿ ಗೋಡೆಗಳ ಅಲಂಕರಣೆಗೆ ಉಪಯೋಗಿಸಲಾಗಿದೆ.

ಗೋಡೆಗಳ ಅಲಂಕಾರದಲ್ಲಿ ಮೂರ್ತಿಶಿಲ್ಪಗಳನ್ನು ಕೂಡ ಕೆತ್ತಿರುವುದು ಕಂಡುಬರುತ್ತದೆ. ಈ ಶಿಲ್ಪಗಳು ಪುರಾಣಗಳ ಮತ್ತು ಮಹಾಕಾವ್ಯಗಳಲ್ಲಿ ಬರುವ ಪ್ರಸಂಗಗಳನ್ನು ಪ್ರತಿನಿಧಿಸುತ್ತವೆ. ವಿರೂಪಾಕ್ಷ ದೇವಾಲಯದ ಹೊರಗೋಡೆಗಳ ಮೇಲೆ ಶಿವ, ಪಾರ್ವತಿ, ಭಕ್ತಿ ಸಿರಿಯಾಳ ಮುಂತಾದ ಶೈವರಿಗೆ ಸಂಬಂಧಿಸಿದ ಮೂರ್ತಿಗಳಿದ್ದರೆ, ಹಜಾರರಾಮ ದೇವಾಲಯದ ಹೊರಗೋಡೆಗಳ ಮೇಲೆ ರಾಮಾಯಣಕ್ಕೆ ಸಂಬಂಧಿಸಿದ ದೃಶ್ಯಗಳಿವೆ. ಅದೇ ರೀತಿ ವಿಠ್ಠಲ ದೇವಾಲಯದ ಸಂಕೀರ್ಣದ ಹೊರಭಾಗದಲ್ಲಿರುವ ಹಳೆಯ ಶಿವ ದೇವಾಲಯದ ದ್ವಾರಮಂಟಪದ ಹೊರಗೋಡೆಗಳ ಮೇಲೆ ರಾಮಾಯಣದ ಸನ್ನಿವೇಶಗಳನ್ನು ಕೆತ್ತಲಾಗಿದೆ. ಲೇಪಾಕ್ಷಿಯ ವೀರಭದ್ರ ದೇವಾಲಯದ ಮುಖ ಮಂಟಪ ಗೋಡೆಗಳಲ್ಲಿ ಭಕ್ತಿ ಸಿರಿಯಾಳನ ಕಥೆಗೆ ಸಂಬಂಧಿಸಿದ ಅನೇಕ ಶಿಲ್ಪಗಳಿವೆ.

ವಿಜಯನಗರದ ದೇವಾಲಯಗಳಲ್ಲಿ ಮುಖ್ಯವಾಗಿ ಎರಡು ವಿಧದ ಕಂಬಗಳನ್ನು ನೋಡಬಹುದು. ಚಿಕ್ಕ ದೇವಾಲಯಗಳಲ್ಲಿ ಮತ್ತು ದೊಡ್ಡ ದೇವಾಲಯಗಳ ನವರಂಗಗಳಲ್ಲಿ ಒಂದು ಪ್ರಕಾರದ ಕಂಬಗಳಿವೆ. ಇಂತಹ ಕಂಬಗಳಲ್ಲಿ ಚಚ್ಚೌಕದ ಭಾಗದಲ್ಲಿ ಯಾವುದೇ ಮೂರ್ತಿಗಳಲ್ಲದಿರುವ ಉದಾಹರಣೆಗಳೂ ಉಂಟು. ಸಾಮಾನ್ಯವಾಗಿ ಈ ಭಾಗದಲ್ಲಿ ಕಂಡುಬರುವ ಮೂರ್ತಿ ಶಿಲ್ಪಗಳೆಂದರೆ ಕಾಳಿಂಗ ಮರ್ದನ, ಕೃಷ್ಣ, ಬಾಲಕೃಷ್ಣ, ಬೇಡರ ಕಣ್ಣಪ್ಪ, ವಿಷ್ಣುವಿನ ದಶಾವತಾರಗಳು, ಶಿವಲಿಂಗ, ಗರುಡ, ಹನುಮ, ನರಸಿಂಹ, ಕೋಲಾಟ ಆಡುವವರು, ಮದ್ದಳೆ ಬಾರಿಸುತ್ತಿರುವವರು ಮತ್ತು ನೃತ್ಯಗಾರರು, ಕಂಬದ ಮೇಲ್ಭಾಗದಲ್ಲಿ ಪುಷ್ಪಬೋದುಕೆ ಇರುತ್ತದೆ.

ಎರಡನೇ ಪ್ರಕಾರದ ಕಂಬಗಳು ವಿನ್ಯಾಸದಲ್ಲಿ, ಕೆತ್ತನೆಯಲ್ಲಿ, ರೂವಾರಿಯ ನೈಪುಣ್ಯತೆಗೆ ಸಾಕ್ಷಿಯಾಗಿವೆ. ಈ ಕಂಬಗಳು ಗಾತ್ರದಲ್ಲಿ ದೊಡ್ಡವು. ಕಂಬವನ್ನು ನೇರವಾಗಿ ಎರಡು ಭಾಗಗಳಾಗಿ ವಿಂಗಡಿಸಿ ಮೊದಲನೆಯ ಭಾಗದಲ್ಲಿ ಚಚ್ಚೌಕ ಪ್ರಧಾನವಾದ, ಮೇಲೆ ಹೇಳಿರುವ ಕಂಬಗಳ ವಿನ್ಯಾಸವಿದ್ದು, ಇನ್ನೊಂದು ನೇರಭಾಗವನ್ನು ಕಾಲೆತ್ತಿ ನಿಂತ ಯಾಳಿಯಾಕಾರವಾಗಿಯೂ, ಕುದುರೆಯಾಕಾರವಾಗಿಯೂ, ಸಿಂಹಾದಾಕಾರವಾಗಿಯೂ ಕೆತ್ತಿರುತ್ತಾರೆ. ಕೆಲವು ಸಲ ಈ ರೀತಿ ಹಿಂಗಾಲ ಮೇಲೆ ನಿಂತ ಪ್ರಾಣಿಗಳ ಬದಲು ಚಿಕ್ಕ ಚಿಕ್ಕ ಪ್ರಮಾಣದ (ಎರಡು, ನಾಲ್ಕು, ಎಂಟು) ಉಪಕಂಬಗಳನ್ನು ಕೆತ್ತಿರುತ್ತಾರೆ. ವಿಠ್ಠಲ ದೇವಾಲಯದ ಮುಖಮಂಟಪದಲ್ಲಿ ಇಂತಹ ಉಪಕಂಬಗಳುಳ್ಳ ಕಂಬಗಳನ್ನು ಕಾಣಬಹುದು. ಆದರೆ ಇಲ್ಲಿ ಕಂಬಗಳನ್ನು ಕುಳಿತ ಸಿಂಹಗಳು ಹೊತ್ತು ನಿಂತಿವೆ. ಇದನ್ನು ಕೆಲವು ಸಲ ಸಂಗೀತ ಕಂಬಗಳೆಂದು ಕರೆಯುವ ವಾಡಿಕೆ ಇದೆ. ಈ ಕಂಬಗಳಿಗೂ ಪುಷ್ಪ ಬೋದುಗೆ ಇದೆ. ಇಂತಹ ಕಂಬಗಳು ನಿಸ್ಸಂಶಯವಾಗಿ ದ್ರಾವಿಡ ದೇವಾಲಯಗಳ ಕಂಬಗಳಿಂದ ಪ್ರಭಾವಿತವಾಗಿವೆ. ಪಲ್ಲವರ ಕಾಲದಿಂದಲೂ ಕಾಲೆತ್ತಿನಿಂತ ಸಿಂಹಗಳನ್ನೊಳಗೊಂಡ ಕಂಬಗಳು ರೂಢಿಯಲ್ಲಿದ್ದವು. ಮುಂದೆ ಚೋಳ, ಪಾಂಡ್ಯರ, ಕಾಲದಲ್ಲಿ ಈ ಕಂಬಗಳ ವಿನ್ಯಾಸದಲ್ಲಿ ಬದಲಾವಣೆ ಮತ್ತು ಪ್ರಗತಿಯುಂಟಾಗಿ ಕೊನೆಗೆ ವಿಜಯನಗರ ಕಾಲದಲ್ಲಿ ಈ ಬದಲಾವಣೆಯ ತುತ್ತ ತುದಿಯನ್ನು ಕಾಣುತ್ತೇವೆ. ಅದಕ್ಕಾಗಿಯೇ ಪರ್ಸಿಬ್ರೌನ ಎಂಬ ವಿದ್ವಾಂಸರು ವಿಜಯನಗರದ ದೇವಾಲಯಗಳಲ್ಲಿ ದ್ರಾವಿಡ ಶೈಲಿಯ ಪರಾಕಾಷ್ಠೆಯನ್ನು ಕಾಣಬಹುದೆಂದು ಹೇಳುತ್ತಾರೆ.

ಹಂಪೆಯ ದೇವಾಲಯಗಳಲ್ಲಿ ಭುವನೇಶ್ವರಿ ಹೆಚ್ಚು ಅಲಂಕೃತವಾಗಿರದೇ ಚಪ್ಪಟೆಯಾಗಿರುತ್ತದೆ. ನವರಂಗ ಮತ್ತು ಮುಖಮಂಟಪದ ಮಧ್ಯದ ಭುವನೇಶ್ವರಿ ಸಾಮಾನ್ಯವಾಗಿ ಹೆಚ್ಚು ಅಲಂಕೃತ ವಾಗಿರುತ್ತದೆ. ಹೂಗೊಂಚಲು, ಪದ್ಮ, ಹಂಸ ಹಾಗೂ ಕೋಲಾಟವಾಡುವವರ ಶಿಲ್ಪಗಳನ್ನು ಇಲ್ಲಿ ಕಾಣಬಹುದು. ವಿರೂಪಾಕ್ಷ ದೇವಾಲಯದ ರಂಗಮಂಟಪದಲ್ಲಿಯ ಮಧ್ಯದ ಭುವನೇಶ್ವರಿ ವಿಶಾಲವೂ ಮತ್ತು ಚಪ್ಪಟೆಯಾಗಿದ್ದು ಇಲ್ಲಿ ತ್ರಿಪುರಸಂಹಾರ, ಮನ್ಮಥ ವಿಜಯ, ಗಿರಿಜಾ ಕಲ್ಯಾಣ ಮುಂತಾದ ಪ್ರಸಂಗಗಳಿಗೆ ದೃಶ್ಯಗಳನ್ನು ವರ್ಣಚಿತ್ರಗಳಲ್ಲಿ ಬರೆದಿದ್ದಾರೆ.

ದೇವಾಲಯಗಳನ್ನು ಎತ್ತರವಾದ ಅಧಿಷ್ಠಾನದ ಮೇಲೆ ಕಟ್ಟಿರುವುದರಿಂದ ಭಕ್ತರು ಮೇಲೇರಲು ಸೋಪಾನ ರಚಿಸಿರುವುದು ಇನ್ನೊಂದು ಲಕ್ಷಣ. ಈ ಸೋಪಾನಗಳನ್ನು ನವರಂಗದ ಪಕ್ಕದ ಪ್ರವೇಶ ಮಂಟಪಗಳಿಗೆ ಅಥವಾ ಮುಖ ಮಂಟಪಗಳಿಗೆ ಅಳವಡಿಸಲಾಗಿದೆ. ಈ ಸೋಪಾನಗಳ ಎರಡು ಬದಿಗೆ ಆನೆಗಳು ಇಲ್ಲವೇ ಸುರುಳ್ ಯಾಳಿಗಳ ಶಿಲ್ಪಗಳನ್ನು ನಿಲ್ಲಿಸಿರುವುದು ಸಾಮಾನ್ಯ. ವಿಠ್ಠಲ ದೇವಾಲಯದಲ್ಲಿ ಇಂತಹ ಆನೆಗಳಿಂದ ಬಂಧಿತ ಸೋಪಾನಗಳನ್ನು ಕಾಣಬಹುದು. ವಿರೂಪಾಕ್ಷ, ವಿಠ್ಠಲ ಮತ್ತು ಬಾಲಕೃಷ್ಣ ದೇವಾಲಯಗಳಲ್ಲಿ ಸುರುಳ್‌ಯಾಳಿಗಳನ್ನೊಳಗೊಂಡ ಸೋಪಾನಗಳಿವೆ.

ವಿಜಯನಗರದ ದೇವಾಲಯಗಳಲ್ಲಿಯ ಶಿಖರಕ್ಕೆ ಅಷ್ಟೇನೂ ಪ್ರಾಮುಖ್ಯವಿಲ್ಲ. ಅದು ಅಷ್ಟೇನು ಸುವ್ಯಕ್ತವಲ್ಲದ ಭಾಗವಾಗಿ ಪರಿಗಣಿತವಾಗಿದೆ. ಇದು ಎತ್ತರದಲ್ಲಿ ಕಡಿಮೆ. ಗರ್ಭಗೃಹದ ಮೇಲೆ ದ್ರಾವಿಡ ಶಿಖರವನ್ನು ಕಟ್ಟುವುದು ಹೆಚ್ಚಾಗಿ ಬಳಕೆಯಲ್ಲಿತ್ತು. ಶಿಖರದ ಮೇಲ್ಭಾಗದಲ್ಲಿ ವೃತ್ತಾಕಾರದ ಇಲ್ಲವೇ ಅಷ್ಟಕೋನಾಕಾರದ ಸ್ತೂಪಿ ಇದ್ದು ಅದರ ಮೇಲ್ಭಾಗದಲ್ಲಿ ಕಳಶವನ್ನಿಡಲಾಗುತ್ತಿತ್ತು. ಈ ಶಿಖರಗಳು ಶಾಲ, ಕೂಟ ಮತ್ತು ಕರ್ಣಕೂಟಗಳಿಂದ ಕೂಡಿವೆ. ಹಜಾರರಾಮ ದೇವಾಲಯದ ದ್ರಾವಿಡ ಶಿಖರ ಹಂಪೆಯಲ್ಲಿರುವ ವಿಜಯನಗರದ ದೇವಾಲಯಗಳಲ್ಲಿ ಅತ್ಯಂತ ಹಳೆಯ ದ್ರಾವಿಡ ಶಿಖರವೆಂದೇ ಹೇಳಬಹುದು.

ದೊಡ್ಡ ಪ್ರಮಾಣದಲ್ಲಿ ಕಟ್ಟಿದ ದೇವಾಲಯಗಳು ಸಾಮಾನ್ಯವಾಗಿ ವಿಶಾಲವಾದ ಪ್ರಾಕಾರಗಳನ್ನೊಳಗೊಂಡಿರುತ್ತವೆ. ಪ್ರಾಕಾರ ಗೋಡೆಗಳಿಗೆ ಹೊಂದಿಕೊಂಡು ಮಂಟಪಗಳು, ಪ್ರವೇಶ ದ್ವಾರಗಳು ಇರುತ್ತವೆ. ಹಜಾರರಾಮ ದೇವಾಲಯದ ಪ್ರಾಕಾರದ ಗೋಡೆಯ ಹೊರ ಮತ್ತು ಒಳಭಾಗಗಳ ಮೇಲೆ ಮೂರ್ತಿ ಶಿಲ್ಪಗಳಿವೆ. ಒಳಗೋಡೆಯಲ್ಲಿ ರಾಮಾಯಣಕ್ಕೆ ಸಂಬಂಧಿಸಿದ ದೃಶ್ಯಗಳನ್ನು ಕೆತ್ತಿದ್ದಾರೆ. ಹೊರ ಭಾಗದಲ್ಲಿ ಆನೆ, ಕುದುರೆ, ಒಂಟೆ ಮುಂತಾದ ಪ್ರಾಣಿಗಳ ಸಾಲು ಚಿತ್ರಗಳಿವೆ. ಶ್ರೀಶೈಲದ ಮಲ್ಲಿಕಾರ್ಜುನ ದೇವಾಲಯದ ಪ್ರಾಕಾರದ ಗೋಡೆಗಳ ಮೇಲೆಯೂ ಸಾಲು ಶಿಲ್ಪಗಳಿವೆ. ಇಲ್ಲಿಯೂ ಆನೆ, ಕುದುರೆಗಳ ಸಾಲುಗಳು, ಬೇಟೆಯ ದೃಶ್ಯಗಳು, ರತಿ ಮನ್ಮಥ, ಗಜೇಂದ್ರ ಮೋಕ್ಷ, ಸಿಬಿ ಚಕ್ರವರ್ತಿಯ ಕಥೆ, ಗಿರಿಜಾ ಕಲ್ಯಾಣ, ತ್ರಿಪುರ ಸಂಹಾರ, ಕಣ್ಣಪ್ಪ ನಾಯನಾರ್, ರಾವಣನು ಶಿವನಿಗೆ ಶಿರಗಳನ್ನು ಅರ್ಪಿಸುತ್ತಿರುವ ದೃಶ್ಯ ಮುಂತಾದ ಶಿಲ್ಪಗಳಿವೆ.

ಹಂಪೆಯ ಮತ್ತು ಇತರ ಕಡೆ ಇರುವ ವಿಜಯನಗರ ಕಾಲದ ದೇವಾಲಯಗಳಲ್ಲಿ ದ್ವಾರ ಮಂಟಪಗಳ ಮೇಲೆ ಕಟ್ಟಿರುವ ಗೋಪುರಗಳು ವಿಶಿಷ್ಟ ಸ್ಥಾನ ಪಡೆದಿವೆ. ದ್ವಾರ ಮಂಟಪಗಳು ಶಿಲಾನಿರ್ಮಿತವಾಗಿದ್ದರೆ ಗೋಪುರಗಳು ಇಟ್ಟಿಗೆ, ಗಾರೆಗಳಿಂದ ಕಟ್ಟಲ್ಪಟ್ಟಿವೆ. ದ್ವಾರ ಮಂಟಪಗಳು ಸಾಕಷ್ಟು ವಿಶಾಲವಾಗಿದ್ದು ಎರಡು ಬದಿಗಳಲ್ಲಿ ಸುಂದರವಾಗಿ ಕಂಡರಿಸಿರುವ ಗಂಗೆ ಯಮುನೆಯರ ಮೂರ್ತಿಗಳನ್ನಾಗಲೀ ಇಲ್ಲವೇ ಅಪ್ಸರೆಯ ಮೂರ್ತಿಗಳನ್ನಾಗಲೀ ಹೊಂದಿರುತ್ತವೆ.

ವಿಜಯನಗರ ಪೂರ್ವ ನಿರ್ಮಿತ ಗೋಪುರಗಳು ಅಷ್ಟೇನು ಎತ್ತರವಾಗಿಲ್ಲ. ಆದರೆ ವಿಜಯನಗರ ಅರಸರ, ಅದರಲ್ಲೂ ತುಳುವ ವಂಶದ ಅರಸರ ಕಾಲದಲ್ಲಿ ಬೃಹದಾಕಾರದ ಗೋಪುರಗಳ ನಿರ್ಮಾಣವಾಯಿತು. ಇಂತಹ ಗೋಪುರಗಳಲ್ಲಿ ಕೆಲವು ಹನ್ನೊಂದು ಅಂತಸ್ತುಗಳ ಗೋಪುರಗಳಾಗಿವೆ. ಕಾಂಚಿ, ತಿರುವಣ್ಣಾಮಲೈ, ಕುಂಭಕೋಣಂ, ಶ್ರೀರಂಗಂಗಳಲ್ಲಿಯ ದೇವಾಲಯ ಗಳಲ್ಲಿಯ ಗೋಪುರಗಳು ಮತ್ತು ವಿರೂಪಾಕ್ಷ ದೇವಾಲಯದ ಗೋಪುರ ಇವರ ಕಾಲದಲ್ಲಿ ನಿರ್ಮಿತ ಶ್ರೇಷ್ಠ ಗೋಪುರಗಳಲ್ಲಿ ಕೆಲವಾಗಿವೆ. ಹಂಪೆಯ ವಿಠ್ಠಲ, ಬಾಲಕೃಷ್ಣ ಮತ್ತು ಅಚ್ಯುತರಾಯನ ಗುಡಿಯ ಗೋಪುರಗಳು ಭಗ್ನವಾಗಿದ್ದು ಮೂಲತಃ ಅವು ಭವ್ಯವಾಗಿರಬೇಕು. ಬಾಲಕೃಷ್ಣ ದೇವಾಲಯದ ಮುಂಭಾಗದ ಗೋಪುರದಲ್ಲಿ ಕೃಷ್ಣದೇವರಾಯನ ಕಲಿಂಗ ದಿಗ್ವಿಜಯಕ್ಕೆ ಸಂಬಂಧಿಸಿದ ದೃಶ್ಯಗಳನ್ನು ಕಾಣಬಹುದು. ಕಮಲಾಪುರದ ಪಟ್ಟಾಭಿರಾಮ ದೇವಾಲಯದ ಗೋಪುರಗಳು ಶ್ರೇಷ್ಠ ಮಟ್ಟದ್ದಾಗಿವೆ. ತಿರುವಣ್ಣಾಮಲೈ ಗೋಪುರವನ್ನು ಕೃಷ್ಣದೇವರಾಯನು ನಿರ್ಮಿಸಿದನು.

ಮಠಗಳು

ಕರ್ನಾಟಕದಲ್ಲಿ ಮಠಗಳ ನಿರ್ಮಾಣಕ್ಕೆ ಪ್ರೇರಣೆ ದೊರೆತಿದ್ದು ಲಕುಲೀಶ ಪಾಶುಪತ ಶೈವಗುರುಗಳಿಂದ. ಮಠಗಳು ತಾವು ನಡೆದುಕೊಳ್ಳುತ್ತಿದ್ದ ದೇವಾಲಯಗಳಿಂದ ಗುರುತಿಸುವಂತಾದವು. ಅಂದರೆ ಕ್ರಿ.ಶ. ಆರು ಮತ್ತು ಏಳನೆಯ ಶತಮಾನಗಳಿಂದೀಚೆಗೆ ದೇವಾಲಯಗಳ ಅಂಗಸಂಸ್ಥೆಗಳಾಗಿ ಮಠಗಳು ಕಾಣಿಸಿಕೊಂಡಿವೆ. ದೇವಾಲಯ ಮತ್ತು ಮಠಗಳ ಪರಂಪರೆ ವಿಜಯನಗರ ಸ್ಥಾಪನೆಯ ವೇಳೆಗೆ ಸಾಕಷ್ಟು ಬೆಳೆದುಬಂದಿತ್ತು. ರಾಜಮನೆತನವಷ್ಟೆ ಅಲ್ಲದೆ ಪ್ರಜೆಗಳು, ಶ್ರೇಣಿಗಳು, ಅಧಿಕಾರಿಗಳು ದಾನದತ್ತಿಗಳನ್ನು ನೀಡಿ ಪ್ರೋತ್ಸಾಹಿಸುತ್ತಿದ್ದರು. ಅಂದು ದೇವಾಲಯ–ಮಠಗಳು ಕೇವಲ ಧಾರ್ಮಿಕ ಸಂಸ್ಥೆಗಳಾಗಿಯೇ ಉಳಿದಿರಲಿಲ್ಲ. ಬದಲಾಗಿ ಶೈಕ್ಷಣಿಕ, ಆರ್ಥಿಕ ಹಾಗೂ ಸಾಮಾಜಿಕ ಘಟಕಗಳಾಗಿಯೂ ರೂಪುತಳೆದಿದ್ದವು. ನ್ಯಾಯಾಲಯಗಳಾಗಿಯೂ ಗುರುತಿಸಿಕೊಂಡಿದ್ದವು. ಬ್ರಾಹ್ಮರಿಗೆ ಮಾತ್ರ ಶಾಸ್ತ್ರ –ಪುರಾಣಗಳನ್ನು ಕಲಿಸುತ್ತಿದ್ದ ಈ ಸಂಸ್ಥೆಗಳು ಶೈವ ಹಾಗೂ ವೈಷ್ಣವ ಪಂಥಗಳ ಮುಖ್ಯ ಪ್ರಾತಿನಿಧಿಕ ಕೇಂದ್ರಗಳಾಗಿ ಕೆಲಸ ಮಾಡುತ್ತಿದ್ದವು. ವಿಜಯನಗರ ಕಾಲದ ದೇವಾಲಯಗಳಲ್ಲಿ ದೇವದಾಸಿಯರು ಅಂಗ–ರಂಗ ಭೋಗಗಳನ್ನು ನೀಡಿ ದೇವರ ಹೆಸರಿನಲ್ಲಿ, ಒಂದರ್ಥದಲ್ಲಿ ಶ್ರೀಮಂತರು ಹಾಗೂ ವೈದಿಕರ ಸೇವೆ ಮಾಡುತ್ತಿದ್ದರು. ಹೀಗಾಗಿ ದೇವಾಲಯ–ಮಠಗಳು ಅವರವರಿಗೆ ಸಾಂಸ್ಕೃತಿಕ ಕೇಂದ್ರಗಳೂ ಆಗಿದ್ದವು. ಅಂದು ರೂಪುತಳೆದ ಇಂಥ ಅನೇಕ ದೇವಾಲಯ–ಮಠಗಳು ಇಂದಿಗೂ ಜೀವಂತವಾಗಿವೆ. ಅಷ್ಟೇ ಅಲ್ಲದೆ ತಮ್ಮ ಹಿಂದಿನ ಸಾಂಪ್ರಾದಾಯಿಕ ಧರ್ಮ–ಆಚರಣೆಗಳನ್ನು ಮುಂದುವರೆಸಿಕೊಂಡು ಬರುತ್ತಿವೆ.

ಮಠದ ಮುಖ್ಯಸ್ಥನಾಗಿ ಮಠಾಧಿಪತಿ ಇದ್ದನು. ಈತನು ವಿಜಯನಗರ ಕಾಲದ ಅಧಿಕಾರಿಯುತ ವ್ಯಕ್ತಿಯಾಗಿದ್ದನು. ಈ ಮಠಗಳನ್ನು ರಾಜರುಗಳೂ ಪ್ರೋತ್ಸಾಹಿಸಿ ರಾಜಗುರು ಎಂದು ಮಾನ್ಯ ನೀಡಲಾಗುತ್ತಿತ್ತು. ಸಾಳುವ ನರಸಿಂಹನ ಗುರುವಾದ ರಾಮಾನುಜ ಅಯ್ಯಂಗಾರರು ತಿರುಪತಿಯ ತೆಂಕಲೈ ಶ್ರೀವೈಷ್ಣವ ಮಠದ ಅಧಿಕಾರಿಯಾಗಿದ್ದು, ತಿರುಪತಿ ದೇವಾಲಯದ ಸಂಪೂರ್ಣ ಹಿಡಿತವನ್ನು ಇವರು 15ನೇ ಶತಮಾನದಲ್ಲಿ ಹೊಂದಿದ್ದರು. ಇದೇ ಪ್ರಭಾವ ಮುಂದುವರಿದು ಅಹೋಬಲಂ ದೇವಾಲಯದ ಕಾರ್ಯಗಳ ಅಧಿಕಾರ ವಡಗಲೈ ಶ್ರೀವೈಷ್ಣವ ಮಠಕ್ಕೆ ಬಂದಿತು. ಹಾಗೂ ತಿರುಪತಿಯ ಮಾಧ್ವಮಠದ ಅಧಿಕಾರವು ಕೃಷ್ಣದೇವರಾಯನ ಗುರುವಿನ ಅಧಿಕಾರದಲ್ಲಿತ್ತು.

ಬರ್ಟನ್ ಸ್ಟೈನ್ ಅಭಿಪ್ರಾಯಪಡುವಂತೆ 'ದೇವಾಲಯಗಳು ಹಾಗೂ ಮಠಗಳು ರಾಜರುಗಳಿಂದ ದಾನದ ಹಾಗೂ ಹಣದ ರೂಪದಲ್ಲಿ ಸಹಾಯವನ್ನು ಪಡೆಯುತ್ತಿದ್ದವು. ಕೃಷ್ಣದೇವರಾಯನು 10,000 ಚಿನ್ನದ ನಾಣ್ಯಗಳನ್ನು ತಮಿಳು ನಾಡಿನ ವಿವಿಧ ದೇವಾಲಯಗಳಿಗೆ ಅಥವಾ ದೇವಾಲಯದ ಮುಖ್ಯಸ್ಥನಿಗೆ ಕಾಣಿಕೆಯಾಗಿ ನೀಡಿದ್ದನು. ಹಂಪಿಯ

ದೇವಾಲಯಗಳು ವಿಜಯನಗರದ ಧಾರ್ಮಿಕ ಪಾವಿತ್ರ್ಯತೆಯ ಅಧಿಕಾರ ಕ್ಷೇತ್ರವನ್ನು ನಿರ್ಮಿಸಿದರೆ, ಅಲ್ಲಿನ ಅರಮನೆ ಲೌಕಿಕ ಅಧಿಕಾರ ಕ್ಷೇತ್ರವನ್ನು ನಿರ್ಮಿಸಿ ಎರಡೂ ಪರಸ್ಪರವಾಗಿ ರಾಯರ ಅಧಿಕಾರವನ್ನು ಬಲಗೊಳಿಸಿದ್ದವು.

ಗ್ರಾಮದೇವತೆಗಳ ಆರಾಧನೆ

ಶ್ರುತಿ, ಸ್ಮೃತಿಗಳಲ್ಲಿ ದೇವರ ಕಲ್ಪನೆ ಏನೇ ಇರಲಿ ಶಕ್ತಿ ದೇವತೆಗಳ ಹಾಗೂ ಮಾರಿಮಸಣಿ ಮುಂತಾದ ದೇಶಿದೇವತೆಗಳ ಉಪಾಸನೆ ಬಹಳ ಹಿಂದಿನಿಂದಲೂ ಬೆಳೆದುಬಂದಿದೆ. ಕರ್ನಾಟಕದಲ್ಲಿನ ಧಾರ್ಮಿಕ ಪರಿಸ್ಥಿತಿಯನ್ನು ಹಿಂದಿನಿಂದ ಪರಿಶೀಲಿಸುತ್ತಾ, ಡಾ. ತಿಪ್ಪೇರುದ್ರಸ್ವಾಮಿಯವರು ಹೀಗೆ ಹೇಳುತ್ತಾರೆ.

"......ಒಂದು ಕಡೆಯಲ್ಲಿ ದುರ್ಗಮ್ಮ, ಮಾರಿಯಮ್ಮ ಮೊದಲಾದ ದೇವತೆಗಳು, ಇನ್ನೊಂದು ಕಡೆಯಲ್ಲಿ ಅನೇಕ ರೋಗಗಳಿಗೆ ಕಾರಣವೆಂದು ನಂಬಿದ್ದ ಕ್ಷುದ್ರದೇವತೆಗಳು, ಇವುಗಳ ಉಪಾಸನೆಯ ಜನಸಾಮಾನ್ಯರಲ್ಲಿ ಬಹುಮಟ್ಟಿಗೆ ಪ್ರಚಲಿತವಾಗಿತ್ತು. ಹಳ್ಳಿಗಳ ಸುತ್ತಲೂ ದುಷ್ಟ ಶಕ್ತಿಗಳು ಹೊಂಚು ಹಾಕಿಕೊಂಡು ಕಾಯಿಲೆಗಳನ್ನೂ, ಕಷ್ಟಗಳನ್ನೂ ಜನರಿಗೆ ಉಂಟು ಮಾಡಲು ಕಾಯುತ್ತಿದ್ದವೆಂದೂ, ಈ ಶಕ್ತಿಗಳನ್ನು ಹೋಗಲಾಡಿಸುವುದಕ್ಕಾಗಿ ದುರ್ಗಿ, ಮಾರಿ, ಚೌಡಿ ಇತ್ಯಾದಿಗಳನ್ನು ಒಲಿಸಿಕೊಳ್ಳಬೇಕೆಂದೂ ಜನಸಾಮಾನ್ಯರು ನಂಬಿದ್ದರು. ಈ ದೇವತೆಗಳು ಮುನಿದರೆ ರೋಗಗಳನ್ನು ನಾಶಮಾಡುವುದಕ್ಕೆ ಬದಲಾಗಿ ತಾವೇ ಅದನ್ನು ಹರಡುವುದಕ್ಕೆ ಕಾರಣವಾಗುತ್ತದೆಂಬ ಶ್ರದ್ಧೆಯೂ ಬೇರು ಬಿಟ್ಟಿತ್ತು. ಆದುದರಿಂದ ಈ ದೇವತೆಗಳನ್ನು ಸಮಾಧಾನ ಪಡಿಸುವುದೇ ಅವರ ದೇವತಾರಾಧನೆಯ ಮುಖ್ಯ ಗುರಿಯಾಗಿದ್ದಿತೆನ್ನಬಹುದು. ಆ ದೇವತೆಯ ಮೂರ್ತಿಯನ್ನು ಮಾಡಿ ಊರ ಹೊರಗೆ ಒಂದು ಗುಡಿಯನ್ನು ಕಟ್ಟಿ ಇಡುತ್ತಿದ್ದರು. ಕೆಲವು ವೇಳೆ ಸುಣ್ಣ ಬಣ್ಣ ಬಳಿದ ಗುಂಡುಕಲ್ಲೇ ದೇವತೆಯನ್ನು ಪ್ರತಿನಿಧಿಸಲು ಸಾಕಾಗುತ್ತಿತ್ತು. ಗ್ರಾಮದೇವತೆಗಳ ಪ್ರೀತ್ಯರ್ಥವಾಗಿ ಪ್ರಾಣಿಗಳನ್ನು ಬಲಿ ಕೊಡುವುದು ಯಥೇಚ್ಛವಾಗಿ ನಡೆಯುತ್ತಿತ್ತು. ಸಿಡಿ ಆಡುವುದು, ಬೆಂಕಿಯಲ್ಲಿ ನಡೆಯುವುದು, ಭೂತಾರಾಧನೆ ಮೊದಲಾದವು ಈ ನೆಪದಲ್ಲಿ ನಡೆಯುತ್ತಿದ್ದವು. ಇದಕ್ಕಾಗಿ ಅನೇಕ ಕಡೆಗಳಲ್ಲಿ ವರ್ಷ ವರ್ಷವೂ ಜಾತ್ರೆ ನಡೆಯುವುದು ಪ್ರಚಲಿತವಾಯಿತು. ಕೋಳಿ, ಕುರಿ, ಕೋಣಗಳನ್ನು ಬಲಿ ಕೊಡುವ ಕಾರ್ಯ. ಪರಂಪರೆಯಿಂದ ಬೆಳೆದು ಬಂದು ವಿಧಿವತ್ತಾಗಿ ನಡೆಯುತ್ತಿತ್ತು. ನರಬಲಿಯೂ ಕೆಲವು ಕಡೆ ರೂಢಿಯಲ್ಲಿತ್ತೆಂಬುದಕ್ಕೆ ಆಧಾರಗಳಿವೆ."

ಶಕ್ತಿದೇವತೆಗಳಿಗೆ ಹರಕೆ ಹೊತ್ತು ಸೇವೆ ಸಲ್ಲಿಸಿ ಜನರು ತಮ್ಮ ಮನೋಗತವನ್ನು ಯಾವ ರೀತಿ ಈಡೇರಿಸಿಕೊಳ್ಳುತ್ತಿದ್ದರು ಎಂಬುದಕ್ಕೆ ಸಾಹಿತ್ಯದಲ್ಲಿ ಅನೇಕ ನಿದರ್ಶನಗಳು ದೊರೆಯುತ್ತವೆ. ಅದರಲ್ಲಿ ಮುಖ್ಯವಾಗಿ ಪುರಂದರ ಹಾಗೂ ಕನಕದಾಸರ ಕೃತಿಗಳನ್ನೂ, ನಂಜುಂಡನ 'ರಾಮನಾಥ ಚರಿತೆ'ವನ್ನೂ ಅವಶ್ಯವಾಗಿ ನೆನೆಯಬೇಕು. ನಂಜುಂಡನ ಕೃತಿಯಲ್ಲಿ ದೇಶಿದೇವತೆಗಳಿಗೆ ಹರಕೆ ಆವಾಹನೆ, ಉಪಾಸನಗಳಿಗೆ ಸಂಬಂಧಿಸಿದ ವಿಸ್ತಾರವಾದ ಚಿತ್ರ ದೊರೆಯುತ್ತದೆ.

ಪೂಜೆಯನ್ನು ಕೈಗೊಳ್ಳುವ ದೈವಗಳೆಂದರೆ ಸಾಮಾನ್ಯವಾಗಿ ಸ್ತ್ರೀದೇವತೆಗಳು, ಕುಮಾರರಾಮನ ಮನಮೋಹಕರೂಪಕ್ಕೆ ಸೋತ ರಾಣಿ ರತ್ನಾಜಿಗೆ ಅವಳ ದೂತಿ ಸಂಗಿ ಧೈರ್ಯ ಹೇಳಿ, "ಹೆಸರುಳ್ಳ ಮಾಕಾಳಿಯುಂಟು ಚಾಮುಂಡಿಯುಂಟು......... ಏನಬೇಡಿದೊಡೀವ ಬೆಸನುಳ್ಳ ಕುಟಿಲದೇವತೆ ಯುಂಟು". ಈ ಕುಟಿಲ ದೇವತೆಗಳೆಲ್ಲ 'ತನ್ನ ತುಟಿಯ ಮಂತ್ರಾಕ್ಷರದಿಂದ ನಟಿಸುತಿಹವು' ಎಂದು ಹೇಳಿ ಅವುಗಳ ಮೇಲೆ ತನಗಿರುವ ಸ್ವಾಮಿತ್ವವನ್ನು ಹೆಮ್ಮೆಯಿಂದ ಹೇಳಿಕೊಳ್ಳುತ್ತಾಳೆ. ಅವರನ್ನು ಬೇಡಿ ರಾಮನನ್ನು ನಿನಗೆ ಒಲಿಯುವಂತೆ ಮಾಡುವೆ ಎಂದು, ಈ ಶಕ್ತಿದೇವತೆಗಳಿಂದ ತನಗೆ ಏನು ತಾನೆ ಸಾಧ್ಯವಿಲ್ಲ ಎಂದು ಆ ದೇವತೆಗಳ ಹಿರಿಮೆಯನ್ನು ಉಗ್ಗಡಿಸುತ್ತಾಳೆ. ಮುಂದುವರಿದು 'ಹೊಸ ಊರ ಯೆಕನಾತಿಯುಂಟು, ಬಾಗಿಲ ಹಂಪೆಯ ಸಿಯಳು [ಹಂಪೆಯ + ಅಸಿಯಳು = ಕತ್ತಿಯನ್ನು ಹಿಡಿದ ದೇವತೆ(?)] ಉಂಟು. ಅವರಿಗಾನೊಲಿದು ಒಸೆದು ಬೇಡಿದ ಬಲಿಗಳನಿತ್ತು ಅವನ ನಿನ್ನ ವಶಮಾಡಿಕೊಡುವೆ ಅಂಜದಿರು' ಎಂದು ಇನ್ನೂ ಕೆಲವು ದೇವತೆಗಳನ್ನ ಹೆಸರಿಸಿ ಅವರಿಂದ ಕಾರ್ಯಸಾಧನೆ ಮಾಡುವುದಾಗಿ ಧೈರ್ಯ ಹೇಳುತ್ತಾಳೆ. "ಶಕ್ತಿ ದೇವತೆಗಳ ಪೂಜೆಯನೊಲಿದ ಭಕ್ತಿಯಿಂ ಮಾಡಿ ರಾಮನನು ಶಕ್ತಿಗೆಡಿಸಿ ನಿನ್ನ ಕೂಡಬೇಕೆಂಬಾ ಸಕ್ತಿಯ ಪಟ್ಟಿಸಿ ಕೊಡುವೆ" ಎಂಬುದು ಅವಳ ನಿರ್ಧಾರದ ನುಡಿ.

ಈ ದೇವತೆಗಳನ್ನು ಒಲಿಸಿಕೊಳ್ಳುವುದೂ ಸಾಮಾನ್ಯ ವಿಷಯವಲ್ಲ. ಅದೊಂದು ಕಠಿಣಕಾರ್ಯ. ಸಂಗಿ ಎಷ್ಟು ವಿಧದಲ್ಲಿ ಈ ದೇವತೆಗಳನ್ನು ಪೂಜಿಸಿದಳು ಎಂಬುದರ ವಿಸ್ತಾರವಾದ ವರ್ಣನೆಯನ್ನು ನಂಜುಂಡ ಕವಿ ಕೊಡುತ್ತಾನೆ. ಮಿಂದು ದಣಿಬದ ಸೀರೆಯನ್ನುಟ್ಟು, ಕಲ್ಲ ಕಣ್ಣಿಟ್ಟು ಕರಗಿಸುವ ಮಂತ್ರವನ್ನು ಹಲ್ಲುಮರೆಯಲ್ಲಿ ಉಚ್ಚರಿಸುತ್ತಾ ಕೊಲ್ಲಾಪುರದ ದೇವಿಯನ್ನು ಆರಾಧಿಸಿದಳು. ನಿರ್ವಾಣದಲ್ಲಿ ಕಾಂಚಿಯ ಕಾಮಾಕ್ಷಿಯನ್ನಾರಾಧಿಸಿ, ಚಂಡಿ, ಭೈರವಿ, ಕರ್ನಮೋಟಿ, ಕೌಮಾರಿ, ಚಾಮುಂಡಿ, ಕಾಳಿಯರೆಂದೆಂಬ–ಚಂಡದೇವತೆಗಳನ್ನಾರಾಧಿಸಿ ಕುರಿಗಳನ್ನು ತಂದು ದಿಂಡು ಗೆಡಹಿದರು. ಅರೆಮುಗಿದ ಅಕ್ಷಿಗಳನ್ನು ನಾಸಾಗ್ರದೊಳಿಸಿ ಹೃತ್ಕಮಲ ಮಧ್ಯದೊಳು ನಿಲಿಸಿ, ನಾಡಿಗಳನ್ನು ಬಲಿದು, ಅತ್ತಿತ್ತ ವಾಯುವನ್ನು ಆಡಲೀಯದೆ, ಚಿತ್ತವನ್ನು ಓಡಲೀಯದೆ ನಾಡ ಮಾಯಾದೇವಿಯನ್ನು ಧ್ಯಾನಿಸಿದಳು.

ಈ ಶಕ್ತಿ ದೇವತೆಗಳನ್ನು ಒಲಿಸಿಕೊಳ್ಳಲು ಇನ್ನೂ ಎಷ್ಟೆಷ್ಟು ತರಹದ ಉಗ್ರಪರೀಕ್ಷೆಗೆ ತಮ್ಮ ದೇಹವನ್ನು ಒಳಗು ಮಾಡಲು ಜನರು ಸಿದ್ಧರಿರುತ್ತಿದ್ದರು ಎಂಬುದನ್ನು ಅವರು ಈ ದೇವತೆಗಳಿಗೆ ಹರಿಸಿಕೊಂಡು ಮಾಡುತ್ತಿದ್ದ ಉಗ್ರ ಪ್ರತಿಜ್ಞೆಗಳಲ್ಲಿ ಕಾಣಬಹುದು. "ಕರುಳ ಕೊಯ್ದೇಯಿಸುವೆನು ದೇವಿ ಹಗ್ಗದ ಹುರಿಯ ಮೇಲಾನೆಯ್ದುಪೆನು", "ಬೇವಿನುಡಿಗೆ ಬಾಯ ಬೀಗದಿಂ ನಿನ್ನಡಿದಾವರೆಗಳಿ ಗೆರಗುವೆಂ", "ಕೆಂಡದ ಕುಂಡವ ಹೊತ್ತು ನಡೆದಾ ಚಾಮುಂಡಿಯನೊಲಿಸುವೆ", "ಒಡ್ಡಿದ ಶೂಲಿವ ಹಾಯ್ದು ಮೈಲಾರದ ದೊಡ್ಡಿಯ ದೇವರನೊಲಿಸುವೆ","........... ನನ್ನೀ ಕೊರಲನು ಬಲುಗತ್ತರಿಗಿತ್ತು ಮಾಕಾಳಿಯಂ ಮೆಚ್ಚಿಸುವೆ ...." ಈ ಮಾತುಗಳಲ್ಲಿ ನಿರ್ಧಾರದ ಧ್ವನಿಯಿದೆ. ಜೀವದ ಮೇಲಿನ ವ್ಯಾಮೋಹ ಸರಿದಿದೆ. ಏನೇ ಆದರೂ ಎಷ್ಟೇ ಕಷ್ಟಗಳನ್ನು ಅನುಭವಿಸಿಯಾದರೂ ಕಾರ್ಯ ಸಾಧನೆ ಮಾಡುತ್ತೇನೆಂಬ ಕೆಚ್ಚಿದೆ.

ಇಲ್ಲಿ ದೇವತೆಗಳು ಮತ್ತು ದೇಶಿ ದೇವತೆಗಳನ್ನು ಕುರಿತು ಸ್ವಲ್ಪ ವಿವರಣೆ ಅಗತ್ಯವೆನಿಸುತ್ತದೆ. ರಾಣಿ ರತ್ನಾಜಿಯ ದೂತಿ ಸಂಗಿ ತನ್ನ ಒಡತಿಯ ಸಲುವಾಗಿ ಕಂಚಿಯ ಕಾಮಾಕ್ಷಿ, ಪಂಪಾದೇವಿ ಯರಿಗೂ ಮತ್ತು ಕುಟಿಲ ದೇವತೆಗಳಿಗೂ ಮೊರೆ ಇಡುತ್ತಾಳೆ. ಆದರೆ ಆಕೆ ಹಂಪೆಯ ಅಧಿದೇವತೆ 'ಪಂಪಾದೇವಿ'ಯನ್ನು ಆರಾಧಿಸುವುದನ್ನು ನೋಡಿದರೆ ಪಂಪಾದೇವಿಯ ಹಿರಿಮೆ ಗೊತ್ತಾಗುವುದರ ಜೊತೆಗೆ, ಉಳಿದ ದೇವತೆಗಳೆಲ್ಲ, ಮಾಯಾ ದೇವತೆಗಳು ಬೇಡಿದ ಇಷ್ಟಾರ್ಥವನ್ನು ನೆರವೇರಿಸಲಾರದವು ಎಂಬ ಭಾವನೆಯು ಮೂಡುತ್ತದೆ. ಪಂಪಾದೇವಿಯನ್ನು ಜಗನ್ಮಾತೆ, ಮಾಯೆ, ಸಾವಿತ್ರಿ, ಮಹಿಷಾಸುರ ಮರ್ದಿನಿ ಮುಂತಾಗಿ ಕೊಂಡಾಡಿ ಕಡೆಗೆ, 'ಈಯಲಯದ ಮಾಯಾ ದೇವತೆಗಳ್ಗೆ, ಬಾಯ ಬಿಟ್ಟರೆ ಫಲವುಂಟೆ ತಾಯೆ?', "ಕಂಡರಿಸಿದ ಕಲ್ಲ ಪುತ್ತಳಿಗಳ ಮೊಗಗಂಡು, ದೇವತೆಗಳೆಂದು ಅವನ್ನು ಕೊಂಡಾಡಿ, ಬೇಡಿದರೀವವೆ ವರವನು?" ಎಂದು ಉಳಿದ ದೇವತೆಗಳನ್ನು ಮಾಯಾ ದೇವತೆಗಳೆಂದು ಖಂಡಿಸಿ, "ನಿನ್ನಂಘ್ರಿಗೆಣೆಗೆ ವರಗಳು ಮೇಲ್ವಾಯದಿಹವೆ" ಎಂದು ಆ ದೇವಿಯ ಬಗೆಗೆ ತನ್ನ ತುಂಬು ಹೃದಯದ ಮೆಚ್ಚುಗೆಯನ್ನು ಸೂಚಿಸುವಳು. ಮೇಲಿನ ವಿವರಣೆಯಿಂದ ಸ್ತ್ರೀದೇವತೆಗಳು ಮಹಿಮಾವಂತ ಶಕ್ತಿದೇವತೆಗಳು ಮತ್ತು ಕುಟಿಲ ದೇವತೆಗಳೆಂದು ಎರಡು ವರ್ಗದ ದೇವತೆಗಳಿರುವಂತೆ (ಅಥವಾ ಇದ್ದಂತೆ) ಕಾಣುತ್ತದೆ.

ಇದೇ ರೀತಿಯಲ್ಲಿ ಇನ್ನು ಅನೇಕ ಧರ್ಮಗ್ರಂಥಗಳೂ ಮಂತ್ರ ತಂತ್ರಾದಿಗಳನ್ನು ಆಚರಿಸ ಕೂಡದೆಂದೂ, ಅಲೌಕಿಕ ಶಕ್ತಿಗಳನ್ನು ಉಪಯೋಗಿಸಕೂಡದೆಂದೂ ಹೇಳಿವೆ. ದೇಶಿದೇವತೆಗಳಾದ ಮಾರಿ ಮಸಣಿ ಮುಂತಾದವುಗಳ ಬಗೆಗೆ ಎಚ್ಚರದಿಂದ ಇರಬೇಕೆಂದೂ, ಅವುಗಳ ಆರಾಧನೆ ಸಲ್ಲದೆಂದೂ ಎಚ್ಚರಿಸಿ ನುಡಿದಿರುವ ಸೂಳ್ನುಡಿಗಳು ಸಾಹಿತ್ಯದಲ್ಲಿ ಸಮೃದ್ಧಿಯಾಗಿ ದೊರೆಯುತ್ತವೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಪರಿಶೀಲಿಸಿ, ನಾಡಾಡಿ ದೈವಗಳನ್ನು ಜನರು ಯಾವ ಯಾವ ರೂಪದಲ್ಲಿ ಯಾವ ಯಾವ ರೀತಿಯಲ್ಲಿ ಪೂಜಿಸುತ್ತಿದ್ದರು, ಅವುಗಳ ವಿಚಾರದಲ್ಲಿ ಜನರ ಭಾವನೆಗಳು ಏನಿದ್ದವು, ಸಂತರೂ, ಸುಧಾರಕರೂ ಅವುಗಳ ಬಗೆಗೆ ಯಾವ ರೀತಿಯ ತಿಳಿವಳಿಕೆಯನ್ನು ಜನರಿಗೆ ನೀಡಿದ್ದಾರೆ ಎಂಬುದರ ಬಗೆಗೆ ವಿಚಾರ ಮಾಡಿ, ಮೌಲ್ಯಮಾಪನ ಮಾಡಬಹುದು; "ದೆಸೆಗೆಟ್ಟು ನಾಡದೈವಂಗಳಿಗೆ ಹಲುಬಿದೊಡೆ ನೊಸಲ ಬರಹವ ತೊಡೆದು ತಿದ್ದಲಳವೆ? ಕೊಂಡಾಡದಿರು ಬೀದಿಗೂಳುಂಬ ದೈವಗಳ ನಾನಾಜನ್ಮದಿ ಬಂದ ನಾಟಕದ ಬೊಂಬೆಯಿದು" ದಾನಧರ್ಮದ ಮಾಡಿ ಸುಖಿಯಾಗು ಮನವೆ. ಎಕ್ಕನಾತಿ ಎಲ್ಲಮ್ಮ ಮಾರಿ ದುರ್ಗಿಯು ಚೌಡಿಯರ ಅಕ್ಕರಿಂದಲಿ ಪೂಜೆ ಮಾಡಲೇಕೆ? ತಂಬಿಟ್ಟೆ ನಾ ದೀಪ ಹೊರಲೇತಕೆ? ಕೊಂಬು, ಹೋತು, ಕುರಿ, ಕೋಣನಾ ಬಲಿಗೊಂಬ; ಡೊಂಬಿ ದೈವಗಳ ಭಜಿಸದಿರು ಮನವೆ. ಚಿಗುರೆಲೆ ಬೇವಿನ ಸೊಪ್ಪು ನಾರಸೀರೆ, ಬಗೆಬಗೆಯಿಂದ ಶೃಂಗಾರ ಮಾಡಿ; ನೆಗೆನೆಗೆದು

ಆಡಲು ಕುಣಿಯಲು ನಿನಗಿನ್ನು ಮಿಗಲಾದ ಮುಕುತಿಯುಂಟೆ? ಜ್ಞಾನವಿಲ್ಲದೆ ಹೀನದೈವವ ಭಜಿಸಲು ಏನುಂಟು ನಿನಗಿನ್ನು ಎಲೆ ಹುಚ್ಚು ಮನವೆ? ಮಾರಿಯ ಪೂಜಿಸಿ ಮಸಣಕ್ಕೆ ಹೋಗಿ ಗೋರಿಗೊಳಿಸಿ, ಕುರಿಯ ಕೊರಳನೆ ಕೊಯಿದುಂಬ ಕರ್ಮಿಗಳನು ಶಿವಭಕ್ತರೆನಬಹುದೇ? ಸುರೆಯ ಮಡಕೆಯ ಮೇಲೆ ವಿಭೂತಿಯ ಹೂಸಿ ಕುಸುಮದಲ್ಲಿ ಪೂಜಿಸಿ ದೇವರೆಂದರ್ಚಿಸಿ ಪೂಜಿಸಿ ಕುಡಿಯುತ್ತಿರ್ಪ ನರರಂತಾದಿರೋ; "ಲೋಕದ ಬುದ್ದಿಗೇಡಿ ಮನುಜರೆಲ್ಲರು ಚಿತ್ತಶುದ್ಧವುಳ್ಳ ಜಂಗಮ ಲಿಂಗದ ಮಾತ ಕೇಳದೆ ಅದ್ದನ ಜೋಳ ಅರಮಾನ ಎಣ್ಣೆಯಕೊಂಡು ನೋಟಗಾತಿಯರ ಮನೆಗೆ ಹೋಗಿ, ಅವರು ಹೇಳಿದ ತಾತುಭೂತದ ಕೊಟಲೆಗೊಳಗಾಗಿ ಕೈಕೊಂಡು ಬಂದು ಅವಕ್ಕೆ ಊಟವನಿಕ್ಕೆ ಮಿಕ್ಕ ಲಿಂಗಕ್ಕೆ ತೋರುವ ಲಿಂಗದ್ರೋಹಿಯ ಮಾತ ಕೇಳಲಾಗದು. ಕಡೆಯದಾಗಿ ಸರ್ವಜ್ಞನು 'ದುರ್ಗಿ ಮಾರಿಯು ಚಂಡಿ ಎಂಬ ಅಗ್ಗದ ಶಕ್ತಿಗಳು ಸದ್ಗುಣ ಸತ್ಯ ಮುಸುಕಿ ಹರನ್ನ ಕೂಡಿ ಸತ್ಯದ ಬಾಳ್ವೆಯನ್ನು ನಡೆಸುವವರ ಮೇಲೆ ಈ ಶಕ್ತಿಗಳು ಯಾವ ಪ್ರಭಾವವನ್ನು ಬೀರಲಾರವು', ಎಂಬ ಸತ್ಯಸಂಗತಿಯನ್ನು ಉದ್ಘೋಷಿಸಿದ್ದಾನೆ.

ಹೊಸ ದೇವತೆಗಳು ಮತ್ತು ಪೂಜಾಪಂಥಗಳು

ವಿಜಯನಗರ ಕಾಲದಲ್ಲಿನ ವಿಶೇಷವೆಂದರೆ ಅದಕ್ಕೂ ಹಿಂದಿನ ಕಾಲದಲ್ಲಿ ಜನಪ್ರಿಯವಾಗಿದ್ದ ಅನೇಕ ಪೂಜಾಪಂಥಗಳು ಜನಪ್ರಿಯತೆಯನ್ನು ಕಳೆದುಕೊಂಡು ಹೊಸ ದೇವತೆಗಳು ಪ್ರಚಾರದಲ್ಲಿ ಬಂದವು. ಅವುಗಳಲ್ಲಿ ಪ್ರಮುಖವಾದವುಗಳೆಂದರೆ ರಂಗನಾಥ, ತಿಮ್ಮಪ್ಪ ಅಥವಾ ವೆಂಕಟೇಶ, ವೀರಭದ್ರ, ಹನುಮಂತ, ಮೈಲಾರ, ವಿಠಲ ಹಾಗೂ ಶಕ್ತಿ ದೇವತೆಗಳು. ವಿಜಯನಗರ ಕಾಲದ ದೇವಾಲಯ ಶಿಲ್ಪಗಳಲ್ಲಿ ಈ ದೇವತೆಗಳ ಮೂರ್ತಿ ಶಿಲ್ಪಗಳು ಸಾಮಾನ್ಯವಾಗಿ ನೋಡಸಿಗುತ್ತವೆ.

ಗ್ರಾಮ ದೇವಿತೆಗಳ ಜನಪ್ರಿಯತೆಯಿಂದಾಗಿ ವಿಭಿನ್ನ ಪೂಜಾಪಂಥಗಳೂ ಶಕ್ತಿದೇವತೆಗಳಿಗೆ ಅಗ್ರಸ್ಥಾನ ನೀಡತೊಡಗಿದವು. ವಿಜಯನಗರ ಕಾಲದ ಪುರುಷ ದೇವತೆಗಳ ದೇವಾಲಯಗಳಲ್ಲಿ ಕಡ್ಡಾಯವಾಗಿ ಅಮ್ಮನ ಗುಡಿಯನ್ನು ಕಟ್ಟುವ ಪರಿಪಾಠ ಬೆಳೆಯಿತು. ಜಾನಪದ ಮೂಲದ ದೇವತೆಗಳಾದ ರಂಗನಾಥ, ಮೈಲಾರ ಮುಂತಾದವರಿಗೆಲ್ಲ ಎರಡೆರಡು ಪತ್ನಿಯರಿರುವಂತೆ ಕಲ್ಪಿಸಲಾಗಿದ್ದು ಪ್ರತೀ ವರ್ಷ ಈ ದೇವತೆಗಳ ಕಲ್ಯಾಣೋತ್ಸವ, ತೆಪ್ಪೋತ್ಸವ, ಡೋಲೋತ್ಸವ ಮುಂತಾದ ವಿಹಾರಗಳ ವಿಧಿಗಳನ್ನು, ವಾಸ್ತುಗಳನ್ನೂ ದೇವಾಲಯಗಳ ಪೂಜೆಯಲ್ಲಿ ಸೇರಿಸಲಾಯಿತು. ಈ ಕಾಲದಲ್ಲಿ ರಾಜ್ಯದ ತುಂಬೆಲ್ಲ ವಿಭಿನ್ನ ಶಕ್ತಿ ದೇವತೆಗಳ ಪೀಠಗಳು ತಲೆಯೆತ್ತಿ ಅವುಗಳಿಗೆ ಆಳುವ ವರ್ಗದವರು ಆಶ್ರಯ ನೀಡಿದವು.

ಶ್ರೀವೈಷ್ಣವ ಮತದ ಪ್ರಸಾರದಿಂದಾಗಿ ರಂಗನಾಥ ಮತ್ತು ವೆಂಕಟೇಶ ದೇವತೆಗಳು ಪ್ರಚಾರಕ್ಕೆ ಬಂದವು. ಕರ್ನಾಟಕ ಪ್ರದೇಶದ ಬೇಟೆಯಾಡುವವರ ದೇವತೆಯಾದ ಬ್ಯಾಟರಾಯನ ರೂಪದಲ್ಲಿ ರಂಗನಾಥನು ಜನಪ್ರಿಯನಾದನಲ್ಲದೆ ಬೇಡ–ನಾಯಕ ಆಳುವ ವರ್ಗದ ಏಳ್ಗೆಯೊಂದಿಗೆ ಅವನಿಗೆ ಅಭೂತಪೂರ್ವ ಆಶ್ರಯವೂ ಸಿಕ್ಕಿತು. ರಂಗನಾಥನ ಮೂರ್ತಿಗೆ ನಾಲ್ಕು ಕೈಗಳಿದ್ದು ಎರಡರಲ್ಲಿ ಬಿಲ್ಲು ಬಾಣ ಹಿಡಿದಿದ್ದರೆ ಮತ್ತೆರಡರಲ್ಲಿ ಶಂಖ ಚಕ್ರಗಳನ್ನು ಹಿಡಿದಿರುತ್ತಾನೆ. ಆತನನ್ನು ಶಯನ ಭಂಗಿಯಲ್ಲೂ ತೋರಿಸಲಾಗುತ್ತದೆ. ವಿಠಲನ ಪೂಜಾ ಕೇಂದ್ರವು ವಿಜಯನಗರ ಕಾಲದಲ್ಲಿ ಭೀಮಾ ತೀರದಲ್ಲಿದ್ದರೂ ಮೂಲತಃ ಆ ಪಂಥವು ಕರ್ನಾಟಕದಲ್ಲಿ ಹೊಯ್ಸಳ ಕಾಲದಲ್ಲಿ ಹುಟ್ಟಿಕೊಂಡಿದ್ದುದು ಕಂಡುಬರುತ್ತದೆ. ವಿಜಯನಗರದಲ್ಲೂ ವಿಠಲ ಪಂಥದ ಪ್ರಭಾವ ಇದ್ದುದು ವಿಜಯವಿಠಲ ದೇವಾಲಯದ ಮೂಲಕ ನಿದರ್ಶನವಾಗುತ್ತದೆ. ಮಾಧ್ವ ಸಂಪ್ರದಾಯದೊಂದಿಗೆ ಏಳ್ಗೆ ಹೊಂದಿದ ಮತ್ತೊಂದು ಜನಪ್ರಿಯ ಜಾನಪದ ಪೂಜಾ ಪಂಥವೆಂದರೆ ಹನುಮಂತನ ಪೂಜೆ. ಒಬ್ಬ ಶಕ್ತಿ ದೇವತೆಯಾಗಿ ದುಷ್ಟ ಶಕ್ತಿಗಳಿಂದ ರಕ್ಷಿಸಲು ಆತನ ತಾಂತ್ರಿಕ ಪೂಜೆ ಕೂಡ ಪ್ರಚಲಿತದಲ್ಲಿ ಬಂದಿತು. ಮಾಧ್ವರು ಆತನನ್ನು ಮುಖ್ಯಪ್ರಾಣ ದೇವರೆಂದು ಪೂಜಿಸಿದರು. ಒಂದು ಗ್ರಾಮದೇವತೆಯಾಗಿ ಹಳ್ಳಿ ಹಳ್ಳಿಗಳಲ್ಲೂ ಆತನನ್ನು ಪೂಜಿಸುತ್ತಿದ್ದುದು ಇಂದು ಸಿಗುವ ಸಾವಿರಾರು ಹನುಮಂತ ವಿಗ್ರಹಗಳಿಂದ ಗೊತ್ತಾಗುತ್ತದೆ. ಮತ್ತೊಂದು ಪ್ರಮುಖ ವೈಷ್ಣವ ದೇವತೆಯಾದ ನರಸಿಂಹನಿಗೆ ಸಂಬಂಧಿಸಿದ ಜಾನಪದ ಪಂಥವೂ ಅಹೋಬಿಲದ ಸುತ್ತಮುತ್ತ ಪ್ರಚಲಿತದಲ್ಲಿ ಬಂದಿತು. ಇಲ್ಲಿ ನರಸಿಂಹನು ಬಿಲ್ಲು ಬಾಣ ಹಿಡಿದು ಬೇಟೆಯಾಡುವ ಭಂಗಿ ತಳೆದು ಬೇಡ ಕನ್ಯೆ ಚೆಂಚುಲಕ್ಷ್ಮಿಯನ್ನು ವರಿಸಿದ ಪುರಾಣ ಇದೆ. ಅಹೋಬಿಲ ನರಸಿಂಹನು ಬೇಟೆಯಾಡುವ ಮೂರ್ತಿಗಳೂ ಇವೆ.

ಶೈವ ಪಂಥಗಳಲ್ಲಿ ವೀರಶೈವದ ಪ್ರಾಬಲ್ಯ ಈ ಕಾಲದಲ್ಲಿ ಹೆಚ್ಚಿದಂತೆಲ್ಲ ವೀರಭದ್ರನ ದೇವಾಲಯಗಳು ಊರೂರುಗಳಲ್ಲಿ ತಲೆಯೆತ್ತಿದವು ಹಾಗೂ ಆತನ ಪೂಜೆ ಜನಪ್ರಿಯವಾಯಿತು. ವೀರಭದ್ರ ಪಂಥಕ್ಕೆ ಸಂಬಂಧಿಸಿದಂತೆ ವೀರಗಾಸೆ ಎಂಬ ಜಾನಪದ ಕುಣಿತವೂ ಪ್ರಚಲಿತದಲ್ಲಿ ಬಂದಿತು. ಶಿವನ ಮತ್ತೊಂದು ಜನಪ್ರಿಯ ಪೂಜಾಪಂಥ ಎಂದರೆ ಮೈಲಾರ ದೇವತೆಯದು. ಈ ದೇವತೆಯ ಪೂಜಾಪಂಥಕ್ಕೂ, ಮಲ್ಲಿಕಾರ್ಜುನ ಪಂಥಕ್ಕೂ ಸಂಬಂಧವಿದ್ದು ಇವೆಲ್ಲ ದಖ್ಖನ್ನಿನ ಪಶುಸಂಗೋಪನಾ ಸಂಸ್ಕೃತಿಗಳ ದೇವತೆಗಳಾಗಿವೆ. ಮೈಲಾರನನ್ನು ಮಹಾರಾಷ್ಟ್ರದಲ್ಲಿ ಖಂಡೋಬಾ ಎಂದು ಪೂಜಿಸಲಾಗುತ್ತಿತ್ತು ಹಾಗೂ ಆಂಧ್ರದಲ್ಲಿ ಮಲ್ಲಣ್ಣ ಎನ್ನಲಾಗುತ್ತಿತ್ತು. ಆತನ ಪತ್ನಿ ಮಾಳಸಾ ಕೂಡ ಒಂದು ಶಕ್ತಿದೇವತೆಯೇ ಆಗಿದ್ದಳು.

ವಿದೇಶಿಯರು ಕಂಡ ವಿಜಯನಗರ ಸಂಸ್ಕೃತಿ

ಮಧ್ಯಕಾಲೀನ ದಕ್ಷಿಣ ಭಾರತದ ಚರಿತ್ರೆಯಲ್ಲಿ ವಿಜಯನಗರಕ್ಕೆ ಸಂದಿರುವ ಪ್ರಾಶಸ್ತ್ಯ ಅಷ್ಟಿಷ್ಟಲ್ಲ. ಇಂಥ ದೊಡ್ಡ ಸಾಮ್ರಾಜ್ಯಕ್ಕೆ ವಿದೇಶಗಳಿಂದ ಬಂದು ಹೋದವರ ಸಂಖ್ಯೆ ಅಪರಿಮಿತ. ಕ್ರಿ.ಶ. 15ನೇ ಶತಮಾನ ಪೂರ್ವಾರ್ಧದಿಂದ ಈ 'ಯಾತ್ರೆ' ಆರಂಭವಾಗಿ ಕಳೆದ ಶತಮಾನ ದವರೆಗೂ ವಿದೇಶಿ ಪ್ರವಾಸಿಗರು ಬಂದು ಹೋಗಿದ್ದಾರೆ. ಬಂದುಹೋದವರಲ್ಲಿ ಕೆಲವು 'ಪ್ರವಾಸ ಕಥನ'ಗಳನ್ನು ಬರೆದಿಟ್ಟಿದ್ದಾರೆ. ಇನ್ನಷ್ಟು ಪ್ರವಾಸ ಕಥನಗಳು ಕಾಲಗರ್ಭದಲ್ಲಿ ಹೂತುಹೋಗಿವೆ. ಕೆಲವು ಪ್ರವಾಸಿಗರು ಬರೆದಿಟ್ಟುಕೊಂಡ ದಿನಚರಿಗಳು ಕನ್ನಡಕ್ಕೆ ಬರದೆ ಹಾಗೇ ಉಳಿದುಬಿಟ್ಟಿವೆ. ಹೀಗೆ ಉಳಿದುಕೊಂಡ ಪ್ರವಾಸಿಗರ ಪ್ರವಾಸ ಕಥನಗಳಲ್ಲಿ 'ವಿಜಯನಗರ'ದ ಸಾಂಸ್ಕೃತಿಕ ಅನನ್ಯತೆಗಳು, ಅದರ ವೈಭವಗಳು, ಅಲ್ಲಿಯ ಸಾಮಾಜಿಕ ಸಂಗತಿಗಳು, ಅಲ್ಲಿಯ ಆಚರಣೆಗಳು ನಮ್ಮ ಕಣ್ಣ ಮುಂದೆ ಅಪೂರ್ವ ಸಂಗತಿಗಳನ್ನು ಪ್ರದರ್ಶಿಸುತ್ತವೆ. ಇವುಗಳ ಅಧ್ಯಯನ ಆಗಬೇಕಾಗಿದೆ. ಇಲ್ಲಿಗೆ ಬಂದಹೋದ ನಿಕೊಲೊ–ದೆ–ಕೊಂತಿ, ಅಬ್ದುಲ್ ರಜಾಕ್, ದುಆರ್ತೆ ಬಾರ್ಬೋಸಾ, ಡೊಮಿನಿಗೊ ಪಯಾಸ್, ಫರ್ನ್ಯೊ ನ್ಯೂನಿಜ್ ಇವರಂಥ ಪ್ರಸಿದ್ಧ ಪ್ರವಾಸಿಗರ ಬರಹಗಳು ಇರುವಂತೆ ಇಬ್–ನಾ–ಬತುತಾ, ಅಥನೇಷಿಯಸ್ ನಿಕಟನ್, ಸೀಜರ್ ಫೆಡರಿಕ್, ಬ್ಯಾರಡಸ್, ಲೆಫ್ಟಿನೆಂಟ್ ಎಮಿಟ್ ಇವರಂಥ ಅಷ್ಟು ಪ್ರಸಿದ್ಧರಲ್ಲದ ಪ್ರವಾಸಿಗರೂ ಇದ್ದಾರೆ. 'ವಿಜಯನಗರ'ದ ಸಾಂಸ್ಕೃತಿಕ ಚರಿತ್ರೆಯನ್ನು ಅಧ್ಯಯನ ಮಾಡುವವರಿಗೆ ಇವರೆಲ್ಲರೂ ನೀಡುವ ವಿವರಗಳು ಅಪೂರ್ವವಾಗಿದೆ.

ವಿಜಯನಗರ ಮಹಾಸಾಮ್ರಾಜ್ಯ ಬಾಳಿದ ಕಾಲವನ್ನೂ, ಅದು ಅಳಿದುಹೋದ ಕಾಲವನ್ನೂ ಪ್ರವಾಸಿಗರ ಎಲ್ಲ ಬರಹಗಳು ಹೊಳೆಯಿಸುತ್ತವೆ. ಕ್ರಿ.ಶ. 15ನೇ ಶತಮಾನದ ಪೂರ್ವಾರ್ಧದಿಂದ 16ನೇ ಶತಮಾನದ ಪೂರ್ವಾರ್ಧದವರೆಗೂ ಬಂದುಹೋದವರ ಪಟ್ಟಿ ದೊಡ್ಡದಿರುವುದೇನೋ ನಿಜ. ಆದರೆ ಬಂದು ಹೋದವರೆಲ್ಲ 'ಪ್ರವಾಸ ಕಥನ'ಗಳನ್ನು ಬರೆಯಲಿಲ್ಲ. ಆದರೆ ಬರೆದವರ ಸಂಖ್ಯೆ ತೀರ ಕಡಿಮೆಯೇನಲ್ಲ. ಅದು ನಮ್ಮ ಅದೃಷ್ಟ. ವಿಜಯನಗರ ಕುರಿತು ಆ ಅವಧಿಯಲ್ಲಿ ಬರೆದವರ ಸಂಖ್ಯೆ ಹನ್ನೆರಡು. ಇದು ಸಂಖ್ಯಾ ವಿಶೇಷವಲ್ಲ. ಆದರೆ ನ್ಯೂನಿಜ್, ಬಾರ್ಬೋಸಾ, ಅಬ್ದುರ್ ರಜಾಕ್, ಡೊಮಿನಿಗೋ ಪಯಾಸ್ ಈ ವಿದೇಶೀ ಮಹಾಶಯರ ಬರಹಗಳು ಬಹು ದೀರ್ಘವಾಗಿವೆ. ಬಹು ಮಹತ್ವದ ದಾಖಲೆಗಳಾಗಿವೆ. ಅವು ಕೊಡುವ ಚಾರಿತ್ರಿಕ ವಿವರಗಳು ನಮ್ಮನ್ನು ದಂಗು ಬಡಿಸುತ್ತವೆ.

ವಿಜಯನಗರವನ್ನು ಕಂಡ ಪ್ರವಾಸಿಗರಲ್ಲಿ ಅಬ್ದುರ್ ರಜಾಕ್ ಪ್ರಮುಖನಾಗಿದ್ದನು. ಇವನು ಪರ್ಷಿಯಾ ದೇಶದವನು. ಈತ 1442 ರ ಸುಮಾರಿಗೆ ವಿಜಯನಗರಕ್ಕೆ ಬಂದ. ಆ ಕಾಲಕ್ಕೆ ವಿಜಯನಗರವು ಸುವರ್ಣ ವೈಭವವನ್ನು ಕಂಡಿತ್ತು. ಅವನು ವಿಜಯನಗರದಲ್ಲಿ ನಡೆಯುತ್ತಿದ್ದ 'ಮಹಾನವಮಿ ಉತ್ಸವ'ವನ್ನು ಬಹು ಸಂಭ್ರಮದಿಂದ ವರ್ಣಿಸಿದ್ದಾನೆ. ವಿಜಯನಗರದ ಸಾಂಸ್ಕೃತಿಕ ಉತ್ಸವಗಳನ್ನು ಹಬ್ಬ ಹರಿದಿನಗಳನ್ನು, ರಾಜನ ರೀತಿರೀವಾಜುಗಳನ್ನು ಬಹು ಎಚ್ಚರಿಕೆಯಿಂದ ವರ್ಣಿಸಿದ್ದಾನೆ. ವಿಜಯನಗರ ಕುರಿತ ಅವನ ಮಾತುಗಳು ಹೀಗಿವೆ:

"ವಿಜಯನಗರದಂಥ ನಗರವನ್ನು ಕಣ್ಣು ಕಂಡಿಲ್ಲ, ಕಿವಿ ಕೇಳಿಲ್ಲ, ಈ ನಗರವನ್ನು ಹೇಗೆ ನಿರ್ಮಿಸಿದ್ದಾರೆಂದರೆ ಏಳು ದುರ್ಗಗಳೂ, ಏಳು ಕೋಟೆಗಳೂ ಒಂದನ್ನೊಂದು ಆವರಿಸಿಕೊಂಡಿವೆ. ಒಂದನೆಯ ದುರ್ಗದ ಸುತ್ತ ಮನುಷ್ಯನ ಎತ್ತರದ ಕಲ್ಲು ಕಂಬಗಳನ್ನು ಭೂಮಿಯಲ್ಲಿ ಅರ್ಧ ಹೂತು ಇನ್ನರ್ಧ ಮೇಲೆ ಕಾಣುವಂತೆ ನೆಟ್ಟಿದ್ದಾರೆ. ಇವುಗಳನ್ನು ಒಂದರ ಪಕ್ಕದಲ್ಲಿ ಒಂದು ಹೇಗೆ ಹೂತಿದ್ದಾರೆಂದರೆ, ರಾವುತನಾಗಲೀ ಪದಾತಿಯಾಗಲೀ ಧೈರ್ಯವಾಗಿ ಅಥವಾ ಸುಲಭವಾಗಿ

ದುರ್ಗದ ಕಡೆ ಹೋಗುವಂತಿಲ್ಲ. ಈ ಕೋಟೆ ಚಕ್ರಾಕಾರವಾಗಿದೆ. ಇದನ್ನು ಬೆಟ್ಟದ ತುದಿಯ ಮೇಲೆ ಕಲ್ಲು ಮತ್ತು ಗಾರೆಯಿಂದ ಕಟ್ಟಿದ್ದಾರೆ. ಇದರ ಹೆಬ್ಬಾಗಿಲುಗಳು ಬಹು ಬಲವಾಗಿವೆ. ಈ ಹೆಬ್ಬಾಗಿಲುಗಳನ್ನು ಒಂದೇ ಸಮನೆ ಕಾಯುತ್ತಾರೆ. ಯಾರನ್ನು ಸಂಪೂರ್ಣ ಪರೀಕ್ಷೆ ಮಾಡದೇ ಒಳಗೆ ಬಿಡುವುದಿಲ್ಲ."

ವಿಜಯನಗರದ ಬಾಹ್ಯ ವಿವರಗಳನ್ನು ನಮ್ಮ ಕಣ್ಣ ಮುಂದೆ ಕಟ್ಟಿಕೊಡುವಂತೆ ಅಬ್ದುರ್ ರಜಾಕ್ ವಿವರಿಸಬಲ್ಲ. ಅವನು ರಾಜನ ದಿವಾನ್‌ಖಾನೆಗೆ ಎದುರಾಗಿದ್ದ 'ಫಿಲ್‌ಖಾನೆ' ಅರ್ಥಾತ್ ಗಜಶಾಲೆ ಕುರಿತು ಬರೆದ ವಿವರಗಳು ಹೀಗಿವೆ:

"ದಿವಾನ್‌ಖಾನೆಗೆ ಎದುರಾಗಿ ಫಿಲ್‌ಖಾನೆ (ಗಜಶಾಲೆ)ಇದೆ. ರಾಜನಿಗೆ ಸೇರಿದ ಅನೇಕ ಆನೆಗಳು, ದೇಶದಲ್ಲೆಲ್ಲಾ ಬಹಳ ಭಾರಿಯಾದ ಆನೆಗಳು, ಅರಮನೆಯ ಬಳಿ ಅಂದರೆ ಮೊದಲನೆಯ ಮತ್ತು ಎರಡನೆಯ ಕೋಟೆಗಳ ಮಧ್ಯೆ ಇರುವ ಉತ್ತರ ಪಶ್ಚಿಮ ಜಾಗದಲ್ಲಿರುತ್ತವೆ. ಈ ಆನೆಗಳು ಗಬ್ಬವಾಗಿ ಮರಿ ಹಾಕುತ್ತವೆ. ರಾಜನ ಬಳಿ ಅತ್ಯಂತ ದೊಡ್ಡದಾದ ಬಿಳಿಯ ಆನೆ ಇದೆ. ಈ ಆನೆಯ ಮೈಮೇಲೆ ಅಲ್ಲಲ್ಲಿ ನೀರಿನ ಗುಳ್ಳೆಗಳಂತೆ ಬೂದು ಬಣ್ಣದ ಮಚ್ಚೆಗಳಿವೆ. ಪ್ರತಿದಿನ ಬೆಳಗ್ಗೆ ಆನೆಯನ್ನು ರಾಜನ ಮುಂದೆ ತೆಗೆದುಕೊಂಡು ಹೋಗುತ್ತಾರೆ. ಇದರ ದರ್ಶನ ತನಗೆ ಒಳ್ಳೆಯದೆಂದು ರಾಜ ಭಾವಿಸುತ್ತಾನೆ. ಅರಮನೆಯ ಆನೆಗಳಿಗೆ ಕಿಚಡಿಯನ್ನು ತಿನ್ನಿಸುತ್ತಾರೆ. ಇದನ್ನು ತಾಮ್ರದ ಹಂಡೆಗಳಲ್ಲಿ ಬೇಯಿಸಿ ಆನೆಗಳ ಮುಂದೆಯೇ ಹೊರಕ್ಕೆ ತೆಗೆದು, ಹರಡಿ ಅದರ ಮೇಲೆ ಉಪ್ಪನ್ನೂ, ಸಕ್ಕರೆಯನ್ನೂ ಎರಚಿ ಚೆನ್ನಾಗಿ ಕಲಸುತ್ತಾರೆ. ಹೀಗೆ ಕಲಸಿದ ಮೇಲೆ ಅದನ್ನು ಎರಡು ಮಣದಷ್ಟು ತೂಕದ ಉಂಡೆಗಳನ್ನಾಗಿ ಮಾಡುತ್ತಾರೆ. ಈ ಉಂಡೆಗಳನ್ನು ತುಪ್ಪದಲ್ಲಿ ಅದ್ದಿ ಆನೆಯ ಬಾಯೊಳಗೆ ಇಡುತ್ತಾರೆ."

ಅಬ್ದುರ್ ರಜಾಕ್ ಸಾಮಾಜಿಕ ಜೀವನವನ್ನು ಮರೆತವನಲ್ಲ. ಅವನು ಅನೇಕ ಸಂಗತಿಗಳನ್ನು ಹೇಳುತ್ತಾನೆ. ತಾಂಬೂಲ ಅಥವಾ ವೀಳೆಯದ ಬಗೆಗೆ ಅವನು ಕೊಡುವ ವಿವರಗಳು ಬಹು ಕುತೂಹಲಕರವಾಗಿವೆ. ಮಧ್ಯಕಾಲೀನ ಸಾಮಾಜಿಕ ಜೀವನ ತಿಳಿಯಲು ಇವು ಪ್ರೇರಕವಾಗಿವೆ.

"ವೀಳೆಯದೆಲೆಯನ್ನು ಹಿಂದೂಸ್ಥಾನ, ಅರಬ್ಬೀದೇಶದ ಬಹುಭಾಗ ಓರ್ಮಸ್ ರಾಜ್ಯ – ಈ ಕಡೆಗಳ ಜನರು ಬಹಳ ಆಸೆಯಿಂದ ಉಪಯೋಗಿಸುತ್ತಾರೆ. ನಿಜವಾಗಿಯೂ ಅದರಲ್ಲಿ ಒಳ್ಳೆಯ ಗುಣಗಳಿರುವುದರಿಂದ ಅದಕ್ಕೆ ಇಷ್ಟು ಪ್ರಾಶಸ್ತ್ಯ. ಇದನ್ನು ಉಪಯೋಗಿಸುವ ರೀತಿ ಹೀಗಿದೆ. ಸಿಪಾರಿ (ಸುಪಾರಿ) ಎಂದು ಕರೆಯುವ ಅಡಿಕೆಯನ್ನು ಸ್ವಲ್ಪ ಜಜ್ಜಿ ಬಾಯೊಳಕ್ಕೆ ಹಾಕಿಕೊಳ್ಳುತ್ತಾರೆ. ವೀಳೆಯದೆಲೆಗೆ ಸುಣ್ಣವನ್ನು ಹಚ್ಚಿ ಸುರುಳಿಮಾಡಿ ಬಾಯಲಿಟ್ಟು ಅಗಿಯುತ್ತಾರೆ. ಒಂದೊಂದು ಸಲ ನಾಲ್ಕಾರು ಎಲೆಗಳನ್ನು ಒಟ್ಟಿಗೆ ಬಾಯಲ್ಲಿ ಹಾಕಿಕೊಂಡು ಅಗಿಯುವುದುಂಟು. ಕೆಲವು ವೇಳೆ ಪಚ್ಚ ಕರ್ಪೂರ ಸೇರಿಸಿಕೊಳ್ಳುತ್ತಾರೆ. ರಸವನ್ನು ಒಮ್ಮೊಮ್ಮೆ ಉಗಿಯುತ್ತಾರೆ. ಅದು ಕೆಂಪು ಬಣ್ಣಕ್ಕಿರುತ್ತದೆ. ವೀಳೆಯವನ್ನು ಹಾಕಿಕೊಂಡಾಗ ಮುಖವು ಬಣ್ಣವೇರಿ ತೇಜಸ್ಸು ಕಾಣಿಸುತ್ತದೆ. ದ್ರಾಕ್ಷಾರಸವನ್ನು ಕುಡಿದರೆ ಬರುವಂಥ ಅಮಲು ಬರುತ್ತದೆ. ಹೊಟ್ಟೆ ತುಂಬ ಉಂಡಾಗ ಇದನ್ನು ಹಾಕಿಕೊಂಡರೆ ಆಹಾರವನ್ನು ಜೀರ್ಣ ಮಾಡುತ್ತದೆ. ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸಿ ಹಲ್ಲುಗಳಿಗೆ ಶಕ್ತಿ ಕೊಡುತ್ತದೆ. ವೀಳೆದೆಲೆ ಎಷ್ಟು ಬಲವರ್ಧನೆ, ಎಷ್ಟು ಕಾಮೋತ್ತೇಜಕ ಎಂಬುದನ್ನು ವರ್ಣಿಸಲಾರೆ. ಬಹುಶಃ ಈ ವೀಳೆದೆಲೆಯ ಗುಣವೇ ಕಾರಣ ಇರಬೇಕು ಈ ದೇಶದ ದೊರೆ ತನ್ನ ಅಂತಃಪುರದಲ್ಲಿ ಲೆಕ್ಕವಿಲ್ಲದಷ್ಟು ಸ್ತ್ರೀಯರನ್ನು ಇಟ್ಟುಕೊಂಡಿರುವುದಕ್ಕೆ."

ಈತ ನೀಡುವ ನವರಾತ್ರಿ ಉತ್ಸವದ ಸಂದರ್ಭದಲ್ಲಿ ನಡೆಯುವ ಡೊಂಬರ ಚತುರತೆಯ ಆಟಗಳಾಗಲಿ, ಹಲವು ಬಗೆಯ ಆಚರಣೆಯ ವಿವರಗಳಾಗಲಿ, ನಮ್ಮ ಕಣ್ಣ ಮುಂದೆ ಕಟ್ಟಿ ನಿಲ್ಲುತ್ತವೆ.

ಪ್ರವಾಸಿಗರಲ್ಲಿ ದುಆರ್ತೆ ಬಾರ್ಬೋಸಾ ಮುಖ್ಯನಾದ ಮತ್ತೊಬ್ಬ ಪ್ರವಾಸಿ. ಈತ ಕ್ರಿ.ಶ. 1501ರಲ್ಲಿ ಭಾರತಕ್ಕೆ ಬಂದ. ಈತನ ಬರಹದಲ್ಲಿರುವ ದೇಶಗಳ, ಜನಗಳ ಹಾಗೂ ಅವರ ನಡೆನುಡಿಗಳ ವಿವರಗಳು ಬಹುಮುಖ್ಯವಾಗಿವೆ. ಈತ ನೀಡುವ 'ವಿಜಯನಗರ' (ಬಿಜನಗರ)ದ ಚಿತ್ರಣ ಮಾರ್ಮಿಕವಾಗಿದೆ. ಈತ ಲಿಸ್ಬನ್ ದೇಶದವನು. ಅವನು ಬರೆದದ್ದು ಪೋರ್ಚುಗೀಸ್ ಭಾಷೆಯಲ್ಲಿ. ಭೌಗೋಳಿಕ ಮತ್ತು ಮಾನವ ಕುಲಶಾಸ್ತ್ರ ದೃಷ್ಟಿಯಿಂದ ಇವನ ಬರಹಗಳು ಮಹತ್ವವಾಗಿವೆ. ಬಾರ್ಬೋಸಾನಿಗೆ ಕಂಡಿದ್ದೆಲ್ಲ ಕುತೂಹಲವೇ. ಅವನು ವಿಜಯನಗರದಲ್ಲಿ ಚಲಾವಣೆಯಲ್ಲಿದ್ದ ನಾಣ್ಯದ ಬಗೆಗೆ ಕೊಡುವ ವಿವರಗಳು ಹೀಗಿವೆ ;

"ಇಲ್ಲಿ ಪರ್ದೋ ಎಂಬ ಚಿನ್ನದ ನಾಣ್ಯ ಚಲಾವಣೆಯಲ್ಲಿದೆ. ಇದರ ಬೆಲೆ ಮುನ್ನೂರು ಮರವೆಡಿಗಳು. ಈ ನಾಣ್ಯಗಳನ್ನು ರಾಜ್ಯದ ಕೆಲವು ಊರುಗಳಲ್ಲಿ ಟಂಕ ಒತ್ತುತ್ತಾರೆ. ಇಡೀ ಇಂಡಿಯಾ ದೇಶದಲ್ಲೆಲ್ಲಾ ಈ ನಾಣ್ಯ ಚಲಾವಣೆಯಲ್ಲಿದೆ. ನಾಣ್ಯಕ್ಕೆ ಉಪಯೋಗಿಸುವ ಚಿನ್ನ ಸಾಧಾರಣವಾಗಿದೆ. ನಾಣ್ಯವು ದುಂಡಾಗಿದ್ದು ಅದನ್ನು ಅಚ್ಚಿನಿಂದ ತಯಾರಿಸುತ್ತಾರೆ. ಕೆಲವು ನಾಣ್ಯಗಳ ಒಂದು ಕಡೆ ಇಂಡಿಯಾ ಲಿಪಿಯೂ, ಮತ್ತೊಂದು ಕಡೆ ಗಂಡು ಹೆಣ್ಣಿನ ಚಿತ್ರವೂ ಇದೆ. ಮತ್ತೆ ಕೆಲವಕ್ಕೆ ಒಂದು ಕಡೆ ಲಿಪಿ ಮಾತ್ರ ಇರುತ್ತದೆ."

ಬಾರ್ಬೋಸಾ ಈ ಕಾಲದಲ್ಲಿ ಜೀವಂತವಾಗಿದ್ದ 'ಸಹಗಮನ ಪದ್ಧತಿ'ಯ ವರ್ಣನೆ ಕರಳು ಇರಿಯುತ್ತದೆ. ಸಹಗಮನಕ್ಕೆ ಒಪ್ಪದವರು ಪಡುವ ಕಷ್ಟವನ್ನು ಕುರಿತು ಬಾರ್ಬೋಸಾ ನೀಡುವ ವಿವರಗಳು ಜೀವಂತವಾಗಿವೆ.

"ಸಹಗಮನ ಮಾಡದ ಹೆಂಗಸರನ್ನು ಬಹಳ ಅಗೌರವದಿಂದ ಸಮಾಜದಲ್ಲಿ ಕಾಣಲಾಗುತ್ತಿತ್ತು. ಅವರ ತಲೆಯನ್ನು ಬೋಳಿಸಿ ಮನೆತನಕ್ಕೆ ಅಮಂಗಳವೆಂದು ಹೊರಗೆ ಅಟ್ಟುತ್ತಾರೆ. ಹೀಗೆ ಮನೆಯಿಂದ ಅಟ್ಟಲ್ಪಟ್ಟ ವಿಧವೆಯರು ದಿಕ್ಕಿಲ್ಲದೆ ಅಲೆಯುತ್ತಾರೆ. ಅತೀ ಚಿಕ್ಕ ವಯಸ್ಸಿನ ವಿಧವೆಯರ ಬಗ್ಗೆ ದಯಾ ದಾಕ್ಷಿಣ್ಯ ತೋರಿಸಿದ ಪಕ್ಷದಲ್ಲಿ, ಅವರನ್ನು ದೇವಸ್ಥಾನಗಳಿಗೆ ಕಳುಹಿಸಿ, ಅಲ್ಲಿ ದೇವಸ್ಥಾನಕ್ಕಾಗಿ ಹಣ ಗಳಿಸಲು ದೇವದಾಸಿಯಾಗಿ ಬಿಡುತ್ತಾರೆ. ದೇವದಾಸಿಯರಿರುವ ದೇವಸ್ಥಾನಗಳು ಅನೇಕ ಇವೆ. ಅಲ್ಲಿ ಐವತ್ತರಿಂದ ನೂರು ದೇವದಾಸಿಯರಿರುವುದನ್ನು ನೋಡಬಹುದು. ಮದುವೆಯಾಗದ ಕೆಲವು ಹೆಂಗಸರು ತಮ್ಮ ಆತ್ಮಸಂತೋಷದಿಂದ ದೇವದಾಸಿಯರಾಗಿರುವುದೂ ಉಂಟು. ಇವರು ನಿಗದಿಯಾದ ವೇಳೆ ದೇವರ ಮುಂದೆ ನಿತ್ಯವೂ ಕುಣಿದು ಹಾಡುತ್ತಾರೆ. ಉಳಿದ ವೇಳೆಯನ್ನು ತಮಗಿಷ್ಟ ಬಂದ ರೀತಿಯಲ್ಲಿ ಕಳೆಯುತ್ತಾರೆ."

ಬಾರ್ಬೋಸಾ ಸಿಡಿಯಾಡುವ ಆಚರಣೆಯನ್ನು ಬೇಟೆಯಾಡುವ ವಿವರಗಳನ್ನು ನೀಡಿದ್ದಾನೆ. ಅವನು ನೀಡಿರುವ ವಿವರಗಳು ಸಮಕಾಲೀನ ಆಚರಣೆಯ ಜತೆಗೆ ತುಲನೆ ಮಾಡಿ ನೋಡಲು ಅವಕಾಶಗಳಿವೆ.

ಅಬ್ದುರ್ ರಜಾಕ್ ಮತ್ತು ಬಾರ್ಬೋಸಾ ನಂತರ ಬಂದವರಲ್ಲಿ ಡೊಮಿನಿಗೊ ಪಯಾಸ್ ಪ್ರಮುಖ ಪ್ರವಾಸಿಗ. ಈತ ಕ್ರಿ.ಶ. 1520 ರಲ್ಲಿ ವಿಜಯನಗರಕ್ಕೆ ಬಂದ. ಈತ ಪೋರ್ಚುಗೀಸ್ ಭಾಷೆಯಲ್ಲಿ ತನ್ನ ಪ್ರವಾಸ ಕಥನವನ್ನು ಬರೆದಿದ್ದಾನೆ. ವಿಜಯನಗರದ ರಾಜಧಾನಿಯ ವರ್ಣನೆ, ಅಲ್ಲಿ ಉತ್ಪನ್ನಗೊಳ್ಳುವ ವಸ್ತುಗಳ ಬಗೆಗೆ, ಅಲ್ಲಿ ಆಚರಿಸಲಾಗುತ್ತಿದ್ದ ಆಚರಣೆಗಳ ಬಗೆಗೆ ಎಷ್ಟೆಷ್ಟೊ ಕುತೂಹಲಕರ ವರ್ಣನೆಗಳು ಅವನ ಬರಹಗಳಲ್ಲಿ ಇವೆ. ಕೃಷ್ಣದೇವರಾಯನನ್ನು ಪಯಾಸ್ ಹಲವಾರು ಸಲ ಕಂಡು ಅವನ ಕಾಲದ ನಡೆನುಡಿಗಳ ಬಗ್ಗೆಯೂ ಬರೆದಿದ್ದಾನೆ.

"ಈ ರಾಜನಿಗೆ ಪ್ರತಿದಿನ ಬೆಳಗಾಗುವ ಮುನ್ನ ಮುಕ್ಕಾಲು ಲೋಟ ಎಳ್ಳೆಣ್ಣೆ ಕುಡಿಯುವ ರೂಢಿಯಿದೆ. ಮತ್ತು ಅದೇ ಎಣ್ಣೆಯನ್ನು ತನ್ನ ದೇಹಕ್ಕೆಲ್ಲ ಹಚ್ಚಿಕೊಳ್ಳುತ್ತಾನೆ. ತನ್ನ ಟೊಂಕವನ್ನು ಒಂದು ಚಿಕ್ಕ ಅರಿವೆಯಿಂದ ಸುತ್ತಿಕೊಂಡು ತನ್ನ ತೋಳುಗಳಿಗೆ ಮಣ್ಣಿನಿಂದ ಮಾಡಿದ ದೊಡ್ಡ ಭಾರಗಳನ್ನು ಕಟ್ಟಿಕೊಂಡು ಕತ್ತಿಯನ್ನು ತೆಗೆದುಕೊಂಡು ಎಲ್ಲ ಎಣ್ಣೆ ಬಸಿದು ಹೋಗುವವರೆಗೆ ಅದರೊಂದಿಗೆ ವ್ಯಾಯಾಮ ಮಾಡುತ್ತಾನೆ. ಮತ್ತು ತನ್ನ ಪೈಲ್ವಾನರಲ್ಲೊಬ್ಬನೊಂದಿಗೆ ಕುಸ್ತಿ ಆಡುತ್ತಾನೆ. ಈ ಪರಿಶ್ರಮದ ನಂತರ ಅವನು ಕುದುರೆಯೇರಿ ಬಯಲಿನಲ್ಲಿ ಅತ್ತಿಂದಿತ್ತ ನಾಗಾಲೋಟದ ಸವಾರಿ ಮಾಡುತ್ತಾನೆ. ಆಮೇಲೆ ಅವನು ಮೈ ತೊಳೆದುಕೊಳ್ಳಲು ಹೋಗುತ್ತಾನೆ. ಮತ್ತು ಅವನು ಪವಿತ್ರನೆಂದು ಪರಿಗಣಿಸುವ ಅವನ ಬಲು ಪ್ರೀತಿಯವನಾದ ಮತ್ತು ಬಹಳ ಧನಿಕನಾದ ಬ್ರಾಹ್ಮಣನೊಬ್ಬ ಅವನ ಮೈ ತೊಳೆಯುತ್ತಾನೆ. ಸ್ನಾನವಾದ ಮೇಲೆ ಅವನು ಅರಮನೆಯೊಳಗೆ ತನ್ನ ಗುಡಿಯಿರುವಲ್ಲಿಗೆ ಹೋಗಿ ಪದ್ಧತಿಯಂತೆ ತನ್ನ ಪ್ರಾರ್ಥನೆ ಮತ್ತು ವ್ರತಾಚರಣೆ ಮಾಡುತ್ತಾನೆ."

ಇಲ್ಲಿಯ ಚಿತ್ರಣ ಕೇವಲ ರಾಜನಿಗೆ ಮಾತ್ರ ಸಂಬಂಧಿಸಿದ ಆ ಕಾಲದ 'ಕುಸ್ತಿ'ಯ ವಿವರಗಳನ್ನು ಸೂಚ್ಯವಾಗಿ ತಿಳಿಸುತ್ತದೆ. ಪಯಾಸ್ 'ಸಂಜೆ ಸಂತೆ'ಯ ವಿವರಗಳನ್ನು ನೀಡಿದ್ದಾನೆ. ಅದು ನಮಗೆ ತಾಲ್ಲೂಕಿನಲ್ಲಿ ನಡೆಯುವ ವಿವರಗಳಿಂತಿವೆ.

"ಅಲ್ಲಿ ನೀವು ಪ್ರತಿ ಸಂಜೆ ಸಂತೆಯೊಂದನ್ನು ನೋಡುವಿರಿ. ಅದರಲ್ಲಿ ಅವರು ಅನೇಕ ಸಾಮಾನ್ಯ ಕುದುರೆಗಳನ್ನು ಮತ್ತು ತಟ್ಟು ಕುದುರೆಗಳನ್ನು ಹಾಗೂ ಅನೇಕ ಜಂಬೀರಗಳನ್ನು, ನಿಂಬೆಹಣ್ಣುಗಳನ್ನು, ಕಿತ್ತಲೆಗಳನ್ನು, ದ್ರಾಕ್ಷಿಗಳನ್ನು ಮತ್ತು ಪ್ರತಿಯೊಂದು ತರಹದ ಕಾಯಿಪಲ್ಯೆ ಮತ್ತು ಹಣ್ಣು ಹಂಪಲವನ್ನು ಮತ್ತು ಕಟ್ಟಿಗೆಯನ್ನು ಮಾರುತ್ತಾರೆ."

ಪಯಾಸ್ ಕುರಿ ಮಾರುವ ಸ್ಥಳಗಳನ್ನು, ಕುರಿಗಳ ಕಸಾಯಿಖಾನೆಯನ್ನು ಕುರಿತು ಬರೆಯುವ ಭಾಗಗಳು 'ಸಾಮಾಜಿಕ ಜೀವನ'ದ ಜೀವಂತ ಭಾಗಗಳೇ ಆಗಿವೆ. ಬಾರ್ಬೋಸಾ ನವರಾತ್ರಿ ಉತ್ಸವದ ಬಗ್ಗೆ ನೀಡಿರುವ ವರ್ಣನೆ ಕ್ವಚಿತ್ತವಾಗಿದೆ. ಆದರೆ, ಪಯಾಸ್ ನವರಾತ್ರಿ ಉತ್ಸವ ಕುರಿತು ನೀಡಿರುವ ವಿವರಗಳು ಮನೋಜ್ಞವಾಗಿವೆ. ಪ್ರತಿದಿನವೂ ನಡೆಯುವ ವಿವರಗಳನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾನೆ. ಆ ಚಿತ್ರಣವೂ ದೀರ್ಘವೂ ಸಮಕಾಲೀನ ವಿವರಗಳನ್ನು ಒಳಗೊಂಡಿದ್ದು ಆಗಿದೆ. ಪಯಾಸ್ ಮಹಾಶಯ ವರ್ತಕ, ಬ್ರಾಹ್ಮಣರ ಬಗೆಗೆ ಕೊಡುವ ಸಾಮಾಜಿಕ ವಿವರಗಳು ಐತಿಹಾಸಿಕ ವಿವರಗಳಿಗೆ ಪೂರಕವಾಗಿರುವುದನ್ನು ನಾವು ಗಮನಿಸಬಹುದು.

ವಿದೇಶಿ ಪ್ರವಾಸಿಗರಲ್ಲಿ 16ನೇ ಶತಮಾನದ ಪೂರ್ವಾರ್ಧದಲ್ಲಿ ಬಂದ ನ್ಯೂನಿಜ್ ಪ್ರವಾಸಿ ಬರೆದ ಪ್ರವಾಸ ಕಥನವು ಅಬ್ದುರ್ ರಜಾಕ್, ಬಾರ್ಬೋಸಾ, ಪಯಾಸ್ ಇವರೆಲ್ಲರ ಬರಹಗಳಿಗಿಂತ ಬಹುದೀರ್ಘವಾಗಿದೆ. ಅವನು ರಾಜ, ರಾಜನ ಆಡಳಿತ, ಸುತ್ತಮುತ್ತಣ ಜನಜೀವನ, ಸಾಂಸ್ಕೃತಿಕ ಸಂತಿಗಳನ್ನು ವಿವರವಾಗಿ ನೀಡಿದ್ದಾನೆ. ವಿಜಯನಗರ ಸಮಕಾಲೀನ ಸಮಾಜೋ–ರಾಜಕೀಯ ಸಂಗತಿಯಗಳನ್ನು ಕುರಿತು ಇವನು ನೀಡಿರುವಷ್ಟು ವಿವರಗಳು ಬೇರೆ ಯಾವ ಪ್ರವಾಸಿಗನೂ ನೀಡಿಲ್ಲದಿರುವುದು ಅವನ ವೈಶಿಷ್ಟ್ಯವಾಗಿದೆ. ಈತ ಕುಶಲ ರಾಜತಾಂತ್ರಿಕ. ಅವನ ಬರಹಗಳಲ್ಲಿ ಕಾಣಿಸುವ ರಾಜತಾಂತ್ರಿಕ ವಿವರಗಳು ನ್ಯೂನಿಜ್‌ನ ಮನೋಭಾವನೆಯನ್ನು ಪ್ರತಿಬಿಂಬಿಸುತ್ತವೆ. ಅವನು ಇಪ್ಪತ್ತೆರಡು ಅಧ್ಯಾಯಗಳಲ್ಲಿ ನಡೆಯುತ್ತಿದ್ದ ದುಷ್ಟಕೂಟಗಳು, ಕುಟಿಲೋಪಾಯಗಳು, ಮಂತ್ರಿ, ಸಾಮಂತ, ಡಣ್ಣಾಯಕರ ಮನೋಭಾವಗಳನ್ನೂ ಬಹು ವಿವರವಾಗಿ ನ್ಯೂನಿನ್ ವರ್ಣಿಸಿದ್ದಾನೆ. ಅವನು ನೀಡಿರುವ ವಿವರಗಳು ಚಾರಿತ್ರಿಕ ಸಂಗತಿಗಳಾಗಿರುವುದನ್ನು ವಿದ್ವಾಂಸರು ಒಪ್ಪಿದ್ದಾರೆ. ರಾಜನ ಊಟದ ವಿವರ ಕುತೂಹಲಕಾರಿಯಾಗಿದೆ.

"ತನ್ನ ಸ್ವಂತ ಸೇವೆಗಾಗಿ ಅವನು ಹತ್ತು ಜನ ಅಡುಗೆಯ ಸ್ತ್ರೀಯರನ್ನು ಮತ್ತು ತಾನು ಔತಣ ಕೊಟ್ಟ ಸಂದರ್ಭಗಳಿಗಾಗಿ ಕಾಯ್ದಿಟ್ಟ ಇತರರನ್ನು ಹೊಂದಿದ್ದಾನೆ. ಈ ಹತ್ತು ಜನ ರಾಜನನ್ನು ಬಿಟ್ಟು ಬೇರಾರಿಗೂ ಅಡುಗೆ ಮಾಡುವುದಿಲ್ಲ. ಅಡುಗೆ ಮನೆಯ ಬಾಗಿಲಿಗೆ ಅವನು ಒಬ್ಬ ಬೀಜವೊಡೆದ ಪುರುಷನನ್ನು ರಕ್ಷಕನನ್ನಾಗಿ ಇರಿಸುತ್ತಾನೆ. ಅವನು ವಿಷದ ಭಯದಿಂದಾಗಿ ಯಾರಿಗೂ ಒಳಗೆ ಪ್ರವೇಶಿಸಲು ಕೊಡುವುದಿಲ್ಲ. ರಾಜ ಉಣ್ಣ ಬಯಸಿದಾಗ ಪ್ರತಿ ವ್ಯಕ್ತಿಯೂ ಹೊರಟು ಹೋಗುತ್ತಾನೆ. ಮತ್ತು ತಮ್ಮ ಕರ್ತವ್ಯವಾಗಿದ್ದ ಕೆಲವು ಸ್ತ್ರೀಯರು ಬರುತ್ತಾರೆ. ಮತ್ತು ಊಟಕ್ಕೆ ಸಿದ್ಧಗೊಳಿಸುತ್ತಾರೆ. ಅವರು ಅವನಿಗಾಗಿ ಬಂಗಾರದಿಂದ ಮಾಡಿದ, ದುಂಡಗಿನ, ಮೂರು ಕಾಲಿನ ಮಣೆಯನ್ನು ಇಟ್ಟು ಅದರ ಮೇಲೆ ಭಕ್ಷ್ಯಗಳನ್ನು ಇಡುತ್ತಾರೆ. ಇವುಗಳನ್ನು ದೊಡ್ಡ ಬಂಗಾರದ ಪಾತ್ರೆಗಳಲ್ಲಿ ತರಲಾಗುತ್ತದೆ. ಮತ್ತು ಚಿಕ್ಕ ಭಕ್ಷ್ಯಗಳನ್ನು ಬಂಗಾರದ ಬೋಗಾಣಿಗಳಲ್ಲಿ ತರಲಾಗುತ್ತದೆ. ಅವುಗಳಲ್ಲಿ ಕೆಲವೊಂದನ್ನು ಬೆಲೆಯುಳ್ಳ ಹರುಳುಗಳಿಂದ ಅಲಂಕರಿಸಲಾಗುತ್ತದೆ."

"ಮೇಜಿನ ಮೇಲ ಅರಿವೆ ಇರುವುದಿಲ್ಲ. ಆದರೆ, ರಾಜ ಊಟ ಮುಗಿಸಿದಾಗ ಒಂದನ್ನು ತರಲಾಗುತ್ತದೆ. ಮತ್ತು ಅವನು ತನ್ನ ಕೈಗಳನ್ನು ಮತ್ತು ಬಾಯಿಯನ್ನು ತೊಳೆದುಕೊಳ್ಳುತ್ತಾನೆ. ಸ್ತ್ರೀಯರು ಮತ್ತು ಬೀಜವೊಡೆದ ಪುರುಷರು ಅವನಿಗೆ ಊಟ ಬಡಿಸುತ್ತಾರೆ."

ವಿಜಯನಗರದ ಪೂರ್ವೋತ್ತರ ಇತಿಹಾಸವನ್ನು ಕಟ್ಟಿಕೊಟ್ಟ ಪ್ರವಾಸಿಗರ ಈ ಬರಹಗಳು ಅಪೂರ್ವ ಕಥನಗಳಾಗಿರುವುದು ಒಂದು ವಿಶೇಷ. ಬರಹಗಳ ಮೂಲಕ ಕರ್ನಾಟಕವನ್ನು ಅದರ ಮೂಲಕ ವಿಜಯನಗರ ಅಥವಾ ಹಂಪೆಯನ್ನು ತಿಳಿಯುವುದಕ್ಕೆ ಸಹಾಯಕವಾಗಿದೆ.

10. ವಿಜಯನಗರ ಕಾಲದ ಜಾತಿವ್ಯವಸ್ಥೆ (ದಾಸ ಸಾಹಿತ್ಯವನ್ನು ಅನುಲಕ್ಷಿಸಿ)

– ಡಾ. ಬಿ.ವಿ. ನಾಗವೇಣಿ

ಕನಕದಾಸರು 12ನೇ ಶತಮಾನದ ನಂತರ ಕರ್ನಾಟಕ ಕಂಡ ಭಾರತೀಯ ಸಮಾಜ ಮತ್ತು ಜಾತಿವ್ಯವಸ್ಥೆಯನ್ನು ಭಾರತೀಯ ಮೂಲಭೂತವಾದಿ ಶ್ರೇಣಿಕೃತ ವ್ಯವಸ್ಥೆಯನ್ನು ತಮ್ಮ ಕೀರ್ತನೆಗಳ ಮೂಲಕ ಓರೆಗೆ ಹಚ್ಚಿದವರು.

ಭವ್ಯ–ಸುಂದರ–ವೈಭವದ ಸಾಮ್ರಾಜ್ಯವೆಂದು ಇತಿಹಾಸಕಾರರಿಂದ ಕರೆಸಿಕೊಂಡ ವಿಜಯನಗರ ಸಾಮ್ರಾಜ್ಯದ ನಿಜವಾದ ಭವ್ಯತೆ ಸುಂದರತೆಯ ಹಾಗೂ ಅದರ ಉಜ್ವಲವಾದ ಸಂಸ್ಕೃತಿಯನ್ನು ನಿರ್ದಿಷ್ಟವಾಗಿ ಅರ್ಥಮಾಡಿಕೊಳ್ಳಲು ಅಂದಿನ ಕಾಲದಲ್ಲಿ ಜಾತಿವ್ಯವಸ್ಥೆ ಹಾಗೂ ಅದರ ವಿವಿಧ ಸ್ತರಗಳ ಅಧ್ಯಯನವು ಅತ್ಯವಶ್ಯಕವೆನ್ನಿಸುತ್ತದೆ. ವಿಜಯನಗರದಲ್ಲಲ್ಲದೆ ಭರತ ಖಂಡದಲ್ಲಿ ಜಾತಿಯು ಸಮಾಜದ ಮೂಲಭೂತ ಹಾಗೂ ವಿಶಿಷ್ಟವಾದ ಸಂಸ್ಥೆಯಾಗಿ ಬೆಳೆದು ಬಂದಿದೆ ಎಂದರೆ ತಪ್ಪಾಗದು. ವಿಜಯನಗರ ಸಾಮ್ರಾಜ್ಯದಲ್ಲಿ ಜಾತಯು ಸಾಮ್ರಾಜ್ಯದ ಹಾಗೂ ಸಮಾಜದ ವಿಶಿಷ್ಟ ಸಂಸ್ಥೆಯಾಗಿತ್ತೆಂದು ಹೇಳಿದರೆ ತಪ್ಪಗಲಾರದು.

ಜಾತಿಪದ್ಧತಿಯು ವಿಜಯನಗರ ಸಾಮ್ರಾಜ್ಯದಾದ್ಯಂತ ಸಾಮಾಜಿಕ ಸಂಘಟನೆಯ ಎಲ್ಲಾ ಮೂಲಗಳಲ್ಲಿಯೂ ತನ್ನದೆ ಆದ ರೀತಿಯಲ್ಲಿ ಆಕ್ರಮಿಸಿಕೊಂಡಿತು (ಇಂದು ಅಂದಿಗಿಂತಲೂ ಹೆಚ್ಚಾಗಿಯೇ ಆಕ್ರಮಿಸಿಕೊಳ್ಳುತ್ತಿದೆ). ಅಂದಿನ ಇತಿಹಾಸಕ್ಕೆ ಸಂಬಂಧಿಸಿದ ಏನೆಲ್ಲ ದಾಖಲೆಗಳು ದೊರಕಿದರೂ ಸಹ ಅಂದಿನ ಸಾಮಾಜಿಕ ವ್ಯವಸ್ಥೆಯಲ್ಲಿ, ಜಾತಿಯಿಂದ ಪ್ರಭಾವಿತವಾಗಿರುವ ಅಂಶಗಳು ವಿರಳವೆಂದೇ ಹೇಳಬಹುದು. ಜನರು ಆಚರಿಸಿಕೊಂಡುಬರುತ್ತಿದ್ದ ಸಂಪ್ರದಾಯಗಳು ಹಬ್ಬ, ಹರಿದಿನ, ಜಾತ್ರೆ, ಉತ್ಸವ ಮುಂತಾದವುಗಳು ಹೇಗೆ ತಮ್ಮ ಜೀವನದಲ್ಲಿ ಮಹತ್ವದ ಸ್ಥಾನವನ್ನು ಹೊಂದಿವೆಯೋ ಹಾಗೆಯೇ ಸಾಮಾಜಿಕ ವ್ಯವಸ್ಥೆಯ ಅಂತ್ಯ ಎಲ್ಲವೂ ಕೂಡ ಜಾತಿಯೇ ಆಗಿತ್ತೆಂದರೆ ಉತ್ಪ್ರೇಕ್ಷೆಯೆನಿಸಲಾರದೇನೋ. ಇದು ಒಂದು ರೀತಿಯಲ್ಲಿ ಹಿಂದೂ ಧರ್ಮದ ಹಕ್ಕನ್ನು ನಿರ್ಧರಿಸುತ್ತದೆನ್ನಬಹುದು. ಹಿಂದೂಧರ್ಮಿಯನು ಜನನದಿಂದ ಮರಣದವರೆಗೂ ಮತ್ತು ಆದರಾಚೆಯೂ ಕೂಡ ಜಾತಿಯ ಆಧಾರದಲ್ಲಿಯೇ ಬದುಕುವಂತಾಗಿದೆ. ಹೀಗಾಗಿ ಅಂದು ಜಾತಿಯೇ ಎಲ್ಲವನ್ನು ನಿರ್ಧರಿಸುತ್ತಿತ್ತು. ಉದಾಹರಣೆಗೆ ಒಬ್ಬ ವ್ಯಕ್ತಿ ಯಾರನ್ನು ಮದುವೆಯಾಗಬೇಕು, ಹೇಗೆ ಮದುವೆಯಾಗಬೇಕು, ಎಲ್ಲಿ ವಾಸಿಸಬೇಕು, ಹೇಗೆ ಬದುಕಬೇಕು, ಏನನ್ನು ತಿನ್ನಬೇಕು, ಹೇಗೆ ತಿನ್ನಬೇಕು, ಎಲ್ಲಿ ಕೆಲಸ ಮಾಡಬೇಕು, ಹೇಗೆ ಕೆಲಸ ಮಾಡಬೇಕು, ಎಲ್ಲಿ ಹಾಗೂ ಹೇಗೆ ಅವನು ಸಾಯಬಹುದು, ಅವನನ್ನು ಎಲ್ಲಿ ಶವಸಂಸ್ಕಾರ ಮಾಡಬೇಕು, ಹೇಗೆ ಮಾಡಬೇಕು ಹಾಗೂ ಇನ್ನೂ ಮುಂದುವರೆದು ಸಾವಿನ ನಂತರ ಅವನಿಗೆ ಏನಾಗುತ್ತದೆ ಎನ್ನುವ ಪ್ರತಿಯೊಂದು ವಿಷಯವೂ ಕೂಡ ಜಾತಿಯಿಂದಲೆ ನಿರ್ಣಯವಾಗುತ್ತಿತ್ತು. ಸಂಕ್ಷಿಪ್ತವಾಗಿ ಹೇಳುವುದಾದರೆ ವಿಜಯನಗರದರಸರ ಕಾಲದಲ್ಲಿ ಜಾತಿಯೇ ಅಂದಿನ ಜೀವನದ ಎಲ್ಲ ಅಂಶಗಳನನ್ನು ನಿರ್ಧರಿಸುತ್ತಿತ್ತೆನ್ನಬಹುದು.

ಈ ಕೆಟ್ಟ ಸಾಮಾಜಿಕ ಪಿಡುಗನ್ನು ನಿರ್ಮೂಲನೆ ಮಾಡಲು ವಿಜಯನಗರದ ಅರಸರ ಕಾಲದಲ್ಲಿಯೇ ಅಲ್ಲದೆ ಪ್ರಾಚೀನ ಕಾಲದಿಂದಲೂ ಭಾರತದಲ್ಲಿ ನಡೆದ ಕೆಲವು ಪ್ರಯತ್ನಗಳನ್ನು ಇಲ್ಲಿ ಉದಾಹರಣೆಯಾಗಿ ನೀಡಬಹುದು. ಜಾತಿಪದ್ಧತಿಯ

ವಿರುದ್ಧ ಯುದ್ಧವನ್ನೇ ಸಾರಿದವನೆಂದರೆ ಪ್ರಾಚೀನ ಧಾರ್ಮಿಕ ಹಾಗೂ ಸಾಂಸ್ಕೃತಿಕ ನಾಯಕರಲ್ಲಿ ಗೌತಮ ಬುದ್ಧನು ಮೊದಲಿಗನು. ನಂತರದಲ್ಲಿ ಬಸವ, ಅಕ್ಕಮಹಾದೇವಿ, ಪೆರಿಯಾರ್, ಅಂಬೇಡ್ಕರ್, ಲೋಹಿಯಾ, ಮಹಾತ್ಮ ಫುಲೆ ದಂಪತಿಗಳು, ಗಾಡಿಗಿಬಾಬ ಮೊದಲಾದವರು. ಆದರೆ ಇವರ ಕ್ರಾಂತಿ ಪ್ರಯತ್ನಗಳೆಲ್ಲವೂ ಕೂಡ ಇಂದಿಗೆ ಹೋಲಿಸಿ ನೋಡಿದರೆ ಸಂಪೂರ್ಣ ವ್ಯರ್ಥವಾಗಿ, ಶೂನ್ಯರೂಪ ದಲ್ಲಿ ಕಾಣಿಸುತ್ತದೆ.

ವಿಜಯನಗರದ ಅರಸರ ಕಾಲದಲ್ಲಿಯೂ ಜಾತಿ ಜಾತಿಗಳ ಅರಿವು ಮೂಡಿಸಲು, ಜಾತಿ ನಿರ್ಮೂಲನೆ ಮಾಡಲು ದಾಸರುಗಳು ತಮ್ಮ ಕೀರ್ತನೆಗಳ ಮೂಲಕ, ಸರ್ವಜ್ಞನು ತನ್ನ ವಚನಗಳ ಮೂಲಕ ಪ್ರಯತ್ನಿಸಿರುವುದು ಕಂಡುಬರುತದೆ. ಆದರೆ ಅವರ ಪ್ರಯತ್ನಗಳು ಸಹ ಬಲವಾಗಿ ಭೂಮಿಗೆ ನಾಟಿರುವ ಜಾತಿಯ ಬೇರನ್ನು ಸಡಿಲಗೊಳಿಸುವಲ್ಲಿ ಫಲಕಾರಿಯಾಗಲಿಲ್ಲ ಎನ್ನಬಹುದು. ಏಕೆಂದರೆ ಅವರ ಜಾತಿ ನಿರ್ಮೂಲನದ ಕರೆಗಳು ಕೇವಲ ಸಾಮ್ರಾಜ್ಯದ ರಾಜಧಾನಿ ಹಾಗೂ ಪ್ರಮುಖ ಪಟ್ಟಣಗಳಿಗೆ ಮಾತ್ರ ಸೀಮಿತವಾಗಿತ್ತೆನ್ನಬಹುದು. ಅಂದು ಜಾತಿಯತೆಯ ತಪ್ಪು ಕಲ್ಪನೆಯನ್ನು ಜನರಲ್ಲಿ ತಿಳಿಸಲು ಕನಕದಾಸರ ಕೀರ್ತನೆಗಳು ಹೆಚ್ಚು ಸಹಕಾರಿಯಾಗಿದೆ. ಅವರ 'ರಾಮಧಾನ್ಯ ಚರಿತ್ರೆ'ಯು ಈ ದೃಷ್ಟಿಯಲ್ಲಿ ಮೊದಲ ಸ್ಥಾನದಲ್ಲಿ ನಿಲ್ಲುತ್ತದೆ. ಅಂದು ಸಾಧು, ಸನ್ಯಾಸಿ, ದಾಸ, ಜಂಗಮ ಮುಂತಾದ ವೇಷಗಳ ಮೂಲಕ ಸಾಮ್ರಾಜ್ಯದಲ್ಲಿ ನಡೆಯುತ್ತಿರುವ ಕಪಟ ವಂಚನೆ ಅವ್ಯವಹಾರಗಳಿಗೆ ಲೆಕ್ಕವೇ ಇಲ್ಲವೆಂದು ತಾವೇ ಕಣ್ಣಾರೆ ಕಂಡು ಖಂಡಿಸಿದ್ದಾರೆ. ಇದಕ್ಕೆ ಅವರು "ಜಪವ ಮಾಡಿದರೇನು, ತಪವ ಮಾಡಿದರೇನು ಕಪಟಗುಣ ವಿಪರೀತ ಕಲುಷವಿದ್ದವರು" ಎಂದು ನೇರವಾಗಿಯೇ ಪ್ರಶ್ನಿಸುತ್ತಾರೆ. ಇನ್ನೂ ಮುಂದುವರೆದು 'ನೇಮವಿಲ್ಲದ ಹೋಮ ವೇತಕಯ್ಯ' ಎಂದು ಕೇಳುತ್ತಾ ಇಡೀ ಮನುಕುಲವನ್ನು ಸಮೃದ್ಧಿಯಿಂದ ಕಾಣುವ ಕನಕದಾಸರಿಗೆ ಮಹಮ್ಮದೀಯನಾಗಲಿ, ಲಿಂಗವಂತರಾಗಲಿ, ಬ್ರಾಹ್ಮಣರಾಗಲಿ ಬೇರೆಯಾಗಿ ಕಾಣುವುದಿಲ್ಲ. ಅದಕ್ಕೆ ಅವರು ಹೇಳಿರುವ ಕೀರ್ತನೆ ಎಂದರೆ:

ಅಲ್ಲ ಖುದಾ ಎಂಬ ಅರ್ಥವನ್ನು ಅರಿಯದೆ
ಮುಲ್ಲಾ ಶಾಸ್ತ್ರದ ನೆಲೆಯ ಮುನ್ನರಿಯದೆ
ಕಳ್ಳ ಕೂಗನೆ ಕೂಗಿ ಬೊಗಳಿ ಬಾಯ್ದೆರೆವಂತ
ಕಳ್ಳರಿಗೆ ತಾ ವೀರಸ್ವರ್ಗ ದೊರಕುವುದೆ
ಲಿಂಗಾಂಗದೊಳಗಿರುವ ಅನುಭವ ತಿಳಿಯದೆ
ಅಂಗಲಿಂಗದ ನೆಲೆಯ ಗುರುತರಿಯದೆ
ಜಂಗಮಸ್ಥಾವರದ ಹೊಲಬನರಿಯದೆ
ಇಂಥ ಭಂಗಿ ಮುಕ್ಕುಗಳೆಲ್ಲ ಲಿಂಗವಂತರಹುದೆ

ಎಂದು ಮಹಮ್ಮದೀಯರಿಗೆ ಹಾಗೂ ಲಿಂಗವಂತರಿಗೆ ಪ್ರಶ್ನೆ ಮಾಡಿದ್ದಾರೆ. ಅಂದಿನ ಸಮಾಜದಲ್ಲಿ ಇದ್ದ ಬ್ರಾಹ್ಮಣರು, ಚಿನಿವಾರರು, ಕಂಚುಗಾರರು, ತಾಮ್ರ ಮತ್ತು ಹಿತ್ತಾಳೆ ಕೆಲಸ ಮಾಡುವವರು, ಬಡಗಿಗಳು, ಕಮ್ಮಾರರು, ಕಲ್ಲುಕುಟುಕರು, ಚಿನ್ನ ಬೆಳ್ಳಿ ಕೆಲಸ ಮಾಡುವ ಅಕ್ಕಸಾಲಿಗರು, ಹೊಲೆಯರು, ಮಾದಿಗರು, ಜಾಡಮಾಲಿಗಳು, ಕೊಚ್ಚ, ಕೊರಮರು ಇನ್ನೂ ಮುಂದುವರೆದು ಗಂಡು-ಹೆಣ್ಣು, ಸಣ್ಣವ-ದೊಡ್ಡವ, ಸಿರಿವಂತ-ಬಡವ, ಉನ್ನತ ಜಾತಿ ಎಂದು ಹೇಳಿಕೊಳ್ಳುವವ, ಕೆಳಜಾತಿಯವನೆಂದು ಕರೆಸಿಕೊಳ್ಳುವವ, ಕವಿಗಳು, ವಿಜ್ಞಾನಿಗಳು, ಸನ್ಯಾಸಿ-ಬಿಕನಾಸಿ, ದೊರೆ-ಪರೆ, ಪುರೋಹಿತ, ಪಾದ್ರಿ ಇವೆರೆಲ್ಲರೂ ತಮ್ಮ ತಮ್ಮ ಕೆಲಸಗಳಲ್ಲಿ ನಿರತರಾಗಿರುವುದು ಬಟ್ಟೆಗಾಗಿ" ಎಂಬ ಒಂದೇ ಒಂದು ಪಲ್ಲವಿಯಲ್ಲಿ ನಿರೂಪಿಸುತ್ತಾರೆ. ವಿಜಯನಗರ ಸಾಮ್ರಾಜ್ಯದಲ್ಲಿಯೇ ಇದ್ದು ಅಲ್ಲಿ ನೇರವಾಗಿ ಕಂಡು ಕೇಳಿದ ಜಾತಿವ್ಯವಸ್ಥೆ ಹಾಗೂ ಕುಲಗಳ ನಡುವಿನ ಅಂತರವನ್ನು ಗಮನಿಸಿ ಅವರಾಡಿದ ಕೀರ್ತನೆ ಇಂದಿಗೂ ಮುಂದೆಯೂ ಸಹ ಪ್ರಸ್ತುತವೆನ್ನಿಸಿಕೊಳ್ಳುತ್ತದೆ. ಕುಲವನ್ನು ಕನಕದಾಸರು ಹಾಡಿದ ಮಾತೆಂದರೆ:

ಕುಲ ಕುಲ ಕುಲವೆಂದು ಹೊಡೆದಾಡದಿರಿ ನಿಮ್ಮ
ಕುಲದ ನೆಲೆಯನೇನಾದರೂ ಬಲ್ಲಿರಾ

ಹುಟ್ಟಿದ ಯೋನಿಗಳಿಲ್ಲ ಮೆಟ್ಟದ ಭೂಮಿಗಳಿಲ್ಲ
ಅಟ್ಟು ಉಣ್ಣದ ವಸ್ತುಗಳಿಲ್ಲ
ಗುಟ್ಟು ಕಾಣಿಸ ಬಂತು ಹಿರಿದೇನು ಕಿರಿದೇನು
ನೆಟ್ಟನೆ ಸರ್ವಜ್ಞನ್ನ ನೆನೆಕಂಡ್ಯ ಮನುಜ
ಜಲವೆ ಸಕಲನ ಕುಲಕ್ಕೆ ತಾಯಿಲ್ಲವೆ
ಜಲದ ಕುಲವನೇನಾದರೂ ಬಲ್ಲಿರಾ
ಜಲದ ಬೊಬ್ಬುಳಿಯಂತೆ ಸ್ಥಿರದಲ್ಲಿವೀದೇಹ
ನೆಲೆಯನ್ನರಿತು ನೀ ನೆನೆಕಂಡ್ಯ ಮನುಜ
ಹರಿಯೇ ಸರ್ವೋತ್ತಮ ಹರಿಯೆ ಸರ್ವೇಶ್ವರ
ಹರಿಮಯವೆಲ್ಲವೆನುತ ತಿಳಿದು
ಸಿರಿಕಾಗಿನೆಲೆಯಾಗಿ ಕೇಶವರಾಯನ
ಚರಣ ಕಮಲವ ಕೀರ್ತಿಸುವನೆ ಕುಲಜ

ಹೀಗೆ ಹಲವು ಕೀರ್ತನೆಗಳ ಮೂಲಕ ಮನ ಮುಟ್ಟುವಂತೆ ವ್ಯಕ್ತಪಡಿಸಿದ್ದಾರೆ. ಜಾತಿ ಜಾತಿ, ಕುಲ ಕುಲ ಎಂದು ಹೇಳುತ್ತಾ ಪರಸ್ಪರ ಕಚ್ಚಾಡುವ ಮನುಷ್ಯರನ್ನು ಈ ಪದ್ಯದಲ್ಲಿ ತರಾಟೆಗೆ ತೆಗೆದುಕೊಂಡಿದ್ದಾರೆ. ಹಾಗೆಯೇ ಹಲವಾರು ಉದಾಹರಣೆಗಳ ಮೂಲಕ ಜಾತಿಯ ಅಸ್ತಿತ್ವವನ್ನು ಅಲ್ಲಗಳೆದು ನೀರಗುಳ್ಳೆಯಂತೆ ಕ್ಷಣಕವಾದ ಈ ದೇಹವನ್ನು ನೆಚ್ಚಿದ ಭಗವಂತನನ್ನು ನೆನೆಯಬೇಕು ಎಂಬ ಸಂದೇಶವನ್ನು ಸಾರಿದ್ದಾರೆ. ಉನ್ನತ ಜಾತಿಯವರೆಂದು ಹೇಳಿಕೊಂಡು ಮಾಡಬಾರದ ಕೆಟ್ಟ ಕೆಲಸಗಳನ್ನು ಮಾಡಿ ಕೊನೆಗೆ ದೇವರಿಗೆ ಮೊರೆ ಹೋಗಿ ಏನೆಲ್ಲ ಯಜ್ಞಯಾಗಾದಿಗಳನ್ನು ಮಾಡುವವರಿಗೆ ಕನಕದಾಸರು ನೀಡಿರುವ ಚಾಟಿಯ ಏಟೆಂದರೆ:

ಕೇಶವನೊಲುಮೆಯು ಆಗುವತನಕ ಹರಿ
ದಾಸರೊಳಿರುವರು ಹೇ ಮನುಜ
ಕ್ಲೇಶ ಪಾಶಂಕಗಳ ಹರಿದು ವಿಲಾಸದಿ
ಶ್ರೀಶನ ಸುತಿಗಳ ಪೊಗಲುತ ಮನದೊಳೆ
ಮೋಸದಿ ಜೀವರ ಘಾಸಿ ಮಾಡಿದ ಪಾಪ
ಕಾಸಿಗೆ ಹೋದರೆ ಹೋದೀತೆ
ಶ್ರೀಶನ ಭಕುತರ ದೋಷಿಸಿದಾ ಫಲ
ಕಾಸು ಕೊಟ್ಟರೆ ಬಿಟ್ಟೀತೆ
ಭಾಷೆಯ ಕೊಟ್ಟು ನಿರಾಶೆ ಮಾಡಿದಾ ಫಲ
ಕ್ಲೇಶವಗೊಳಿಸದೆ ಇದ್ದೀತೆ
ಭೂ ಸುರಸ್ವವ ಹ್ರಾಸ ಮಾಡಿದ ಫಲ
ಏಸೇನು ಜನುಮಕು ಬಿಟ್ಟೀತೆ
ಜೇನನ ವಶದೊಳು ನಾನಾ ದ್ರವ್ಯವಿದೆ
ದಾನ ಧರ್ಮಕ್ಕೆ ಮನಸಾದೀತೆ
ಹೀನ ಮನುಜನಿಗೆ ಜ್ಞಾನವ ಬೋಧಿಸೆ
ಹೀನ ವಿಷಯವ ಎಳಿದ್ದೋದೀತೆ
ಮಾನಿನಿ ಮನಸು ನಿಧಾನವಿರದಿರೆ
ಮಾನಭಿಮಾನಗಳುಳಿದೀತೆ
ಭಾನು ಪ್ರಕಾಶನ ಭಜನೆಯ ಮಾಡದ
ಹೀನಗೆ ಮುಕುತಿಯು ದೊರಕೀತೆ
ಸತ್ಯಧರ್ಮಗಳ ನಿತ್ಯವು ಬೋಧಿಸೆ

ತೊತ್ತಿಗೆ ಮನಿಸಿಗೆ ಸೊಗಸೀತೆ
ತತ್ವದ ಅರ್ಥ ವಿಚಿತ್ರದಿ ಪೇಳಲು
ಕತ್ತೆಯ ಚಿತ್ತಕೆ ಹತ್ತೀತೆ
ಪುತ್ಥಲಿ ಬೊಂಬೆಯ ಚಿತ್ರದಿ ಬರೆದರೆ
ಮುತ್ತನು ಕೊಟ್ಟರೆ ನುಡಿದೀತೆ
ಕತ್ತರಿ ತಿಲಕವನೊತ್ತಿ ಪಣೆಯೊಳಗೆ
ಅರ್ತಿಯ ತೋರದೆ ಇದ್ದೀತೆ

ಹೀಗೆ ತಮ್ಮ ಹಲವು ಕೀರ್ತನೆಗಳಿಂದ ತಮ್ಮ ತಮ್ಮ ಅನಿಷ್ಟಗಳ ಬಗ್ಗೆ ಅವರಿಗೆ ಬೆಳಕನ್ನು ಹರಿಸಲು ಪ್ರಯತ್ನಿಸಿದ್ದಾರೆ. ನಾನು, ನನ್ನ ಜಾತಿ, ತನ್ನ ಮನೆತನದ ಗೌರವದ ಬಗ್ಗೆ ಪ್ರಶ್ನಿಸುತ್ತಿದ್ದಂತವರಿಗೆ:

ನಾನು ನೀನು ಎನ್ನದಿರೊ ಹೀನ ಮಾನವ
ಸ್ಥಾನದಿಂದ ನಿನ್ನ ನೀನೆ ತಿಳಿದು ನೋಡಲೂ
ಹೊನ್ನು ಹೆಣ್ಣು ಮಣ್ಣು ಮೂರು ನಿನ್ನದೇನೆಲೂ
ಅನ್ನದಿಂದ ಬಂದ ಕಾಮ ನಿನ್ನದೇನಲೂ
ಕರ್ಣದಿಂದ ಬಂದ ಘೋಷ ನಿನ್ನದೇನೆಲೂ
ನಿನ್ನ ಒಟ್ಟು ಪೋಪದೇಹ ನಿನ್ನದೇನೆಲೂ
ಹಲವು ಜನ್ಮದಿಂದ ಬಂದಿರುವೆ ನೀನೆಲೂ
ಮಗದ ಗರ್ಭದಿಂದ ಬಂದಿರುವೆ ನೀನೆಲೂ
ಜಲದ ದಾರಿಯಲ್ಲಿ ಬಂದಿರುವೆ ನೀನೆಲೂ
ಕುಲವವು ಜಾತಿ ಗೋತ್ರವುಳ್ಳವನು ನೀನೆಲೂ

ಎಂದು ಮೋಹ, ಮಮಕಾರಗಳಿಂದ ಮೆರೆಯುತ್ತಿದ್ದ ಉನ್ನತ ಜಾತಿಯವರಿಗೆ ಸೂಕ್ಷ್ಮವಾಗಿ ಹೇಳಿದ್ದಾರೆ.

ಅಂದಿನ ಸಮಾಜದಲ್ಲಿದ್ದ ಬೂಟಾಟಿಕೆಯನ್ನು ಅಲ್ಲಗಳೆಯಲು ಹರಿದಾಸರು ಹೇಳಿರುವ ಮಾತೆಂದರೆ:

ಮಡಿ ಮಡಿ ಮಡಿಯೆಂದು ಅಡಿಗಡಿಗೆ ಹಾರುವೆ
ಮಡಿ ಮಾಡುವ ಬಗೆ ಬೇರುಂಟು
ಹಸಿವಾಯಿತು ದೇವರ ತೊಳೆ ಎಂಬರು
ಹಸನಾಗಿ ಮನಮುಟ್ಟಿ ಪೂಜೆಯ ಮಾಡರು

ಈ ಮೇಲಿನ ಸಾಲಿನ ಅಂದಿನ ಸಮಾಜದಲ್ಲಿ ಇದ್ದ ಆಡಂಬರ ಭಕ್ತಿಯನ್ನು ಸೂಚಿಸಿದ್ದಾರೆ. ಈ ಮೇಲಿನ ಸಾಲುಗಳು ಅಂದಿಗಿಂತಲೂ ಇಂದಿಗೆ ಹೆಚ್ಚಿಗೆ ಅನ್ವಯಿಸುತ್ತದೆ ಎಂದರೆ ತಪ್ಪಾಗಲಾರದು.

ವಿಜಯನಗರ ಚರಿತ್ರೆಯನ್ನು ಗಮನಿಸುವುದಾದರೆ ನಮ್ಮ ಚರಿತ್ರೆಗಾರರು ಬರೆಯಲು, ಸೇರಿಸಲು ಇನ್ನಿಲ್ಲದಷ್ಟು ಹೊಗಳಿ ಬರೆದಿರುವುದು ಕಂಡುಬರುತ್ತದೆ. ಒಂದು ದೃಷ್ಟಿಯಲ್ಲಿ ಅವರು ಹೊಗಳಿರುವುದು ಸರಿಯೇ. ಆದರೆ ಸಾಮಾಜಿಕ ಜೀವನದ ಬಗ್ಗೆ, ಸಾಮಾನ್ಯ ಜನರ ಸ್ಥಿತಿಗತಿಯ ಬಗ್ಗೆ, ಆ ಜನರು ಅನುಭವಿಸುತ್ತಿದ್ದ ಜೀವನದ ಬಗ್ಗೆ ಗಮನಹರಿಸಿದರೆ ನಿಜಕ್ಕೂ ಆ ಹೊಗಳಿಕೆ ಬೇಕೆ? ಎಂಬ ಪ್ರಶ್ನೆ ಉದ್ಭವಿಸುತ್ತದೆ. "ನಡೆವುದು ಭೂಮಿ ಕುಡಿಯುವುದೊಂದೇ ನೀರು ಸುಡುವಗ್ನಿಯೊಂದೆ ಇರುತೀರಲೂ ಕುಲಗೋತ್ರ ನಡುವೆ ಎತ್ತಣದು ಸರ್ವಜ್ಞ" ಎಂಬ ಸುಂದರ ವಚನದ ಜನ್ಮ ಭೂಮಿಯಾದ ಈ ನಾಡಿನಲ್ಲಿ ಇದು ನಡೆಯಿತು. ಹಾಗಾದರೆ ದೇವ ಪುರುಷರೆಂದರೆ ಯಾರು? ದೇವರ ವರದಿಂದ ಹುಟ್ಟಿದ ಜಾತಿ ಎಂದರೆ ಯಾವುದು? ಪ್ರಪಂಚದಲ್ಲಿ ಉತ್ತಮರು, ಅಧಮರುಗಳೆಂದರೆ ಯಾರು ಎಂಬ ಪ್ರಶ್ನೆ ಪ್ರತಿಯೊಬ್ಬರಲ್ಲಿಯೂ ಮೂಡುತ್ತದೆ.

ಮಧ್ಯಯುಗದ ಜನಜೀವನವನ್ನು ಈ ಜಾತಿಪದ್ಧತಿಯು ಹೇಗೆ ಹದಗೆಡೆಸಿತ್ತು, ಅಸ್ಪೃಶ್ಯತೆಯ ಹೆಸರಿನಲ್ಲಿ ಉನ್ನತ ವರ್ಗದವರು ಹೇಗೆ ಸುಲಿಗೆ ಮಾಡುತ್ತಿದ್ದರು ಎಂಬುದನ್ನು ಅಂದಿನ ಸಮಾಜದ ಪ್ರತ್ಯಕ್ಷದರ್ಶಿಗಳಾದ ಕನಕ, ಪುರಂದರ, ಸರ್ವಜ್ಞರು ತಮ್ಮ ವಚನ, ಕೀರ್ತನೆಗಳ ಮುಖಾಂತರ ಅರಿವು ಮೂಡಿಸಿದ್ದಾರೆ.

ಸಮಾಜದಲ್ಲಿ ಹೊಲೆಯ, ಮಾದಿಗ ಎಂಬ ಜಾತಿಗಳು ಅತ್ಯಂತ ಕೆಳಮಟ್ಟದ ಜಾತಿಗಳಾಗಿದ್ದವು. ಇವರುಗಳು ಪ್ರತಿಯೊಂದು ಊರಿನಲ್ಲಿಯೂ(ಗ್ರಾಮದ ದಕ್ಷಿಣ ದಿಕ್ಕಿನಲ್ಲಿಯೇ ವಾಸಿಸುತ್ತಿದ್ದರು. ಏಕೆಂದರೆ ನಾಲ್ಕು ದಿಕ್ಕುಗಳಲ್ಲಿ ದಕ್ಷಿಣ ದಿಕ್ಕು ಅಮಂಗಳವಾದದ್ದೆಂದು ಶಾಸ್ತ್ರಗಳು ತಿಳಿಸುತ್ತವೆ. ಊರಿನ ಹೊರಗೆ ಒಟ್ಟಾಗಿ ವಾಸ ಮಾಡುತ್ತಿದ್ದರು. ಆ ಜಾಗಗಳನ್ನು ಹೊಲಗೇರಿ ಎಂದು ಕರೆಯಲಾಗುತ್ತಿತ್ತೆಂದು ಸಾಹಿತ್ಯಾಧಾರಗಳಿಂದಲೂ, ಶಾಸನಗಳಿಂದಲೂ ತಿಳಿಯಬಹುದು. ಅನೇಕ ಶಾಸನಗಳಲ್ಲಿ ಹೊಲೆಯ, ಮಾದಿಗ ಎಂಬ ಜಾತಿ ಸೂಚಕಗಳನ್ನು ಸೂಚಿಸುವ ಹೆಸರುಗಳಿರುವುದು ಕಂಡುಬರುತ್ತದೆ. ಉದಾಹರಣೆಗೆ ಹೊಲೆಯರ ಹುಳ್ಳ, ಮಾದಿಗರ ಕಂಪ ಮುಂತಾದವು). ಹಾಗೆಯೇ ಮಾತಂಗಿಯನ್ನು ಕವಿಗಳು 'ಮಾದಿಗಿತ್ತಿ' ಎಂದು ಕರೆದಿದ್ದಾರೆ. ಇಂದಿನ ಸ್ವಾತಂತ್ರ್ಯ ಭಾರತದಲ್ಲಿ ಇಷ್ಟೆಲ್ಲ ಬದಲಾವಣೆಗಳನ್ನು ಕಾಣುತ್ತಿದ್ದರೂ ಸಹ ಜಾತಿವ್ಯವಸ್ಥೆಯಲ್ಲಿ (ಆಚರಿಸುವಲ್ಲಿ) ಹೆಚ್ಚಿನ ಬದಲಾವಣೆ ಕಾಣುತ್ತಿದೆ ಎನ್ನಬಹುದು. ಏನೆಲ್ಲಾ ಕಾನೂನುಗಳಿದ್ದರೂ ಸಹ ಇಂದಿಗೂ ಪ್ರತಿಯೊಂದು ಹಳ್ಳಿಗಳಲ್ಲಿಯೂ ಹೊಲಗೇರಿ ಎಂಬುವುದು ಊರಿನಿಂದ ಆಚೆ ಇರುವುದು ಕಂಡುಬರುತ್ತದೆ. ಇಂದೂ ಈ ಸ್ಥಿತಿ ಇರುವಾಗ ಇನ್ನೂ ಅಂದಿನ ಸ್ಥಿತಿಯನ್ನು ಊಹಿಸಲು ಸಾಧ್ಯವೇನ್ನಬಹುದಲ್ಲವೆ? ವಿಜಯನಗರದ ಕಾಲದಲ್ಲಿ ಹೊಲೇರ ಹಟ್ಟಿ, ಮಾದಿಗರ ಹಟ್ಟಿಗಳೆಂದು ಕರೆಯುವ ಕೇರಿಗಳಿದ್ದವೆಂದು ಅನೇಕ ಶಾಸನಗಳು ತಿಳಿಸುತ್ತವೆ (ಉದಾಹರಣೆ 1205ರ ಶಾಸನ ಹಾಗೂ 1430ರ ಶಾಸನಗಳು ಈ ಹೊಲೆಯ ಹಾಗೂ ಮಾದಿಗರ ಮೇಲೆ ತೆರಿಗೆ ವಿಧಿಸದ ಬಗ್ಗೆ ಬೆಳಕು ಚೆಲ್ಲುತ್ತವೆ).

"ಊರು ಅಂದ ಮೇಲೆ ಹೊಲಗೇರಿ ಇರಲೇಬೇಕು", "ಊರು ಹೊಲಗೇರಿ ಒಂದು ಮಾಡಿಬಿಟ್ಟ" ಎನ್ನುವ ನಾಣ್ಣುಡಿಗಳು ಇಂದಿಗೂ ಪ್ರಚಲಿತವಾಗಿವೆ, ಇದಕ್ಕೆ ನಿದರ್ಶನವಾಗಿವೆ. ಅಂದಿನ ಕಾಲದಲ್ಲಿ ಈ ಹೊಲೆಯ ಮತ್ತು ಮಾದಿಗರುಗಳನ್ನು ಪಶುಗಳಿಗಿಂತಲೂ ಹೀನಾಯವಾಗಿ ನೋಡಿಕೊಳ್ಳಲಾಗುತ್ತಿತ್ತು ಇದಕ್ಕೆ ನಿದರ್ಶನವೆಂದರೆ ಕನಕದಾಸರು ತಮ್ಮ "ರಾಮಧಾನ್ಯ ಚರಿತೆ"ಯೂ ಇದನ್ನೇ ಪ್ರಸ್ತಾಪಿಸಿರುವುದು ಈ ಕೀರ್ತನೆಯಲ್ಲಿ ಬರುವ ರಾಗಿ ಮತ್ತು ಭತ್ತದ ಪಾತ್ರ ಅಂದಿನ ಸಮಾಜದ ಸಾಮಾಜಿಕ ಸ್ಥಿತಿಯನ್ನು ಕುರಿತು ಚರ್ಚಿಸುತ್ತದೆ.

ಮಾನವೀಯತೆ ಇದೆ. ಬದುಕುತ್ತಿರುವ ಪರಿಸರ ಹಾಗೂ ಅಜ್ಞಾನರಾಗಿರುವುದೇ ಅವರ ಹೀನ ಬದುಕಿಗೆ ಕಾರಣವೇ ಹೊರತು ಅವರಿಗೂ ಮಾನವೀಯತೆ ಇದೆ. ಉತ್ತಮ ಜೀವನ ನಡೆಸಲು ಅವರೂ ಅರ್ಹರು ಎಂಬುದನ್ನು ಸಾಂಕೇತಿಕವಾಗಿ ಈ ಕೃತಿ ತೋರಿಸುತ್ತದೆ. ಕ್ರಿ.ಶ.ಹದಿನಾರನೆಯ ಶತಮಾನದಲ್ಲೇ ಇದ್ದ ಈ ಶೂದ್ರ ಬ್ರಾಹ್ಮಣ ಪ್ರಜ್ಞೆಯು ನಮ್ಮಲ್ಲಿ ಇಂದು ಬೇರೆ ಬೇರೆ ರೂಪಗಳಖನ್ನು ಪಡೆದು ವ್ಯಾಫ್ರವಾಗಿ ಬೆಳೆದಿರುವುದುರಿಂದ ರಾಮಧಾನ್ಯ ಚರಿತೆಯ ದೃಷ್ಟಿ ನಮಗೆ ಪದೇ ಪದೇ ಬೇಕಾಗುತ್ತಲೇ ಇರುತ್ತದೆ.

ವಿದೇಶಿ ಪ್ರವಾಸಿಗರಾದ ಬಾರ್ಬೊಸ್, ನ್ಯೂನಿಜ್, ಪಾಯೇಸ್, ಅಬ್ದುಲ್ ರಜಾಕ್, ನಿಕೋಲೋಕಾಂಟಿ ಮುಂತಾದವರುಗಳು ವಿಜಯನಗರ ಸಾಮ್ರಾಜ್ಯವನ್ನು ಮುಕ್ತಕಂಠದಿಂದ ಹೊಗಳಿರುವುದು ಸತ್ಯಾಂಶ ಕೂಡ. ಆದರೆ ಅವರ ಬರವಣಿಗೆಯಿಂದ ಕಂಡುಬರುವುದು ಕೇವಲ ಶ್ರೀಮಂತ ವರ್ಗದವರ ಬದುಕುವ ಶೈಲಿ ಮಾತ್ರವೇ ಹೊರತು, ಸಾಮಾನ್ಯ ಜನರ ಜೀವನ ಕಂಡುಬರುವುದಿಲ್ಲ.

ಹದಿನೈದನೆ ಶತಮಾನದ ವಿಜಯನಗರ ಸಾಮ್ರಾಜ್ಯ ವೈಭವದ ತುತ್ತತುದಿಯಲ್ಲಿದ್ದಾಗ ಆರ್ಥಿಕ, ಸಾಮಾಜಿಕ, ಧಾರ್ಮಿಕ ಕಾರಣಗಳಿಗಾಗಿ ಜಾತಿವ್ಯವಸ್ಥೆ ಇನ್ನು ಹೆಚ್ಚು ಹೆಚ್ಚು ಜಟಿಲವಾಗ ತೊಡಗಿತು. ವಿಜಯನಗರ ಪತನ ನಂತರ ಬಂದಂತಹ ಪಾಳೆಯಗಾರರು ಮತ್ತು ಮೈಸೂರು ಒಡೆಯರ ಆಳ್ವಿಕೆಯಲ್ಲಿ ಇದು ವಿಭಿನ್ನ ರೂಪಗಳನ್ನು ಪಡೆದು ಇನ್ನು ಅಧಿಕ ಜಟಿಲವಾಯಿತು. ಇದರ ಕುರಿತು ವಿಸ್ತೃತವಾದ ಅಧ್ಯಯನ ಇನ್ನು ಆಗಬೇಕಾದದ್ದೇ ಆಗಿದೆ.

11. ಹಗರಿಬೊಮ್ಮನಹಳ್ಳಿ ತಾಲೂಕಿನ ವಿಜಯನಗರ ಕಾಲದ ಶಾಸನಗಳು

– ಮಂಜನಾಯ್ಕ ಆರ್.

ದಖ್ಖನ್‌ಪ್ರಸ್ಥಭೂಮಿಯ ದಕ್ಷಿಣ ಭಾಗದಲ್ಲಿಯೂ ಕರ್ನಾಟಕದ ಮಧ್ಯಭಾಗದ ಬಯಲು ಸೀಮೆಯಲ್ಲಿಯೂ ನೆಲೆಗೊಂಡಿರುವ ಹಗರಿಬೊಮ್ಮನಹಳ್ಳಿ ತಾಲೂಕು ಬಳ್ಳಾರಿ ಜಿಲ್ಲೆಯ ಒಂದು ತಾಲೂಕು ಕೇಂದ್ರ. ಇದು ಬಳ್ಳಾರಿಯಿಂದ ಸುಮಾರು 102 ಕಿ.ಮೀ. ದೂರದಲ್ಲಿದೆ. ಈ ತಾಲೂಕನ್ನು ಉತ್ತರದಲ್ಲಿ ಕೊಪ್ಪಳ ಜಿಲ್ಲೆ, ಪೂರ್ವದಲ್ಲಿ ಹೊಸಪೇಟೆ ಕೂಡ್ಲಿಗಿ, ದಕ್ಷಿಣದಲ್ಲಿ ಹರಪನಹಳ್ಳಿ, ಪಶ್ಚಿಮದಲ್ಲಿ ಹೂವಿನ ಹಡಗಲಿ ತಾಲೂಕುಗಳು ಸುತ್ತುವರಿದಿವೆ. ಈ ತಾಲೂಕಿನಲ್ಲಿ ಕೋಗಳಿ, ತಂಬ್ರಹಳ್ಳಿ, ಹಂಪಾಪಟ್ಟಣ, ಮತ್ತು ಹಗರಿಬೊಮ್ಮನಹಳ್ಳಿ ಎಂಬ ನಾಲ್ಕು ಪ್ರಮುಖ ಹೋಬಳಿ ಕೇಂದ್ರಗಳಾಗಿವೆ. ತಾಲೂಕಿನ ಉತ್ತರದಲ್ಲಿ ತುಂಗಭದ್ರಾ ನದಿ ಮತ್ತು ತುಂಗಭದ್ರಾ ಜಲಾಶಯದ ಹಿನ್ನೀರು ಹರಡಿದ್ದು, ತಾಲೂಕು ಗಡಿಯಾಗಿ ಕೊಪ್ಪಳ ಜಿಲ್ಲೆಯನ್ನು ಇಲ್ಲಿಂದ ಬೇರ್ಪಡಿಸಿದೆ. ಚಿಕ್ಕಹಗರಿ ಈ ತಾಲೂಕಿನ ಮುಖ್ಯನದಿ. ಇದು ದಕ್ಷಿಣದಿಂದ ಉತ್ತರಾಭಿಮುಖವಾಗಿ ಹರಿದು ತುಂಗಭದ್ರಾನದಿಯನ್ನು ಸೇರಿಕೊಳ್ಳುತ್ತದೆ. ಇದು ಸಮುದ್ರ ಮಟ್ಟದಿಂದ 513 ಮೀಟರ್ ಎತ್ತರದಲ್ಲಿದ್ದು, 750–400 ಮತ್ತು 770–110 ರೇಖಾಂಶ ಮತ್ತು 140–130 ಮತ್ತು 150–500 ಅಕ್ಷಾಂಶದ ಮಧ್ಯೆ ಇರುವ ಬಳ್ಳಾರಿ ಜಿಲ್ಲೆಯಲ್ಲಿ ಈ ತಾಲೂಕು ವಿಸ್ತರಿಸಿದೆ.[1] ಕೆಲವೆಡೆ ಕಲ್ಲುಗುಂಡು ಬಂಡೆಗಳ ಗುಡ್ಡಗಳಿವೆ. ಅಷ್ಟೇನು ದಟ್ಟವಲ್ಲದ ಸ್ವಲ್ಪ ಅರಣ್ಯ ಪ್ರದೇಶವಿದೆ. ಉಳಿದಂತೆಲ್ಲ ಬಯಲು ಸೀಮೆಯೇ ಆಗಿದೆ.

ತಾಲೂಕಿನ ಹಂಪಸಾಗರದಲ್ಲಿ ನೂತನ ಶಿಲಾಯುಗ ಸಂಸ್ಕೃತಿಯ ಅವಶೇಷಗಳು[2] ಮತ್ತು ಬೃಹತ್ ಶಿಲಾಯುಗ ಸಂಸ್ಕೃತಿಯ ಸುಟ್ಟಮಣ್ಣಿನ ಶವಪೆಟ್ಟಿಗೆ ದೊರೆತಿವೆ.[3] ಗದ್ದಿಕೇರಿಯಲ್ಲಿ ಶಿಲಾಯುಗ ಹಾಗೂ ಇತಿಹಾಸ ಆರಂಭಯುಗದ ಅವಶೇಷಗಳು ಕಂಡು ಬಂದಿವೆ.[4] ಹೀಗೆ ಈ ತಾಲೂಕಿನ ಕೆಲವೆಡೆ ಪ್ರಾಗೈತಿಹಾಸಿಕ ಕಾಲದ ಮಾನವನ ಕುರುಹುಗಳು ದೊರೆತಿರುವುದರಿಂದ ಈ ತಾಲೂಕು ಪ್ರಾಗೈತಿಹಾಸಿಕ ಕಾಲದಿಂದಲೂ ಮಹತ್ವವನ್ನು ಪಡೆದಿದೆ.

ಹಗರಿಬೊಮ್ಮನಹಳ್ಳಿಯ ಸ್ಥಳನಾಮದ ಬಗ್ಗೆ ಅಲ್ಲಿಯ ಹಿರಿಯರು ಹೇಳುವ ಐತಿಹ್ಯದ ಮೇರೆಗೆ ಭೋರ್ಗರೆದು ಹರಿಯುತ್ತಿದ್ದ ತುಂಗಭದ್ರಾ ತೀರದಲ್ಲಿ ನಮ್ಮ ಹಿರಿಯರು ನೆಲೆಸಿದ್ದರು. ಅವರಿಗೆ ಬಳ್ಳಾರಿಯ ಪಕ್ಕದಲ್ಲಿ ವಿಶಾಲವಾಗಿ ಪ್ರವಹಿಸುವ ನದಿಯು ಹಳ್ಳದಂತೆ ಕಂಡಿತು. ಅದನ್ನು ಹಗರಿ ಎಂದರು. ಈ ಚಿಕ್ಕಹಗರಿ(ಪಗರೆ)ಯ ದಡದಲ್ಲಿರುವ ಬೊಮ್ಮ(ಬ್ರಹ್ಮ)ನ ಹಳ್ಳಿಯೇ ಈಗ ಹಗರಿಬೊಮ್ಮನಹಳ್ಳಿಯಾಗಿದೆ. ಈ ಊರಿಗೆ 1950ರಲ್ಲಿ ತುಂಗಭದ್ರೆಯಲ್ಲಿ ಮುಳುಗಡೆಯಾದವರಿಗೆ ಪುನರ್ವಸತಿ ಕಲ್ಪಿಸಲು ನಿರ್ಮಿಸಿದ ರಾಮನಗರ, ಅರಳಿಹಳ್ಳಿ, ಕುರುದಗಡ್ಡಿ ಜೊತೆಗೆ ಹಗರಿಯೋಜನೆಯಲ್ಲಿ ಮುಳುಗಡೆಯಾದ ಗ್ರಾಮಗಳಿಂದ ವಲಸೆ ಬಂದ ಜನರು ಇಲ್ಲಿ ನೆಲೆಸಿದ್ದರಿಂದ ಈ ಊರಿಗೆ ಹೊಸಕಳೆ ಬಂದಿದೆ. 1945ರವರೆಗೆ ಕುಗ್ರಾಮವಾಗಿದ್ದ ಈ ಊರು, ಆ ಸಮಯದಲ್ಲಿ ಸ್ಥಾಪಿತವಾದ ಎಣ್ಣೆ ಉದ್ಯಮವೊಂದರಿಂದ ಇಲ್ಲಿನ ಬೆಳವಣಿಗೆ ಶೀಘ್ರಗತಿಯಲ್ಲಾಯಿತು. ಈ ರೀತಿಯಾಗಿ ಹಳೇ ಹಗರಿಬೊಮ್ಮನಹಳ್ಳಿ ಹಾಗೂ ರೈತಾಪಿ ಮತ್ತು ವ್ಯಾಪಾರಿ ವರ್ಗದ ಜನರು ನೆಲೆಸಿದ ರಾಮನಗರ (ಹೊಸ ಹಗರಿಬೊಮ್ಮನಹಳ್ಳಿ) ಈ ಎರಡೂ ಬೆಳೆದು ಕೂಡಿಕೊಂಡು ಒಟ್ಟಾರೆಯಾಗಿ ಹಗರಿಬೊಮ್ಮನಹಳ್ಳಿಯಾಗಿದೆ.[5]

ಮಧ್ಯಕಾಲಿನ ದಕ್ಷಿಣ ಭಾರತದ ಚರಿತ್ರೆಯಲ್ಲಿ ವಿಜಯನಗರದ ಸಾಮ್ರಾಜ್ಯದ ಸ್ಥಾಪನೆ ಹಾಗೂ ಆಳ್ವಿಕೆ ಅತ್ಯಂತ ಮಹತ್ವಪೂರ್ಣವಾದ ಘಟನೆ. ಇದನ್ನು ಮರೆತುಹೋದ ಹಾಗೂ ಎಂದೆಂದೂ ಮರೆಯಲಾಗದ ಮಹಾಸಾಮ್ರಾಜ್ಯ ಎಂದು ಇತಿಹಾಸಕಾರರು ಕರೆದಿದ್ದಾರೆ. ಹಿಂದೂ ಧರ್ಮ ಮತ್ತು ಸಂಸ್ಕೃತಿಯನ್ನು ಪೋಷಿಸಿದ ವಿಶಾಲ ಸಾಮ್ರಾಜ್ಯ. ದಖ್ಖನ್ನಿನ ರಾಜಕೀಯ ಅನೈಕ್ಯತೆ ಮತ್ತು ಶೂನ್ಯವನ್ನು ಹೋಗಲಾಡಿಸಿದ ವಿಜಯನಗರ ಸಾಮ್ರಾಜ್ಯ ಹಿಂದೂ ಧರ್ಮದ ರಕ್ಷಣಾ ಕೋಟೆಯಂತೆ ಕಾರ್ಯನಿರ್ವಹಿಸಿತು. ಈ ಸಾಮ್ರಾಜ್ಯವು ಕ್ರಿ.ಶ. 1336ರಲ್ಲಿ ಸ್ಥಾಪಿತಗೊಂಡಿತು. ಮೊದಲು ಆನೆಗೊಂದಿಯಲ್ಲಿದ್ದ ರಾಜಧಾನಿ ನಂತರ ಹಂಪೆಗೆ ಸ್ಥಳಾಂತರಗೊಂಡಿತು. ಹಂಪೆಯಲ್ಲಿ ಸಂಗಮ, ಸಾಳುವ, ತುಳುವ, ಅರವೀಡು ವಂಶದವರು ಆಳ್ವಿಕೆ ಮಾಡಿ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ. ಇವರ ಕಾಲಾವಧಿಯಲ್ಲಿ ಸಾಮ್ರಾಜ್ಯವು ಭಾರತದಲ್ಲಿ ಮಾತ್ರವಲ್ಲದೆ, ಪ್ರಪಂಚದಲ್ಲಿಯೇ ಖ್ಯಾತಿ ಪಡೆದಿತ್ತು. ಇವರ ಕಾಲಾವಧಿಯಲ್ಲಿ ಬಂದಂತಹ ವಿದೇಶಿಗರು ಸಾಮ್ರಾಜ್ಯದಲ್ಲಿ ಕಂಡಂತಹ ವಿಚಾರಗಳನ್ನು, ಅನುಭವಗಳನ್ನು ಚರಿತ್ರೆ ಸಂಪುಟಗಳಲ್ಲಿ ದಾಖಲಿಸಿದ್ದಾರೆ. ಅವುಗಳು ವಿಜಯನಗರ ಸಾಮ್ರಾಜ್ಯದ ಇತಿಹಾಸಕ್ಕೆ ಆಧಾರ, ಭವ್ಯ ಸಾಮ್ರಾಜ್ಯವೆಂದು ದಕ್ಷಿಣ ಭಾರತದಲ್ಲಿ ತಲೆಯೆತ್ತಿತ್ತು. ಆದರೆ ಕ್ರಿ.ಶ. 1565ರಲ್ಲಿ ರಕ್ಕಸತಂಗಡಿ (ತಾಳಿಕೋಟೆ) ಕದನವಾಗಿ ಬಹುಮನಿ ಸುಲ್ತಾನರಿಗೆ ತಲೆಬಾಗಿತು.[6]

ಈ ಭಾಗದ ಮೇಲೆ ವಿಜಯನಗರ ಅರಸರು ಪ್ರತ್ಯಕ್ಷರಾಗಿ ಮತ್ತು ಪರೋಕ್ಷವಾಗಿ ತಮ್ಮ ಆಡಳಿತ ನಡೆಸಿದ್ದಾರೆ. ಅವರ ಅನೇಕ ಶಾಸನಗಳು ಮತ್ತು ದೇವಾಲಯಗಳು ಈ ಪ್ರದೇಶದಲ್ಲಿ ದೊರೆತಿದ್ದು ಅವುಗಳ ಸಹಾಯದಿಂದ ವಿಜಯನಗರ ಅರಸರು ಈ ಪ್ರದೇಶದ ಮೇಲೆ ಹೊಂದಿದ್ದ ಆಡಳಿತಾತ್ಮಕ ಸಂಬಂಧಗಳನ್ನು ತಿಳಿಯಬಹುದು. ವಿಜಯನಗರ ಅರಸರು ಈ ಪ್ರದೇಶವನ್ನು ತಮ್ಮ ಆಡಳಿತದ ಅನುಕೂಲಕ್ಕೋಸ್ಕರ ಅನೇಕ ಭಾಗಗಳಾಗಿ ವಿಭಾಗಿಸಿದ್ದರು. ಅವುಗಳಲ್ಲಿ ಸೀಮೆ, ವಂತೆ ಮತ್ತು ಚಾವಡಿಗಳೆಂಬ ವಿಭಾಗಗಳು ಮುಖ್ಯವಾದವು. ದಾವಣಗೆರೆ ತಾಲೂಕಿನ ಆಲೂರಿನ ಶಾಸನವು ಈ ರೀತಿಯ ಆಡಳಿತ ವಿಭಾಗಗಳನ್ನು ಹೆಸರಿಸುವ ಮೊದಲ ಶಾಸನವಾಗಿದೆ. ಬುಕ್ಕರಾಯನ ಕಾಲಕ್ಕಾಗಲೇ ಈ ರೀತಿಯ ಆಡಳಿತ ವ್ಯವಸ್ಥೆಯನ್ನು ಅವರು ರೂಪಿಸಿಕೊಂಡಿದ್ದರು.[7]

ಹಗರಿಬೊಮ್ಮನಹಳ್ಳಿ ತಾಲೂಕಿನಲ್ಲಿ ಈವರೆಗೆ ಒಟ್ಟು 52 ಶಾಸನಗಳು ದೊರೆತಿವೆ. ಅವುಗಳಲ್ಲಿ ವಿಜಯನಗರ ಕಾಲದ 10 ಶಾಸನಗಳ ಕುರಿತು ಈ ಲೇಖನದಲ್ಲಿ ಅಧ್ಯಯನ ಮಾಡಲಾಗಿದೆ.

ಕ್ರಿ.ಶ. 1518ರ ಅಲಬೂರು[8] ಶಾಸನದಲ್ಲಿ ಕೃಷ್ಣದೇವರಾಯ ಅರಸನ ಆಪ್ತ ವ್ಯಕ್ತಿಯಾದ ಬಸವಪ ನಾಯಕನ ಮಗ ಕೃಷ್ಣಪ ನಾಯಕನು ಅಲಬೂರಿನ ಹೊನ್ನತ್ತಿದೇವಿ ದೇವಾಲಯಕ್ಕೆ ಭೂದಾನ ನೀಡಿದ್ದನ್ನು ತಿಳಿಸುತ್ತದೆ. ಕ್ರಿ.ಶ. 1531ರ ಕೋಗಳಿ9 ಶಾಸನದಲ್ಲಿ ಕೊಟ್ಟೂರಿನ ತಿಪ್ಪೆಸೆಟ್ಟಿಯ ಮಗನಾದ ಬಸೆಟ್ಟಿಯು ಕೋಗಳಿಯ ವೀರಭದ್ರ ದೇವಾಲಯವನ್ನು ಕಟ್ಟಿಸಿ ಇದರ ನಂದಾದೀಪಕ್ಕಾಗಿ ಮೋಕೆಯ ಬಸೆಟ್ಟಿ, ತಿಪ್ಪಿಸೆಟ್ಟಿ, ಮಾಸಗೆಯ ಗುರುವಾಪ್ಪ, ವೋದಿನ ಲಿಂಗಿಸೆಟ್ಟಿ, ಜಂದಿಯ ಲಿಂಗಿಸೆಟ್ಟಿ, ಮೊದಲಾದ ವರ್ತಕರು ದಾನವಾಗಿ ಒಂದು ಹೇರಿಗೆ ಒಂದು ಕಾಸು ದಾನ ನೀಡಿದರು ಎಂದು ತಿಳಿಸುತ್ತದೆ.

ಕ್ರಿ.ಶ. 1543ರ ಛತ್ರದಹಳ್ಳಿ[10] ಶಾಸನದಲ್ಲಿ ಸದಾಶಿವರಾಯನ ಆಳ್ವಿಕೆಯ ಅವಧಿಯಲ್ಲಿ ಛತ್ರದಹಳ್ಳಿಯ ಯೆಲವಣ್ಣನು ಬಾವಿಯನ್ನು ಕಟ್ಟಿಸಿ ಸಾಲುಮರಗಳನ್ನು ನೆಡೆಸಿದನೆಂದು ತಿಳಿಸುತ್ತದೆ. ಆತನ ತಂದೆ ಮತ್ತು ಸಹೋದರರು ಗವುಡಿಕೆಯ ಅರ್ಧ ಹಕ್ಕನ್ನು ಕೊಂಡು, ಗ್ರಾಮದ ಉತ್ತರಕ್ಕೆ ಒಂದು ದೇವಾಲಯ ಮತ್ತು ಕೆರೆಯನ್ನು ಕಟ್ಟಿಸಿದರೆಂದೂ ತಿಳಿಸುತ್ತದೆ. ಕ್ರಿ.ಶ. 1544ರ ಕೆಂಚೆತಿನಹಳ್ಳಿ[11] ಶಾಸನದಲ್ಲಿ ಬಯಪ್ಪನಾಯಕನ ಮಗ ಕೃಷ್ಣಪ್ಪನಾಯಕನಿಗೆ ಪುಣ್ಯವಾಗಲೆಂದು ಕೆಂಚಿಸೆಟ್ಟಿಹಳ್ಳಿಯಲ್ಲಿಯ ಧರ್ಮಏತಕ್ಕೆ ಭೂಮಿ ದಾನ ನೀಡಿದ್ದನ್ನು ತಿಳಿಸುತ್ತದೆ. ಕ್ರಿ.ಶ. 1544ರ ಮಗಿಮಾವಿನಹಳ್ಳಿ[12] ಶಾಸನದಲ್ಲಿ ಬಯಕಾರ ರಾಮಪ್ಪಯ್ಯ ತಮ್ಮ ಮಗಳು ಲಖರಸಮ್ಮನಿಗೆ ಪುಣ್ಯವಾಗಲೆಂದು ಚಿಕ್ಕಲಕ್ಕಸಮುದ್ರದ ಕೆರೆಯನ್ನು ಕಟ್ಟಿಸಿದ ವಿವರವಿದೆ. ಇದೇ ಶಾಸನ ಮುಂದುವರಿದು ಬಯಕಾರ ರಾಮಪ್ಪಯ್ಯನ ವಂಶಾವಳಿಯನ್ನು ನೀಡಿದ್ದು ಅದರಂತೆ ಕೊಂಡವೀಟಿಯ ಸಿಂಗಯ ಇವನ ಮಗ ಭಾವಯ ಮಂತ್ರಿ. ಇವನ ಮಗ ರಾಮಮಂತ್ರಿ. ಇವನ ಪತ್ನಿ ತೆಲಗಮಾಂಬ. ಇವರ ಮಗ ಪೆದ್ದತಿಮ್ಮಯ್ಯ, ಪತ್ನಿ ಲಕ್ಕಾಂಬಿಕ. ಇವರ ಮಗನೇ ರಾಮಪ್ಪಯ್ಯ ಇವನು ತಿಮ್ಮಾಪುರ, ಚಿನ್ನತಿಮ್ಮಾಪುರ ಮತ್ತು ಮಗಿಮಾವಿನಹಳ್ಳಿ

ಅಗ್ರಹಾರಗಳನ್ನೂ ಪೆದತಿಮ್ಮಾಪುರದಲ್ಲಿ ಗೋಪಿನಾಥ, ಬಾಚೇಶ್ವರ, ಕೃಷ್ಣೇಶ, ಅಮ್ಮೇಶ, ಮಲ್ಲಿಕಾರ್ಜುನ, ವೀರಭದ್ರ ಮತ್ತು ವಿಶ್ವನಾಥ ದೇವಾಲಯಗಳನ್ನು ಈ ದೇವಾಲಯಗಳ ಪೂಜೆಪುನಸ್ಕಾರಕ್ಕಾಗಿ ಹೊಳಗುಂದಿಯನ್ನು ದಾನ ನೀಡಿದ. ತನ್ನ ಮಗಳ ಹೆಸರಿನಲ್ಲಿ ಅಚ್ಯುತಮ್ಮಾಪುರವನ್ನು ಕಟ್ಟಿಸಿದ. ಅಲ್ಲಿ ಕೃಷ್ಣನ ಪ್ರತಿಷ್ಠೆ ಮಾಡಿದ. ಈತನು ಅಚ್ಯುತಮ್ಮಸಮುದ್ರ, ಬಾಚಸಮುದ್ರ, ರಾಮಸಮುದ್ರ, ಅಕ್ಕಸಮುದ್ರ, ಕಾಮಸಮುದ್ರ, ಅಮ್ಮಸಮುದ್ರ, ವೀರಸಮುದ್ರ, ಅಚ್ಯುತೇಂದ್ರಸಮುದ್ರ, ವೆಂಕಟೇಂದ್ರಸಮುದ್ರ, ಪೆದ್ದಲಕ್ಕಸಮುದ್ರ, ಲಿಂಗಾಲಯತಟಾಕ, ವೆಂಕಟಯ್ಯತಟಾಕ, ಪೆದ್ದತಿಮ್ಮಸಮುದ್ರ ಮತ್ತು ಚಿನಬಾಚಸಮುದ್ರ ಮೊದಲಾದ 16 ಕೆರೆಗಳನ್ನು ಕಟ್ಟಿಸುತ್ತಾನೆ. ಸಂಗೀತದ ಮೇಲೆ ಒಂದು ಕೃತಿಯನ್ನು ರಚಿಸಿರುತ್ತಾನೆ. ತಿಮ್ಮಮಂತ್ರಿ, ಸುರೀಂದ್ರ, ಭಾಸ್ಕರಚಮೂಪತಿ ಮತ್ತು ಭಾವಯ ಇವನ ಚಿಕ್ಕಪ್ಪಂದಿರಾಗಿದ್ದು ರಾಜನ ಕೈಕೆಳಗೆ ಅನೇಕ ಹುದ್ದೆಗಳನ್ನು ಹೊಂದಿದ್ದರು.

ಕ್ರಿ.ಶ. 1559ರ ಛತ್ರದಹಳ್ಳಿ[13] ಶಾಸನದಲ್ಲಿ ಮಾಲ್ಯವಂತ ರಘುನಾಥದೇವರ ಛತ್ರದಹಳ್ಳಿಯ ಧರ್ಮಏತದ ಡೋಣಿಗೆ ನೀರು ಹೊಯಿವದಕ್ಕೆ ಬೇಕಾದ ಮರವನ್ನು ಗ್ರಾಮದ ನಿವಾಸಿಗಳು (ಹೆಸರುಗಳಿವೆ) ದಾನ ಮಾಡಿದ್ದನ್ನು ತಿಳಿಸುತ್ತದೆ. ಉಪ್ಪಾರರು (ಹೆಸರುಗಳಿವೆ) ಧರ್ಮದ ಡೋಣಿಗೆ ನೀರು ಎತ್ತುವವನಿಗೆ ಮೋಳೆವೊಂದಕ್ಕೆ ಎರಡು ಬಳ್ಳ ಉಪ್ಪನ್ನು ಕೊಟ್ಟರು. ಕಾಳಿಕಾದೇವಿ ಮತ್ತು ಕಮರೇಶ್ವರ ದೇವರ ಆರಾಧಕರಾದ ಓಜುಗಳು (ಹೆಸರುಗಳಿವೆ) ನೀರು ಎತ್ತುವ ಕಬ್ಬಿಣದ ಏತದ ಬಾನೆ, ಕಬ್ಬಿಣದ ಕಟ್ಟುಗಳನ್ನು ದುರಸ್ತಿಗೊಳಿಸಲು ಒಪ್ಪದರು. ಕೆಲವು ಪ್ರಜೆಗಳು (ಹೆಸರುಗಳಿವೆ) ನೀರು ಎತ್ತುವವನಿಗೆ ಈಚಲ ಮರಗಳನ್ನು ಕೊಟ್ಟರೆಂದು ತಿಳಿಸುತ್ತದೆ. ಕ್ರಿ.ಶ. 1561ರ ಬನ್ನಿಗೋಳ[14] ಶಾಸನದಲ್ಲಿ ಬನ್ನಿಗೋಳ ಮತ್ತು 100 ವರಹಗಳ ದಾನವನ್ನು ನೀಡಿದ್ದನ್ನು ಮಾತ್ರ ತಿಳಿಸುತ್ತದೆ. ಕ್ರಿ.ಶ. 1623ರ ನಾರಾಯಣದೇವರಕೆರೆ[15] ಶಾಸನದಲ್ಲಿ ಸೇನಬೋವ ತಿಮ್ಮರಸಯನ ಮಗ ನರಸಯ್ಯನು ದೀಪಸ್ತಂಭವನ್ನು ದಾನ ಮಾಡಿದನೆಂದು ತಿಳಿಸುತ್ತದೆ. ಕ್ರಿ.ಶ. 1653ರ ತಂಬ್ರಹಳ್ಳಿ[16] ಶಾಸನದಲ್ಲಿ ಕೊಟ್ಟೂರ ಸೀಮೆಯಲ್ಲಿರುವ ಕೆನ್ನೆಹಳ್ಳಿ-ಯಿಟ್ಟಿಗೆಯ ಸೂರಿಯರಾಯನ ಮೂವರು ಮಕ್ಕಳು ಬಂಡೆಯ ರಂಗನಾಥ ದೇವರಿಗೆ ಉತ್ಸವ ಮಂಟಪ ಕಟ್ಟಿಸಿದ್ದನ್ನು ತಿಳಿಸುತ್ತದೆ. ಕ್ರಿ.ಶ. 1654ರ ಕೋಗಳಿ[17] ಶಾಸನದಲ್ಲಿ ಮಲ್ಲಯ್ಯ, ವೀರಯ್ಯ, ಬಸೆಟ್ಟಿ ಇವರು ವೀರಭದ್ರ ದೇವರಿಗೆ ದಾನ ಮಾಡಿದ ಉಲ್ಲೇಖ ದೊರೆಯುತ್ತದೆ.

ಶಾಸನವಿರುವ ಗ್ರಾಮಗಳು ಮತ್ತು ಶಾಸನ ದೊರೆತ ಸಂಖ್ಯೆ


ಕ್ರ.ಸಂ.	ಗ್ರಾಮದ ಹೆಸರು	ಶಾಸನಗಳ ಸಂಖ್ಯೆ
1	ಅಲಬೂರು	1
2	ಕೋಗಳಿ	2
3	ಛತ್ರದಹಳ್ಳಿ	2
3	ಕೆಂಚೆತಿನಹಳ್ಳಿ	1
4	ಮಗಿಮಾವಿನಹಳ್ಳಿ	1
5	ಬನ್ನಿಗೋಳ	1
6	ನಾರಾಯಣದೇವರಕೆರೆ	1
7	ತಂಬ್ರಹಳ್ಳಿ	1
	ಒಟ್ಟು	10

ಹೀಗೆ ಈ ತಾಲೂಕಿನಲ್ಲಿ ಕಂಡು ಬರುವ ವಿಜಯನಗರದ ಅರಸರ ಆಳ್ವಿಕೆಯ ಅವಧಿಯಲ್ಲಿನ ಹತ್ತು ಶಾಸನಗಳಲ್ಲಿ ಶ್ರೀ ಕೃಷ್ಣದೇವರಾಯನ ಕಾಲದ ಆಳ್ವಿಕೆಯಲ್ಲಿ ಎರಡು ಶಾಸನಗಳಿದ್ದು ಅವುಗಳು ದೇವಾಲಯಕ್ಕೆ ನೀಡಿದ ಭೂದಾನ ಮತ್ತು

ವ್ಯಾಪರಸ್ಥರು(ವರ್ತಕರು) ತಮ್ಮ ವ್ಯಾಪಾರದಿಂದ ಬಂದ ಲಾಭದ ಹಣದಿಂದ ದೇವಾಲಯವನ್ನು ಕಟ್ಟಿಸಿ ಅದರ ನಂದಾದಿವೀಗೆಗೆ ನೀಡಿದ ದಾನವನ್ನು ತಿಳಿಸುತ್ತದೆ. ಸದಾಶಿವರಾಯನ ಕಾಲದ ಆಳ್ವಿಕೆಯಲ್ಲಿ ನಾಲ್ಕು ಶಾಸನಗಳಿದ್ದು ಅವುಗಳು ಕೆರೆ ಮತ್ತು ಬಾವಿಗಳನ್ನು ಕಟ್ಟಿಸಿದುರ ಬಗ್ಗೆ ಹಾಗೂ ದೇವಾಲಯಗಳಿಗೆ ನೀಡಿದ ದಾನವನ್ನು ತಿಳಿಸುತ್ತವೆ. ಇನ್ನೂಳಿದ ನಾಲ್ಕು ಶಾಸನಗಳು ಸಹ ದಾನ ಶಾಸನಗಳಾಗಿವೆ. ಒಟ್ಟಾರೆಯಾಗಿ ಶಾಸನಗಳನ್ನು ನಾವು ಗಮನಿಸುತ್ತಾ ಹೋದರೆ ಅವರ ಕಾಲದಲ್ಲಿ ದೊರಕುವ ಶಾಸನಗಳಲ್ಲಿ ದಾನಶಾಸನಗಳೆ ಕಂಡುಬರುತ್ತವೆ. ದಾನವು ಭೂಮಿ, ಹಣ ಮತ್ತು ಅಗತ್ಯ ವಸ್ತುಗಳನ್ನು ನೀಡುವ ರೂಪದಲ್ಲಿತ್ತು. ದೇವಾಲಯಗಳ ಪೋಷಣೆಗಾಗಿ ಹಾಗೂ ಪೂಜೆ ಪುನಸ್ಕಾರಕ್ಕು, ಲೋಕೋಪಕಾರ ಕೆಲಸಗಳಾದ ಕೆರೆ, ಬಾವಿ, ಅರವಟ್ಟಿಗೆ ಹೀಗೆ ಇತ್ಯಾದಿ ಕಾರಣಗಳಿಗೆ ದಾನ ನೀಡಿರುವುದನ್ನು ಗಮನಿಸಬಹುದಾಗಿದೆ.

ಆಧಾರ ಸೂಚಿ ಮತ್ತು ಟಿಪ್ಪಣಿಗಳು

1. ಪರಮೇಶ್ವರಯ್ಯ ಸೊಪ್ಪಿಮಠ, 2005, **ಹಗರಿಬೊಮ್ಮನಹಳ್ಳಿ ತಾಲೂಕು ದರ್ಶನ,** ಪು.3.
2. ವೀಣಾ ಎಂ.ಪಿ, 1998, ಕೊಟ್ನಕಲ್ಲು ಪರಿಸರದ ಪ್ರಾಗ್ಯೆತಿಹಾಸಿಕ ನೆಲೆಗಳು, **ಇತಿಹಾಸ ದರ್ಶನ** ಸಂಪುಟ–13, ಪು.16.
3. ಶಿವತಾರಕ್ ಕೆ.ಬಿ, 2001, **ಕರ್ನಾಟಕದ ಪುರಾತತ್ವ ನೆಲೆಗಳು,** ಪು.365.
4. ಅದೇ, ಪು.365.
5. ಪರಮೇಶ್ವರಯ್ಯ ಸೊಪ್ಪಿಮಠ, 2005, ಪೂರ್ವೋಕ್ತ, ಪು.1.
6. ಮಂಜನಾಯ್ಕ. ಆರ್., 2016, **ಚನ್ನಗಿರಿ ತಾಲೂಕಿನ ಪುರಾತತ್ವ ಅವಶೇಷಗಳು,** ಪು.23.
7. ಸುರೇಶ ಬಿ, 2009, **ಚಿತ್ರದುರ್ಗ–ದಾವಣಗೆರೆ ಜಿಲ್ಲೆಗಳ ದೇವಾಲಯಗಳು,** ಪು.28.
8. ಚನ್ನಬಸಪ್ಪ ಎಸ್. ಪಾಟೀಲ ಮತ್ತು ವಿನೋದಾ ಪಾಟೀಲ, 1997, **ಕರ್ನಾಟಕ ಶಾಸನಗಳು ಸಂಪುಟ 2, ಬಳ್ಳಾರಿ ಜಿಲ್ಲೆಯ ಶಾಸನಗಳು,** ಪು.69.
9. ದೇವರಕೊಂಡಾರೆಡ್ಡಿ (ಸಂ), ಕಲವೀರ ಮನ್ವಾಚಾರ್, ಭಟ್‌ಸೂರಿ ಕೆ.ಜಿ, ಪರಮಶಿವಮೂರ್ತಿ ಡಿ.ವಿ, (ಸ.ಸಂ), 1998, **ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–1 ಬಳ್ಳಾರಿ ಜಿಲ್ಲೆ,** ಪು.264.
10. ಚನ್ನಬಸಪ್ಪ ಎಸ್. ಪಾಟೀಲ ಮತ್ತು ವಿನೋದಾ ಪಾಟೀಲ, 1997, ಪೂರ್ವೋಕ್ತ, ಪು.73.
11. ಅದೇ, ಪು.75.
12. ದೇವರಕೊಂಡಾರೆಡ್ಡಿ (ಸಂ), ಕಲವೀರ ಮನ್ವಾಚಾರ್, ಭಟ್‌ಸೂರಿ ಕೆ.ಜಿ, ಪರಮಶಿವಮೂರ್ತಿ ಡಿ.ವಿ, (ಸ.ಸಂ), 1998, ಪೂರ್ವೋಕ್ತ, ಪು.301.
13. ಚನ್ನಬಸಪ್ಪ ಎಸ್. ಪಾಟೀಲ ಮತ್ತು ವಿನೋದಾ ಪಾಟೀಲ, 1997, ಪೂರ್ವೋಕ್ತ, ಪು.73.
14. ಅದೇ, ಪು.72.
15. ಅದೇ, ಪು.81.
16. ಅದೇ, ಪು.83.
17. ದೇವರಕೊಂಡಾರೆಡ್ಡಿ (ಸಂ), ಕಲವೀರ ಮನ್ವಾಚಾರ್, ಭಟ್‌ಸೂರಿ ಕೆ.ಜಿ, ಪರಮಶಿವಮೂರ್ತಿ ಡಿ.ವಿ, (ಸ.ಸಂ), 1998, ಪೂರ್ವೋಕ್ತ, ಪು.265.




ಅಲಬೂರಿನ ಶಾಸನ



ಕೋಗಳಿಯ ಶಾಸನ



ಮಗಿಮಾವಿನಹಳ್ಳಿಯ ಶಾಸನ



ತಂಬ್ರಹಳ್ಳಿಯ ಶಾಸನ

12. ಚಿತ್ರದುರ್ಗ ಪ್ರದೇಶದಲ್ಲಿ ಮಲ್ಲಿನಾಥ ಒಡೆಯನ ಎರಡು ಹೊಸ ಶಾಸನಗಳು

– ಡಾ. ಬಿ. ರಾಜಶೇಖರಪ್ಪ

ವಿಜಯನಗರ ಸಾಮ್ರಾಜ್ಯವು ಆರಂಭವಾದ ಹೊಸದರಲ್ಲಿ, ಮೊದಲಿಗೆ 1ನೆಯ ಹರಿಹರ ಆಳ್ವಿಕೆ ಮಾಡಿದ ಮೇಲೆ ಅವನ ಸೋದರನಾಗಿದ್ದ 1ನೆಯ ಬುಕ್ಕ ಆಳಿದನೆಂಬುದು ಈಗಾಗಲೇ ತಿಳಿದ ವಿಷಯ. ಅವನು ಆಳುತ್ತಿದ್ದಾಗ ಚಿತ್ರದುರ್ಗ ಪ್ರಾಂತವನ್ನು ಮಹಾಮಂಡಲೇಶ್ವರನಾಗಿ ಆಳಿದವನು, ದೊರೆಯ ಅಳಿಯ ಅಥವಾ ಭಾವಮೈದುನನಾಗಿದ್ದ ಸಾಯಿನಾಯಕನ ಮಗನಾದ ಮಲ್ಲಿನಾಥ ಒಡೆಯ. ಇವನ ಕೆಲವು ಶಾಸನಗಳನ್ನು ಬಿ. ಎಲ್. ರೈಸ್ ಅವರು 1903ರಲ್ಲಿ, ಚಿತ್ರದುರ್ಗ ಜಿಲ್ಲೆಯ ಶಾಸನ ಸಂಪುಟವಾದ 'ಎಪಿಗ್ರಾಫಿಯ ಕರ್ನಾಟಿಕ'ದ 11ನೆಯ ಸಂಪುಟದಲ್ಲಿ ಪ್ರಕಟಿಸಿದ್ದಾರೆ. ಅವುಗಳಲ್ಲಿ ತುಂಬ ಮುಖ್ಯವಾದುವು ಚಿತ್ರದುರ್ಗದ ಬೆಟ್ಟದ ಮೇಲಿನ ಸಂಪಿಗೆ ಸಿದ್ಧೇಶ್ವರ ದೇವಾಲಯದ ನವರಂಗದ ಪ್ರವೇಶದ್ವಾರದ ಮುಂದೆ ಜಗಲಿಯ ಮೇಲೆ ಇರಿಸಿರುವ ಕ್ರಿ.ಶ. 1355 ಮತ್ತು 1356ರ ಎರಡು ಶಾಸನಗಳು ಹಾಗೂ ಚಿತ್ರದುರ್ಗ ತಾಲೂಕು ಚಿಕ್ಕಪುರ ಗ್ರಾಮದ–ಈಶಾನ್ಯಕ್ಕೆ ಬಯಲಲ್ಲಿ ಒಂದು ನೀರಿನಗುಂಡಿಯಲ್ಲಿ ಈಗ ಜನ ಬಟ್ಟೆ ಸೆಳೆಯುವ ಕಲ್ಲಾಗಿ ಬಿದ್ದಿರುವ– ಕ್ರಿ.ಶ. 1355ರ ಒಂದು ಶಾಸನ. ಉಳಿದವು ಬೆರಳೆಣಿಕೆಯ ಪಂಕ್ತಿಗಳ ಬಹು ಚಿಕ್ಕ ಶಾಸನಗಳು.

ಮೇಲೆ ಹೇಳಿದ, ಸಂಪಿಗೆ ಸಿದ್ಧೇಶ್ವರ ದೇವಾಲಯದ ಮುಂದೆ ಜಗಲಿಯ ಮೇಲೆ ಇರಿಸಿರುವ ಎರಡು ಶಾಸನಗಳಲ್ಲಿ ಕ್ರಿ.ಶ. 1355ರದ್ದು, ಆ ದೇವರಿಗೆ ಪೂರ್ವದಲ್ಲಿ ದತ್ತಿಯಾಗಿ ಕೊಡಲ್ಪಟ್ಟಿದ್ದ ಚಿಕ್ಕಪುರ ಗ್ರಾಮದ ಉತ್ಪನ್ನ ಸಲ್ಲದೆ ಹೋಗುತ್ತಿದ್ದುದನ್ನು ತಿಳಿದುಕೊಂಡ ಮಲ್ಲಿನಾಥ ಒಡೆಯ ಅದನ್ನು ತಪ್ಪಿಸಿ ಆ ಉತ್ಪನ್ನ ದೇವರಿಗೆ ಸಲ್ಲುವಂತೆ ಕ್ರಮಗೊಳಿಸಿರುವ ಶಾಸನ. ಚಿಕ್ಕಪುರದ ಬಳಿ ನೀರಿನ ಗುಂಡಿಯಲ್ಲಿರುವ ಶಾಸನ, ಮಲ್ಲಿನಾಥ ಒಡೆಯನು ಆ ಊರಿನ ಉತ್ಪನ್ನ ಮರಳಿ ಆದೇವರಿಗೆ ಸಲ್ಲುವಂತೆ ಕ್ರಮಗೊಳಿಸಿದ್ದನ್ನು ತಿಳಿಸುವ ಪೂರಕ ಶಾಸನವಾಗಿದೆ. ಇದು ಬಹುಶಃ ಆ ಗ್ರಾಮದ ಪರಿಸರದಲ್ಲಿ(ಬ)ರುವವರಿಗೆ ತಿಳಿವಳಿಕೆ ಕೊಡುವ ಉದ್ದೇಶದಿಂದ ಹಾಕಿಸಿದ ಶಾಸನವೆಂಬುದು ಸ್ಪಷ್ಟ.

ಆ ದೇವಾಲಯದ ಮುಂದಿನ ಜಗಲಿಯಲ್ಲಿರುವ ಕ್ರಿ.ಶ. 1355ರ ಇನ್ನೊಂದು ಶಾಸನ, ಆ ದೇವರಿಗೆ ಪೂರ್ವದಲ್ಲಿ ಕೊಡಲ್ಪಟ್ಟಿದ್ದ ಮುಸುವಡಿಯಪುರದ ದಾನಕ್ಕೆ ಸಂಬಂಧಿಸಿದ್ದು. ಆ ಗ್ರಾಮದ ಉತ್ಪನ್ನ ಸಹ ದೇವರಿಗೆ ಸಲ್ಲಬೇಕಾದದ್ದು ತಪ್ಪಿಹೋಗಿದ್ದುದನ್ನು ತಿಳಿದ ಮಲ್ಲಿನಾಥ ಒಡೆಯನು ಅದು ಮತ್ತೆ ಸಲ್ಲುವಂತೆ ಮಾಡಿದ್ದನ್ನು ಹೇಳುತ್ತದೆ. ಆ ಮುಸುವಡಿಯಪುರ ಮುಸುಂಡಿಹಾಳು ಗ್ರಾಮ ಎಂದು ಹಿರಿಯ ಸಂಶೋಧಕ ಹುಲ್ಲೂರು ಶ್ರೀನಿವಾಸ ಜೋಯಿಸರು ಒಂದೆಡೆ ಬರೆದಿದ್ದಾರೆ. ಇದೀಗ ನನ್ನ ಕ್ಷೇತ್ರಕಾರ್ಯದಲ್ಲಿ ಮಲ್ಲಿನಾಥ ಒಡೆಯನ ಇನ್ನೊಂದು ಶಾಸನ ಹೊಸದಾಗಿ ದೊರೆತಿರುವುದು ಅದೇ ಗ್ರಾಮದಲ್ಲಿಯೇ. ಈ ಶಾಸನ ಅಗಿನ್ನೂ ದೊರೆತಿರಲಿಲ್ಲವಾದರೂ ಜೋಯಿಸರು ಪ್ರಾಯಃ ಹೆಸರಿನ ಹೋಲಿಕೆಯಿಂದ ಹಾಗೆ ಹೇಳಿದ್ದು ನಿಜಸಂಗತಿಯೇ ಆಗಿರುವುದು ಮಾತ್ರ ಆಶ್ಚರ್ಯಕರವಾಗಿದೆ.

ಬಿ.ಎಲ್. ರೈಸ್ ಪ್ರಕಟಿಸಿರುವ ಮೇಲೆ ಹೇಳಿದ ಶಾಸನಗಳಲ್ಲದೆ ಈಚೆಗೆ ದೊರೆತ ಅದೇ ಮಲ್ಲಿನಾಥ ಒಡೆಯನ ಇನ್ನೆರಡು ಶಾಸನಗಳನ್ನು ಕುರಿತು ಇಲ್ಲಿ ವಿವರಿಸಬೇಕಾಗಿದೆ. ಈಗ್ಗೆ ಕೆಲವು ವರ್ಷಗಳ ಹಿಂದೆ (1987ರಲ್ಲಿ) ಒಂದು,

ಹೋದ ವರ್ಷ (2015ರಲ್ಲಿ) ಇನ್ನೊಂದು, ಹೀಗೆ ಮಲ್ಲಿನಾಥ ಒಡೆಯನ ಎರಡು ಶಾಸನಗಳು ಹೊಸದಾಗಿ ನನ್ನ ಕ್ಷೇತ್ರಕಾರ್ಯದಲ್ಲಿ ದೊರೆತಿವೆ. ಈ ಸಂಪ್ರಬಂಧದ ಪ್ರಾರಂಭದಲ್ಲಿ ಹೇಳಿದಂತೆ, ವಿಜಯನಗರದ 1ನೇ ಬುಕ್ಕರಾಯನ ಕಾಲದಲ್ಲಿ ಚಿತ್ರದುರ್ಗದ ಪ್ರಾಂತಾಧಿಪತಿಯಾಗಿದ್ದವನು ಮಲ್ಲಿನಾಥ ಒಡೆಯ. ಇವುಗಳ ಜೊತೆಗೆ ದೊರೆತ ಇನ್ನೊಂದು ಶಾಸನ ಕೂಡಾ ಇದೇ ಮಲ್ಲಿನಾಥ ಒಡೆಯನ ಕಾಲದ್ದೇ ಆಗಿದೆ. ಈ ಎರಡೂ ಶಾಸನಗಳ ಪಾಠ ಹಾಗೂ ವಿವರಗಳನ್ನು ಈ ಸಂಪ್ರಬಂಧದ ಮೂಲಕ ಸಾದರಪಡಿಸಲು ಪ್ರಯತ್ನಿಸಿದ್ದೇನೆ.

ಚಿತ್ರದುರ್ಗ ತಾಲೂಕು ಮುಸುಂಡಿಹಾಳು ಗ್ರಾಮದ ಚನ್ನಬಸವಣ್ಣ ದೇವಸ್ಥಾನದ ಹಿಂದೆ ಪೂರ್ವದ ಗೋಡೆಯ ಬದಿಯಲ್ಲಿ ನೆಲದಲ್ಲಿ ನೇಟ್ಟಿರುವ ದೊಡ್ಡ ಗ್ರಾನೈಟ್ ಕಲ್ಲುಚಪ್ಪಡಿಯಲ್ಲಿರುವ ಶಾಸನದ ಪಾಠ ಹೀಗಿದೆ:

(ಸೂರ್ಯ) (ಚಂದ್ರ)

(ಶಿವಲಿಂಗ)

1 ಸ್ವಸ್ತಿ ಶ್ರೀಮತು ಸಖ ವರುಷ 1278
2 ನೆಯ ದುರ್ಮ್ಮುಖಿ ಸಂವತ್ಸರದ ಆಸಾಡ ಬ
3 ಹುಳ ತದಿಗೆ ಗುರುವರದಲು ಚಿಂಮತ್ತನಕ
4 ಲ ಸಿಧ್ಧನಥ ದೇವರಿಗೆ ಮುನ ಉಳ ಪುರ್ವ್ವ
5 ದತ್ತಿ ಅಳಿಯ ಸಾಇನಾಯಕನ ಕೊಮ
6 ರಮಲಿನಾಥ ವೊಡೆಯರು ಮುಸುವ
7 ಡಿಯಪುರವನು ಜೀರ್ನ್ನೋಧ್ಧಾರಂ ಮಾಡಿ ಇ
8 ಪುರದ ಚತುಸ್ಸೀಮೆಯೊಳಗಣ ನಿಧ್ಧಿ ನಿಕ್ಷೇಪ
9 ಅಷ್ಟ ಭೋಗ ತೇಜ ಸಾಂಮ್ಯವನು ಮಲ್ಲಿನಾಥ ವೊ
10 ಡೆಯರು ಸರ್ಬ್ಬಮಾಂನ್ಯವಗಿ ಸಿಧ್ಧನಾಥ ದೇವ
11 ರ ಸ್ತಾನಿಕ ಹಿರಿಯ ಸಿಧ್ಧಂಣ್ಣಂಗಳ ಮಗ ಸೋವಣ್ಣ
12 ಂಗೆ ಧರಾಪುರ್ಬ್ಬಕವಾಗಿ ಧರೆಯನೆಱದು ಕೊಟ್ಟ ಪು
13 ರ

ಇದರಲ್ಲಿ ಹೇಳಿರುವ ಶಕವರ್ಷ 1278ರ ದುರ್ಮುಖಿ ಸಂವತ್ಸರದ ಆಷಾಢ ಬಹುಳ 3ರ ದಿನ ಕ್ರಿ.ಶ. 1356ರ ಜೂನ್ 16ನೆಯ ತಾರೀಖು ಗುರುವಾರ ಆಗುತ್ತದೆ. ಈ ಶಾಸನದಲ್ಲಿ ಮೇಲ್ಕಂಡ ದಿನಾಂಕದಂದು ಮಲ್ಲಿನಾಥ ಒಡೆಯ ಮುಸುವಡಿಯಪುರವನ್ನು ಜೀರ್ಣೋದ್ಧಾರ ಮಾಡಿ, ಆ ಊರಿನ ನಾಲ್ಕು ಸೀಮೆಯೊಳಗೆ ನಿಧಿ–ನಿಕ್ಷೇಪ ಏನಿದ್ದರೂ ಅದೆಲ್ಲ ಸಿದ್ಧನಾಥ ದೇವರಿಗೆ ಸೇರಿದ್ದೆಂದು, ಆ ದೇವರ ಸ್ಥಾನಿಕನಾಗಿದ್ದ ಹಿರಿಯ ಸಿದ್ಧಣ್ಣಗಳ ಮಗನಾದ ಸೋವಣ್ಣನಿಗೆ ಧಾರೆಯೆರೆದು ಕೊಟ್ಟರು ಎಂದು ಹೇಳಿದೆ. ಇದರಿಂದ ಹಿಂದೆ ಹೇಳಿದ, ರೈಸ್ ಪ್ರಕಟಿತ ಶಾಸನದಲ್ಲಿ ಮತ್ತು ಪ್ರಸ್ತುತ ಶಾಸನದಲ್ಲಿ ಮುಸುವಡಿಯಪುರ ಎಂದಿರುವುದು ಆ ಹೆಸರಿಗೆ ಕೊಡಲಾದ ಒಂದು ಶಿಷ್ಟಪದರೂಪ– ಇದು ಪೂರ್ಣ ಸಂಸ್ಕೃತೀಕರಣ ರೂಪ ಅಲ್ಲ– ಎಂದೂ ವ್ಯಕ್ತವಾಗುತ್ತದೆ. ಈ ಶಾಸನ ರೈಸ್ ಪ್ರಕಟಿಸಿರುವ ಶಾಸನಕ್ಕೆ ಪೂರಕವಾಗಿ, ಚಿಕ್ಕಪುರದ ಬಳಿ ಅದೇ ಮಲ್ಲಿನಾಥ ಒಡೆಯನೇ ಹಾಕಿಸಿದ ಶಾಸನವನ್ನು ಹೋಲುತ್ತದೆ. ಮಲ್ಲಿನಾಥ ಒಡೆಯನು ಚಿತ್ರದುರ್ಗದ ಸಂಪಿಗೆ ಸಿದ್ಧೇಶ್ವರ ದೇವಸ್ಥಾನದಲ್ಲಿ ಹಾಕಿಸಿ ಇಟ್ಟಿರುವ ಶಾಸನಗಳಿಗೆ ಪೂರಕವಾಗಿ, ಚಿಕ್ಕಪುರದಲ್ಲಿ ಒಂದು, ಮುಸುಂಡಿಹಾಳಲ್ಲಿ ಇನ್ನೊಂದು– ಹೀಗೆ ಒಂದೊಂದು ಊರಿಗೆ ಸಂಬಂಧಿಸಿದಂತೆ ಎರಡೆರಡು ಶಾಸನಗಳನ್ನು ಹಾಕಿಸಿರುವುದು ಗಮನಿಸಬೇಕಾದ ವಿಶೇಷ ಸಂಗತಿಯಾಗಿದೆ.

ಇತ್ತೀಚಿನ ಕ್ಷೇತ್ರಕಾರ್ಯದಲ್ಲಿ ದೊರೆತ ಮಲ್ಲಿನಾಥ ಒಡೆಯನ ಇನ್ನೊಂದು ಶಾಸನ ಇದೇ ಚಿತ್ರದುರ್ಗ ತಾಲೂಕಿನ ಕಡ್ಲೆಗುದ್ದು ಗ್ರಾಮದ ಒಂದು ಹೊಲದಲ್ಲಿ ಸಿಕ್ಕದ್ದು. ಹಿಂದೆ ವರದಿಯಾಗಿದ್ದ ಒಂದೆರಡು ಶಾಸನಗಳ ಪುನರ್ಪರಿಶೀಲನೆಗಾಗಿ ನಾನು ಮಿತ್ರರೊಬ್ಬರ ಜೊತೆಗೆ ಅಲ್ಲಿಗೆ ಹೋದಾಗ, ಆ ಗ್ರಾಮಸ್ಥರಿಂದ ಈ ಶಾಸನ ಸ್ವಲ್ಪ ಕಾಲದ ಹಿಂದೆ ಭೂಮಿಯಲ್ಲಿ ಸಿಕ್ಕಿದುದರ ಮಾಹಿತಿ ದೊರೆಯಿತು. ಅವರು ಹೇಳಿದ ವಿವರದಂತೆ ಈಚೆಗೆ 2–3 ವರ್ಷಗಳ ಹಿಂದೆ ಆ ಊರಿನ ಹುಚ್ಚಪ್ಪಳ ಬಸವರಾಜಪ್ಪ ಎಂಬುವರ ಹೊಲದಲ್ಲಿ ಕಬ್ಬಿಣದ ನೇಗಿಲಿನಿಂದ ಉಳುಮೆ ಮಾಡುವಾಗ, ನೇಗಿಲ ಗುಳಕ್ಕೆ ಸಿಕ್ಕಿ ಕಲ್ಲು ಚಪ್ಪಡಿಯಲ್ಲಿ ಸೂರ್ಯ ಚಂದ್ರ ಶಿವಲಿಂಗ ಇರುವುದು ಕಾಣಿಸಿ ಆ ಹೊಲದವರಿಗೆ ಭಯವಾಗಿ, ಅದು ಹೊಲದ ಮಧ್ಯೆ ಎಲ್ಲಿ ಸಿಕ್ಕಿತ್ತೋ ಅಲ್ಲಿಯೇ ಅದನ್ನು ಪೂರ್ವಾಭಿಮುಖವಾಗಿ ನಿಲ್ಲಿಸಿ, ಪೂಜೆಮಾಡಿ ಕಾಯಿ ಒಡೆದು ಅಡ್ಡಬಿದ್ದರೆಂದೂ ಅಲ್ಲಿಂದ ಈಚೆಗೆ ಪ್ರತಿವರ್ಷವೂ ಅದಕ್ಕೆ ಪೂಜೆ ಮಾಡುತ್ತ ಬರಲಾಗುತ್ತಿದೆ ಎಂದೂ ತಿಳಿಯಿತು. ಊರಿಗೆ ಸುಮಾರು ಒಂದೆರಡು ಕಿಲೋಮೀಟರ್ ದೂರದಲ್ಲಿರುವ ಆ ಹೊಲಕ್ಕೆ ಹೋಗಿ ನೋಡಿದಾಗ, ಅದು ಒಂದು ದೊಡ್ಡ ಗ್ರಾನೈಟ್ ಕಲ್ಲುಚಪ್ಪಡಿ ಇದ್ದುದು ಕಂಡುಬಂತು. ಅದರ ಪೂರ್ವಾಭಿಮುಖ ಮೇಲ್ಮೈಯ ಮೇಲುಭಾಗದಲ್ಲಿ ಸೂರ್ಯ, ಚಂದ್ರ, ಅವುಗಳ ಕೆಳಗೆ 13 ಸಾಲು ಕನ್ನಡ ಲಿಪಿ ಮತ್ತು ಭಾಷೆಯಲ್ಲಿರುವ ಸ್ವಲ್ಪ ದೊಡ್ಡ ಅಕ್ಷರಗಳ ಶಾಸನವನ್ನು ಕೊರೆಯಲಾಗಿದೆ. ಈ ಬರಹದ ಕೆಳಗೆ ಒಂದು ವಿಚಿತ್ರ ಚೌಕಟ್ಟಿನ ರಚನೆಯನ್ನು ಕೊರೆಯಲಾಗಿದೆ. ಅದು ನಿರ್ದಿಷ್ಟವಾಗಿ ಏನು ಮತ್ತು ಆ ಚಿತ್ರವನ್ನು ಇಲ್ಲಿ ಬಳಸಿರುವುದೇಕೆ ಎಂಬುದು ತಿಳಿಯದು. ಅಕ್ಷರಗಳು ಸಾಕಷ್ಟು ಗುಂಡಗೆ ಮತ್ತು ಸ್ಪಷ್ಟವಾಗಿ ಇದ್ದರೂ ಕಾಗುಣಿತ ಮತ್ತು ವಾಕ್ಯರಚನೆಯಲ್ಲಿ ಸಮರ್ಪಕತೆ ಇಲ್ಲ. ಈ ಹೊಸ ಶಾಸನದ ಪಾಠ ಈಮುಂದಿನಂತಿದೆ :

(ಸೂರ್ಯ) (ಚಂದ್ರ)

(ಪೂಜಕ) (ಲಿಂಗ) (ನಂದಿ)

1 @ ಸ್ವಸ್ತಿ ಶ್ರೀ ಜಯಾಭ್ಯುದಯೋ
2 ಸ್ತು ಶಕ ವರುಷ 1277 ಮನುಮಥ
3 ಸಂವತ್ಸರದ ಭಾದ್ರಪದ ಬ 7 ಆಸ್ವ
4 ನಿ ಶ್ರೀಮನು ಮಹಾಮಂಡಳೇಸ್ವರಂ ಮಂ
5 ಡಳಿಕ ಖಂಡೆಯರಾಯ ವೀರ ಶ್ರೀ ಮಲ್ಲಿನಾ
6 ಥ ಒಡೆಯರು ಕಲಗವುಡನ ಮಗ ಸಿರು
7 ಪಗವುಡಂಗೆ ಚಿಂಮತುರಕಲ ನಾಡ ಕಡ
8 ಲೆಯಗುದು ಗ್ರಮವನು ಕೊಡಗಿಯಾಗಿ
9 ಕೊಟರು ಆ ಗ್ರಮದ ಚತುಸ್ಸೀಮೆಯ ಒಳಗೆ
10 ಉಳ ಗದೆ ಬೆದಲು ಏನು ಉಳ್ಳ ಅದಯ ಬಿಟೆಲು
11 ಕೊಡಗಿ ಅಚಂದ್ರರ್ಕ್ಕಲು ಉಂಡು ಸುಕದಿಂ ಬ
12 ಪ್ಪಂತಾಗಿ ಕೊಡಗೆಯ ಕೊಟೆಲು ಮಂಗಳ ಮ
13 ಹ ಶ್ರೀ ಶ್ರೀ

(ಈಮೇಲಿನ ಬರಹದ ಕೆಳಗೆ ಚೌಕಟ್ಟಿನ ರೀತಿಯ ಒಂದು ರಚನೆ ಇದೆ.)

ಈ ಶಾಸನದ ತಾತ್ಪರ್ಯವನ್ನು ಹೀಗೆ ಕೊಡಬಹುದು : ಶಕವರ್ಷ 1277ನೆಯ ಮನ್ಮಥ ಸಂವತ್ಸರದ ಭಾದ್ರಪದ ಬಹುಳ 7ರಂದು ಶ್ರೀಮನ್ಮಹಾ ಮಂಡಳೇಶ್ವರ ಮಂಡಳಕ ಖಂಡೆಯರಾಯ ವೀರ ಶ್ರೀ ಮಲ್ಲಿನಾಥ ಒಡೆಯರು ಕಲ್ಲಗವುಡನ ಮಗ

ಸಿರುಪಗವುಡಗೆ ಚಿಮ್ಮತ್ತೂರಕಲ್ಲ ನಾಡಿಗೆ ಸೇರಿದ ಕಡಲೆಯಗುದು ಗ್ರಾಮವನ್ನು ಕೊಡಗಿಯಾಗಿ ಕೊಟ್ಟರು. "ಆ ಗ್ರಾಮದ ನಾಲ್ಕು ಎಲ್ಲೆ ಕಟ್ಟಿನೊಳಗೆ ಇರುವ ಗದ್ದೆ ಬೆದ್ದಲು ಈ ಭೂಮಿಗಳಿಗೆ ಸರ್ಕಾರಕ್ಕೆ ಏನು ಆದಾಯ ಬರುವುದಿದ್ದರೂ ಅದನ್ನು ಬಿಟ್ಟಿದ್ದೇವೆ. ಈ ಕೊಡಗಿಯನ್ನು ಆಚಂದ್ರಾರ್ಕವಾಗಿ ಅನುಭವಿಸಿಕೊಂಡು ಸುಖದಿಂದ ಇರುವಂತೆ ಇದನ್ನು ಕೊಡುಗೆಯಾಗಿ ನೀಡಿದ್ದೇವೆ" (ಎಂದು ಮಲ್ಲಿನಾಥ ಒಡೆಯನು ಶಾಸನದ ಅಂತ್ಯದಲ್ಲಿ ಹೇಳಿದ್ದಾನೆ).

ಇಲ್ಲಿ ಹೇಳಿರುವ ಭಾರತೀಯ ತೇದಿಯು ಕ್ರೈಸ್ತ ವರ್ಷದ 1355ರ ಆಗಸ್ಟ್ 30ನೆಯ ದಿನಾಂಕಕ್ಕೆ (ಭಾನುವಾರಕ್ಕೆ) ಸರಿಹೊಂದುತ್ತದೆ. ಚಿತ್ರದುರ್ಗದ ಸಂಪಿಗೆ ಸಿದ್ಧೇಶ್ವರ ದೇವಾಲಯದ ಮುಂದಿನ ಜಗಲಿಯ ಮೇಲಿರುವ ಶಾಸನಗಳಿಂದ ನಮಗೆ ಈಗಾಗಲೇ ತಿಳಿದಿರುವಂತೆ ಈ ಶಾಸನ, ವಿಜಯನಗರದ ದೊರೆ 1ನೇ ಬುಕ್ಕರಾಯನ ಅಧೀನನಾಗಿ ಚಿತ್ರದುರ್ಗ ಪ್ರಾಂತ್ಯವನ್ನು ಆಳುತ್ತಿದ್ದ ಮಲ್ಲಿನಾಥ ಒಡೆಯನಿಗೆ ಸೇರಿದ್ದೆಂದು ಸ್ಪಷ್ಟವಾಗುತ್ತದೆ. ಮಲ್ಲಿನಾಥ ಒಡೆಯನು ಕಲ್ಲಗೌಡನ ಮಗ ಸಿರುಪಗೌಡನಿಗೆ ಕಡಲೆಗುದ್ದು ಗ್ರಾಮವನ್ನು– ಅದಕ್ಕೆ ಸೇರಿದ ಎಲ್ಲ ಭೂವ್ಯಾಪ್ತಿ ಯೋಂದಿಗೆ ಕೊಡುಗೆಯಾಗಿ ನೀಡಿರುವುದನ್ನು ಶಾಸನ ದಾಖಲಿಸಿದೆ. ಈ ಕಲ್ಲಗೌಡ ಮತ್ತು ಅವನ ಮಗನಾದ ಸಿರುಪಗೌಡ ಮೂಲತಃ ಯಾವ ಊರಿನವರು ಮತ್ತು ಏನಾಗಿದ್ದರು ಎಂಬುದನ್ನು ಶಾಸನದಲ್ಲಿ ಹೇಳಿಲ್ಲ. ಅಷ್ಟೇ ಅಲ್ಲ, ಮಲ್ಲಿನಾಥ ಒಡೆಯ ಈ ಸಿರುಪಗೌಡನಿಗೆ ಆ ಗ್ರಾಮಭೂಮಿಯನ್ನು ನೀಡಿದ್ದು ಏಕ? ಅವನಿಂದ ಈ ದೊರೆಗೆ ಏನಾದರೂ ವಿಶೇಷ ಸೇವೆ ಸಂದಿತ್ತೇ? ಇದು ಕೂಡಾ ಶಾಸನದಿಂದ ಸ್ಪಷ್ಟವಾಗುವಂತಿಲ್ಲ. ಕಡಲೆಗುದ್ದು ಗ್ರಾಮದ ಗದ್ದೆ ಬೆದ್ದಲು ಈ ಯಾವ ಭೂಮಿಗೂ ಏನು ಆದಾಯವಿದ್ದರೂ ಅದನ್ನು ಬಿಟ್ಟಿರುವುದಾಗಿ ಹೇಳಿರುವ ಮಲ್ಲಿನಾಥ ಒಡೆಯನ ಸೂಚನೆಯಿಂದ, ಈ ಸಿರುಪಗೌಡ ಒಬ್ಬ ಮಹತ್ತ್ವದ ವ್ಯಕ್ತಿಯಾಗಿದ್ದ ಎಂಬುದು ಮಾತ್ರ ಗ್ರಹಿಕೆಗೆ ಬರುತ್ತದೆ.

ಹೊಳಲ್ಕೆರೆ ತಾಲೂಕಿನಲ್ಲಿ ಸಿರಾಪನಹಳ್ಳಿ ಎಂಬ ಹೆಸರಿನ ಊರೊಂದಿದೆ. ಈ ಸ್ಥಳನಾಮ ಮೂಲತಃ ಸಿರುಪನಹಳ್ಳಿ ಎಂದಿದ್ದು ಮುಂದೆ ಸಿರಪನಹಳ್ಳಿ ಎಂದಾಗಿ ಕಾಲಾಂತರದಲ್ಲಿ ಸಿರಾಪನಹಳ್ಳಿ ಆಗಿರಬೇಕೆನಿಸುತ್ತದೆ. ಈ ಗ್ರಾಮದ ಹೆಸರಿಗೆ ಆ ಸಿರುಪಗೌಡನ ಹೆಸರು ಕಾರಣವಾಗಿರಬಹುದೆಂದು ಹೇಳುವುದು ಸಾಧುವಲ್ಲ. ಆದರೂ ಹೆಸರಿನ ಸಾಮ್ಯವನ್ನು ನೋಡಿದರೆ, ಈ ಊರಿಗೂ ಶಾಸನದ ಸಿರುಪಗೌಡನಿಗೂ ಏನಾದರೂ ಸಂಬಂಧ ಇದ್ದಿರಬಹುದೇ ಎಂದು ಸಂದೇಹವಾಗುತ್ತದೆ.

[**ಕೃತಜ್ಞತೆ** : ಮುಸುಂಡಿಹಾಳಿನ ಶಾಸನದ ಅಧ್ಯಯನಕ್ಕೆಂದು ನಾನು (ದಿ: 18–09–1987ರ ಶುಕ್ರವಾರ) ಹೋದಾಗ, ಜತೆಯಲ್ಲಿ ಬಂದು ಸಹಕರಿಸಿದವರು ಚಿತ್ರದುರ್ಗದ ಕರುವಿನಕಟ್ಟೆ ಮಂಜಣ್ಣ, ಸ್ಥಳೀಯ ಸಹಕಾರ ನೀಡಿದವರು ಅದೇ ಊರಿನ ಶ್ರೀ ಭೈರಪ್ಪ ಮತ್ತು ಇತರರು. ಕಡಲೆಗುದ್ದು ಶಾಸನದ ಅಧ್ಯಯನ ಕೈಕೊಂಡಾಗ (ದಿ: 31–05–2017), ನನ್ನ ಜತೆಯಲ್ಲಿ ಬಂದು ಸಹಕರಿಸಿದವರು ಚಿತ್ರದುರ್ಗದ ಶ್ರೀ ಎಚ್. ವಿ. ಇಂದುಶೇಖರ್ ಹಾಗೂ ಸ್ಥಳೀಯ ಸಹಕಾರ ನೀಡಿದವರು ಅದೇ ಊರಿನ ಶ್ರೀ ಅಣ್ಣಪ್ಪಸ್ವಾಮಿ, ಶ್ರೀ ಹನುಮಂತಪ್ಪ, ಶ್ರೀ ರಂಗಪ್ಪ, ಶ್ರೀ ಹುಚ್ಚಪ್ಪಳ ಬಸವರಾಜಪ್ಪ, ಗೌಡರ ಸಂಗಪ್ಪನವರ ಶ್ರೀ ಕರಿದ್ಯಾಮಣ್ಣ, ಮತ್ತು ಇತರರು. ಇವರೆಲ್ಲರಿಗೂ ನನ್ನ ಹಾರ್ದಿಕ ಕೃತಜ್ಞತೆಗಳು.]

13. "ಕಮಲಾಪುರ ಪ್ರದೇಶದಲ್ಲಿರುವ ನರಸಿಂಹ ದೇವಾಲಯದ ಸಂರಕ್ಷಣಾ ಕಾರ್ಯದ ಒಂದು ಅವಲೋಕನ"

– ಡಾ. ಎಸ್.ಕೆ. ವಾಸುದೇವ

ದಕ್ಷಿಣಭಾರತವನ್ನಾಳಿದ ಅರಸು ಮನೆತನಗಳಲ್ಲಿ ಅತ್ಯಂತ ವೈಭವಯುತವಾಗಿ ಆಳ್ವಿಕೆ ನಡೆಸಿದವರೆಂದರೆ ವಿಜಯನಗರ ಅರಸರು. ಕ್ರಿ.ಶ. 14ನೇ ಶತಮಾನದ ಪೂರ್ವದಲ್ಲಿ ಸ್ಥಾಪಿತವಾದ ವಿಜಯನಗರ ಸಾಮ್ರಾಜ್ಯ ದಕ್ಷಿಣ ಭಾರತದ ಇತಿಹಾಸದಲ್ಲಿ ಒಂದು ಮಹತ್ವಪೂರ್ಣ ಘಟನೆ. ಈ ಸಾಮ್ರಾಜ್ಯ ಮೂರು ಶತಮಾನಗಳ ಕಾಲ ಆಳ್ವಿಕೆ ನಡೆಸಿ ಭಾರತೀಯ ಸಂಸ್ಕೃತಿಗೆ ರಾಜಕೀಯ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಿಗೆ ತನ್ನದೇ ಆದ ಕೊಡುಗೆ ನೀಡಿದೆ. ಇದರ ಕೀರ್ತಿ ಪ್ರತಿಷ್ಠೆಗಳು ವಿದೇಶಕ್ಕೆ ತಲುಪಿ ಅಲ್ಲಿಯ ವರ್ತಕರು, ಪ್ರವಾಸಿಗಳು ಈ ಬೃಹತ್ ರಾಜಕೀಯ ಶಕ್ತಿಯ ಕಡೆಗೆ ಕಣ್ಣುಹಾಯುವಂತೆ ಆಹ್ವಾನಿಸಿತು. ಇದರಿಂದ ಪೂರ್ವ, ಪಶ್ಚಿಮ ಮತ್ತು ಆಗ್ನೇಯ ದಿಕ್ಕಿನ ವಿದೇಶಿಯರನ್ನು ಆಕರ್ಷಿಸಿತು. ಈ ಹಿನ್ನೆಲೆಯಲ್ಲಿ ವಿಜಯನಗರ ಸಾಮ್ರಾಜ್ಯಕ್ಕೆ ಭೇಟಿ ನೀಡಿದಷ್ಟು ಪ್ರವಾಸಿಗರು ಕರ್ನಾಟಕವನ್ನಾಳಿದ ಇತರೆ ಯಾವ ಸಾಮ್ರಾಜ್ಯಕ್ಕೂ ಭೇಟಿ ನೀಡಿಲ್ಲದಿರುವುದನ್ನು ಗಮನಿಸಿದರೆ ವಿಜಯನಗರ ಸಾಮ್ರಾಜ್ಯದ ವೈಭವ, ವ್ಯಾಪಕತೆ, ಪ್ರಭುತ್ವ ಮತ್ತು ಪ್ರಬಲತೆ ಎಷ್ಟಿತ್ತು ಎಂಬುದನ್ನು ಪ್ರವಾಸಿಗರ ಹೇಳಿಕೆಗಳಿಂದಲೂ ತಿಳಿಯಬಹುದಾಗಿದೆ.

ವಿಜಯನಗರ ಅರಸರ ಕಾಲದಲ್ಲಿ ದೇವಾಲಯಗಳ ನಿರ್ಮಾಣ ಅವಿರತವಾಗಿ ಸಾಗಿತು. ಅದರಲೂ ವಿಜಯನಗರ ಪಟ್ಟಣದಲ್ಲಿಯಂತೂ ಅದರ ಪ್ರಮಾಣವು ಹೆಚ್ಚಿನದಾಗಿದ್ದು, ಅಷ್ಟೇ ಬಿರುಸಿನಿಂದ ಇದ್ದ ದೇವಾಲಯಗಳ ವಿಸ್ತರಣೆಯೂ ಆಯಿತು. ಇದಕ್ಕೆ ಕಾರಣ ಈ ಕಾಲದಲ್ಲಿ ದೇವಾಲಯಗಳಲ್ಲಿ ನಡೆಯಬೇಕಾಗಿದ್ದ ಅನೇಕ ಧರ್ಮಾಚರಣೆಯ ಎಲ್ಲ ವಿಧಿಗಳನ್ನು ನೆರವೇರಿಸಲು ಸಾಲದಾದುದರಿಂದ ಇವುಗಳ ವಿಸ್ತರಣೆ ಅವಶ್ಯವಾಯಿತು. ಅನೇಕ ಧಾರ್ಮಿಕ ವಿಧಿಗಳನ್ನು ದೇವಾಲಯಗಳಲ್ಲಿಯೇ ನೆರವೇರಿಸಬೇಕಾದುದರಿಂದ ದೇವಾಲಯದ ತಲವಿನ್ಯಾಸ ಹೆಚ್ಚು ವಿಸ್ತಾರವಾಗಿರುತ್ತದೆ.

ಕಮಲ್ ಮಹಲ್‌ನ ಪಶ್ಚಿಮಕ್ಕಿರುವ ರಾಜಮಾನ್ಯರ ವಸತಿ ಗೃಹಗಳ ಉತ್ಖನನ ನೆಲೆಯಲ್ಲಿರುವ (150, 180 ಉ ಅಕ್ಷಾಂಶ 760, 270 ಪೂ. ರೇಖಾಂಶ) ಈ ದೇವಾಲಯವು ಕ್ರಿ.ಶ. 14–15ನೇ ಶತಮಾನದ ವಿಜಯನಗರ ಕಾಲದ ದೇವಾಲಯವಾಗಿದೆ. ನಿರ್ದಿಷ್ಟ ಕಾಲ ಮತ್ತು ಅಂತರಗಳಲ್ಲಿ ರಚಿಸಿರುವ ಕೌಶಲ್ಯಪೂರ್ಣ ನಿರ್ಮಿತಿಗಳು ವಿಜಯನಗರ ಕಾಲದ ವಾಸ್ತು ಶೈಲಿಯ ಅನನ್ಯತೆ ಮತ್ತು ವಿಶೇಷತೆಯಾಗಿವೆ. ಹಂಪಿಯು ಆದಿ ಶಿಲಾಯುಗದ ಕಾಲದಿಂದ ಹಿಡಿದು ವಿಜಯನಗರ ಕಾಲದವರೆಗಿನ ಸ್ಮಾರಕಗಳ ಸಂಪತ್ತಿನ ಗಣಿಯಾಗಿದೆಯಂದೆ ಹೇಳಬಹುದು. ಕ್ರಿ.ಶ. 1624ರಲ್ಲಿ ನಡೆದ ತಾಳಿಕೋಟೆ ಯುದ್ಧದಲ್ಲಿ ವಿಜಯನಗರ ಅರಸರಿಗೆ ಉಂಟಾದ ಸೋಲಿನಿಂದ ವಿಜಯನಗರ ಸಾಮ್ರಾಜ್ಯದ ಅವನತಿಯೊಂದಿಗೆ ಹಂಪಿಯ ವೈಭವ ನಾಶವಾಯಿತು. ಅಷ್ಟೇ ಅಲ್ಲದೆ ಹಲವಾರು ಸ್ಮಾರಕಗಳು ನಾಶವಾಗಿವೆ. ಈ ದೇವಾಲಯದ ಸಂರಕ್ಷಣಾ ಕಾರ್ಯವನ್ನು ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಸ್ಮಾರಕಗಳ ಸಂರಕ್ಷಣೆಯ ಅನುದಾನದಲ್ಲಿ ಸಂರಕ್ಷಿಸಲು ಯೋಜನೆಯನ್ನು ಕೈಗೆತ್ತಿಕೊಂಡು ಇದರಲ್ಲಿ ಈ ದೇವಾಲಯದ ಸಂರಕ್ಷಣಾ ಕಾರ್ಯವನ್ನು 2008 ರಿಂದ 2010ರಲ್ಲಿ ಪೂರ್ಣಗೊಳಿಸಲಾಯಿತು.

ಸ್ಮಾರಕದಲ್ಲಿನ ಸಂರಕ್ಷಣಾ ಕಾರ್ಯದ ವಿವರ :

ದೇವಾಲಯವನ್ನು ಸಂರಕ್ಷಣೆಗಾಗಿ ತೆಗೆದುಕೊಂಡು, ಸ್ಮಾರಕವನ್ನು ಪೂರ್ಣವಾಗಿ ಸಂರಕ್ಷಿಸುವ ದೃಷ್ಟಿಯಿಂದ ಸ್ಮಾರಕದ ಹಾಗೂ ಹೊರ ಆವರಣದಲ್ಲಿ ಬೆಳೆದ ಗಿಡಗಂಟೆಗಳನ್ನು ತೆಗೆಯುವುದು. ಸ್ಮಾರಕದ ಸಂಪೂರ್ಣ ದಾಖಲೀಕರಣದೊಂದಿಗೆ ಸಂಖ್ಯೆಯನ್ನು ನಮೂದಿಸಿ ಬಿಚ್ಚಿ ಶೇಖರಿಸಿಡಲಾಯಿತು. ಸ್ಮಾರಕದಲ್ಲಿ ಬಿತ್ತಿ, ಅದಿಷ್ಠಾನ ಹಾಗೂ ಶಿಖರದಲ್ಲಿ ಬೆಳೆದ ಗಿಡಗಳನ್ನು ಪೂರ್ಣವಾಗಿ ತೆಗೆದು ಅಡಿಪಾಯವನ್ನು ಭದ್ರಪಡಿಸಲಾಯಿತು. ದೇವಾಲಯದ ಕಲ್ಲುಗಳನ್ನು ಕ್ರಮಾಂಕದ ರೀತಿಯಲ್ಲಿ ಮೂಲ ಸ್ವರೂಪದಂತೆ ಮರುಜೋಡಿಸಿ ಮೊದಲಿನ ರೂಪದಲ್ಲಿ ಹೊಂದಿಸಲಾಯಿತು. ಬಿತ್ತಿಯ ಒಳಿ ಹಾಗೂ ಹೊರ ಪದರದ ಮಧ್ಯದಲ್ಲಿ ಇಟ್ಟಿಗೆಯ ಕಟ್ಟಡದಿಂದ ಸಂದನ್ನು ತುಂಬಲಾಯಿತು (ಕೋರ ಫಿಲ್ಲಿಂಗ್) ಶಿಥಿಲವಾದ, ನಾಶವಾದ ಹಾಗೂ ಕಾಣೆಯಾದ ಕಲ್ಲುಗಳ ಸ್ಥಳದಲ್ಲಿ ಹೊಸದಾಗಿ ಹಳೆಯ ಸ್ವರೂಪಕ್ಕೆ ಹೊಂದುವ ರೀತಿಯಲ್ಲಿ ಕಲ್ಲುಗಳ ಸರಬರಾಜಿನೊಂದಿಗೆ ನಯಗೊಳಿಸಿ ಮರು ಜೋಡಣೆ ಮಾಡಲಾಯಿತು. ಸ್ಮಾರಕದ ಸಂರಕ್ಷಣೆಯು ಒಂದು ವಿಶಿಷ್ಟವಾದ ಕಾಮಗಾರಿಯಾಗಿದ್ದರಿಂದ ಕಾಮಗಾರಿ ಪ್ರಗತಿಯಲ್ಲಿ ಹಿರಿಯ ಅಧಿಕಾರಿಗಳು ಹಾಗೂ ಸಂರಕ್ಷಣಾ ತಜ್ಞರಿಂದ ಸಲಹೆ ಹಾಗೂ ಮೇಲ್ವಿಚಾರಣೆಯಲ್ಲಿ ಕಾರ್ಯ ಅನುಷ್ಠಾನಗೊಳಿಸಲಾಯಿತು. ದೇವಾಲಯದ ಅದಿಷ್ಠಾನ, ಬಿತ್ತಿಯ ಹೊರ ಮತ್ತು ಒಳಪದರದ ಜೋಡಣೆ, ಶಿಖರದ ಜೋಡಣೆ, ಕೋರ ಫಿಲ್ಲಿಂಗ್, ಛಾವಣಿಯ ಜೋಡಣೆ, ಜಲನಿರೋಧಕ ಹೊದಿಕೆಯ ನಿರ್ಮಾಣ, ಮಳೆ ನೀರು ಹರಿದು ಹೋಗಲು ಸೂಕ್ತ ನೀರಿನ ದೋಣಿಗಳ ಜೋಡಣೆ, ನೆಲಹಾಸು ನಿರ್ಮಾಣ ಸೇರಿದಂತೆ ಸ್ಮಾರಕದ ಸಂಪೂರ್ಣ ಸಂರಕ್ಷಣಾ ಕಾರ್ಯ ನಿರ್ವಹಿಸಲಾಯಿತು. ಸ್ಮಾರಕದ ಸುತ್ತಲೂ ಪಾರದರ್ಶಕ ಚೈನಲಿಂಕ್ ಮಷಿನಲ್ಲಿ ಕಾಂಪೌಡ್ ನಿರ್ಮಿಸಲಾಯಿತು. ದೇವಾಲಯದ ಆವರಣದಲ್ಲಿ ಮಣ್ಣನ್ನು ಹರಡಿ ಸಮತಟ್ಟು ಮಾಡಲಾಯಿತು. ದೇವಾಲಯವನ್ನು ಪೂರ್ಣವಾಗಿ ಮೂಲ ಸ್ವರೂಪಕ್ಕೆ ತರಲಾಯಿತು.

ಸ್ಮಾರಕದ ಶಿಥಿಲತೆಗೆ ಕಾರಣಗಳು :

1. ವಿಜಯನಗರದ ರಕ್ಕಸತಂಗಡಿಗಿ ಯುದ್ಧದ ನಂತರ ಹಂಪಿ ಪ್ರದೇಶದಲ್ಲಿನ ಸ್ಮಾರಕಗಳ ಮೇಲೆ ಉಂಟಾದ ದಾಳಿ
2. ಸ್ಮಾರಕದಲ್ಲಿ ಹಾಗೂ ಸುತ್ತಲೂ ಬೆಳೆದಿರುವ ಗಿಡಗಂಟೆಗಳು
3. ಸ್ಮಾರಕದ ಪಕ್ಕದಲ್ಲಿನ ಜನವಸತಿಯ ನಾಶದಿಂದ ಉಂಟಾದ ಮಣ್ಣಿನ ಜಾರುವಿಕೆ
4. ಮಳೆಗಾಲದಲ್ಲಿ ಸ್ಮಾರಕದ ಪಶ್ಚಿಮ ಹಾಗೂ ದಕ್ಷಿಣ ದಿಕ್ಕಿನಲ್ಲಿ ಹರಿಯುವ ಮಳೆಯ ನೀರಿನಿಂದಾಗಿ ಮಣ್ಣಿನ ಸವೇತದಿಂದ ಉಂಟಾದ ಆಳವಾದ ಕೊರಕಲುಗಳು
5. ಹಲವಾರು ನೈಸರ್ಗಿಕ ಕಾರಣದಿಂದ ಸ್ಮಾರಕದ ಮೇಲೆ ಉಂಟಾದ ಪರಿಣಾಮಗಳು
6. ಸ್ಮಾರಕದಲ್ಲಿ ನಿಧಿ ಆಶೆಗೆ ಮಾಡಿದ ನೆಲಹಾಸಿನ ಹಾನಿಗಳು ಹಾಗೂ ಸ್ಮಾರಕದ ಹತ್ತಿರ ವ್ಯವಸಾಯದ ಸಮಯದಲ್ಲಿ ಶೇಖರಿಸಿದ ಅನುಪಯುಕ್ತ ಸಾಮಾಗ್ರಿಗಳು, ಗಿಡಗಂಟೆಗಳನ್ನು ಸುಡಲು ಹಾಕಿದ ಬೆಂಕಿ
7. ದೇವಾಲಯದಲ್ಲಿ ಮಾನವನಿಂದ ಉಂಟಾದ ಹೊರ ಪದರಿನ ಕಲ್ಲುಗಳ ನಾಶ ಹಾಗೂ ಹೊರ ಪದರದ ಗೋಡೆಗಳಿಂದ ಉಂಟಾದ ಶಿಥಿಲತೆ
8. ಶಿಥಿಲವಾದ ಜಲನಿರೋಧಕ ಹೊದಿಕೆಯಿಂದ ಶಿಖರದಲ್ಲಿ ಗಿಡಗಳು ಬೆಳೆದು ಉಂಟಾದ ಸಂದುಗಳಿಂದ
9. ಸ್ಮಾರಕದ ನಿರ್ವಹಣಾ ಕೊರತೆಯಿಂದ ಉಂಟಾದ ಹಾನಿಗಳು

ಸ್ಮಾರಕದಲ್ಲಿ ಉಂಟಾಗುವ ಶಿಥಿಲತೆಯ ಅಂಶಗಳು:

1. ಅಡಿಪಾಯದ ಅಭದ್ರತೆಯಿಂದ ಉಂಟಾಗಿರುವ ಕುಸಿತ
2. ಸ್ಮಾರಕದಲ್ಲಿ ಗಿಡಗಂಟೆಗಳು ಬೆಳೆದು ಹೊರ ಮತ್ತು ಒಳ ಗೋಡೆಗಳ ಕಲ್ಲುಗಳು ಸ್ಥಳಾಂತರ ಮತ್ತು ಸ್ಥಾನ ಪಲ್ಲಟ

3. ದೇವಾಲಯದ ಗರ್ಭಗೃಹ ಮತ್ತು ಮುಖ ಮಂಟಪದಲ್ಲಿ ನಿಧಿಗಳ್ಳರು ಉಂಟುಮಾಡಿರುವ ಹಾನಿಯಿಂದ ಉಂಟಾದ ನೆಲಹಾಸಿನ ಶಿಥಿಲತೆ
4. ದೇವಾಲಯದ ಮೇಲ್ಭಾಗದ ಛಾವಣಿ ಕಲ್ಲಿನಲ್ಲಿ ಶಿಥಿಲತೆ ಹಾಗೂ ಜಲ ನಿರೋಧಕ ಹೊದಿಕೆಯಲ್ಲಿ ಉಂಟಾದ ಬಿರುಕುಗಳು
5. ದೇವಾಲಯದ ಸಮೀಪದಲ್ಲಿ ಹಾಕಿದ ಬೆಂಕಿಯಿಂದ ಉಂಟಾದ ಕಲ್ಲುಗಳ ಸಿಡಿಯುವಿಕೆ
6. ಮಳೆಯ ನೀರು ಸೂಕ್ತವಾಗಿ ಹರಿದು ಹೋಗುವ ವ್ಯವಸ್ಥೆ ಇಲ್ಲದ ಕಾರಣ ಉಂಟಾದ ಅಡಿಪಾಯದ ಕುಸಿಯುವಿಕೆ
7. ಅಡಿಪಾಯದ ಮಣ್ಣಿನಲ್ಲಿ ಪ್ರಾಣಿಗಳು ತಮ್ಮ ವಾಸಕ್ಕಾಗಿ ಮಾಡಿಕೊಂಡ ಬಿಲಗಳು

ಸ್ಮಾರಕದ ಸಂರಕ್ಷಣೆಗೆ ತೆಗೆದುಕೊಳ್ಳಲಾದ ಕ್ರಮಗಳು

1. ಸ್ಮಾರಕದ ಅಡಿಪಾಯವನ್ನು ಭದ್ರಪಡಿಸಲು ಸ್ಮಾರಕದ ಕಲ್ಲುಗಳಿಗೆ ವೈಜ್ಞಾನಿಕ ರೀತಿಯಲ್ಲಿ ನಕ್ಷೆ ಸಿದ್ಧಪಡಿಸಿ ಸಂಖ್ಯೆಗಳನ್ನು ನಮೂದಿಸಿ ಪೂರ್ಣವಾಗಿ ಸ್ಮಾರಕವನ್ನು ಬಿಚ್ಚಿ ಕಲ್ಲುಗಳನ್ನು ವ್ಯವಸ್ಥಿತವಾಗಿ ಶೇಖರಿಸಿಡುವುದು
2. ಸ್ಮಾರಕದ ಬುನಾದಿಯ ಭದ್ರತೆಗಾಗಿ ತಳಮಟ್ಟದಲ್ಲಿ ಅವಶ್ಯಕ ಸಿಮೆಂಟ್ ಕಾಂಕ್ರಿಟ್ ಪದರಿನ ನಿರ್ಮಾಣ
3. ಶಿಥಿಲಗೊಂಡ ಹಾಗೂ ನಾಶಗೊಂಡ ಸ್ಮಾರಕದ ಕಲ್ಲುಗಳ ಜಾಗದಲ್ಲಿ ಹೊಸ ಕಲ್ಲುಗಳನ್ನು ಸರಬರಾಜು ಮಾಡುವುದು
4. ಹೊಸ ಕಲ್ಲುಗಳನ್ನು ಸ್ಮಾರಕದಲ್ಲಿ ಶಿಥಿಲವಾದ ಕಲ್ಲುಗಳ ವಿನ್ಯಾಸಕ್ಕೆ ಹೊಂದುವ ರೀತಿಯಲ್ಲಿ ನಯಗೊಳಿಸಿ ಆಕಾರಕ್ಕೆ ತಕ್ಕಂತೆ ಸಿದ್ಧಪಡಿಸುವುದು
5. ಬಿಚ್ಚಿ ಶೇಖರಿಸಿಡಲಾದ ಕಲ್ಲುಗಳನ್ನು ಮೂಲ ಸ್ವರೂಪದಲ್ಲಿ ಮರು ಜೋಡಿಸುವುದು
6. ಒಳ ಮತ್ತು ಹೊರ ಗೋಡೆಗಳ ಪದರುಗಳ ಮಧ್ಯದ ಸಂದುಗಳಿಗೆ ಇಟ್ಟಿಗೆ, ಕಲ್ಲು ಮತ್ತು ಗಾರೆಯನ್ನು ತುಂಬುವುದು (ಕೋರ್ ಫಿಲ್ಲಿಂಗ್)
7. ವಿನ್ಯಾಸಕ್ಕೆ ಹೊಂದುವ ರೀತಿಯಲ್ಲಿ ನೆಲ ಹಾಸನ್ನು ನಿರ್ಮಿಸುವುದು
8. ಸ್ಮಾರಕದ ಛಾವಣಿಯ ಮೇಲ್ಭಾಗದಲ್ಲಿ ಜಲನಿರೋಧಕ ಹೊದಿಕೆಯ ನಿರ್ಮಾಣ
9. ಛಾವಣಿಯ ಮೇಲೆ ಬಿಳುವ ಮಳೆಯ ನೀರು ಹರಿದುಹೋಗಲು ನೀರಿನ ದೋಣಿಗಳನ್ನು ಅಳವಡಿಸುವುದು
10. ಅಡಿಪಾಯದಲ್ಲಿ ಮಳೆನೀರು ಸೇರದಂತೆ ಸ್ಮಾರಕದ ಸುತ್ತಲೂ ನೆಲಹಾಸಿನ ನಿರ್ಮಾಣ
11. ಸಂರಕ್ಷಣಾ ಕಾಮಗಾರಿ ಮುಗಿದ ನಂತರ ಸ್ಮಾರಕವನ್ನು ಶುದ್ಧನೀರಿನಿಂದ ಸ್ವಚ್ಛಪಡಿಸಿ ಶೇಖರಣೆಗೊಂಡ ಅನುಪಯುಕ್ತ ವಸ್ತುಗಳು ವಿಸರ್ಜಿಸಿ ಆವರಣವನ್ನು ಸ್ವಚ್ಛಗೊಳಿಸುವುದು
12. ಸ್ಮಾರಕದ ಸುತ್ತಲು ಪಾರದರ್ಶಕ ಬೇಲಿಯ ನಿರ್ಮಾಣ

ದೇವಾಲಯದ ಕಲೆ ಮತ್ತು ವಾಸ್ತುಶಿಲ್ಪ :

ಸ್ಮಾರಕದ ಹೆಸರು	:	ನರಸಿಂಹ (ವೈಷ್ಣವ) ದೇವಾಲಯ
ಸ್ಥಳ	:	ಕಮಲ್ ಮಹಲ್‌ನ ಪಶ್ಚಿಮಕ್ಕಿರುವ ಎನ್.ಎಂ. ಕ್ಯೂ ಉತ್ಖನನ ನೆಲೆಯಲ್ಲಿ
ಕಾಲ	:	14–15ನೇ ಶತಮಾನ
ಶೈಲಿ	:	ವಿಜಯನಗರ
ಅಭಿಮುಖ	:	ಪೂರ್ವ
ಮಾಧ್ಯಮ	:	ಕಣಶಿಲೆ(ಗ್ರಾನೈಟ್)

ಅಂದಾಜು ಮೊತ್ತ : 20.00 ಲಕ್ಷಗಳು

ಗುತ್ತಿಗೆದಾರರು : ಆರ್. ಗೋಪಾಲ್, ಕಮಲಾಪುರ, ಹೊಸಪೇಟೆ ತಾಲೂಕು

ಪ್ರಕಟಣೆ ದಾಖಲೆ : N N/1 Page-119-120 VIJAYANAGAR ARCHITECTURAL INVENTORY OF THE URBEN CORE GEORGE MICHELL

ತಳವಿನ್ಯಾಸ : ಕಣಶಿಲೆಯಿಂದ ನಿರ್ಮಿಸಿರುವ ಈ ದೇವಾಲಯದ ತಳವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ಎತ್ತರಿಸಿದ ಮುಖಮಂಟಪ ಮತ್ತು ತೆರೆದ ಸಭಾಮಂಟಪವನ್ನು ಹೊಂದಿದೆ. ಏಕಕೂಟ ರಚನೆಯನ್ನು ಹೊಂದಿದ್ದು, ನಿರಂಧಾರ ಮಾದರಿಯ ದೇವಾಲಯವಾಗಿದೆ.

ಗರ್ಭಗೃಹ : ಈ ದೇವಾಲಯದ ಗರ್ಭಗೃಹವು ಚಚ್ಚೌಕಾಕಾರವಾಗಿದ್ದು, ಇದು 2.50 ಮೀಟರ್ ಉದ್ದ ಮತ್ತು 2.50 ಮೀಟರ್ ಅಗಲವನ್ನು ಹೊಂದಿದೆ. ಮೇಲ್ಭಾಗದಲ್ಲಿ ಇಟ್ಟಿಗೆ ಮತ್ತು ಗಾರೆಯಿಂದ ಮಾಡಿದ ಶಿಖರವಿದೆ. ಇದರ ಪ್ರವೇಶದ್ವಾರವು ಸಾಧಾರಣವಾಗಿದ್ದು, ಸ್ತಂಭಶಾಖೆಯನ್ನು ಮಾತ್ರ ಒಳಗೊಂಡಿದೆ. ಯಾವುದೇ ಉಬ್ಬುಶಿಲ್ಪಗಳು ಇರುವುದಿಲ್ಲ.

ಅಂತರಾಳ : ಈ ದೇವಾಲಯದ ಅಂತರಾಳವು 2.50 ಮೀಟರ್ ಉದ್ದ ಮತ್ತು 2.50 ಮೀಟರ್ ಅಗಲವನ್ನು ಹೊಂದಿದೆ. ಇದರ ಮೇಲ್ಛಾವಣಿಯು ಸಾಧಾರಣವಾಗಿದ್ದು ಕಲ್ಲುಚಪ್ಪಡಿಗಳಿಂದ ಮಾಡಲ್ಪಟ್ಟಿದೆ. ಇದರ ಪ್ರವೇಶದ್ವಾರವು ಸಾಧಾರಣವಾಗಿದ್ದು, ಪಂಚಶಾಖೆಗಳುಳ್ಳ ಸಾದಾಪಟ್ಟಿಕೆಗಳನ್ನು ಹೊಂದಿದೆ. ಅದರ ಕೆಳಭಾಗದಲ್ಲಿ ನಾಗಬಂಧವನ್ನು ಒಳಗೊಂಡಿದೆ. ಲಲಾಟದಲ್ಲಿ ದೇವಿಯ ಉಬ್ಬುಶಿಲ್ಪವಿದೆ. ಕೆಳಭಾಗದಲ್ಲಿ ಅರಳಿದ ಪುಷ್ಪದ ಕೆತ್ತನೆಯಿದೆ. ಇಕ್ಕೆಲಗಳಲ್ಲಿ ಶಂಖ, ಚಕ್ರ ಮತ್ತು ಗಧೆಗಳನ್ನು ಹಿಡಿದು ನಿಂತ ವೈಷ್ಣವ ದ್ವಾರಪಾಲಕರ ಉಬ್ಬುಶಿಲ್ಪಗಳಿವೆ.

ಎತ್ತರಿಸಿದ ಮುಖಮಂಟಪ : ಎತ್ತರಿಸಿದ ಮುಖಮಂಟಪವು 2.10 ಮೀಟರ್ ಉದ್ದ ಮತ್ತು 6.90 ಮೀಟರ್ ಅಗಲವನ್ನು ಹೊಂದಿದೆ. ಇದು 3 ಅಂಕಣಗಳನ್ನು ಹೊಂದಿದೆ. ಇದರಲ್ಲಿ ಒಟ್ಟು 6 ಕಂಬಗಳಿದ್ದು ಅವುಗಳಲ್ಲಿ 2 ಸ್ವತಂತ್ರ ಕಂಬಗಳು ಮತ್ತು 4 ಅರ್ಧಗಂಬಗಳಿವೆ. ಅವುಗಳಲ್ಲಿನ ಮಧ್ಯದ 2 ಕಂಬಗಳು ಪೀಠ, ಕಾಂಡ, ಫಲಕದ ಮೂಲಕ ಮೇಲೆರುತ್ತಾ ಹೋಗಿ ಬೋದಿಗೆಯೊಂದಿಗೆ ಶಿಲಾತೊಲೆಗಳನ್ನು ಹೊಂದಿವೆ. ಕಂಬಗಳ ಪೀಠವು ಚತುರಾಷ್ರಕಾರದಲ್ಲಿದ್ದು ಕಾಂಡ ಭಾಗವು ನಾಲ್ಕು ಮುಖದ ಚೌಕ ಮತ್ತು ನಾಗಬಂಧವನ್ನು ಹೊಂದಿದೆ. ಈ ನಾಲ್ಕು ಮುಖದ ಚೌಕಗಳಲ್ಲಿ ಯಾಳಿ, ಆಂಜನೇಯ, ಅಂಜಲಿ ಮುದ್ರೆಯಲ್ಲಿರುವ ಭಕ್ತ, ನೃತ್ಯಭಂಗಿಯಲ್ಲಿರುವ ಸ್ತ್ರೀಶಿಲ್ಪ ಹೀಗೆ ಅನೇಕ ಉಬ್ಬುಶಿಲ್ಪಗಳನ್ನು ಕೆತ್ತಲಾಗಿದೆ. ನಂತರ ಹದಿನಾರು ಪಟ್ಟಿಕೆಗಳು, ನಂತರ ಅಷ್ಟಪಟ್ಟಿಕೆ, ಮತ್ತೇ ಹದಿನಾರು ಪಟ್ಟಿಕೆಗಳು, ನಂತರ ಮತ್ತೇ ನಾಲ್ಕು ಮುಖದ ಚೌಕಗಳಲ್ಲಿ ಅರಳಿದ ಪುಷ್ಪ, ಅಂಜಲಿ ಮುದ್ರೆಯಲ್ಲಿರುವ ಭಕ್ತ, ಗಣಪತಿ, ಹಂಸ, ಅಂಜಲಿ ಮುದ್ರೆಯಲ್ಲಿರುವ ಗರುಡ, ಯತಿ, ಆಂಜನೇಯ ಮತ್ತಿತರ ಉಬ್ಬುಶಿಲ್ಪಗಳಿವೆ. ನಂತರ ಹದಿನಾರು ಪಟ್ಟಿಕೆಗಳು, ನಂತರ ಅಷ್ಟಪಟ್ಟಿಕೆ, ಮತ್ತೇ ಹದಿನಾರು ಪಟ್ಟಿಕೆಗಳಿವೆ. ಅದರ ಮೇಲ್ಭಾಗದಲ್ಲಿನ ನಾಲ್ಕು ಮುಖದ ಚೌಕಗಳಲ್ಲಿ ಶಂಖ, ಚಕ್ರ, ಕಾಳಿಂಗಮರ್ಧನ, ಹಂಸ ಮತ್ತಿತರ ಉಬ್ಬುಶಿಲ್ಪಗಳಿವೆ. ನಂತರ ಬೋದಿಗೆಯನ್ನು ಒಳಗೊಂಡಿವೆ. ಇದರ ಮೇಲ್ಛಾವಣಿಯು ಸಾಧಾರಣವಾಗಿದ್ದು ಕಲ್ಲುಚಪ್ಪಡಿಗಳಿಂದ ಮಾಡಲ್ಪಟ್ಟಿದೆ. ಇದು ಎತ್ತರವಾದ ವೇದಿಕೆಯನ್ನು ಹೊಂದಿದ್ದು ಇದನ್ನು ಪ್ರವೇಶಿಸಲು ಸೋಪಾನಗಳು ಮತ್ತು ಯಾಳಿಗಳುಳ್ಳ ಹಸ್ತಿಹಸ್ತ ಫಲಕಗಳಿವೆ.

ಕೆಳಹಂತದ ತೆರೆದ ಸಭಾಮಂಟಪ : ಕೆಳಹಂತದ ತೆರೆದ ಸಭಾಮಂಟಪವು 8.40 ಮೀಟರ್ ಉದ್ದ ಮತ್ತು 7.30 ಮೀಟರ್ ಅಗಲವನ್ನು ಹೊಂದಿದೆ. ಇದು 9 ಅಂಕಣಗಳನ್ನು ಹೊಂದಿದೆ. ಇದರಲ್ಲಿ ಒಟ್ಟು 12 ಕಂಬಗಳಿದ್ದು ಅವುಗಳಲ್ಲಿ 6 ಸ್ವತಂತ್ರ ಕಂಬಗಳು ಮತ್ತು 6 ಅರ್ಧಗಂಬಗಳಿವೆ. ಕಂಬಗಳು ಪೀಠ, ಕಾಂಡದ ಮೂಲಕ ಮೇಲೆರುತ್ತಾ ಹೋಗಿ ಪುಷ್ಪಬೋದಿಗೆಯೊಂದಿಗೆ ಶಿಲಾತೊಲೆಗಳನ್ನು ಹೊಂದಿವೆ. ಕಂಬಗಳ ಪೀಠವು ಚತುರಾಷ್ರಕಾರದಲ್ಲಿದ್ದು ಕಾಂಡ ಭಾಗವು ನಾಲ್ಕು ಮುಖದ ಚೌಕ ಮತ್ತು ನಾಗಬಂಧವನ್ನು ಹೊಂದಿವೆ. ನಾಲ್ಕು ಮುಖದ ಚೌಕಗಳಲ್ಲಿ ಯಾಳಿ, ಆಂಜನೇಯ, ಅಂಜಲಿ ಮುದ್ರೆಯಲ್ಲಿರುವ ಭಕ್ತ, ನೃತ್ಯಭಂಗಿಯಲ್ಲಿರುವ ಸ್ತ್ರೀಶಿಲ್ಪ, ಯತಿ ಹೀಗೆ ಅನೇಕ ಉಬ್ಬುಶಿಲ್ಪಗಳನ್ನು ಕೆತ್ತಲಾಗಿದೆ.

ನಂತರ ಹದಿನಾರು ಪಟ್ಟಿಕೆಗಳು, ನಂತರ ಅಷ್ಟಪಟ್ಟಿಕೆ, ಮತ್ತೇ ಹದಿನಾರು ಪಟ್ಟಿಕೆಗಳು, ನಂತರ ಮತ್ತೇ ನಾಲ್ಕು ಮುಖದ ಚೌಕಗಳಲ್ಲಿ ಅರಳಿದ ಪುಷ್ಪ, ಅಂಜಲಿ ಮುದ್ರೆಯಲ್ಲಿರುವ ಭಕ್ತ, ಆಂಜನೇಯ, ಬಾಲಕೃಷ್ಣ, ತಮಟ್ಟೆಬಾರಿಸುತ್ತಿರುವ ನೃತ್ಯಗಾರ ಮತ್ತಿತರ ಉಬ್ಬುಶಿಲ್ಪಗಳಿವೆ. ನಂತರ ಹದಿನಾರು ಪಟ್ಟಿಕೆಗಳು, ನಂತರ ಅಷ್ಟಪಟ್ಟಿಕೆ, ಮತ್ತೇ ಹದಿನಾರು ಪಟ್ಟಿಕೆಗಳಿವೆ. ಅದರ ಮೇಲ್ಭಾಗದಲ್ಲಿನ ನಾಲ್ಕು ಮುಖದ ಚೌಕಗಳಲ್ಲಿ ಶಂಖ, ಚಕ್ರ, ಗರುಡ ಮತ್ತಿತರ ಉಬ್ಬುಶಿಲ್ಪಗಳಿವೆ. ನಂತರ ಪುಷ್ಪಬೋದಿಗೆಯನ್ನು ಒಳಗೊಂಡಿವೆ. ಈ ತೆರೆದ ಸಭಾಮಂಟಪಕ್ಕೆ ಪೂರ್ವ, ಉತ್ತರ ಮತ್ತು ದಕ್ಷಿಣದಲ್ಲಿ ಪ್ರವೇಶದ್ವಾರಗಳಿವೆ. ಆದರೆ ಪೂರ್ವದ ದ್ವಾರವೇ ಮುಖ್ಯ ಪ್ರವೇಶದ್ವಾರವಾಗಿದ್ದು, ಇದಕ್ಕೆ ಬಾಗಿಲುವಾಡ ಇರುವುದಿಲ್ಲ ಇದು ಮುಂಭಾಗಕ್ಕೆ ತೆರೆದಿರುತ್ತದೆ. ಇದನ್ನು ಪ್ರವೇಶಿಸಲು ಸೋಪಾನಗಳು ಮತ್ತು ಆನೆಗಳುಳ್ಳ ಹಸ್ತಿಹಸ್ತ ಫಲಕಗಳಿವೆ. ಉತ್ತರ ಹಾಗೂ ದಕ್ಷಿಣ ದ್ವಾರಕ್ಕೆ ಬಾಗಿಲುವಾಡವಿದ್ದು, ಸಾದಾಪಟ್ಟಿಕೆಗಳನ್ನು ಹೊಂದಿದೆ. ಲಲಾಟದಲ್ಲಿ ಅರಳಿದ ಪುಷ್ಪ ಹಾಗೂ ಇಕ್ಕೆಲಗಳಲ್ಲಿ ಶಂಖ, ಚಕ್ರ ಮತ್ತು ಗಧೆಗಳನ್ನು ಹಿಡಿದು ನಿಂತ ವೈಷ್ಣವ ದ್ವಾರಪಾಲಕರ ಉಬ್ಬುಶಿಲ್ಪಗಳಿವೆ. ಇದರ ಮೇಲ್ಛಾವಣಿಯು ಸಾಧಾರಣವಾಗಿದ್ದು ಕಲ್ಲುಚಪ್ಪಡಿಗಳಿಂದ ಮಾಡಲ್ಪಟ್ಟಿದೆ. ಇದು ಮುಂಭಾಗದಲ್ಲಿ ತೆರೆದುಕೊಂಡಿದೆ. ಇದರ ಮೇಲ್ಭಾಗದಲ್ಲಿ ಕಪೋತಕಾರದ ಚಜ್ಜಾವನ್ನು (ಇಳಿಜಾರಿನ ಮಾಡು) ಹೊಂದಿದೆ.


ಈ ದೇವಾಲಯವು ಅಧಿಷ್ಠಾನ, ತ್ರಿಪಟ್ಟ ಕುಮುದ, ಕಂಠ, ಗಳಗಳನ್ನು ಹೊಂದಿದೆ. ಅದರ ಮೇಲ್ಭಾಗದಲ್ಲಿನ ಹೊರಭಿತ್ತಿಯು ಸಾಧಾರಣವಾಗಿದ್ದು, ಕಲ್ಲುಚಪ್ಪಡಿಗಳನ್ನು ಒಂದರ ಮೇಲೆ ಒಂದರಂತೆ ಇಟ್ಟು ನಿರ್ಮಿಸಲಾಗಿದೆ. ಗರ್ಭಗೃಹದ ಮೇಲ್ಭಾಗದಲ್ಲಿ ಇಟ್ಟಿಗೆ ಮತ್ತು ಗಾರೆಯಿಂದ ಮಾಡಿದ ಶಿಖರವಿದೆ. ಸ್ಮಾರಕದ ಸುತ್ತಲೂ ಪಾರದರ್ಶಕ ಚೈನಲಿಂಕ್ ಮಷಿನಲ್ಲಿ ಕಾಂಪೌಡ್ ನಿರ್ಮಿಸಲಾಗಿದೆ.

(ಈ ಲೇಖನವನ್ನು ಮಂಡಿಸಲು ಅವಕಾಶ ನೀಡಿದ ಇಲಾಖೆಯ ಆಯುಕ್ತರಿಗೆ ಹಾಗೂ GEORGE MICHELL ಅವರ VIJAYANAGAR ARCHITECTURAL INVENTORY OF THE URBEN CORE ಎಂಬ ಪುಸ್ತಕವನ್ನು ಇಲಾಖೆಯಿಂದ ಪ್ರಕಟಿಸಿಲಾಗಿದ್ದು, ಈ ಪುಸ್ತಕದಿಂದ ನಕ್ಷೆಗಳನ್ನು ಪಡೆಯಲಾಗಿರುತ್ತದೆ. ಇವರಿಗೂ ಕೃತಜ್ಞತೆಗಳು)


ಆಧಾರ ಸೂಚಿ

1. ವಸುಂಧರ ಫಿಲಿಯೋಜಾ, 1982, **ಅಳಿದುಳಿದ ಹಂಪೆ,** ಮಾನಸೋಲ್ಲಾಸ ಪ್ರಕಾಶನ, ಬೆಂಗಳೂರು.
2. ರಾಬರ್ಟ್ ಸಿವೆಲ್, (ಕನ್ನಡಕ್ಕೆ ಅನುವಾದ– ಸದಾನಂದ ಕನವಳ್ಳಿ), 2015, **ಮರೆತುಹೋದ ಮಹಾಸಾಮ್ರಾಜ್ಯ ವಿಜಯನಗರ,** ಅಂಕಿತ ಪುಸ್ತಕ, ಬೆಂಗಳೂರು.
3. ಮನೋಜ್ ಜಿ., 2015, **ದೇವಾಲಯ ವಾಸ್ತುವಿಜ್ಞಾನ ಶಾಸ್ತ್ರಗಳ ಹಿನ್ನೆಲೆಯಲ್ಲಿ,** ಸುಬೋಧಿನಿ ಬುಕ್ ಪಬ್ಲಿಷರ್ಸ್ ಮತ್ತು ನಾಲೆಡ್ಜ್ ಅಕಾಡೆಮಿ, ಚಿತ್ರದುರ್ಗ.
4. ಮಹದೇವ ಸಿ., 2000, **ವಿಜಯನಗರದ ಗಾರೆಶಿಲ್ಪ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
5. ರಾಮಚಂದ್ರರಾವ್ ಎಸ್.ಕೆ., 1979, **ಭಾರತದ ದೇವಾಲಯ ನೆಲೆ:ಹಿನ್ನೆಲೆ,** ಐ.ಬಿ.ಹೆಚ್. ಪ್ರಕಾಶನ, ಬೆಂಗಳೂರು.
6. ವಸುಂಧರ ಫಿಲಿಯೋಜಾ, 1982, **ಅಳಿದುಳಿದ ಹಂಪೆ,** ಮಾನಸೋಲ್ಲಾಸ ಪ್ರಕಾಶನ, ಬೆಂಗಳೂರು.
7. George Michell, 1990, **Vijayanagara Architectural Inventory of the Urben Core Vol- I And II,** Directorate of Archaeology and Museums Mysore.
8. Nagaraja Rao, M.S., **Vijayanagara Progress of Research 1979-1983,** Directorate of Archaeology and Museums Mysore.
9. Devaraj D.V. and Channabasppa S. Patil., **Vijayanagara Progress of Research 1984-1987,** Directorate of Archaeology and Museums Mysore.
10. Devaraj D.V. and Channabasppa S. Patil., **Vijayanagara Progress of Research 1987-1988,** Directorate of Archaeology and Museums Mysore.


ತಲನಕ್ಷೆ ಮತ್ತು ಛಾಯಾಚಿತ್ರಗಳು



Temple Plan



Section of the Temple



Elevation of Temple



ದೇವಾಲಯದ ಸಂರಕ್ಷಣಾ ಪೂರ್ವದಲ್ಲಿ



ದೇವಾಲಯದ ಸಂರಕ್ಷಣಾ ಕಾರ್ಯದ ನಂತರದಲ್ಲಿ



ದೇವಾಲಯ ಸಂರಕ್ಷಣಾ ಪೂರ್ವದಲ್ಲಿ



ದೇವಾಲಯದ ಸಂರಕ್ಷಣಾ ಕಾರ್ಯದ ನಂತರದಲ್ಲಿ



ದೇವಾಲಯದ ಸಂರಕ್ಷಣಾ ಕಾರ್ಯದ ಪ್ರಗತಿಯಲ್ಲಿ



ದೇವಾಲಯದ ಸಂರಕ್ಷಣಾ ಕಾರ್ಯದ ಪ್ರಗತಿಯಲ್ಲಿ



ದೇವಾಲಯದ ಮುಂಭಾಗ ಸಂರಕ್ಷಣಾ ಪೂರ್ವದಲ್ಲಿ



ದೇವಾಲಯದ ಭಿತ್ತಿ ಸಂರಕ್ಷಣಾ ಪೂರ್ವದಲ್ಲಿ



ದೇವಾಲಯದ ಭಿತ್ತಿ ಸಂರಕ್ಷಣಾ ಪೂರ್ವದಲ್ಲಿ



ದೇವಾಲಯದ ಮುಂಭಾಗ ಸಂರಕ್ಷಣಾ ಪೂರ್ವದಲ್ಲಿ

14. ಹಂಪಿ ಪರಿಸರದ ಶಿಲಾವರ್ಣಚಿತ್ರಲೇಖ ಮತ್ತು ಸೈಂಧವಿ ಲಿಪಿ

– ಡಾ. ಕೆ.ಎಂ. ಮೇತ್ರಿ


ಕರ್ನಾಟಕ ರಾಜ್ಯದ ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನ ವಿಶ್ವವಿಖ್ಯಾತ ಹಂಪಿ ಪರಿಸರದಲ್ಲಿಯ ಗುಹಾಲಯಗಳಲ್ಲಿ ಮತ್ತು ಬಯಲುಬಂಡೆಗಳಲ್ಲಿ ಹೇರಳವಾಗಿ ಪ್ರಾಚೀನ ಶಿಲಾವರ್ಣಚಿತ್ರಲಿಪಿಗಳು ಮತ್ತು ರೇಖಾಚಿತ್ರಗಳು ಕಾಣಸಿಗುತ್ತವೆ. ಅಂತಹವುಗಳಲ್ಲಿ ದರೋಜಿ ಕರಡಿ ಧಾಮದಲ್ಲಿಯ ಗೊಂಡ್ವಾನ ರಾಜಲಾಂಛನ ಮತ್ತು ತಳಾರಿ(ತಳವಾರ)ಘಟ್ಟ ಹೆಬ್ಬಾಗಿಲಿನ ಸಮೀಪದಲ್ಲಿರುವ ಕೋಟಮ್ಮ/ಕೋಟಂಬ ಗುಹಾಲಯವು ಒಂದು. ಈ ಗುಹಾಲಯವು ಆನೆಗೊಂದಿ ಮುಂದಿನ ತುಂಗಭದ್ರ ನದಿದಡದ ಸಮೀಪದ ಬೆಟ್ಟದಲ್ಲಿದೆ. ಈ ಶಿಲಾವರ್ಣಚಿತ್ರಲಿಪಿಗಳನ್ನು ದರೋಜಿ ಕರಡಿಧಾಮ ಅಧ್ಯಯನದ ಸಂದರ್ಭದಲ್ಲಿ 2004ರಲ್ಲಿ ಗಮನಿಸಿದ್ದೆ. ಅಂದಿನಿಂದ ಈ ವರ್ಣಚಿತ್ರಲಿಪಿಗಳ ಗೂಢಾರ್ಥ ತಿಳಿಯುವ ಚಿಂತನೆಯಲ್ಲಿದ್ದೆ.

ಕನ್ನಡ ವಿಶ್ವವಿದ್ಯಾಲಯದ ಬುಡಕಟ್ಟು ಅಧ್ಯಯನ ವಿಭಾಗದಲ್ಲಿ ಗೊಂಡಿ ನುಡಿಕೋಶದ ಪ್ರಮಾಣೀಕರಣ: ರಾಷ್ಟ್ರೀಯ ವಿಚಾರ ಸಂಕಿರಣ–ಕಾರ್ಯಾಗಾರವನ್ನು ಮೈಸೂರಿನ ಭಾರತೀಯ ಭಾಷಾ ಸಂಸ್ಥಾನದ ಸಹಯೋಗದಲ್ಲಿ 2014ರ ಆಗಸ್ಟ್ 24ರಿಂದ 29ರವರೆಗೆ ಹಮ್ಮಿಕೊಳ್ಳಲಾಗಿತ್ತು. ಇದರಲ್ಲಿ ಆಂಧ್ರ ಪ್ರದೇಶ, ತೆಲಂಗಾಣ, ಛತ್ತೀಸಗಡ, ಮಧ್ಯ ಪ್ರದೇಶ, ಮಹಾರಾಷ್ಟ್ರ ಮತ್ತು ಕರ್ನಾಟಕ ರಾಜ್ಯಗಳ ಗೊಂಡಿ ಭಾಷೆ ಮತ್ತು ಸಂಸ್ಕೃತಿಯ ತಿಳುವಳಿಕೆಯುಳ್ಳ ಸಂಪನ್ಮೂಲ ವ್ಯಕ್ತಿಗಳು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ 28.8.2014ರಂದು ದರೋಜಿ ಮತ್ತು ಹಂಪಿ ಪರಿಸರದಲ್ಲಿ ಕ್ಷೇತ್ರದರ್ಶನ ಕೈಗೊಳ್ಳಲಾಗಿತ್ತು. ಕ್ಷೇತ್ರಕಾರ್ಯದಲ್ಲಿ ಕಂಡುಕೊಂಡ ಅಮೂಲ್ಯ ಮಾಹಿತಿಗಳು ಹೀಗಿವೆ.

ಬಳ್ಳಾರಿ ಜಿಲ್ಲೆಯ ಸಂಡೂರು ತಾಲೂಕಿನ ಹಳೆ ದರೋಜಿ ಒಂದು ಐತಿಹಾಸಿಕ ಗ್ರಾಮ. ಇದರ ಸಮೀಪದ ಗುಡ್ಡದ ಮೇಲಿನ ರಾಮಲಿಂಗೇಶ್ವರ ಗುಡಿಯ ಮೇಲಿನ ಕೋಟೆಯು ಕುರುಗೋಡು ಸಿಂದ(10ನೇ ಶತಮಾನ)ರ ಮತ್ತು ಮುಮ್ಮಡಿ ಸಿಂಗೆಯ ನಾಯಕ (ಕ್ರಿಶ 1280–1300) ಅರಸರ ಪೂರ್ವದಾಗಿರುವುದು. ಈ ಕೋಟೆಯು ಸಮುದ್ರ ಮಟ್ಟದಿಂದ 674 ಮೀಟರ್ (2,212 ಅಡಿ) ಎತ್ತರದಲ್ಲಿರುವುದು. ಗುಡ್ಡದ ಅತ್ಯುನ್ನತ ಶಿಖರದ ನಾಲ್ಕೈದು ಎಕರೆಗಳ ವಿಸ್ತೀರ್ಣದಲ್ಲಿ ಈ ಕೋಟೆ ಪ್ರಕೃತಿ ಸಹಜವಾಗಿ ಕಾಣಸಿಗುವುದು. ಇದೊಂದು ಆದಿಮಾನವನ ಕೋಟೆ ಎಂದರೆ ತಪ್ಪಾಗದು. ಇಲ್ಲಿಯ ಬೃಹತ್ ಬಯಲು ಬಂಡೆಯೊಂದರಲ್ಲಿ ಗೊಂಡ ಬುಡಕಟ್ಟಿನ ರಾಜಲಾಂಛನ (ಚಿತ್ರ ಗಮನಿಸಿರಿ) ಮತ್ತು ಇನ್ನೊಂದು ಬಯಲು ಬಂಡೆಯಲ್ಲಿ ಹೊಯ್ಸಳರ ರಾಜಲಾಂಛನದೊಂದಿಗೆ ಆನೆ, ಒಂಟೆ ಮತ್ತು ಕುದುರೆಗಳನ್ನು ಕೊರೆಯಲಾಗಿವೆ. ಇದನ್ನು 28.8.2014ರ ಮಧ್ಯಾಹ್ನ ನೋಡಿದ ಸಂಪನ್ಮೂಲವ್ಯಕ್ತಿಗಳು ಅಚ್ಚರಿಯನ್ನು ವ್ಯಕ್ತಪಡಿಸಿದರು. ಈ ಕುರಿತು ಸಂಶೋಧಕ ಡಾ ಮೋತಿರಾವಣ ಕಂಗಾಲಿ ಅವರು ತಮ್ಮ ಅಭಿಪ್ರಾಯವನ್ನು ಹೀಗೆ ವ್ಯಕ್ತಪಡಿಸಿದ್ದಾರೆ. "ಗೊಂಡ ಬುಡಕಟ್ಟಿನ ರಾಜಲಾಂಛನ ಭಾರತದ ದೇವಾಲಯಗಳ ಶಿಲ್ಪಕಲೆಯಲ್ಲಿ, ದೇವಾಲಯಗಳ ರಥಗಳಲ್ಲಿ, ಕನ್ನಡ ನಾಡಿನ ಕೇಳದಿ ಅರಸರ ರಾಜಲಾಂಛನದಲ್ಲಿ ಕಾಣಸಿಗುವುದು. ಆದರೆ, ಸಂಶೋಧಕರು ಇದೊಂದು ರಾಜಲಾಂಛನವೆಂದು ಗುರುತಿಸದೇ ಯಾಳಿಯೆಂದು ಗುರುತಿಸಿರುವುದನ್ನು ಕಾಣುತ್ತೇವೆ. 'ಮದವೇರಿದ ಆನೆಯ ಮೇಲೆ ಮದವೇರಿದ ಸಿಂಹ ಸವಾರ ಮಾಡುವ ಚಿತ್ರವೇ ಗೊಂಡರ ರಾಜಲಾಂಛನ'

ಆಗಿರುವುದು. ಇದನ್ನು ಮಧ್ಯ ಪ್ರದೇಶ ರಾಜ್ಯದ ಜಬಲಪುರದಲ್ಲಿಯ ಗಢಾಕಟಂಗಾದ ಗೊಂಡ ಬುಡಕಟ್ಟಿನ ಅರಸ ಯದುರಾಯ ಮಡಾವಿ ಅವರು ಕ್ರಿಶ 358ರಲ್ಲಿ ರಾಜಲಾಂಛನವಾಗಿ ಬಳಸಿರುವುದು ಇತಿಹಾಸ ಸಾಕ್ಷಿಯಾಗಿದೆ". ಅವರು ಈ ಕುರಿತು ಹೆಚ್ಚಿನ ಮಾಹಿತಿಯನ್ನು ಹೀಗೆ ಹಂಚಿಕೊಂಡರು "ಮಧ್ಯ ಭಾರತದ ಯದುರಾಯನು ಸೋಲಹಗಾಂವದ ಪಾಲವಂಶಿಯ ಜೋಧಾಸಿಂಹ ಮಡಾವಿಯ ಮಗನು. ಆತನು ಬುಂದೇಲಖಂಡದ ಹೈಹಯ ವಂಶಿಯ ಕಳಚೂರಿ ರಾಜರಲ್ಲಿ ಸೇನಾಪತಿಯಾಗಿದ್ದನು. ಒಂದು ದಿನ ರಾಜನೊಂದಿಗೆ ಬೇಟೆಗಾಗಿ ಅಮರಕಂಟಕ ಪರ್ವತ ಶ್ರೇಣಿಯಲ್ಲಿ ನರ್ಮದಾ ನದಿ ತೀರಕ್ಕೆ ಹೋಗಲು ಸೂರ್ಯಾಸ್ತವಾಯಿತು. ಹೀಗಾಗಿ ಅಲ್ಲಿಯೇ ಡೇರೆಯನ್ನು ಹಾಕಿ ರಾಜನು ವಾಸ್ತವ್ಯ ಮಾಡಿದನು. ಯದುರಾಯನು ಡೇರೆಯ ಹೊರಗಡೆ ಕಾವಲುಗಾರನಾದನು. ದಂಡಕಾರಣ್ಯದಲ್ಲಿ ಕ್ರೂರಮೃಗಗಳ ಸಂಖ್ಯೆ ಅಧಿಕವಾಗಿತ್ತು. ಸ್ವಲ್ಪ ಸಮಯದನಂತರ ಪ್ರಾಣಿಗಳ ಶಬ್ದ ಕೇಳಿಸಲಾರಂಭಿಸಿತು. ಯದುರಾಯ ಎಚ್ಚರವಹಿಸಿ ಶಬ್ದದತ್ತ ಗಮನವಿಟ್ಟನು. ದೂರದಿಂದ ಆನೆಗಳು ತನ್ನತ್ತ ಓಡುತ್ತ ಬರುವುದನ್ನು ಕಂಡನು. ಹಿಂದಿನ ಆನೆಯ ಮೇಲೆ ಸಿಂಹ ಸವಾರವಾಗಿ ರಾಜನಂತೆ ಅದರ ಒಂದು ಪಂಜಾ (ಕೈ) ಮೇಲಕೆತ್ತಿ ಆನೆಗಳನ್ನು ಅಟ್ಟಿಸುತ್ತಿದ್ದದ್ದು ಚಂದಿರ ಬೆಳದಿಂಗಳಲ್ಲಿ ಕಂಡು ಯದುರಾಯ ಆಶ್ಚರ್ಯಚಕಿತನಾದನು. ಆನೆಗಳ ಹಿಂಡು ಕಣ್ಮರೆಯಾಯಿತು. ಆನೆಗಳ ವಿಚಾರ ಕೇಳುತ್ತ ಮೂರು ಯುವಕರು ಧನುಷ್ಯ ಬಾಣದೊಂದಿಗೆ ಆತನಲ್ಲಿಗೆ ಬಂದರು. ಯದುರಾಯ ತಾನು ಕಂಡದನ್ನೇ ತಿಳಿಸಿದನು. ಆತನ ಸತ್ಯ ಹೇಳಿಕೆಯನ್ನು ಆಲಿಸಿ ಸಂತೋಷಗೊಂಡು ಒಂದು ದಿವ್ಯ ಧನುಷ್ಯಬಾಣ ಯದುರಾಯನಿಗೆ ಕೊಟ್ಟು ಮುಂದೆ ಹೋಗುವರು.

ಯದುರಾಯ ಸ್ವಲ್ಪ ಸಮಯದ ನಂತರ ತನ್ನ ಡೇರೆಯಲ್ಲಿ ಮಲಗುವನು. ಗೊಂಡರ ಶಕ್ತಿ ದೇವತೆ ಭೀಮಲಪೇನ ಕನಸಿನಲ್ಲಿ ಬಂದು. 'ಎಲೇ ಯದುರಾಯ ನೀನು ಈಗಾಗಲೇ ಕಣ್ಣಾರೆ ಕಂಡ ನೋಟ ಒಬ್ಬ ರಾಜನು ಹೇಗಿರಬೇಕು ಎಂಬುದುನ್ನು ಸೂಚಿಸುತ್ತದೆ. ಕಾಡಿನ ರಾಜ ಮೃಗರಾಜ ಸಿಂಹನು ಹೇಗೊ ಹಾಗೆಯೇ ಮಾನವ ಜನಾಂಗದ ರಾಜನಿರಬೇಕು. ಯಾವ ಮೂರು ಯುವಕರು ನಿನಗೆ ದಿವ್ಯ ಧನುಷ್ಯ ಬಾಣ ಕೊಟ್ಟಿರುವರೊ ಅವರು ಬುಡಾದೇವ ಠಾಕೂರದೇವ ಮತ್ತು ಲಿಂಗೋದೇವರಾಗಿರುವರು. ಅವರು ನಿನ್ನ ಮನೋಕಾಮನೆ ಪೂರೈಸುವರು. ಆ ಧನುಷ್ಯ ಬಾಣದಿಂದ ಸ್ವರಾಜ್ಯ ಸ್ಥಾಪಿಸು' ಎಂದು ಹೇಳಿ ಅದೃಷ್ಯಳಾದಳು. ಕನಸಿನಿಂದ ಎಚ್ಚರಗೊಂಡು ದಿವ್ಯ ಧನುಷ್ಯಬಾಣದಿಂದ ರಾಜನಿಗೆ ಸೋಲಿಸಿ, ತಾನೇ ರಾಜನಾದನು. ಸ್ವಯಂವರದಲ್ಲಿ ನಾಗವಂಶೀಯ ನಾಗದೇವಲ ಪುತ್ರಿ ರತ್ನಾವಲಿಯನ್ನು ವಿವಾಹವಾಗಿ ಗಢಾ ಕಟಂಗಾದ ರಾಜನಾಗಿ ಪ್ರಪ್ರಥಮವಾಗಿ ಗಢಾ ಕಟಂಗಾದ ಮಹಾದ್ವಾರದಲ್ಲಿ ಆನೆಯ ಮೇಲೆ ಸವಾರವಾದ ಸಿಂಹ ಮತ್ತು ಉಗಮವಾಗುವ ಸೂರ್ಯನ ಚಿತ್ರವನ್ನು ರಾಜಚಿನ್ಹೆಯಾಗಿ ಕೆತ್ತಿಸಿದನು. ಅದೇ ಚಿನ್ಹೆಯ ರಾಜಮುದ್ರೆ, ರಾಜಕೋಶ (ನಾಣ್ಯ) ಮುದ್ರೆಯನ್ನು ಬಳಕೆಗೆ ತಂದನು. ಆ ಚಿನ್ಹೆಯನ್ನು ಗೊಂಡ್ವಾನದ ಮಂಡಲಾಗಢ, ಚಾಂದಗಢ, ಲಾಂಜಿಗಢ, ಭೋರಮದೇವಗಢ, ಮಾಹೂರಗಢ ಮತ್ತು ನಾಗಪುರ (ದೇವಗಢ) ಕೋಟೆಗಳ ಮಹಾದ್ವಾರಗಳಲ್ಲಿ ದೇವಾಲಯಗಳಲ್ಲಿ ಕೆತ್ತಲಾಗಿವೆ. ಇಂದು ಗೊಂಡವಾನಾ ಮುಕ್ತಿಸೇನಾ ಈ ರಾಜಚಿನ್ಹೆಯನ್ನು ಬಳಸುತ್ತಿದೆ". ಈ ರಾಜಚಿನ್ಹೆ ದರೋಜಿ ಕರಡಿಧಾಮದ ವ್ಯಾಪ್ತಿಗೆ ಒಳಪಟ್ಟ ಪ್ರದೇಶದಲ್ಲಿ ಲಭ್ಯವಾಗಿರುವುದು ಅಧ್ಯಯನ ಯೋಗ್ಯವಾಗಿದೆ ಎಂದು ಹೇಳಿದರು.



ಈ ಅಧ್ಯಯನ ತಂಡಕ್ಕೆ 28.8.2014ರ ಸಾಯಂಕಾಲ 5 ಗಂಟೆಗೆ ವಿಶ್ವವಿಖ್ಯಾತ ಹಂಪಿ ಪರಿಸರದ ಆನೆಗೊಂದಿ ಮುಂದಿನ ತುಂಗಭದ್ರಾ ನದಿದಡದ ತಳಾರಿ(ತಳವಾರ)ಘಟ್ಟ ಹೆಬ್ಬಾಗಿಲಿನ ಸಮೀಪದಲ್ಲಿರುವ ಕೋಟಮ್ಮ/ಕೋಟಂಬ ಗುಹಾಲಯಕ್ಕೆ ಭೇಟಿ ಮಾಡಿಸಲಾಯಿತು. ಇಲ್ಲಿಯ ಶಿಲಾವರ್ಣಚಿತ್ರಲಿಪಿಗಳನ್ನು ಕಂಡ ಮಹಾರಾಷ್ಟ್ರದ ಪ್ರಕಾಶ ಸಲಾಮೆ ಅವರು ಹರ್ಷಭರಿತರಾಗಿ ಕಣ್ಣೀರಿಟ್ಟರು. ತಮ್ಮ ಪೂರ್ವಿಕರ ನೆಲೆಯ ನಿಧಿ ಇದು, ಸಿಂದು ಕಣಿವೆಯಲ್ಲಿಯ ಲಿಪಿ ಇದು ಎಂದು ಗೊಂಡಿ ಭಾಷೆಯಿಂದ ವ್ಯಾಖ್ಯಾನಿಸಲು ಆರಂಭಿಸಿದರು. ಮಧ್ಯ ಪ್ರದೇಶ ಮತ್ತು ಛತ್ತೀಸಗಡದ ಸಂಪನ್ಮೂಲ ವ್ಯಕ್ತಿಗಳು ತಮ್ಮ ಗೊಟುಲ್‌ದಲ್ಲಿಯ ಚಿತ್ರಲಿಪಿಗಳೊಂದಿಗೆ ಸಮೀಕರಿಸಲು ಪ್ರಯತ್ನಿಸಿದರು. ಕಡಿದಾದ ಬೆಟ್ಟ

ಇರುವುದರಿಂದ ಡಾ ಮೋತಿರಾವಣ ಕಂಗಾಲಿ ಅವರು ಈ ತಾಣವನ್ನು ಮುಖತಃ ನೋಡಲು ಸಾಧ್ಯವಾಗುವುದಿಲ್ಲ. ಅವರಿಗೆ ಚಿತ್ರೀಕರಿಸಿಕೊಂಡ ಶಿಲಾವರ್ಣಚಿತ್ರಲಿಪಿಗಳನ್ನು ತೋರಿಸಿದ್ದಾಗ ಗದ್ಗದಿತರಾದರು. ಈ ಚಿತ್ರಲಿಪಿಗಳು ಸೈಂಧವಿ ಲಿಪಿಯನ್ನು ಹೋಲುತ್ತವೆ ಎಂದು ಸ್ಪಷ್ಟಪಡಿಸಿದರು.

ಮೋತಿರಾವಣ ಕಂಗಾಲಿಯವರು ಹಂಪಿ ಪರಿಸರದ ಕೋಟಮ್ಮ/ಕೋಟಂಬ ಗುಹಾಲಯದಲ್ಲಿಯ 19 ಶಿಲಾವರ್ಣಚಿತ್ರಲಿಪಿಗಳನ್ನು ಹೀಗೆ ಬಿಡಿಬಿಡಿಯಾಗಿ ಅರ್ಥೈಸಿ ವ್ಯಾಖ್ಯಾನಿಸಿದ್ದಾರೆ.

ಕ್ರ. ಸಂ.	ಚಿತ್ರಲಿಪಿ	ಗೊಂಡಿ ಭಾಷೆಯಿಂದ ಕನ್ನಡಾರ್ಥ	ಇಂಗ್ಲಿಷ್ ಭಾಷೆ
01		ಇದು ತಾಯಿಯ ಚಿತ್ರಲಿಪಿ. ಇದನ್ನು ಗೊಂಡಿ ಭಾಷೆಯಲ್ಲಿ ಯಾಯಾಲ್ ಅಥವಾ ಅವ್ವಾಲ್ ಎಂದು ಧ್ವನಿಸಲಾಗುವುದು. ಇದರರ್ಥ ಅಮ್ಮ, ಅಂಬ, (ಕೋಟಮ್ಮ/ ಕೋಟಂಬ)ಅಂಬೆ, ಅಬ್ಬೆ, ಅವ್ವ, ತಾಯಿ, ದೇವಿ ಎಂದಾಗುವುದು.	Mother, (Mother deity)
02		ಇದು ಮೂಲಿಯ ಚಿತ್ರಲಿಪಿ. ಇದನ್ನು ಗೊಂಡಿ ಭಾಷೆಯಲ್ಲಿ ಕೊಮಟಾ ಅಥವಾ ಕೊಪರಾ ಎಂದು ಧ್ವನಿಸಲಾಗುವುದು. ಇದರರ್ಥ ಮೂಲಿ ಅಥವಾ ವಸ್ತ್ರ ಎಂದಾಗುವುದು.	
03		ಇದು ಧಾನ್ಯದ ದಂಟಿನ ಚಿತ್ರಲಿಪಿ. ಇದನ್ನು ಗೊಂಡಿ ಭಾಷೆಯಲ್ಲಿ ಓಮಾ ಅಥವಾ ನೆಲ ಎಂದು ಧ್ವನಿಸಲಾಗುವುದು. ಇದರರ್ಥ ಭೂಮಿ, ನೆಲ, ಹೊಲ, ಪ್ರದೇಶ, ನೆಲ್ಲು ಎಂದಾಗುವುದು.	
04		ಇದು ನೇಗಿಲ ಚಿತ್ರಲಿಪಿ. ಇದನ್ನು ಗೊಂಡಿ ಭಾಷೆಯಲ್ಲಿ ಕುರೀ ಅಥವಾ ಊರ್ ಎಂದು ಧ್ವನಿಸಲಾಗುವುದು. ಇದರರ್ಥ ಸ್ಥಳ, ನೇಗಿಲು ಎಂದಾಗುವುದು.	
05		ಇದು ಸಣ್ಣ ನೇಗಿಲ ಅಥವಾ ಗುದ್ದಲಿಯ ಚಿತ್ರಲಿಪಿ. ಇದನ್ನು ಗೊಂಡಿ ಭಾಷೆಯಲ್ಲಿ ಮೇಂಡಾ ಅಥವಾ ಗೋಡಾ ಎಂದು ಧ್ವನಿಸಲಾಗುವುದು. ಇದರರ್ಥ ಕುರಿ ಎಂದಾಗುವುದು.	
06		ಇದು ನೂಲಿನ ಚಿತ್ರಲಿಪಿ. ಇದನ್ನು ಗೊಂಡಿ ಭಾಷೆಯಲ್ಲಿ ನೂಲ್ ಎಂದು ಧ್ವನಿಸಲಾಗುವುದು. ಇದರರ್ಥ ನೂಲು, ಕುರಿ ಉಣ್ಣೆಯ ನೂಲು ಎಂದಾಗುವುದು.	
07		ಇದು ಎರಡು ಕಂಬಗಳ ನಡುವಿನ ಅಂತರ ದರ್ಶಿಸುವ ಚಿತ್ರಲಿಪಿ. ಇದನ್ನು ಗೊಂಡಿ ಭಾಷೆಯಲ್ಲಿ ಆಟುಮ್ ಎಂದು ಧ್ವನಿಸಲಾಗುವುದು. ಇದರರ್ಥ ಬಜಾರ, ಮಾರುಕಟ್ಟೆ ಎಂದಾಗುವುದು.	
08		ಇದು ರಹದಾರಿಯ ಚಿತ್ರಲಿಪಿ. ಇದನ್ನು ಗೊಂಡಿ ಭಾಷೆಯಲ್ಲಿ ಸರ್ರೀ ಎಂದು ಧ್ವನಿಸಲಾಗುವುದು. ಇದರರ್ಥ ಮಾಧ್ಯಮ, ದಾರಿ ಎಂದಾಗುವುದು.	
09		ಇದು ಅರ್ಧಚಂದ್ರಾಕಾರ ಮತ್ತು ಧನುಸ್ಸಿನ ಚಿತ್ರಲಿಪಿ. ಇದನ್ನು ಗೊಂಡಿ ಭಾಷೆಯಲ್ಲಿ ಪರಾಯೀ ಬಿಲ್ ಎಂದು ಧ್ವನಿಸಲಾಗುವುದು. ಇದರರ್ಥ ಚಟ್ಟಾಣದ ಭಾವಣಿ, ಬಂಡೆಯ ಭಾವಣಿ ಎಂದಾಗುವುದು.	

10		ಇದು ಗೋಡೆಯಲ್ಲಿ ಮಾಡಿದ ಬಿರುಕಿನ ಚಿತ್ರಲಿಪಿ. ಇದನ್ನು ಗೊಂಡಿ ಭಾಷೆಯಲ್ಲಿ ಕೊನಾಡಾ ಇಲ್ಲವೇ ಕೊಪ್ಪಿ ಎಂದು ಧ್ವನಿಸಲಾಗುವುದು. ಇದರರ್ಥ ಗುಹೆ, ಆಸರೆ ಎಂದಾಗುವುದು.	
11		ಇದು ಬೆಂಕಿಯಲ್ಲಿ ಬಳಸುವ ಒಂದು ಕತ್ತರಿಯ ಚಿತ್ರಲಿಪಿ. ಇದನ್ನು ಗೊಂಡಿ ಭಾಷೆಯಲ್ಲಿ ಕೋಯ ಇಲ್ಲವೇ ಕೊಯಾಲ್ ಎಂದು ಧ್ವನಿಸಲಾಗುವುದು. ಇದರರ್ಥ ಮೇಷಪಾಲಕ, ಪಚನ ಕ್ರೀಯೆ ಎಂದಾಗುವುದು.	
12		ಇದು ಸಣ್ಣ ನೇಗಿಲ ಅಥವಾ ಗುದ್ದಲಿಯ ಚಿತ್ರಲಿಪಿ. ಇದನ್ನು ಗೊಂಡಿ ಭಾಷೆಯಲ್ಲಿ ಮೇಂಡಾ ಅಥವಾ ಗೋಡಾ ಎಂದು ಧ್ವನಿಸಲಾಗುವುದು. ಇದರರ್ಥ ಕುರಿ ಎಂದಾಗುವುದು.	
13		ಇದು ವಕ್ರ, ಚೂಪು ಚಿತ್ರಲಿಪಿ. ಇದನ್ನು ಗೊಂಡಿ ಭಾಷೆಯಲ್ಲಿ ನಾಂಗ ಎಂದು ಧ್ವನಿಸಲಾಗುವುದು. ಇದರರ್ಥ ಪ್ರತ್ಯಯ ಎಂದಾಗುವುದು. ಇದನ್ನು ಗೊಂಡಿ ಭಾಷೆಯಲ್ಲಿ ಪ್ರತ್ಯಯ ರೂಪದಲ್ಲಿ ಬಳಕೆ ಮಾಡಲಾಗುವುದು.	
14		ಇದು ನಕ್ಷತ್ರ, ಚುಕ್ಕೆಯ ಚಿತ್ರಲಿಪಿ. ಇದನ್ನು ಗೊಂಡಿ ಭಾಷೆಯಲ್ಲಿ ಸೂಕೂಮ್ ಎಂದು ಧ್ವನಿಸಲಾಗುವುದು. ಇದರರ್ಥ ನಕ್ಷತ್ರ, ಚುಕ್ಕೆ, ರಾತ್ರಿಯ ಪ್ರತೀಕವಾಗಿರುವುದು.	
15		ಇದು ನಾಲೆ, ಹಳ್ಳದಡಿಯ ಗಿಡದ ಚಿತ್ರಲಿಪಿ. ಇದನ್ನು ಗೊಂಡಿ ಭಾಷೆಯಲ್ಲಿ ಕಾಲವಾಯ ಎಂದು ಧ್ವನಿಸಲಾಗುವುದು. ಇದರರ್ಥ ಸಮಯ ಎಂದಾಗುವುದು.	
16		ಇದು ಬೆಂಕಿಯಲ್ಲಿ ಬಳಸುವ ಒಂದು ಕತ್ತರಿಯ ಚಿತ್ರಲಿಪಿ. ಇದನ್ನು ಗೊಂಡಿ ಭಾಷೆಯಲ್ಲಿ ಕೋಯರಿ ಎಂದು ಧ್ವನಿಸಲಾಗುವುದು. ಇದರರ್ಥ ಮೇಷಪಾಲಕ, ಪಶುಪಾಲಕ ಎಂದಾಗುವುದು.	
17		ಇದು ನೇಗಿಲ ಚಿತ್ರಲಿಪಿ. ಇದನ್ನು ಗೊಂಡಿ ಭಾಷೆಯಲ್ಲಿ ಕುರಿ ಅಥವಾ ಊರ್ ಎಂದು ಧ್ವನಿಸಲಾಗುವುದು. ಇದರರ್ಥ ಸ್ಥಳ, ನೇಗಿಲು ಎಂದಾಗುವುದು.	
18		ಇದು ಎರಡು ಚಂದ್ರಾಕಾರ ಚಿತ್ರಲಿಪಿ. ಇದನ್ನು ಗೊಂಡಿ ಭಾಷೆಯಲ್ಲಿ ಪರಾಯೀಕ ಎಂದು ಧ್ವನಿಸಲಾಗುವುದು. ಇದರರ್ಥ ಮುಂಜಾವು, ನಸುಕು ಎಂದಾಗುವುದು.	
19		ಇದು ವಕ್ರರೇಖೆ, ಅಸಮರೇಖೆ ಚಿತ್ರಲಿಪಿ. ಇದನ್ನು ಗೊಂಡಿ ಭಾಷೆಯಲ್ಲಿ ಕೊಕರಾ ಕೋರ ಎಂದು ಧ್ವನಿಸಲಾಗುವುದು. ಇದರರ್ಥ ಕೋಳಿಯ ಕೂಗು ಎಂದಾಗುವುದು.	

ಹಂಪಿ ಪರಿಸರದ ಕೋಟಮ್ಮ/ಕೋಟಂಬ ಗುಹಾಲಯದಲ್ಲಿಯ ಈ ಮೇಲಿನ 19 ಚಿತ್ರಲಿಪಿಗಳ ಒಟ್ಟಾರ್ಥವನ್ನು ಗೊಂಡಿ ಭಾಷೆಯ ಮೂಲಕ ಡಾ ಮೋತಿರಾವಣ ಕಂಗಾಲಿಯವರು ಹೀಗೆ ಮಾಡಿರುವರು. On the Kotamma/ Kotamba cave temple woollen market way, there is rocky roof shelter for shephards and sheep to stay at night up to morning. ಅಂದರೆ, ಕೋಟಮ್ಮ/ಕೋಟಂಬ ಗುಹಾಲಯದ ಎದುರು ಕಂಬಳಿ ಮಾರುಕಟ್ಟೆಯ ರಹದಾರಿ ಇರುವುದು. ಬಂಡೆ ಆಶ್ರಯದ ಈ ಗುಹಾಲಯವು ಕುರುಬರಿಗೆ ಮತ್ತು ಕುರಿಗಳಿಗೆ ರಾತ್ರಿಯ ತಂಗುದಾಣವಾಗಿರುವುದು ಎಂಬರ್ಥ ನೀಡುವುದು. ಈ ಪರಿಸರದ ಗುಹಾಲಯದಲ್ಲಿ ನೂರಾರು ಜನ ಆದಿವಾಸಿಗಳು ತನ್ನ ಕುರಿಗಳೊಂದಿಗೆ

ತಂಗಲು ಸಾಧ್ಯವಿತ್ತು. ಕಾಲಾಂತರದಲ್ಲಿ ಕಾರಣಾಂತರಗಳಿಂದಾಗಿ ಗುಹಾಲಯದ ಅಂಗಳದಲ್ಲಿಯ ಬಂಡೆಗಳು ಕೆಳಗೆ ಉರುಳಿರುವುದರಿಂದ ಪ್ರಸ್ತುತ ಗುಹಾಲಯ ಚಿಕ್ಕದೆನಿಸುತ್ತದೆ.

ಶಿಲಾಜೀತ: ಕೋಟಮ್ಮ/ಕೋಟಂಬ ಗುಹಾಲಯವು ಶಿಲಾಜೀತವನ್ನು ಹೊಂದಿದೆ. ಪ್ರತಿವರ್ಷ ಚೈತ್ರ–ವೈಶಾಖ ತಿಂಗಳಲ್ಲಿ ಅಂದರೆ ಕಡು ಬೇಸಿಗೆಯಲ್ಲಿ ಗಾಳಿ ತಾಗದ ಮತ್ತು ನೀರು, ಬೆಳಕು ಇಲ್ಲದಎತ್ತರದ ಗುಹೆಗಳಲ್ಲಿ ಪ್ರಾಕೃತಿಕವಾಗಿ ಶಿಲಾಜೀತ ತಯಾರಾಗುವುದಾಗಿ ಬೀದರಿನ ರಾಜಗೊಂಡ ರಾಜವೈದ್ಯ ವಿಶಾಲ ಬನ್ನು ರಾಯಸೀಡಂ ಅವರು ದೃಢಪಡಿಸಿದ್ದಾರೆ. ಶಿಲಾಜೀತವು ಮೂರು ಪ್ರಕಾರದಲ್ಲಿ ತಯಾರಾಗುತ್ತವೆ. ಅವುಗಳೆಂದರೆ, ಕಪ್ಪು ಶಿಲೆಗಳಿದ್ದಲ್ಲಿ ಕಪ್ಪು ಶಿಲಾಜೀತ, ಕೆಂಪು ಶಿಲೆಗಳಿದ್ದಲ್ಲಿ ಸ್ವರ್ಣ ಶಿಲಾಜೀತ ಮತ್ತು ಬಿಳಿ/ಬೆಣಚು ಶಿಲೆಗಳಿದ್ದಲ್ಲಿ ಬಿಳಿ ಶಿಲಾಜೀತ. ಶ್ರೀಶೈಲವು ಕಪ್ಪು ಶಿಲಾಜೀತದ ತಾಣವಾದರೆ ಹಂಪಿ ಪರಿಸರವು ಬಿಳಿ ಶಿಲಾಜೀತದ ತಾಣವಾಗಿದೆ. ಕಚಾರಗಢ ಸ್ವರ್ಣ ಶಿಲಾಜೀತದ ತಾಣವಾಗಿದೆ. ಇಂತಹ ತಾಣಗಳು ವಿಶ್ವದಾದ್ಯಂತ ಇವೆ. ಇವುಗಳು ಇದ್ದಲೆಲ್ಲ ಆದಿಮಾನವನ ವಾಸದ ಕುರುಹುಗಳು ಕಾಣಸಿಗುತ್ತವೆ. ಶಿಲಾಜೀತ ಉತ್ಪನ್ನಮಾಡುವ ಗುಹೆಗಳು ಸಹಜವಾಗಿ ಔಷಧಿಯ ಗುಣವನ್ನು ಹೊಂದುತ್ತವೆ. ಗುಹೆಗಳಲ್ಲಿ ಶಿಲೆಯ ಕೆಳಗಡೆ ಶಿಲೆಯಿಂದ ಒಸರುವ ಅಂಟು ದುರ್ಗಂಧಕ್ಕೆ ಶಿಲಾಜೀತ ಎನ್ನುವರು. ಇದಕ್ಕೆ ಬೆಳೆಯುವ ಗುಣವಿದೆ. ಶಿಲಾಜೀತ ಇರುವ ಪರಿಸರವು ಔಷಧಿಯ ಗುಣವನ್ನು ಹೊಂದಿರುತ್ತದೆ. ಈ ಪರಿಸರದಲ್ಲಿರುವ ಜೀವ ಜಂತುಗಳಿಗೆ ಇವು ಆರೋಗ್ಯವನ್ನು ಕಲ್ಪಿಸುತ್ತವೆ ಎಂದು ಹೇಳಲಾಗುತ್ತದೆ. ಕಾಲಾಂತರದಲ್ಲಿ ಶಿಲಾಜೀತ ಉತ್ಪನ್ನಮಾಡುವ ಗುಹೆಗಳು ಆದಿಮಾನವನ ತಾಣಗಳಾಗಿ, ಗುಹಾಲಯಗಳಾಗಿ ಬೆಳಕಿಗೆ ಬಂದಿವೆ.

ಹಂಪಿ ಪರಿಸರದ ಕೋಟಮ್ಮ/ಕೋಟಂಬಗುಹಾಲಯವು ಮೂಲ ಮೈಲಾರ ದೈವವನ್ನು ಪ್ರತಿನಿಧಿಸುತ್ತದೆ. ಕೋಟಂಬಿ ಮೈಲಾರ ದೈವದ ಅಕ್ಷಯಪಾತ್ರೆಯೇ ಸರಿ. ಇದು ಅನ್ನ ಮತ್ತು ಆರೋಗ್ಯದ ಪ್ರತೀಕವಾಗಿದೆ. ಇಂದಿಗೂ ಮೈಲಾರದ ಗೊರವರು/ವಾರುಗಳು/ವಗ್ಗಯ್ಯರು ಕೋಟಂಬಿಯನ್ನು ದೈವದ ಊಟದ ತಟ್ಟೆಯಂತೆ ಬಳಸುವರು. "ಕೋಟ ಉಘೇ" ಎಂದು ಉದ್ಘೋಷಿಸುವರು. ಕುರಿಗಾಹಿಗಳ ಮೂಲ ತಂಗುದಾಣ(ಶಿಬಿರ)ಗಳು ಈ ಪರಿಸರದಲ್ಲಿ ಹೇರಳವಾಗಿ ಕಾಣಸಿಗುತ್ತವೆ. ಅವುಗಳನ್ನು ಇಂದು ಮೈಲಾರನ ಶಿಬಾರ(ಶಿಬಿರ)ಕಟ್ಟೆಗಳು ಎಂದು ಕರೆಯಲಾಗುತ್ತಿವೆ. ಈ ಶಿಬಾರಕಟ್ಟೆಗಳಲ್ಲಿಯ ಶಿಲ್ಪಗಳು ತ್ರಿಶೂಲಾಕಾರದ ಅಕ್ಷಯ(ಧಾನ್ಯ)ವನ್ನೇ ಸಂಕೇತಿಸುತ್ತಿವೆ. ಮೂಲತಃ ಮೈಲಾರ ಭಂಡಾರದ ಅಂದರೆ ಔಷಧಿಯ ಗುಣಧರ್ಮವನ್ನು ಹೊಂದಿದ ದೈವವೂ ಆಗಿರುವುದು.

ಮಹಾರಾಷ್ಟ್ರದ ಮೋತಿರಾವಣ ಛತೀರಾಮ ಕಂಗಾಲಿಯವರು ಗೊಂಡ ಆದಿವಾಸಿಯ ಆಚಾರ್ಯರು. ಗೊಂಡಿ ಧರ್ಮ, ಸಂಸ್ಕೃತಿ, ಚರಿತ್ರೆ, ಭಾಷೆ, ವ್ಯಾಕರಣ ಮತ್ತು ಲಿಪಿ ಕುರಿತು ಶೋಧಕಾರ್ಯ ನಡೆಸಿ ಹತ್ತಾರು ಅಮೂಲ್ಯ ಕೃತಿಗಳನ್ನು ಮರಾಠಿ, ಹಿಂದಿ ಮತ್ತು ಗೊಂಡಿ ಭಾಷೆಗಳಲ್ಲಿ ಪ್ರಕಟಿಸಿದವರು. ಅವುಗಳಲ್ಲಿ ಸೈಂಧವಿ ಲಿಪಿ ಕಾ ಗೊಂಡಿ ಮೇ ಉದ್ವಾಚನ ಕೃತಿಯು ಒಂದು. ಇದು ಸಿಂದು ಕಣಿವೆಯ ಹರಪ್ಪೀಯ ಲಿಪಿಯ ವ್ಯಾಖ್ಯಾನವನ್ನು ಒಳಗೊಂಡಿದೆ. ಈ ಲಿಪಿಯು ಇಲ್ಲಿಯ ಮುದ್ರೆಗಳಲ್ಲಿ ಕಾಣಸಿಗುವುದು. ಪ್ರತಿಯೊಂದು ಮುದ್ರೆಗಳಲ್ಲಿ ಚಿತ್ರಸಂಕೇತಗಳಿದ್ದು, ಇವು ಒಂದು ಶಬ್ದವನ್ನೋ, ಭಾವನೆಯನ್ನೋ ಇಲ್ಲವೇ ವಸ್ತುವನ್ನೋ ಸೂಚಿಸುತ್ತವೆ. ಹರಪ್ಪೀಯ ಲಿಪಿ ಶಬ್ದಲಿಪಿಯಲ್ಲ; ಅದು ಚಿತ್ರಲಿಪಿ. ಈ ಚಿತ್ರಲಿಪಿಯನ್ನು ಓದಲು ವಿಶ್ವದ ಬಹುಸಂಖ್ಯಾತ ಸಂಶೋಧಕರು ಪ್ರಯಾಸಪಟ್ಟು ವಿಫಲರಾಗಿದ್ದಾರೆ. ಮೋತಿರಾವಣ ಕಂಗಾಲಿಯವರು ಇಲ್ಲಿಯ ಪಶುಪತಿ ಮುದ್ರೆಯಲ್ಲಿಯ ಚಿತ್ರಲಿಪಿ ಮತ್ತು ಚಿತ್ರಗಳ ಕುರಿತು ವಿಶೇಷವಾಗಿ ಚಿಂತಿಸಿ ಅವುಗಳನ್ನು ಭಾರತೀಯ ಗುಹೆ ಹಾಗೂ ಬಯಲುಬಂಡೆ ರೇಖಾ ಚಿತ್ರಗಳೊಂದಿಗೆ ಮತ್ತು ಮಧ್ಯ ಭಾರತದ ಬೈಸನ್ ಹಾರ್ನ್ (ಮಹೀಶ ಕೊಂಬು) ಗೊಂಡರ ಕಿರಿಟಧಾರಿ ನೃತ್ಯದೊಂದಿಗೆ ಸಮೀಕರಿಸಲು ಪ್ರಯತ್ನಿಸಿದ್ದಾರೆ. ಇಲ್ಲಿಯ ಮುದ್ರೆಗಳಲ್ಲಿಯ ಚಿತ್ರಲಿಪಿ ಮತ್ತು ಚಿತ್ರಗಳನ್ನು ಗೊಂಡಿ ಭಾಷೆಯ ಮೂಲಕ ಅವುಗಳ ಶಾಬ್ದಿಕ ಅರ್ಥಗಳನ್ನು ನೀಡಿದ್ದಾರೆ. ಈ ಚಿತ್ರಲಿಪಿಗೆ ಗೊಂಡಿ ಸಾಂಸ್ಕೃತಿಕ ಕಾವ್ಯಗಳ ಹಿನ್ನೆಲೆಯಲ್ಲಿ ಅರ್ಥ ಕಲ್ಪಿಸಲು ಪ್ರಯಾಸಪಟ್ಟಿದ್ದಾರೆ. ಈ ಪ್ರಯಾಸದ ಫಲವೇ ಸೈಂಧವಿ ಲಿಪಿ ಕಾ ಗೊಂಡಿ ಮೇ ಉದ್ವಾಚನ (Decipherment of Indus Script in Gondi). ಈ ಪ್ರಯಾಸ ವಿಶ್ವದಲ್ಲಿಯೇ ಪ್ರಥಮ

ಎಂಬುದರಲ್ಲಿ ಎರಡು ಮಾತಿಲ್ಲ. ಇವರ ಈ ಕಾರ್ಯ ಮುಂದಿನ ಸಂಶೋಧಕರಿಗೆ ಮತ್ತು ಭಾಷಾಶಾಸ್ತ್ರಜ್ಞರಿಗೆ ಅಮೂಲ್ಯವಾದುದು. ಸಿಂದು ಕೊಳ್ಳದ ಸಂಸ್ಕೃತಿಯನ್ನು ಹರಪ್ಪೀಯ ಸಂಸ್ಕೃತಿ ಎಂದೂ ಗುರುತಿಸಲಾಗುವುದು. ಕ್ರಿಪೂ 2500 ರಿಂದ ಕ್ರಿಪೂ 1800ರವರೆಗೆ ಇದರ ಅವಧಿಯೆಂದು ಗಣಿಸಲಾಗಿದೆ. ಇದು ವಿಶ್ವದ ಪ್ರಾಚೀನ ನಾಗರೀಕತೆಯ ಸಾಂಸ್ಕೃತಿಕ ನೆಲೆಗಳಲ್ಲಿ ಒಂದು. ಇದನ್ನು ಆರ್ಯಪೂರ್ವದೆಂದು ಶೋಧಿಸಲಾಗಿದೆ. ಬಹುಸಂಖ್ಯಾತರು ಇದನ್ನು ದ್ರಾವಿಡ ಸಂಸ್ಕೃತಿಯ ಮೂಲ ಸಂಸ್ಕೃತಿ ಎಂದು ಹೇಳುವರು. ಇದರ ಮೂಲಿಗರು ನಾಗವಂಶಿಗಳು, ಪಶುಪತಿ ಆರಾಧಕರು ಮತ್ತು ದ್ರಾವಿಡ ಭಾಷಿಗ ಗೊಂಡರು ಎಂಬುದು ಗೊಂಡಿ ಧರ್ಮದರ್ಶಕ ಮೋತಿರಾವಣ ಕಂಗಾಲಿಯವರ ವಾದ. ದ್ರಾವಿಡ ಭಾಷಾ ಸಮೂಹದಲ್ಲಿ ಬ್ರಾಹೂಈ, ಮಾಲ್ತೊ, ಕುರುಖ್, ಗೊಂಡಿ, ಪರ್ಜಿ, ಕೋಲಾಮಿ, ಪೆಂಗೊ, ಕುಇ, ಕುವಿ, ಕೋಂಡ, ಗದಬ, ನಾಯ್ಕಿ, ತೆಲಗು, ಕನ್ನಡ, ತಮಿಳು, ಬಡಗ, ತೋದ, ತುಳು, ಕೊಡಗು, ಕೋತ, ಇರುಳ ಮತ್ತು ಮಲೆಯಾಳಂ. ಬ್ರಾಹುಈ ಭಾಷೆಯು ಪಶ್ಚಿಮ ಪಾಕಿಸ್ತಾನ, ದಕ್ಷಿಣ ಅಫಘಾನಿಸ್ತಾನದ ಇರಾಣ, ದಕ್ಷಿಣ ರಷಿಯಾಗಳಲ್ಲಿ ಲಕ್ಷಗಟ್ಟಲೇ ಜನ ಮಾತನಾಡುವವರಿದ್ದಾರೆ. ಇನ್ನುಳಿದ ಎಲ್ಲ ದ್ರಾವಿಡ ಭಾಷೆಗಳು ಮಧ್ಯ ಹಾಗೂ ದಕ್ಷಿಣ ಭಾರತದಲ್ಲಿ ಕೋಟಿಗಟ್ಟಲೇ ಜನ ಮಾತನಾಡುವವರಿದ್ದಾರೆ. ಈ ಎಲ್ಲ ಭಾಷಿಗರ ಭಾಷೆಗಳ ಮೂಲ ಸೆಲೆ ಗೊಂಡಿ ಎಂದರೆ ಚಿಂತಕರು ಅಚ್ಚರಿ ಪಡುವುದು ಸಹಜವೆ.

ಆರ್ಯರ ಆಕ್ರಮಣದ ನಂತರ ಸಿಂಧು ಕೊಳ್ಳದ ದ್ರಾವಿಡರು ದೇಶಾಂತರವಾದರು. ಬಹುಸಂಖ್ಯಾತರು ಮಧ್ಯ ಮತ್ತು ದಕ್ಷಿಣ ಭಾರತಕ್ಕೆ ತಳ್ಳಲ್ಪಟ್ಟು ಕಾಲಾಂತರದಲ್ಲಿ ನರ್ಮದಾ, ಗೋದಾವರಿ, ಕೃಷ್ಣಾ, ತುಂಗಭದ್ರ, ಕಾವೇರಿ ಇತ್ಯಾದಿ ನದಿ ಜಲಾನಯನ ಪ್ರದೇಶಗಳಲ್ಲಿ ವಾಸಿಸಲಾರಂಭಿಸಿದರು. ಸಿಂದುಕೊಳ್ಳದ ಸಿಂದರು ಕಾಲಾಂತರದಲ್ಲಿ ಸಿಂದರು ಮತ್ತು ಸೇಂದ್ರಕರಾಗಿ ವಿಭಜನೆಗೊಂಡು ಸಿಂದರು ಗ್ವಾಲಿಯರ್ ಪ್ರದೇಶದ ಕಾಲಿ ಸಿಂದದಲ್ಲಿ ಮತ್ತು ಸೇಂದ್ರಕರು ಮಧ್ಯ ಭಾರತ ಮತ್ತು ದಕ್ಷಿಣ ಭಾರತದಲ್ಲಿ ರಾಜಕೀಯ ಸ್ಥಾಪಿಸಿದ ಮನೆತನಗಳು ಕಾಣಸಿಗುವುವೆಂದು ವಿಶ್ರಾಂತ ಕುಲಪತಿ ಡಾ ಹೀರಾಲಾಲ್ ಶುಕ್ಲ ಅವರು ಹೇಳುವುದರಲ್ಲಿ ಹುರುಳಿದೆ. ಸಾಕ್ಷಿಯಾಗಿ, ಬಾಗಡೆ (ಬಾಗಲಕೋಟ)ಯ ಸಿಂದರು, ಯಲಬುರ್ಗಿಯ ಸಿಂದರು, ಬೆಳಗುತ್ತಿ (ಕರಹಾಟ)ಯ ಸಿಂದರು, ರಂಜೋಲ(ಬೀದರ ಜಿಲ್ಲೆ)ದ ಸಿಂದರು, ಮುಳಗುಂದ(ಗದಗ ಜಿಲ್ಲೆ)ದ ಸಿಂದರು, ಪ್ರತ್ಯೆಂಡ್ರಕ (ಹಿಂದಿನ ಮಹಾರಾಷ್ಟ್ರದ ಪಠಾಣ ರಾಜ್ಯ)ದ ಸಿಂದರು, ಚಕ್ರಕೂಟ (ಪ್ರಾಚೀನ ಆಂಧ್ರ ಪ್ರದೇಶ)ದ ಸಿಂದರು, ಕೋಗಳಿನಾಡಿನ (ಬಳ್ಳಾರಿ ಜಿಲ್ಲೆ) ಸಿಂದರು, ಗುತ್ತಿ (ಇಂದಿನ ಆಂಧ್ರ ಪ್ರದೇಶದ ಅಂನಂತಪುರ ಜಿಲ್ಲೆಯ ತಾಲೂಕು ಕೇಂದ್ರ)ಯ ಸಿಂದರು, ಸಾಲಗುಂದೆ (ಸಿಂಧನೂರು ತಾಲೂಕಿನ ಗ್ರಾಮ)ಯ ಸಿಂದರು ಮತ್ತು ಕುರುಗೋಡು (ಬಳ್ಳಾರಿ ಜಿಲ್ಲೆ) ಸಿಂದರು. ಈ ಮನೆತನಗಳು ಮಧ್ಯಪ್ರದೇಶ, ಛತ್ತೀಸಗಢ, ಓಡಿಸ್ಸಾ, ಆಂಧ್ರ ಪ್ರದೇಶ, ಮಹಾರಾಷ್ಟ್ರ, ಕರ್ನಾಟಕ ಇತ್ಯಾದಿ ರಾಜ್ಯಗಳ ಬಹುಭಾಗವನ್ನು ಬಹುಕಾಲದವರೆಗೆ ಆಳಿದ ಚಾರಿತ್ರಿಕ ನಿದರ್ಶನಗಳಿವೆ. ಸಿಂದರ ಅಥವಾ ಅವರ ಕಳ್ಳುಬಳ್ಳಿಯ ವಿವಿಧ ಮನೆತನಗಳು ಈ ಪ್ರದೇಶವನ್ನು ಆಳಿರುವ ಹಿನ್ನೆಲೆಯಲ್ಲಿ ನಾಗ, ಸಿಂದ, ಗೊಂಡ ಹೆಸರಿನ ಸ್ಥಳನಾಮಗಳು ಈ ಪ್ರದೇಶದಲ್ಲಿ ಹೇರಳವಾಗಿ ಕಾಣಸಿಗುವವು. ಈ ನಾಗ ಸಿಂದ ಗೊಂಡರು ಇಂದು ಕರ್ನಾಟಕದಲ್ಲಿ ಗೊಂಡ, ಲಾಳಗೊಂಡ, ಕುರುಬ, ಕೂಡುಒಕ್ಕಲಿಗ, ಆದಿಬಣಜಿಗ, ನೋಳಂಬ ಇತ್ಯಾದಿ ಹೆಸರುಗಳಿಂದ ಗುರುತಿಸಲ್ಪಡುವರು. ಇವರೆಲ್ಲರ ದೈವ ಮಹಾಲಿಂಗ, ಇದರ ಮೂಲ ಸ್ವರೂಪಿ ಸಿಂಧುಕೊಳ್ಳದಿಂದ ಮಧ್ಯಭಾರತಕ್ಕೆ ತಳ್ಳಲ್ಪಟ್ಟ ಆದಿವಾಸಿ ಗೊಂಡರು ಪಶುಪತಿ (ಪರಸಾಪೆನ್) ಹೆಸರಿನ ದೈವವನ್ನು ಪ್ರಾಕೃತಿಕವಾಗಿ ಆರಾಧಿಸುವರು.

ಕೇರಳ ವಿಶ್ವವಿದ್ಯಾಲಯ ತಿರುವನಂತಪುರದ ಚಿಂತಕ ಡಾ ಆರ್ ಗೋಪಿನಾಥನ್ ಅವರು ಜುಲೈ 2011ರ ವನ್ಯಜಾತಿ ಪತ್ರಿಕೆಯThe Vision of Tribalism ಎಂಬ ಲೇಖನದಲ್ಲಿ ಗೊಂಡರ ಕುರಿತು ಈ ಕೆಳಗಿನ ಮಹತ್ವದ ಮಾಹಿತಿಯನ್ನು ನೀಡಿರುವರು.

The first kingdom of Kerala, which is known in the history of Kerala as the Ist Chera Empire, which was constituted as a Confederation of seven branches of the Chera race, in 3rd century BC,

was founded by the predecessors of the Kurumar/Kurumbar tribe of Wayanadu region. They represent the food gatherers of the pre-agriculture stage. Dr B R Ambedkar is of the view that, the founders of Chera kingdom were a sub division of the Nagas, who traveled south wards from the North-West region of Asia and in a later stage were called Gonds, the founders of Gondwana Empire in the Dekkan region. It should be remembered that, Deccan region was very much habitable for both, the food gatherers and settled agricultures. After wards a branch of them moved to peninsular India and a group of them settled in the hill ranges and valleys of the Western Ghats in the Arabian sea-shore (Dr R Gopinathan:Vanyajati:July 2011:11).

ಕೇರಳದ ಪ್ರಥಮ ಸಾಮ್ರಾಟರು ಚೇರರು. ಇವರು ತಮ್ಮ ಏಳು ಶಾಖೆಗಳ ಒಕ್ಕೂಟದ ಸಾಮ್ರಾಜ್ಯವನ್ನು ಕ್ರಿಪೂ 3ನೇ ಶತಮಾನದಲ್ಲಿ ಆಳುತಿದ್ದರು. ಇದರ ಸಂಸ್ಥಾಪಕರು ಇವರ ಪೂರ್ವಿಕರಾದ ವೈನಾಡಿನ ಕುರುಮರು/ಕುರುಂಬರು. ವೈನಾಡಿನ ಕುರುಂಬರು ಕುಂಬ್ರಿ ಬೇಸಾಯ ಪೂರ್ವದ ಆಹಾರ ಸಂಗ್ರಾಹಕರು ಎಂಬುದು ಚಾರಿತ್ರಿಕ ವಾಸ್ತವ. ಡಾ ಬಿ ಆರ್ ಅಂಬೇಡ್ಕರ್ ಅವರು ಚೇರರ ಕುರಿತು ತಮ್ಮ ಅಭಿಪ್ರಾಯವನ್ನು ಹೀಗೆ ವ್ಯಕ್ತಪಡಿಸಿರುವರು. "ಚೇರ ಸಾಮ್ರಾಟದ ಸಂಸ್ಥಾಪಕರು ನಾಗವಂಶಿಗಳ ಕುಡಿಗಳು. ನಾಗವಂಶಿಗಳು ಏಷಿಯಾ ಖಂಡದ ಉತ್ತರ–ಪಶ್ಚಿಮ (ವಾಯವ್ಯ ದಿಕ್ಕು) ಭಾಗದಿಂದ ದಕ್ಷಿಣದತ್ತ ಚಲನೆಗೊಂಡ ನಂತರ ಗೊಂಡರೆಂದು ಕರೆಯಲ್ಪಟ್ಟರು. ಗೊಂಡರು ದಖನ್ ವಿಭಾಗದಲ್ಲಿ ಗೊಂಡ್ವಾನಾ ಸಾಮ್ರಾಜ್ಯವನ್ನು ಸಂಸ್ಥಾಪಿಸಿದವರು. ದಖನ್ ವಿಭಾಗವು ಆಹಾರ ಸಂಗ್ರಹಣೆ ಮತ್ತು ಬೇಸಾಯಕ್ಕೆ ಪ್ರಶಸ್ತವಾದ ಪ್ರದೇಶ. ಆನಂತರ ಗೊಂಡರಲ್ಲಿಯ ಒಂದು ಗುಂಪು ಭಾರತದ ಕರಾವಳಿಗೆ ಚಲಿಸಿ ಅರಬ್ಬಿ ಸಮುದ್ರ ತೀರದ ಪಶ್ಚಿಮ ಘಟ್ಟ ಪ್ರದೇಶಗಳಲ್ಲಿ ನೆಲೆಗೊಂಡಿರುವುದು". ಕೇರಳದ ಚೇರರು ವೈನಾಡಿನ ಕುರುಂಬರು ಮತ್ತು ಕರ್ನಾಟಕದ ಗೊಂಡ ಆದಿವಾಸಿಗಳು ಕಳ್ಳುಬಳ್ಳಿಯವರು ಎಂಬುದು ಈ ಚಾರಿತ್ರಿಕ ಮಾಹಿತಿಯಿಂದ ಸ್ಪಷ್ಟವಾಗುವುದು. ಜೊತೆಗೆ ಇವರೆಲ್ಲರೂ ನಾಗವಂಶಿಗಳು ಎಂಬುವುದೂ ವೇದ್ಯವಾಗುವುದು.

ಭಾರತದ ಬುಡಕಟ್ಟುಗಳಲ್ಲಿ ಅತ್ಯಧಿಕ ಸಂಖ್ಯೆಯಲ್ಲಿರುವವರೇ ಗೊಂಡರು. ವಿಂಧ್ಯ ಸಾತಪುರ ಪರ್ವತ ಶ್ರೇಣಿಯಿಂದ ಗೋದಾವರಿ ಜಲಾನಯನ ಭೂ ಪ್ರದೇಶದವರೆಗೆ, ಉತ್ತರ ಪ್ರದೇಶ ಮತ್ತು ಬಿಹಾರದಿಂದ ಆಂಧ್ರ ಪ್ರದೇಶ, ಕರ್ನಾಟಕದವರೆಗೆ ಮತ್ತು ಮಹಾರಾಷ್ಟ್ರದಿಂದ ಒಡಿಸ್ಸಾದವರೆಗೆ ಇವರು ಹೆಚ್ಚಿನ ಸಂಖ್ಯೆಯಲ್ಲಿ ಪಸರಿಸಿಕೊಂಡಿದ್ದಾರೆ. ಇವರಲ್ಲಿ 60ಕ್ಕೂ ಹೆಚ್ಚಿನ ಒಳ ಪಂಗಡಗಳಿವೆ. ಕೋಟಿಗೂ ಮೀರಿದ ಜನಸಂಖ್ಯೆ ಇವರದಿದೆ. 2011ರ ಜನಗಣತಿಯ ಪ್ರಕಾರ ಮಧ್ಯಪ್ರದೇಶ ರಾಜ್ಯದಲ್ಲಿ ಗೊಂಡ (50,93,124), ಮಾಝಿ (50,655), ಮಾಝಿವಾರ್ (443), ಪರಧಾನ (1,23,742); ಛತ್ತೀಸಗಢ ರಾಜ್ಯದಲ್ಲಿ ಗೊಂಡ (42,98,404), ಮಾಝಿ (65,027), ಮಾಝಿವಾರ್ (55,320), ಪರಧಾನ (11,111); ಮಹಾರಾಷ್ಟ್ರ ರಾಜ್ಯದಲ್ಲಿ ಗೊಂಡ (16,18,090), ಕೋಯ (388), ಪರಧಾನ (1,45,131); ಒಡಿಸ್ಸಾ ರಾಜ್ಯದಲ್ಲಿ ಗೊಂಡ (8,88,581), ಕೋಯ (1,47,137); ಆಂಧ್ರಪ್ರದೇಶ/ತೆಲಂಗಾಣ ರಾಜ್ಯದಲ್ಲಿ ಗೊಂಡ (3,04,537), ಕೋಯ (5,90,739), ಪರಧಾನ (24,823); ಉತ್ತರ ಪ್ರದೇಶ ರಾಜ್ಯದಲ್ಲಿ (5,91,027); ಬಿಹಾರ ರಾಜ್ಯದಲ್ಲಿ (2,56,738); ಕರ್ನಾಟಕ ರಾಜ್ಯದಲ್ಲಿ (1,58,243); ಜಾರ್ಖಂಡ ರಾಜ್ಯದಲ್ಲಿ (53,676); ಪಶ್ಚಿಮ ಬಂಗಾಳ ರಾಜ್ಯದಲ್ಲಿ (13,535); ಉತ್ತರಾಖಂಡ ರಾಜ್ಯದಲ್ಲಿ (3,143); ಗುಜರಾತ ರಾಜ್ಯದಲ್ಲಿ (2,965); ಗೊಂಡರು ಮತ್ತು ಅದರ ಪರ್ಯಾಯ ಪದಗಳ ಅಡಿಯಲ್ಲಿ ಜನರು ದಾಖಲಾಗಿರುವರು. ದ್ರಾವಿಡ ಮೂಲದ ಗೊಂಡಿ ಇವರ ಮಾತೃಭಾಷೆಯಗಿರುವುದು. ಅಲ್ಲದೆ ಹಿಂದಿ, ಮರಾಠಿ, ಕನ್ನಡ, ತೆಲುಗು, ಇತ್ಯಾದಿ ಪ್ರಾದೇಶಿಕ ಭಾಷೆಗಳನ್ನು ಬಳಸುವರು. ಗೊಂಡವಾನಾ ಇವರ ಹೃದಯ ಸ್ಥಾನವಾಗಿರುವುದು. ಇದರಲ್ಲಿಯ ಒಂದು ಪಂಗಡ ಕರ್ನಾಟಕದಲ್ಲಿ ಹಾಲುಮತದ ಹುಟ್ಟಿಗೆ ಕಾರಣವಾಗಿರುವುದಾಗಿ ಹಾಲುಮತ ಪುರಾಣ ಧ್ವನಿಸುತ್ತದೆ. ಬೀದರಿನ ಮೂಲನಿವಾಸಿಗಳು ಗೊಂಡರು. ಇವರು ದ್ರಾವಿಡ ಮೂಲದವರು. ಇವರಿಗೆ ಧನಗರ ಮತ್ತು ಕುರುಬ ಎಂಬ ಹೆಸರುಗಳಿಂದಲೂ ಸ್ಥಳೀಯರು ಗುರುತಿಸುವರು.

ಗೊಂಡರು ಗೊಂಡಾರಣ್ಯದ ಮೂಲನಿವಾಸಿಗಳು. ಪೃಥ್ವಿಯ 5 ಖಂಡಗಳಿಗೆ ಗೊಂಡ್ವಾನಾ ಖಂಡಗಳೆಂದು ಪರಿಚಯಿಸುವರು. ಅವು: 1. ಏಷ್ಯಾ(ಭಾರತ), 2.ಆಫ್ರಿಕಾ, 3. ದಕ್ಷಿಣ ಅಮೇರಿಕ, 4.ಅಂಟಾರ್ಟಿಕಾ ಮತ್ತು 5.ಆಸ್ಟ್ರೇಲಿಯ. ಗೊಂಡ್ವಾನದ ಆದಿಜನಾಂಗವೂ ಗೊಂಡರು. ಇವರು ಬೇಟೆಗಾರಿಕೆ, ಪಶುಪಾಲನೆಯಿಂದ ನಿಧಾನವಾಗಿ ಕೃಷಿಯತ್ತ ಕೂಡಿಕೊಂಡಿರುವರು.

ಗೊಂಡರ ಹುಟ್ಟಿನ ಬಗ್ಗೆ ಹಲವಾರು ಐತಿಹ್ಯಗಳು, ಪೌರಾಣಿಕ ಮತ್ತು ದಂತಕಥೆಗಳಿವೆ. ಅವುಗಳಲ್ಲೊಂದು ಹೀಗಿದೆ: "ಮುದ್ದುಗೊಂಡ ಮುದ್ದಮ್ಮಳಿಂದ ಗೊಂಡ ಆದಿವಾಸಿಗಳು ಹುಟ್ಟುವುದು. ಆದಿಗೊಂಡನು ಮುದ್ದುಗೊಂಡನ ಮಗ. ಆದಿಗೊಂಡನ ಹೆಂಡತಿ ಆದಮ್ಮ. ಅವರ ಪುತ್ರರಾದ ಅಮರಗೊಂಡ, ಶಿವಗೊಂಡ, ಬೆಟ್ಟದ ಬೀರುಗೊಂಡ" ಇವರ ವಂಶಜರೆ ಗೊಂಡರೆಂದು ಹಾಲುಮತ ಪುರಾಣದಲ್ಲಿ ಉಲ್ಲೇಖಗೊಂಡಿದೆ. ಹೀಗೆ 'ಗೊಂಡ'ಪದ ಪ್ರತ್ಯಯಗೊಂಡ ಹೆಸರುಗಳುಳ್ಳ ಸಾಂಪ್ರದಾಯಿಕ ಪಶುಪಾಲಕರೇ 'ಗೊಂಡ' ಆದಿವಾಸಿಗಳೆಂದು ಸ್ಪಷ್ಟವಾಗುವುದು.

"ಗೊಂಡರು ಬುಡುಕಟ್ಟಿನವರು. ಅವರು ಸಾಮಾನ್ಯವಾಗಿ ಬೀದರ, ಕಲಬುರಗಿ, ರಾಯಚೂರು ಜಿಲ್ಲೆಗಳಲ್ಲಿ ವಾಸಿಸುವರು.. ಇಂದಿಗೂ ಇವರಲ್ಲಿ ಖಂಡಗೊಂಡ, ಮಲಗೊಂಡ, ಮಹಾದಗೊಂಡ, ಬೀರಗೊಂಡ, ತುಳಜಗೊಂಡ, ಶಿವಗೊಂಡ, ಶಣಗೊಂಡ ಎಂಬೀ ಗೊಂಡ ಪದ ಪ್ರತ್ಯಯಗೊಳ್ಳುವ ಹೆಸರುಗಳು ಕಂಡುಬರುತ್ತವೆ. ಇವರ ಹಲವಾರು ಸಂಪ್ರದಾಯಗಳು ಹಾಗೂ ಹವ್ಯಾಸಗಳು ಕುರುಬ ಸಮುದಾಯಕ್ಕೆ ಹೋಲಿಕೆಯಾಗುತ್ತವೆ"ಗೊಂಡರ ಪೌರಾಣಿಕ ಅಂಶಗಳಿಗೆ ಪ್ರಸಿದ್ಧ ಸಮಾಜಶಾಸ್ತ್ರಜ್ಞ ಪದ್ಮಶ್ರೀ ಡಾಎಸ್ ಎಸ್ ಶಶಿಯವರ ಸಂಶೋಧಿತ ಅಂಶಗಳು ಪುಷ್ಠಿ ನೀಡುತ್ತವೆ. ಬೊಮಗೊಂಡ ಬಹಮನಿ ಕಾಲಘಟ್ಟದ ಚಾರಿತ್ರಿಕ ದಾರ್ಶನಿಕ ವ್ಯಕ್ತಿ. ಈತನ ಹೆಸರಿನ ಸಂಘ ಸಂಸ್ಥೆಗಳು ಬೀದರ ಜಿಲ್ಲೆಯದಾದ್ಯಂತ ಕಾಣಸಿಗುವವು.



ಗೊಂಡ ಹೆಸರಿನ ಸ್ಥಳನಾಮಗಳು: ಗೊಂಡ ಹೆಸರಿನ ಸ್ಥಳನಾಮಗಳು ದಕ್ಷಿಣ ಭಾರತದಲ್ಲಿ ಹೇರಳವಾಗಿರುವವು. ಅದರಲ್ಲೂ ಕರ್ನಾಟಕದಲ್ಲಿ ಸುಮಾರು 300ಕ್ಕೂ ಹೆಚ್ಚಿನ ಸ್ಥಳನಾಮಗಳು ಗೊಂಡ, ರಾಜಗೊಂಡ, ಲಾಲಗೊಂಡ ಎಡೆಗಳನ್ನು ಹೊಂದಿವೆ. ಗೊಂಡ ಸ್ಥಳನಾಮಗಳ, ವಿವಿಧ ರಥಕಲಾಕೃತಿ, ಗುಡಿಗಳಲ್ಲಿಯ ಶಿಲ್ಪಗಳಲ್ಲಿಯ ಗೊಂಡ್ವಾನಾ ರಾಜಲಾಂಛನ, ಗುಸಾಲಯಗಳಲ್ಲಿಯ ಶಿಲಾವರ್ಣಚಿತ್ರಲೇಖಗಳ ವೈಜ್ಞಾನಿಕ ಅಧ್ಯಯನದ ಅಗತ್ಯವಿದೆ.

ಆಧಾರ ಸೂಚಿ

ಚನ್ನಮಲ್ಲಿಕಾರ್ಜುನ., **ವೀರಶೈವ ಪಂಚಾಚಾರ್ಯ ಚರಿತೆ,** ಸಂಪುಟ 1. ಮುಖ್ಯ ವಿಷಯಶ್ರೀ ರೇವಣಸಿದ್ಧರು (ಬ್ಯಾಡಗಿ: ಶ್ರೀ ನಿರಂಜನ ಚನ್ನಬಸವ ಸ್ವಾಮಿ, **ಮುಪ್ಪಿನ ಸ್ವಾಮಿ ವಿರಕ್ತಮಠ,** 1958).

ಭಾರತದ ಭೂವಿಜ್ಞಾನ (ಮೈಸೂರು: ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, 1964).

ಭಾರತದ ಜನಗಣತಿ 2011

ಮೇತ್ರಿ ಕೆ.ಎಂ., **ಬುಡಕಟ್ಟು ಕುಲಕಸುಬುಗಳು** (ಹಂಪಿ: ಕನ್ನಡ ವಿಶ್ವವಿದ್ಯಾಲಯ, 2002).

.........., **ಬೀದರ ಜಿಲ್ಲೆಯ ಗೊಂಡ ಆದಿವಾಸಿ ಸಮುದಾಯ: ಒಂದು ಸಮಾಜಶಾಸ್ತ್ರೀಯ ಅಧ್ಯಯನ** (ಮೈಸೂರು ವಿಶ್ವವಿದ್ಯಾನಿಲಯಕ್ಕೆ ಪಿಎಚ್ ಡಿ ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ, 1994)

.........., **ಗೊಂಡಿ ನುಡಿಕೋಶದ ಪ್ರಮಾಣೀಕರಣ: ರಾಷ್ಟ್ರೀಯ ವಿಚಾರ ಸಂಕಿರಣ–ಕಾರ್ಯಾಗಾರ** : 24–29 ಆಗಸ್ಟ್, 2014– ವರದಿ (ಹಂಪಿ: ಕನ್ನಡ ವಿಶ್ವವಿದ್ಯಾಲಯ)

ಮೋತಿರಾಮ ಕಂಗಾಲಿ., ಪಾರಿ ಕುಪಾರ ಲಿಂಗೋ ಕೋಯಾ ಪುನೇಮ: **ಗೊಂಡಿ ಧರ್ಮ ದರ್ಶನ** (ನಾಗಪುರ:ಪಾರಿ ಕುಪಾರ ಲಿಂಗೋ ಪ್ರಕಾಶನ, 1989).

ಹಿರೇಮಠ, ಚನ್ನಬಸವಯ್ಯ., **ಕುರುಗೋಡು ಸಿಂದರು: ಒಂದು ಅಧ್ಯಯನ** (ಕೊಪ್ಪಳ: ಸಂಗಣ್ಣನವರು ಅಗಡಿ ಸಂಸ್ಕೃತಿ ಪ್ರತಿಷ್ಠಾನ, 1995)

ಸಲಾಮೆ, ಪ್ರಕಾಶ ನಾ (ಲೇ)., **ಕರ್ನಾಟಕ ಕೆ ಹಂಪಿ ಮೇ ಸ್ಥಿತ್ ಶಿಲಾಖಂಡ ಪೆ ಚಿತ್ರಾಯಿ ಗಯಿ ಪ್ರಾಚೀನ ಚಿತ್ರಲಿಪಿಕಾ ಆಲೇಖ**

Gopinath R., **'The Vision of Tribalism' in Vanyajati** Quarterly Journal (New Delhi: Bharatiya Adim Jati Sevak Sangha), Vol. LIV, Issue. 3, July 2011, pp. 10-12.

Kangali, M C., **Saindhavi Lipi Ka Gondi Me Udvachan** (Decipherment of Indus Script in Gondi) (Nagpur: Smt. Chandralekha Kangali, 48, Ujwal Society, Jayatala Road, 2002).

Metry, K M., **Daroji Sloth Bear Sanctuary: A Study** (Unpublished JBIC Project Report, Department of Forest, Govt of Karnataka, Bangalore), 2005

Shashi, S S., **The Shepherds of India: A Socio-cultural study of Sheep and cattle rearing communities** (Delhi: Sandeep Prakashan, 1978)

Shyam Prasad S, "Prof sees Harappan script in Hampi" in **Bangalore Mirror Bureau** | Nov 4, 2014, 04.00 AM IST

Harpal Singh S., "Gonds may have migrated from Indus Valley" in **The Hindu,** Adilabad, December 17,2014, P.9

"Drawings of Harappan era discovered near Hampi" Published in The Hindu: November 5, 2014 00:37 IST | Updated: November 5, 2014 07:42 IST http://www.thehindu.com/news/national/karnataka/drawings-ofharappan- era-discovered-near-hampi/article6564607.ece

Lhendup G Bhutia ., "The Eternal Harappan Script Tease" in **Open Magazine** http://www.openthemagazine.com/article/nation/the-eternal-harappan-script-tease 28.11.2014

15. ಪ್ರೌಢದೇವರಾಯನ ಅಪ್ರಕಟಿತ ಶಾಸನ

- ಡಾ. ಎನ್. ನಂದೀಶ್ವರ

ತಮಿಳುನಾಡು ರಾಜ್ಯದ ಥೇಣಿ ಜಿಲ್ಲೆಯ ಉತ್ತಮಪಾಳಯಂ ತಾಲ್ಲೂಕಿನ ಪಣ್ಣೆಪುರಂ ಗ್ರಾಮದ ಬೊಮ್ಮೇಸ್ವಾಮಿ ದೇವಸ್ಥಾನದಲ್ಲಿ ತಾಮ್ರದ ಶಾಸನವಿದೆ. ಶಾಸನದ ನಾಲ್ಕು ಪ್ಲೇಟ್(ಭಾಗ)ಗಳು ಇರುತ್ತವೆ. ಶಾಸನದ 1 ನೇ ಪ್ಲೇಟ್‌ನಲ್ಲಿ 6 ಸಾಲುಗಳು, 2 ನೇ ಪ್ಲೇಟ್ ನಲ್ಲಿ 7 ಸಾಲುಗಳು, 3 ನೇ ಪ್ಲೇಟ್ ನಲ್ಲಿ 9 ಸಾಲುಗಳು ಹಾಗೂ 4 ನೇ ಪ್ಲೇಟ್‌ನಲ್ಲಿ 4 ಸಾಲುಗಳು ಇದ್ದು, ಒಟ್ಟು 26 ಸಾಲುಗಳಿವೆ. ಈ ಶಾಸನವು ಲಿಪಿಯು ಕನ್ನಡ ಭಾಷೆಯಲ್ಲಿದೆ. ತೆಲಗು ಮಿಶ್ರಿತವಾದ ಕನ್ನಡ ಭಾಷೆಯಲ್ಲಿದೆ. ಶಾಸನವು ವಿಜಯನಗರದ ಅರಸ ಪ್ರೌಢದೇವರಾಯನ ಕಾಲದ್ದಾಗಿದೆ.

ಈ ಗ್ರಾಮದಲ್ಲಿನ ಕುಂಚಿಟಿಗರ ನೂರಾರು ವರ್ಷಗಳ ಹಿಂದೆ ತಮಿಳುನಾಡಿನ ಹಲವಾರು ಗ್ರಾಮಗಳಿಗೆ ವಲಸೆ ಹೋಗಿರುತ್ತಾರೆ. ಈಗಲೂ ಕೆಲವರಿಗೆ ಕನ್ನಡ ಸ್ವಲ್ಪ ಮಾತನಾಡಲು ಬರುತ್ತದೆ. ಈ ಹಿಂದೆ ಸಾರಿಗೆ ಸಂಪರ್ಕ ಸರಿ ಇಲ್ಲದ ಕಾಲದಲ್ಲಿ ಕರ್ನಾಟಕದಲ್ಲಿನ ಕುಂಚಿಟಿಗರ ಮನೆದೇವರುಗಳು ಬರುವುದು ಸಾಧ್ಯವಾಗಲಿಲ್ಲ. ಇಂತಹ ಸಂದರ್ಭಗಳಲ್ಲಿ ತಮಿಳುನಾಡಿನಲ್ಲಿಯೇ ಕುಂಚಿಟಿಗರ ವಿವಿಧ ಬೆಡಗಿನವರು ಮನೆದೇವರುಗಳು ನಿರ್ಮಿಸಿಕೊಂಡಿರುವರು. ಇಂತಹ ಬೆಡಗುಗಳಲ್ಲಿ ಒಂದಾದ ಗೋಣೆನವರ ಬೊಮ್ಮೇಸ್ವಾಮಿ ದೇವಸ್ಥಾನ ನಿರ್ಮಿಸಿಕೊಂಡಿರುವರು.

ಸಾಧಾರಣ ಸಂವತ್ಸರದ ಶ್ರಾವಣ ಶುದ್ಧ ಪಂಚಮಿ ದಿನ ಪ್ರೌಢದೇವರಾಯರು ತಮ್ಮ ಚರುರಂಗ ಬಲದೊಡನೆ ಬಂದು ಪೆನುಗೊಂಡೆಯಲ್ಲಿ ಬೀಡು ಬಿಟ್ಟರು. ಈ ಪೆನುಗೊಂಡೆಗೆ ಪೂರ್ವ ದಿಕ್ಕಿನಲ್ಲಿ ಮಾಳಪ್ಪನನ್ನು, ಪಶ್ಚಿಮ ದಿಕ್ಕಿನಲ್ಲಿ ಮುನ್ನಪ್ಪನನ್ನು, ಉತ್ತರ ದಿಕ್ಕಿನಲ್ಲಿ ಸಂಗಪ್ಪ ಎನ್ನುವವರನ್ನು ಕರೆಯಿಸಿ ಮಾತನಾಡಿದ ವಿವರಗಳು, ತಮ್ಮ ಹಿಂದೆ ಬಂದ ಚತುರಂಗ ಬಲಗಳಿಗೆ ಭತ್ಯೆ, ಬರಣಗಳನ್ನು ಕೊಟ್ಟು ಮತ್ತು ತಮ್ಮ ವೆಚ್ಚಕ್ಕಾಗಿ ಹೊಸದಾಗಿ ರೊಕ್ಕವನ್ನು ಕೊಡಬೇಕೆಂದು ಸೈನಿಕರು ಕೇಳಿಕೊಂಡರು.

ಇವರಲ್ಲಿ ಬರದಿದ್ದವರನ್ನು ನಾಲ್ವರು ಗೌಡರನ್ನು ಅಲ್ಲಿ ಅಶ್ವದಳ ಇದ್ದ ಸ್ಥಳದಲ್ಲಿ ಚತುರ್‌ಬಲಗಳ ಸಮೇತ ಸೈನ್ಯವು ನಾಲ್ಕು ಲಕ್ಷದ ಒಂಭೈನೂರ ಮುನ್ನೂರನ್ನು ಹೊರಗಡೆ ಬಂದು ಪ್ರೌಢದೇವರಾಯರ ಸಮ್ಮುಖದಲ್ಲಿ ಇಟ್ಟರು. ಆದ್ದರಿಂದ ರಾಯರು ಬಹಳ ಸಂತೋಷಪಟ್ಟು ಬೇಕಾದ ಕೋರಿಕೆಗಳನ್ನು ಸಲ್ಲಿಸಲು ಏನೆಂದು ಕೇಳಲು ಅವರು (ಗೌಡರುಗಳು) ನಮ್ಮ ಕೋರಿಕೆಗಳು ಏನು ಇಲ್ಲವೆಂದು ಹೇಳಿದರು. ನಮ್ಮ ಜಾತಿಯಲ್ಲಿ ಲೆಬ್ಬಿಗೌಡನ ಮಗಳ ವಿಷಯವಾಗಿ ತಿಳಿಸುತ್ತದೆ.

ಪ್ರೌಢದೇವರಾಯನು ನಾಲ್ವರು ಗೌಡರನ್ನು ಮೆಚ್ಚಿ ನಿಮಗೆ ಏನು ಬೇಕೋ ಕೇಳಿಕೊಳ್ಳಿರಿ ಎಂದ ಮಾತಿಗೆ, ಗೌಡರುಗಳು ನೀವು ನಮಗೆ ಯಾವ ವಿಧವಾದ ಐಶ್ವರ್ಯವನ್ನು ಕೊಡಬೇಡಿ. ಲಬ್ಬಿಗೌಡನನ್ನು ನಮ್ಮ ಜಾತಿಯಲ್ಲಿ ಸೇರಿಸಿಕೊಳ್ಳಲು ಅಪ್ಪಣೆ ಕೊಡಿ ಎಂದು ಕೇಳಿಕೊಂಡರು. ಅದಕ್ಕೆ ಪ್ರೌಢದೇವರಾಯರು ಒಪ್ಪಿದರು.

ಪೆನಗೊಂಡೆಯಲ್ಲಿ ರಾಯರ ಆಸ್ಥಾನಕ್ಕೆ ನಾಲ್ವರು ಗೌಡರುಗಳನ್ನು, ಲಬ್ಬಿಗೌಡನನ್ನು ಕರೆಯಿಸಿ ಅವರಿಗೆ ಉಡುಗೊರೆಯನ್ನು ಕೊಟ್ಟು ಸನ್ಮಾನಿಸಿದರು. ಮತ್ತು ಮಲೆಯ ಮೀಸರಗಂಡ ಪೊನ್ನ ಮೇರುಗ ಕಾಯುವ ಕಾಲರಾಯ, ಹೊಕ್ಕಲರಾಯ,

ಜಯಿಭವರು ಎಂದು ರಾಯರಿಂದ ಬಿರುದನ್ನು ಪಡೆದು ಹೊಗಳಿಸಿಕೊಂಡರು. ಮತ್ತು ಮೂಕನಾಯಕನನ್ನು ಭದ್ರಗೊಲ್ಲರ ನಾಯಕಗಳಂಕೆ ಉದ್ದಂಡ ದೋದಂಡ ಬನ್ನಿ ಮಲಕು ಖಂಡಿತ ಧರಣಿಮಂಡಲೇಶ್ವರ ಮಾಧವ ಮನೋಹರ ಎಂದು ಹೊಗಳಿಸಿಕೊಂಡು ಮೂಲನಾಯಕನ ಮಗ ಬಲ್ಲಂದ ಎಲ್ಲಪ್ಪ ನಾಯಿಡು ಈ ಪೂರ್ವೊತ್ತರ ಸಮಾಚಾರವನ್ನು ತಿಳಿದು ಬೆಟ್ಟದ (ಶ್ರೀಶೈಲ) ಮಲ್ಲಪ್ಪನನ್ನು ಸೋಲಿಸಿದನು. ಈ ಶಾಸವನ್ನು ತಪ್ಪಿದವರಿಗೆ ಶಾಪಗಳನ್ನು ಹಾಕಲಾಗಿದೆ.

ಶ್ರೀ ಶೈಲದ ಮಲ್ಲಪ್ಪ ಹಂಪಿ ವಿರೂಪಾಕ್ಷಗಳು ಮೊದಲಾದ ದೇವತೆಗಳು ಸಾಕ್ಷಿ. ಈ ಕ್ರಮಕ್ಕೆ ನಾಲ್ವರು ಗೌಡರು ಪಗ್ಗಪು (ಹಗ್ಗದ) ಗೋತ್ರದ ಉಗ್ಗ ಪುನಯ್ಯ ಮುಂತಾದವರು ಸಾಕ್ಷಿ. ಇದಕ್ಕೆ ತಪ್ಪಿದವರು ಕಾಶಿಯಲ್ಲಿ ಕಪಿ(ಹಸು)ಗಳನ್ನು ಕೊಂದ ಪಾಪಕ್ಕೆ ಹೋಗುವರು. ಈ ಶಾಸನವನ್ನು ಬರೆದವರು ಪೆನಗೊಂಡೆ ನಿಯೋಗಿ ಲಕ್ಷಯ್ಯ.

ಶಾಸನದ ಪಾಠ

1ನೇ ಪ್ಲೇಟ್

1 ಸಾದಾರಣ ಸಂವತ್ಸರದ ಶ್ರಾವಣ ಶುದ್ದ ಪಂಚಮಿ ಪ್ರೌಢದೇವರಾಯಲವಾರು . . . . . .

2 ರವುತು ರಾಣುವ ಹೊದಲೈನ ಚತುರಂಗ್ಗ ಬಲಮುಲ ತೊ(. . .) ಪೆನುಕೊಂಡ್ಡಕು ವಚ್ಚಿ ಪಾಳ್ಯಂದಿಗಿ ಆಗು . . . .

3 ಕುತುರ್ಪು ದಿಕ್ಕುನ ವುಂಚಿ ಮಾಳಂಪ್ಪಗಾಣಿನ್ನಿ . . . . ೦ ನ್ನಿವಡ . . ಮಠ . . ಕುನ

4 ವಿಕ್ಕುನ ಪುಂ (.)ನಪ ಗಾಣಿನ್ನಿ ಉತ್ತರಪು ದಿಕ್ಕಿನ ವುಂಡಿ ಸಂಗಪ್ಪ ಗಾಣಿಂನ್ನಿ . ನಲುಗುರು . . . ನು

5 ನ್ನು ಪಿರುಪಿಂಚಿ ರಾಯಲ ದೇವುಲ(೦)ಷ್ಟು ಪರಿಕರಿಂಚನ ವಿವರಂ ತಮ . ೦ಬ್ಬ ಡಿನಿ ವಚ್ಚಿನಚತುರಂಗ್ಗ ಬಲಮುಲುಕು

6. ಬತ್ಯ ಬರಣಂಮುನ್ನು ಆಯರ್ ಭ ದಂಟಿ . ಚಲುವು ಲಕು ಕೊತ್ತ ರೋ(ಶೋ)ಕ ಮುನ್ನು ಇಯ್ಯವೆಲೆನವಿ ಆಡಿ. ರಾನ

2ನೇ ಪ್ಲೇಟ್

1 ರೆಟರಿ . ಗಾನಗಲು ಗುರುಗೌಂಡ್ಲುನ್ನು ಆಟ ತುರಂಗ ಬಲಮುಲುನ್ನ ಚತುಭರಾರಂಕ ಕಸುಬು ಗಡಿ ಹೋ . ದೈನ . . ಪಲ್ಲನ್ನು . . . ದಂಡು ಸಲುವುಲಕು ನಾ

2 ಲುಗುಲಕ್ಕಲ ತೊಂಬ ಮುನ್ನೂರೊಬ್ಬೈ ವಚ್ಚಿ ರಾಯಲವಾರಿ ಸಮುಕಾನ ವುಂಚಿರಿಗನಕರಾಯಲದೇವುಡು ಬಾಲಸಂತ್ತೋಬಡಿಮಿಕು ಕಾವಲಶಿನ ಮನವಿ

3 ಸನವುಲು ಎಮನಿ ಆಡಿಗೆ ನಂದಲು ಕುಮಾರು ಯಾತರಮನುಗುಲು ಎಮಿನ್ನಿ ಪನಿಲೇರುಮಾಜಾತಿಲುಲೋನು ಲೆಬ್ಬಿಗೌನಿಕು ತುರುಶಿ . . ಗಿ ಆನೆಪ

4 ಡು ಬು ಬಾಲಕ ಚಿನ್ನುನು ಕೊಂಡ್ಡಿಗನ ಕಾ ಆಯದ್ದರಿ ಮಿಮ್ಮಿ ಕೊಪ್ಪಿ . ಶಿಲೆ ಬೈಗಾಣಿನ್ನಿ ಜಾತಿಕಿ . . . ಶಿವುಂನ್ನುಡಿಗನ ಕ ಅಥಗಾಣ್ನಿ ಜಾ

5 ತಿಲೋ ಕಲಶೇ ಪಟ್ಟುಗ ಮನವಿ ಕೆಟ್ಟಡ ಶೇಯವಲೆನ ನಿಅಡಿಗಿರಿಗನಕ ಅಂದುಲುಕು ರಾಯಲ ದೇವುಂಡು ಪಲಕರಿಂಚಿನವಿವ

6 ರಂಜಾತಿ ಗೊಂಡ್ಲು ವುಗುರುನ್ನ ಕುಡಿನಾರುವ ತೀರ್ಪುದಿದ್ದುಗದ ಶೇಶಿನ ಡಿಪಿಂಚು ಕೊಂಮ್ಮನಿ ಕುಟುಡ ಶೇಷಗನಕ ಆ ತಿರುಗ

7 ನೆ ಅನಲು ಗುರುಗೌಂಡ್ಲುನ್ನು ಕೂಡಿ ಆಲೋ ಬೆನಬೆಸಕೋನಿ ಪಿಂಜಲಮಾಹಿ ನಾಯಿನಿ ವದ್ದಿಕಿ ಪಾಯ ಲೆಬ್ಬ ಗಾನಿ ಕಾರ್ಯ

3ನೇ ಪ್ಲೇಟ್

1 ಅರುಗಪ್ಪ ಅಯ್ಯಡಮ್ಮ . . . . . ಮನಿ ಆಟಗರಿಗ ನೆಕ ಪೆನಗೊಂಡ ಪೆದ್ದ ಬೇಡವುಲೋನುಮು . . ಕಲ್ಲಘೋರಿ ಬಪ್ಪ . . . .

2 ಮಾಕಿ ನಾಯಂಡು . ಪಿನಬ್ಯ ವಿಕ್ರಮಾನಕು ನಲುಗುರು ಗುರುಗೌಡ್ಲುನ್ನು ಗುಡಿಲೇ ಬೈಗಾಣಿಂನ್ನಿ . ಸಿಗೊಂಡ ಶದ ಚಿರುವೋ ಮನಿಗಿರಂ . ನಿ ತೋಲ್ಲಗೋಲನು

3 ಬಪ್ಪಿ ಆ ಚೆರುವುಲೋ ಪಟ್ಟು ನನೇನಲುಗುರು ಗೌಂಡ್ಲುನ್ನಲೇ ಬೈಗೌಣ್ನಿ ಪೊತ್ತನ ಬೆಟ್ಟು ಪೊನಿ ಬೊಶಶಿ ನಾರುಲೇ ಬೆಸಿಗ ಕನಿಪಂ ಪಂಡಾಲಾಮ್ ಅಜ್ಜಲಂ(ಗಿ) ಕಂಬಮೇ ತ್ತಿ . . ಜೇ

4 ರ್ಲ ಮಕೆನಾಯನಿ ಕಿನಲು ಗುರುಗೌಂಡ್ಲುಲುನ್ನು ಪಗ್ಗ ಪುಗೋ ಗೋಕ್ರಿ ಉಗ್ಗ ಪುನೇಯಯಂ ಶಿವಾಗಾನ . . ಮುನ್ನು ಯಬ್ಬಿಸಂದಿ ಯುಂಡಿಲೇ ತರುವಾತ ರಾಯಲು ದೇವುಂಡು ನಲಗುರು

5 ಗೌಂಡ್ಲ ಕುನ್ನು ಲಬ್ಬೆಗಾನಿಕಿಂನ್ನಿನ ಕಂಲಾಕಲುವು ಉಡುಗರಲು ಬಹುಮಾನವು ಶೇಶಿ ಹಂಪಿಂಗಿನಪ್ಪುಡು ಕುಲ ಬಿರುದು ಮಲಿಮಸರಗಂಡ ಹೊನ್ನಮೇ . ಗಿ ಕಾಯವಾ ಕಾಲರಾ

6 ಯ ಹೊಕ್ಕಲರಾಯ ವಜೇಭವ ಅನಿಗೌಂಡ್ಲು ಪೋಗಡಿಂಚು ಕೋನಿರಿ ॥1॥ ಅವುದೇವರ ಗೌಡಗುರುಂ ಗುರುಂಚಿ ಶಿಲಪೊಲ ಸಿದ್ದಂಮು ತಿರುಮಣಿ ತಿರುಮಾನ್ಯ ಭಲು ಸೂರ್ಯ ಸಿಹ್ವಾಸನಂಭ್ಬು ಕೊ

7 ಟ್ಟ ಗೌಡುಗು ಗಾಬಡಿನ ಗೋಪಾಲಕಿಷ್ಣ ಪಾಲವೇ ಕಲಿಪದ್ದ ಭದ್ರಭಲ್ಲರ ಗಾಯಾನಿಗಳಂಕ್ಕ ವುದ್ದಂಡ ಗೋರ್ದ್ದಂಡ್ಡ ಬನ್ನಿಮರುಕು ಖಂಡ್ಡಿತ ಧರಣಿಮಂಡಲೇಶ್ವರ ಮಾದವ . .

8 ಹರ ಅನಿಪಿಂಜರ ಮಾಕಿನಾಯ . ಪೋಗಡಿಂಚುನೋನನು ಆ ಪಿಂಚರ್ಲ್ಲ ಮಾಕಿ ನಾಯಿನಿ ಕುಮಾರುಡು ಬಲ್ಲಕ ಎಲ್ಲಪ್ಪ ನಾಯಿಡು ಈ ಪೂರ್ವೋತ್ತರ ಸವ

9 ಚಾರುಮು . ತುನಾದ ಕೊಂಡ ಮಲ್ಲಯ್ಯಪ್ಪ . ತಾಲಮಂ ಲ ಯಾ ಅಂಪು ವಿರೂಪಾಕ್ಷಿನಾಗುಡುವಾರಂಜ್ಯೋತಿ ಮೊದಲ್ಯೆನ ದೇ

4ನೇ ಪ್ಲೇಟ್

1 ತಲು ಸಾಕ್ಷಿ ಈ ಕ್ರಮಾನುಕು ನಲುಗುರುಗೌಂಡ್ಲುನ್ನು ಪಗ್ಗಪು ಗೋತ್ರ ಉಗ್ಗ ಪುನಯ್ಯ ಪ

2 ಗಾಪಂಚಡಂ ಮುನ್ನೂರೊಂಬ ಹೊಂಬಿ ಪೇರ್ಜಲ ಮಾಕಿ ನಾಯಿಂಣ್ನಿ ಸಂದಿ ಬ್ಬಿಕ ಪೋತೋಕಾ

3 ಕಾಶಿವೂ ಖಪಿಲಾವುನೊ ಚಂಪಿನ ವಾಮನ ಪೋಗಲು ವಾರು ಈ ಪಟ್ಟಿಯಂ ವ್ರಾಶಿವಾ

4 ಡ್ಡು ಪಿನುಗೊಂಡ್ಡನಿ ಯೋಗಿ ಲಕ್ಷಯ್ಯ

(ಶಾಸನ ಓದಲು ನೆರವಾದ ಕೆಂಕೆರೆ ಹನುಮಂತೇಗೌಡ ಹಾಗೂ ಸುಂಕಂ ಗೋವರ್ಧನರವರಿಗೆ ಕೃತಜ್ಞತೆಗಳು)

16. ಹಂಪಿ ಶಾಸನಗಳ ಕವಿ ಕಂಡರಣೆಕಾರರು

– ಡಾ. ಎಸ್.ಎಸ್.ವೀರೇಶ ಉತ್ತಂಗಿ

ಹಂಪಿ ಸಾವಿರಾರು ವರ್ಷಗಳಿಂದಲೂ ಜನವಸತಿಯ ತಾಣವಾಗಿತ್ತೆಂದು ಅನೇಕ ಆಧಾರಗಳು ದೊರೆಯುತ್ತವೆ. ಪ್ರಕೃತಿ ಸಹಜ ಬೆಟ್ಟ ಗುಡ್ಡಗಳು ಜನರಿಗೆ ರಕ್ಷಣೆ ನೀಡಿ ವಾಸಿಸಲು ಯೋಗ್ಯಸ್ಥಳವಾಗಿಸಿವೆ.ಅನೇಕ ರಾಜ ಮಹಾರಾಜರುಗಳು ಇಲ್ಲಿ ಬಂದು ಹೋದರೂ ಹಂಪಿಯನ್ನು ತಮ್ಮ ಆಳ್ವಿಕೆಗೆ ಒಳಪಡಿಸಿಕೊಳ್ಳಲಿಲ್ಲ.ಸ್ಥಳೀಯರೇ ಆದ ವಿಜಯನಗರ ಸಾಮ್ರಾಟರು ತಮ್ಮನ್ನು ಶ್ರೀ ವಿರೂಪಾಕ್ಷನ ಪ್ರತಿನಿಧಿಗಳೆಂದು ಕರೆದುಕೊಂಡಿದ್ದಾರೆ ಇದಕ್ಕೆ ಸಾಕ್ಷಿ ಈ ಅರಸರು ಹಾಕಿಸಿದ ಶಾಸನಗಳಾಗಿವೆ.

ಯಾವುದೇ ವಿಚಾರ,ಮಾತು,ಸಂಗತಿ ಸ್ತಿರವಾಗಿ ಉಳಿಯಬೇಕಾದರೆ ಅದು ಅಕ್ಷರ ರೂಪಕ್ಕೆ ಇಳಿದು ದಾಖಲಾಗಬೇಕು. ಅದು ಕಲ್ಲು,ತಾಳೆಗರಿ,ಲೋಹ,ಮಡಿಕೆ,ಕಾಗದ ಹೀಗೆ ಯಾವುದೇ ವಸ್ತುಗಳ ಮೇಲೆ ಬರೆದರೆ ಅದು ಬಹುಕಾಲದವರೆಗೆ ಸ್ಥಿರವಾಗಿ ಉಳಿಯುತ್ತದೆ. ಹೀಗೆ ದಾಖಲಾದ ಬರವಣಿಗೆಯನ್ನು ಶಾಸನ ಮತ್ತು ಹಸ್ತಪ್ರತಿಯೆಂದು ವಿಷಯದ ವಿಸ್ತಾರ ವಿವರಣೆಯ ಹಿನ್ನಲೆಯಲ್ಲಿ ಹೇಳಬಹುದು ಮಾತು ಆಡಿ ಬಿಟ್ಟರೆ ಅದು ನಶಿಸಿ ಹೋಗುತ್ತದೆ ಅದರ ಅಸ್ತಿತ್ವ ತಿಳಿಯಲಾಗುವುದಿಲ್ಲ, ಮುಂದಿನ ಸಂದರ್ಭದಲ್ಲಿ ಅದನ್ನು ತಿರುಚಿ ಹೇಳಬಹುದು ಮಾತು ಪ್ರಮಾಣ ಭೂತವಾಗಬೇಕಾಗಿದ್ದಲ್ಲಿ ಅದು ಧಾಖಲಾಗಬೇಕು ಆಗದು ಸ್ಥಿರವಾಗಿ ಉಳಿಯುತ್ತದೆ ಆಕಾರಣಕ್ಕಾಗಿ ಮಾತನ್ನು ಉಳಿಸಿ ಪ್ರಮಾಣೀಕರಿಸಲು ಹಿಂದೆ ಮಹಾ ರಾಜರು ತಾವು ದೇವಾಲಯಗಳಿಗೆ,ವ್ಯಕ್ತಿಗಳಿಗೆ ನೀಡಿದ ದಾನ ಸ್ಥಿರವಾಗಿ ಉಳಿಸಲು ಪ್ರಮಾಣಭೂತವಾಗಿ ಕೇವಲ ಮಾತಿನಿಂದ ಹೇಳದೇ ಅದನ್ನು ಶಾಸನ ರೂಪದಲ್ಲಿ ಕಲ್ಲಿನಲ್ಲಿ ಬರೆಸಿ ದೇವಾಲಯದ ಮುಂದೆ ನೆಡುಸುತ್ತಿದ್ದರೆಂದು ತಿಳಿದು ಬಂದಿದೆ.

ಅರಸರ ಅರಮನೆಗಳಲ್ಲಿ ಅರಸರು ಬಾಯಿಂದ ಹೇಳುವ ಆಜ್ಞೆಗಳನ್ನು ಲಿಖಿತಗೊಳಿಸುವುದಕ್ಕಾಗಿಯೇ ಕೆಲವು ಅಧಿಕಾರಿಗಳಿರುತ್ತಿದ್ದರು, ಕೆಲವು ಸಂದರ್ಭದಲ್ಲಿ ದಾನದ ರೂಪದಲ್ಲಿ ರಾಜಾಜ್ಞೆಗಳನ್ನು ವ್ಯವಸ್ಥಿತವಾಗಿ ಬರೆಯಲು ಕವಿಗಳು ಕೆರೆ ಬಾವಿ ಕಟ್ಟೆಗಳನ್ನು ಕಟ್ಟಿಸಿದ ವಿಚಾರ ವ್ಯಕ್ತಿಯ ಕಾರ್ಯಕ್ರಮವನ್ನು ಮೆಚ್ಚಿ ಅವನಿಗೆದಾನ ಬಿಟ್ಟ ವಿಚಾರ ಕುರಿತು ವ್ಯವಸ್ಥಿತವಾಗಿ ಕಾವ್ಯಮಯವಾಗಿ ಬರೆಯುತ್ತದ್ದರು ಇವರನ್ನು ಶಾಸನ ಕವಿಗಳೆಂದು ಕರೆಯಲಾಗಿದೆ, ಆಸ್ಥಾನದಲ್ಲಿ ಕಾವ್ಯ ಬರೆಯುವ ಕವಿಗಳು ಕೆಲವು ಸಂದರ್ಭದಲ್ಲಿ ಶಾಸನಗಳನ್ನು ಬರೆದಿರುವುದನ್ನು ಕಾಣಬಹುದು. ಶಾಸನಗಳನ್ನು ಕಾವ್ಯಮಯವಾಗಿ ಬರೆದಿದ್ದನ್ನು ಕಲ್ಲಿನಲ್ಲಿ ತಾಮ್ರಪತ್ರಗಳಲ್ಲಿ ಸುಂದರವಾಗಿ ಕೊರೆಯಲು ಕೆಲವು ವ್ಯಕ್ತಿಗಳು ಇರುತ್ತಿದ್ದರು. ಇವರನ್ನು ಕಂಡರಣೆಕಾರರು ಎನ್ನುತ್ತೇವೆ. ಪ್ರಸ್ತುತ ಪ್ರಬಂಧವನ್ನು ಹಂಪಿ ಶಾಸನಗಳಲ್ಲಿ ಕಂಡುಬರುವ ಕವಿ ಕಂಡರಣೆಕಾರರಿಗೆ ಸೀಮಿತ ಗೊಳಿಸಿಕೊಳ್ಳಲಾಗಿದೆ.

ಅಧ್ಯಯನದ ಅನುಕೂಲಕ್ಕಾಗಿ ಕವಿ ಕಂಡರಣೆಕಾರರನ್ನು 2 ರೀತಿಯಾಗಿ ವರ್ಗೀಕರಿಸಿಕೊಳ್ಳಲಾಗಿದೆ

1) ಸ್ಥಳೀಯ ಕವಿ ಕಂಡರಣೆಕಾರರು

2) ಪರಸ್ಥಳ ಕವಿ ಕಂಡರಣೆಕಾರರು

1) ಸ್ಥಳೀಯ ಕವಿ ಕಂಡರಣೆಕಾರರು : ಹಂಪಿಯವರೇ ಆಗಿರುವ ಅಥವಾ ವಿಜಯನಗರ ಅರಸರ ಆಸ್ಥಾನಗಳಲ್ಲಿ ಯಾವುದಾದರೂ ಕೆಲಸಗಳಲ್ಲಿ ತೊಡಗಿಸಿಕೊಂಡು ಶಾಸನ ರಚಿಸುವ ಕಂಡರಿಸುವ ಕಾರ್ಯನಿರ್ವಹಿಸಿದವರನ್ನು ಸ್ಥಳೀಯ

ಕವಿ ಕಂಡರಣೆಕಾರರು ಎಂದು ಗುರುತಿಸಲಾಗಿದೆ ಕೆಲವು ಶಾಸನಗು ಕವಿಯ ಹೆಸರನ್ನು ಮಾತ್ರ ಹೇಳುತ್ತದೆ ಮತ್ತೆ ಕೆಲವು ಎಂದು ಗುರುತಿಸಲಾಗಿದೆ ಕೆಲವು ಶಾಸನಗಳು ಕವಿಯ ಹೆಸರನ್ನು ಮಾತ್ರ ಹೇಳುತ್ತದೆ ಮತ್ತೆ ಕೆಲವು ಶಾಸನಗಳು ಸ್ಥಳೀಯ ಕವಿ ಕಂಡರಣೆಕಾರರ ಹೆಸರನ್ನು ಉಲ್ಲೇಖಿಸಿರುವುದನ್ನು ಕಾಣಬಹುದು.

ಕಡಲೆಕಾಳು ಗಣೇಶನ ಆಗ್ನೇಯ ದಿಕ್ಕಿನಲ್ಲಿರುವ ದೇವಾಲಯದ ಪಶ್ಚಿಮ ಗೋಡೆಯಮೇಲೆ ಇರುವ ಕಾಲದ ಉಲ್ಲೇಖವಿಲ್ಲದಶಾಸನದಲ್ಲಿ "ಪ್ರಸ(ನ್ನ) ನಿವಿರೂಪಾದ (ಕ್ಷ) ದೇವರ ನಂದಿಶೇಖರ ಮಧ್ಯದಂ ಪ್ರಮಾಣ ಪುರಸ್ಪರವಾಗಿ ಪತ್ರವನ್ನು ಬರೆದುಕೊಟ್ಟರು-------ತಿರುಮಲದೇವರು"[1] ಎಂದಿದೆ ಈ ಶಾಸನವು ಲೆಕ್ಕದನಾಗಿದೇವಭಟ್ಟನು ತ್ರಿಕಾಲದಲ್ಲಿ ಗಾಯಿತ್ರಿಮಂತ್ರ ಜಪಿಸಲು ವಿರುಪಾಕ್ಷ ದೇವರ ಪ್ರಮಾಣ ಮಾಡಿ ಪತ್ರ ಬರೆದು ಕೊಟ್ಟಿರುವ ವಿಷಯ ತಿಳಿಸುತ್ತದೆ ಈ ಶಾಸನದ ಕೊನೆಗೆ ನಮೂದಾಗಿರುವ ತಿರುಮಲ ದೇವರು ಬಹುಶಃ ಈ ಶಾಸನದ ಕವಿಯಾಗಿರಬಹುದಾಗಿದೆ

ಕಪಿಲಾಶ್ರಮದ ಬಳಿಯ ಕ್ರಿ ಶ 1455ರ ಶಸನವು ಸಂಗಮರ ವಂಶಾವಳಿ ಸೌಮ್ಯ ಸೋಮೇಶ್ವರ ದೇವಾಲಯದ ನಿರ್ಮಾಣ ಅದರ ನಿರ್ವಹಣೆ ಕುರಿತು ತಿಳಿಸುತ್ತದೆ. ಇದು ಸಂಸ್ಕೃತ ಕನ್ನಡ ಭಾಷೆಯಲ್ಲಿದ್ದು ಇದರ ಕವಿಯನ್ನು ಕುರಿತು ಶಾಸನವು ಕೊನೆಯಲ್ಲಿ "ಈ ಶಾಸನವ ಬರದಾತ ಮುದ್ದಣಾಚಾರ್ಯರ ಮಗ ವೀರಣ ಸ್ವಸ್ತಿ ಶ್ರೀ"[2] ಎಂದು ಉಲ್ಲೇಖಿಸಿದೆ. ಅಂದರೆ ಮುದ್ದಣ ಆಚಾರ್ಯರ ಮಗ ವೀರಣ್ಣ ಎಂದು ತಿಳಿಸುತ್ತದೆ. ಸಂಸ್ಕೃತ ಕನ್ನಡ ಎರಡು ಭಾಷೆಗಳಲ್ಲಿ ರಚಿತವಾಗಿರುವ ಈ ಶಾಸನವು ಪ್ರೌಢ ಭಾಷೆ ಹೋಂದಿದ್ದು ವಾಕ್ಯರಚನೆ ವ್ಯಾಕರಣ ಬದ್ದವಾಗಿರುವುದನ್ನು ಗಮನಿಸಿದರೆ ಶಾಸನದ ಕವಿ ಸಂಸ್ಕೃತ ಕನ್ನಡ ಎರಡು ಭಾಷೆಗಳಲ್ಲೂ ಪಾಂಡಿತ್ಯ ಹೊಂದಿದವನಾಗಿರಬೇಕೆನಿಸುತ್ತದೆ ಅಂದರೆ ಇದರ ಕಂಡರಣೆಕಾರನ ಹೆಸರನ್ನು ಶಾಸನವು ಉಲ್ಲೇಖಿಸಿರುವುದಿಲ್ಲ.

ಕೋದಂಡರಾಮಸ್ವಾಮಿ ದೇವಾಯದ ಎದುರಿಗೆ ಚಿಕ್ಕ ಸೀತಾದೇವಿ ದೇವಾಲಯದ ಬಳಿಯ ಬಂಡೆಗಲ್ಲಿನಲ್ಲಿರುವ ಕ್ರಿ ಶ 1514ರ ಕೃಷ್ಣ ದೇವರಾಯನ ಕಾಲದ ಚಿಕ್ಕ ಶಾಸನವು ಋತ್ವಗ್ಮೀಂದ್ರ ಶಕೆ ಭಾವೇ ಕೃಷ್ಣರಾಯೋವತಿ ಕ್ಷಿತಿಮ್ ವೃಷಾಃ ಶೇಷಾದೀಕ್ಷಿತನ ಶಂಕರಾಯ ಸವರ್ಪಿತಃ"[3] ಎಂದು ಉಲ್ಲೇಖಿಸಿದೆ.

ಅಂದರೆ ಕೃಷ್ಣ ದೇವರಾಯನು ಆಳುತ್ತಿದ್ದಾಗ ಶೇಷಾದೀಕ್ಷಿತನೆಂಬುವವನು ಶಿವನಿಗೆ ಬಸವನ ವಿಗ್ರಹ ಸಮರ್ಪಿಸಿರುವ ವಿಚಾರ ತಿಳಿಸುತ್ತದೆ ಈ ಶಾಸನವು ಮೂರು ಸಾಲಿನ ಸಂಸ್ಕೃತ ಶ್ಲೋಕವಾಗಿದೆ ಇದನ್ನು ಗಮನಿಸಿದರೆ ಈ ಶಾಸನದ ರಚಕ ಬಹಶಃ ಶೇಷಾದೀಕ್ಷಿತನೇ ಆಗಿರಬೇಕೆನಿಸುತ್ತದೆ. ಮಗನೋ ಬಂಧುಗಳೋ, ಇದನ್ನು ಕಲ್ಲಿನಲ್ಲಿ ಕಂಡಸಿರಬೇಕೆನಿಸಿತ್ತದೆ

ಹೇಮಕೂಟದ ದೇವಾಲಯ ಒಂದರ ಎದುರಿಗಿರುವ ಕಲ್ಲಿನ ಮೇಲಿನ ಕ್ರಿ ಶ 1494ರ ಶಾಸನ ಹಾಗೂ ರಂಗಸ್ವಾಮಿ ದೇವಾಲಯದ ಉತ್ತರಕ್ಕಿರುವ ಕ್ರಿ ಶ 1545ರ ಶಾಸನಗಳೆರಡೂ ತೆಲುಗು ಭಾಷೆಯಲ್ಲಿದ್ದು, ಈ ಎರಡೂ ಶಾಸನಗಳ ಕೊನೆಯಲ್ಲಿ "ಶ್ರೀಂ ಜೇಯುನ್" ಎಂದು ಉಲ್ಲೇಖಿಸಿದೆ, ಇವೆರಡೂ ಸುಮಾರು 51 ವರ್ಷಗಳ ಅಂತರದಲ್ಲಿ ರಚನೆಗೊಂಡಿವೆ. "ಶ್ರೀಂ ಜೇಯುನ್" ಎಂಬುದು ವ್ಯಕ್ತಿ ನಾಮವೋ ಅದು ಕವಿ ಕಂಡರಣೆಕಾರನ ಹೆಸರೋ ಸ್ಪಷ್ಟವಾಗಿ ತಿಳಿದು ಬರುವುದಿಲ್ಲ ಎರಡೂ ಶಾಸನಗಳು ಶ್ರೀ ಗಣಾದಿಪತಯೇ ನಮಃ ಎಂದು ಆರಂಭವಾಗಿರುವುದನ್ನು ಇಲ್ಲಿ ಬಳಕೆಯಾಗಿರುವ ಭಾಷಾ ಶೈಲಿಯನ್ನು ಗಮನಿಸಿದರೆ "ಶ್ರೀಂ ಜೇಯುನ್" ಎಂಬುದು ತೆಲುಗು ವಂಶ ಪಾರಂಪರ್ಯ ಶಾಸನ ರಚಕರ ಮನೆತನದ ಹೆಸರಾಗಿರಬೇಕೆಂದು ತೋರುತ್ತದೆ ಅಂದರೆ "ಶ್ರೀಂ ಜೇಯುನ್" ಎಂಬುದು ವ್ಯಕ್ತಿಯ ಹೆಸರಾಗಿರದೆ ಶಾಸನ ರಚಕರ ಮನೆತನದ ಹೆಸರಾಗಿರುವ ಸಾದ್ಯತೆಯನ್ನು ತಳ್ಳಿಹಾಕುವಂತಿಲ್ಲ.

ಕಡಲೇಕಾಳು ಗಣೇಶನ ಗುಡಿಯ ಮುಂಬಾಗದ ಮಂಟಪದಲ್ಲಿ ನಿಲ್ಲಿಸಿರುವ ಕ್ರಿ.ಶ. 1410ರ ಲಕ್ಷೀ ಧರಾಮಾತ್ಯನ ಶಾಸನದ ಕವಿ ಮಧುರ ಎಂದು ಕೊನೆಯಲ್ಲಿ "ಸುಕವೀಂದ್ರ ಉಂದಸಭೆಯೊಳ್ ತಾನೆಂದೊಡಂ ಮಂಮ ಧಾರಿಣೀಯೋಳ್ದೇಳ್ದರಿಯಾರ್ಜುಡಾಮಾಧುರನಂ(ನಿ) ನ್ನೀರ್ತ ಕರ್ನಾಟಕ ಲಕ್ಷಣಪಾದ ಸರೋಜನಂ" ಎಂದು ಉಲ್ಲೇಖಿಸಿದೆ. ಈ ಶಾಸನವು ಲಕ್ಷೀಧರನು ಮಹಾಶಕ್ತಿ ಹೇರಂಬಗಣಪತಿಯನ್ನು ಪ್ರತಿಷ್ಠಾಪಿಸಿದ್ದರ ಬಗ್ಗೆ ಸಂಗಮರ ವಂಶಾವಳಿ ಸಿಂಗಲೆಯ ವರ್ಣನೆ ಮೊದಲಾದ ಅಂಶಗಳನ್ನು ತಿಳಿಸಿತ್ತದೆ ಇದು ಕನ್ನಡ ಭಾಷೆಯಲ್ಲಿ ರಚಿವಾಗಿದ್ದು ಸಂಸ್ಕೃತ ಭೂಷಿಯಿಷ್ಠ ಭಾಷಾಬಳಕೆ

ಹೊಂದಿದೆ ಈ ಶಾಸನ ಬರೆದ ಕವಿಯನ್ನು ಶಾಸನದ ಕೊನೆಯಲ್ಲಿ ಮಧುರ ಎಂದು ಉಲ್ಲೇಖಿಸಿದೆ ದೇವರಾಯನ ಆಸ್ಥಾನದಲ್ಲಿ ಮಧುರ ಪ್ರಸಿದ್ಧ ಕವಿಯಾಗಿದ್ದನು ಇವನ ಹೆಸರನ್ನು ಭೂ ಲೋಕದಲ್ಲಿ ಕೇಳದವರು ಜಡರು ಎಂದು ಕರೆದು,ಅವನನ್ನು ಕರ್ನಾಟಕ ಲಕ್ಷಣ ಪಾದ ಸರೋಜ ಎಂದು ಹೊಗಳಿದೆ ಅಂದರೆ ಮಧುರ ಕವಿಕರ್ನಾಟಕದ ಎಲ್ಲಾ ವ್ಯಾಕರಣ ಛಂದಸ್ಸು ಬಲ್ಲವನಾಗಿದ್ದ ಎಂದು ತಿಳಿಸುತ್ತದೆ.

ಬುಕ್ಕಸಾಗರದ ವಿರುಪಾಕ್ಷಗೌಡರ ಬಳಿಯಿರುವ ಕ್ರಿ.ಶ. 1612ರ ಅರವೀಡು ವಂಶದ ವೆಂಕಟಾಪತಿ ದೇವರಾಯನ ಕಾಲದ ಶಾಸನವು ಬುಕ್ಕಸಾಗರದ ಕರಿಸಿದ್ದೇಶ್ವರ ಸಂಸ್ಥಾನ ಮಠದ ಚಿಕ್ಕ ಕರಿಸಿದ್ದ ದೇವರಿಗೆ ಕಲ್ಲುಗುಡಿ ಗ್ರಾಮವನ್ನು ದಾನ ನೀಡಿದ್ದನ್ನು ತಿಳಿಸುತ್ತದೆ ಶಾಸನವು ಸಂಸ್ಕೃತ ಕನ್ನಡ ಭಾಷೆಯಲ್ಲಿ ರಚಿತವಾಗಿದೆ ಇಲ್ಲಿ ಬಳಕೆಯಾಗಿರುವ ಭಾಷೆ ಪ್ರೌಢವಾಗಿದ್ದು ಛಂದೋಬದ್ಧವಾಗಿದೆ ಇದನ್ನು ಬರೆದ ಕವಿ ಮಹಾ ಶ್ವೇತಾಂಬರ ಕವಿ ಹಾಗೂ ಇದನ್ನು ಕಂಡರಿಸಿದವನು ಶಣಮ. ಇವರನ್ನುಕುರಿತು ಶಾಸನವು "ದತ್ತವಾನ್ಮಹಾಶ್ವೇತಂಬರ ಕವಿರವದತ್ತಾಂಮ್ರ ಶಾಸನ ಶ್ಲೋಕಾನ್ ವೆಂಕಟಾಪತಿರಾಯಕ್ಷಾಪತಿದೇಶೇನ ಮಲ್ಲಣಾಚಾರ್ಯ : ಗನಪಯ ತನಯ ಶಣಮ ಲಿಖದಿದಂ ವಿರಣಾನುಜಾಸ್ತಾಮಂ"[6] ಎಂದು ದಾಖಲಿಸಿದೆ ಶಾಸನ ರಚಕ ಮಹಾ ಶ್ವೇತಾಂಬರ ಕವಿ ಕಂಡರಣೆಕಾರ ವೆಂಕಟಪತಿರಾಯನ ರಾಜ್ಯದಲ್ಲಿರುವ ಗಣಪಯ್ಯನ ಮಗ ವೀರಣ್ಣನ ತಮ್ಮನೂ ಆಗಿರುವ ಶಣಮ ಎಂಬುವವನು. ಮಹಾ ಶ್ವೇತಾಂಬರ ಕವಿ ಬಹುಶ: ವೆಂಕಟಪತಿರಾಯನ ಆಸ್ಥಾನ ಕವಿಯಾಗಿರಬಹುದು ಅಥವಾ ಬುಕ್ಕಸಾಗರ ಮಠದ ಪಂಡಿತನಾಗಿರಬಹುದಾಗಿದೆ ಬಹುಶ; ಸ್ಥಳೀಯ ವ್ಯಕ್ತಿಯಾಗಿರಬಹುದು ಜೊತೆಗೆ ಶಣಮ ಸ್ಥಳೀಯ ಪ್ರಾಂತ್ಯದ ಶಾಸನ ಕಂಡರಣೆಕಾರನಾಗಿರುವ ಸಾದ್ಯತೆಯಿದೆ.

ಇದಕ್ಕೂ ಮೊದಲು ರಚನೆಗೊಂಡಿರುವ ಅಚ್ಯುತ ನಾರಾಯಣ ಸ್ವಾಮಿ ದೇವಾಲಯದ ಉತ್ತರ ಗೋಪುರದ ಪಶ್ಚಿಮ ಗೋಡೆಯ ಎಡಗಡೆ ಇರುವ ಕ್ರಿ.ಶ. 1534ರ ಅಚ್ಯುತರಾಯನ ಕಾಲದ ಶಾಸನವು ತಿರುವೆಂಗಳನಾಥ ದೇವರ ಪ್ರತಿಷ್ಠಾಪನೆ, ಅಚ್ಯುತಾಪುರ ಪ್ರತಿನಾಮ ದೇವರಿಗೆ ದಾನ ಮೊದಲಾದ ಅಂಶಗಳನ್ನು ತಿಳಿಸುವ ಇದು ಕನ್ನಡದಲ್ಲಿ ರಚಿತಗೊಂಡಿದ್ದು ಸರಳ ಭಾಷೆಯಿಂದ ಕೂಡಿದೆ ಇದರ ಕೊನೆಯ ಭಾಗದಲ್ಲಿ "..ಮೌದ್ಗಲ್ಯ ಗೋತ್ರದ ಆಶ್ವಲಾಯನ ಸೂತ್ರದ ಅಪಾಜಿಪಂಡಿತರ"[7] ಎಂದು ಉಲ್ಲೇಖಿಸಿದೆ. ಅಪಾಜಿಪಂಡಿತರೇ ಈ ಶಾಸನದ ಕವಿಯಾಗಿರ ಬಹುದು. ಅಪಾಜಿಪಂಡಿತರು ಬಹುಶಃ ದೇವಾಲಯದ ಆಡಳಿತ ವರ್ಗಕ್ಕೆ ಸೇರಿದವರಾಗಿರ ಬೇಕು. ಅವರೇ ಅರಸನ ಆಜ್ಞೆಯಂತೆ ಶಾಸನ ರಚಿಸಿರಬೇಕು.

ಕಲ್ಲಿನಲ್ಲಿ ಶಾಸನಗಳನ್ನು ಕೊರೆಯುವುದು ಅಥವಾ ಕೆತ್ತುವುದೇ ಬದುಕಿನ ವೃತ್ತಿಯಾಗಿಸಿಕೊಂಡು ಬದುಕುವ ವ್ಯಕ್ತಿಗಳು ಹಂಪಿಯಲ್ಲಿದ್ದರೆಂಬುದು ಹಂಪಿ ಶಾಸನಗಳಿಂದ ತಿಳಿದು ಬರುತ್ತದೆ. ಮತಂಗ ಪರ್ವತದ ವಾಯುವ್ಯಕ್ಕೆ ವಿರೂಪಾಕ್ಷಪುರದ ಕೊನೆಗೆ ಇರುವ ಎದುರುಬಸವಣ್ಣ ಮಂತಪದ ಹತ್ತಿರ ಇರುವ ಬಂಡೆಯಲ್ಲಿನ ಶಾಸನವು "ಕಲ್ಲುಕುಟಿಗ ಬಸವ ಮಾಡಿದ ಮಂಟಪ"[8] ಎಂದು ದಾಖಲಿಸಿದೆ. ಕಂಡರಣೆಕಾರ ಬಸವ ಎದುರು ಬಸವಣ್ಣನಿಗೆ ಮಂಟಪ ಮಾಡಿದ್ದನ್ನು ತಿಳಿಸುತ್ತದೆ.ಶಾಸನ ಕಂಡರಣೆಕಾರ ಬಸವನನ್ನು ಜನಪದ ಭಾಷೆಯಲ್ಲಿ ಕಲ್ಲುಕುಟಿಗನೆಂದು ಕರೆದಿದೆ. ಕಲ್ಲುಕುಟಿಗರನ್ನು ಶಿಷ್ಟಭಾಷೆಯಲ್ಲಿ ಕಂಡರಣೆಕಾರರೆಂದು ಕರೆಯಲಾಗುತ್ತದೆ.

ಮತಂಗದೇವರ ಗುಹೆಯ ಹತ್ತಿರದ ಕೊಳದ ಬಳಿಯ ಬಂಡೆಯಲ್ಲಿರುವ ಕಾಲದ ಉಲ್ಲೇಖವಿಲ್ಲದ ಶಾಸನವು "ರಾಚೇಯನಾಯ್ಕನು ನಾಗೇನಾಯ್ಕನು........ ಮಂತಗೇಶ್ವರ ದೇವರ ದರುಶನೌಆಗಿ ಕೃತಾರ್ಥರಾದರು ಶ್ರೀ ರಾಮ"[9] ಎಂದು ಉಲ್ಲೇಖಿಸಿದೆ. ಅಂದರೆ ರಾಚೇಯ ನಾಯ್ಕ, ನಾಗೇಯನಾಯ್ಕ ಮುಂತಾದವರು ಮತಂಗ ಪರ್ವತಕ್ಕೆ ಬಂದು ಮತಂಗೇಶ್ವರ ದೇವರ ದರ್ಶನ ಪಡೆದು ಕೃತಾರ್ಥರಾದ ವಿಷಯ ತಿಳಿದುಬರುವುದರ ಜೊತೆಗೆ ಕೊನೆಯಲ್ಲಿಶ್ರೀ ರಾಮ ಎಂಬ ಹೆಸರಿದೆ ಶ್ರೀ ರಾಮ ಎಂಬುವನು ಬಹುಶಃ ಶಾಸನ ಕಂಡರಣೆಕಾರನಾಗಿರಬಹುದು.

ರಾಚೇಯನಾಯ್ಕ, ನಾಗೇಯನಾಯ್ಕರ ಗುಂಪಿನಲ್ಲಿ ಶ್ರೀ ರಾಮನೂ ಒಬ್ಬವನಾಗಿದ್ದು ಬಹುಶಃ ಅಕ್ಷರ ಬಲ್ಲವನಾಗಿದ್ದರಿಂದಲೋ ಅಥವಾ ಇವನು ಶಾಸನ ಕಂಡರಣೆಕಾರರ ಕುಟುಂಬದ ಸದಸ್ಯನಾಗಿದ್ದರಿಂದಲೋ ಅವನು ತನ್ನ

ಗೆಳೆಯರ ಜೊತೆ ಮಾತಂಗ ಪರ್ವತಕ್ಕೆ ಬಂದಿದ್ದನ್ನು ಕಲ್ಲಿನಲ್ಲಿ ಕಂಡರಿಸಿದಂತೆ ತಿಳಿದುಬರುತ್ತದೆ.

ಹಜಾರ ರಾಮಸ್ವಾಮಿ ದೇವಾಲಯದ ಗರ್ಭಗೃಹದ ದಕ್ಷಿಣ ಅಧಿಷ್ಠಾನದಲ್ಲಿರುವ ತ್ರುಟಿತ ಶಾಸನವು ರಾಮಚಂದ್ರ ದೇವರಿಗೆ ದಾನ ನೀಡಿದ್ದನ್ನು ತಿಳಿಸುತ್ತದೆ ಕನ್ನಡದಲ್ಲಿರುವ ಶಾಸನವು ಸರಳ ಭಾಷೆ ಹೊಂದಿದೆ. ಇದರ ಕೊನೆಯ ಭಾಗದಲ್ಲಿ "…….ಧರ್ಮ ಶಾಸನ...ರೆದ ಸೇನ.....ಬೋಗಣ.....ಮಗನೋ....."[10] ಎಂದು ಉಲ್ಲೇಖಿಸಿದೆ ಶಾಸನದ ಬರೆದ ಸೇನಬೋವ ಬೋಕಣಯನವರ ಮಗ ಮೊನಪಯನು ಪರಿಷ್ಕರಿಸಿಕೊಳ್ಳಬಹುದು. ಈ ಶಾಸನದ ರಚಕ ಶ್ಯಾನುಬೋಗರ ಬೋಕಣ್ಣನ ಮಗ ಮೋನಪ್ಪ ಎಂದು ಶಾಸನ ದಾಖಲಿಸಿದೆ ಮೋನಪ್ಪ ಸ್ಥಳೀಯ ಒಂದು ಭಾಗದ ಕರವಸೂಲಿ ಕಾರನೂ ಶಾಸನ ರಚಕನೂ ಆಗಿದ್ದನೆಂದು ತಿಳಿದುಬರುತ್ತದೆ.

ಹೀಗೆ ಹಂಪಿಯಲ್ಲಿ ದೊರೆಯುವ ಕೆಲವೇ ಕೆಲವು ಶಾಸನಗಳು ಮಾತರ ಸ್ಥಳೀಯ ಶಾಸನ ಕವಿ ಕಂಡರಣೆಕಾರರನ್ನು ಕುರಿತು ಹೇಳುತ್ತವೆ.

2) ಪರಸ್ಥಳ ಕವಿಕಂಡರಣೆಕಾರರು:– ಬೇರೆ ಊರಿನ ಅಥವಾ ಬೇರೆ ಪ್ರಾಂತದ ಕವಿಕಂಡರಣೆಕಾರರು ಹಂಪಿಗೆ ಬೇರೆ ಕೆಲಸದ ನಿಮಿತ್ತ ಬಂದು ಇಲ್ಲಿನ ಅರಸರ ಸೂಚನೆಯ ಮೇರೆಗೆ ಶಾಸನ ರಚಿಸುವ ಕಂಡರಿಸುವ ಕಾರ್ಯ ಮಾಡಿದವರನ್ನು ಕವಿಕಂಡರಣೆಕಾರರು ಎಂದು ಗುರುತಿಸಲಾಗಿದೆ.

ಕ್ರಿ.ಶ. 1199ರ ಕುರುಗೋಡು ಸಿಂಧರ ಇಮ್ಮಡಿ ರಾಚಮಲ್ಲನ ಕಾಲದ ವಿರುಪಾಕ್ಷ ದೇವಾಲಯದ ಉತ್ತರಕ್ಕಿರುವ ದುರ್ಗಾದೇವಾಲಯದಲ್ಲಿರುವ ಶಾಸನವು ಪಂಪಾತೀರ್ಥದ ರಕ್ಷಣೆ ಮೈದುನ ಚೌಡಯ್ಯನ ವರ್ಣನೆ ಮತ್ತು ಅವನ ದಾನ ಕುರಿತು ಹೇಳುತ್ತದೆ ಸರಳ ಕನ್ನಡದಲ್ಲಿ ರಚಿತಗೊಂಡಿರುವ ಶಾಸನವು ಅಲಂಕಾರ ವರ್ಣನೆಗಳಿಂದ ಕೂಡಿದೆ. ಇದರ ಕವಿಯನ್ನು ಕುರಿತು ಶಾಸನದ ಕೊನೆಯ ಭಾಗದಲ್ಲಿ "ಒಳವಿತಿಳಕಂ ರೇವರಸರ ಮಗಂ ಮಾರಮಸಂ ಹೇಳುತಾನೆ ಬರೆದ ಶಾಸನ"[11] ಎಂದು ಉಲ್ಲೇಖಿಸಿದೆ ಶಾಸನ ಬರೆದ ಕವಿ ಒಳವಿ ತಿಲಕ ಎಂಬುದು ಬಹುಶಃ ಕುರುಗೋಡು ಪರಿಸರದಲ್ಲಿರಬಹುದಾದ ಪ್ರಾಚೀನ ಗ್ರಾಮವಾಗಿರಬಹುದು ಅಥವಾ ಒಳವಿತಿಲಕ ಎಂಬುದು ಮಾರಮರಸನ ಮನೆತನದ ಹೆಸರಾಗಿರಾಬಹುದು. ಮಾರಮರಸ ಕುರುಗೋಡು ಪರಿಸರದವನಾಗಿರಬೇಕು. ಈ ಶಾಸನ ಹಾಕಿಸಿದ ಅಧಿಕಾರಿ ಮೈದುನ ಚೌಡಯ್ಯ ಇಮ್ಮಡಿ ರಾಚಮಲ್ಲನ ಕೈ ಕೆಳಗಿನ ಅಧಿಕಾರಿಯಾಗಿದ್ದಾನೆ.

ಕ್ರಿ.ಶ. 1410ರ ಲಕ್ಷ್ಮೀರಾಮಾತ್ಯದ ಶಾಸನವು ಕವಿಕಂಡರಣೆಕಾರನನ್ನು ಕುರಿತು ಕೊನೆಯಲ್ಲಿ "ಹರಿಹರದ ಧರಣೋಜನ ಬರಹ"[12] ಎಂದು ಉಲ್ಲೇಖಿಸಿದೆ. ಈ ಶಾಸನದ ಕವಿಕಂಡರಣೆಕಾರ ಧರಣೋಜ ಈಗಿನ ದಾವಣಗೆರೆ ಜಿಲ್ಲೆಯ ಹರಿಹರದವನೆಂದು ತಿಳಿಸುತ್ತದೆ.

ಕ್ರಿ.ಶ. 1521ರ ಹಜಾರ ರಾಮಸ್ವಾಮಿ ದೇವಾಲಯದ ದಕ್ಷಿಣ ಗೋಡೆಯಲ್ಲಿನ ಕೃಷ್ಣದೇವರಾಯನ ಕಾಲದ ಶಾಸನದ "........ಧರ್ಮ ಶಾಸನದ ಬರದ ಸೇನಬೋವ ಮಾಗುಡಿ ಕಾ,ರಸನ ಮಗ ಕೋಕಪ ಶಿಂಘರಸನು....."[13] ಎಂದು ಉಲ್ಲೇಖಿಸಿದೆ ಈ ಧರ್ಮ ಶಾಸನವು ತಿಮ್ಮರಾಜ ಶ್ರೀ ರಾಮಚಂದ್ರ ದೇವರಿಗೆ ಕೆಲವು ದಾನಬಿಟ್ಟಿರುವುದನ್ನು ವಿವರಿಸುತ್ತದೆ ಇದನ್ನುರಚಿಸಿರುವ ವ್ಯಕ್ತಿ ಶ್ಯಾನುಭೋಗರ ಕಾಮರಸರ ಮಗ ಬೋಕಪ ಇವನು ಮಾಗುಡಿ ಗ್ರಾಮದವನು ಮಾಗುಡಿ ಬಹುಶಃ ಕೊಟ್ಟೂರು ಬಳಿಯಿರುವ ಮಾಗುಡಿ ಗ್ರಾಮ ಆಗಿರಬೇಕೆನಿಸುತ್ತದೆ ಇವನು ರಾಜಕಾರ್ಯ ನಿಮಿತ್ತ ತಿಮ್ಮರಾಜನ ಜೊತೆಹಂಪಿಗೆ ಬಂದು ತಿಮ್ಮರಾಜನ ಸೂಚನೆಯಂತೆ ಈ ಶಾಸನ ಬರೆದಿರಬೇಕೆನಿಸುತ್ತದೆ ಇಲ್ಲಿ ಬಳಕೆಯಾಗಿರುವ ಕನ್ನಡ ಸಾಮಾನ್ಯ ಪ್ರಭುತ್ವ ಹೊಂದಿಲ್ಲ ಎಂಬುದು ತಿಳಿದುಬರುತ್ತದೆ ಅವನಿಗೆ ಕೇವಲಕ್ಷರ ಜ್ಞಾನ ಮಾತ್ರ ಇದೆ ಪಾಂಡಿತ್ಯವಿಲ್ಲ ಎಂದು ತಿಳಿಯುತ್ತದೆ.

ಕಾಮಲಾಪುರದ ಪ್ರಾಚ್ಯವಸ್ತುಸಂಗ್ರಾಹಲಯದ ಬಳಿ ರಸ್ತೆ ಬದಿಯಲ್ಲಿರುವ ಕ್ರಿ.ಶ. 1531ರ ಅಚ್ಯುತ ದೇವರಾಯನ ಕಾಲದ ಶಾಸನವು ಸಾಳುವ ದಣ್ಣಾಯಕನು ಕಾಮಲಾಪುರ ಸ್ಥಳದ ಕೊಂಡಮರಸಯ್ಯ ಪಾಳೆಯದ ಭೂಮಿಯನ್ನು ಲಕ್ಷ್ಮೀನರಸಿಂಹ ದೇನರ ದೀಪಾರಾಧನೆಗೆ ದಾನನೀಡಿದ ವಿಷಯ ತಿಳಿಸುತ್ತದೆ ಶಾಸನದ ಅಂತ್ಯದಲ್ಲಿ "......ಯೀ ಶಾಸನದ

ಬರದಾತ ಚೆರಟಿಮಂಗಲದ ಲಿಂಗರಸದ ಮಗ ತಂಮಪನೂ....."[14] ಎಂದು ಶಾಸನಕವಿಯನ್ನು ಉಲ್ಲೇಖಿಸಿದೆ. ಶಾಸನ ಕವಿ ಲಿಂಗರಸರ ಮಗ ತಿಮ್ಮಪ್ಪನು ಚೆರಟಿಮಂಗಲದವನಾಗಿದ್ದಾನೆ. ಈತನು ಪಂಡಿತನಲ್ಲ ಕೇವಲ ಅಕ್ಷರ ಬಲ್ಲವನಾಗಿಆನೆಂದು ಶಾಸನದಲ್ಲಿ ಬಳಕೆಯಾಗಿರುವ ಭಾಷೆಯನ್ನು ಆಧರಿಸಿ ಹೇಳಬಹುದು, ಚೆರಟಿಮಂಗಲ ವಿಜಯನಗರದ ಯಾವ ಭಾಗಕ್ಕೆ ಬರುತ್ತದೆ ಎಂಬುದನ್ನು ಶೋಧಿಸಬೇಕಾಗಿದೆ.

ರಾಣಿವಾಸದ ಪಹರೆಯವರ ಕಟ್ಟಡದ ಹಿಂಭಾಗದಲ್ಲಿ ನಿಂತಿರುವ ಕಲ್ಲಿನ ಮೇಲೆ ಇರುವ ಸದಾಶಿವ ದೇವರನ ಕಾಲದ ಕ್ರಿ.ಶ. 1554 ಶಾಸನವು ಮಹಾಮಂಡಳೇಶ್ವರ ರಾಮರಾಜು ತಿರುಮಲರಾಜನ ಮಗ ರಘುನಾಥ ರಾಜನು ಕತಾಲಪಲ್ಯಂ ದಲ್ಲಿ ಅಲಮೇಲ ಮಂಗಮ್ಮನದೇವಾಲಯ ಕಟ್ಟಿಸಿ ದಾನ ಬಿಟ್ಟಿರುವ ವಿಷಯ ತಿಳಿಸುವ ಶ್ರೀ ಶ್ರೀ ಶ್ರೀ "[15] ಎಂದು ಶಾಸನ ಕವಿಯನ್ನು ಹೆಸರಿಸುತ್ತದೆ ತೆಲುಗು ಭಾಷೆಯ ಈ ಶಾಸನದ ಕರ್ತೃ ಆದಿಭೂಮಿ ಪಿಂಗಹ ಎಂದು ಉಲ್ಲೇಖಿಸಿದೆ ಆದಿಭೂಮಿ ಬಹುಶಃ ಈ ಕವಿ ಊರಾಗಿರಬಹುದು

ಈ ಶಾಸನಗಳಲ್ಲದೇ ಬೇರೆ ಶಾಸನಗಳು ಅಂದರೆ ಕಾಲದ ಉಲ್ಲೇಖವಿಲ್ಲದ ಕೆಲವು ಶಾಸನಗಳು ಕೆಲ ಕವಿ ಕವಿಕಂಡರಣೆಕಾರರ ಹೆಸರನ್ನು ದಾಖಲಿಸುತ್ತದೆ

ಬೇಟೆಕಾರರ ಹೆಬ್ಬಾಗಿಲಿನ ವಾಯುವ್ಯ ದಿಕ್ಕಿಗಿರುವ ಬಂಡೆಯ ಮೇಲೆ ಇರುವ ತೆಲುಗು ಶಾಸನವು "ಶ್ರೀ ಆನಮಲ್ಲಪ್ಪನಿ ತೋಟ ಆಟವಿನಷ್ಯವಾಪರುಡು ತಿಮರಾವುತು"[16] ಎಂದು ಉಲ್ಲೇಖಿಸಿದೆ ಆನಮಲ್ಲಪ್ಪನು ತೋಟ ಎಂದು ಬರೆದವನು.

ಬಹುಶಃ ತಿಮರಾವುತ ಆಗಿರಬೇಕೆನಿಸುತ್ತದೆ ಅಂದರೆ ಈ ಶಾಸನದ ಕವಿಕಂಡರಣೆಕಾರ ತಿಮರಾವುತ ಎಂದು ನಿರ್ಧರಿಸಬಹುದು. ಕೋಟಿಲಿಂಗದ ಹತ್ತಿರದ ಬಂಡೆಗಳಲ್ಲಿ "ಚಉಡಪ ದಾಸರ ಮಗ ಸಂಕಣದಾಸರು"[17] ಎಂದೂ "ಚಿನ ಭಂಡಾರಂದೇಮರಸು"[18] ಎಂದು "ತಿಂಮಪ"[19] ಎಂದು ಉಲ್ಲೇಖಿಸಲಾಗಿದೆ. ಈ ಶಾಸನಗಳ ಕರ್ತೃ ಅದರಲ್ಲಿ ಉಲ್ಲೇಖಿಸಲ್ಪಟ್ಟ ಚೌಡಪ್ಪದಾಸರ ಮಗ ಸಂಕಣ್ಣದಾಸರು. ಚಿನ್ನ ಭಂಡಾರದ ದೇಮರಸ ಮತ್ತು ತಿಮ್ಮಪ್ಪ ಎಂಬುವರೇ ಆಗಿದ್ದಾರೆ ಇವರು ಯಾವುದೋ ಕಾರಣದಿಂದಲೋ ಹಂಪಿಗೆ ಬಂದಿದ್ದಾಗ ತಮ್ಮ ಹೆಸರಗಳನ್ನು ಕಲ್ಲು ಬಂಡೆಗಳ ಮೇಲೆ ಕೆತ್ತಿರುವುದನ್ನು ಕಾಣಬಹುದು ತಮ್ಮ ಹೆಸರುಗಳನ್ನು ಅವರೇ ಕಂಡರಿದ್ದರಲ್ಲಿ ಯಾವುದೇ ಸಂಶಯ ಕಾಣಲಾಗದು.

ಹೀಗೆ ಹಂಪಿಗೆ ಅನೇಕ ಕಾರಣಗಳಿಂದ ಬಂದ ಬೇರ ಬೇರೆ ಊರಿನ ಜನರು ವಿವಿಧ ದೇವರ ದರ್ಶನ ಪಡೆದು ತಮ್ಮ ಹೆಸರುಗಳನ್ನು ಅಲ್ಲಿನ ಕಲ್ಲು ಬಂಡೆಗಳ ಮೇಲೆ ಕೆತ್ತಿತುವುದನ್ನು ಕಾಣಬಹುದಾಗಿದೆ.

ಒಟ್ಟಾರೆಯಾಗಿ ಹೇಳುವುದಾದರೆ ಹಂಪಿಯಲ್ಲಿ ಆರಂಭ ಕಾಲದಿಂದ ಹಿಡಿದು 18ನೇ ಶತಮಾನದ ತನಕ ವಿವಿದ ಅರಸುಮನೆತನಗಳ ಸು.500ಕ್ಕೂ ಹೆಚ್ಚು ಶಾಸನಗಳು ದೊರೆಯುತ್ತವೆ ಅಂದರೆ ಆ ಶಾಸನಗಳ ಕವಿ ಕವಿಕಂಡರಣೆಕಾರರನ್ನು ಉಲ್ಲೇಖಿಸುವುದು ಮಾತ್ರ ಅತ್ಯಲ್ಪ ಮಾತ್ರ ಅನೇಕ ಅರಸರು ಇಲ್ಲಿನ ವಿವಿಧ ದೇವರಿಗೆ ನಾನಾ ಬ್ರಾಹ್ಮಣರಿಗೆ ನಾನಾ ಕಾರಣಗಳಿಗಾಗಿ ದಾನ ಬಿಟ್ಟಿರುವುದನ್ನು ಹೇಳುತ್ತವೆ ಆದರೆ ಶಾಸನ ಕವಿ ಕವಿಕಂಡರಣೆಕಾರರ ಹೆಸರುಗಳನ್ನು ಮಾತ್ರ ಹೇಳುವುದಿಲ್ಲ ಇದಕ್ಕೆ ಕಾರಣ ಸ್ಪಷ್ಟವಾಗಿ ತಿಳಿದುಬರುವುದಿಲ್ಲ. ಬಹುಶಃ ಅರಸರ ರಾಜಾಜ್ಞೆಗ್ಗಳಾಗಿದ್ದರಿಂದ ಆ ಶಾಸನಗಳಲ್ಲಿ ದೊಡ್ಡವರ ಹೆಸರಿನ ಜೊತೆ ತಮ್ಮ ಹೆಸರು ಇರಬಾರದೆಂಬ ಮನೋಭಾವ ಇರಬೇಕಿತ್ತು ಇಲ್ಲವೇ ಶಾಸನ ಬರೆದಿದ್ದಕ್ಕೆ ಅವರು ಸಂಭಾವನೆ ಪಡೆದಿದ್ದರ ಫಲವಾಗಿ ತಮ್ಮ ಹೆಸರು ನಮೂದಿಸಿರಲಿಕ್ಕಿಲ್ಲ. ಅಥವಾ ರಾಜನೇ ಪ್ರತ್ಯಕ್ಷ ದೇವರಾಗಿರುವ ಕಾರಣ ಅರಸರ ಮತ್ತು ಅವನ ಅಧಿಕಾರಿಗಳ ಹೊರತು ಬೇರೆ ಹೆಸರು ಶಾಸನದಲ್ಲಿ ಇರಬಾರದೆಂಬ ನಿಯಮ ಇದ್ದಿರಬಹುದು, ಅಲ್ಲದೇ ತಾವು ಈ ಶಾಸನ ಬರೆದಿದ್ದೇವೆ ಎಂದು ತೋರಿಸಿಕೊಳ್ಳಬಾರದು ಎಲ್ಲವೂ ಅರಸನಿಗಾಗಿ ಕಾರ್ಯನಿರ್ವಹಿಸಿದ್ದೇವೆ ಎಂದು ವಿಶಾಲ ಮನೋಭಾವ ಇರಬಹುದು ಹಾಗೂ ಕವಿಕಂಡರಣೆಕಾರರು ಅರಸ ನೇಮಿಸಿಕೊಂಡ ಅಧಿಕಾರಿಗಳಾಗಿರಬಹುದು.

ಹಂಪಿ ಶಾಸನ ಕವಿಕಂಡರಣೆಕಾರರಲ್ಲಿ ವಂಶಪಾರಂಪರ್ಯ ಬರವಣಿಗೆ ಮತ್ತು ಕಂಡರಣೆ ವೃತ್ತಿ ಹೊಂದಿದವರೂ ಇರುವುದನ್ನು ಕಾಣಬಹುದು.

ಆಧಾರ ಸೂಚಿ ಮತ್ತು ಟಿಪ್ಪಣಿ

1) ಡಾ. ದೇವರ ಕೊಂಡಾರೆಡ್ಡಿ ಮತ್ತು ಇತರರು(ಸಂ) ಕನ್ನಡ ವಿ.ವಿ ಶಾಸನ ಸಂಪುಟ ಹಂಪಿ ಶಾಸನಗಳು ಶಾ.ಸಂ.67 ಪುಟ–56
2) ಅದೇ ಶಾ.ಸಂ.398 ಪುಟ–286
3) ಅದೇ ಶಾ.ಸಂ.144 ಪುಟ–116
4) ಅದೇ ಶಾ.ಸಂ.60,289 ಪುಟ–214
5) ಅದೇ ಶಾ.ಸಂ.69 ಪುಟ–63
6) ಅದೇ ಶಾ.ಸಂ.396 ಪುಟ–280
7) ಅದೇ ಶಾ.ಸಂ.132 ಪುಟ–107
8) ಅದೇ ಶಾ.ಸಂ.107 ಪುಟ–93
9) ಅದೇ ಶಾ.ಸಂ.129 ಪುಟ–104
10) ಅದೇ ಶಾ.ಸಂ.260 ಪುಟ–200
11) ಅದೇ ಶಾ.ಸಂ.55 ಪುಟ–48
12) ಅದೇ ಶಾ.ಸಂ.69 ಪುಟ–63
13) ಅದೇ ಶಾ.ಸಂ.257 ಪುಟ–199
14) ಅದೇ ಶಾ.ಸಂ.322 ಪುಟ–234
15) ಅದೇ ಶಾ.ಸಂ.288 ಪುಟ–212
16) ಅದೇ ಶಾ.ಸಂ.371 ಪುಟ–265
17) ಅದೇ ಶಾ.ಸಂ.167 ಪುಟ–126
18) ಅದೇ ಶಾ.ಸಂ.169 ಪುಟ–126
19) ಅದೇ ಶಾ.ಸಂ.171 ಪುಟ–127

17. ಶಾಸನಗಳಲ್ಲಿ ಒಂದನೆಯ ಬುಕ್ಕನ ಮಹಾಪ್ರಧಾನರುಗಳ ಧಾರ್ಮಿಕ ಕೊಡುಗೆ (ಕ್ರಿ.ಶ. 1356–1377)

– ಡಾ॥ ಡಿ.ಎಂ. ನಾಗರಾಜು

ಸಂಗಮವಂಶದ ಒಂದನೆಯ ಬುಕ್ಕನು ಸುಮಾರು ಕ್ರಿ.ಶ. 1356ರಲ್ಲಿ ಪಟ್ಟಕ್ಕೆ ಬಂದನು. ಈ ಬುಕ್ಕರಾಯ ಮಹಾರಾಜನಿಗೆ ಮಹಾಮಂಡಳೇಶ್ವರ, ಅರಿರಾಯ, ವಿಭಾಡ, ಭಾಷೆಗೆತಪ್ಪುವರಾಯರಗಂಡ, ಹಿಂದುರಾಯ ಸುರತ್ರಾಣ, ಪೂರ್ವ–ಪಶ್ಚಿಮ ಸಮುದ್ರಾಧಿಪತಿ, ವೀರಸಂಗಮೇಶ್ವರದ ರಾಯಬಾಹುಕ ಮುಂತಾದ ಬಿರುದುಗಳಿದ್ದವು. ಶ್ರೀರಂಗಪಟ್ಟಣದ ಶಾಸನವೊಂದರಲ್ಲಿ ಇದೇ ಅರಸನನ್ನು ವೀರಬುಕ್ಕಣ್ಣರಾಯನೆಂದೂ, ಮದ್ದೂರಿನ ಶಾಸನವೊಂದರಲ್ಲಿ ಬುಕ್ಕಣ್ಣಒಡೆಯರ್ ಎಂದೂ ಕರೆಯಲಾಗಿದೆ. ಚಾಮರಾಜನಗರ ಶಾಸನವೊಂದರಲ್ಲಿ ಬುಕ್ಕನನ್ನು ಪೂರ್ವ–ಪಶ್ಚಿಮ ಸಮುದ್ರಾಧೀಶ್ವರನೆಂದು ಕರೆಯಲಾಗಿದೆ.

ಒಂದನೆಯಬುಕ್ಕನು ಅರಸನಾದೊಡನೆ ರಾಜ್ಯದ ಐಕ್ಯತೆಗೂ ತನ್ನ ಸ್ಥಾನದ ಭದ್ರತೆಗೂ ಸೂಕ್ತಕ್ರಮಗಳನ್ನು ಕೈಗೊಂಡನು. ತನ್ನಮಕ್ಕಳನ್ನೇ ಪ್ರಾಂತ್ಯಗಳ ಮಂಡಲೇಶ್ವರರನ್ನಾಗಿ ನೇಮಿಸಿ, ರಾಜ್ಯಭಾರಕ್ಕೆ ಅವರನ್ನೇ ಹೊಣೆಯನ್ನಾಗಿ ಮಾಡಿದನು. ಹಾಗೆ ನೇಮಕ ಮಾಡಲ್ಪಟ್ಟವರಲ್ಲಿ ಉದಯಗಿರಿಯ ಮಂಡಲೇಶ್ವರ ಭಾಸ್ಕರ ಭವದೂರ, ಮುಳಬಾಗಿಲು ಮತ್ತು ಪಡೈವೀಡುಗಳ ಮಂಡಳೇಶ್ವರ ಕುಮಾರಕಂಪಣ, ಮೊದಲು ಪೆನುಕೊಂಡೆ ಅನಂತರ, ಅರಗದ ರಾಜ್ಯಸೂತ್ರಗಳನ್ನು ವಹಿಸಿಕೊಂಡ ವಿರೂಪಣ್ಣ ಹಾಗೂ ಹೊಯ್ಸಳರಾಜ್ಯದ ಭಾಗಗಳ ಉಸ್ತುವಾರಿ ನೋಡಿಕೊಳ್ಳುತ್ತಿದ್ದ ಚಿಕ್ಕಕಂಪಣ, ಮಲ್ಲಪ್ಪ ಮತ್ತು ಎರಡನೆಯ ಹರಿಹರರು ಸೇರಿದ್ದರು.

ಸಂಗಮವಂಶದ ಅರಸರಲ್ಲಿ ತುಂಬಾಪ್ರಖ್ಯಾತನಾದ ಒಂದನೆಯ ಬುಕ್ಕನು ವಿಜಯನಗರ ಸಾಮ್ರಾಜ್ಯದ ನಿಜವಾದಶಿಲ್ಪಿ ಎನ್ನಬಹುದು. ಇವನು ಧೀರಯೋಧನೂ ಆಗಿದ್ದನು. ರಾಜ್ಯ ಸಂಘಟನಾಚತುರನಾಗಿದ್ದ ಬುಕ್ಕನು ತನ್ನ ಸಾಮ್ರಾಜ್ಯವನ್ನು ಅನೇಕ ರಾಜ್ಯಗಳವಿಂಗಡಣೆ ಮಾಡಿದನು. ಉದಯಗಿರಿರಾಜ್ಯ, ಪೆನ್ನುಗೊಂಡೆರಾಜ್ಯ, ಮುಳವಾಯಿರಾಜ್ಯ, ಅರಗ ಇಲ್ಲವೆ ಮಲೆಹರಾಜ್ಯ ತುಳುರಾಜ್ಯ ರಾಜಗಂಭೀರರಾಜ್ಯ ಮುಂತಾದ ರಾಜಕೀಯವಿಭಾಗಗಳು ಇದ್ದವು. ಬುಕ್ಕನು ಧರ್ಮಸಹಿಷ್ಣುತೆಯುಳ್ಳವನಾಗಿದ್ದನು. ಶ್ರವಣಬೆಳಗೊಳದಶಾಸನವೊಂದರಲ್ಲಿ ಸ್ವಸ್ತಿಶ್ರೀಮನ್ಮಹಾಮಂಡಳೇಶ್ವರಂ ಅರಿರಾಯವಿಭಾಡ ಭಾಷೆಗೆಬಪ್ಪುವ ರಾಯರಗಂಡ ಶ್ರೀವೀರಬುಕ್ಕರಾಯನು ಪೃಥ್ವೀರಾಜ್ಯವ ಮಾಡುವ ಕಾಲದಲ್ಲಿ ಎಂದಿದೆ.

ಒಂದನೇಬುಕ್ಕನ ಕಾಲದ ಮಂಡಲಗಳ ಆಡಳಿತವನ್ನು ಮಂಡಳೇಶ್ವರರು ನೋಡಿಕೊಳ್ಳುತ್ತಿದ್ದರು. ಸಾಮಾನ್ಯವಾಗಿ ರಾಜಕುಟುಂಬದ ಸದಸ್ಯರುಗಳಿಗೆ ಆ ಹುದ್ದೆಗಳು ಮೀಸಲಾಗಿದ್ದವು. ಶ್ರೀ ಎಚ್.ಕೃಷ್ಣಶಾಸ್ತ್ರಿ ಎಂಬ ವಿದ್ವಾಂಸರ ಹೇಳಿಕೆಯ ಪ್ರಕಾರ ಪ್ರತಿಯೊಂದು ಪ್ರಾಂತ್ಯಕ್ಕೂ ಒಬ್ಬನಾಯಕನಿದ್ದನು. ಎಲ್ಲಪ್ರಾಂತಗಳ ಮೇಲ್ವಿಚಾರಣೆಗಾಗಿ ಓರ್ವ ಮಹಾನಾಯಕಾಚಾರ್ಯನಿದ್ದನು. ನಾಯಕರ ಅಧೀನದಲ್ಲಿ ಇನ್ನೂರು ಘಟಕಗಳಿದ್ದವೆಂದು ಪಾಯಿಸ್ ಹೇಳಿದ್ದಾರೆ. ಅರಸನಿಗೆ ರಾಜ್ಯಭಾರದಲ್ಲಿ ನೆರವಾಗಲು ಮಂತ್ರಿಮಂಡಲವಿದ್ದಿತು. ಪ್ರಧಾನಾಮಾತ್ಯನೂ ಇತರ ಮಂತ್ರಿಗಳು ಇದ್ದರು. ಶಾಸನಗಳ ಆಧಾರದಿಂದ ಬರುವ ವಿಷಯಗಳನ್ನು ನಾವು ನೋಡಬಹುದು.

ಒಂದನೇಬುಕ್ಕನ ಕಾಲದ ಮಹಾಪ್ರಧಾನರು ಶಾಸನಗಳು: ಕ್ರಿ.ಶ. 1336ರ ಹಂಪಿ ಶಾಸನದಲ್ಲಿ ಮಹಾಪ್ರದಾನನಾದ ಬಸವಣ್ಣದಣ್ಣಯಕನು ವಿರೂಪಾಕ್ಷದೇವರ ಸೇವೆಗಾಗಿ ರಾಮಾಪುರದ ಕೆರೆಯ ಕೆಳಗೆ ಭೂದಾನ ಮಾಡಿದ್ದನ್ನು ತಿಳಿಸುತ್ತದೆ.

ಕ್ರಿ.ಶ. 1355ರ ರಾಯದುರ್ಗಶಾಸನದಲ್ಲಿ ಸೇನಾಧಿಪತಿ ಭೋಗರಾಜನು ರಾಜನ ಅಪ್ಪಣೆ ಮೇರೆಗೆ ಅನಂತ–ಜಿನೇಶ್ವರದೇವರ ನಿರ್ಮಾಣ ಮಾಡಿ ಬೋಧಕಮಾಗನಂದಿಶಿಷ್ಯ ಅಮರಕೀರ್ತಿ ನಂದಿಸಂಘ, ಬಲತ್ಕಾರಗಣ ಸಾರಸ್ವತ–ಗಚ್ಚ ಮತ್ತು ಕುಂದ ಕುಂದಅನ್ವಯ ಎಂದಿದೆ.

ಕ್ರಿ.ಶ. 1356 ಬೈಂದೂರು ಶಾಸನದಲ್ಲಿ ಗೋಕರ್ಣೇಶ್ವರ ದೇವಾಲಯದಲ್ಲಿ ಪ್ರತಿನಿತ್ಯ 3 ಸಲ ರುದ್ರಪೂಜೆ ನೆರವೇರಿಸಲು ಮಹಾಪ್ರಧಾನ ಮಲ್ಲಯ್ಯದಂಣ್ಣಾಯಕ ಬೈಂದೂರು ಅಜ್ಜರಸನಿಂದ ಭೂಮಿ ಪಡೆದು ಭೂಮಿದಾನ ನೀಡಿದ್ದಾನೆ

ಕ್ರಿ.ಶ. 1357ರ ಕೋಟೇಶ್ವರಶಾಸನದಲ್ಲಿ ಸಬುತಿಯನಾಯಕನಮಗ ರವಾಳದೇವಮಂತ್ರಿ ಮೊಮ್ಮಗ ಮಾದರಸಯ್ಯ ವಿಷ್ಣು–ತಿರುಳರಿಂದ ಕೊಂಡು ದೇವರಸೇವೆಗೋಸ್ಕರ ದಾನನೀಡಿದ ವಿವರವಿದೆ. ಇದೇಕಾಲದ ಶಂಕರನಾರಾಯಣ ಶಾಸನದಲ್ಲಿ ರಾಜನ ಮಹಾಪ್ರಧಾನಮಾಲೆಯ–ದಂಣಾಯಕ ಶಂಕರನಾರಾಯಣದೇವರಿಗೆ ಭೂಮಿದಾನ ನೀಡಿದ್ದನ್ನು ತಿಳಿಸುತ್ತದೆ.

ಕ್ರಿ.ಶ 1358ರ ಕೆಂಜೂರುಶಾಸನದಲ್ಲಿ ಕೋಟಿನಾಥದೇವರಿಗೆ ಬಾರಬಳಿಯ ಮಲುನಿಡುವಳನು ದಿನಪ್ರತಿವೋಪಾನೆ ಅಡಿಗೆ ದೀಪಕಲ್ಪಿಸಿಗೋಸ್ಕರ ಕೋಟೆಯಂಣನೆಡುವಳ ದೇವರಸೇವೆಗೆ ಭೂದಾನನೀಡಿ ಕೇಶಿಅಂಚಲಿಗೆ ಒಪ್ಪಿಸಿದ ವಿವರವಿದೆ.

ಕ್ರಿ.ಶ. 1358–59ರ ಹೊಸಾಳ ಶಾಸನದಲ್ಲಿ ಮಹಾಪ್ರಧಾನಬೈಚಯನಾಯಕನು ಬಾರಕೂರ ರಾಜ್ಯವನ್ನಾಳುತ್ತಿರುವಾಗ ಒಬ್ಬ ದಂಡನಾಯಕನ ಹೆಸರು ಸ್ಪಷ್ಟವಿಲ್ಲವೆಂದು ತಿಳಿಸುತ್ತದೆ.

ಕ್ರಿ.ಶ. 1359ರ ಬೈಂದೂರುಶಾಸನ ಸವೆದಿದೆ. ಮಹಾಪ್ರಧಾನ ಮಲೆಯ ದಂಣಾಯ್ಕರು ಬಾರಕೂರ ರಾಜ್ಯವನಾಳುವಲ್ಲಿ ಅವರ ತಮ್ಮಂದಿರು ಚಿಕಮಲೆಯ ದಂಣಾಯ್ಕರು ಬಯಿದೂರ ಸೇನೇಶ್ವರದೇವರಿಗೆ ತೆಂಗಿನತೋಟ ಭೂಮಿಯನ್ನು ದಾನನೀಡಿದ ದಾಖಲೆಯಿದೆ. ಇದೇಕಾಲದ ಮಾಂಬಳ್ಳಿಶಾಸನದಲ್ಲಿ ಮಹಾಮಂಡಳೇಶ್ವರರ ಕುಮಾರ ಕಂಪಣವೊಡೆಯ ನಾಲ್ಕು ಬೇರೆ ಬೇರೆ ದಾನಗಳನ್ನು ನೀಡಿದ್ದನ್ನು ಇಲ್ಲಿ ತಿಳಿಸುತ್ತದೆ.

1) ವೈದ್ಯನಾಥದೇವರಿಗೆ ತೆಂಗಿನತೋಟ ಮತ್ತು 15 ಮನೆಗಳು ಅಪ್ಪನಾಯಕನಿಂದ
2) ಸಾಮಕದೇವಿಯ ಮುಂದೆ ತೆಂಗಿನತೋಟ ಮಾರಿಸೆಟ್ಟಿಯ ಮಗ ದೇವಣ್ಣಸೆಟ್ಟಿಯಿಂದ ಆಂಡರಸೆಟ್ಟಿಯಮಗ ಕಾಳಿಸೆಟ್ಟಿಯಿಂದ ಕೊಂಡು ದಾನನೀಡಿದ್ದು ದೀಪಾರಾಧನೆ, ಪೂಜೆಗೋಸ್ಕರ ತೀವಗನಾಯನಾರ್‌ದೇವರಿಗೆ.
3) ಸೆಟ್ಟಿಯಣ್ಣನಿಂದ ವೈಜನಾಥದೇವರಿಗೆ ತೆಂಗಿನತೋಟ ಮತ್ತು ಹಲಸಿನಹಣ್ಣಿನ ತೋಟಗಳು
4) ಅಂಡಾರುಸೆಟ್ಟಿ ಇದೇ ದೇವರಿಗೆ ದೇವದಾನವಾಗಿ ತೋಟವನ್ನು ದಾನನೀಡಿದ್ದಾರೆ.

ಕ್ರಿ.ಶ. 1360 ಪಡುವರಿ ಶಾಸನ ಸವೆದಿದೆ. ಮಹಾಪ್ರಧಾನ ಮಲೆಯದಂಣಾಯ್ಕರು ಬಾರಕೂರ ರಾಜ್ಯವಾಳುತ್ತಿರುವಾಗ ವಿರೂಪಾಕ್ಷಪುರದ ಅನೇಕ ಬ್ರಾಹ್ಮಣರಿಗೆ ಭೂಮಿ ದಾನನೀಡಿದ ದಾಖಲೆಯಿದೆ.

ಕ್ರಿ.ಶ. 1361 ಕಟ್ಲೆಟಲಿಶಾಸನ ಸವೆದಿದೆ. ಮಾದರ್ಸರು ಮಂಗಲೂರು ರಾಜ್ಯವನ್ನಾಳುತ್ತಿರುವಾಗ ನಾಯಿರಾಡಿನೊಳಗಣ ಕಟ್ಲೆವಾಡಿಯಮಠದ ದೇವರ ನಂದಾದೀವಿಗೆಗೋಸ್ಕರ ಭೂಮಿದಾನ ನೀಡಿದ ವಿವರವಿದೆ.

ಕ್ರಿ.ಶ. 1363ರ ಹರದನಹಳ್ಳಿ ಶಾಸನದಲ್ಲಿ ಮಹಾಪ್ರದಾನ ಬಸವೆಯ ದಂಣಾಯಕ ಎಣ್ಣೆನಾಡಿನ ಹರದನಹಳ್ಳಿ ಅನಿಲೇಶ್ವರದೇವರ ಪೂಜೆ, ದೀಪಾರಾಧನೆಗೋಸ್ಕರ ಮಣ್ಣೆಯ ಅಧಿಕಾರಿ ನಾಗರಸ 1500 ಕಂಭದ ಭೂಮಿಯನ್ನು ತೆರಿಗೆಯಿಂದ (ಕೂಡಗದೆಜೆ) ದಾನನೀಡಿದ ವಿವರವಿದೆ. ಕಚ್ಚೆರುಶಾಸನ ಒಡೆದಿದೆ. ಮಲೆಯದಂಣಾಯ್ಕ ಬಾರಕೂರ ರಾಜ್ಯವಾಳುತ್ತಿರುವಾಗ ಸೇನಭೂವನ ಮಗ ಗಣಪ (ಹೆಸರು ಸವೆದಿದೆ) ಮಾರ್ಕಂಡೇಶ್ವರ ದೇವರಿಗೆ ದಾನನೀಡಿದ ದಾಖಲೆಯಿದೆ. ಇದೇ ಊರಿನ 1363–64ರ ಶಾಸನ ಸವೆದಿದೆ ದಂಣಾಯ್ಕರು ರಾಜ್ಯವನಾಳುವ ಕಾಲದಲ್ಲಿ ಮಾರ್ಕ್ಕಂಡೇಶ್ವರದ ನೈವೇದ್ಯಕ್ಕೆ ಭೂಮಿಯನ್ನು ಸಾಳ ಮತ್ತು ಬೇರೆಯವರು ದಾನನೀಡಿದ ವಿವರವಿದೆ. ಕಣವೆ ಗ್ರಾಮದ ಶಾಸನ ರಾಜನಕುಮಾರ ವಿರುಪಂಣವೊಡೆಯರು ಮಲೆರಾಜ್ಯವನ್ನಾಳುವಲ್ಲಿ ಹೆದ್ದೂರನಾಡೊಳಗೆ ತಡತಾಳ ಪಾರ್ಶ್ವದೇವರ ದೇವಸ್ವದ ಸೀಮಾಸಂಬಂಧಕ್ಕೆ ಆ ಹೆದ್ದೂರನಾಡವರು

ಆ ಸ್ಥಾನದ ಆಚಾರಿಯರು ಸೂರಿಗಳ ಕೊಡೆಸಂವಾಜದ ಮಾಡಿದಡೆ ಮಹಾಪ್ರದಾನ ನಾಗಂಣಗಳೂ ಪ್ರಧಾನಿದೇವರಸರೂ ಆ ದಾಯದಾ ದೇವರಸರೂ ಮಡಿಮುಖ ಜೈನಮಲ್ಲಪ್ಪನೂ ಆರಗದ ಚಾವಡಿಯಲ್ಲಿ ಮೂಜುಪಟ್ಟಣದ ಹಲರನೂ ಹದಿನೆಂಟು ಕಂಪಣವನೂ ಕರೆಸಿ ವಿಚಾರಿಸಿ ಆ ನಾಡನೊಡಂಬಡಿಸಿ ಪಡಕೊಟ್ಟು ಪೂರ್ವಮರಿಯಾದೆಯಲಿ ಮೂಡಲು ಬೆಟ್ಟ ತೆಂಕಲೂಬೆಟ್ಟ ಪಡುವಲುಹಳ್ಳಿ ಬಡಗಲು ಹೊಳೆ ಸೀಮೆಯಾಗಿ ತಡತಾಳವೊತ್ತು ಮಂಣುವಂ ಧಾನಸಹಿತ ಸರ್ವ್ವಮಾನ್ಯವಾಗಿ ಪಾರ್ಶ್ವದೇವರಿಗೆ ಚರ್ತುಸೀಮೆಯನು ವಿವರಿಸಿ ಆ ಅರಸು ಪ್ರಧಾನರೂ ಆರಗದ ಪಟ್ಟಣಸ್ವಾಮಿ ಮಾದಿಸೆಟ್ಟಿ ಕದಳಿಯಪಟ್ಟಣದ ಛಲದಂಕನಾಗಿಸೆಟ್ಟಿಯ ಮಗ ಗುಂಮಸೆಟ್ಟಿ ಮುಡುಕುದಾನಿಯ ಪಟ್ಟಣಸವಮಿ ಮುಖ್ಯವಾದ ಮೂಜುಪಟ್ಟಣದ ಹಲರನೂ ದೇವಳಿಗೆಯ ಚಿಲುಗೆಡೆ ಪೂಡೂನಾಡ ಬಮ್ಮಣನಾಯ್ಕ ನಾಡ ಮುಂದಗಡೆ ಕುಂಕುಸೆನಾಡ ಹಲವರನ್ನು ಮುಂದಿಟ್ಟು ಸೂರಿಗಳು ಆ ಬೇರ್ರ್ಯಾರನ್ನು ದೇವಸ್ಥಾನ ಸಂವಾಜದ ಮಾಡಿದ ಬಗೆಹರಿಸಿದನ್ನು ತಿಳಿಸುತ್ತದೆ.

ಕ್ರಿ.ಶ. 1364ರ ಪರಸಲೆಗುಡ್ಡ ಶಾಸನದಲ್ಲಿ ಮಹಾಪ್ರಧಾನ ಮಲ್ಲೆಯದಂಡನಾಯಕ ಬಾರಕೂರ ರಾಜ್ಯವಾಳುತ್ತಿರುವಾಗ ಅವನ ಆಜ್ಞೆಗಳು ನಾಗಪ್ಪ–ವಡೆಯ ಕಾರ್ಕಳ ನಖರ ಮತ್ತು ನಾಡು ಮತ್ತು ಪದಕಳ–ಹೆಗ್ಗಡೆ ಮತ್ತು ಬೇರೆಯವರು ದಾನವಾಗಿ ಭೂಮಿಯನ್ನು ಕುಂಜಿಬೆಟ್ಟೆ ಲೆಂಕಣ್ಣನ ಮಗಳು ಮತ್ತು ರತ್ನತ್ರಯ ದೇವರಿಗೆ ಭೂಮಿಯನ್ನು ವಹಿಸಿದ ವಿವರವಿದೆ. ಬುಟಲಾಲಮಾಡ ಶಾಸನದಿಂದ ಮಂಗಲೂರ ಮಾದರ್ಸರು ರಾಜನ ಆಜ್ಞೆ ಮೇರೆಗೆ ಪುದುಗ್ರಾಮವನ್ನು ಮಂಜಿ–ನಾಥದೇವರಿಗೆ ದಾನನೀಡಿದೆ. ಕೊಟೇಶ್ವರ ಶಾಸನದಲ್ಲಿ ಮಹಾಪ್ರದಾನ ಮಲ್ಲಯ್ಯದಂಣಾಯಕ ಬಾರಕೂರ ರಾಜ್ಯವಾಳುತ್ತಿರುವಾಗ 30 ಕುಟುಂಬಗಳು ಮತ್ತು ಬೇರೆಯವರು 12 ಹೊನ್ನುಗಳು, ನಿವೇಶನಗಳು, ಖುಷ್ಕಿಭೂಮಿ, ಗದ್ದೆ ಭೂಮಿಗಳನ್ನು ಕೋಟೇಶ್ವರದೇವರಿಗೋಸ್ಕರ ದಾನನೀಡಿದೆ. ಇದೇಕಾಲದ ಬೈಂದೂರು ಶಾಸನ ಸವೆದಿದೆ. ಮಹಾಮಂಡಲೇಶ್ವರ ಮಲೆಯದಂಣಾಯ್ಕರು ಬಾರಕೂರ ರಾಜ್ಯವನ್ನಾಳುತ್ತಿರುವಾಗ ಅವರ ತಮ್ಮಂದಿರು ಚಿಕ್ಕಮಲೆಯದಂಣ್ಣಾಯರು ನರಸಿಂಹದೇವಸ್ಥಾನಕ್ಕೆ ಹೊಂದಿಕೊಂಡಿರುವ ಮಠದ ಬ್ರಾಹ್ಮಣರ ಆಹಾರದಾನಕ್ಕೆ ತೆಂಗಿನತೋಟ ಮತ್ತು ಭೂಮಿದಾನ ನೀಡಿ ಈ ದಾನವನ್ನು ಯಡೆತೊಜುಯ ನಡುಮನೆಯ ನಾರಣಹೆಬಾರುವನ ಮಕ್ಕಳು ವಿಠಲಹೆಬಾರುವನಿಗೆ ವಹಿಸಿದ ವಿವರವಿದೆ.

ಕ್ರಿ.ಶ. 1365ರ ಕೋಟೇಶ್ವರ ಶಾಸನದಲ್ಲಿ ಮಲ್ಲೆಯ–ದಂಣ್ಣಾಯಕ ಬಾರಕೂರ ರಾಜ್ಯವಾಳುತ್ತಿರುವಾಗ ರಾಜನ ಆಜ್ಞೆಯಿಂದ ನಿವೇಶನ ಮತ್ತು ಭೂಮಿಗಳಿಗೆ ತೆರಿಗೆ ವಿನಾಯಿತಿ ನೀಡಿದ ಶಾಸನವಿದು. ಇದೇಕಾಲದ ಹರದನಹಳ್ಳಿಶಾಸನದಲ್ಲಿ ಮಹಾಪ್ರಧಾನಬಸವೆಯದಂಣ್ಣಾಯಕರ ಮನೆಯ ಅಧಿಕಾರಿ ನಾಗರ್ಸರರು ಯಂಣ್ನೆನಾಡ ಹರದನಹಳ್ಳಿಯ ಅಣಿಲೇಶ್ವರ ದೇವರ ಅಮೃತಪಡಿ, ನಂದಾದೀವಿಗೆಗೆ ಬೆದ್ದಲು, ಕಂಭ–1500, ಗದ್ದೆಯನ್ನು ಕೂಡಗದೆಜೆಯನ್ನು ಮಹಾಪ್ರಧಾನ ಕೊಟ್ಟ ದಾಖಲೆಯಿದೆ. ಇದೇಕಾಲದ ಕೋಟೇಶ್ವರ ಶಾಸನದಿಂದ ಬೆನಕೆನಾಯಕನಮಗ ಬುಚೆಯನಾಯಕ ಶಿವರದಿಂದ ಆಳುತ್ತಿರುವಾಗ ನಿಡುಗಲ್ಲರಾಜ್ಯ ಮುಖ್ಯಪಟ್ಟಣ, ಒಂದು ಗ್ರಾಮವನ್ನೂ, ಗೋಪಸಮುದ್ರವನ್ನೂ, ಗೋಪಿನಾಥದೇವರಿಗೋಸ್ಕರ ದಾನನೀಡಿದ ವಿವರವಿದೆ. ಮೊಡಳ್ಳಿ ಶಾಸನದಲ್ಲಿ ವೀರಬುಕ್ಕಣಒಡೆಯ ಮಗ ಕಂಪಣ್ಣಒಡೆಯರ ಕಾಲದಲ್ಲಿ ಪೆರುಮಾಳ–ಭಟ್ಟ ಆಳುತ್ತಿರುವಾಗ ಒಬ್ಬ ನಾಯಕ ಭೂಮಿ ದಾನನೀಡಿ ಮತ್ತು ಒಂದು ಭಾಗದ ಆದಾಯವನ್ನು ಮೊಡೆಹಳ್ಳಿ ಮತ್ತು ಬಂಡೆಹಳ್ಳಿ ಗ್ರಾಮಗಳ ನಾಡು ನಗರಗಳು ಮತ್ತು ನಾನಾದೇಶಿಗಳನ್ನು ಭೇಟಿಮಾಡಿ ಮೊಡೆಹಳ್ಳಿ ಮಲ್ಲಿನಾಥದೇವರ ಸೇವೆಗೋಸ್ಕರ ದಾನನಿಡಿದ ವಿಷಯವಿದೆ.

ಕ್ರಿ.ಶ. 1366ರ ಹಂಪಿಶಾಸನ ತ್ರುಟಿತವಾಗಿದೆ. ವೀರಬುಕ್ಕಣ್ಣವೊಡೆಯನು ಹಸ್ತಿನಾವತಿ (ಆನೆಗೊಂದಿ)ಯಿಂದ ಆಳುತ್ತಿದ್ದಂತೆ ತಿಳಿಸುತ್ತದೆ. ಇವನ ಮಹಾಪ್ರಧಾನನಾದ ಬಸವೆದಣ್ಣಾಯಕನು ವಿರೂಪಾಕ್ಷದೇವರ ಸೇವೆಗಾಗಿ ರಾಮಾಪುರದ, ಕೆರೆಯಕೆಳಗೆ ಭೂದಾನ ಮಾಡಿದ್ದನ್ನು ತಿಳಿಸುತ್ತದೆ.

ಕ್ರಿ.ಶ. 1367ರ ಕೋಡುರುಶಾಸನದಲ್ಲಿ ಪ್ರಧಾನ(ಮಂತ್ರಿ) ತಳಕಾಡು ಮಾದರಸ ಆರಗದ ಹದಿನೆಂಟುಕಂಪಣ, ಗುತ್ತಿಯ ಹದಿನೆಂಟುಕಂಪಣ, ಇಡುಗುಂಡಿ ಕೊಂಕಣ ಹೊಯ್ಸಣ ಸರಹದ್ದು ರಾಜ್ಯವನ್ನು ಸುಖದಿಂದ ಆಳುತ್ತಿರುವಾಗ ಶಂಕರದೇವರ ಅಂಗಭೋಗ, ಅಮ್ರಿತಪಡಿಗೆ ಬಂದಿಗಣಲಿಯ ದೇವರಸೇವೆಗೆ ದಾನಕೊಟ್ಟ ವಿವರವಿದೆ. ಚಿಲುಮತ್ತೂರ (ಎ.ಪಿ.) ಶಾಸನದಲ್ಲಿ

ಮಹಾಪ್ರಧಾನ ಬಯಿಚೆಯದಂಣ್ಣಾಯಕರ ಕುಮಾರ– ಯಿರುಗಪ್ಪವೊಡೆಯರು ಚೆಲುಮುತೂರನು ಆಳುತ್ತಿದ್ದಾಗ ಕಲ್ಲುಮಂಚಿಗೆ ಕಟ್ಟಿಸಿದ ದಾಖಲೆಯಿದೆ. ಇದೇಕಾಲದ ಮೂಗೂರುಶಾಸನದಲ್ಲಿ ಮಹಾಪ್ರಧಾನ ಬಸವದಂಡನಾಯಕನ ಕೆಳಗೆ ಅಧಿಕಾರಿ ರಾಘವೇಂದ್ರ ಅರಸ ಇರುವುದನ್ನು ತಿಳಿಸುತ್ತದೆ.

ಕ್ರಿ.ಶ. 1368ರ ಬನವಾಸಿ ಶಾಸನದಲ್ಲಿ ಬುಕ್ಕರಾಯನ ಸಭಾಪತಿ ಮಾಧವಾಂಕನು ಬನವಾಸಿ–ಪಂನ್ನಿರ್ಛ್ಛಾಸಿರನಾಳುವ ಕಾಲದಲ್ಲಿ ಅವರ ಬಂಟ ನಂದಉರದ ಚಉಂಡರಸನ ಮಗ ಅಜು ಆಉಭನಾಥನು ತಂನ ಒಡೆಯ ಮಾಧವದಂಡನಾಥಂಗೆ ಮನೋರಥಸಿದ್ಧಿಯ ಹಂಥಾಗಿ ಗೋಪಿನಾಥದೇವರ ದೇವಾಲಯವನ್ನು ಜೀರ್ಣ್ಣೋದ್ಧಾರವನ್ನೂ ಮಾಡಿ ಆ ದೇವರ ಅಂಗರಂಗ ಭೋಗವಾಚಂದ್ರಾಸ್ಥಇಯಾಗಿ ನಡೆವಂತಾಗಿ ಗುತ್ತಿಯ ಹದಿನೆಂಟು ಕಂಪಣದ ಗಉಡುಪ್ರಜೆಗಳಿಗೆ ಹೇಳಿ ಬನವಾಸೆಯಲ್ಲಿ ದಾನಕೊಟ್ಟ ವಿವರ, ಈ ದಾನವನ್ನು ಲಾಕುಳೀಶ್ವರದೇವರ ಶಿಷ್ಯ ಬಿಕ್ಕಿದೇವರಿಗೆ ಭೂಮಿ ದಾನ ನೀಡಿ ಒಪ್ಪಿಸಿದ ವಿವರವಿದೆ. ಕ್ರಿ.ಶ. 1368ರ ಅರಸೀಕೆರೆ ಶಾಸನದಲ್ಲಿ ಮಹಾಪ್ರಧಾನ ಬಸವೆದಂಣಾಯ್ಕರ ಅನುಮತಿಯ ಮೇರೆಗೆ ಸಾಉಪಯವಿತಂಗಳಮಗ ನಾಯಕ ಆಚರ್ಸ್ರ ಅಧಿಕಾರದಲ್ಲಿ ಮಾಡಿದ ಸರ್ವನಮಸ್ಯದ ಪಿರಿಯಪಟ್ಟಣದ ಮಹಾಗ್ರಹಾರ ಉದುಭವ ಸರ್ವಜ್ಞವೀರವಿಜಯ ಬಲ್ಲಾಳಪುರದ ಅರಸೀಕೆಱೆಯ ಶ್ರೀಮದಸೀಷ ಮಹಾಜನಂಗಳು, ಸಾವಿರವೊಕ್ಕಲು, ಧರ್ಮವೊರಡಿಯ ಮಲ್ಲಿಕಾರ್ಜುನದೇವರಿಗೆ ಹೊಸದಾಗಿ ದೇವಾಲ್ಯ ಮಾಡಿದ ಸಂಮಥ ಆ ದೇವರ ಅಮೃತಪಡಿಗೆ ದಾನ ನೀಡಿದ್ದನ್ನು ತಿಳಿಸುತ್ತದೆ. ಇದೇಕಾಲದ ಹರದನಹಳ್ಳಿ ಶಾಸನದಲ್ಲಿ ರಾಜನಮಂತ್ರಿ ಬಸವಯ್ಯನಾಯಕನಿಂದ ಬ್ರಹ್ಮಕುಲದಿಪಕ ಎಂಬ ಹೊಗಳಿಯಿದೆ. ಮತ್ತು ಅವನ ಉಪಸಭಾಧಿಪತಿ ಗಣಪತಿ ಹೊಯ್ಸಳದೇಶವಾಳುತ್ತಿರುವಾಗ ದಕ್ಷಿಣದ ಕಾವೇರಿನದಿ ಹರದನಹಳ್ಳಿ ಅಣಿಲೇಶ್ವರದೇವರ ಪೂಜೆ, ನೈವೇದ್ಯಗೋಸ್ಕರ ತೋಟ ಕೆರೆ ಭೂಮಿಗಳನ್ನು ಎಣ್ಣೆನಾಡಿನ ಉಯಮಪಳ್ಳಿ ಗಾವುಂಡರುಗಳು ಮತ್ತು ಕೇಶವಪುರನಗರದ ಮಹಾಜನರು ಇತರರು ಈ ದಾನವನ್ನು ಸಭೆ ಮುಂದೆ ದಾನನೀಡಿದ ದಾಖಲೆಯಿದೆ.

ಕ್ರಿ.ಶ. 1369ರ ಕಲ್ಲಾಳು ಶಾಸನದಲ್ಲಿ ಮಾರಪ್ಪವೊಡೆಯರ ಕುಮಾರ ಮಹಾಮಂಡಳೇಶ್ವರ ಸೋವಂಣ್ಣವೊಡೆಯರ ಹಾರಿತಿಗೋತ್ರದನಾರಣ–ಭಟ್ಟರಮಗ ದೇವಂಣಭಟ್ಟನಿಗೆ, ಮುದುವಂಕನಾಡವಳಗಣ ಜಗಟೆಗಾರೆ ಗ್ರಾಮದಲ್ಲಿ ಭೂಮಿ ದಾನನೀಡಿದ ದಾಖಲೆಯಿದೆ. ಇದೇಕಾಲದ ಬಾಳೇಹಳ್ಳಿ ಶಾಸನದಲ್ಲಿ ಅರಗದ ರಾಜ್ಯವನ್ನಾಳುವ ಕುಮಾರ ವಿರುಪಂಣವೊಡೆಯರ ಮಹಪ್ರಧಾನಿ ಮಾದರಸಒಡೆಯರು ಸಾತಳಿಗೆನಾಡೊಳಗೆ ಬಾಳೆಹಳಿಯ ವೀರೇಶ್ವರದೇವರ ಅಮ್ರುತಪಡಿಗೆ ದಾನನೀಡಿದ ದಾಖಲೆಯಿದೆ. ಇದೇಕಾಲದ ಬನವಾಸಿ ಶಾಸನದಲ್ಲಿ ಮಹಾಪ್ರದಾನ ಮಾಧವಾಂಕನು ಬನವಸೆಯಪನ್ನಿಛ್ಛಾಸಿರಮನಾಳುವ ಕಾಲದಲ್ಲಿ ಆಟ್ಟಕಲ್ಲ ಪ್ರಭುಸಿವದೇವಂಗಳ ಮಗ ನಾಗಪ್ಪನು ಬನವಸೆಯ ಮಧುಕನಾಥದೇವರ ಸಮೀಪದಲ್ಲಿ ಶ್ರೀ ವೀರೇಸ್ವರದೇವರ ಪ್ರತಿಷ್ಟಾಪಿಸಿ ಒಂದು ಗ್ರಾಮ ಮತ್ತು ಹಣ ದಾನನೀಡಿದ್ದು, ಈ ದಾನವನ್ನು ಲಾಕುಳೇಶ್ವರದೇವ ಒಡೆಯರ ಕುಮಾರ ಬಕ್ಕಿದೇವರಕಯ್ಯಲು ಒಪ್ಪಿಸಿದ ದಾಖಲೆಯಿದೆ.

ಕ್ರಿ.ಶ. 1370ರ ಕಾಡೂರು (ಎಸ್.ಎ.ಟಿ.ಎನ್) ಶಾಸನದಲ್ಲಿ ಮಹಾಪ್ರಧಾನಗೋಪರವಡೆಯ ಬಾರಕೂರ ರಾಜ್ಯವನ್ನಾಳುವ ಕಾಲದಲ್ಲಿ ಹೂವಚಿಯಬಳಿಯ ದುಗುಬಿಂನಾಣಿತ್ತಿ, ತಂನಮಗ ನರಸಿಂಗ–ಬಿಂನಾಣಿ ಸ್ವರ್ಗಸ್ತನಾದಗ ಮಾಡಿದ 1–ಕಂಭ ಭೂಮಿಯನ್ನು ದುಗುಬಿಂನಾಣಿತ್ತಿಯಾ ಮೂರು ಕೇರಿಯ ಹಲವರು ಕೂಡಿ ಕೇಶವಮಂಡಚನ ಮಗ ಕೃಷ್ಣಮಂಡಚಂಗೆ ಮೂಲವಾಗಿ ಧಾರೆ ಎರೆದು ಕೊಟ್ಟ ದಾಖಲೆಯಿದೆ. ಅವರಸೆ ಶಾಸನ ಸವೆದಿದೆ. ಗೋಪರಸರು ಬಾರಕೂರ ರಾಜ್ಯವನ್ನಾಳುವಲ್ಲಿ ಕೋಟೆನಾಥದೇವರಿಗೆ ಹೂಮಾಲೆತೋಟ ಮತ್ತು ಬೇರೆ ಸೇವೆಗೋಸ್ಕರ ಹಣದ ಆದಾಯದಿಂದ ಭೂಮಿದಾನ ನೀಡಿದ ದಾಖಲೆಯಿದೆ. ಅಚಲಾಡಿ ಶಾಸನ ಸವೆದಿದೆ. ಇದೇ ಮಹಾಪ್ರಧಾನ ಅಚಲಾಡಿಯ ದೇವರಿಗೆ ಭೂಮಿದಾನ ನೀಡಿದ ದಾಖಲೆಯಿದೆ. ತಿರುವಾಡಿ (ಎಸ್.ಎ.ಟಿ.ಎನ್) ಶಾಸನದಲ್ಲಿ ಮಹಾಮಂಡಳೇಶ್ವರ ಬುಕ್ಕಣ್ಣವೊಡೆಯನ ಮಗ ಕಂಪಣ್ಣ–ವೊಡೆಯರ ಮನೆಯ ಪ್ರಧಾನ ದುಗಂಣದೇವನು ಕೀಳೆಆಣಿಂಜೆಗಾಡಿಪಟ್ಟಣದಲ್ಲಿರುವ ಸಾತಿಪಟು ಗ್ರಾಮವನ್ನು ತಿರುವಡಿಮೊದಲೀಶ್ವರ ಮೊಡೆಯನಾಯನಾರ್ ದೇವರಿಗೆ ನೀಡಿದ ವಿವರವಿದೆ.

ಕ್ರಿ.ಶ. 1372ರ ಬಸರಕೋಡು ಶಾಸನದಲ್ಲಿ ಪ್ರದಾನಿ ಕೇಚರಿದೇವನು ನಡೆಸಿದ ಕಾಳಗದಲ್ಲಿ ಚಂದಪ್ಪನು ಮರಣ ಹೊಂದಿದ ವಿಷಯವನ್ನು ತಿಳಿಸುತ್ತದೆ.

ಕ್ರಿ.ಶ. 1373ರ ಕೋಟೇಶ್ವರ ಶಾಸನದಲ್ಲಿ ಮಹಾಪ್ರಧಾನ ಗೋಪರಸವೊಡೆಯ ಬಾರಕೂರರಾಜ್ಯವನ್ನಾಳುತ್ತಿರುವಾಗ ನಂದಿನಾಥ, ಭುಂಗಿನಾಥ, ವೀರಭದ್ರದೇವ ಮತ್ತು ಗಣಕುಮಾರ (ಹೆಗಡೆ) ಅಂತು ಯಿವರುಗಳು ಸಂನಿಧಿಯಲ್ಲಿ ಕೆಲವು ಭೂಮಿಯನ್ನು ಕೊಂಡು ನಿಗದಿಪಡಿಸಿದ ವಲಯವನ್ನು ಕೋಟೇಶ್ವರದೇವರ ಉಭಯಜಂಗಮರಿಗೆ ಆರೋಗಣಿಯ ಧರ್ಮಕ್ಕೆ ದಾನನೀಡಿದ ದಾಖಲೆಯಿದೆ.

ಕ್ರಿ.ಶ. 1375ರ ಉಳಾಯಬೆಟ್ಟಿ ಪಂಡರಿದೇವಒಡೆಯರು ಮಂಗಲೂರ ರಾಜ್ಯವನ್ನಾಳುತ್ತಿರುವಾಗ ಒಮಂಜೂರ ಸಾಲೆದೇವಾಲ್ಯವನು ಪೂಜೆ, ನೈವೇದ್ಯಗೋಸ್ಕರ ವಿದ್ಯಾಗಿರಿತೀರ್ಥಶ್ರೀಪಾದಂಗಳಿಗೆ ಧಾರೆಯನೆಱೆದು ದೇವಸ್ವವಾಗಿ ಭೂಮಿದಾನ ನೀಡಿದ ದಾಖಲೆಯಿದೆ. ಕುಡುಪು ಶಾಸನದಲ್ಲಿ ಪಂಡರಿದೇವಂಗಳು ಮಂಗಲೂರ ರಾಜ್ಯವನ್ನಾಳುವ ಕಾಲದಲ್ಲಿ ರಾಜನು ಮಾಲೂರು ಮತ್ತು ಕುಡುಪ ಗ್ರಾಮಗಳನ್ನೂ ಸಿಂಗೇರಿಯ ವಿದ್ಯಾರಣ್ಯ ಶ್ರೀಪಾದಂಗಳಿಗೆ ಸಮರ್ಪಿಸಿದ್ದು, ಅಲ್ಲಿಂದ ಬಂದ ಆದಾಯದ ಹಣದಿಂದ ಶಂಕರ ಮತ್ತು ರಾಮನಾಥದೇವರ ಪೂಜೆ ಮತ್ತು ಬ್ರಾಹ್ಮಣರ ಊಟಕ್ಕೋಸ್ಕರ ಕುಡುಪುದೇವಾಲಯಕ್ಕೆ ದತ್ತಿಯಾಗಿ ಕೊಟ್ಟು ದಾನನೀಡಿದ ವಿವರವಿದೆ.

ಕ್ರಿ.ಶ. 1377ರ ಅತ್ತಿಗಾರ ಶಾಸನದಲ್ಲಿ, ಬುಕ್ಕರಾಯನಮಗ ವೀರುಪಂಣೊಡೆಯರು ಆರಗದ ರಾಜ್ಯವನ್ನಾಳುವಲ್ಲಿ ಮುದುವಂಕನಾಡನಾಸವೊಂದುನಾಡು ಸೀಮೆವೊಳಗಾದ ಸಮಸ್ತನಾಡುಪ್ರಭುಗಳು ಕವಶಿಕಗೋತ್ರದ ಬೇಚರ್ಸರ ಮಕ್ಕಳು ಗೋಯಿಂದದೇವಗಳಿಗೆ ಭೂಮಿ ದಾನಕೊಟ್ಟ ವಿವರವಿದೆ. ಇದೇಕಾಲದ ಮಾಡನಕುಪ್ಪ ಶಾಸನದಲ್ಲಿ ಹರಿಯಪ್ಪ ಒಡೆಯ ಸ್ತಿರ ರಾಜ್ಯಗೆಯುತ್ತಿರುವಾಗ ಪಂಡರಿದೇವಂಗಳು ಮಂಗಲೂರು ಆಳುತ್ತಿರುವಾಗ ತಿಮಿರೇಸ್ವರದೇವರಿಗೆ ಕೆಲವು ಸೆಟ್ಟಿಗಳು ಧಾರಾಪೂರ್ವಕವಾಗಿ ದಾನನೀಡಿದೆ. ಇದೇ ಕಾಲದ ಕೋಟೇಶ್ವರ ಶಾಸನದಲ್ಲಿ ರಾಜನ ಮಗ ಹರಿಯಪ್ಪನ ಕಾಲದಲ್ಲಿ ಬೊಂಮರಸನು ಬಾರಕೂರ ರಾಜ್ಯವನ್ನಾಳುತ್ತಿರುವಾಗ ಮಹಾಪ್ರಧಾನ ಮುದ್ದೆದಂಣಾಯಕ ಭೂಮಿಯನ್ನು ಕೊಂಡು ಕೋಟೇಶ್ವರದೇವರ ನೈವೇದ್ಯ, ಪೂಜೆಗೋಸ್ಕರ ನಿವೇಶನಗಳನ್ನು ಭೂಮಿ ದಾನನೀಡಿದ ದಾಖಲೆಯಿದೆ.

ತೇದಿಯಿಲ್ಲದ ಉಪ್ಪುರುಶಾಸನದಲ್ಲಿ ಮಹಾಪ್ರಧಾನ ಮಲೆಯದಣ್ಣಾಯಕ ಬಾರಕೂರ ರಾಜ್ಯವನ್ನಾಳುವ ಕಾಲದಲ್ಲಿ ಭೂಮಿಯನ್ನು ಕೊಂಡು ನರಸಿಂಹದೇವ ಅಯ್ಯನವರಿಗೆ ಸೂರಿಯಗ್ರಹಣದ ಪುಂಣ್ಯಕಾಲದಲ್ಲಿ ದಾನವಾಗಿ ಭೂಮಿ ಕೊಟ್ಟ ಬಗ್ಗೆ ವಿವರವಿದೆ. ಚಾಮರಾಜನಗರಶಾಸನದಲ್ಲಿ ಬಸವಯ್ಯ ದಣ್ಣಾಯಕನು, ಬುಕ್ಕರಸನ ಮಂತ್ರಿಯಾಗಿದ್ದನೆಂದೂ ಅವನು ಬಲದಕಯ್ಯ ಭಂಡಾರ ಗಣಪತಿಮ ಎಂಬಾತನು ಕಾವೇರಿಗೆ ದಕ್ಷಿಣದಲ್ಲಿ ಹೊಯ್ಸಳದೇಶವನ್ನು ಆಳುತ್ತಿದ್ದನೆಂದೂ ತಿಳಿಸಲಾಗಿದೆ. ಚನ್ನರಾಯಪಟ್ಟಣದ ಶಾಸನದಲ್ಲಿ ಭವ್ಯಪಟ್ಟಣವಾದ ವಿಜಯನಗರವನ್ನು ಬುಕ್ಕನು ಕಟ್ಟಿಸಿದನೆಂದೂ ಅವನು ರಾಜ್ಯಭಾರದ ಹೊಣೆಯನ್ನೂ ತನ್ನ ಮಂತ್ರಿಯಾದ ಮುದಪ್ಪನಿಗೆ ವಹಿಸಿ ತಾನು ವಾಸುದೇವನ ಹಾಗೆ ನೆಮ್ಮದಿಯಿಂದ ಇದ್ದನೆಂದೂ ತಿಳಿಸುತ್ತದೆ.

ಕೊನೆಯದಾಗಿ ಮತಾಂಧತೆಗೆ ಹೆಸರಾಗಿದ್ದ ಆಗಿನ ಕಾಲದಲ್ಲಿ ಬುಕ್ಕನು ಧರ್ಮಸಹಿಷ್ಣುತೆಯುಳ್ಳವನಾಗಿದ್ದನು. ಇಪ್ಪತ್ತು ವರ್ಷಗಳ ಕಾಲ ರಾಜ್ಯಭಾರ ಮಾಡಿದ ಒಂದನೆಯಬುಕ್ಕನು ಸಂಗಮವಂಶದಲ್ಲಿ ಪ್ರಖ್ಯಾತನು. ಅರಸನಾದೊಡನೆ ರಾಜ್ಯದ ಐಕ್ಯತೆಗೂ ತನ್ನ ಸ್ಥಾನದ ಭದ್ರತೆಗೂ ಸೂಕ್ತ ಕ್ರಮಗಳನ್ನು ಕೈಗೊಂಡನು.

ಆಧಾರ ಸೂಚಿ

1. ಎ.ಆರ್.ಐ.ಇ. – 1920–30, 1976–77, 1984–85
2. ಎಸ್.ಎಸ್.ಐ – ಸಂಖ್ಯೆ 9, ಭಾಗ 2, 20, 27
3. ಎ.ಕ. ಸಂಖ್ಯೆ – 4, 5, 10, 12, 13, 15

18. ಪಾಂಗಳ ಜಂಗಮಮಠದ ತಾಮ್ರಶಾಸನ

– ಪ್ರೊ. ಟಿ. ಮುರುಗೇಶಿ

ಶಾಸನ ಶೋಧ: 11.10.2015. ಪಾಂಗಳ, ಉಡುಪಿ ತಾಲೂಕು, ಉಡುಪಿ ಜಿಲ್ಲೆ.

ತಾಮ್ರಪಟದ ಉದ್ದ 27.5 ಸೆ.ಮೀ. ಅಗಲ 16 ಸೆ.ಮೀ. ದಪ್ಪ 0.3 ಸೆ.ಮೀ.

ಶಾಸನದ ಕಾಲ: 1641

ರಾಜಮನೆತನ: ಕೆಳದಿ/ವಿಜಯನಗರ

ಲಿಪಿ ಮತ್ತು ಭಾಷೆ: ಕನ್ನಡ. ಮುಮ್ಮುಖದಲ್ಲಿ 21 ಸಾಲುಗಳಿವೆ, ಹಿಮ್ಮುಖದಲ್ಲಿ 17 ಸಾಲುಗಳಿವೆ. ಒಟ್ಟು 38 ಸಾಲುಗಳ ಬರಹವಿದೆ.

ಶಾಸನದ ಪಾಠ

ಶಾಸನದ ಮುಂಭಾಗ :

1. ನಮಸ್ತುಂಗ ಶಿರಶ್ಚುಂಬಿ ಚಂದ್ರ ಚಾಮರ
2. ಚಾರವೆ ತ್ರೈಲೋಕ್ಯ ನಗರಾರಂಭ ಮೂಲಸ್ಥಂ
3. ಭಾಯ ಶಂಭವೆ ಸ್ವಸ್ತಿಶ್ರಿ ಜಯಾಭ್ಯುದಯ
4. ಶಾಲಿವಾಹನ ಶಕ ವರುಷ 1563ನೆಯ ವಿಕ್ರಮ
5. ಸಂವತ್ಸರದ ಫಾಲ್ಗುಣ ಶು 5ಲು ಶ್ರೀಮತು ಜನ
6. ಶುದ ಶಿವಾಚಾರ ಸಂಪಂನ ದ್ಯಾವಾಪ್ರುಥಿ ಮ
7. ಹಾ ಮಹತ್ತಿನೊಳಗಾದ ಬಟ್ಟಿಕಳದ ಮಠದ ಮೊ
8. ಸರೂರ ಶಾಂತ್ತ ದೇವರ ಶಿಶ್ಯರು ಮಹತ್ತು ದೇವರಿ
9. ಗೆ ಯೆಡವ ಮುರಾರಿ ಕೋಟೆಕೋಳಾಹಳ ವಿಶು
10. ದ ವಯದಿಕಾದ್ವಯತ ಸಿದಾಂತ್ತ ಪ್ರತಿಷ್ಠಾಪಕ
11. ಶಿವಗುರು ಭಕ್ತಿ ಪರಾಯಣರಾದ ಕೆಳದಿ
12. ವೆಂಕಟಪ್ಪ ನಾಯಕರ ಪಉತ್ರರಾದ ಭದ್ರಪ್ಪ
13. ನಾಯಕರ ಪುತ್ರರು ವೀರಭದ್ರ ನಾಯಕರೂ ಶಿ
14. ವಾರ್ಪಿತವಾಗಿ ಬಿಟ ಧರ್ಮ ತಾಂಬ್ರ ಶಾಸನದ

15. ಕ್ರಮವೆಂತೆಂದರೆ ಶಿರಾಲಿ ಹೊಬಳಿ ಕೊಪ್ಪದ ಸಿ
16. ಮೆ ವಳಗಣ ಕಣನಿಲಹಳಿ ಗ್ರಾಮದಲ್ಲಿ ಕಾಮೆ
17. ಶ್ವರ ದೆವರು ಬಸ್ತಿ ಧರ್ಮದ ಸ್ವಾಸ್ತೆ ಸಹಾ ಹೊ
18. ರ್ರತಾಗಿ ಸ್ವಾಸ್ತೆ ಯೆಲಪ್ಪ ನಾಯಕನ ಲಿ
19. ಂಗಂಣನ ಗೇಣಿ ಹೂವಿನ ಹಿತ್ತಿಲು ಸಹಾ ಅ
20. ಕಿ ಮು 19 ಕಣನಿಲಹಳಿ ಸಂಣವನ ಗೇಣಿ
21. ಮು 41 ಉಭಯಂ ಗೇಣಿ ಅಕಿ ಮು 60ಕೆ

ಶಾಸನದ ಹಿಂಭಾಗ :

22. ಮು 1ಕೆ ವ 4ಲು ಗ 24 ಯಿಪತ ನಾಲ್ಕು ವರಹ
23. ಭೂಮಿಯನು ಹೂವಿನ ಹಿತಿಲ ಗದೆಗೆ ಸಲು
24. ವ ಮೆಣಸಿನ ಆರಮೆ ಸಹಾ ಶಿವಾರ್ಪಿತವಾಗಿ
25. ಬಿಟೆವಾಗಿ ಆ ಭೂಮಿಗೆ ಸಲುವ ಯೆ ನುಂ
26. ಟಾದ ಸರ್ವ್ವ ಸ್ವಾಂಮ್ಯವನೂ ಪೂರ್ದ ಮರಿಯಾ
27. ದೆಯಲಿ ಆಗು ಮಾಡಿಕೊಂಡು ನಿಂಮ ಶಿಶ್ಯ
28. ಪರಂಪರೆಯಾಗಿ ಅನುಭವಿಸಿ ಮಟ ಧರ್ಮ
29. ವನೂ ನಡೆಸಿಕೊಂಡು ಶಡುದರುಶನಕೂ ನಿ
30. ಡಿ ಮಾಡಿಕೊಂಡು ಬಾಹದು ಯೆಂದು ಕೊ
31. ಟ ಧರ್ಮ ತಾಂಬ್ರ ಶಾಸನ ಯಿದಕೆ ದೇವ ಸಾಕ್ಷಿ
32. ಗಳು ಆದಿತ್ಯ ಚಂದ್ರಾವನಿಲೋ ನಲಶ್ಚದ್ಯ
33. ಉರ್ಭೂಮಿ ರಾಹೋಹುದಯಂ ಯಮ
34. ಶ್ಚ ಅಹಶ್ಚ ರಾತ್ರಿಶ್ಚ ಉಭೇಚ ಸಂಧ್ಯೇ ಧರ್ಮ
35. ಸ್ಯ ಜಾನಾತಿ ನರಸ್ಯ ಉ್ರತಂ ದಾನಪಾಲನಯೋ
36. ರ್ಮದ್ಯೆ ದಾನಾತ್ರೆಯೋನು ಪಾಲನಂ ದಾನಾ
37. ಸ್ವರ್ಗ ಮವಾಪ್ನೋತಿ ಪಾಲನಾದಚ್ಯುತಂ ಪ
38. ದಂ ಶ್ರೀ ವೆಂಕಟಾದ್ರಿ

ಮೇಲಿನ ಶಾಸನವನ್ನು ದಿನಾಂಕ 11.05.2015 ರ ಭಾನುವಾರದಂದು ನಾನು ಪಾಂಗಳ ಜಂಗಮ ಮಠಕ್ಕೆ ಭೇಟಿ ನೀಡಿ, ಶಾಸನಾಧ್ಯಯನವನ್ನು ಮಾಡಿದೆ. ಪಾಂಗಳ, ಉಡುಪಿ ತಾಲೂಕು, ಉಡುಪಿ ಜಿಲ್ಲೆಯಲ್ಲಿರುವ ಒಂದು ಗ್ರಾಮ. ಉಡುಪಿಯಿಂದ ಮಂಗಳೂರಿಗೆ ಹೋಗುವ ರಾಷ್ಟ್ರೀಯ ಹೆದ್ದಾರಿಯಲ್ಲಿ ಎಡಭಾಗಕ್ಕೆ ಪಾಂಗಳ ಜಂಗಮ ಮಠವಿದೆ. ಉಡುಪಿಯಿಂದ ಸುಮಾರು 16 ಕಿ.ಮೀ ದೂರದಲ್ಲಿದೆ.

ಶಾಸನೋಕ್ತ ವಿಷಯಗಳು :

ಶೈವ ಸ್ತುತಿಯೊಂದಿಗೆ ಶಾಸನ ಆರಂಭವಾಗಿದೆ. ಶಾಸನದಲ್ಲಿ ಶಕವರುಷ 1563ನೇ ವಿಕ್ರಮ ಸಂವತ್ಸರ ಫಾಲ್ಗುಣ ಶು 5ಲು ಎಂದು ಕಾಲವನ್ನು ಉಲ್ಲೇಖಿಸಲಾಗಿದೆ. ಭಟ್ಕಳ ಮಠದ ಮೊಸರೂರ ಶಾಂತದೇವರ ಶಿಷ್ಯ ಮಹಂತದೇವ

ಎಂಬುವವರಿಗೆ ಕೆಳದಿ ವೆಂಕಟಪ್ಪ ನಾಯಕರ ಮೊಮ್ಮಗ ಭದ್ರಪ್ಪ ನಾಯಕ, ಅವರ ಮಗ ವೀರಭದ್ರ ನಾಯಕರು ನೀಡಿದ ದಾನವನ್ನು ಶಾಸನದಲ್ಲಿ ದಾಖಲಿಸಲಾಗಿದೆ. ಕೆಳದಿಯ ನಾಯಕರನ್ನು ಈ ಶಾಸನದಲ್ಲಿ ವೈದಿಕಾದ್ವೈತ ಸಿದ್ಧಾಂತ ಪ್ರತಿಷ್ಠಾಪಕರು ಮತ್ತು ಶಿವಗುರು ಭಕ್ತಿ ಪರಾಯಣರೆಂದು ಕೊಂಡಾಡಲಾಗಿದೆ. ಶಾಂತದೇವರ ಶಿಷ್ಯ ಮಹಂತದೇವರಿಗೆ ನೀಡಿದ ಶಾಸನೋಕ್ತ ದಾನದ ಭೂಮಿ ಈಗಿನ ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ತಾಲೂಕಿನ ಶಿರಾಲಿ ಹೋಬಳಿಯ ಕಣನಿಲಹಳ್ಳಿಯಲ್ಲಿ ಕಂಡು ಬರುತ್ತದೆ. ಶಾಸನೋಕ್ತ ಕಣನಿಲಹಳ್ಳಿಯಲ್ಲಿ ಕಾಮೇಶ್ವರ ದೇವರ ಬಸ್ತಿಧರ್ಮದ ಸ್ವಾಸ್ಥೆ ಎಂಬ ಉಲ್ಲೇಖ ಕಂಡುಬರುತ್ತದೆ. ಇದರಿಂದ ಕಣನಿಲಹಳ್ಳಿ ಒಂದು ಜೈನ ಕೇಂದ್ರವಾಗಿತ್ತೆಂದು ತಿಳಿದು ಬರುತ್ತದೆ. ಆ ಬಸ್ತಿಧರ್ಮದ ಸ್ವಾಸ್ಥೆಯನ್ನು ಹೊರತುಪಡಿಸಿ ದಾನವನ್ನು ನೀಡಲಾಗಿದೆ. 24 ವರಹ ಮೌಲ್ಯದ ಭೂಮಿಯನ್ನು ಹಾಗೂ ಹೂವಿನ ಹಿತ್ತಿಲು ಗದ್ದೆಯ ಮೆಣಸಿನ ಆರಮೆಯನ್ನು ಶಿವಾರ್ಪಿತವಾಗಿ ನೀಡಲಾಯಿತೆಂದು, ಈ ಸ್ವಾಂಮ್ಯವನೂ ಪೂರ್ವ ಮರ್ಯಾದೆಯಲಿ, ಶಿಷ್ಯ ಪರಂಪರೆಯಾಗಿ ಅನುಭವಿಸಿ ಮಟ–ಧರ್ಮವನು ನಡೆಸಿಕೊಂಡು ಷಡ್ದರ್ಶನಕೂ ನಿಡಿ ಮಾಡಿಕೊಂಡು ಬರಬೇಕೆಂದು ಕೊಟ್ಟ ಧರ್ಮ ತಾಮ್ರ ಶಾಸನ ಇದಕ್ಕೆ ದೇವ ಸಾಕ್ಷಿಗಳು. ನಂತರ ಸಂಸ್ಕೃತದ ಶಾಪಾಶಯವಿದೆ. ಕೊನೆಯಲ್ಲಿ ಶ್ರೀ ವೆಂಕಟಾದ್ರಿ ಎಂಬ ಅಂಕಿತವಿದೆ.

ಶಾಸನದ ಚಾರಿತ್ರಿಕ ಮಹತ್ವ :

ಕೆಳದಿ ಕಾಲದ ಈ ಕನ್ನಡ ಶಾಸನ ಅನೇಕ ಐತಿಹಾಸಿಕ ಮಹತ್ವದ ವಿಷಯಗಳನ್ನು ಒಳಗೊಂಡಿದೆ.


ಈ ಶಾಸನದ ಪ್ರಕಾರ ಕೆಳದಿಯ ನಾಯಕರು ವೈದಿಕಾದ್ವೈತ ಸಿದ್ದಾಂತ ಪ್ರತಿಷ್ಠಾಪಕರು, ವೈದಿಕಾದ್ವೈತ ಸಿದ್ಧಾಂತವೆಂದರೆ, ಶ್ರೀ ಶಂಕರಾಚಾರ್ಯರು ಪ್ರತಿಪಾದಿಸಿದ ಅದ್ವೈತ ಸಿದ್ಧಾಂತ. ಅಂದರೆ, ವೀರಶೈವ ಮಠಗಳು, ಪಂಚಾಚಾರ್ಯ ಮಠಗಳು, ಬಸವಧರ್ಮಕ್ಕೆ ವಿರುದ್ಧವಾದ, ವೈದಿಕ ಧರ್ಮ ಪ್ರತಿಪಾದನೆಯ ಪೀಠಗಳು ಎಂದು ಈ ಶಾಸನಾಧ್ಯಯನದಿಂದ ವಿದಿತವಾಗುತ್ತದೆ.

ಶಾಸನೋಕ್ತ, ವೀರಭದ್ರ ನಾಯಕ ಕ್ರಿ.ಶ. 1639 ರಿಂದ 1645 ರವರೆಗೆ ಆಳ್ವಿಕೆ ನಡೆಸಿದ. ಈತನ ಆಳ್ವಿಕೆಯ ಕಾಲ ಕೆಳದಿಯ ರಾಜಕೀಯ ಅಸ್ಥಿರತೆಯ ಕಾಲ ಎಂದು ಇತಿಹಾಸಕಾರರು ಅಭಿಪ್ರಾಯ ಪಟ್ಟಿದ್ದಾರೆ. ಈತನ ಪತ್ನಿ ವೀರಮ್ಮಾಜಿಯು ಕಾಲವಾದ ನಂತರ, ವೀರಭದ್ರ ನಾಯಕ ತನ್ನ ಆಳ್ವಿಕೆಯ ಕೊನೆಯ ಕಾಲದಲ್ಲಿ ತನ್ನ ಕನಿಷ್ಠ ಪತ್ನಿ ಕೊಲ್ಲೂರಮ್ಮಾಜಿಯ ಜೊತೆ ಕಂಡಲೂರಿನ ಕೋಟೆಯಲ್ಲಿ ಕಾಲಕಳೆದನೆಂದು ಕೆಳದಿ ನೃಪ ವಿಜಯದಲ್ಲಿ ವಿವರಿಸಲಾಗಿದೆ.

ಆಧಾರಸೂಚಿ

ಗುರುರಾಜ ಭಟ್ಟ, ಪಾದೂರು: 2014, ಸ್ಟಡೀಸ್ ಇನ್ ತುಳುವ ಹಿಸ್ಟರಿ ಆ್ಯಂಡ್ ಕಲ್ಚರ್, ಡಾ. ಪಾದೂರು ಗುರುರಾಜ್ ಭಟ್ ಮೆಮೋರಿಯಲ್ ಟ್ರಸ್ಟ್, ಉಡುಪಿ, ಪು. 52.

ಲಿಂಗಣ್ಣ ಕವಿ, ಕೆಳದಿ : 1999, ಕೆಳದಿ ನೃಪ ವಿಜಯ, ಕನ್ನಡ ಗದ್ಯಾನುವಾದ ಕೆಳದಿ ಗುಂಡಾಜೋಯಿಸ್, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು–18, ಪು. 125–126.





19. ವಿಜಯನಗರಕ್ಕೆ ಸಂಬಂಧಿಸಿದ ಜನಪದ ಸಾಹಿತ್ಯ

– ಡಾ. ಅಮರೇಶ ಯತಗಲ್

ಇತ್ತೀಚಿಗೆ ಕೆಲವು ಅರಸು ಮನೆತನಗಳ ಕುರಿತು ಹಾಗೂ ಐತಿಹಾಸಿಕ ಪುರುಷರ ಕುರಿತು ಜನಪದ ಸಾಹಿತ್ಯ ಏನು ಹೇಳುತ್ತದೆಂಬ ಕುತೂಹಲ ಹುಟ್ಟಿದೆ. ಕಾರಣ ಜನಪದ ಸಾಹಿತ್ಯವನ್ನು ಇತಿಹಾಸಕ್ಕೆ ಆಕರವಾಗಿ ಬಳಸಿಕೊಳ್ಳುತ್ತಿರುವುದು. ಇಂದು ಇದರಲ್ಲೂ ಕೆಲವು ವಸ್ತುನಿಷ್ಠವಾದ ಚಾರಿತ್ರಿಕ ವಿಷಯಗಳಿರುವುದನ್ನು ಹುಡುಕಲು ಸಾಧ್ಯವಿದೆ. ಇದಕ್ಕೆ ಸಂಬಂಧಿಸಿದಂತೆ ವಿಜಯನಗರವೂ ಒಂದು. ವಿಜಯನಗರದ ಕುರಿತು ಈಗಾಗಲೇ ಅಧ್ಯಯನ ಮತ್ತು ಸಂಶೋಧನೆಗಳು ವಿವಿಧ ಆಯಾಮಗಳಲ್ಲಿ ನಡೆಯುತ್ತಿವೆ. ಇದರಲ್ಲಿ ಬಹಳಷ್ಟು ಸಂಶೋಧನೆಗಳು ಈಗಾಗಲೇ ಲಭ್ಯವಿರುವ ದಾಖಲೆಗಳನ್ನೇ ಆಧರಿಸಿ ನಡೆದಿವೆ. ಇನ್ನೂ ಕೆಲವುಸಲ ಸ್ಮಾರಕಗಳನ್ನು ವೀಕ್ಷಿಸಿ ಅಧ್ಯಯನಕ್ಕೊಳಪಡಿಸಲಾಗಿದೆ. ಆದರೆ ಇಂತಹ ಮನೆತನಗಳ ಕುರಿತು ಮೌಖಿಕ ಇತಿಹಾಸ (Oral History) ವನ್ನು ಸಂಗ್ರಹಿಸುವ ಕಾರ್ಯವು ಇಲ್ಲಿಯವರೆಗೆ ವ್ಯವಸ್ಥಿತವಾಗಿ ನಡೆದಿರುವುದಿಲ್ಲ.

ಅದರಲ್ಲೂ ವಿಜಯನಗರದ ಕುರಿತು ಜನಪದ ಸಾಹಿತ್ಯವನ್ನಾಧರಿಸಿ ಅಲ್ಲಲ್ಲಿ ಒಂದಿಷ್ಟು ಸಂಶೋಧನೆಗಳಾಗಿವೆ. ಇಲ್ಲಿ ಅವೆಲ್ಲವುಗಳನ್ನು ಗಮನಿಸುತ್ತಾ, ಬೇರೆ ಬೇರೆ ಸ್ಥಳಗಳಿಗೆ ಕ್ಷೇತ್ರಕಾರ್ಯವನ್ನು ಕೈಗೊಂಡು, ಅಲ್ಲಿ ದೊರೆತ ಜನಪದ ಸಾಹಿತ್ಯವನ್ನು ಸಂಗ್ರಹಿಸಿ ವಿಶ್ಲೇಷಣೆಗೊಳಪಡಿಸಲಾಗಿದೆ.

ಡಾ. ಚೆಲುವರಾಜು ಅವರ, 'ಹಂಪಿಯ ಸ್ಮಾರಕಗಳಲ್ಲಿ ಜಾನಪದೀಯ ಅಂಶಗಳು'(2000) ಕೃತಿಯು ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿಯಿಂದ ಪ್ರಕಟಗೊಂಡಿದೆ. ಈ ಕೃತಿಯನ್ನು ಹಂಪಿಯ ಸ್ಮಾರಕಗಳಲ್ಲಿ ಚಿತ್ರಿಸಲ್ಪಟ್ಟ ಜನಪದ ವೃತ್ತಿಗಳು, ಜನಪದ ಯುದ್ಧ ಕಲೆಗಳು, ಪ್ರದರ್ಶನಾತ್ಮಕ ಕಲೆಗಳು, ವಾದ್ಯಗಳು, ಉಡುಗೆ–ತೊಡುಗೆಗಳು, ದಿನಬಳಕೆಯ ವಸ್ತುಗಳು, ಆಟಗಳು ಮತ್ತು ಮಿಥುನ ಶಿಲ್ಪಗಳು ಮುಂತಾದವುಗಳ ವಿವರಣೆಗಳನ್ನೊಳಗೊಂಡಿದೆ. ಇದೊಂದು ಕ್ಷೇತ್ರಕಾರ್ಯಾಧಾರಿತವಾದ ಅತ್ಯುತ್ತಮ ಸಂಶೋಧನಾ ಕೃತಿಯಾಗಿದೆ. ಇದು ಇತರ ಮನೆತನಗಳ ಅಧ್ಯಯನಕ್ಕೂ ಮಾದರಿಯಾಗಿದೆ.

ಡಾ. ಪುರುಷೋತ್ತಮ ಬಿಳಿಮಲೆ ಹಾಗೂ ಚೆಲುವರಾಜು ಅವರ, 'ಹಂಪಿ ಜಾನಪದ' (1996) ಕೃತಿಯು ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿಯಿಂದ ಪ್ರಕಟಗೊಂಡಿದೆ. ಈ ಕೃತಿಯಲ್ಲಿ ಹಂಪಿಯ ಚಾರಿತ್ರಿಕ ಹಿನ್ನೆಲೆಯನ್ನು ವಿವರಿಸುತ್ತಾ, ಅದಕ್ಕೆ ಸಂಬಂಧಿಸಿದ ಮೌಖಿಕ ಸಾಹಿತ್ಯದಲ್ಲಿ ಐತಿಹ್ಯಗಳು, ಭೌತಿಕ ಜಾನಪದ, ಸಾಮಾಜಿಕ–ಧಾರ್ಮಿಕ ಆಚರಣೆಗಳು ಮತ್ತು ಕಲೆಗಳು ಮುಂತಾದವುಗಳನ್ನು ಕ್ಷೇತ್ರಕಾರ್ಯದಲ್ಲಿ ಸಂಗ್ರಹಿಸುವುದರ ಮೂಲಕ ವಸ್ತುನಿಷ್ಠವಾಗಿ ವಿಶ್ಲೇಷಿಸುವ ಪ್ರಯತ್ನವನ್ನು ಮಾಡಿದ್ದಾರೆ. ಇಲ್ಲಿ ಅನೇಕ ಐತಿಹ್ಯ–ಕಥೆಗಳು ಸಂಗ್ರಹವಾಗಿವೆ.

ರಾಮಾಯಣ ಕಥೆಯ ಕೆಲವು ಸನ್ನಿವೇಶಗಳು ಇಲ್ಲಿ ಚಿತ್ರಿತಗೊಂಡಿವೆ. ರಾಮ, ಲಕ್ಷ್ಮಣ ಮತ್ತು ಸೀತೆಯರು ಹಂಪಿಯ ಪರಿಸರದಲ್ಲಿ ನಡೆದಾಡಿದ ಸಂಗತಿಯೂ ಇದೆ. ನಡೆದಾಡುವಾಗ ಸೀತೆಯ ಅಂಗಾಲಿಗೆ ಗುಳ್ಳೆಗಳಾಗುತ್ತವೆ. ಆಗ ಲಕ್ಷ್ಮಣನು ಸೀತೆಯನ್ನು ಹೆಗಲಮೇಲೆ ಕೂಡಿಸಿಕೊಳ್ಳುತ್ತಾನೆ. ಈ ಕುರಿತಾದ ಜನಪದ ನುಡಿಯೊಂದು:

"ಮುಂದೆ ಮುಂದೆ ರಾಮಣ್ಣ, ಹಿಂದಿಂದೆ ಲಕ್ಷ್ಮಣಾ
ನೆಟ್ವಾ ನಡವೀಲೊಬ್ಬಾ ಸೀತಾಮ್ಮಾನೆ
ನೆಟ್ವಗೇನೆ ನಡೆವೀಲೇ ಸೀತಮ್ಮಾರು ಮೂವರಾ
ಹಂಪಿಯಾ ಹೊಳಿಯಲ್ಲಿ ನೆಡದರಲ್ಲಾ"[1]

ಹೀಗೆ ಈ ಹಾಡಿನ ಕೊನೆಯಲ್ಲಿ ಮೂವರು ಹಂಪಿಯ ಹೊಳೆಯಲ್ಲಿ ನಡೆದಾಡಿದ ವಿವರಣೆ ಇದೆ. ಈ ಹೊಳೆಯು 'ತುಂಗಭದ್ರಾನದಿ'ಯೇ ಆಗಿರಬೇಕೆನ್ನುತ್ತಾರೆ. ಇಲ್ಲಿ ಸೀತೆಗೂ ಮತ್ತು ಹಂಪಿಗೂ ಸಂಬಂಧವನ್ನು ಕಲ್ಪಿಸಲಾಗಿದೆ.

'ವಿಜಯನಗರದಮ್ಮ'[2] ಹಾಡಿನಲ್ಲಿ ವಿಜಯನಗರದಮ್ಮನನ್ನು 'ದೈತಮ್ಮ' ಎಂದು ಕರೆಯುತ್ತಾರೆ. ಈಕೆಯು ವಿಜಯನಗರವನ್ನು ಬಿಟ್ಟು, ಗಾಡಿಯಲ್ಲಿ ಕುಳಿತು ತುಂಗಭದ್ರಾ ನದಿಯನ್ನು ದಾಟಿಕೊಂಡು ದಕ್ಷಿಣಕ್ಕೆ ಹೋದ ಕುರಿತಾದ ವಿವರಣೆ ಇದೆ. ಈಕೆಯು 'ಸಾಬರ ಹಾವಳಿ'ಯಿಂದ ವಲಸೆ ಹೋದಳೆಂದು ಜಾನಪದ ಸಾಹಿತ್ಯ ವಿವರಣೆಯನ್ನು ನೀಡುತ್ತದೆ. ಈ 'ಸಾಬರು ಯಾರು?' ಎಂಬುದಕ್ಕೆ ಈ ಸಾಹಿತ್ಯದಲ್ಲಿ ಯಾವುದೇ ವಿವರಣೆ ಇಲ್ಲ. ಇವರು ಆದಿಲಶಾಹಿಗಳೇ? ಎಂಬುದರ ಕುರಿತು ಸಂಶೋಧನೆಯಾಗುವ ಅಗತ್ಯತೆ ಇದೆ.

ಇಲ್ಲಿಯ 'ಮುತ್ತಿ ಬಂತಂಪ್ಪಿಗ'[3] ಎಂಬ ಹಾಡಿನಲ್ಲಿ ವಿಜಯನಗರವನ್ನು ವೈರಿಗಳು ಮುತ್ತಿಗೆ ಹಾಕುವ ವಿವರಣೆ ಇದೆ. ಅಲ್ಲಿಯ ಜನರಿಗೆ ಆಗ ಆಪತ್ತು ಬಂದು, ಅತ್ಯಂತ ವೈಭವದಿಂದ ಮೆರೆಯುತ್ತಿದ್ದ ವಿಜಯನಗರವು ನಾಶವಾಯಿತು ಎಂಬ ವಿಷಯ, 'ವಿರುಪಯ್ಯ ಲಿಂಗ'[4] ಎಂಬ ಜಾನಪದ ಹಾಡು ವಿರೂಪಾಕ್ಷ ದೇವಾಲಯದ ವಾಸ್ತುಶಿಲ್ಪದ ವರ್ಣನೆಯನ್ನು ನೀಡುತ್ತದೆ. ಇಲ್ಲಿ ಕಟ್ಟಲು ಬಳಸಿದ ಕಲ್ಲುಗಳು, ಕಂಬ ಮತ್ತು ಗೋಪುರ ಮುಂತಾದವುಗಳ ವಿವರಣೆ ಇದೆ. ಅಲ್ಲದೆ 'ಉದ್ದಾನೆ ಹನುಮಂತ' ಮತ್ತು 'ಹನುಮನ ಸಾಹಸ' ಹಾಡುಗಳು ಹಂಪಿ ಪರಿಸರದಲ್ಲಿಯ ಹನುಮನ ಸಾಹಸ ಕಾರ್ಯಗಳನ್ನು ಹಿಡಿದಿಟ್ಟಿದೆ. ಹನುಮಂತನು ಶಕ್ತಿಶಾಲಿ ದೇವರೆಂಬ ಅಂಶವನ್ನು ಇಲ್ಲಿ ಹೇಳಲಾಗಿದೆ.

ಪ್ರೊ. ಲಕ್ಷ್ಮಣ್ ತೆಲಗಾವಿ ಅವರು 'ಜನಪದ ವೀರ ಸಾಹಿತ್ಯ: ಚಾರಿತ್ರಿಕ ವಿವೇಚನೆ'[5] ಎಂಬ ಲೇಖನದಲ್ಲಿ ಡಾ. ಎಸ್.ಜಿ. ಗದ್ದಗಿಮಠರು ವಿಜಯನಗರ ಕುರಿತಾಗಿ ಹೇಳಿದ ಜನಪದ ಸಾಹಿತ್ಯವನ್ನು ವಿಶ್ಲೇಷಣೆಗೊಳಪಡಿಸುತ್ತಾರೆ. ವಿಜಯನಗರದ ಹುಟ್ಟು ಮತ್ತು ಪತನದ ಚಿತ್ರಣವು ಕೇವಲ ಐದು ತ್ರಿಪದಿಗಳಲ್ಲಿ ಅಡಕವಾದುದನ್ನು ಹೇಳುತ್ತಾರೆ. ಅಲ್ಲಿ ಹೊನ್ನಿನ ಮಳೆ ಸುರಿದದ್ದು, ಬನ್ನಿಯ ಹಬ್ಬ (ವಿಜಯದಶಮಿ) ದಂದು ವಿಜಯನಗರ ಸ್ಥಾಪಿತವಾದದ್ದು, ಬಲ್ಲಾಳವೀರರು ನೆರವಾದದ್ದು, (ಇಮ್ಮಡಿ) ಪ್ರೌಢ (ದೇವ)ರಾಯನ ಕಾಲದಲ್ಲಿ ಲಕ್ಕಣ್ಣ ದಂಡೇಶ, ಜಕ್ಕಣಾರ್ಯರು ಅದನ್ನು ಬೆಳೆಯಿಸಿದ್ದು) ಪಂಚಶಾಹಿಗಳು 'ಕಾಂಚಾಣ ಹುಡುಕುತಲಿ ಸಂಚಿಲಿ ನಾಡನ್ನು ನುಂಗಿದ್ದು, ಐಸಿರಿಯು ಹಂಚಿ ಹಂಚಾಗಿ ಮಣ್ಣಾದದ್ದು, ಇವೇ ಮೊದಲಾದ ಜನಜನಿತ ಹಾಗೂ ಐತಿಹಾಸಿಕ ಸಂಗತಿಗಳನ್ನು ಈ ತ್ರಿಪದಿಗಳು ಗರ್ಭೀಕರಿಸಿಕೊಂಡಿವೆ"[6] ಎನ್ನುತ್ತಾರೆ.

ಇಲ್ಲಿಯ ತುಂಗಭದ್ರಾ ನದಿಯನ್ನು, ಹಂಪಿಯಲ್ಲಿಯ ದೇವಾಲಯಗಳನ್ನು ಹೇಮಕೂಟದಲ್ಲಿಯ ಜಾತ್ರೆ-ಉತ್ಸವಗಳನ್ನು ಹಾಗೂ ರಾಜರುಗಳು ಪ್ರಜೆಗಳ ಕುರಿತು ಇಟ್ಟಿರುವ ಅಭಿಮಾನವನ್ನು ತಿಳಿಸುವ ಜನಪದ ನುಡಿಯೊಂದು ಇಂತಿದೆ:

"ಹಂಪೆಗೆ ಹೊಳಿ ಚೆಂದ ಪಂಪಗೆ ಗುಡಿ ಚೆಂದ
ಹೇಮಕೂಟ ಚೆಂದ ಪರಸಿಗೆ । ಆನೆಗೊಂದಿ
ರಾಜರಿಗೆ ಚೆಂದ ಪ್ರಜೆಗಳು"[7] ಎನ್ನುತ್ತದೆ.

ಅಕ್ಕಳಾದವಳು ತನ್ನ ತಂಗಿಯ ಚೆಲುವನ್ನು ಹೇಳುವಲ್ಲಿ "ಹಂಪಿಯ ತೇರಿಗೆ ಹೊಂದಿ ನಿಂತವಳ್ಯಾರ" ಎನ್ನುವ ನುಡಿ, ತಂಗಿ ಗರ್ಭವತಿಯಾದ ವಿಷಯವನ್ನು ತಲುಪಿಸಿದ ವ್ಯಕ್ತಿಯ ಕುರಿತು 'ಹಂಪಿ ಹತ್ತಿರದ ಬಣಜಿಗ' ಮುಂತಾದವುಗಳು ಹಂಪಿಯ ಪರಿಸರದಲ್ಲಿಯೇ ಹುಟ್ಟಿದವುಗಳಾಗಿವೆ.

'ಹಂಪಿಯ ಹೊಳೆ' ಅಂದರೆ ತುಂಗಭದ್ರಾ ನದಿಯ ಕುರಿತು ಇರುವ ಜನಪದ ನುಡಿಗಳಲ್ಲಿಯ ಕೆಲವು ಸಾಲುಗಳು ಇಂತಿವೆ:

"ಹಂಪಿಯಾಚೆ ಮಳೆ ಬಂತು"[8]

"ಹಂಪೆಯಾಗಿ ತೆಂಗುಬಾಳೆಯ ಲಾಡಿ ಹರಿದಾಳ"[9] ಮುಂತಾದವುಗಳು. ಕೆಲವು ಕೋಲಾಟದ ಹಾಡುಗಳಲ್ಲಿಯೂ ಹಂಪಿ ಪರಿಸರದಲ್ಲಿಯ ದೇವರುಗಳನ್ನು ಸ್ಮರಿಸುತ್ತಾ "ಹಂಪಿ ವಿರೂಪಾಕ್ಷಗೆ ಶರಣೆನ್ನಿರೋ"[10] ಎಂಬ ಸಾಲೂ ಬರುತ್ತದೆ. ಇದು ಹಂಪಿ ವಿರೂಪಾಕ್ಷ ದೇವರ ಆರಾಧನೆಯನ್ನು ಅರುಹುತ್ತದೆ.

ವಿಜಯದಶಮಿಯು ವಿಜಯನಗರದ ಅರಸರು ಆಚರಿಸುತ್ತಿದ್ದ ನಾಡಹಬ್ಬ. ಅದು ಇಂದಿಗೂ ಕನ್ನಡಿಗರ ಬಹುದೊಡ್ಡ ಹಬ್ಬವಾಗಿ ಮುಂದುವರೆದಿದೆ. ಈ ಕುರಿತಾದ ನುಡಿಯೊಂದು.

"ಬನ್ನಿಯ ಗಿಡಹುಟ್ಟಿ, ಹೂನ್ನಿನ ಮಳೆಗೆರದು
ಚನ್ನ ಪಟ್ಟಣಕೆ ಹೊಳೆ ಹರಿದು । ಹಂಪ್ಯಾಗ
ಬನ್ನಾಣ ವೀರ ಗುಟ್ಟಾಗಿ"[11] ಎನ್ನುತ್ತದೆ.

ಚಿತ್ರದುರ್ಗದ ಅರಸ ಮತ್ತಿ ತಿಮ್ಮಣ್ಣ ನಾಯಕನು ಕಲಬುರಗಿಯ ಮೇಲೆ ದಾಳಿಮಾಡಿ, ಅಲ್ಲಿಯ ನವಾಬನನ್ನು ಸೋಲಿಸಿ, ವಿಜಯನಗರದ ಪತಾಕೆಯನ್ನು ಹಾರಿಸಿದ ಕುರಿತಾದ ಕೋಲು ಮೇಳದ ಪದ್ಯವೊಂದರಲ್ಲಿ:

"ವಾಲೇ ಬಂದಾವು ವಿಜಯನಗರದಿಂದ
ಕಲ್ಬುರ್ಗಿ ಮೇಲೇರಿ ಬರಬೇಕೋ ನೀನೀಗ
ಕಲ್ಬುರ್ಗಿ ಕೋಟೆಯ ಹತ್ತಿ ಮೆದಕೇರಿ
ಕಿತ್ತಾನು ಫೀರಂಗಿ ಕತ್ತಿ
ಸುತ್ತಾಲು ಹತ್ಯಾವು ಬತ್ತಿ

ಮೆದಕೇರಿ ಎತ್ತಿದ ವಿಜಯಾದ ಕತ್ತಿ"[12] ಈ ನುಡಿಯು "ವಿಜಯನಗರದ ಅರಸನ ಆಧೀನದಲ್ಲಿದ್ದ ಚಿತ್ರದುರ್ಗದವರ ಕುರಿತಾದ ಮಾಹಿತಿಯನ್ನು ನೀಡುತ್ತದೆ.

ಭಜನೆ ಹಾಡಿನಲ್ಲಿ ಹಂಪಿಯು ಈ ರೀತಿ ವರ್ಣಿತವಾಗಿದೆ:

"ಹೋಗಿ ನೋಡು ತಮ್ಮ ಹಂಪಿ ಪಟ್ಟಣ
ಮೂಲದಲ್ಲಿ ಇದು ಕಿಷ್ಕಿಂಧ ಕಾಂಡಾ ಪೂರ್ಣ
ಹಕ್ಕ ಬುಕ್ಕರು ಕಟ್ಟಿದರು ಸಂಸ್ಥಾನ
ಆದಿ ಕಾಲದಿಂದಲೂ ಪುಣ್ಯ ಕಾಣಾ,"[13] ಹೀಗೆ ಮುಂದುವರೆಯುತ್ತದೆ.

ಹಕ್ಕ ಬುಕ್ಕರು ಸ್ಥಾಪಿಸಿದ ವಿಜಯನಗರವನ್ನು ಹಾಗೂ ಅದರ ರಾಜಧಾನಿಯಾದ 'ಹಂಪಿ'ಯನ್ನು ನೋಡಬೇಕು; ಸುತ್ತಾಡಬೇಕು. ಅಂದಾಗ ಮಾತ್ರ ಪುಣ್ಯ ಲಭಿಸುವುದೆಂಬ ಭಾವಸ್ಫುರಿಸುತ್ತದೆ.

ಲಾವಣಿ ಹಾಡಿನ ನುಡಿಯೊಂದು ವಿಜಯನಗರದ ಅವನತಿಯ ಕುರಿತಾಗಿ ಹೀಗೆ ಹೇಳುತ್ತದೆ:

"ತಾಳಿಕೋಟಿ ಕಾಳಗ ಕಥೆಯ, ಹೇಳುವೇನು ಕೇಳೋ ಗೆಳೆಯ
ದಾರಿಬಿಟ್ಟು ನಡೆದುದ್ದರ ಫಲವನ್ನೂ, ಒಳ್ಳೆ ಜನರ ಮಾನ ಕಳೆದುದ್ದರ ಗತಿಯನ್ನೂ॥
ಹೀಗಾಗಿ ಮಾಡಿಕೊಂಡ ರಾಮರಾಯ ಎಲ್ಲರ ದ್ವೇಷವನ್ನು
ತಾಳಗೆಟ್ಟ ನಡೆದತಾನು, ಹಾಳುಮಾಡಿ ರಾಮರಾಯ
ಬೀಳು ಕೆಡವಿಬಿಟ್ಟ ಎಲ್ಲಾ ರಾಜ್ಯವನು

ಭರ್ಬರಾತಿಯಲ್ಲಿ ಇದ್ದ ರಾಜರಿಗೆ ಬಿಟ್ಟ ವಿಜಯನಗರವನ್ನೂ॥[14] ಅರಸ ರಾಮರಾಯನೇ ತಾಳಿಕೋಟಿ ಕದನವಾಗಲು ಕಾರಣನೆಂದು, ಈತನು ಇತರರೊಂದಿಗೆ ಕಟ್ಟಿಕೊಂಡ ದ್ವೇಷ, ಕಳೆದುಕೊಂಡ ತಾಳ್ಮೆಯು ವಿಜಯನಗರದ ಪತನಕ್ಕೆ ಕಾರಣವಾದವು. ಅಂದು ಶಾಹೀ ರಾಜ್ಯದವರು ಈ ಸಾಮ್ರಾಜ್ಯವನ್ನು ಆಕ್ರಮಿಸಿಕೊಂಡ ನಂತರ ಒಳ್ಳೆಯ ಜನರು ಬದುಕುವುದೂ

ಕಷ್ಟವಾಯಿತು. ಅವರು ಮಾನ–ಮರ್ಯಾದೆಯನ್ನು ಕಾಪಾಡಿಕೊಳ್ಳಬೇಕಾದ ಸಂದರ್ಭ ಒದಗಿಬಂದಿತು ಎಂಬ ಸಂಗತಿಗಳು ಈ ಜನಪದ ನುಡಿಯಲ್ಲಿವೆ.

ಅಲ್ಲದೆ ಕೆಲವು ಜನಪದ ಆಟಗಳು ಬಿಜಾಪುರದ ಆದಿಲ್‌ಶಾಹಿಗಳು ಮತ್ತು ವಿಜಯನಗರದ ಆಡಳಿತದ ಕುರಿತಾದ ವಿವರಣೆಯನ್ನು ನೀಡುತ್ತವೆ. ಇದರಲ್ಲಿ 'ಕಾಣಕಾಣುತ್ತಿ' ಎಂಬ ಆಟವೂ ಒಂದು. ಈ ಕುರಿತಾಗಿ ಡಾ.ಬಿ.ಎಸ್.ಗದ್ದಗಿಮಠ ಅವರು ತಮ್ಮ 'ಕನ್ನಡ ಜಾನಪದ ಗೀತೆಗಳು' ಪಿಹೆಚ್.ಡಿ ಮಹಾಪ್ರಬಂಧದಲ್ಲಿ ಹೀಗೆ ಹೇಳುತ್ತಾರೆ, "ಒಬ್ಬ ಹುಡುಗನು ಬಗ್ಗಿ ಕುದುರೆಯಾಗುತ್ತಾನೆ. ಮತ್ತೊಬ್ಬನು ಸವಾರನಾಗುತ್ತಾನೆ. ಸವಾರನಾದವನು ಹಲಕೆಲವು ಪಲ್ಲವಿಗಳನ್ನನ್ನಲು ಅವರನ್ನು ಸುತ್ತುಗಟ್ಟಿ ನಿಂತ ಉಳಿದ ಮಕ್ಕಳೂ ಹಿಂದಿನಿಂದ ಅವನ್ನು ಅನ್ನುತ್ತಾರೆ. ಸವಾರನು "ಕಾಣಕಾಣುತ್ತೊ್ಯ" ಎಂದೂ ಉಳಿದವರು, "ಎಲ್ಲಿಗೆ ಬಂತೊ ಸಂಗಯ್ಯ" ಎಂದೂ ಅನ್ನುತ್ತ ತಮ್ಮ ಶರೀರದ ಅಳತೆಯನ್ನು ಮಾಡಿ ತೋರಿಸುತ್ತ ಕಡೆಗೆ "ಕುತ್ತಿಗೆಗೆ ಬಂತೊ ಸಂಗಯ್ಯ" ಎಂದು ಅಂದವರೇ ಓಡಿ ಹೋಗುವರು. ಸವಾರನಾದವನು ಕುದುರೆಯಾದವನನ್ನು ಬಿಟ್ಟು ಅವರನ್ನು ಬೆನ್ನಟ್ಟಿ, ಒಬ್ಬನನ್ನು ಹಿಡಿಯಲು ಓಡುತ್ತಾನೆ. ಆಗ ಉಳಿದ ಹುಡುಗರು ಕುದುರೆಯ ಸವಾರಿ ಮಾಡಲು ಪ್ರಯತ್ನಿಸುವರು. ಸವಾರನು ಯಾರನ್ನು ಮುಟ್ಟಿ ಹಿಡಿದು ತರುವನೋ, ಅವನು ಕುದುರೆಯಾಗುವನು. ಮೊದಲು ಕುದುರೆಯಾದವನು ಈಗ ಸವಾರನಾಗಿ ಕುದುರೆಯನ್ನೇರುವನು. ಹೀಗೆ ಆಟವು ಮುಂದುವರೆಯುವುದು."[15] ಡಾ. ಬಿ. ಎಸ್. ಗದ್ದಗಿಮಠರು ಇದೊಂದು ಮಕ್ಕಳ ಆಟವೆಂದು ಹೇಳುತ್ತಾರೆ. ಆದರೆ ಈ ಆಟದ ಹಿನ್ನೆಲೆ ಹಾಗೂ ಚಾರಿತ್ರಿಕ ಅಂಶಗಳನ್ನು ಹೇಳುವುದಿಲ್ಲ.

ಮುಂದುವರೆದು 'ಕುದುರೆ ಸವಾರಿ'ಯ ಇನ್ನೊಂದು ಆಟದಲ್ಲಿ 'ಕಾಣ ಕಾಣುತ್ತೊ್ಯ–ದುಡ್ಡಿಗೆ ಸೇರು ಬಳ್ಳೊಳ್ಳ್ಯ' ಎಂಬ ಆಟದ ಸಾಲನ್ನು ಹೇಳುತ್ತಾ, "ಇದು ಆಗಿನ ಜನರು ಎತ್ತು, ಕುದುರೆಮೊದಲಾದವುಗಳ ಮೇಲೆ ಸಾರಿಗೆ ಮಾಡುತ್ತಿದ್ದರೆಂದೂ, ನಾಣ್ಯಗಳು ಆಗಲೇ ಬಳಕೆಯಲ್ಲಿ ಬಂದಿದ್ದವೆಂದೂ 'ದುಡ್ಡಿಗೆ ಸೇರು ಬಳ್ಳೊಳಿ' ಮಾರುತ್ತಿತ್ತೆಂದೂ ತಿಳಿದುಬರುವುದು"[16] ಎನ್ನುತ್ತಾರೆ.

ಹೈದ್ರಾಬಾದ ಕರ್ನಾಟಕದ ಖ್ಯಾತ ಸಂಶೋಧಕರಾದ ಡಾ.ಬಸವಲಿಂಗ ಸೊಪ್ಪಿಮಠ ಅವರು ತಮ್ಮ 'ಕಾನ ಕಾನ ಉತ್ತತ್ತಿ...' ಎಂದರೇನು?[17] ಎಂಬ ಲೇಖನದಲ್ಲಿ ನೀಡಿದ ಈ ಆಟದ ವಿವರಣೆಯು ಈ ಕೆಳಗಿನಂತಿದೆ :

"ಉತ್ತರ ಕರ್ನಾಟಕದ ಹಳ್ಳಿಗಳಲ್ಲಿ ಇಂದಿಗೂ ಪ್ರಚಲಿತವಿರುವ ಒಂದು ಆಟ; 'ಕಾನ ಕಾನ ಉತ್ತತ್ತಿ .....' ಒಂದೇ ವಯಸ್ಸಿನ ಎಂಟು ಹತ್ತು ಹುಡುಗರು ಒಂದೆಡೆ ಸೇರಿ, ಈ ಆಟ ಆರಂಭಿಸುತ್ತಾರೆ. ಪ್ರತಿ ನಾಲ್ಕೈದು ಜನರು ಏಕಕಾಲಕ್ಕೆ ಚಪ್ಪಾಳೆ ಹಾಕುತ್ತಾರೆ. ಹೀಗೆ ಚಪ್ಪಾಳೆ ಆಕಾರದಲ್ಲಿ ಹಸ್ತವನ್ನು ಮಾಡುವಾಗ, ಐವರಲ್ಲಿ ನಾಲ್ವರು ಹಸ್ತದ ಮೇಲೆ ಹಸ್ತವನ್ನು ಡಬ್ಬು ಹಾಕಿ, ಒಬ್ಬ ಮಾತ್ರ ಚಿತ್ ಹಾಕಿದರೆ (ಅಥವಾ ಇದಕ್ಕೆ ವಿರುದ್ಧ) ಆತ ಗೆದ್ದಂತೆ. ಪ್ರತಿಯೊಬ್ಬನೂ ಹೀಗೆ ಗೆಲ್ಲುತ್ತ ಹೋಗುತ್ತಾನೆ. ಕೊನೆಗೆ ಇಬ್ಬರು ಉಳಿದಾಗ ಗೆದ್ದವರ ಪೈಕಿ ಒಬ್ಬ ಅವರನ್ನು ಕೂಡಿಕೊಂಡು ಅವರಲ್ಲಿ ಒಬ್ಬನನ್ನು ಮೊದಲಿನಂತೆ ಚಪ್ಪಾಳೆ ಹಾಕಿ ಗೆಲ್ಲಿಸುತ್ತಾನೆ. ಸೋತವನು ಬಗ್ಗಿ ನಿಲ್ಲಬೇಕು. ಗೆದ್ದವರು ಸಾಲಾಗಿ ಅವನ ಬೆನ್ನ ಮೇಲಿಂದ ಜಿಗಿಯಬೇಕು. ಬಗ್ಗಿದವನು 'ಕಾನ ಕಾನ ಉತ್ತತ್ತಿ' ಎನ್ನುತ್ತಾನೆ: ಜಿಗಿಯುವವರು 'ಎಲ್ಲಿಗೆ ಬಂತೋ ಸಂಗಯ್ಯ?' ಎಂದು ಕೇಳುತ್ತಾರೆ. ಆಗ ಬಗ್ಗಿದಾತ ಸ್ವಲ್ಪ ಸ್ವಲ್ಪವೇ ಮೇಲೆಳುತ್ತ, ಕೈಗಳನ್ನು ಕಾಲು–ತೊಡೆ–ಟೊಂಕ–ಎದೆಗಳಿಗೆ ಸರಿಸುತ್ತ ಎಲ್ಲಿಗೆ ಬಂತು ಎಂಬುದನ್ನು ನುಡಿಯದೆ ಸೂಚಿಸುತ್ತ ಹೋಗುತ್ತಾನೆ. ಅವನು ಪೂರ್ತಿಯಾಗಿ ಬಗ್ಗಿದಾಗ ಸರಳವಾಗಿ ಜಿಗಿಯುತ್ತ ಬಂದವರು, ಅವನು ಮೇಲೆದ್ದಂತೆ ಜಿಗಿಯುವುದು ಕಷ್ಟವಾಗುತ್ತದೆ. ಜಿಗಿಯ ಹೋಗಿ ವಿಫಲರಾದವರು ಈಗ ತಾವು ಬಗ್ಗಬೇಕಾಗುತ್ತದೆ. ಉಳಿದವರು ಜಿಗಿಯುತ್ತಾರೆ. ಆಟದ ಪುನರಾವರ್ತನೆಯಾಗುತ್ತದೆ. ಏನು ಈ ಆಟದ ಹಿನ್ನೆಲೆ? 'ಎಲ್ಲಿಗೆ ಬಂತೊ ಸಂಗಯ್ಯ?' ಎಂದು ಕೇಳಿದರೆ 'ಇಲ್ಲಿಗೆ' ಎಂದು ಸೂಚಿಸುವ ಈ ಸಂಗಯ್ಯ ಯಾರು? ಹಾಗೆ ಕೇಳುವವರು ಯಾರು? ಎಂಬ ಪ್ರಶ್ನೆ ಈಗ ಏಳುತ್ತದೆ."[18]

ಮುಂದುವರೆದು ಡಾ. ಸೊಪ್ಪಿಮಠ ಅವರು "ನನಗೆ ತೋರುವಂತೆ ರಕ್ಕಸತಂಗಡಗಿ ಕಾಳಗದ ಐತಿಹಾಸಿಕ ಸನ್ನಿವೇಶಕ್ಕೆ ಸೇರಿದ ಆಟ 'ಕಾನ ಕಾನ ಉತ್ತತ್ತಿ' ಎನಿಸುತ್ತದೆ. ಅಂದರೆ ಹಿಂದೂ–ಮುಸ್ಲಿಂ ಸಂಘರ್ಷದ ಮಧ್ಯಕಾಲದ ಯಾವುದೋ ಒಂದು ಘಟನೆ ಈ ಆಟಕ್ಕೆ ಪ್ರೇರೇಪಣೆ ನೀಡಿರಬೇಕು. ಹಾಗಾದರೆ 'ಕಾನ ಕಾನ ಉತ್ತತ್ತಿ' ಎಂದರೇನು? ಕಾನ ಕಾನ ಉತ್ತತ್ತಿಗೆ ಅದು ಇರುವ ಸ್ಥಿತಿಯಲ್ಲಿ ಅರ್ಥ ಹೇಳುವುದು ಕಷ್ಟ. ತಿನ್ನುವ ಉತ್ತತ್ತಿಗೂ ಕಾನ ಕಾನ ಎಂಬುದಕ್ಕೂ ಏನು ಸಂಬಂಧ? ನನಗನಿಸುವಂತೆ ಖಾನ ಖಾನ ಒತ್ತೊತ್ತಿಯ ಅಪಭ್ರಂಶ ರೂಪವೇ ಕಾನ ಕಾನ ಉತ್ತತ್ತಿ ಇರಬೇಕು. ಮಧ್ಯಕಾಲದಲ್ಲಿ ಕರ್ನಾಟಕದಲ್ಲಿ ಮುಸ್ಲಿಂ ಯೋಧರುಗಳ ಆಕ್ರಮಣ (ಒತ್ತಿ+ಒತ್ತಿ=ಒತ್ತೊತ್ತಿ–ಉತ್ತತ್ತಿ)ವನ್ನು ಈ ಪದ ಪ್ರಯೋಗ ಸೂಚಿಸುತ್ತಿರುವಂತಿದೆ. ಹಿಂದೂ ಮುಸ್ಲಿಂ ಕಿತ್ತಾಟ ಕಾಲದಲ್ಲಿ ಮುಸಲ್ಮಾನರ ಕೈ ಮೇಲಾಗಿ ಹಿಂದೂಗಳು ಪರಾಭವದಿಂದ ತಲೆ ತಗ್ಗಿಸಿ ನಿಂತುದನ್ನು 'ಕಾನ ಕಾನ ಉತ್ತತ್ತಿ' ಆಟ ಚೆನ್ನಾಗಿ ಅಭಿನಯಿಸುತ್ತದೆ. ಈ ಆಟದಲ್ಲಿ ಬಗ್ಗಿ ನಿಂತವನೇ ವಿಜಯನಗರ ಕಾಲದ ಹಿಂದೂ ಶ್ರೀ ಸಾಮಾನ್ಯನಾದರೆ, ಇವನ ಬೆನ್ನಮೇಲೆ ಕೈಯೂರಿ ಕುತ್ತಿಗೆಯನ್ನು ನೆಲಕ್ಕೆ ಬಗ್ಗಿಸುತ್ತ ಜಿಗಿಯುವವರು ಮುಸ್ಲಿಂ ಯೋಧರು ಅರ್ಥಾತ್ ಖಾನ ಖಾನರುಗಳು ಇರಬೇಕು. ಇವರು 'ಭಾರಕ್ಕೆ ಕಾನ ಕಾನ ಉತ್ತತ್ತಿ'(ಖಾನ ಖಾನ ಒತ್ತೊತ್ತಿ) ಎಂದು ಕೀರಲುತ್ತಾನೆ ಬಗ್ಗಿದಾತ. ಜಯದ ಉನ್ಮಾದದಲ್ಲಿ ಇರುವ ಅವರು 'ಎಲ್ಲಿಗೆ ಬಂತೋ ಸಂಗಯ್ಯ' ಎಂದು ಈತನನ್ನು ಕೆಣಕುವುದರಿಂದ ಬಗ್ಗಿದಾತನ ಹೆಸರು 'ಸಂಗಯ್ಯ' ನಿಶ್ಚಿತ. ಯಾರು ಈ ಸಂಗಯ್ಯ? ಖಾನ ಖಾನರ ಉಪದ್ರವದಲ್ಲಿ ಸಿಕ್ಕು ನಲುಗುವ ಸಂದರ್ಭ ಆತನಿಗೆ ಒದಗಿದ್ದಾದರೂ ಹೇಗೆ?"[19] ಹೀಗೆ ಆತ ಅನುಭವಿಸಿದ ಕಷ್ಟ–ನಷ್ಟಗಳ ಕುರಿತಾಗಿ ವಿವರಣೆ ನೀಡುತ್ತಾರೆ.

ಮುಂದುವರೆದು "ಸಂಗಯ್ಯ ಎಂಬ ಹೆಸರೇ ಈತನೊಬ್ಬ ವೀರಶೈವ ಜಂಗಮ ಎನ್ನುವದಕ್ಕೆ ಸಾಕ್ಷಿ. ಸಂಗಯ್ಯ ಹೆಸರಿನ ಶರಣರು, ವೀರಶೈವ ಸಾಮಾನ್ಯರು ಕ್ರಿ.ಶ. 15–16ನೆಯ ಶತಮಾನದಲ್ಲಿ ವಿಪುಲವಾಗಿ ಸಿಗಬಹುದಾದರೂ ಮುಸ್ಲಿಂ ಪ್ರಭುತ್ವವನ್ನು ಧಿಕ್ಕರಿಸಿದ, ಪ್ರಾಯಶಃ ಈ ಕಾರಣವಾಗಿಯೇ ಖಾನರು ಸೆರೆಸಿಕ್ಕು 'ಎಲ್ಲಿಗೆ ಬಂತೊ ಸಂಗಯ್ಯ' ಎಂದು ಅವರಿಂದ ದಂಡನೆಗೀಡಾಗಿರುವ ಸಂಗಯ್ಯ, ಒಬ್ಬ ಇದ್ದಾನೆ. ಆತನೇ ಕೊಡೆಕಲ್ ಬಸವಣ್ಣನ ಎರಡನೆಯ ಮಗ ಸಂಗಯ್ಯ, ಸಂಗಪ್ಪಯ್ಯ, ಸಂಗಮೇಶ್ವರ ಮೊದಲಾದ ಹೆಸರುಗಳ ಸಂಗಯ್ಯ"[20] ಎನ್ನುತ್ತಾರೆ. ಈತನ ಸಮಾಧಿ ಕನಕದಾಸನ ಕಾಗಿನೆಲೆಯಲ್ಲಿದೆ ಎಂಬುದನ್ನು ಗುರುತಿಸುತ್ತಾರೆ. ಈ ಕುರಿತಾದ ಸಮಗ್ರ ಮಾಹಿತಿಯನ್ನು ತಮ್ಮ 'ಕೊಡೆಕಲ್ ಬಸವಣ್ಣ' ಎಂಬ ಮಹಾಪ್ರಬಂಧದಲ್ಲಿ ಸುಧೀರ್ಘವಾಗಿ ಚರ್ಚಿಸಿದ್ದಾರೆ. ಈ 'ಕಾನ ಕಾನ ಉತ್ತತ್ತಿ' ಆಟವು ಅಂದು ಜನತೆಯು ಖಾನ ಖಾನರುಗಳು ಮತ್ತು ಸಂಗಯ್ಯನ ಮುಖಾಮುಖಿಯ ಕುರಿತಾಗಿ ಕಂಡುಕೊಂಡ ಆಟವೆನ್ನುತ್ತಾರೆ. ಈ ಆಟದ ಮೂಲಕ ಅಂದಿನ ಮುಸ್ಲಿಂರ ದಾಳಿ, ದೌರ್ಜನ್ಯಗಳು ಸಂಗಯ್ಯನೊಂದಿಗೆ ಶ್ರೀ ಸಾಮಾನ್ಯರ ಕುತ್ತಿಗೆಯವರೆಗೂ ಬಂದಿದ್ದವೆಂಬ ಸೂಚನೆಗಳು ಈ ಆಟದಲ್ಲಿ ಲಭ್ಯವಾಗುತ್ತದೆ. ಈ ಕುರಿತಾದ ವಸ್ತುನಿಷ್ಠವಾದ ಸಮಗ್ರ ಅಧ್ಯಯನವನ್ನು ಇವರು ಮಾಡಿದ್ದಾರೆ.

ಇನ್ನೊಂದು ಅತ್ಯಂತ ಪ್ರಚಲಿತವಿರುವ ಜನಪದ ಆಟ ಅಥವಾ ಜಾನಪದ ಹಾಡು 'ಆನೆ ಬಂತು ಆನೆ' ಎಂಬುದು. ಇದು ಬಹುತೇಕ ಉತ್ತರ ಕರ್ನಾಟಕದ ಧಾರವಾಡ, ಗದಗ, ಬಿಜಾಪುರ, ಬಾಗಲಕೋಟ, ಕೊಪ್ಪಳ, ರಾಯಚೂರು, ಬೀದರ, ಕಲಬುರ್ಗಿ ಮತ್ತು ಯಾದಗಿರಿ ಮುಂತಾದ ಜಿಲ್ಲೆಗಳ ಹಳ್ಳಿಗಳಲ್ಲಿ ಪ್ರಚಲಿತದಲ್ಲಿರುವ ಮಕ್ಕಳ ಆಟವೂ ಹೌದು, ಜಾನಪದ ಹಾಡೂ ಹೌದು.

ಡಾ. ಬಿ.ಎಸ್ ಗದ್ದಗಿಮಠ ಅವರು ಈ ಆಟದ ಕುರಿತು ತಮ್ಮ ಪಿಹೆಚ್.ಡಿ ಮಹಾ ಪ್ರಬಂಧದಲ್ಲಿ ಹೀಗೆ ಹೇಳುತ್ತಾರೆ, "ಅಳುತುಂಬಿ ಏನು ಕೊಟ್ಟರೂ ಸಮಾಧಾನವಾಗದೆ, ರೊಂಯ್ ಎಂದು ಒಂದೇ ಸವನೆ ಅಳುವ ಮಗುವನ್ನು, ಹಳ್ಳಿಗರು 'ಆನೆ ಬಂತು ಸುಮ್ಮನಾಗು' ಎಂದು ಹೆದರಿಕೆ ಹಾಕಿ ಬೆದರಿಸುವರು. ಇಷ್ಟಾದರೂ ಅಳ ಹತ್ತಿದರೆ 'ಆನೆಯ ಆಟ'ವನ್ನು ಆಡಿಸುವರು. ಆ ಆಟವನ್ನು ಆಡಿಸುವ ವ್ಯಕ್ತಿಯು ಅಂಗಾತ ಮಲಗಿ ಮೊಣಕಾಲುಗಳ ಮೇಲೆ ಮಗುವನ್ನು ಹಾಕಿಕೊಂಡು ತೂಗಿ ತೂಗಿ ಆಡಿಸುವದನ್ನು ಹಳ್ಳಿಗರಲ್ಲಿ ನೋಡಬಹುದು. ಈ ಆಟವನ್ನು ಆಡಿಸುವ ಕಾಲದಲ್ಲಿ ಹಲಕೆಲವು ಪಲ್ಲವಿಗಳನ್ನು ಅಂದು ಕೂಸಿಗೆ ಜೀಕವನ್ನು ಮೊಣಕಾಲುಗಳನ್ನೆತ್ತಿ ಎತ್ತಿ ಕೊಡುವನು. ಆಗ ಸುತ್ತ–ಮುತ್ತಲಿನ ಹವೆಯ ಹರಿದಾಟವು

ಹೆಚ್ಚಾಗಿ, ಹವೆಯು ಕೂಸಿನ ಎದೆತುಂಬಿ, ಹಾಡಿನೊಡನೆ 'ಗಲ್ಲಿಸಿ'ದಂತಾಗಲು ಕೂಸು ಅಳುವುದನ್ನು ನಿಲ್ಲಿಸುವುದು. ಇದನ್ನು ಕಣ್ಣಾರೆ ಕಂಡು ಮನಗಾಣಬಹುದು."

ಆನಿ ಬಂತೌ ಆನಿ; ಇದ್ಯಾ ಊರ ಆನಿ? ।
ವಿಜಾಪುರದ ಆನಿ; ಇಲ್ಲಿಗ್ಯಾಕ ಬಂತು? ।
ಹಾದಿ ತಪ್ಪಿ ಬಂತು; ಹಾದಿಗೊಂದು ದುಡ್ಡು ।
ಬೀದಿಗೊಂದು ದುಡ್ಡು; ಆದ ದುಡ್ಡ ಕೊಟ್ಟು ।
ಕೊಬ್ಬರಿ ಬೆಲ್ಲ ತಂದು; ಲಟ ಲಟ ಮುರಿದು ।
ಯವನರ ಕೈಯಾಗ ಕೊಟ್ಟು; ಚಕ್ರಬಾಯನ ಗುಂಡು
ಕೆಳಗ ಬಿದ್ದರ ತುಂಡು ॥[21]

ಈ ಹಾಡಿನ ಅರ್ಥವನ್ನು ಡಾ. ಬಿ.ಎಸ್.ಗದ್ದಗಿಮಠ ಅವರು "ಯವನರು(ಮುಸಲ್ಮಾನರು) ಭಾರತದ ಮೇಲೆ ದಂಡೆತ್ತಿ ಬಂದು, ಇಲ್ಲಿಯ ಪ್ರದೇಶವನ್ನು ಆಕ್ರಮಣ ಮಾಡುತ್ತ, ಒತ್ತಾಯ ಪೂರ್ವಕವಾಗಿ ತಮ್ಮ ಧರ್ಮವನ್ನು ಹೇರಲು ಅನೇಕ ಕ್ರೂರ ಕೃತ್ಯಗಳನ್ನು ಎಸಗಿದರು" ಎಂದು ಹೇಳುತ್ತಾರೆ. ಅಲ್ಲದೇ ಮುಂದುವರೆದು "ಬಿಜಾಪುರದ ಅಲ್ಲೀ ಆದಿಲಶಹನು ಆಕಾರದಲ್ಲಿ ನೋಡಲು ಆನೆಯಂತೆ ಭೀಕರನೂ , ಕೃತಿಗಳಲ್ಲಿ ಹುಲಿಯಂತೆ ಕ್ರೂರನೂ, ರೌದ್ರಧರ್ಮಾಭಿಮಾನಿಯೂ, ಕಪಟಿಯೂ ಇದ್ದನೆಂದು ಇತಿಹಾಸವು ಹೇಳುವುದು. ಮದವೇರಿ ಹೊರಬಿದ್ದ ಆನೆಗೆ ಜನರು ಸಹಜ ಅಂಜುವಂತೆ, ಇವನ ರಾಜ್ಯಾಡಳಿತೆಯ ಚಕ್ರದಲ್ಲಿ ಸಿಕ್ಕ ಜನರು ನಡುಗುತ್ತಿದ್ದರು. ಒಮ್ಮೆ ರಾಜ್ಯದ ಹಳ್ಳಿಗಳನ್ನು ಇವನು ಹೊಕ್ಕರೆ ಇವನ ಪರಿವಾರದವರು ಯಾವ ಕೃತ್ಯಗಳನ್ನೂ ಮಾಡಲು ಹೇಸುತ್ತಿದ್ದಿಲ್ಲ. ಕಾರಣ ಜನರು ಅಂಜಿ ತಮ್ಮ ಮಕ್ಕಳನ್ನೂ, ಹೆಂಗಸರನ್ನೂ, ಮನೆಯಲ್ಲಿಯೇ ಬಚ್ಚಿಡುತ್ತಿದ್ದರು. ಅವರು ಹಾದಿಯ ಮಲೆ ಬಂದರೆ, ಹಾದಿಯ ಮೇಲೂ ಬೀದಿಯಲ್ಲಿ ಬಂದರೆ ಬೀದಿಯಲ್ಲಿಯೂ ಉಡಿಯಲ್ಲಿ ದುಡ್ಡುಕಟ್ಟಿಕೊಂಡು ಜನರು ಹಿಂದಿರುಗಲು ಬೇಡಿಕೊಳ್ಳುತ್ತಿದ್ದರಂತೆ. ಅಲ್ಲದೆ ಬೆಲ್ಲ ಕೊಬ್ಬರಿ ತಿನ್ನಲು ಕೊಟ್ಟು ಸಮಾಧಾನ ಮಾಡುತ್ತಿದ್ದರಂತೆ. ಇವತ್ತಿಗೂ ಮಕ್ಕಳು ಅತ್ತು ಕಾಡಿದರೆ, "ಬಿಜಾಪುರದ ಆನೆಯ ಕೈಯ್ಯಲ್ಲಿ ಹಿಡಿದುಕೊಡುವೆ" ಎಂದು ಬೆದರಿಸುವರು. ಮುಂದೆ ಇದು ಮಕ್ಕಳನ್ನಾಡಿಸಲು 'ಆನೆಯ ಆಟ'ವಾಗಿ ಇಂದು ನಮ್ಮ ಜನಪದದಲ್ಲಿ ಬಂದಿದೆ. ಆದುದರಿಂದ ಈ ಆನೆಯ ಆಟಕ್ಕೆ ಬಿಜಾಪುರದ ಅಲ್ಲೀ ಆದಿಲ್‌ಶಾನೆ ಮೂಲ ಕಾರಣನೆಂದೂ, ಅವನು ಸತ್ತ ನಂತರ ಮಕ್ಕಳಿಗೆ ಹೆದರಿಕೆ ಹಾಕಲು ಜನರು ವಿಜಾಪುರದ ಆನೆಯು ಬಂತೆಂದು ಅಂಜಿಸಿ, ಹಾಡಿ ಮಕ್ಕಳನ್ನು ಆಡಿಸುತ್ತ ಬಂದಿರುವರು."[22] ಹೀಗೆ ಡಾ. ಬಿ.ಎಸ್. ಗದ್ದಗಿಮಠ ಅವರು "ಬಿಜಾಪುರದವರು ವಿಜಯನಗರವನ್ನು ಗೆದ್ದ ಘಟನೆಯನ್ನು ಈ ಹಾಡು ಹೇಳುತ್ತದೆ" ಎಂದು ಭಾವಿಸಿರುವರು.

ಇದೇ ಹಾಡನ್ನು ಫ.ಗು. ಸಿದ್ದಾಪುರ[23] ಎಂಬುವರು 'ಯಾವುರಾನೆ?', ವಿಜಾಪೂರಾನೆ! ಎಂಬ ಮಕ್ಕಳ ಕಥೆಯಲ್ಲಿ ಈ ರೀತಿ ಹೇಳುತ್ತಾರೆ.

"ಆನಿ ಬಂತಾನಿ
ಯಾವೂರಾನಿ?
ಇಜಾಪುರ ಆನಿ
ಇಲ್ಲಿಗ್ಯಾಕ ಬಂತು?
ಹಾದಿ ತಪ್ಪಿ ಬಂತು
ಹಾದಿಗೊಂದುಡ್ಡಾ
ಬೀದಿಗೊಂದುಡ್ಡಾ
ಆದ ದುಡ್ಡ ಕೊಟ್ಟು
ಸೇರ ಖೊಬ್ರಿ ತಂದು
ಲಟ ಲಟ ಮುರದು

ಚಿಕ್ಕೋಳ ಕೈಯಾಗ ಕೊಟ್ರು
ಚಿಗರಿ ಚಿಗರಿ ಚಿಕ್ಕಪ್ಪ
ನಿಮ್ಮೂರ ಹೆಸರ ಹೇಳಪ್ಪ?[24]

ಈ ಹಾಡಿನ ಅರ್ಥವನ್ನು ಫ.ಗು. ಸಿದ್ದಾಪುರ ಅವರು ಹೀಗೆ ಹೇಳುತ್ತಾರೆ: "ವಿಜಯನಗರ ವೈಭವವು ದೇಶ ವಿದೇಶಗಳಲ್ಲೂ ಹರಡಿತು. ಇದನ್ನೆಲ್ಲಾ ಕೇಳಿದ ಬಹಮನಿ ಅರಸರು ವಿಜಯನಗರದ ಮೇಲೆ ಕಣ್ಣಿಟ್ಟರು. ಬಹಳ ದಿನಗಳಿಂದಲೂ ಬಹಮನಿಗಳಿಗೂ ವಿಜಯನಗರದ ಅರಸರಿಗೂ ವೈರತ್ವ ಇತ್ತು. ಆದರೆ ವಿಜಯನಗರದ ಸೈನ್ಯವು ಪ್ರಬಲವಿದ್ದುದರಿಂದ ಅವರನ್ನು ಸೋಲಿಸಲಾಗಲಿಲ್ಲ. ಕೊನೆಗೆ ಸಮಯವನ್ನು ಸಾಧಿಸಿದ ಬಿಜಾಪುರದ ಅಲಿ ಆದಿಲ್‌ಷಾ, ಅಹಮ್ಮದ ನಗರದಹುಸೇನ ನಿಜಾಮ್ ಷಾ, ಗೋಲ್ಕೊಂಡದ ಇಬ್ರಾಹಿಮ್ ಕುತುಬ್ ಷಾ, ಬೀದರ್‌ದ ಅಲಿ ಬರಿದ್ ಷಾ ಒಗ್ಗಟ್ಟಾಗಿ ವಿಜಯನಗರದ ಮೇಲೆ ದಂಡೆತ್ತಿ ಬಂದರು. ರಕ್ಕಸಗಿ–ತಂಗಡಗಿ ಬಳಿ ಯುದ್ಧ ಪ್ರಾರಂಭವಾಯಿತು. ಪ್ರಾರಂಭದಲ್ಲಿ ವಿಜಯನಗರ ಸೈನ್ಯಕ್ಕೆ ಗೆಲುವಾಗಲಾರಂಭಿಸಿತು. ಆದರೆ ರಾಮರಾಯನ ಸೈನ್ಯದಲ್ಲಿದ್ದ ಮುಸಲ್ಮಾನರೂ ಅಧಿಕಾರಿಗಳಿಬ್ಬರ ಆದಿಲ್‌ಶಾಹಿಗಳ ಗುಂಪು ಸೇರಿದರು. ರಾಮರಾಯನ ಸೈನ್ಯದಲ್ಲಿ ಕೋಲಾಹಲವೆದ್ದಿತು. ಇದೇ ಸಮಯವನ್ನು ಸಾಧಿಸಿದ ಶತ್ರು ಸೈನಿಕನೊಬ್ಬನು ಅಳಿಯ ರಾಮರಾಯನ ಶಿರವನ್ನು ಕತ್ತರಿಸಿದನು. ವಿಜಯನಗರದ ಸೈನ್ಯಕ್ಕೆ ಆ ಶಿರವನ್ನು ಭರ್ಚಿಯಿಂದ ಮೇಲೆತ್ತಿ ತೋರಿಸಿದುದೇ ತಡ, ವಿಜಯನಗರದ ಸೈನ್ಯವು ದಿಕ್ಕುಪಾಲಾಗಿ ಓಡಿಹೋಯಿತು. ಆಗ ಆದಿಲ್‌ಶಾಹಿಗಳು ವಿಜಯನಗರವನ್ನು ಗೆದ್ದರು. ವೈರಿಗಳ ಕೈ ಮೇಲಾಗಿ ಸಂಪದ್ಭರಿತವಾದ ವಿಜಯನಗರ ಸಾಮ್ರಾಜ್ಯ ಲೂಟಿಯಾಯಿತು. ಬೇರೆ ಬೇರೆಯವರು ಮುತ್ತು–ರತ್ನ, ವಜ್ರ–ವೈಢೂರ್ಯವನ್ನು ಬಳಿದುಕೊಂಡು ಹೋದರು. ವೈರಿಗಳ ಆನೆ, ಕುದುರೆ, ಒಂಟೆಗಳು ದಾರಿ ತಪ್ಪಿಸಿಕೊಂಡು ಧಿಕ್ಕೆಟ್ಟು ಓಡಿದವು. ಅವುಗಳ ಬೆನ್ನ ಮೇಲೆ ಹೇರಿದ್ದ ಮುತ್ತು–ರತ್ನ, ನಗ–ನಾಣ್ಯ ಹಾದಿ ಹಾದಿಗೆ ಬಿದ್ದವು. ಜನರು ಈ ನಗ–ನಾಣ್ಯಗಳನ್ನು ತುಂಬಿಕೊಂಡು ಈ ರೀತಿ ಹಾಡಿದರು"[25]

ಮತ್ತೇ ರಾಯಚೂರು, ಯಾದಗಿರಿ, ಕೊಪ್ಪಳ ಭಾಗದಲ್ಲಿ ಹಾಡನ್ನು ಯಥಾರೀತಿಯಾಗಿ ಹಾಡುತ್ತಾ, ಕೊನೆಯ ಎರಡು ಸಾಲುಗಳನ್ನು ಮಾತ್ರ ಬದಲಾಯಿಸಿದ್ದಾರೆ. ಅಂದರೆ ಡಾ. ಗದ್ದಗಿಮಠರು ಹೇಳಿದ:

"ಯವನರ ಕೈಯಾಗ ಕೊಟ್ಟು; ಚಕ್ರಬಾಯಾನ ಗುಂಡು,
ಕೆಳಗ ಬಿದ್ದರ ತುಂಡು"

ಹಾಗೂ ಸಿದ್ದಾಪುರ ಅವರು ಹೇಳಿದ,

"ಚಿಕ್ಕೋಳ ಕೈಯಾಗ ಕೊಲೊಟ್ಟು
ಚಿಗರಿ ಚಿಗರಿ ಚಿಕ್ಕಪ್ಪ
ನಿಮ್ಮೂರ ಹೆಸರ ಹೇಳಪ್ಪ?"

ಈ ಇಬ್ಬರೂ ಹೇಳುವ ಈ ನುಡಿಗಳ ಬದಲಾಗಿ,

"ಚಿಕ್ಕರ ಕೈಯಾಗ ಕೊಟ್ಟು
ಲಟ ಲಟ ಮುರಿದು
ಕಪ ಕಪ ತಿಂದು" ಎಂದು ಹಾಡುವರು.

ಇದರ ಅರ್ಥ "ಬಿಜಾಪುರದ ಅರಸನು ದರ್ಪಿಷ್ಟನೂ, ಕ್ರೂರಿಯೂ ಆಗಿದ್ದನು. ಆತನನ್ನು ಕಂಡು ಜನರು ಹೆದರುತ್ತಿದ್ದರು. ಆತ ಹೊರಗಡೆ ಹೊರಟರೆ ಅಲ್ಲಿ ಯಾರೂ ಸುಳಿಯುತ್ತಿರಲಿಲ್ಲ. ಹೆದರಿಕೊಂಡು ಮನೆಯೊಳಗೆ ಓಡಿ ಹೋಗುತ್ತಿದ್ದರು. ಆದರೆ ಒಂದು ಸಲ ಅರಸನು ಬೀದಿಯ ಮೇಲೆ ಹೊರಟಾಗ ಮಹಿಳೆಯೊಬ್ಬಳು ಅಂಗಳದಲ್ಲಿ ಮಗುವನ್ನು ಆಡಿಸುತ್ತಿದ್ದಳು. ಆಕೆ ಅರಸನಿಗೆ ಹೆದರದೇ, ಅಂಗಳದಲ್ಲಿಯೇ ಇದ್ದು ಆತನ ಕೃತ್ಯಗಳನ್ನು ಹಂಗಿಸಿ ಸೇಡನ್ನು ತೀರಿಸಿಕೊಳ್ಳಲು ಈ ಹಾಡನ್ನು ತನ್ನ ಮಗನಿಗೆ ಹೇಳುತ್ತಾಳೆ." ಇದರ ಅರ್ಥ ಆಕೆ ಹೇಳುವುದು ಹೀಗೆ, "ಆನೆ ಬಂದಿತು, ಇದು ಬಿಜಾಪುರದ ಮದದ ಆನೆ. ಕೆಲಸವಿಲ್ಲದೇ ದಾರಿ ತಪ್ಪಿ ಆಕಡೆ ಈಕಡೆ ತಿರುಗಾಡುತ್ತಿದೆ. ಇದಕ್ಕೆ ನಾವು ದುಡ್ಡನ್ನು ಭಿಕ್ಷೆ ಹಾಕೋಣ. ಈ ಭೀಕ್ಷೆಯ

ಹಣದಿಂದ ಕೊಬ್ಬರಿಯನ್ನು ತರೋಣ. ಆ ಕೊಬ್ಬರಿಯನ್ನು ಚಿಕ್ಕ ಮಕ್ಕಳ ಕೈಯಲ್ಲಿ ಕೊಡೋಣ. ಮಕ್ಕಳು ಆ ಕೊಬ್ಬರಿಯನ್ನು ಲಟ ಲಟ ಮುರಿದು, ಕಪ ಕಪ ಎಂದು ತಿಂದರೂ ನನ್ನ ಸಿಟ್ಟು ಹೋಗಲಾರದು." ಎಂಬ ಅರ್ಥವಿರುವುದನ್ನು ಗಮನಿಸಬಹುದಾಗಿದೆ. ಹೀಗೆ ಪ್ರಾದೇಶಿಕವಾಗಿ ಈ ಹಾಡು ವಿಭಿನ್ನವಾದ ಅರ್ಥವನ್ನು ಪಡೆಯುತ್ತದೆಯಾದರೂ ಇದು ಆದಿಲ್‌ಶಾಹಿಗಳ ಆಳ್ವಿಕೆಯಿಂದ ಜನಸಾಮಾನ್ಯರಿಗಾದ ತೊಂದರೆಯನ್ನು ಅರುಹುತ್ತದೆ. ಈ ಕುರಿತಾಗಿ ಪ್ರತ್ಯೇಕವಾಗಿ ವಸ್ತುನಿಷ್ಠವಾದ ಸಂಶೋಧನೆಯಾಗುವ ಅವಶ್ಯಕತೆ ಇದೆ. ಈ ಆಟಗಳು ವಿಜಯನಗರ ಮತ್ತು ಆದಿಲ್‌ಶಾಹಿಗಳೊಂದಿಗೆ ತಳುಕು ಹಾಕಿಕೊಂಡಿವೆ.

ಕೆಲವು ಗಾದೆ ಮಾತುಗಳೂ ಸಹ ಆನೆಗೊಂದಿ, ಹಂಪಿ ಹಾಗೂ ವಿಜಯನಗರದ ಕುರಿತಾಗಿವೆ. ಅಲ್ಲಲ್ಲಿ ಗ್ರಾಮೀಣ ಜನತೆಯ ಬಾಯಲ್ಲಿ ಇಂದಿಗೂ ಪ್ರಚಲಿತದಲ್ಲಿದೆ. ಸಾಂದರ್ಭಿಕವಾಗಿ ಈ ಗಾದೆ ಮಾತುಗಳನ್ನು ಬಳಸುವರು.

"ಅಂದಕ್ಕೆ ಆನೆಗೊಂದಿ, ಚೆಂದಕ್ಕೆ ವಿಜಯನಗರ", ಆನೆಗೊಂದಿಯು ಅಂದಕ್ಕೆ ಹೆಸರಾದುದಾದರೆ, ವಿಜಯನಗರವು ಚೆಂದಕ್ಕೆ ಹೆಸರಾದುದು ಎಂಬುದು. ಇದು ಅಲ್ಲಿಯ ಕಲೆ ಮತ್ತು ವಾಸ್ತುಶಿಲ್ಪಕ್ಕೆ ಸಂಬಂಧಿಸಿದ ಸಂಗತಿಯಾಗಿದೆ. "ರಾಮರಾಯನ ಕತ್ತಿ ಕುಣದೀತು ರಣದಲ್ಲಿ" ಎಂಬ ಮಾತು ತಾಳಿಕೋಟೆ ಕಾಳಗದಲ್ಲಿ ರಾಮರಾಯನ ಹೋರಾಟವನ್ನು ತಿಳಿಸುತ್ತದೆ. "ಅಳಿಯ ಮನೆ ತೊಳೆಯ" ಎಂಬ ಗಾದೆ ಮಾತೂ ಸಹ ಅಳಿಯ ರಾಮರಾಯನಿಗೆ ಸಂಬಂಧಿಸಿದುದು. ಸದಾಶಿವರಾಯನು ಹೆಸರಿಗೆ ಮಾತ್ರ ಅಧಿಕಾರದಲ್ಲಿದ್ದು, ಈತನು ಅಳಿಯ ರಾಮರಾಯನಿಗೆ ಸಂಪೂರ್ಣ ಅಧಿಕಾರವನ್ನು ನೀಡಿದಾಗ ರಾಮರಾಯನು ವಿಜಯನಗರವನ್ನೇ ಹಾಳುಮಾಡಿದ ಎಂಬ ಅರ್ಥದ ಹಿನ್ನಲೆಯಲ್ಲಿ ಈ ಗಾದೆಮಾತನ್ನು ಬಳಸಲಾಗಿದೆ. "ಅಳಿಯನಿಗೆ ಅಧಿಕಾರ ಕೊಟ್ಟರೆ, ಅವನು ಮನೆಯನ್ನು ಹಾಳು ಮಾಡುತ್ತಾನೆ" ಎಂಬ ಭಾವಾರ್ಥ ಇದರದ್ದು. ರಾಮರಾಯನು ಅಧಿಕಾರ ಕಳೆದುಕೊಂಡ ನಂತರ ಈ ಹಾಡು ಹುಟ್ಟಿಕೊಂಡಿರುವ ಸಾಧ್ಯತೆ ಇದೆ. ರಾಮರಾಯನ ಮರಣದ ನಂತರದ ವ್ಯವಸ್ಥೆಯ ಕುರಿತಾಗಿ "ರಾಮರಾಯ ಸತ್ತಾಗ ಆದ ಹಾವಳಿ ಆದ್ಹಂಗ ಆಗೈತಿ ನೋಡು" ಮತ್ತು ಕೆಲವು ಕಡೆ 'ರಾಯ ಸತ್ತ ಹಾವಳಿ' ಎಂಬ ಮಾತೂ ಇದೆ. ಅಂದಿನ ಅವ್ಯವಸ್ಥಿತವಾದ ಸಾಮಾಜಿಕ ಜೀವನ, ದರ್ಪದ ವಾತಾವರಣ ನಿರ್ಮಾಣವಾಗಿ ಇಡೀ ವ್ಯವಸ್ಥೆಯು ತಲ್ಲಣಗೊಂಡಿತು. ಕೆಲವರ ಹಾವಳಿ ಹೆಚ್ಚಾಯಿತು.

"ಕಣ್ಣಿದ್ದರ ಕನಕಗಿರಿ ನೋಡು,

ಕಾಲಿದ್ದರ ಹಂಪಿ ನೋಡು"[26] ಎಂಬ ಗಾದೆ ಮಾತು ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಕನಕಗಿರಿಯಲ್ಲಿಯ ಸ್ಮಾರಕಗಳ ಕಲೆ ಮತ್ತು ವಾಸ್ತುಶಿಲ್ಪದ ಲಕ್ಷಣಗಳ ಕುರಿತಾಗಿ ಹೇಳುತ್ತದೆ. ಅಲ್ಲಿಯ ಅನೇಕ ಸ್ಮಾರಕಗಳಲ್ಲಿಯ ಸುಂದರವಾದ ಸೂಕ್ಷ್ಮಾತಿಸೂಕ್ಷ್ಮವಾದ ಕುಸುರಿ ಕಲೆ ಮತ್ತು ವಾಸ್ತುಶಿಲ್ಪದ ಶ್ರೀಮಂತಿಕೆಯನ್ನು ತಿಳಿಸಿದರೆ, 'ಕಾಲಿದ್ದರೆ ಹಂಪಿ ನೋಡು' ಎನ್ನುವುದು ಹಂಪಿಯಲ್ಲಿರುವ ಸ್ಮಾರಕಗಳನ್ನು ನೋಡಲು ಅನೇಕ ದಿನಗಳೇ ಬೇಕು. ಜೊತೆಗೆ ತಿರುಗಾಡಲು ತಾಕತ್ತೂ ಬೇಕು. ಅಷ್ಟು ಪ್ರಮಾಣದಲ್ಲಿ ಸ್ಮಾರಕಗಳಿರುವ ಕುರಿತಾಗಿ ಹೇಳಲು ಈ ಗಾದೆ ಮಾತು ಹುಟ್ಟಿಕೊಂಡಿರಬೇಕು. ಹಂಪೆಯನ್ನು ಎಷ್ಟು ನೋಡಿದರೂ ಅದು ಮುಗಿಯದು, ಅದರ ವ್ಯಾಪ್ತಿಯನ್ನೂ ತಿಳಿಸುತ್ತದೆ.

ಹಂಪಿಯು ಹಾಳಾದ ಕುರಿತಾಗಿ ಸಾಕಷ್ಟು ಗಾದೆಮಾತುಗಳು ಜನರ ನಾಲಿಗೆಯ ಮೇಲೆ ಹರಿದಾಡುತ್ತಿವೆ. ಅವುಗಳಲ್ಲಿ:

"ಪಡದವರಿಗೆ ಫಲ ಪೂಜಾ

ಪಾಪಿಗೆ ಹಂಪಿ ಪೂಜಾ"[27] ಹಂಪಿ ಹಾಳಾಗಿರುವುದರಿಂದ ಅದನ್ನು ಪಾಪಿಯಾದವನೆ ಪೂಜೆ ಮಾಡಬೇಕು. ಏಕೆಂದರೆ ಮುಕ್ಕಾದ (ಕೆಲವು ಭಾಗ ಒಡೆದು ಹೋಗಿರುವುದು) ವಸ್ತುವಿಗೆ ಬೆಲೆಯಿಲ್ಲ. ಅವುಗಳು ಅಪಶಕುನವೆಂಬ ಭಾವನೆ ಇದೆ. ಹೀಗಾಗಿ ಇಲ್ಲಿಯ ಸ್ಮಾರಕಗಳು ಮುಕ್ಕಾಗಿರುವುದರಿಂದ ಅವುಗಳನ್ನು ಪೂಜಿಸಿದರೂ ಫಲವಿಲ್ಲ ಎನ್ನುತ್ತದೆ ಈ ಗಾದೆ ಮಾತು.

"ಕಲ್ಲಿದ್ದಲ್ಲಿ ಹಕ್ಕಿಇಲ್ಲ

ಹಂಪ್ಯಾಗ ಕಾಗಿ ಇಲ್ಲ,"[28] ಇದು ಸಹ ಹಂಪಿಯು ಅವಸಾನವಾದಾಗ ಕಾಗೆಯೂ ಇಲ್ಲಿ ನೆಲಸಲಿಲ್ಲ. ಹಂಪಿಯಲ್ಲಿ ಪಶು–ಪಕ್ಷಿಗಳು ಸಹ ವಾಸವಾಗಲ್ಲಿಲ್ಲ. ಅವುಗಳಿಗೂ ಆಸ್ಪದವಿಲ್ಲ ದಂತಾಯಿತು.

"ಹಂಪ್ಯಾಗ ಇರೋದಕ್ಕಿಂತ

ಕೊಂಪ್ಯಾಗ ಇರೋದ ಚೊಲೋ" ಹಾಳಾದ ಹಂಪಿಯಲ್ಲಿ ಇರುವುದಕ್ಕಿಂತ, ಕಸಕಡ್ಡಿಗಳ ರಾಶಿಯಲ್ಲಿರುವುದು ಎಷ್ಟೋ ವಾ. ಈ ಹಂಪಿಯು ಕೊಂಪೆಗಿಂತ ಹೆಚ್ಚು ಹಾಳಾಗಿದೆ; ಅಸ್ತವ್ಯಸ್ತವಾಗಿದೆ ಎನ್ನುತ್ತದೆ ಈ ಗಾದೆ ಮಾತು.

"ಲೂಟಿ ಮಾಡಿದ್ರ ಹಂಪಿಲೂಟಿ

ಮಾಡದ್ಹಂಗ ಮಾಡಬೇಕು", ಹಂಪಿಯ ಲೂಟಿಯು ವ್ಯವಸ್ಥಿತವಾಗಿ ಆಗಿರುವಂಥದ್ದು. ಅಲ್ಲದೇ ಈ ಲೂಟಿಯಾದ ಮೇಲೆ ಮತ್ತೇ ಲೂಟಿಮಾಡಲು ಯಾವುದೇ ವಸ್ತು ಉಳಿಯಲಿಲ್ಲ, ಎಲ್ಲವೂ ಬರಿದಾಯಿತು; ಸ್ವಚ್ಚವಾಯಿತು ಎಂಬ ಸೂಚನೆಯು ಸಿಗುತ್ತದೆ.

"ಗೆದ್ದರ ಅರಮನೆ ಕಟ್ಟುತ್ತೀನಿ

ಸೋತರ ಹಂಪ್ಯಾಗ ಮಂಟಪ ಸೇರುತೀನಿ"[29] ಇದು ಇತ್ತೀಚಿನ ರಾಜಕೀಯ ಕ್ಷೇತ್ರದಲ್ಲಿ ಬಳಕೆಯಾಗುವ ಗಾದೆ ಮಾತು. "ಚುನಾವಣೆಯಲ್ಲಿ ಗೆದ್ದರೆ ಅರಮನೆಯನ್ನೇ ಕಟ್ಟುತ್ತೇನೆ. ಸೋತರೆ ಹಂಪಿಯಲ್ಲಿರುವ ಮಂಟಪವನ್ನು ಸೇರುತ್ತೇನೆ" ಎನ್ನುತ್ತಾರೆ. ಅದು ಹಾಳು ಜೀವನ, ಉಪಯೋಗಿವಿಲ್ಲದ್ದು. ಅದರಿಂದ ಏನೂ ಪ್ರಯೋಜನವಿಲ್ಲ. ಭಾವೀ ರಾಜಕೀಯದಲ್ಲಿ ಸನ್ಯಾಸವನ್ನು ಸ್ವೀಕರಿಸುತ್ತೇನೆ ಎಂಬ ಭಾವನೆಯನ್ನು ಸೂಚಿಸುತ್ತದೆ. ಇಲ್ಲಿ ರಾಜಕೀಯ ಜೀವನವನ್ನು ಹಂಪೆಯ ಹಾಳಾದ ಮಂಟಪಕ್ಕೆ ಹೋಲಿಸುವುದು ವಿಶೇಷವಾಗಿದೆ.

ಹೀಗೆ ವಿಜಯನಗರದ ಕುರಿತಾಗಿ ದೊರೆತ ಜನಪದ ಸಾಹಿತ್ಯವು ಆನೆಗೊಂದಿ, ಹಂಪಿ, ಹಂಪಿಯ ಪರಿಸರ, ಹಂಪಿಹೊಳೆ, ಹಂಪಿಯ ಸ್ಮಾರಕಗಳು, ಇವುಗಳ ಭವ್ಯತೆ ಹಾಗೂ ಅವಸಾನದ ಕುರಿತಾಗಿ ಮಾತನ್ನಾಡುತ್ತದೆ. ಅಲ್ಲದೆ ವಿರುಪಾಕ್ಷ ಮತ್ತು ಇತರ ದೇವತೆಗಳು, ರಾಮರಾಯನ ವ್ಯಕ್ತಿತ್ವ, ತಾಳಿಕೋಟೆ ಕದನ, ಆದಿಲ್‌ಶಾಹಿಗಳು ಮತ್ತು ವಿಜಯನಗರದ ಅರಸರ ನಡುವಿನ ಸಂಘರ್ಷ, ವಿಜಯನಗರದ ಅವನತಿಯ ನಂತರದ ಸ್ಥಿತಿಗತಿಯ ಕುರಿತಾದ ಮಾಹಿತಿಯನ್ನು ಒದಗಿಸುತ್ತದೆ. ವಿಜಯನಗರದ ಅರಸರಲ್ಲಿ ರಾಮರಾಯನನ್ನು ಹೊರತುಪಡಿಸಿ, ಉಳಿದ ಅರಸರ ಕುರಿತಾಗಿ ಜಾನಪದ ಸಾಹಿತ್ಯ ಹುಟ್ಟಲಿಲ್ಲವೇಕೆ? ಎಂಬ ಪ್ರಶ್ನೆ ಏಳುವುದು ಸಹಜ. ಬಹುಶಃ ಈ ಅರಸರು ಜನಸಾಮಾನ್ಯರ ಸಂಪರ್ಕದಿಂದ ದೂರ ಉಳಿದರಬಹುದಾದ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ. ಸಂಶೋಧಕರು ಈ ಕಡೆ ಲಕ್ಷ್ಯವಹಿಸಬೇಕಾಗಿದೆ.

ಹಂಪಿ ಅಥವಾ ವಿಜಯನಗರದ ಕುರಿತಾಗಿ ಸಮಗ್ರವಾದ ಪದ್ಯಗಳು ಇಲ್ಲಿಯವರೆಗೂ ಸಿಕ್ಕಿಲ್ಲ. ಆದರೆ ಕೆಲವು ಬೇರೆ ಬೇರೆ ಹಾಡುಗಳಲ್ಲಿ ಉಲ್ಲೇಖವಾಗಿರುವುದೇ ಹೆಚ್ಚು. ಅಲ್ಲದೇ ಇಂದಿಗೂ ಗ್ರಾಮೀಣ ಭಾಗದಲ್ಲಿ ಇಂಥ ಜಾನಪದ ಹಾಡುಗಳು ಮತ್ತು ಗಾದೆಗಳು ಸಿಗುತ್ತವೆ. ಆದಷ್ಟು ತೀವ್ರದಲ್ಲಿ ಸಂಗ್ರಹಿಸುವ ಕಾರ್ಯವಾಗಬೇಕು. ಕಾರಣ ಇವುಗಳನ್ನು ಹೇಳುವ ಹಳೆಯ ತಲೆಮಾರಿನ ಹಿರಿಯರು ನಮ್ಮ ಮಧ್ಯೆ ಬಹಳಷ್ಟು ದಿನಗಳ ಕಾಲ ಉಳಿಯಲಾರರು. ಹೀಗಾಗಿ ಈ ಸಾಹಿತ್ಯವನ್ನು ತುರ್ತಾಗಿ ಸಂಗ್ರಹಿಸುವ, ವಸ್ತುನಿಷ್ಠವಾಗಿ ವಿಶ್ಲೇಷಿಸುವ ಕಾರ್ಯವಾಗಬೇಕಾಗಿದೆ.

ಆಧಾರಸೂಚಿ ಮತ್ತು ಟಿಪ್ಪಣಿಗಳು

1. ಡಾ. ಪುರುಷೋತ್ತಮ ಬಿಳಿಮಲೆ ಮತ್ತು ಚೆಲುವರಾಜು, **ಹಂಪಿ ಜಾನಪದ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 1996, ಪುಟ–29
2. ಅದೇ, ಪುಟ–32
3. ಅದೇ, ಪುಟ–39
4. ಅದೇ, ಪುಟ–39
5. ಲಕ್ಷ್ಮಣ್ ತೆಲಗಾವಿ, **ಜನಪದ ವೀರ ಸಾಹಿತ್ಯ: ಚಾರಿತ್ರಿಕ ವಿಶ್ಲೇಷಣೆ, ಹರತಿಸಿರಿ,** ವಾಲ್ಮೀಕಿ ಸಾಹಿತ್ಯ ಸಂಪದ, 1987, ಪುಟ–963

6. ಅದೇ, ಪುಟ–979–980.
7. ಡಾ. ಪುರುಷೋತ್ತಮ ಬಿಳಿಮಲೆ ಮತ್ತು ಚೆಲುವರಾಜು, ಪೂರ್ವೋಕ್ತ, 1996, ಪುಟ–54
8. ಅದೇ, ಪುಟ–52
9. ಅದೇ, ಪುಟ–54
10. ಅದೇ, ಪುಟ–39 ಮತ್ತು 141
11. ಡಾ. ಬಿ.ಎಸ್. ಗದ್ದಗಿಮಠ, **ಕನ್ನಡ ಜಾನಪದ ಗೀತೆಗಳು,** ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ,1986, ಪುಟ–170.
12. ವೀರನಾಯಕ ಹೆಚ್.ವಿ.(ಸಂ.), **ವಾಲ್ಮೀಕಿ,** ಸ್ಮರಣ ಸಂಚಿಕೆ, ಅಖಿಲ ಕರ್ನಾಟಕ ಜನಾಂಗದ ದ್ವಿತೀಯ ಮಹಾಸಮ್ಮೇಳನ, ದಾವಣಗೆರೆ, 18–3–1973, ಪುಟ–1
13. ಶ್ರೀ ವೆಂಕೋಬ ಭೀಮಣ್ಣ ತಳವಾರ, ಸಾ॥ ಸರ್ಜಾಪುರ, ತಾ: ಲಿಂಗಸೂಗೂರು, ಜಿ: ರಾಯಚೂರ ಇವರ ಭಜನಾ ಹಾಡುಗಳಿಂದ ಸಂಗ್ರಹಿಸಲಾಗಿದೆ.
14. ಡಾ.ಎಂ.ಎನ್.ವಾಲಿ, ಜಾನಪದ ವಿದ್ವಾಂಸರು, ವಿಜಯಪುರ ಇವರು ಹಾಡುವರು.
15. ಡಾ. ಬಿ. ಎಸ್. ಗದ್ದಗಿಮಠ, ಪೂರ್ವೋಕ್ತ, ಪುಟಗಳು– 52–53
16. ಅದೇ, ಪುಟ–52
17. ಡಾ. ಬಸವಲಿಂಗ ಸೊಪ್ಪಿಮಠ, ಆಕರ ಸಂಪುಟ– 2, ರಾಯಚೂರು ಜಿಲ್ಲಾ ಐದನೆಯ ಕನ್ನಡ ಸಾಹಿತ್ಯ ಸಮ್ಮೇಳನ, ಲಿಂಗಸೂಗೂರು, ಜಿ: ರಾಯಚೂರು, 1998, ಪುಟ– 85
18. ಅದೇ, ಪುಟ–85
19. ಅದೇ, ಪುಟ–85–87
20. ಅದೇ, ಪುಟ–87
21. ಡಾ. ಬಿ. ಎಸ್. ಗದ್ದಗಿಮಠ, ಪೂರ್ವೋಕ್ತ, 1986 ಪುಟ–50
22. ಅದೇ, ಪುಟ–50–51
23. ಫ.ಗು.ಸಿದ್ದಾಪುರ, ಯಾವೂರಾನೇ, ವಿಜಾಪುರಾನೆ! ಮಕ್ಕಳ ಕಥೆಗಳು, ಮಲ್ಲಿಕಾರ್ಜುನ ಪ್ರಕಾಶನ, ಚಂದನ, ಮುಳವಾಡ, 1999 ಪುಟ– 5
24. ಅದೇ, ಪುಟ–5–6
25. ಅದೇ, ಪುಟ–6–8
26. ಡಾ. ಪುರುಷೋತ್ತಮ ಬಿಳಿಮಲೆ ಮತ್ತು ಚೆಲುವರಾಜು, ಪೂರ್ವೋಕ್ತ, 1996 ಪುಟ–87
27. ಅದೇ, ಪುಟ–87
28. ಅದೇ, ಪುಟ–87
29. ಅದೇ, ಪುಟ–87

20. ಶ್ರೀಕೃಷ್ಣದೇವರಾಯನ ಬಿಜ್ಜಾವರ ಬಂಡೆಗಲ್ಲು ಶಾಸನ

– ಪ್ರೊ. ಡಿ.ವಿ. ಪರಮಶಿವಮೂರ್ತಿ

ತುಮಕೂರು ಜಿಲ್ಲೆಯ ಮಧುಗಿರಿ ತಾಲೂಕಿನ ಬಿಜ್ಜಾವರ ಗ್ರಾಮದಲ್ಲಿ ವೀರಭದ್ರದೇವಾಲಯದ ಹಿಂಭಾಗದಲ್ಲಿ ಸಮುದಾಯ ಭವನ ನಿರ್ಮಾಣ ಮಾಡಲು ಬುನಾದಿ ತೋಡುವಾಗ ಸುಮಾರು ನಾಲ್ಕು ಅಡಿ ಆಳದಲ್ಲಿ ಶಾಸನವಿರುವ ಬಂಡೆಗಲ್ಲು ಗೋಚರಿಸಿದೆ. ಇದುವರೆಗೂ ಬೆಳಕಿಗೆ ಬಾರದೇ ಇದ್ದ ಈ ಶಾಸನವು ಸುಮಾರು ನಾಲ್ಕು ಅಡಿ ಅಗಲ ಮತ್ತು ಏಳು ಅಡಿ ಉದ್ದವಾಗಿದ್ದು ಎಂಟು ಸಾಲು ಬರೆಹವಿದೆ. ಮಧುಗಿರಿ ತಹಶೀಲ್ದಾರರಾದ ಶ್ರೀ ಅನಂತರಾಮು ಅವರ ಒತ್ತಾಸೆಯ ಫಲವಾಗಿ ನಾವು ಅಲ್ಲಿಗೆ ಭೇಟಿನೀಡುವ ವೇಳೆಗಾಗಲೆ ಗ್ರಾಮದ ಕೆಲವು ಆಸಕ್ತರು ಅಕ್ಷರಗಳಿಗೆ ಹಸಿರು ಬಣ್ಣವನ್ನು ಬಳಿದು ಅಂದಗೆಡಿಸಿದ್ದರು.

ವಿಜಯನಗರದ ಅರಸನಾದ ಶ್ರೀಕೃಷ್ಣದೇವರಾಯನ ಅವಧಿಯ ಸರಳವಾದ ಭಾಷೆಯ ಈ ಶಾಸನದ ಲಿಪಿಯು ಬಹಳ ಸ್ಪಷ್ಟವಾಗಿದ್ದು ಲಿಪಿವಿನ್ಯಾಸ ಸುಂದರವಾಗಿದೆ. ಶಾಸನದಲ್ಲಿ ಕಾಲವನ್ನು ಸ್ವಸ್ತಿ ಶ್ರೀ ಜಯಾಭ್ಯುದಯ ಶಾಲಿವಾಹನ ಶಕವರುಷಗಳು 1436 ನೆಯ ಶ್ರೀಮುಖ ಸಂವತ್ಸರದಚಯಿತ್ರ ಬ 10 ಲೂ ಎಂದು ನೀಡಿದ್ದು ಇದು ಕ್ರಿಸ್ತಶಕೆ 1513, ಏಪ್ರಿಲ್ 1, ಶುಕ್ರವಾರಕ್ಕೆ ಸರಿಹೊಂದುತ್ತದೆ. ಈ ಕಾಲದಲ್ಲಿ ವಿಜಯನಗರ ಸಾಮ್ರಾಜ್ಯದಅರಸನಾದ ಶ್ರೀಕೃಷ್ಣದೇವರಾಯನು ಜನರಿಗೆ ವಿಧಿಸಲಾಗಿದ್ದ ಮದುವೆಯ ಸುಂಕವನ್ನು ಲೋಕೋಪಕಾರವಾಗಿವಿನಾಯಿತಿ ನೀಡುತ್ತಾನೆ. ಈ ಸಮಯದಲ್ಲಿ ಬಿಜ್ಜಾವರದಗೌಡನಾದ ಸೋಮಗೌಡರ ಮಗನಾದಅಜೇಯ ಸಿಂಗಗೌಡನು, ಶಾನುಭೋಗನಾದ ಆಹೋಬಲದೇವಗಳ ಮಗನಾದ ಮುತ್ತಯ್ಯದೇವರಸನೆಂಬುವನುಇರುತ್ತಾರೆ. ಈ ಶಾಸನದ ವಿಶೇಷವೇನೆಂದರೆ ಈ ಶಾಸನವನ್ನು ರಾಯರ ಮುದ್ರೆಮನುಷ್ಯರು ಎಂದರೆ ಶ್ರೀಕೃಷ್ಣದೇವರಾಯನ ಮುದ್ರೆಮನುಷ್ಯರೇ ಬಂದು ಹಾಕಿಸಿದರೆಂದು ಉಲ್ಲೇಖವಿದೆ. ಈವರೆಗಿನ ಪ್ರಕಟಿತ ಶಾಸನಗಳಲ್ಲಿ ಸಿಕ್ಕದೇ ಇರುವ ಅಪರೂಪದ ಪದಪ್ರಯೋಗ ಇದಾಗಿದೆ. ಮುದ್ರೆಮನುಷ್ಯರುಎಂದರೆ ಶಾಸನವನ್ನು ಬರೆಸುವ ಅಥವಾ ಆಜ್ಞೆ ಹೊರಡಿಸುವಅಧೀಕೃತ ಅಧಿಕಾರಿಗಳು ಎಂದು ಹೇಳಬಹುದು. ಕೃಷ್ಣದೇವರಾಯನುಎರಡನೆಯ ಬಾರಿಗೆ ಪಟ್ಟಕ್ಕೆ ಬಂದ ನೆನಪಿಗೆ (ಕ್ರಿ.ಶ. 1513, ಮಾರ್ಚ್, 7/11) ಈ ಶಾಸನ ಹಾಕಿಸಲಾಗಿದೆ. ಮದುವೆ ಸುಂಕವನ್ನು ವಿನಾಯಿತಿ ಬಿಟ್ಟ ವಿಜಯನಗರ ಕಾಲದ ಅನೇಕ ಶಾಸನಗಳು ಕರ್ನಾಟಕದಲ್ಲಿ ದೊರೆತಿವೆ. ಈ ಶಾಸನದಿಂದ ಆ ಕಾಲದ ತೆರಿಗೆ ಪದ್ದತಿ, ಗೌಡ – ಶಾನುಭೋಗ ಪದ್ಧತಿ ಮತ್ತು ಶಾಸನ ಹಾಕಿಸಲು ಮುದ್ರೆಮನುಷ್ಯರು ಇರುತ್ತಿದ್ದ ಸಂಗತಿ ಬೆಳಕಿಗೆ ಬಂದಿದೆ. ಅಲ್ಲದೆ ಈ ಶಾಸನದ ಆಧಾರದಿಂದ ಬಿಜಾವರ ಸ್ಥಳನಾಮದ ಇತಿಹಾಸ 503 ವರ್ಷಗಳಷ್ಟು ಹಿಂದಕ್ಕೆ ಹೋಗುತ್ತದೆ.

ಕಮ್ಮನಕೋಟೆ ಗ್ರಾಮದ ಹರಿಹರೇಶ್ವರ ದೇಗುಲದ ಬಳಿಯ ಶಾಸನದ ಪ್ರಕಾರಕ್ರಿಸ್ತಶಕ 1428 ರಲ್ಲಿ ಶಿವರಾತ್ರಿ ಪುಣ್ಯಕಾಲದಲ್ಲಿ ಬಿಜಾವರದ ವೀರಭದ್ರದೇವರ ಪೂಜಾರಿಯಾದ ಸಿಂಗಂಣಗಳಿಗೆ ಬಿಜಾವರದಕೆರೆಯ ಕೆಳಭಾಗದಲ್ಲಿ 500 ಅಡಕೆಮರಗಳ ಸ್ಥಳವನ್ನು, ಹಿರಿಯ ಕೆರೆಯ ಕೆಳಗೆ ಬಿದಿರಮೆಳೆ ಗದ್ದೆಯ ಬಳಿ ಹತ್ತುಖಂಡುಗ ಗದ್ದೆಯನ್ನೂ ವಾಮನಮುದ್ರೆಕಲ್ಲು

ನಿಲ್ಲಿಸಿ ದಾನ ನೀಡಲಾಗಿದೆ. ಅಲ್ಲದೆ ಬಿಜಾವರದ ಸೇನಬೋವನಾದರಾಮರಸ ಎಂಬುವನಿಗೆ ದಾದೆಗೊಂಡನಹಳ್ಳಿಗೆ ಆಹೋಬಳಪುರ ಎಂಬ ಪ್ರತಿ ಹೆಸರಿಟ್ಟುಅಗ್ರಹಾರವನ್ನಾಗಿ ಮಾಡಿಕೆರೆಯ ಕೆಳಗೆ 1000 ಅಡಕೆಯ ಮರದ ಸ್ಥಳವನ್ನು ದಾನವಾಗಿ ನೀಡಲಾಗಿದೆ. ಹಾಗೂ ಬಿಜಾವರದ ಸಿಂಗೇಗೌಡರ ಮಕ್ಕಳಾದ ರಾಮಗೌಡರಿಗೆಕೊಡುಗೆಯಾಗಿ ಮಧುಗಿರಿಹಳ್ಳಿ 1 ಮತ್ತು 2000 ಅಡಕೆಯ ಮರದ ಸ್ಥಳವನ್ನು ದಾನವಾಗಿ ನೀಡಿದ ವಿವರವಿದೆ. ಈ ಶಾಸನದಿಂದ ಬಿಜಾವರವು ಸುಮಾರು 600 ವರ್ಷಗಳಿಂದಲೂ ಪ್ರಸಿದ್ಧಿಪಡೆದ ಊರಾಗಿತ್ತೆಂದು, ಅಲ್ಲಿನ ವೀರಭದ್ರದೇವರಗುಡಿಗೂ ಅಷ್ಟೇ ವರ್ಷಗಳ ಇತಿಹಾಸವಿದೆಯೆಂದು ತಿಳಿದುಬರುತ್ತದೆ.


ಮಧುಗಿರಿ ತಾಲೂಕಿನ ದೊಡ್ಡಮಾಲೂರಿನ ಕ್ರಿಸ್ತಶಕ 1510 ರ ಬಂಡೆಗಲ್ಲು ಶಾಸನದಲ್ಲಿ ಮೊದಲಬಾರಿಗೆ ಮದುವೆಯ ಸುಂಕವನ್ನು ವಿನಾಯಿತಿ ಬಿಟ್ಟ ವಿಷಯವಿದೆ. ಈ ಅವಧಿಯಲ್ಲಿ ಶ್ರೀಕೃಷ್ಣದೇವರಾಯನ ಮೊದಲ ಪಟ್ಟಾಭಿಷೇಕ ನಡೆದಿತ್ತು. ಅಂದೂಕೂಡ ರಾಜ್ಯದ ಪ್ರಧಾನಿಯಾದ ತಿಮ್ಮದಾಸಯ್ಯ ಆದಪ್ಪನಾಯುಡುಗಳು ಅರಸನಿಗೆ ಭಿನ್ನಹ ಮಾಡಿಕೊಂಡು ಪೆನುಗೊಂಡೆ, ಗುತ್ತಿ, ಕರ್ನೂಲು, ಗಂಡಿಕೋಟೆ ಸ್ಥಳದ ಸಿದ್ಧವಟ್ಟದ ಸಿದ್ಧಾಪುರ ಸೀಮೆಯ ಮತ್ತು ನಾಗಮಂಗಲ, ಮುಳುವಾಗಿಲು, ರಾಯದುರ್ಗದ ಸೀಮೆಯ ಮದುವೆಯ ಸುಂಕವನ್ನು ವಿನಾಯ್ತಿ ನೀಡಿರುವರು. ತಿಮ್ಮಾಪುರದ ಗಂಗನಾಯನಿ ಮಗ ಚಿಟ್ಟಣ್ಣಯರಗೊಲ್ಲ, ಬಸವರಸ ಎಂಬುವರು ಪ್ರಧಾನಿಯನ್ನು ಕೋರಿಕೊಂಡು ಈ ದಾನವನ್ನು ಬಿಡಿಸುತ್ತಾರೆ.

ತುಮಕೂರು ಜಿಲ್ಲೆಯಲ್ಲಿ ಈವರೆಗೆ ಶ್ರೀಕೃಷ್ಣದೇವರಾಯನ 19 ಶಾಸನಗಳು ಸಿಕ್ಕಿದ್ದವು, ಬಿಜ್ಜಾವರದ ಈ ಶಾಸನದಿಂದ ಅವನ ಶಾಸನಗಳ ಸಂಖ್ಯೆ 20 ಕ್ಕೆ ಏರುತ್ತದೆ.

ಶಾಸನದ ಪಾಠ

1. 0 ಶುಭಮಸ್ತು ಬಿಜಾವರದಗೌಡಿಕೆ ಸೋಮಗೌಡರಅಜೆಯ ಸಿಂಗೇಗೌಡರ ಕಾಣಾಚಿಗೌಡಿಕೆ ಶ್ರೀ
2. 0 ಬಿಜವರದನಾಡ ಸೇನಬೋಯಿಕೆ ಆಉಬಳ ದೇವಗಳ ಮುತ್ತಯದೇವರಸರಕಾಣಾಚಿ ಸೇನಬೋಯಿಕೆ ಶ್ರೀ
3. 0 ಸ್ವಸ್ತಿ ಶ್ರೀ ಜಯಾಭ್ಯುದಯ ಶಾಲಿವಾಹನ ಶಕವರುಷಗಳು 1436 ನೆಯ ಶ್ರೀಮುಖ ಸಂವತ್ಸರದ
4. 0 ಚಯಿತ್ರ ಬ 10 ಲೂ ಶ್ರೀ ಮಂಮಹಾರಾಜಾಧಿರಾಜರಾಜಪರಮೇಶ್ವರ ಶ್ರೀ ವೀರಪ್ರತಾ
5. 0 ಪ ಶ್ರೀಕೃಷ್ಣರಾಯ ಮಹಾರಾಯರೂ ಲೋಕೋಪಕಾರವಾಗಿ ಮದುವೆಯ ಸುಂಕವನೂ
6. 0 ಆಳುವ ರಾಜ್ಯದೊಳಗೆ ಆ ಮದುವೆಯ ಸುಂಕ ಯೆಂದಿಗೆಯೂ ಕೊಳಲಿಲ್ಲಾಯೆಂದುರಾಯ
7. 0 ರ ಮುದ್ರೆಮನುಷ್ಯರು ಬಂದು ಹಾಕಿಸಿದ ಸಿಲಾಶಾಸನ ॥ ಇದಕೆತಪಿದವರುತಂಮತಂದೆತಾ
8. 0 ಯಿಗೆ ತಪಿದವರು ॥ ತಂಮಗುರುವಿಗೆತಪಿದವರು.

(ಶಾಸನವನ್ನು ಓದಲು ಕಾರಣರಾದವರು ಮಧುಗಿರಿಯ ತಹಶೀಲ್ದಾರರಾದ ಶ್ರೀ ಅನಂತರಾಮು ಅವರು, ಮತ್ತುಗ್ರಾಮಸ್ಥರು ಬಹಳ ನೆರವಾಗಿದ್ದಾರೆ)







21. ನವರಂಗ ದರ್ವಾಜ್‌ದಲ್ಲಿ ವಿಜಯನಗರಕಾಲದ ಆಲಂಕಾರಿಕ ಉಬ್ಬು ಶಿಲ್ಪಗಳು

– ಪ್ರೊ. ಶಾಶ್ವತಸ್ವಾಮಿ ಮುಕ್ಕುಂದಿಮಠ

ಬಹುಮನಿ ಸುಲ್ತಾನರ ಕಾಲದಲ್ಲಿ ನಿರ್ಮಾಣವಾದ ರಾಯಚೂರಿನ ಕೋಟೆ, ಹಲವು ರಂಜಕವಾದ ಇತಿಹಾಸವನ್ನು ಹೊಂದಿದೆ. ಬಹುಮನಿ ವಂಶದ ಮೂರನೆಯ ಮೊಹಮದ್‌ಶಾಹ ಕ್ರಿ. ಶ. 1480ರಲ್ಲಿ ಈ ಕೋಟೆಯನ್ನು ನಿರ್ಮಿಸಿದನು. ಇದನ್ನು ಹೊರಗಿನ ಕೋಟೆ ಅಥವಾ ಬಹೆರೂನ್ ಕಿಲಾ ಎಂದು ಕರೆಯುತ್ತಾರೆ. ಸುಮಾರು ಎರಡು ಕಿ.ಮಿ. ಚದುರ ವ್ಯಾಸ ವಿಸ್ತೀರ್ಣವಿರುವ ಈ ಕೋಟೆ ಮೂರು ದ್ವಾರವನ್ನು ಹೊಂದಿದೆ. ದಕ್ಷಿಣ ದಿಕ್ಕಿಗೆ ಮುಖಮಾಡಿಕೊಂಡಿರುವ ದ್ವಾರವನ್ನು ಮುಳ್ಳಗಸಿ (ಕಾಟಿಬೇಸ್) ಎಂದು ಕರೆಯುತ್ತಾರೆ. ಉತ್ತರ ಮುಖವಾಗಿರುವ ಮತ್ತೊಂದು ದ್ವಾರವನ್ನು ನವರಂಗ ದರ್ವಾಜ್ ಎಂದು ಕರೆಯುತ್ತಾರೆ. ಇನೊಂದು ಪಶ್ಚಿಮ ದಿಕ್ಕಿಗೆ ಮುಖಮಾಡಿದ ದ್ವಾರವನ್ನು ಮೆಕ್ಕಾ ದರ್ವಾಜ್ ಎಂದು ಕರೆಯುತ್ತಾರೆ. ಈ ದ್ವಾರ ಮಾತ್ರ ಭಾಗಶಃ ಹಾಳಾಗಿದೆ. ಕಾಟೆದರ್ವಾಜ ಮತ್ತು ನವರಂಗ ದರ್ವಾಜಗಳು ಸುಸ್ಥಿತಿಯಲ್ಲಿದ್ದು ನೋಡಲು ಆಕರ್ಷಕವಾಗಿವೆ. ಹಿಂದು–ಇಸ್ಲಾಮ್ (ಇಂಡೋ–ಸಾರ್ಸೆನಿಕ್) ಶೈಲಿಯಲ್ಲಿರುವ ಈ ಎರಡು ದರ್ವಾಜ್(ಅಗಸಿ)ಗಳು ಬಹುಮನಿಕಾಲದ ಕಟ್ಟಡ ಶೈಲಿಗೆ ಸಾಕ್ಷಿಯಾಗಿವೆ.

ರಾಯಚೂರು ಕೋಟೆಗೆ ವಿಜಯನಗರ ಮತ್ತು ಬಹುಮವಿ ಅರಸರು ಲಗ್ಗೆ ಹಾಕಿ ವಶಪಡೆಸಿಕೊಳ್ಳಲು ಹಲವು ಬಾರಿ ಯುದ್ಧ ಮಾಡಿದ್ದಾರೆ. ಒಮ್ಮೆ ವಿಜಯನಗರದವರಿಗೆ ಗೆಲುವಾದರೆ, ಮತ್ತೊಮ್ಮೆ ಬಹುಮನಿಯವರಿಗೆ ಗೆಲುವಾಗಿ ಕಣ್ಣಾಮುಚ್ಚಾಲೆಯಾಡಿದ್ದು ಇತಿಹಾಸದಿಂದ ತಿಳಿಯುತ್ತದೆ. ಅಧಿಕಕಾಲ ಬಹುಮನಿ ಸುಲ್ತಾನರ ವಶದಲ್ಲಿದ್ದ ಈ ಕೋಟೆ ಬಹುಮನಿ ಸುಲ್ತಾನರ ವಾಸ್ತುಶಿಲ್ಪದಿಂದ ಆವರಿಸಿದೆ. ಆದರೆ ನವರಂಗ ದರ್ವಾಜದ ಒಳಗೋಡೆಗೆ ಅಳವಡಿಸಿದ ಉಬ್ಬು ಶಿಲ್ಪದ ಪಟ್ಟಿಕೆಗಳು ವಿಜಯನಗರದ ವಾಸ್ತುಶಿಲ್ಪಕ್ಕೆ ಸಾಕ್ಷಿಯಾಗಿದೆ. ಇಲ್ಲಿ ವಿಜಯನಗರ ಕಾಲದ ಪರಂಪರೆ, ಸಂಸ್ಕೃತಿಗಳು ದಟ್ಟವಾಗಿ ಮೂಡಿರುವುದು ಗೋಚರವಾಗದೆ ಇರದು.

ಶ್ರೀ ಕೃಷ್ಣದೇವರಾಯನು ಕ್ರಿ.ಶ. 1529ರಲ್ಲಿ ಬಿಜಾಪುರದ ಆದಿಲ್‌ಶಾಹಿಯ ವಶದಲ್ಲಿದ್ದ ರಾಯಚೂರು ಕೋಟೆಯನ್ನು ವಶಪಡೆಸಿಕೊಂಡ ನಂತರ ರಾಯಚೂರು ಕೋಟೆ ಬಹಳಕಾಲ ವಿಜಯನಗರದ ವಶದಲ್ಲಿದ್ದು ಕೋಟೆಯಲ್ಲಿ ಅನೇಕ ಬದಲಾವಣೆಗಳಾದವು. ವಿಜಯನಗರದ ಕಲೆ ಮತ್ತು ಸಂಸ್ಕೃತಿಗಳು ತಲೆಎತ್ತಿದವು. ಈ ಮಾರ್ಪಾಡಿಗೆ ವಿಶೇಷವಾಗಿ ಶ್ರೀ ಕೃಷ್ಣದೇವರಾಯನು ಆಸಕ್ತಿವಹಿಸಿದನು. ಅಂತಯೇ ನವರಂಗ ದರ್ವಾಜ್ ಸಂಪೂರ್ಣವಾಗಿ ವಿಜಯನಗರದ ಸಂಸ್ಕೃತಿ ಶಿಲ್ಪ ಕಲೆಗಳಿಂದ ಮಾರ್ಪಾಡಾಯಿತು. ವಿಜಯನಗರ ಕಾಲದ ಸಿಂಹ ಶಿಲ್ಪಗಳು ಕೋಟೆ–ಕೊತ್ತಲು(ಬುರಜ್)ಗಳ ತಲೆಯ ಮೇಲೆ ಮುಂದಕ್ಕೆ ಚಾಚಿದ ಕೈಪಿಡಿಗಳಲ್ಲಿ ಮೂಡಿದವು. ಹೊಸ ಅಗಸಿ(ಪೂರ್ವ ದಿಕ್ಕಿನ ಎರಡು ಅಗಸಿ)ಗಳು. ಕೆಲವು ದೇವಾಲಯಗಳು ನಿರ್ಮಾಣವಾದವು. ವಿಜಯಗರ ಕಾಲದ ಸ್ತ್ರೀ–ಪುರುಷರ ವೇಷಭೂಷಣ ಕೇಶ ಶೃಂಗಾರ ಮದನಿಕೆಯರು ಭರತನಾಟ್ಯ, ಜನಪದ ನೃತ್ಯ, ಯುದ್ಧಸನ್ನಿವೇಶಗಳು ಹಾಗೂ ಸ್ತ್ರೀ–ಪುರುಷರ ಜೀವನಗಳ ಸಂಸ್ಕೃತಿ ಸಂಪತ್ತು ನವರಂಗ ದರ್ವಾಜದಲ್ಲಿ ಆಳವಡಿಸಿರುವ ಪಟ್ಟಿಕೆಗಳ ಉಬ್ಬು ಶಲ್ಪಗಳಲ್ಲಿ ಒಡಮೂಡಿರುವುದನ್ನು ಕಾಣಬಹುದಾಗಿದೆ.

ಬನ್ನಿ ನವರಂಗ ದರ್ವಾಜ್‌ಕ್ಕೆ ಹೋಗುವ ನವರಂಗದರ್ವಾಜ್ ಕೋಟೆಯ ಉತ್ತರ ದಿಕ್ಕಿನಲ್ಲಿದೆ. ಕೋಟೆಯನ್ನು ಪ್ರವೇಶ ಮಾಡುವ ದ್ವಾರ ಸುಂದರವಾಗಿ ಭದ್ರವಾಗಿದೆ. ಈ ದರ್ವಾಜ್‌ದಿಂದ ಕೋಟೆಯ ಒಳಗೆ ಪ್ರವೇಶ ಮಾಡಿ ಮತ್ತೆ ಪಶ್ಚಿಮ ದಿಕ್ಕಿನಲ್ಲಿರುವ ಮತ್ತೊಂದು ದ್ವಾರದ ಕೋಟೆಯ ಒಳಗೆ ಹೋಗಬೇಕು. ಈ ನವರಂಗ ದರ್ವಾಜ ಮತ್ತು ಒಳಗಿನ ಪಶ್ಚಿಮ ದಿಕ್ಕಿನ ದ್ವಾರಗಳ ಮಧ್ಯದಲ್ಲಿ ವಿಶಾಲವಾದ ಪ್ರಾಂಗಣವಿದೆ. ಸಮಾರು 100 ಮತ್ತು 120 ಅಡಿ ವಿಸ್ತೀರ್ಣದ ಪ್ರಾಂಗಣ ನಾಲ್ಕು ಗೋಡೆಯ ಮಧ್ಯದಲ್ಲಿದೆ. ಪ್ರಾಂಗಣದ ಪೂರ್ವ ಮತ್ತು ದಕ್ಷಿಣ ದಿಕ್ಕುಗಳ ಎರಡು ಬದಿಗೆ ಸೈನಿಕರು ವಾಸಮಾಡಲು ಮಂಟಪಗಳಿವೆ. ಮಂಟಪದ ಬಾಗಿಲುಗಳು ಕಮಾನಾಕಾರದಲ್ಲಿದ್ದು, ಇದರ ಮೇಲೆ ಎತ್ತರದಲ್ಲಿ ಈ ಉಬ್ಬು ಶಿಲ್ಪಗಳ ಪಟ್ಟಿಕೆಗಳನ್ನು ಅಳವಡಿಸಲಾಗಿದೆ. ಈ ಪಟ್ಟಿಕೆಗಳು 6 ಅಡಿ ಉದ್ದ ಮತ್ತು 3 ಅಡಿ ಅಗಲವಿದ್ದು ಅವುಗಳನ್ನು ಉತ್ತರ ಗೋಡೆಯನ್ನ ಹೊರತುಪಡಿಸಿದರೆ, ಮೂರು ದಿಕ್ಕುಗಳ ಗೋಡೆಗಳಿಗೆ ಅಳವಡಿಸಲಾಗಿದೆ. ಈ ಉಬ್ಬು ಶಿಲ್ಪದ ಪಟ್ಟಿಕೆಗಳನ್ನು ರಾಯಚೂರು ವಿಜಯದ ನಂತರ ಗೋಡೆಗೆ ಅಳವಡಿಸಿರುವುದು ಸ್ಪಷ್ಟವಾಗುತ್ತದೆ. ಬಹುಮನಿ ಸುಲ್ತಾನರು ನಿರ್ಮಾಣ ಮಾಡಿದ ಇಂಡೋ–ಸಾರ್ಸೆನಿಕ್ ಮುಸ್ಲಿಂ ವಾಸ್ತುವಿನಲ್ಲಿ ನಿರ್ಮಿಸಿದ ಈ ದರ್ವಾಜ್‌ದ ಗೋಡೆಗಳಿಗೆ ಹಿಂದೂ ಸಂಸ್ಕೃತಿಯ ಈ ಉಬ್ಬು ಶಿಲ್ಪಗಳ ಪಟ್ಟಿಕೆಗಳನ್ನು ಅತಿ ಜಾಗೃತಿಯಿಂದ ಅಳವಡಿಸಿರುವುದು ನೋಡಿದರೆ ವಿಸ್ಮಯಗಳಿಸುತ್ತದೆ.

ಉಬ್ಬು ಶಿಲ್ಪದ ಪಟ್ಟಿಕೆಗಳು 17 ಇವೆ. ಚಿಕಿನಿ ಕಲ್ಲಿನಲ್ಲಿರುವ ಪಟ್ಟಿಕೆಗಳ ಮೇಲ್ಮಯ್ಯಿ ಅತ್ಯಂತ ಮಣಪಾಗಿದ್ದು ಕೌಶಲ್ಯದಿಂದ ಕೆತ್ತಿದ ಈ ಉಬ್ಬು ಚಿತ್ರಗಳು ಎದ್ದುಬರುವಂತೆ ಮನೋಹರವಾಗಿವೆ. ಸೈನಿಕರ ಕಮಾನುಗಳು 17 ಇವೆ. ಬಾಗಿಲುಗಳ ಮಂಟಪಗಳ ಅಂತರದ 6 ಅಡಿಗಳಿದ್ದು ಎರಡು ಮಂಟಪಗಳ ನಡುವೆ ಈ ಪಟ್ಟಿಕೆಗಳನ್ನು ಅಳವಡಿಸಿದೆ. ಅವುಗಳ ಮೇಲೆ ಹೂಗಳು ಚಿತ್ತಾರ ಬಿಡಿಸಿದ 3 ಅಡಿ ಅಗಲದ ಪಟ್ಟಿಕೆಗಳನ್ನು ಸಾಲು ಸಾಲಾಗಿ ಜೋಡಿಸಿದೆ. 17 ಉಬ್ಬು ಸುಂದರ ಶಿಲ್ಪಗಳು ಸಾಲಾಗಿ ಮೂರು ಗೋಡೆಗಳಿಗೆ ಪ್ರಮಾಣ ಬದ್ಧವಾಗಿ ಅಳವಡಿಸಿರುವುದು. ನಮ್ಮ ಮನಸೂರೆಗೊಳ್ಳುತ್ತದೆ.

ಇಲ್ಲಿಯ ನಾಲ್ಕು ಪಟ್ಟಿಕೆಗಳು ಯುದ್ಧನಿರತ ಶಿಲ್ಪಗಳು. ಕತ್ತಿ, ಬಿಲ್ಲು, ಬಾಣಗಳನ್ನು ಹಿಡಿದ ಯೋಧರು, ಕುದುರೆ ಮತ್ತು ಆನೆಗಳ ಮೇಲೆ ಸಾಗುತ್ತಿರುವ ಯೋಧರು ಯುದ್ಧಗಳಲ್ಲಿ ತೊಡಗಿದ್ದಾರೆ. ಇನ್ನೂ 4 ಪಟ್ಟಿಕೆಗಳು ಭರತನಾಟ್ಯ ಮತ್ತು ಜಾನಪದ ನೃತ್ಯಕ್ಕೆ ಸಂಬಂಧಿಸಿದವು. ಕೋಲಾಟದಲ್ಲಿ ತೊಡಗಿದ ಸ್ತ್ರೀಯರು ಆಕರ್ಷಿಸುತ್ತಾರೆ. ಅವರು ಹುಟ್ಟ ಸೀರೆ ಹಾಗೂ ಆಭರಣಗಳು ಉಬ್ಬು ಶಿಲ್ಪಗಳಲ್ಲಿ ಸ್ಪಷ್ಟವಾಗಿ ಮೂಡಿದೆ. ಕೋಲು ಹಿಡಿದು ಎತ್ತಿದ ಕೈಗಳು ಆಟದ ಚಿತ್ರಣ ಮನಮೋಹಕವಾಗಿದೆ.

ಸ್ತ್ರೀಯರ ಕೇಶರಾಶಿ ಶೈಲಿಗಳನ್ನು ಪ್ರದರ್ಶಿಸುವ 4 ಪಟ್ಟಿಕೆಗಳು ಅತಿ ಸುಂದರವಾಗಿವೆ. ಇಲ್ಲಿಯ ಸ್ತ್ರೀಯರು ಹೆಣೆದ ಕೇಶ ಶೈಲಿ, ಕಟ್ಟಿದ ತುರುಬು ನಮ್ಮ ಚಿತ್ತವನ್ನು ಸೆಳೆಯುತ್ತವೆ. ಇಲ್ಲಿಯ ಉಬ್ಬು ಚಿತ್ರಗಳಲ್ಲಿರುವ ಸ್ತ್ರೀಯರು ಅಲಂಕಾರದಲ್ಲಿ ಅಂದಿನ ವಿಜಯನಗರದ ಸ್ತ್ರೀಯರ ಶೃಂಗಾರವನ್ನು ಕಾಣುತ್ತೇವೆ. ರಾಮಾಯಣಕ್ಕೆ ಮತ್ತು ಭಾಗವತ ಪುರಾಣಗಳಿಗೆ ಸಂಬಂಧಿಸಿದ ಎರಡು ಪಟ್ಟಿಕೆಗಳು ಸುಂದರವಾಗಿವೆ.

ಕಿಷ್ಕಿಂದೆಯಲ್ಲಿ ಹನುಮಂತ ಶ್ರೀರಾಮ ಮತ್ತು ಲಕ್ಷಣರನ್ನು ಸಂದರ್ಶಿಸಿದ ಚಿತ್ರ, ಹನುಮಂತ ಮಂಡೆಯೂರಿ ಶ್ರೀರಾಮನ ಬಳಿ ಕುಳಿತ ಭಂಗಿ ಹಾಗೂ ಲಂಕಾ ಪಟ್ಟಣದ ಅಶೋಕವನದಲ್ಲಿ ಸೀತೆಯನ್ನು ಕಂಡು ಶ್ರೀರಾಮನ ಮುದ್ರೆಯುಂಗುರವನ್ನು ಕೊಡುತ್ತಿರುವುದು ಇಲ್ಲಿಯೂ ಮಂಡೆಯೂರಿ ಕುಳಿತ ಹನುಮಂತನ ಚಿತ್ರಗಳು ರಾಮಾಯಣಕ್ಕೆ ಸಂಬಂಧಿಸಿವೆ. ಭಾಗವತ ಪುರಾಣದಲ್ಲಿ ಉಲ್ಲೇಖವಾದ ಬಲಿಚಕ್ರವರ್ತಿಯನ್ನು ಒಂದು ಪಾದದಿಂದ ಮೆಟ್ಟಿ, ಮತ್ತೊಂದು ಪಾದವನ್ನು ಆಕಾಶಕ್ಕೆ ಎತ್ತಿದ ತ್ರಿವಿಕ್ರಮ ರೂಪ ಹಾಗೂ ಹಿರಣ್ಯಕಶಿಪುವನ್ನು ತನ್ನ ಎರಡೂ ತೊಡೆಗಳ ಮೇಲೆ ಮಲಗಿಸಿ, ಎರಡೂ ಕೈಗಳ ಉಗುರುಗಳಿಂದ ಹೊಟ್ಟೆಯನ್ನು ಸೀಳುತ್ತಿರುವ ನರಸಿಂಹನ ಉಬ್ಬು ಶಿಲ್ಪಗಳು ನೋಡುಗರ ಕಣ್ಮನಗಳನ್ನು ತುಂಬುತ್ತವೆ. ಉಳಿದ ಪಟ್ಟಿಕೆಗಳು ಗೋಪಾಲಕೃಷ್ಣನು ಗೋವುಕಾಯುತ್ತ ಕೊಳನ್ನೂದುವುದು, ಗೋಪಿಕಾಸ್ತ್ರೀಯರ ಜೊತೆ ನರ್ತಿಸುವುದು ಮತ್ತು ಇತರ ಸಕೀರ್ಣ ಚಿತ್ರಗಳು ಸುಂದರವಾಗಿವೆ. ಇಲ್ಲಿಯ ಒಂದೆರಡು ಮಿಥುನ ಉಬ್ಬು ಶಿಲ್ಪಗಳು ನಮ್ಮನ್ನು ಪುಳಕಗೊಳಿಸುತ್ತವೆ.

ಇಂಡೋ–ಸಾರ್ಸೆನಿಕ್ ವಾಸ್ತು ಶೈಲಿಯಲ್ಲಿ ನಿರ್ಮಾಣವಾದ ನವರಂಗ ದರ್ವಾಜ್ ಮುಂದಿನ ದ್ವಾರ ಸಂಪೂರ್ಣವಾಗಿ ಹಿಂದು ಪರಂಪರೆಯ ಲಕ್ಷಣಗಳನ್ನು ಅಳವಡಿಸಿಕೊಂಡಿರುವುದು ಕಾಣುತ್ತದೆ. ದ್ವಾರದ ಮೇಲೆ ವೈಷ್ಣವ ಊರ್ಧ್ವ ನಾಮ ಮತ್ತು ಎಡ–ಬಲದಲ್ಲಿ ಶಂಖ–ಚಕ್ರದ ಮುದ್ರೆ. ದ್ವಾರದ ಬಲ–ಎಡ ಭಾಗದಲ್ಲಿ ಸೂರ್ಯ ಮತ್ತು ಚಂದ್ರರ ಉಬ್ಬು ಚಿತ್ರಗಳು ಅಲಂಕಾರಗೊಂಡಿವೆ. ನವರಂಗ ದ್ವಾರವನ್ನು ಪ್ರವೇಶಿಸುತ್ತಿದ್ದಂತೆ ಅಗಸಿಯ ನಾಲ್ಕು ಕಂಬಗಳ ಉಬ್ಬುಶಿಲ್ಪಗಳು ಹಿಂದು ಪರಂಪರೆಯವು. ಎರಡನೆ ಕಂಬದಲ್ಲಿ ಶ್ರೀ ಕೃಷ್ಣನು ಗೋಪಿಕಾಸ್ತ್ರೀಯರ ವಸ್ತುಗಳನ್ನು ತೆಗೆದುಕೊಂಡು ಎತ್ತರದಲ್ಲಿ ಕುಳಿತಿರುವುದು, ನೀರಿನಲ್ಲಿಳಿದ ಗೋಪಿಕೆಯರು ತಮ್ಮ ವಸ್ತ್ರ ಕೊಡುವಂತೆ ಎರಡೂ ಕೈಗಳನೆತ್ತಿ ಶ್ರೀ ಕೃಷ್ಣನನ್ನು ಬೇಡಿಕೊಳ್ಳುವ ಶಿಲ್ಪ ಮತ್ತೊಮ್ಮೆ ಮತ್ತೊಮ್ಮೆ ನಮ್ಮ ಗಮನಸೆಳೆಯುತ್ತವೆ.

ಈ ಉಬ್ಬು ಶಿಲ್ಪಿಗಳ ಪಟ್ಟಿಕೆಗಳನ್ನು ನಾಶವಾದ ಹಳೆಯ ದೇವಸ್ಥಾನದಿಂದ ಅಥವಾ ಬೇರೆಕಡೆಯಿಂದ ಸಾಗಿಸಿ ತಂದು ಇಲ್ಲಿ ಅಳವಡಿಸಿರಬೇಕು ಎಂದು ಕೆಲವು ಇತಿಹಾಸಕಾರರು ಅಭಿಪ್ರಾಯಪಟ್ಟಿರುತ್ತಾರೆ. ಆದರೆ, ಇಲ್ಲಿ ನಿರ್ಮಾಣಗೊಂಡ 17 ಕಮಾನು ಮಂಟಪಗಳಿಗೆ ಸರಿಯಾಗಿ 17 ಪಟ್ಟಿಕೆಗಳನ್ನು ಅಳತೆಬದ್ಧವಾಗಿರುವುದು ಗಮನಿಸಿದರೆ ಈ ಪಟ್ಟಿಕೆಗಳು ನವರಂಗ ದರ್ವಾಜ್ ಗೋಡೆಗೆ ಹೊಂದಿಕೊಳ್ಳುವಂತೆ ಹೊಸದಾಗಿ ನಿರ್ಮಾಣ ಮಾಡಿದ ಸಾಧ್ಯತೆ ಕಾಣುತ್ತದೆ. ಇಲ್ಲಿಯ ಸುತ್ತಮುತ್ತ ಯಾವುದೇ ದೇವಾಲಯ ಹಾಳಾದ ಸ್ಮಾರಕಗಳು ಕಾಣದಿರುವುದು ಈ ಸಾಧ್ಯತೆಯನ್ನು ದೃಢಿಕರಿಸುತ್ತದೆ.

ಆಧಾರ ಸೂಚಿ

1. **ಮರೆತುಹೋದ ಸಾಮ್ರಾಜ್ಯ** – ರಾಬರ್ಟ್ ಸಿವೆಲ್
2. **ತಾರೀಖ್–ಎ–ಫರಿಶ್ತಾ** – ಮೊಹ್ಮದ್ ಫರಿಶ್ತಾ
3. **ವಿಜಯನಗರದ ಸಾಮ್ರಾಜ್ಯ** – ಡಾ॥ ಪಿ.ಬಿ. ದೇಸಾಯಿ









22. ಹಂಪಿ ಪರಿಸರದ ವಾಮನ – ತ್ರಿವಿಕ್ರಮ ಶಿಲ್ಪಗಳು

– ಡಾ. ಸಿ.ಎಸ್. ವಾಸುದೇವನ್

ಎಲ್ಲರಿಂದ ಒಪ್ಪಿತ ಮತ್ತು ಪ್ರಸಿದ್ಧವಾದ ವಿಷ್ಣುವಿನ ಅವತಾರಗಳು ಹತ್ತು. ಅವುಗಳನ್ನು ದಶಾವತಾರ ಎಂದು ಕರೆಯಲಾಗುತ್ತದೆ. ಈ ಪ್ರಪಂಚಕ್ಕೆ ಅಸುರರುಗಳಿಂದ ಆಪತ್ತು ಒದಗಿದಾಗ ವಿಷ್ಣುವು ವಿವಿಧ ಕಾಲಘಟ್ಟಗಳಲ್ಲಿ ಹತ್ತು ಅವತಾರಗಳನ್ನು ತಾಳಿ ಅಸುರರನ್ನು ನಿಗ್ರಹಿಸಿ ತಪ್ಪು ದಾರಿಯಲ್ಲಿದ್ದವರನ್ನು ಸರಿ ದಾರಿಗೆ ತಂದನು. ಧರ್ಮವನ್ನು ಸ್ಥಾಪಿಸಲು ಇಂತಹ ಅವತಾರಗಳನ್ನು ವಿಷ್ಣುವು ತಾಳಿದನು. ವಿಷ್ಣುವಿನ ದಶಾವತಾರಗಳು ಇಂತಿವೆ: ಮತ್ಸ್ಯ (ಮೀನು), ಕೂರ್ಮ (ಆಮೆ), ವರಾಹ (ಹಂದಿ), ನರಸಿಂಹ (ಮನುಷ್ಯ–ಸಿಂಹ), ವಾಮನ (ಕುಬ್ಜ), ತ್ರಿವಿಕ್ರಮನನ್ನು ಒಳಗೊಂಡಂತೆ ಪರಶುರಾಮ, ರಘುರಾಮ, ಕೃಷ್ಣ, ಬುದ್ಧ ಮತ್ತು ಕಲ್ಕಿ. ಕೆಲವು ಹಿಂದೂ ಸಂಪ್ರದಾಯವಾದಿಗಳು ಬುದ್ಧನನ್ನು ವಿಷ್ಣುವಿನ ಅವತಾರ ಅಲ್ಲವೆಂದು ವಾದಿಸಿ ಅವನ ಸ್ಥಳದಲ್ಲಿ ಬಲರಾಮನನ್ನು ಉಲ್ಲೇಖಿಸುತ್ತಾರೆ. ಇವನು ಕೃಷ್ಣನ ಅಣ್ಣ.[1]

ವಿಷ್ಣುವಿನ ವಾಮನ–ತ್ರಿವಿಕ್ರಮನ ಅವತಾರವನ್ನು ಋಗ್ವೇದದಲ್ಲಿ ಗುರುತಿಸಬಹುದು. ಅದರಲ್ಲಿ ಆತನನ್ನು ಸೌರ ದೇವತೆಯೆಂದು ಉಲ್ಲೇಖಿಸಿದ್ದು ಅವನು ವಿಶ್ವವನ್ನು ಮೂರು ಹೆಜ್ಜೆಗಳಲ್ಲಿ ಕ್ರಮಿಸಿದನೆಂದು ತಿಳಿಸುತ್ತದೆ. ವಿಷ್ಣುವು ನರಸಿಂಹಾವತಾರವನ್ನು ತಾಳಿದಾಗ ಅವನ ಭಕ್ತನಾದ ಪ್ರಹ್ಲಾದನ ಮೊಮ್ಮಗ ಮತ್ತು ವಿರೋಚನನ ಮಗನಾದ ಬಲಿಯು ತನ್ನ ತಪಸ್ಸಿನ ಶಕ್ತಿಯಿಂದ ದೇವತೆಗಳನ್ನು ನಿರ್ನಾಮ (ಹೇಳ ಹೆಸರಿಲ್ಲದೆ) ಮಾಡಲು ಶಕ್ತನಾದ. ಇದರ ಫಲವಾಗಿ ಇಂದ್ರನನ್ನು ಅವನ ರಾಜ್ಯದಿಂದ ಓಡಿಸಿದನು; ಅವನ ತಾಯಿ ಅದಿತಿಗೆ ಇದರಿಂದ ನೋವಾಗಿ ವಿಷ್ಣುವು ತನ್ನ ಮಗನಾಗಿ ಜನಿಸಿ ಅವನು ಅಸುರರನ್ನು ಗೆದ್ದು ಇಂದ್ರನ ದೇವಲೋಕವನ್ನು ಅವನಿಗೇ ಮರಳಿಸಬೇಕೆಂದು ವಿಷ್ಣುವಿನಲ್ಲಿ ಪ್ರಾರ್ಥಿಸುತ್ತಾಳೆ. ಅದರಂತೆ ವಿಷ್ಣುವು ಅದಿತಿಯ ಮಗನಾಗಿ ಜನಿಸುತ್ತಾನೆ; ಮತ್ತು ಒರ್ವ ಕಿರು ಬಾಲಕನಾಗಿ ಬಲಿಯು ನಡೆಸುತ್ತಿರುವ ಯಾಗ ನಡೆಸುವ ಜಾಗಕ್ಕೆ ತೆರಳಿ ಕೆಲವು ಭೂದಾನ ನೀಡುವಂತೆ ಬೇಡುತ್ತಾನೆ. ಬ್ರಾಹ್ಮಣ ಬಾಲಕನು ಬ್ರಹ್ಮಚಾರಿಯ ಅಥವಾ ವೇದದ ವಿದ್ಯಾರ್ಥಿಯ ವೇಷದಲ್ಲಿರುವ ಬಾಲಕನನ್ನು ನೋಡಿ ಅವನನ್ನು ಸತ್ಕರಿಸಿ ಬಾಲಕನು ಯಾಗದ ಫಲದಿಂದ ಏನು ಬೇಕೋ ಅದನ್ನು ಕೇಳುವಂತೆ ತಿಳಿಸುತ್ತಾನೆ. ಬಲಿಯ ಗುರು ಶುಕ್ರಾಚಾರ್ಯನು ಬಂದಿರುವ ಬಾಲಕನು ವಿಷ್ಣುವೆಂದು ಅರಿತು ಎಚ್ಚರಿಕೆಯಿಂದ ವಾಗ್ದಾನ ನೀಡುವಂತೆ ಎಚ್ಚರಿಸುತ್ತಾನೆ.

ಶತಪಥ ಬ್ರಾಹ್ಮಣವು ವಾಮನನ ಬಗೆಗೆ ಮೊದಲ ಬಾರಿಗೆ ಉಲ್ಲೇಖಿಸುತ್ತದೆ. ಅದರಲ್ಲಿ ಅವನನ್ನು ಯಜ್ಞನೊಂದಿಗೆ ಗುರುತಿಸಲಾಗಿದೆ. ಆರಂಭದಲ್ಲಿ ಅವನು ಸಾತ್ವಿಕನಾಗಿ ಹಾಗೂ ಬಲಹೀನನಾಗಿದ್ದು ನಂತರ ಇಡೀ ವಿಶ್ವವನ್ನೇ ಆವರಿಸಿ (ಅಪೋಶನ) ಕತ್ತಲ ಲೋಕದ ರಾಕ್ಷಸರನ್ನು ಪಾತಾಳ ಲೋಕಕ್ಕೆ ತಳ್ಳುತ್ತಾನೆ. ರಾಜ ಬಲಿ ಮತ್ತು ವಾಮನನ ವಿಸ್ತೃತವಾದ ಐತಿಹ್ಯ ರಾಮಾಯಣದಲ್ಲಿ ಮೊದಲ ಬಾರಿಗೆ ಉಲ್ಲೇಖವಾಗಿದೆ. ರಾಕ್ಷಸರ ಅರಸ ಬಲಿಯನ್ನು ಅಡಗಿಸಲು ವಿಷ್ಣುವು ವಾಮನನು ಕುಬ್ಜ ಅವತಾರವನ್ನು ತಾಳಿದನು. ಬಲಿಯು ಯಾಗವನ್ನು ಮಾಡುವಾಗ ವಾಮನನು ಅಲ್ಲಿಗೆ ತೆರಳಿ ತನ್ನ ಮೂರು ಪಾದಗಳಷ್ಟೇ ಅಳತೆಯ ಭೂಮಿಯನ್ನು ದಾನವಾಗಿ ನೀಡಬೇಕೆಂದು ಕೋರುತ್ತಾನೆ. ಬಲಿಯು ದಾನ ಕೊಡುತ್ತೇನೆಂದು

ಹೇಳಿದ ತಕ್ಷಣ, ವಾಮನನು ಬೃಹದಾಕಾರವಾಗಿ ತ್ರಿವಿಕ್ರಮನಾಗಿ ಬೆಳೆದು ಅವತಾರ ತಳೆದು ಇಡೀ ಭೂಮಂಡಲವನ್ನು ತನ್ನ ಪಾದದ ಮೂಲಕ ಅಳತೆದನು. ಮತ್ತು ಕೊನೆಗೆ ಬಲಿಯನ್ನು ಪಾತಾಳ ಲೋಕಕ್ಕೆ ಕಳುಹಿಸಿ ಅಲ್ಲಿಯ ಸಾರ್ವಭೌಮನಾಗಿರುವಂತೆ ಮಾಡಿದನು. ವಾಮನನ ಈ ಐತಿಹ್ಯವು ಅನೇಕ ಪುರಾಣಗಳಲ್ಲಿ ಉಲ್ಲೇಖವಾಗಿದ್ದು, ಅದರಲ್ಲಿನ ವಸ್ತುವಿಷಯವು ಬಹುತೇಕವಾಗಿ ಒಂದೇ ರೀತಿಯಲ್ಲಿದ್ದು ಅವುಗಳು ಹೋಲುತ್ತವೆ.

ಶಿಲ್ಪಗಳಲ್ಲಿ ಈ ಅವತಾರವನ್ನು ಎರಡು ರೀತಿಯಲ್ಲಿ ತೋರಲಾಗುತ್ತದೆ, ಮೊದಲನೆಯದರಲ್ಲಿ ವಾಮನನ್ನು ಕುಬ್ಜನಾಗಿ ಕೈಯಲ್ಲಿ ಛತ್ರಿ ಮತ್ತು ಕಮಂಡಲು ಅಥವಾ ದಂಡವನ್ನು ಹಿಡಿದಿರುವಂತೆಯೂ ಮತ್ತೊಂದರಲ್ಲಿ ತ್ರಿವಿಕ್ರಮನು ತನ್ನ ಒಂದು ಕಾಲನ್ನು ಭೂಮಿಯಲ್ಲಿ ದೃಢವಾಗಿರಿಸಿರುವಂತೆ ಮತ್ತೊಂದು ಕಾಲನ್ನು ಮೇಲಕ್ಕೆತ್ತಿ ಆಕಾಶ ಸ್ವರ್ಗ ಅಥವಾ ನಭೋಮಂಡಲವನ್ನು ಅಳೆಯುವಂತೆ ನಿರೂಪಿಸಲಾಗುತ್ತದೆ.

ವಾಮನ ಅಥವಾ ಕುಬ್ಜನ ಶಿಲ್ಪವು ಸರಳವಾಗಿ ತೋರಲಾದರೂ ಸಂಸ್ಕೃತ ಪಠ್ಯಗಳಲ್ಲಿ ಅವುಗಳ ವಿವರಣೆಗಳು ಭಿನ್ನವಾಗಿವೆ. ಸಂಸ್ಕೃತ ಪಠ್ಯದಂತೆ ವಾಮನನ ಶಿಲ್ಪವು 56 ಅಂಗುಲಗಳಷ್ಟು ಮಾತ್ರ ಇರಬೇಕು. ಅವನಿಗೆ ಎರಡು ಕೈಗಳು ಇರಬೇಕು, ಅವುಗಳಲ್ಲಿ ಒಂದು ಕೈಯಲ್ಲಿ ಕಮಂಡಲ ಮತ್ತೊಂದರಲ್ಲಿ ಛತ್ರಿಯನ್ನು ಹಿಡಿದಿರಬೇಕು. ತಲೆಯ ಮೇಲೆ ಕೂದಲಿನ ಗಂಟು ಇದನ್ನು ಕಟ್ಟಿರಬೇಕು, ಕಿವಿಯಲ್ಲಿ ಕುಂಡಲಗಳು, ಧೋತಿ ಅಥವಾ ಜಿಂಕೆಯ ಚರ್ಮವನ್ನು ಉಪವೀತದಂತೆ ಧರಿಸಿರಬೇಕು. ಅವನು ವೇದಾಧ್ಯಯನದ ವಿದ್ಯಾರ್ಥಿ, ಓರ್ವ ಬ್ರಹ್ಮಚಾರಿ ಅಥವಾ ಬ್ರಾಹ್ಮಣ ಎಂದು ಸೂಚಿಸುವಂತೆ ಅವನು ಒಂದು ಪುಸ್ತಕವನ್ನು ಹಿಡಿದಿರಬೇಕು. ವಾಮನನು ಛತ್ರಿಯನ್ನು ಮತ್ತು ಕಮಂಡಲವನ್ನು ಹಿಡಿದಿರುವಂತೆ ವಾಮನನ ಶಿಲ್ಪಗಳನ್ನು ದಶಾವತಾರ ಫಲಕಗಳಲ್ಲಿ ಮತ್ತು ಗಡಿಕಲ್ಲುಗಳಲ್ಲಿ ತೋರಲಾಗುತ್ತದೆ. ಗಡಿಕಲ್ಲುಗಳಲ್ಲಿ ಶಿಲ್ಪಗಳಿಗಿಂತ ರೇಖಾಚಿತ್ರಗಳ ಮೂಲಕವಾಗಿ ಸಾಮಾನ್ಯವಾಗಿ ತೋರಲಾಗುತ್ತದೆ. ಮತ್ತು ತ್ರಿವಿಕ್ರಮ ಅವತಾರಕ್ಕಿಂತ ವಾಮನನ ಚಿತ್ರಗಳು ಅಧಿಕವಾಗಿ ನಿರೂಪಿಸಲಾಗಿದೆ.

ತ್ರಿವಿಕ್ರಮ ಶಿಲ್ಪವನ್ನು ಬೃಹದಾಕಾರವಾಗಿ ತೋರಬೇಕು. ಪುರಾಣದ ವಿಷ್ಣುವಿನ ವಾಮನನ ಅವತಾರವನ್ನು ಅಧಿಕವಾಗಿ ಮತ್ತು ಕುತೂಹಲಕಾರಿಯಾಗಿ ಕುಬ್ಜನಿಂದ (ವಾಮನನಿಂದ) ತ್ರಿವಿಕ್ರಮನಾಗಿ ಹಠಾತ್ತನೆ ಬೆಳೆದ ರೂಪದಲ್ಲಿ ತೋರಲಾಗುತ್ತದೆ. ತ್ರಿವಿಕ್ರಮ ಶಿಲ್ಪವನ್ನು ಮೂರು ವಿಧದಲ್ಲಿ ಇರುತ್ತವೆಯೆಂದು ವೈಖಾನಸ ಆಗಮವು ಪ್ರತ್ಯೇಕಿಸುತ್ತವೆ, ಅವನು ತನ್ನ ಕಾಲನ್ನು ಯಾವ ಮಟ್ಟದವರೆಗೆ ಎತ್ತಿರುವನೋ, ಅದನ್ನು ಆಧರಿಸಿ, ಅದರಂತೆ ಬಲಗಾಲಿನ ಮಂಡಿಯವರೆಗೆ, ಹೊಟ್ಟೆಯ ಹೊಕ್ಕಳಿನವರೆಗೆ ಅಥವಾ ಹಣೆಯವರೆಗೆ ಎಂದು ವರ್ಗೀಕರಿಸಲಾಗುತ್ತದೆ. ಈ ಮೂರು ವಿಧಗಳು ಭೂಮಿ (ಭೂಲೋಕ), ಮಧ್ಯಲೋಕ ಮತ್ತು ಸ್ವರ್ಗವನ್ನು ತ್ರಿವಿಕ್ರಮನು ಆಕ್ರಮಿಸಿರುವುದು ತೋರುತ್ತದೆ. (ಪ್ರತಿನಿಧಿಸುತ್ತವೆ). ನಾಲ್ಕು ಕೈಗಳನ್ನು ತೋರಿದರೆ ಅವುಗಳಲ್ಲಿ ಒಂದು ಬಲಗೈ ಶಂಖವನ್ನು ಮತ್ತು ಎಡಗೈ ಚಕ್ರವನ್ನು ಹಿಡಿದಿರಬೇಕು. ಒಂದು ವೇಳೆ ತ್ರಿವಿಕ್ರಮಗೆ ಎಂಟು ಕೈಗಳನ್ನು ತೋರಿದ್ದರೆ ಐದು ಕೈಗಳಲ್ಲಿ ಶಂಖ, ಚಕ್ರ, ಗದೆ, ಸಾರಂಗ ಮತ್ತು ಹಲ (ನೇಗಿಲು) ಇರಬೇಕು. ಬಲಗಾಲ ಭೂಮಿಯ ನೆಲದ ಮೇಲೆ ದೃಢವಾಗಿರಬೇಕು ಹಾಗೂ ಎಡಗಾಲು ಮೇಲೆತ್ತಿ ಪ್ರಪಂಚವನ್ನು ಆವರಿಸಿದಂತಿರಬೇಕು. ತ್ರಿವಿಕ್ರಮನ ಮೇಲೆ ಪಾದಗಳನ್ನು ಬ್ರಹ್ಮನು ತೊಳೆಯುವಂತೆ ತೋರಬೇಕು. ಅದೇ ಶಿಲಾಫಲಕದಲ್ಲಿ ಶಿವನು ಕೈಮುಗಿದಿರುವಂತೆ ತೋರಬೇಕು. ಮುಂಚಿನ ಘಟನೆಯನ್ನು ನೆನಪಿಸುವಂತೆ ತ್ರಿವಿಕ್ರಮನ ಎಡಗಾಲಿನ ಬಳಿಯಲ್ಲಿ ವಾಮನನು ಛತ್ರಿಯನ್ನು ಎಡಗೈಯಲ್ಲಿ ಹಿಡಿದಿರುವಂತೆಯೂ ಅವನ ಎದುರು ರಾಜ ಬಲಿಯು ಅವನಿಗೆ ನೀಡಿದ ದಾನವನ್ನು ಕೊಡಲು ನೀರು ಇರುವ ಒಂದು ಪಾತ್ರೆಯನ್ನು ಹಿಡಿದು ವಾಮನನಿಗೆ ನೀರನ್ನು ಹಾಕುತ್ತಿರುವಂತೆ ಮತ್ತು ಸ್ವೀಕರಿಸಲು ಸಿದ್ಧನಿರುವಂತೆ ತೋರಬೇಕು. ಬಲಿಯ ಗುರು ಶುಕ್ರಾಚಾರ್ಯನು ಅಲ್ಲಿರಬೇಕು.

ಭಾರತದಾದ್ಯಂತ ದೊರಕಿರುವ ವಾಮನ ಮತ್ತು ತ್ರಿವಿಕ್ರಮರ ಶಿಲ್ಪಗಳಲ್ಲಿ ವೈವಿಧ್ಯಮಯತೆಯು ಕಾಣಸಿಗುವುದಿಲ್ಲ. ಎರಡು ಕೈಗಳಿರುವ ವಾಮನನ ಶಿಲ್ಪಗಳು ಸಾಮಾನ್ಯವಾಗಿ ಗುಪ್ತರ ಕಾಲದಿಂದ ವಿಜಯನಗರ ಕಾಲದವರೆಗೆ ಮತ್ತು ನಂತರ ಕಾಲದಲ್ಲಿಯೂ ಕಂಡುಬರುತ್ತವೆ. ನಾಲ್ಕು ಕೈಗಳಿರುವ ಶಿಲ್ಪವು ಸಹ ಕೆಲವೊಮ್ಮೆ ಕಂಡುಬರುತ್ತದೆ. ವಾಮನನ

ಆರಾಧನೆಯು ಕ್ರಿ.ಶ. ಮೂರು ಅಥವಾ ನಾಲ್ಕನೆಯ ಶತಮಾನದಿಂದ ಪ್ರಚಲಿತವಾಯಿತೆಂದು ಕಂಡುಬರುತ್ತದೆ. ಮಹಾಭಾರತವು 'ವಾಮನ ತೀರ್ಥ' ಎಂದು ಉಲ್ಲೇಖಿಸುವುದರಿಂದ ಅದು ಮುಖ್ಯ ತೀರ್ಥಕ್ಷೇತ್ರವಾಗಿದ್ದಿರಬೇಕು. ಕುರುಕ್ಷೇತ್ರದ ಬಳಿ ಕೋಟತೀರ್ಥದಲ್ಲಿ ವಾಮನನ್ನು ಸ್ಥಾಪಿಸಲಾಗಿತ್ತೆಂದು ವಾಮನ ಪುರಾಣವು ಉಲ್ಲೇಖಿಸಿದೆ. ಕಾಳಿದಾಸನು ತನ್ನ ಕಾವ್ಯ 'ರಘುವಂಶದ' ಪ್ರಾರಂಭಿಕ ಪದ್ಯಗಳು/ಅಧ್ಯಾಯಗಳನ್ನು ಆರಂಭಿಸಲು ವಾಮನನು ತನ್ನ ಕೆಲಸ ನಿರ್ವಹಿಸಲು ಪಟ್ಟಷ್ಟು ಕಷ್ಟವನ್ನು ತಾನು ಪಡಬೇಕಾಯಿತೆಂದು ವಿವರಿಸಿದ್ದಾನೆ[2].

ವಿಷ್ಣುವಿನ ದಶಾವತಾರ ಶಿಲಾಫಲಕಗಳು ಹಂಪಿಯಲ್ಲಿ ಕೆಲವೆಡೆ ದೊರಕಿವೆ. ಆ ಶಿಲಾಫಲಕಗಳಲ್ಲಿ ವಿಷ್ಣುವಿನ ಐದನೆಯ ಅವತಾರ ವಾಮನನನ್ನು ತೋರಲಾಗಿದೆ. ಇವುಗಳೆಲ್ಲದರಲ್ಲಿಯೂ ವಾಮನ–ತ್ರಿವಿಕ್ರಮನು-ನಿಂತಿರುವಂತೆ, ಇತರೆ ಶಿಲ್ಪಗಳಂತೆ, ಎರಡು ಕೈಗಳೊಂದಿಗೆ ಮಾತ್ರ ಕೆತ್ತಲಾಗಿದೆ. ಎಡಗೈಯಲ್ಲಿನ ಛತ್ರಿಯು ವಾಮನ ತಲೆಯ ಭಾಗವನ್ನು ಆವರಿಸಿದಂತೆ ಹಾಗೂ ಬಲಗೈ ಇಳಿಬಿಟ್ಟಿದ್ದು ಅದರಲ್ಲಿ ಕಮಂಡಲ ಹಿಡಿದಿರುವಂತೆ ಕೆತ್ತಲಾಗಿದೆ. ಅವನು ತುಂಡು ಉಡುಗೆಯನ್ನು ಕೆಳಭಾಗದ ಮಂಡಿಯವರೆಗೆ ಧರಿಸಿರುವಂತೆ, ಬ್ರಾಹ್ಮಣರು ಧರಿಸುವ ಧೋತಿಯಂತೆ ತೋರಲಾಗುತ್ತದೆ. ಜುಟ್ಟನ್ನು ಹೊರತುಪಡಿಸಿ ತಲೆಗೂದಲನ್ನು ಸಂಪೂರ್ಣವಾಗಿ ತೆಗೆದು ಬೋಳಿಸಿದಂತಿರಬೇಕು. ಆದರೆ ಇದನ್ನು ಶಿಲ್ಪಗಳಲ್ಲಿ ನಿಖರವಾಗಿ ತೋರದಿದ್ದರೂ, ಶಿಲ್ಪದಲ್ಲಿ ಮುಖದ ಭಾವ ಮತ್ತು ರಚನೆಯ ದೃಷ್ಟಿಯಿಂದ ವೇದಾಧ್ಯಯನಗಳ ಅಧ್ಯಯನದಲ್ಲಿ ತೊಡಗಿಸಿಕೊಂಡ ಬ್ರಹ್ಮಚಾರಿಯೆಂದು ಗುರುತಿಸಲು ಸಾಧ್ಯವಾಗುತ್ತದೆ. ಇದು ಒಂದು ಶಿಲ್ಪದಲ್ಲಿ ಕಂಡುಬರುತ್ತದೆ. ಆದರೆ ವಿಜಯನಗರ ಶಿಲ್ಪಿಯೂ, ಅಂದಿನ ಕಾಲದ ಪ್ರಚಲಿತ ಶೈಲಿಯಂತೆ ವಾಮನನ ಕಾಲಿಗೆ ಕಾಲ್ಗಡಗ, ಕೈಗಳಲ್ಲಿ ಆಭರಣಗಳು, ಕೊರಳಲ್ಲಿ ಕಂಠಹಾರ ಇತ್ಯಾದಿಗಳನ್ನು ತೋರುವುದರ ಮೂಲಕ ಶಾಸ್ತ್ರಗ್ರಂಥಗಳ ಉಲ್ಲೇಖಗಳಿಗಿಂತ ಭಿನ್ನವಾಗಿ ತೋರಿರುವುದು ಗಮನಾರ್ಹ.

ವಿಜಯನಗರ ಮತ್ತು ವಿಜಯನಗರೋತ್ತರ ಕಾಲಗಳಲ್ಲಿ ವಿಷ್ಣುವಿನ ವಾಮನ ಅವತಾರವನ್ನು ಗಡಿಕಲ್ಲುಗಳ ಮೇಲೆ ರೇಖಾಚಿತ್ರಗಳಲ್ಲಿ ತೋರಲಾಗಿದೆ. ಇವುಗಳಲ್ಲಿ ವಾಮನ–ವಿಷ್ಣುವು ತನ್ನ ಎಡಗೈಯಲ್ಲಿ ತೆರೆದ ಛತ್ರಿ ಮತ್ತು ಬಲಗೈಯಲ್ಲಿ ಕಮಂಡಲವನ್ನು ಹಿಡಿದಿರುವಂತೆ ತೋರಲಾಗಿದೆ. ಅವನು ಕುಬ್ಜನಾಗಿ, ಧೋತಿ ಅಥವಾ ಕೆಳಗಿನ ಉಡುಗೆಯನ್ನು ಧರಿಸಿದ್ದು, ತಲೆಯಲ್ಲಿನ ಜುಟ್ಟನ್ನು ಗಂಟು ಹಾಕಿದಂತೆ ಇದ್ದು ಅದು ಅವನನ್ನು ಬ್ರಹ್ಮಚಾರಿ ಮತ್ತು ವಿದ್ಯಾರ್ಥಿಯೆಂದು ಸೂಚಿಸುತ್ತದೆ. ವಿಜಯನಗರದ ಅರಸರು ಮತ್ತು ಇತರರು ಧಾರ್ಮಿಕ ಕಾರ್ಯಕ್ಕೆ ಹಾಗೂ ಸಂಸ್ಥೆಗಳಿಗೆ ದಾನ ನೀಡಿದ ಭೂಮಿಯನ್ನು ತೋರಲು ವಾಮನನ ರೇಖಾಚಿತ್ರವಿರುವ ಗಡಿಕಲ್ಲುಗಳನ್ನು ಜಮೀನಿನ ಎಲ್ಲೆ ಅಥವಾ ಗಡಿಗಳನ್ನು ಗುರುತಿಸಲು ಜಮೀನಿನಲ್ಲಿ ನೆಡಲಾಗುತ್ತಿತ್ತು[3].

ವಿಜಯನಗರ ಕಾಲದಲ್ಲಿ, ಅದರಲ್ಲಿಯೂ ಮುಖ್ಯವಾಗಿ ವಿಜಯನಗರಪಟ್ಟಣ (ಹಂಪಿಯಲ್ಲಿ) ವಾಮನನ ಅವತಾರವನ್ನು ಗೋಡೆಗಳು ಮತ್ತು ಕಂಬಗಳಲ್ಲಿ, ಮುಖ್ಯವಾಗಿ ವೈಷ್ಣವ ದೇವಾಲಯಗಳಲ್ಲಿ ಅಧಿಕವಾಗಿ ಹಾಗೂ ಇತರೆ ದೇವಾಲಯಗಳಲ್ಲಿ ಕಡಿಮೆ ಸಂಖ್ಯೆಯಲ್ಲಿ ಕೆತ್ತಲಾಗಿದೆ/ಪ್ರತಿನಿಧಿಸಲಾಗಿದೆ. ವಾಮನ ಮತ್ತು ತ್ರಿವಿಕ್ರಮ ರೂಪಗಳು ಇಲ್ಲಿ ದೊರಕಿವೆ. ಅಂತಹ 15 ಉಬ್ಬುಶಿಲ್ಪಗಳು ದೇವಾಲಯಗಳಲ್ಲಿ ದೊರಕಿವೆ. 15 ಉಬ್ಬುಶಿಲ್ಪಗಳಲ್ಲಿ 11 ವಾಮನ ಮತ್ತು 4 ತ್ರಿವಿಕ್ರಮ ಶಿಲ್ಪಗಳು ಅಡಗಿವೆ. ಬಹುತೇಕ ಶಿಲ್ಪಗಳು ಕಂಬಗಳ ಮೇಲಿವೆ. ವಿರೂಪಾಕ್ಷ ದೇವಾಲಯದ ರಂಗಮಂಟಪದ ಛತ್ತಿನಲ್ಲಿರುವ ವರ್ಣಚಿತ್ರದಲ್ಲಿ ವಾಮನ ಅವತಾರವಿದ್ದು ಅದರಲ್ಲಿ ಅವನನ್ನು ಕುಬ್ಜನ ಬದಲಿಗೆ ಸಹಜ ಸಾಮಾನ್ಯ ರೂಪದ ಬ್ರಹ್ಮಚಾರಿಯಾಗಿ ತೋರಲಾಗಿದೆ. ಹಂಪಿಯ ಕೇಂದ್ರವಲಯದಲ್ಲಿ ದೊರಕಿರುವ ವಾಮನನ ಶಿಲ್ಪಗಳನ್ನು ಮಾತ್ರ ಪ್ರಸ್ತುತ ಲೇಖನದಲ್ಲಿ ಪರಿಗಣಿಸಿ ಚರ್ಚಿಸಲಾಗಿದೆ. ಕೇಂದ್ರ ವಲಯದ ಹೊರಗಿರುವ ಪ್ರದೇಶಗಳನ್ನು ಅಧ್ಯಯನಕ್ಕೆ ಪರಿಗಣಿಸಿಲ್ಲ. ಅನೇಕ ಕಿರು ವಾಮನನ ಉಬ್ಬುಶಿಲ್ಪಗಳು ಬಾಗಿಲುವಾಡದ ಸುರುಳಿ ಅಲಂಕರಣೆಗಳಲ್ಲಿ, ಲಲಾಟದಲ್ಲಿ ಮತ್ತು ಇತರೆ ದೇವಾಲಯದ ವಾಸ್ತು ಭಾಗಗಳ ಮೇಲೆ ಕಂಡುಬಂದಿದ್ದರೂ ಅವುಗಳನ್ನು ಸಾಂಖ್ಯಿಕ (ಗಣಕ) ಚರ್ಚೆಗೆ ಪರಿಗಣಿಸಿಲ್ಲ. ಆದರೆ ಮಂಟಪಗಳ ಕಂಬಗಳಲ್ಲಿರುವ ವಾಮನ ಶಿಲ್ಪಗಳನ್ನು ಇಲ್ಲಿ ಪರಿಗಣಿಸಲಾಗಿದೆ[4]. ಆನೆಗೊಂದಿಯ ರಂಗನಾಥ ದೇವಾಲಯದಲ್ಲಿ ವಾಮನ ಮತ್ತು ತ್ರಿವಿಕ್ರಮನ ಉಬ್ಬುಶಿಲ್ಪಗಳಿವೆ.

ಹಂಪಿ ಪರಿಸರದ ದೇವಾಲಯಗಳಲ್ಲಿರುವ ವಾಮನ–ತ್ರಿವಿಕ್ರಮ ಶಿಲ್ಪಗಳ ಕೋಷ್ಟ

	ವಿರೂಪಾಕ್ಷ (ಕ್ರಿ.ಶ. 9–16ನೇ ಶತಮಾನ	ಪ್ರಸನ್ನ ವಿರೂಪಾಕ್ಷ (ಕ್ರಿ.ಶ. 13–14–ನೇ ಶತಮಾನ	ಹಜಾರ ರಾಮಚಂದ್ರ (ಕ್ರಿ.ಶ. 14–15ನೇ ಶತಮಾನ	ಕೃಷ್ಣ (ಕ್ರಿ.ಶ. 1513)	ವಿಠಲ (ಕ್ರಿ.ಶ. 1422–46)	ಪಟ್ಟಾಭಿ ರಾಮ (ಕ್ರಿ.ಶ. 1530–42)	ಮಾಲ್ಯವಂತ ರಘುನಾಥ (ಕ್ರಿ.ಶ. 1534–42)	ತಿರುವೇಂ ಗಳನಾಥ (ಅಚ್ಯುತ ರಾಯ) (ಕ್ರಿ.ಶ. 1534)	ಒಟ್ಟು
ವಾಮನ	0	0	0	1	2	2	5	0	10
ತ್ರಿವಿಕ್ರಮ	7	0	1	0	1	0	0	0	02

ಕೋಟಿಲಿಂಗ ಮತ್ತು ಕಮಲಮಹಲದ ಹತ್ತಿರವಿರುವ ನೈಸರ್ಗಿಕ ಕಣಶಿಲೆಯ ಬೆಟ್ಟದಲ್ಲಿರುವ ಒಂದು ಬಂಡೆಯಲ್ಲಿ ದಶಾವತಾರದ ಉಬ್ಬುಶಿಲ್ಪಗಳಿವೆ. ಇದರಲ್ಲಿ ದಶಾವತಾರಗಳನ್ನು ಕ್ರಮವಾಗಿ ಸಾಲಿನಲ್ಲಿ ಕೆತ್ತಲಾಗಿದ್ದು ವಾಮನಾವತಾರವನ್ನು ಐದನೆಯ ಅವತಾರವಾಗಿ ತೋರಲಾಗಿದೆ. ವಿಷ್ಣುವು ದಶಾವತಾರ ತಾಳಿದ ಅನುಕ್ರಮದಂತೆ ಇಲ್ಲಿ ಕೆತ್ತಲಾಗಿದೆ. ವಾಮನನು ಐದನೆಯ ಸ್ಥಾನವನ್ನು ಪಡೆದಿದ್ದಾನೆ. ಚಕ್ರತೀರ್ಥದ ಕೋಟಿಲಿಂಗದ ಹತ್ತಿರವಿರುವ ಹೆಬ್ಬಂಡೆಯಲ್ಲಿ ಕೆತ್ತಲಾದ ತ್ರಿವಿಕ್ರಮ ಶಿಲ್ಪವು ಚತುರ್ವಿಂಶತಿ ಶಿಲ್ಪಗಳಲ್ಲಿ ವಿಷ್ಣುವಿನ 7ನೇ ರೂಪವಾಗಿ ತೋರಿಸಲಾಗಿದೆ. ಈ ಶಿಲ್ಪವು ಸ್ಥಾನಿಕ ಭಂಗಿಯಲ್ಲಿದ್ದು ನಾಲ್ಕು ಕೈಗಳನ್ನು ಹೊಂದಿ ಕ್ರಮವಾಗಿ ಮೇಲಿನ ಕೈಗಳು ಗದೆ, ಚಕ್ರ, ಶಂಖ ಮತ್ತು ಪದ್ಮವನ್ನು ಹಿಡಿದಿವೆ. ಈ ಎರಡೂ ಶಿಲಾಫಲಕಗಳು ಕಡಿದಾದ ಕಣಶಿಲೆಯಲ್ಲಿ, ಸುಲಭವಾಗಿ ತಲುಪಲಾಗದ ಎತ್ತರದ ಸ್ಥಳದಲ್ಲಿ ಕೆತ್ತಿರುವುದರಿಂದ ಅವುಗಳು ಒರಟಾಗಿ ಮೂಡಿದೆ. ವಾಮನನನ್ನು ಒರ್ವ ಕುಬ್ಜ ಬಾಲಕನಂತೆ ತೋರಲಾಗಿದೆ. ಅವನು ತನ್ನ ಎಡಗೈಯಲ್ಲಿ ಛತ್ರಿಯನ್ನು ಹಿಡಿದಿದ್ದು ಅದರ ದಂಡ ಭಾಗವು ಅವನ ಎಡಭುಜದ ಮೇಲೆ ಒರಗಿದೆ ಮತ್ತು ಬಲಗೈಯಲ್ಲಿ ಕಮಂಡಲವನ್ನು ಹಿಡಿದಿಲ್ಲ. ಬ್ರಹ್ಮಚಾರಿಗೆ ಗಂಟು ಹಾಕಿದ ಜುಟ್ಟು ಇರುವ ಕೇಶ ವಿನ್ಯಾಸ ಶೈಲಿಯು ಅವನಿಗಿದ್ದು ಅಕ್ಷಮಾಲೆಯನ್ನು ಕಂಠಹಾರದಂತೆ ಹಾಗೂ ಮಣಿಗಳಿರುವ ತೋಳಬಂಧಿ ಮತ್ತು ಕೈಗಡಗ, ಯಜ್ಞೋಪವೀತ ಮತ್ತು ಧೋತಿಯನ್ನು ಧರಿಸಿರುವನು. ತ್ರಿವಿಕ್ರಮನ ಇನ್ನೊಂದು ಶಿಲ್ಪವುಹಜಾರರಾಮ ದೇವಾಲಯದಲ್ಲಿದ ನವರಂಗದ ಕಂಬದಲ್ಲಿದೆ. ತ್ರಿವಿಕ್ರಮನು ಆಸೀನ ಭಂಗಿಯಲ್ಲಿದ್ದು, ಶ್ರೀದೇವಿ ಮತ್ತು ಭೂದೇವಿ ಸಹಿತವಾಗಿದೆ.

ಪಟ್ಟಾಭಿರಾಮ ದೇವಾಲಯದ ಕಲ್ಯಾಣ ಮಂಟಪದ ಮತ್ತು ಮುಖಮಂಟಪಗಳ ಕಂಬಗಳಲ್ಲಿ ವಾಮನನ ಎರಡು ಶಿಲ್ಪಗಳಿವೆ. ವಾಮನನು ಎಡಗೈಯಲ್ಲಿ ಛತ್ರಿಯನ್ನು ಹಿಡಿದಿದ್ದು ಅದರ ದಂಡ ಭಾಗವು ಎಡಭುಜದ ಮೇಲಿದೆ ಮತ್ತು ಬಲಗೈಯಲ್ಲಿ ಕಮಂಡಲವನ್ನು ಹಿಡಿದಿರುವನು. ಅವನ ಕೇಶವಿನ್ಯಾಸವು ಬ್ರಹ್ಮಚಾರಿಯ ಕೇಶ ವಿನ್ಯಾಸವಾದಂತೆ ಕಟ್ಟಿರುವ ಜುಟ್ಟಿನಂತೆ ರೂಪಿಸಿದ್ದು ಅಕ್ಷರಮಾಲೆಯನ್ನು ಕಂಠಹಾರದಂತೆ, ಧರಿಸಿದ್ದು ಬಾಹುವಳಯ ಮತ್ತು ಕೈಗಡಗಗಳು, ಯಜ್ಞೋಪವೀತ ಮತ್ತು ಧೋತಿಯನ್ನು ಧರಿಸಿದ್ದಾನೆ.

ವಿಠಲ ದೇವಾಲಯದ ಕಲ್ಯಾಣ ಮಂಟಪದಲ್ಲಿನ ಒಂದು ಕಂಬದಲ್ಲಿ ವಾಮನನ ಉಬ್ಬುಶಿಲ್ಪವಿದೆ. ಇಲ್ಲಿ ವಿಷ್ಣುವನ್ನು ಕುಬ್ಜ ವಾಮನನಂತೆ ತೋರಲಾಗಿದೆ. ಎಡಗೈಯಲ್ಲಿ ಛತ್ರಿಯಿದ್ದು, ಅದರ ದಂಡ ಭಾಗವು ಭುಜದ ಮೇಲಿದೆ ಮತ್ತು ಕಮಂಡಲವು ಬಲಗೈಯಲ್ಲಿದೆ. ಅವನ ಕೇಶ ವಿನ್ಯಾಸವಾವು ಕಟ್ಟಿರುವ ಜುಟ್ಟಿನಂತೆ ರೂಪಿಸಿದ್ದು, ಅಕ್ಷರಮಾಲೆಯನ್ನು ಕಂಠಹಾರದಂತೆ ಧರಿಸಿದ್ದು ಮಣಿಗಳಿರುವ ಬಾಹುವಳಯ ಮತ್ತು ಕೈಗಡಗಗಳನ್ನು, ಯಜ್ಞೋಪವೀತ ಮತ್ತು ಧೋತಿಯನ್ನು ಧರಿಸಿರುವನು. ಈ ಉಬ್ಬುಶಿಲ್ಪವನ್ನು ಪ್ರಮಾಣಬದ್ಧವಾಗಿ ಮತ್ತು ಸುಂದರವಾಗಿ ಕೆತ್ತಲಾಗಿದೆ. ಪ್ರಸ್ತುತ ಉಬ್ಬುಶಿಲ್ಪದ ಪಕ್ಕದಲ್ಲಿಯೇ ಇದೇ ಅವತಾರಕ್ಕೆ ಸಂಬಂಧಿಸಿದ ಮುಂದಿನ ಸರಣಿ ಭಾಗವಾಗಿ ಅವನು ತಾಳಿದ ತ್ರಿವಿಕ್ರಮನ ಅವತಾರವನ್ನು ಕೆತ್ತಲಾಗಿದೆ.

ವಿಠಲ ದೇವಾಲಯದಲ್ಲಿರುವ ಒಂದು ಕಂಬದಲ್ಲಿ ತ್ರಿವಿಕ್ರಮನನ್ನು ತೋರಲಾಗಿದೆ. ಅವನಿಗೆ ನಾಲ್ಕು ಕೈಗಳಿದ್ದು ಮೇಲಿನ ಎರಡು ಕೈಗಳು ಕ್ರಮವಾಗಿ ಶಂಖ ಮತ್ತು ಚಕ್ರವನ್ನು ಹಾಗೂ ಕೆಳಗಿನ ಎರಡು ಕೈಗಳು ಅಭಯ ಮತ್ತು ವರದ ಮುದ್ರೆಗಳಲ್ಲಿವೆ. ತ್ರಿವಿಕ್ರಮನು ಕಿರೀಟಮಕುಟಧಾರಿಯಾಗಿದ್ದು, ಹಾರ, ತೋಳಬಂಧಿ, ವಕ್ಷಬಂಧಿ, ಯಜ್ಞೋಪವೀತ, ವೈಜಯಂತಿಮಾಲೆ, ಕಾಲ್ಗಡಗ, ಸಡಿಲವಾದ ಕಾಲ್ಗಡಗ ಮತ್ತು ಧೋತಿಯನ್ನು ಧರಿಸಿದ್ದಾನೆ. ತ್ರಿವಿಕ್ರಮನು ಪೂರ್ಣವಾಗಿ ಅರಳಿದ ತಾವರೆ ಹೂವಿನ ಮೇಲೆ ನಿಂತಿರುವನು. ತಲೆಯ ಹಿಂಭಾಗದಲ್ಲಿ ಕೀರ್ತಿಮುಖವುಳ್ಳ ಪ್ರಭಾವಳಿಯಿದ್ದು, ಮುಖದಿಂದ ಲತಾಸುರುಳಿ ಹೊರಹೊಮ್ಮಿದೆ. ಸಡಿಲ ಕಾಲ್ಗಡಗ ಮತ್ತು ಹಣೆಯಲ್ಲಿ ವೀರರೇಖೆ ಅಥವಾ ತ್ರಿಪುಂಡ್ರಕವನ್ನು ಶಿಲ್ಪದಲ್ಲಿ ತೋರಲಾಗಿದೆ.

ಇದೇ ದೇವಾಲಯದ ಮುಖಮಂಟಪದ ಸಂಗೀತ ಕಂಬದ (ಸಂಯುಕ್ತ ಕಂಬ) ಮೇಲಿರುವ ಬೋದಿಗೆಯಲ್ಲಿ ವಿಷ್ಣುವಿನ ವಾಮನ–ತ್ರಿವಿಕ್ರಮ ಅವತಾರದ ನಿರೂಪಣಾ ಉಬ್ಬುಶಿಲ್ಪವಿದೆ. ಇದನ್ನು ಎರಡು ನಿರೂಪಣಾ ದೃಶ್ಯಗಳಲ್ಲಿ ತೋರಲಾಗಿದೆ. ಕಂಬದ ಬೋದಿಗೆಯ ಎಡಭಾಗದಲ್ಲಿ ವಾಮನನು ಎಡಗೈಯಲ್ಲಿ ಛತ್ರಿಯನ್ನು ಹಿಡಿದು, ಬಲಗೈಯಲ್ಲಿ ರಾಜಬಲಿ ಚಕ್ರವರ್ತಿಯಿಂದ ದಾನವನ್ನು ಪಡೆಯುತ್ತಿರುವಂತೆ ಸಮಭಂಗದಲ್ಲಿ ನಿಂತಿರುವನು. ಇದೇ ದೃಶ್ಯಾವಳಿಯಲ್ಲಿ ವಾಮನನ ಬಲಭಾಗದಲ್ಲಿ ಬಲಿಚಕ್ರವರ್ತಿಯು ಕೈಯಲ್ಲಿ ಕಮಂಡಲವನ್ನು ಹಿಡಿದು ಅದರಿಂದ ಬಲಭಾಗದಲ್ಲಿ ನಿಂತಿರುವ ವಾಮನನ ಬಲಗೈಗೆ ನೀರು ಹಾಕುತ್ತಿರುವಂತೆ ದ್ವಿಭಂಗಿಯಲ್ಲಿ ನಿಂತಿರುವನು. ಬಲಿಯು ಸಾಮಾನ್ಯವಾಗಿ ರಾಜರು ಧರಿಸುವ ಆಭರಣ ಮತ್ತು ವಸ್ತ್ರಗಳನ್ನು ಧರಿಸಿದ್ದು, ಕಿರೀಟ ಮಕುಟಧಾರಿಯಾಗಿದ್ದಾನೆ. ವಾಮನ ಮತ್ತು ರಾಜ ಬಲಿಚಕ್ರವರ್ತಿಯು ಯಜ್ಞೋಪವೀತ ಮತ್ತು ಧೋತಿಯನ್ನು ಧರಿಸಿರುವರು.

ಕಂಬದ ಮುಂಭಾಗದ ಬೋದಿಗೆಯ ಬಾಗದಲ್ಲಿ ವಾಮನನು ಬೃಹದಾಕಾರವಾಗಿ ಅವತಾರ ತಾಳಿದ ತ್ರಿವಿಕ್ರಮನ ಉಬ್ಬುಶಿಲ್ಪವಿದೆ. ಅವನು ಪೀಠದ ಮೇಲೆ ತ್ರಿಭಂಗಿಯಲ್ಲಿ ನಿಂತಿರುವನು. ಅವನಿಗೆ ಹತ್ತು ಕೈಗಳಿದ್ದು, ಕೆಳಗಿನ ಬಲಗೈ ಅಭಯ ಮುದ್ರೆಯಲ್ಲಿದೆ. ಉಳಿದ ಬಲಗೈಗಳು ಖಡ್ಗ, ಬಾಣ, ತರ್ಜನಿಮುದ್ರೆ ಮತ್ತು ಚಕ್ರವನ್ನು ಹಿಡಿದಿದ್ದರೆ ಕೆಳಗಿನ ಎಡಗೈ ವರದ ಮುದ್ರೆಯಲ್ಲಿದ್ದು ಉಳಿದ ಎಡಗೈಗಳು ಡಾಲು, ಬಿಲ್ಲು, ತರ್ಜನಿಮುದ್ರೆ ಮತ್ತು ಶಂಖವನ್ನು ಕ್ರಮವಾಗಿ ಹಿಡಿದಿರುವನು. ಉದ್ದನೆಯ ಕಿರೀಟ ಮಕುಟಧಾರಿಯಾಗಿದ್ದು, ಕುಂಡಲ, ಕಂಠಹಾರ, ಹಾರ, ಯಜ್ಞೋಪವೀತ, ಚನ್ನವೀರ, ಸೊಂಟಪಟ್ಟಿ, ಧೋತಿ, ಬಾಹುವಳಯ, ಕೈಗಡಗ, ಉಂಗುರ ಮತ್ತು ಕಾಲ್ಗಡಗವನ್ನು ಧರಿಸಿರುವನು. ತ್ರಿಪುಂಡ್ರಕ ಚಿಹ್ನೆಯು ಹಣೆಯಲ್ಲಿದೆ. ಬಾಯಲ್ಲಿನ ಕೋರೆಹಲ್ಲುಗಳೊಂದಿಗೆ ತ್ರಿವಿಕ್ರಮನ ಮುಖವನ್ನು ಉಗ್ರವಾಗಿ ತೋರಲಾಗಿದೆ.

ವಾಮನ–ತ್ರಿವಿಕ್ರಮನ ಮತ್ತೊಂದು ನಿರೂಪಣಾ ಶಿಲ್ಪದ ದೃಶ್ಯವನ್ನು ಕಂಬದ ಬಲಬದಿಯ ಬೋದಿಗೆಯಲ್ಲಿ ತೋರಲಾಗಿದೆ. ಪೀಠದ ಮೇಲೆ ತ್ರಿಭಂಗಿಯಲ್ಲಿ ನಿಂತಿರುವ ತ್ರಿವಿಕ್ರಮನು ಎಡಗಾಲನ್ನು ಪೀಠದ ಮೇಲೆ ದೃಢವಾಗಿ ಇರಿಸಿದ್ದು, ಬಲಗಾಲನ್ನು ರಾಜ ಬಲಿಚಕ್ರವರ್ತಿಯ ತಲೆ ಮೇಲೆ ಇರಿಸಿ ಅವನನ್ನು ಪಾತಾಳಕ್ಕೆ ತಳ್ಳುತ್ತಿರುವಂತೆ ತೋರಲಾಗಿದೆ. ರಾಜ ಬಲಿಯು ತನ್ನ ಎರಡು ಕೈಗಳನ್ನು ಅಂಜಲಿ ಮುದ್ರೆಯಲ್ಲಿರಿಸಿರುವನು. ತ್ರಿವಿಕ್ರಮನಿಗೆ ಎಂಟು ಕೈಗಳಿದ್ದು, ಕೆಳಗಿನ ಬಲಗೈಯು ಅಭಯ ಮುದ್ರೆಯಲ್ಲಿದ್ದು, ಉಳಿದ ಬಲಗೈಗಳಲ್ಲಿ ಖಡ್ಗ, ಬಾಣ ಮತ್ತು ಸಾಂಕೇತಿಕ ಚಕ್ರವನ್ನು ಹಿಡಿದ್ದರೆ, ಅವನ ಕೆಳಗಿನ ಎಡಗೈ ವರದ ಮುದ್ರೆಯಲ್ಲಿದ್ದು ಉಳಿದ ಕೆಳಗಿನ ಎಡಗೈಗಳು ಡಾಲು, ಬಿಲ್ಲು ಮತ್ತು ಸಾಂಕೇತಿಕ ಶಂಖ ಹಿಡಿದಿರುವನು. ಉದ್ದನೆಯ ಕಿರೀಟಮಕುಟ, ಕುಂಡಲ, ಕಂಠಹಾರ, ಹಾರ, ಚನ್ನವೀರ, ಯಜ್ಞೋಪವೀತ, ಜೋಲಾಡುವ ಕುಚ್ಚು ಇರುವ ಸೊಂಟಪಟ್ಟಿ, ಧೋತಿ, ಬಾಹುವಳಯ, ಕೈಗಡಗ, ಕಾಲ್ಗಡಗ ಮತ್ತು ಸಡಿಲ ಕಾಲ್ಗಡಗಗಳನ್ನು ಧರಿಸಿರುವನು. ವಿಜಯನಗರ ಕಾಲದ ಶಿಲ್ಪಗಳಲ್ಲಿ ತ್ರಿಪುಂಡ್ರಕವನ್ನು ಹಣೆಯಲ್ಲಿ ತೋರುವ ಕ್ರಮದಂತೆ ಇಲ್ಲಿಯೂ ದೇವತೆಯ ಹಣೆಯಲ್ಲಿ ತೋರಲಾಗಿದೆ. ರಾಜ ಬಲಿಚಕ್ರವರ್ತಿಗೆ ವರವನ್ನು ನೀಡಿದ ನಂತರ ತ್ರಿವಿಕ್ರಮನ ಮುಖ ಭಾವವು ಶಾಂತತೆಯಿಂದ ಇರುವಂತೆ ತೋರಲಾಗಿದೆ.

ದೇವರ ಎಡಭಾಗದಲ್ಲಿ ಕುಬ್ಜ ವಾಮನನು ಎಡಗೈಯಲ್ಲಿ ಛತ್ರಿಯನ್ನು ಹಿಡಿದು ಸಮಭಂಗಿಯಲ್ಲಿ ನಿಂತಿರುವನು. ತ್ರಿವಿಕ್ರಮನ ತಲೆಯ ಬಲಭಾಗದಲ್ಲಿ ಅಂಜಲಿ ಮುದ್ರೆಯಲ್ಲಿ ಹಾರುತ್ತಿರುವ ಗಂಧರ್ವ ದಂಪತಿಗಳನ್ನು ತೋರಲಾಗಿದೆ.

ಹಜಾರ ರಾಮಚಂದ್ರ ದೇವಾಲಯದ ಮುಖಮಂಟಪದ ಕಂಬದಲ್ಲಿ ತ್ರಿವಿಕ್ರಮ ಮತ್ತು ಬಲಿಚಕ್ರವರ್ತಿಯ ಉಬ್ಬುಶಿಲ್ಪವನ್ನು ಕೆತ್ತಲಾಗಿದೆ. ಇದರಲ್ಲಿ ವಿಷ್ಣುವು ತ್ರಿವಿಕ್ರಮನಾಗಿ ಒಂದು ಪೀಠದ ಮೇಲೆ ನಿಂತಿರುವನು. ಅವನ ಬಲಗಾಲು ಭೂಮಿಯ ಮೇಲಿರುವ ಪೀಠದ ಮೇಲೆ ಭದ್ರವಾಗಿ ಇರಿಸಿ, ತನ್ನ ದೇಹದ ಸಮತೋಲನ ಕಾಯ್ದುಕೊಳ್ಳಲು ಬಲಗಾಲನ್ನು ಸ್ವಲ್ಪ ಬಾಗಿಸಿದಂತೆ ಇರಿಸಿದ್ದು, ಎಡಗಾಲನ್ನು ಆಕಾಶವನ್ನು ಅಳೆಯುವಂತೆ ಭುಜದತನಕ ಮೇಲೆತ್ತಿರುವನು. ಅವನಿಗೆ ನಾಲ್ಕು ಕೈಗಳಿದ್ದು, ಕೆಳಗಿನ ಬಲಗೈ ಅಭಯ ಮುದ್ರೆಯಲ್ಲಿದ್ದು ಮೇಲಿನ ಬಲಗೈ ಸಾಂಕೇತಿಕ ಚಕ್ರವನ್ನು ತನ್ನೆರಡು ಮಧ್ಯದ ಬೆರಳುಗಳ ನಡುವೆ ಇರಿಸಿಕೊಂಡಿದ್ದರೆ, ಅವನ ಕೆಳಗಿನ ಎಡಗೈ ಸ್ವಲ್ಪ ಮೇಲೆತ್ತಿದ್ದು ವರದ ಮುದ್ರೆಯಲ್ಲಿದೆ ಮತ್ತು ಮೇಲಿನ ಎಡಗೈಯಲ್ಲಿ ಸಾಂಕೇತಿಕ ಶಂಖವನ್ನು ತನ್ನೆರಡು ಬೆರಳುಗಳ ಮಧ್ಯದಲ್ಲಿರಿಸಿಕೊಂಡಿರುವನು. ಉದ್ದನೆಯ ಕಿರೀಟಮಕುಟ, ಕುಂಡಲಗಳು, ಕಂಠಹಾರ, ಯಜ್ಞೋಪವೀತ, ಪದಕವಿರುವ ನೀಳ ವನಮಾಲ, ಸೊಂಟಪಟ್ಟಿ, ಧೋತಿ ಮತ್ತು ಇತರೆ ಆಭರಣಗಳನ್ನು ಧರಿಸಿರುವನು.

ಎಡಭಾಗದಲ್ಲಿ ಅಂಜಲಿ ಮುದ್ರೆಯಲ್ಲಿ ರಾಜ ಬಲಿಚಕ್ರವರ್ತಿಯು ನಿಂತಿರುವನು[5]. ಅವನು ಕಿರಿದಾದ ಕರಂಡಮಕುಟ, ಧೋತಿ ಮತ್ತು ಇತರೆ ಆಭರಣಗಳನ್ನು ಧರಿಸಿರುವನು. ಅವನು ಶರಣಾಗತ ಭಾವದಲ್ಲಿರುವಂತೆ, ಮೂರನೆಯ ಪಾದವನ್ನು ತನ್ನ ತಲೆಯ ಮೇಲೆ ಇರಿಸಲು ಸಮ್ಮತಿಸಿದವನಂತೆ ತೋರಲಾಗಿದೆ. ಬೃಹತ್ ಗಾತ್ರದ ಕಂಬದ ಮೇಲೆ ಅತ್ಯಂತ ಪ್ರಮಾಣಬದ್ಧ ಹಾಗೂ ಸುಂದರವಾಗಿ ಈ ಶಿಲ್ಪವನ್ನು ಕೆತ್ತಲಾಗಿದೆ.

ಮಾಲ್ಯವಂತ ದೇವಾಲಯದ ಮಂಟಪ, ಮುಖಮಂಟಪ, ಅಧಿಷ್ಠಾನ ಮತ್ತು ಗೋಪುರದ್ವಾರಗಳಲ್ಲಿ ಐದು ವಾಮನಾವತಾರ ಶಿಲ್ಪಗಳಿವೆ. ಈ ಉಬ್ಬುಶಿಲ್ಪಗಳು ಒಂದನ್ನು ಒಂದು ಹೋಲುತ್ತಿದ್ದು ಮೇಲೆ ವಿವರಿಸಿದ ಗುಣ ಲಕ್ಷಣಗಳನ್ನು ಹೊಂದಿದೆ. ಕೃಷ್ಣ, ಅಚ್ಯುತರಾಯ (ತಿರುವೇಂಗಳನಾಥ) ದೇವಾಲಯಗಳ ಮತ್ತು ಪ್ರಸನ್ನ ವಿರೂಪಾಕ್ಷ ದೇವಾಲಯದಲ್ಲಿ ವಾಮನ ಶಿಲ್ಪಗಳಿಲ್ಲ[6].

ಬಹುತೇಕ ವಾಮನ–ತ್ರಿವಿಕ್ರಮ ಶಿಲ್ಪಗಳು ಒಂದನ್ನೊಂದು ಹೋಲುತ್ತವೆ ಮತ್ತು ಕೆಲವು ಶಿಲ್ಪಗಳಲ್ಲಿ ಅಲ್ಪ ಪ್ರಮಾಣದ ವ್ಯತ್ಯಾಸಗಳು ಕಂಡುಬರುತ್ತವೆ. ಬೇರೆ ಬೇರೆ ಶಿಲ್ಪಿಗಳು ಕೆತ್ತನೆಯ ಕೆಲಸಗಳನ್ನು ಮಾಡಿರುವುದರಿಂದ, ಶಿಲ್ಪಿಯು ತನ್ನದೇ ಆದ ಛಾಪನ್ನು ತನ್ನ ಶೈಲಿಯನ್ನು ಶಿಲ್ಪದಲ್ಲಿ ತೋರಿರುವುದರಿಂದಲೂ ಇಂತಹ ವ್ಯತ್ಯಾಸಗಳು ಮತ್ತು ಭಿನ್ನತೆಯು ಕಂಡುಬರುತ್ತದೆ, ಆದ್ದರಿಂದ ವಿವಿಧ ಬಗೆಯ ವಾಮನ–ತ್ರಿವಿಕ್ರಮ ಶಿಲ್ಪಗಳು ಮೂಡಿಬಂದಿವೆ. ಎಲ್ಲಾ ಶಿಲ್ಪಗಳಲ್ಲಿಯೂ ಸಾಮಾನ್ಯವಾಗಿ ವಸ್ತ್ರಗಳು, ಮುಖಭಾವ, ಭಂಗಿ ಮತ್ತು ಚಿಹ್ನೆಗಳನ್ನು ಕಾಣಬಹುದು.


ವಿಜಯನಗರ ಕಾಲದಲ್ಲಿ, ರಾಜಧಾನಿ ವಿಜಯನಗರಪಟ್ಟಣದಲ್ಲಿ (ಹಂಪಿ ಪರಿಸರ) 15 ವಾಮನನ ಶಿಲ್ಪಗಳು ದೊರಕಿವೆ. ಎಲ್ಲಾ ಶಿಲ್ಪಗಳು ಉಬ್ಬುಶಿಲ್ಪಗಳಾಗಿದ್ದು, ದುಂಡನೆಯ ಶಿಲ್ಪಗಳು ದೊರೆತಿಲ್ಲ. ಒಟ್ಟಾರೆಯಾಗಿ 15 ವಾಮನ–ತ್ರಿವಿಕ್ರಮ ಶಿಲ್ಪಗಳನ್ನು ಇಲ್ಲಿ ತೋರಲಾಗಿದೆ. ತ್ರಿವಿಕ್ರಮನಿಗಿಂತ ವಾಮನನು ಅಧಿಕ ಪ್ರಸಿದ್ಧನಾಗಿದ್ದನು. ವಾಮನನ ಶಿಲ್ಪಗಳಲ್ಲಿ ಕೆಲವೊಂದು ಸಣ್ಣ ಪುಟ್ಟ ವ್ಯತ್ಯಾಸಗಳನ್ನು ಗಮನಿಸಬಹುದಾಗಿದೆ. ಉದಾಹರಣೆಗೆ ಕೆಲವು ಶಿಲ್ಪಗಳಲ್ಲಿ ವಾಮನನ ಛತ್ರಿಯನ್ನು ಬಲಗೈಯಲ್ಲಿ ಹಿಡಿದಿದ್ದರೆ ಇನ್ನೂ ಕೆಲವು ಶಿಲ್ಪಗಳಲ್ಲಿ ಎಡಗೈಯಲ್ಲಿ ಹಿಡಿದಿರುವನು. ಕೆಲವು ಶಿಲ್ಪಗಳಲ್ಲಿ ಅವನು ದ್ವಿಭಂಗಿಯಲ್ಲಿದ್ದರೆ, ಇನ್ನೂ ಕೆಲವುದರಲ್ಲಿ ಸಮಭಂಗಿಯಲ್ಲಿರುವನು. ಕೆಲವು ಶಿಲ್ಪಗಳಲ್ಲಿ ಅವನ ಮುಖ ಭಾವವು ಬಾಲಕನಂತಿದ್ದರೆ, ಮತ್ತೆ ಕೆಲವು ಶಿಲ್ಪಗಳಲ್ಲಿ ಯುವಕನ ಮುಖ ಭಾವವಿದೆ. ಅವನು ಧರಿಸಿರುವ ವಸ್ತ್ರ ಮತ್ತು ಆಭರಣಗಳಲ್ಲಿ ಕೆಲವು ಚಿಕ್ಕ ಪುಟ್ಟ ವ್ಯತ್ಯಾಸಗಳು ಕಂಡುಬರುತ್ತವೆ. ಆಗಮಶಾಸ್ತ್ರದ ನಿಯಮಗಳನ್ನು ಮೀರಿ, ಶಿಲ್ಪಿಯು ತನ್ನ ಸ್ವಂತಿಕೆ, ಶೈಲಿಯನ್ನು ಶಿಲ್ಪಗಳಲ್ಲಿ ಮೂಡಿಸಿರುವುದು ಕಂಡುಬಂದಿದೆ. ಪ್ರಾಯಶಃ ಬೇರೆ ಬೇರೆ ಶಿಲ್ಪಿಗಳು ಕೆತ್ತನೆಯ ಕಾರ್ಯದಲ್ಲಿ ತೊಡಗಿದ್ದರಿಂದಲೂ ಸಹ ವಿಭಿನ್ನ ಶೈಲಿ ಮತ್ತು ಆಗಮಶಾಸ್ತ್ರ ನಿಯಮ ಮೀರಿಕೆಗೆ ಕಾರಣವಾಗಿರಬಹುದು. ಆದ್ದರಿಂದ ಇಲ್ಲಿ ವಿಭಿನ್ನ ಶೈಲಿಯ ವಾಮನ–ತ್ರಿವಿಕ್ರಮ ಶಿಲ್ಪಗಳು ದೊರಕಿವೆ. ವಾಮನ ಮತ್ತು ತ್ರಿವಿಕ್ರಮರ ದೇವಾಲಯಗಳು ಹಂಪಿ ಪರಿಸರದಲ್ಲಿ ಕಂಡುಬಂದಿಲ್ಲ. ವಿಷ್ಣುವಿನ ಮೊದಲ ನಾಲ್ಕು ಅವತಾರಗಳಿಗೆ ಹೋಲಿಸಿದರೆ, ಈ ಅವತಾರವು ಅಷ್ಟಾಗಿ ಪ್ರಸಿದ್ಧವಾಗಿರಲಿಲ್ಲ ಮತ್ತು ಪ್ರಸಿದ್ಧ


ಕಥಾವಸ್ತುವಾಗಿರಲಿಲ್ಲವೆಂದು ಗಣಿಸಬಹುದು. ಮತ್ಸ ಅವತಾರವು ಕೂರ್ಮ ಮತ್ತು ವರಾಹ ಅವತಾರಗಳಿಗಿಂತ ಕಡಿಮೆ ಪ್ರಸಿದ್ಧಿಯಾಗಿತ್ತು. ಕೂರ್ಮ ಅವತಾರದ 74 ಶಿಲ್ಪಗಳು ಹಂಪಿ ಪರಿಸರದಲ್ಲಿ ದೊರೆತಿರುವುದನ್ನು ಈಗಾಗಲೇ ಗಮನಿಸಲಾಗಿದ್ದು ಅವು ಅಧಿಕ ಪ್ರಚಲಿತ ಮತ್ತು ಪ್ರಸಿದ್ಧವಾಗಿತ್ತು. ಅದರಂತೆಯೇ ವರಾಹ ಅವತಾರವು ಸಹ ಪ್ರಸಿದ್ಧವಾಗಿದ್ದು, ದುಂಡನೆಯ ವರಾಹ ಶಿಲ್ಪಗಳು ಮತ್ತು ದೇವಾಲಯಗಳು ಹಂಪಿ ಪರಿಸರದಲ್ಲಿ ದೊರಕಿವೆ.

ಆಧಾರಸೂಚಿ ಮತ್ತು ಟಿಪ್ಪಣಿಗಳು

1. ಗೋಪಿನಾಥರಾವ್, ಟಿ.ಎ. **ಎಲಿಮೆಂಟ್ಸ್ ಆಫ್ ಹಿಂದೂ ಐಕನೋಗ್ರಾಫಿ,** ಸಂ.2, ಪು. 120–124, ಸುರೇಶ್ ಕೆ.ಎಂ., **ಸ್ಕಲ್ಪರಲ್ ಆರ್ಟ್ ಆಫ್ ಹಂಪಿ,** ಪು. 97–100.
2. ಗೋಪಿನಾಥರಾವ್ ಟಿ.ಎ, ಪೂರ್ವೋಕ್ತ, ಪು. 120–124.
3. ಪದ್ಮಜಾ ದೇಸಾಯಿ, 2015, **ಹಂಪಿ ಪರಿಸರದ ವೈಷ್ಣವ ಶಿಲ್ಪಗಳು** (ಅಪ್ರಕಟಿತ ಪಿಹೆಚ್.ಡಿ. ಮಹಾಪ್ರಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. 170–171; **ಅಗ್ನಿಪುರಾಣ,** 6, ಪು. 116; **ಭಾಗವತ ಪುರಾಣ,** 3, 26 ಮತ್ತು ವಿಷ್ಣುಧರ್ಮೋತ್ತರ ಪುರಾಣ, 85, 88
4. ಅದೇ, ಪು.207–208; ಪದ್ಮಜಾ ದೇಸಾಯಿಯವರು ಒಟ್ಟು 13 ವಾಮನ–ತ್ರಿವಿಕ್ರಮ ಶಿಲ್ಪಗಳಿವೆಯೆಂದು ಕೋಷ್ಟಕದಲ್ಲಿ ನಮೂದಿಸಿರುತ್ತಾರೆ.
5. ಹಿಂದೂ ಪುರಾಣಗಳು ಮತ್ತು ರಾಮಾಯಣ ಹಾಗೂ ಮಹಾಭಾರತದಂತೆ ಮಾನವಾತೀತ, ಮರಣವಿಲ್ಲದ ಏಳು ಜನರನ್ನು ಸಪ್ತ ಚಿರಂಜೀವಿಗಳು ಎಂದು ಕರೆಯಲಾಗುತ್ತದೆ. ಅರ್ಥಾತ್ ಅವರುಗಳು ಮರಣವಿಲ್ಲದವರು. ಮೃತ್ಯುಲೋಕದಲ್ಲಿ ಅವರು ಅಪವಾದವೆಂದು ಪರಿಗಣಿತರಾಗಿದ್ದಾರೆ. ಸತ್ಯಯುಗ, ತ್ರೇತಾಯುಗ, ದ್ವಾಪರಯುಗ ಮತ್ತು ಕಲಿಯುಗದಲ್ಲಿಯೂ ಇರುವವರು. ಮನುಷ್ಯನಿಗೆ ಅದೃಷ್ಟ, ದೀರ್ಘ ಆಯಸ್ಸು ಮತ್ತು ಕೀರ್ತಿಯ ಪ್ರಾಪ್ತಿಗಾಗಿ ಈ ಕೆಳಗಿನ ಮಂತ್ರವನ್ನು ಪ್ರತಿನಿತ್ಯ ಪಠಿಸಲಾಗುತ್ತದೆ.
   "ಅಶ್ವಥ್ಥಾಮ ಬಲಿರ್ ವ್ಯಾಸೋ ಹನುಮಾನಶ್ಚ ವಿಭೀಷಣ ಕೃಪಾಚಾರ್ಯಚ ಪರಶುರಾಮಮ್ ಸಪ್ತ ಚಿರಂಜೀವಿನಾಮ್" (ಇದರ ಅರ್ಥ ರಾಜ ಬಲಿ, ವೇದವ್ಯಾಸ, ಹನುಮಾನ್, ವಿಭೀಷಣ (ರಾವಣನ ತಮ್ಮ), ಕೃಪಾಚಾರ್ಯ ಮತ್ತು ಪರಶುರಾಮ ಇವರುಗಳು ಮೃತ್ಯುವಿಲ್ಲದವರು ಅಥವಾ ಮರಣವಿಲ್ಲದೇ ಭೌತಿಕವಾಗಿ ನಾಶವಾಗದೇ ಅಜರಾಮರ ಅಥವಾ ದೀರ್ಘ ಜೀವಿಗಳು ಚಿರಂಜೀವಿಗಳು).
6. ಒಂದು ಕಂಬದ ಮೇಲೆ ವಾಮನಾವತಾರವನ್ನು ವಾಮನನ ರೇಖಾಚಿತ್ರದ ಮೂಲಕ ಕೆತ್ತಲಾಗಿದೆ. ವಾಮನನಿಗೆ ಎರಡು ಕೈಗಳಿದ್ದು ಎಡಗೈಯಲ್ಲಿ ಕೊಡೆ (ಛತ್ರಿ) ಮತ್ತು ಬಲಗೈಯಲ್ಲಿ ಕಮಂಡಲುವನ್ನು ಹಿಡಿದಿರುವನು. ಕೈಗಳ ಮೇಲ್ಭಾಗದಲ್ಲಿ ಅರ್ಧ ಚಂದ್ರನನ್ನು ಮತ್ತು ಸೂರ್ಯನನ್ನು ತೋರಲಾಗಿದೆಯಾದ್ದರಿಂದ ವಿಜಯನಗರ ಕಾಲದಲ್ಲಿ ರೂಢಿಯಲ್ಲಿದ್ದ ಗಡಿಕಲ್ಲು/ಸೀಮೆ/ಸೀಮಾಕಲ್ಲು ಎಂದು ಗುರುತಿಸಬಹುದು. ಈ ಗಡಿಕಲ್ಲು ಕಮಲಾಪುರದಲ್ಲಿರುವ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ ವಸ್ತುಸಂಗ್ರಹಾಲಯದಲ್ಲಿದೆ.; ಸುರೇಶ್ ಕೆ.ಎಂ., ಪೂರ್ವೋಕ್ತ, ಪು. 97–100.



















23. ವಿಜಯನಗರ ಕಾಲದ ಕಟ್ಟಡ ನಿರ್ಮಾಣ ತಾಂತ್ರಿಕತೆ

– ಡಾ. ಶರಣಬಸಪ್ಪ ಕೋಲ್ಕಾರ

ಪ್ರಾಚೀನ ಭಾರತದ ನಿರ್ಮಾಣ ತಂತ್ರಜ್ಞಾನ ಅದ್ಭುತವಾಗಿತ್ತು. ಅದಕ್ಕೆ ಜೀವಂತ ಸಾಕ್ಷಿಯಾಗಿ ಶತಶತಮಾನಗಳಿಂದಲೂ ಉಳಿದುಬಂದಿರುವ ಸಾವಿರಾರು ಬೌದ್ಧ, ಹಿಂದೂ, ಇಸ್ಲಾಂ, ಜೈನ ಸ್ಮಾರಕಗಳು ನಮ್ಮ ಕಣ್ಣಮುಂದಿವೆ. ಪ್ರಕೃತಿಯ ವಿಕೋಪಗಳಿಗೆ ಬೆದರದೆ, ಬೆಚ್ಚದೆ ದೃಢವಾಗಿ ನಿಂತಿರುವ ಈ ಕಟ್ಟಡಗಳ ವಾಸ್ತು ತಂತ್ರಜ್ಞಾನ ಆಧುನಿಕ ವಿಜ್ಞಾನಕ್ಕೆ ಸವಾಲೇ ಸರಿ. ಜಗತ್ತಿನ ಮೊಟ್ಟಮೊದಲ ಯೋಜಿತ ನಗರಗಳಾಗಿದ್ದ ಹರಪ್ಪ ಮೊಹೆಂಜೋದಾರೊವಿನಿಂದ ಹಿಡಿದು ವಿಜಯನಗರ – ಹಂಪಿ ಪಟ್ಟಣದವರೆಗೆ ನಮ್ಮ ದೇಶದಲ್ಲಿ ನಿರ್ಮಾಣ ಪರಂಪರೆ ವಿಸ್ಮಯದ ಹಾದಿಯಲ್ಲಿ ಸಾಗಿಬಂದಿದೆ. ಆಧುನಿಕ ಪಾಲಿಸಿಂಗ್ ಮಷಿನ್‌ಗಳಿಂದ ನೀಡಬಹುದಾದ ಹೊಳಪನ್ನು ಮೀರಿಸಿ ತಯಾರಾಗಿರುವ ಕ್ರಿ.ಪೂ. 3ನೇ ಶತಮಾನದ ಮೌರ್ಯರ ಕಾಲದ ಸ್ತಂಭಗಳು, ಅಳತೆ ವಿನ್ಯಾಸ ಗಾತ್ರ ಶೈಲಿಗಳಲ್ಲಿ ಕಿಂಚಿತ್ತೂ ವ್ಯತ್ಯಾಸವಿಲ್ಲದಂತೆ ಆಧುನಿಕ ಲೇಥ್ ಮಷಿನ್‌ಗಳಲ್ಲಿ ತಯಾರಾದಂತೆ ಸಿದ್ಧವಾಗಿರುವ ಚಾಲುಕ್ಯ–ಹೊಯ್ಸಳರ ಕಾಲದ ಕಂಬಗಳು, ಜೆ.ಸಿ.ಬಿ. ಕ್ರೇನ್ ಇಲ್ಲದ ಕಾಲದಲ್ಲಿ 180 ಅಡಿ ಎತ್ತರದಲ್ಲಿ ನಿರ್ಮಾಣಗೊಂಡಿರುವ ತಂಜಾವೂರಿನ ಬೃಹದೀಶ್ವರ ದೇವಾಲಯ ಹಾಗೂ ಹಂಪಿಯ ಗೋಪುರಗಳು, ಒಂದು ಗೋಪುರದಲ್ಲಿ ಏರಿ ಕುಣಿದು, ಕುಪ್ಪಳಿಸಿದರೆ ಬಡಿಯದು ಅಲುಗಾಡುವ ಜೋಧಪುರದ ಜೋಡಿಸ್ತಂಭ ಗೋಪುರಗಳು, ಗರ್ಭಗೃಹದ ಮಧ್ಯದಲ್ಲಿ ಯಾವುದೇ ಆಧಾರವಿಲ್ಲದೆ ಸ್ವತಂತ್ರವಾಗಿ ನಿಂತಿದ್ದ, ಘಜ್ನಿ ಮಹಮ್ಮದನ ದಾಳಿಗೆ ಸಿಲುಕಿ ನುಚ್ಚುನೂರಾದ ಸೌರಾಷ್ಟ್ರ ಸೋಮನಾಥ ಲಿಂಗ, ನಡುಮಧ್ಯದ ದೊಡ್ಡ ಬೀಸುವ ಕಲ್ಲನ್ನು ತಿರುಗಿಸಿದರೆ ಸುತ್ತಲಿನ ನಾಲ್ಕು ಕಿರು ಬೀಸುಗಲ್ಲುಗಳು ತಂತಾನೆ ತಿರುಗುವ ಚಿತ್ರದುರ್ಗದ ವಿಸ್ಮಯದ ಬೀಸುವ ಕಲ್ಲುಗಳು, ಮೇಲೆ ಕೆಳಗೆ ಆಧಾರವಿಲ್ಲದೆ ನಿಂತಿರುವ ಫತೇಪುರ ಸಿಕ್ರಿಯ ಮಸೀದಿಯೊಂದರ ಸ್ತಂಭ (ಕಂಬದ ಕೆಳಗೆ ಪೇಪರನ್ನು ಹಾಸಿ ತೆಗೆಯಬಹುದು) ಅಜಂತಾ, ಬಾದಾಮಿಯ ಗುಹಾಂತರ ದೇವಾಲಯಗಳು, ಏಕಶಿಲೆಯಲ್ಲಿ ಕೆತ್ತಿರುವ ಎಲ್ಲೋರಾದ ಕೈಲಾಸನಾಥ ದೇವಾಲಯ, ಮಹಾಬಲಿಪುರದ ಪಂಚಪಾಂಡವರ ರಥಗಳು, ಆಗ್ರಾದ ತಾಜಮಹಲ್ ಹೀಗೆ ಒಂದೇ ಎರಡೇ ಪ್ರತೀ ಸ್ಮಾರಕವೂ ಒಂದೊಂದು ವಿಸ್ಮಯವನ್ನು ಉಳಿಯುತ್ತವೆ. ಐದುಸಾವಿರ ವರುಷಗಳಿಂದ ಹಿಡಿದು ಬೇರೆ ಬೇರೆ ಕಾಲಘಟ್ಟಗಳಲ್ಲಿ ನಿರ್ಮಾಣಗೊಂಡಿರುವ ಈ ಸ್ಮಾರಕಗಳು ಪ್ರಕೃತಿಯ ವೈಪರೀತ್ಯಗಳನ್ನು ಮೆಟ್ಟಿ ನಿಂತಿರುವುದು ವಿಸ್ಮಯದ ಸಂಗತಿ. ಈಚೆಗೆ ಉತ್ತರಾಖಂಡನಲ್ಲಿ ಆದ ಮೇಘ ಸ್ಫೋಟಕ್ಕೆ ಹನ್ನೊಂದನೆ ಶತಮಾನದ ಕೇದಾರೇಶ್ವರ ದೇವಾಲಯ ಹೊರತು ಸುತ್ತಲಿನ ಆಧುನಿಕ ಕಟ್ಟಡಗಳೆಲ್ಲಾ ಧರೆಗುರುಳಿದ ಸನ್ನಿವೇಶ ಇಲ್ಲಿ ಸ್ಮರಣೀಯ. ನಮ್ಮ ಪೂರ್ವಜರ ಕಟ್ಟಡ ನಿರ್ಮಾಣ ತಂತ್ರಜ್ಞಾನಕ್ಕೆ ತಲೆದೂಗಲೇಬೇಕು.

ವಿಜಯನಗರ ವಾಸ್ತು :

ರಾಜಕೀಯವಾಗಿ ಸಾರ್ವಭೌಮತ್ವವನ್ನು, ಆರ್ಥಿಕವಾಗಿ ಸಮೃದ್ಧತೆಯನ್ನು, ಸಾಂಸ್ಕೃತಿಕವಾಗಿ ಶ್ರೀಮಂತಿಕೆಯನ್ನು ಸಾಧಿಸಿ ಭಾರತದ ಇತಿಹಾಸದಲ್ಲಿ ಚಿರಸ್ಥಾಯಿಯಾಗಿರುವುದು ವಿಜಯನಗರ ಸಾಮ್ರಾಜ್ಯ. ಕಲಾ ಕ್ಷೇತ್ರಕ್ಕೆ ಅದರ ಕೊಡುಗೆ ಅನನ್ಯವಾದದ್ದು.

ಅದ್ಭುತ ವಾಸ್ತುಪ್ರೇಮಿಗಳಾಗಿದ್ದ ವಿಜಯನಗರದರಸರು ತಮ್ಮ ರಾಜಧಾನಿ ಹಂಪಿ ಸಹಿತ ದಕ್ಷಿಣ ಭಾರತದಾದ್ಯಂತ ಸಾವಿರಾರು ಧಾರ್ಮಿಕ ಹಾಗೂ ಲೌಕಿಕ ಕಟ್ಟಡಗಳನ್ನು ನಿರ್ಮಿಸಿದರು. ವಾಸ್ತು ಕ್ಷೇತ್ರದಲ್ಲಿ ಇದು ದೈತ್ಯ ಸಾಧನೆಯ ಯುಗ. ಕರ್ನಾಟಕ ಒಂದರಲ್ಲೇ 1800ಕ್ಕೂ ಹೆಚ್ಚು ದೇವಾಲಯಗಳು, ಹಂಪಿ ಪಟ್ಟಣ ಒಂದರಲ್ಲೇ 1200 ದೇವಾಲಯಗಳು ರಚನೆ ಆಗಿವೆ. ವಿಜಯನಗರ ವಾಸ್ತು ಸ್ಮಾರಕಗಳನ್ನು ದೇವಾಲಯ ವಾಸ್ತುಶಿಲ್ಪ, ಪೌರವಾಸ್ತುಶಿಲ್ಪ, ಇಸ್ಲಾಮಿಕ್ (ಇಂಡೋ–ಸಾರ್ಸೆನಿಕ್) ವಾಸ್ತುಶಿಲ್ಪ ಮತ್ತು ರಕ್ಷಣಾ ವಾಸ್ತುಶಿಲ್ಪ ಎಂಬುದಾಗಿ ನಾಲ್ಕು ಪ್ರಕಾರಗಳಲ್ಲಿ ವಿಂಗಡಿಸಬಹುದು. ಹಂಪಿ ಅವರ ಎಲ್ಲ ರೀತಿಯ ಕಟ್ಟಡಗಳ ಮಾದರಿ ನೆಲೆಯಾಗಿದ್ದು 'ವಿಶ್ವದ ಬೃಹತ್ ಬಯಲು ವಸ್ತು ಸಂಗ್ರಹಾಲಯ'ವೆಂದು ಗುರುತಿಸಲ್ಪಟ್ಟಿದೆ. ವಿಜಯನಗರ ಕಾಲದ ಕಟ್ಟಡಗಳು ಕೇವಲ ಕಲಾ ಸ್ಮಾರಕಗಳಷ್ಟೇ ಅಲ್ಲದೆ ಆಗಿನ ನಿರ್ಮಾಣ ತಂತ್ರಜ್ಞಾನದ ಅದ್ಭುತ ಪ್ರತೀಕಗಳೂ ಆಗಿವೆ. ಈ ಕಟ್ಟಡಗಳನ್ನು ಪರೀಕ್ಷಿಸಿ, ಅವುಗಳ ನಿರ್ಮಾಣದ ಉತ್ಕೃಷ್ಟತೆಯನ್ನು, ಅವನ್ನು ಕಟ್ಟಿದವರ ಎಂಜನಿಯರಿಂಗ್ (ಕಟ್ಟಡ ರಚನಾ ಶಿಲ್ಪದ) ಕೌಶಲ್ಯದ ಬಗ್ಗೆ ತಿಳಿಯಬಹುದು.

ಕಟ್ಟಡಗಳ ಯೋಜನೆ :

ವಿಜಯನಗರ ಕಾಲದ ಯಾವ ಕಟ್ಟಡಗಳು ಬೇಕಾಬಿಟ್ಟಿ ರಚನೆಗಳಲ್ಲ. ಅವುಗಳ ಹಿಂದೆ ಒಂದು ನಿರ್ದಿಷ್ಟ ಯೋಜನೆ ಹಾಗೂ ಕಾರ್ಯಪ್ರನಾಳಿಕೆಯನ್ನು ಗುರುತಿಸಬಹುದು. ಕಟ್ಟಡದ ನೀಲನಕ್ಷೆಯಿಂದ ಹಿಡಿದು ಬಳಸುವ ಸಾಮಗ್ರಿಗಳು, ನಿರ್ಮಾಣ ವಿಧಾನ ಎಲ್ಲವೂಗಳ ಹಿಂದೆ ಒಂದು ತಾಂತ್ರಿಕ ಕೌಶಲ್ಯವಿದೆ. ಪ್ರಧಾನ ಶಿಲ್ಪಿಗಳು ಯೋಜಿತ ಕಟ್ಟಡದ ನೀಲನಕ್ಷೆಯನ್ನು ಮೊದಲಿಗೆ ಸಿದ್ಧಪಡಿಸುತ್ತಿದ್ದರು. ಕೆಲವುಸಲ ಆ ನೀಲನಕ್ಷೆಯನ್ನು ಕಟ್ಟಡ ನಿರ್ಮಾಣ ಸ್ಥಳದ ಬಂಡೆಯೊಂದರ ಮೇಲೆ ಕೊರೆಯಲಾಗುತ್ತಿತ್ತು. ಗಂಗಾವತಿ ತಾಲೂಕಿನ ವಾನಭದ್ರೇಶ್ವರ ಬಳಿಯ ಬಸವಾಪಟ್ಟಣ ದ್ವಾರ ಮಂಟಪದ ಲಂಬ ನಕಾಶೆಯನ್ನು ಪಕ್ಕದ ಗುಂಡಿನಲ್ಲಿ ಕೊರೆಯಲಾಗಿದೆ.[1] ಸಾಮಾನ್ಯವಾಗಿ ಈ ಕಾಲದ ದೇವಾಲಯಗಳ ತಲವಿನ್ಯಾಸವು ಗರ್ಭಗೃಹ, ಅಂತರಾಳ, ಸಭಾಮಂಟಪ ಮತ್ತು ಮಹಾರಂಗಮಂಟಪಗಳನ್ನು ಹೊಂದಿರುತ್ತವೆ. ಇವುಗಳ ಜೊತೆಗೆ ದೇವಾಲಯಗಳ ಸಂಕೀರ್ಣವು ದ್ವಾರಮಂಟಪ, ಕಲ್ಯಾಣಮಂಟಪ, ಡೋಲೋತ್ಸವ ಮಂಟಪ, ವಸಂತಮಂಟಪ, ಪರಿವಾರ ದೇವತೆಗಳ ಗುಡಿ, ಬಲಿಪೀಠ, ಧ್ವಜಸ್ತಂಭಗಳಿಂದ ಕೂಡಿರುತ್ತದೆ. ಸುತ್ತಲೂ ಪ್ರಾಕಾರವಿದ್ದು ಅದಕ್ಕೆ ಮೂರು ಬದಿಗೆ ದ್ವಾರಮಂಟಪಗಳಿರುತ್ತವೆ.

ಭೂಮಿ ಪರೀಕ್ಷೆ :

ದೇವಾಲಯ ಕಟ್ಟಡಗಳ ನೀಲನಕ್ಷೆ ಸಿದ್ಧವಾದ ನಂತರ ಅದರ ನಿರ್ಮಾಣಕ್ಕಾಗಿ ಸೂಕ್ತವಾದ ಜಾಗವನ್ನು ಗುರುತಿಸುತ್ತಿದ್ದರು. ಇದಕ್ಕೆ ಭೂ ಪರೀಕ್ಷೆ ಎಂದು ಪ್ರಾಚೀನ ಶಿಲ್ಪಶಾಸ್ತ್ರಗಳು ಹೇಳಿವೆ. ಭೂಮಿಯ ಗುಣಲಕ್ಷಣ ಹಾಗೂ ಹವಾಮಾನದ ಹಿನ್ನಲೆಯಲ್ಲಿ ಕಟ್ಟಡಗಳನ್ನು ನಿರ್ಮಿಸಿದರೆ ಅವು ಬಹುಕಾಲ ಬಾಳಿಕೆ ಬರುತ್ತವೆ. ಜಾಂಗಲ, ಅನೂಪ ಮತ್ತು ಸಾಧಾರಣ ಎಂಬ ಭೂಮಿಯ ಮೂರು ಪ್ರಕಾರಗಳಲ್ಲಿ ಹಂಪಿ ಪರಿಸರವು ಅನೂಪಅಂದರೆ ತುಂಗಭದ್ರಾ ನದಿಯಿಂದ ವಿಪುಲವಾದ ಸಿಹಿ ನೀರಿನಿಂದ ಕೂಡಿದ್ದು ಭೂಮಿ ಗಡುಸಾಗಿದೆ ಹಾಗಾಗಿ ಈ ಜಾಗ ಭವ್ಯವಾದ ಕಟ್ಟಡಗಳಿಗೆ ಅತ್ಯಂತ ಸೂಕ್ತ ಪ್ರದೇಶವಾಗಿರುವುದನ್ನು ಶಿಲ್ಪಿಗಳು ಕಂಡುಕೊಂಡಿದ್ದರು.[2] ಅಂತೆಯೇ ಇಲ್ಲಿ ವಿರೂಪಾಕ್ಷ ದೇವಾಲಯ, ವಿಜಯವಿಠ್ಠಲ ದೇವಾಲಯ, ಹಜಾರರಾಮ ದೇವಾಲಯ, ಅಚ್ಯುತರಾಯ ದೇವಾಲಯ, ಬಾಲಕೃಷ್ಣ ದೇವಾಲಯ, ಮಾಲ್ಯವಂತ ರಘುನಾಥ ದೇವಾಲಯ, ಮಹಾನವಮಿ ದಿಬ್ಬ ಮುಂತಾದ ನೂರಾರು ಕಟ್ಟಡಗಳನ್ನು ನಿರ್ಮಿಸಲು ಸಾಧ್ಯವಾಯ್ತು.

ಕಟ್ಟಡ ರಚನಾ ಸಾಮಗ್ರಿಗಳು :

ವಿಜಯನಗರ ಹಂಪಿಯ ಕಟ್ಟಡಗಳನ್ನು ಅನುಲಕ್ಷಿಸಿದಾಗ ಅವುಗಳನ್ನು ಪ್ರಧಾನವಾಗಿ ಕಲ್ಲು, ಮಣ್ಣು, ಇಟ್ಟಿಗೆ ಮತ್ತು ಗಾರೆಗಳಿಂದ ನಿರ್ಮಿಸಿರುವುದು ವ್ಯಕ್ತವಾಗುತ್ತದೆ. ದೇವಾಲಯಗಳ ಅಧಿಷ್ಠಾನ, ಭಿತ್ತಿ, ಕಂಭ, ತೊಲೆಗಳು ಮತ್ತು ಛಾವಣಿಗಳಿಗೆ ಕಲ್ಲನ್ನು ಬಳಸಲಾಗಿದೆ. ಹಂಪಿಯ ಅರಮನೆಗಳ ಹಾಗೂ ಶ್ರೀಮಂತರ ಮನೆಗಳನ್ನು ಮಣ್ಣಿನ ಗೋಡೆಗಳಿಂದ

ನಿರ್ಮಿಸಲಾಗಿರುವುದು ವಿಶೇಷ. ವಿಪರೀತ ಬಿಸಿಲಿನ ಪ್ರದೇಶವಾದ್ದರಿಂದ ವಾಸಕ್ಕೆ ಮಣ್ಣಿನ ಮನೆಗಳೇ ಸೂಕ್ತ ಎಂಬುದನ್ನು ಪೂರ್ವಜರು ಅರಿತಿದ್ದುದು ಇದರಿಂದ ವ್ಯಕ್ತವಾಗುತ್ತದೆ. ದೇವಾಲಯಗಳ ಶಿಖರ ಮತ್ತು ಲೌಕಿಕ ಕಟ್ಟಡಗಳಾದ ರಾಣಿ ಸ್ನಾನಗೃಹ, ಕಮಲಮಹಲ್, ಆನೆಲಾಯಗಳನ್ನು ಹೆಚ್ಚಾಗಿ ಇಟ್ಟಿಗೆ ಬಳಸಿ ಕಟ್ಟಲಾಗಿದೆ. ಇಟ್ಟಿಗೆಯ ಬಳಕೆಯಲ್ಲೆಲ್ಲಾ ಗಾರೆ ಸಂಯುಕ್ತವಾಗಿ ಸಿಮೆಂಟ್‌ನಂತೆ ಬಳಕೆಯಾಗಿದೆ.

ಕಲ್ಲು : ಹಂಪಿಯ ಸುತ್ತಮುತ್ತಲೂ ಬೂದುಬಣ್ಣದ ಕಣಶಿಲೆಯ (Grey Granite) ಅಪಾರ ಸಂಪತ್ತಿದೆ. ಹಾಗಾಗಿ ವಿಜಯನಗರದರಸರು ಕಣಶಿಲೆಯನ್ನೇ ಬಳಸಿಕೊಂಡು ಸ್ಮಾರಕಗಳನ್ನು ನಿರ್ಮಿಸಿದರು. ಇದು ಕಠಿಣವಾದ ಶಿಲೆಯಾಗಿದ್ದು, ಸೂಕ್ಷ್ಮವಾದ ಕೆತ್ತನೆಗೆ ಅನುಕೂಲವಾದುದಲ್ಲ. ಹಾಗಾಗಿ ಸೂಕ್ಷ್ಮತೆಗಿಂತ ಭವ್ಯತೆಗೆ ಇದು ಪೂರಕವಾದದ್ದು, ಇಂತಹ ಕಠಿಣವಾದ ಕಣಶಿಲೆಯನ್ನು ಬಳಸಿಕೊಂಡು ಹೇಗೆ ಭವ್ಯತೆಯನ್ನು ರೂಪಿಸಬೇಕೆಂಬುದಕ್ಕೆ ವಿಜಯವಿಠ್ಠಲ ದೇವಾಲಯ ಉತ್ತಮ ನಿದರ್ಶನವಾಗಿದೆ. ಹಂಪಿಯ ಕಟ್ಟಡಗಳಿಗೆ ಬೇಕಾದ ಕಲ್ಲನ್ನು ಅಲ್ಲಿಯೇ ಪಡೆಯಲಾಗಿದೆ. ಎಂಬುದು ಹೇಮಕೂಟದಲ್ಲಿರುವ ರಾಜಪ್ರಾಂಗಣದಲ್ಲಿರುವ, ಜನಾನ ಪ್ರದೇಶದಲ್ಲಿರುವ ಕಲ್ಲುಗಣಿಗಳೇ ಸಾಕ್ಷಿಯಾಗಿವೆ ಅಲ್ಲಿಯ ಕಲ್ಲು ಬಂಡೆಗಳ ಗುರುತುಗಳಿಂದ ಕಲ್ಲನ್ನು ಕತ್ತರಿಸಿ ಸಾಗಿಸಿದ ವಿಧಾನ ತಿಳಿಯುತ್ತದೆ. ಆಯ್ಕೆಯಾದ ಬಂಡೆಯನ್ನು ಅಗತ್ಯಗಳಿಗನುಗುಣವಾಗಿ ಸಮಪ್ರಮಾಣದಲ್ಲಿ ನೀಳ ಹೋಳುಗಳನ್ನಾಗಿ ಕತ್ತರಿಸುತ್ತಿದ್ದರು. ಭಾರವಾದ ಕಲ್ಲುಗಳನ್ನು ಎತ್ತಲು ಕೊಕ್ಕೆ ಕುಣಿಗಳನ್ನು ಹಾಕಿರುವುದು ಕಂಡುಬರುತ್ತದೆ. ಕಲ್ಲುಗಳನ್ನು ಸೀಳಲು ವಿವಿಧ ಭಾರದ ಸುತ್ತಿಗೆ, ಉಳಿ, ಸನ್ನೆಕೋಲು, ರಾಟೆಚಕ್ರ, ಬಡಿಗೆ, ಹಗ್ಗ ಬಳಸುತ್ತಿದ್ದರು. ಕಮಲಾಪುರದ ವಸ್ತುಸಂಗ್ರಹಾಲಯದಲ್ಲಿ ಇಂತಹ ವಿವಿಧ ರೀತಿಯ ಉಳಿಗಳನ್ನು ಕಾಣಬಹುದು.[3] ಗಣಿಗಳಿಂದ ಎತ್ತಿದ ಕಲ್ಲುಗಳನ್ನು ಮಾನವಶಕ್ತಿ, ಚಕ್ಕಡಿ, ಆನೆ, ಕುದುರೆಗಳ ಮೂಲಕ ಕಟ್ಟಡ ನಿರ್ಮಾಣ ಸ್ಥಳಕ್ಕೆ ಸಾಗಿಸುತ್ತಿದ್ದರು. ರಾಯಚೂರು ಕೋಟೆಯ ನಿರ್ಮಾಣದಲ್ಲಿ ಬಳಸಿರುವ ಬೃಹತ್ ಕಲ್ಲುಗಳನ್ನು ಹೇಗೆ ಕೋಟೆಯ ಸ್ಥಳಕ್ಕೆ ತರಲಾಯಿತೆಂಬುದನ್ನು ಸೂಚಿಸುವ ಚಿತ್ರವನ್ನು ಅಲ್ಲಿಯೇ ಕೆತ್ತಲಾಗಿದೆ. ಬೃಹತ್ ಕಲ್ಲನ್ನು ನಾಲ್ಕು ಜೊತೆ ಕೋಣಗಳನ್ನು ಹೂಡಿರುವ ನಾಲ್ಕು ಚಕ್ರಗಳಿರುವ ಬಂಡಿಯಲ್ಲಿ ಸಾಗಿಸಲಾಗುತ್ತಿದೆ. ಬಂಡಿಯ ನೊಗಕ್ಕೆ ಕಟ್ಟಿದ ಹಗ್ಗವನ್ನು ಹಿಡಿದು ಒಬ್ಬನು ಮುಂದೆ ಸಾಗುತ್ತಿದ್ದಾನೆ. ಒಂದೊಂದು ಜೊತೆ ಕೋಣಗಳನ್ನು ಒಬ್ಬೊಬ್ಬರು ನಿಯಂತ್ರಿಸುತ್ತಿದ್ದಾರೆ. ಕೊನೆಯ ಜೊತೆಯ ನಿಯಂತ್ರಕ ಬಂಡಿಯಲ್ಲಿ ಮುಂದೆ ಚಾಚಿಕೊಂಡಿರುವ ಕಲ್ಲಿನ ಮೇಲೆ ಕುಳಿತಿದ್ದಾನೆ. ಕಲ್ಲಿನ ಮೇಲೆ ಮಧ್ಯದಲ್ಲಿ ಹಿಮ್ಮುಖವಾಗಿ ಕುಳಿತಿರುವ ಒಬ್ಬ ವ್ಯಕ್ತಿ ಹಿಂಬದಿಯಿಂದ ಸನ್ನೆಕೋಲಿನಿಂದ ಬಂಡಿಯನ್ನು ಮುಂದೆ ತಳ್ಳುವುದನ್ನು ನಿಯಂತ್ರಿಸುತ್ತಿದ್ದಾನೆ. ಬಹಳ ದೊಡ್ಡ ಸನ್ನೆ ಕೋಲನ್ನು ಬಂಡಿಯ ಹಿಂದಿನ ಚಕ್ರದಡಿಯಲ್ಲಿಟ್ಟು ಮೀಟುತ್ತಿದ್ದಾರೆ. ಕೋಲನ್ನು ಕೆಳಗಿನಿಂದ ಮೂವರು ಕೆಳಕ್ಕೆಳೆದರೆ, ಮೂವರು ಕೋಲಿನ ಮೇಲೆ ಕೂತು ತಮ್ಮ ಭಾರದಿಂದ ಅದನ್ನು ಕೆಳಕ್ಕೆ ತಳ್ಳುತ್ತಿದ್ದಾರೆ.[4] ಇದೇ ರೀತಿಯ ವಿಧಾನವನ್ನು ಹಂಪಿಯ ಸ್ಮಾರಕಗಳ ನಿರ್ಮಾಣ ಸಂದರ್ಭದಲ್ಲಿ ಬಳಸಿರುವುದನ್ನು ತರ್ಕಿಸಬಹುದು.

ಭಾರಿ ಕಲ್ಲುಗಳನ್ನು ಅಳವಡಿಸುವ ವಿಧಾನ :

ವಿಜಯನಗರ ಕಾಲದ ದೇವಾಲಯಗಳ ಭಿತ್ತಿಗಳಲ್ಲಿ, ಕೋಟೆಯ ಗೋಡೆಗಳಲ್ಲಿ ಬೃಹತ್ ಗಾತ್ರದ ಕಲ್ಲುಗಳು ಬಳಕೆಯಾಗಿವೆ. ಕಟ್ಟಡಗಳ ತೊಲೆ, ಛತ್ತುಗಳು ಕೂಡಾ ಭಾರಿಗಾತ್ರದ ಕಲ್ಲುಗಳೇ. ಇಂಥ ಭಾರೀ ಗಾತ್ರದ ಕಲ್ಲುಗಳನ್ನು ಆಧುನಿಕ ರೀತಿಯ ಕ್ರೇನ್‌ಗಳಿಲ್ಲದ ಕಾಲದಲ್ಲಿ ಹೇಗೆ ಮೇಲಕ್ಕೆತ್ತಿ ಕಟ್ಟಡಗಳಲ್ಲಿ ಬಳಸಿಕೊಂಡರೆಂಬುದು ವಿಸ್ಮಯಕಾರಕ ಸಂಗತಿಯಾಗಿದೆ. ಆದರೆ ಇದಕ್ಕೆ ಪ್ರಾಚೀನರು ಅನುಸರಿಸಿದ ವಿಧಾನ ಕುತೂಹಲದಾಯಕವಾಗಿದೆ. ಈ ಕುತೂಹಲದಾಯಕ ವಿಧಾನವೇ 'ಏರುದಿನ್ನೆ' ಒಂದು ಕಟ್ಟಡ ಪ್ರಾರಂಭವಾದಾಗ ಅದರ ಒಂದು ಬದಿಯಲ್ಲಿ ಸಮವಾಗಿ ಇಳಿಜಾರಾಗಿ ಮಣ್ಣಿನ ದಿನ್ನೆಯನ್ನು ಮಾಡುತ್ತಿದ್ದರು. ಆ ದಿನ್ನೆಯ ಮೂಲಕ ಕಲ್ಲುಗಳನ್ನು ಸರಾಗವಾಗಿ ಸಾಗಿಸಿ ಕಟ್ಟಡದ ನಿಗದಿತ ಸ್ಥಳದಲ್ಲಿ ಕೂಡಿಸುತ್ತಿದ್ದರು. ಕಟ್ಟಡ ಮೇಲೇರಿದಂತೆ ದಿನ್ನೆಯೂ ಮೇಲೇರುತ್ತಾ ಉದ್ದವಾಗುತ್ತಿತ್ತು. ತಂಜಾವೂರಿನ ಬೃಹದೀಶ್ವರ ದೇವಾಲಯದ ಶಿಖರದ ಸ್ಥೂಪಿ ಶಿಲೆಯ ತೂಕವು 80 ಟನ್ನುಗಳು. ಈ ಬೃಹತ್ ಕಲ್ಲನ್ನು 180 ಅಡಿ ಎತ್ತರದ ಶಿಖರದ ತುದಿಗೆ ಏರಿಸಲು ನಾಲ್ಕು ಮೈಲುಗಳ ದೂರದಿಂದ ಏರುದಿಬ್ಬವನ್ನು ರಚಿಸಲಾಗಿತ್ತೆಂದು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ರೋಣ ತಾಲೂಕಿನ ಕಾಲಕಾಲೇಶ್ವರ

ದೇವಾಲಯದಲ್ಲಿ ಅಪೂರ್ಣಗೊಂಡ ವಿಜಯನಗರ ಕಾಲದ ದ್ವಾರ ಮಂಟಪವಿದೆ. ಇದರ ಹಿಂಬದಿಯಲ್ಲಿ ಅದರ ಎತ್ತರದವರೆಗೆ ನಿರ್ಮಿಸಿರುವ ಏರುದಿಬ್ಬವನ್ನು ಈಗಲೂ ಕಾಣಬಹುದು. ದ್ವಾರಮಂಟಪ ಅರ್ಧಕ್ಕೆ ನಿಂತಿರುವುದರಿಂದ ಏರುದಿಬ್ಬವನ್ನು ತೆಗೆಯದೇ ಹಾಗೇ ಉಳಿಸಲಾಗಿದೆ. ಇನ್ನು ವಿಠ್ಠಲ ದೇವಾಲಯದಂತೆ ಛತ್ತಿನ ಬೃಹತ್ ಶಿಲಾ ಹಲಗೆಗಳನ್ನು ಹಾಕಲು ಮತ್ತು ಇಸ್ಲಾಮಿಕ್ ಶೈಲಿಯ ವೃತ್ತಕಾರದ ಪೊಳ್ಳು ಗುಮ್ಮಟಗಳನ್ನು ನಿರ್ಮಿಸಲು ಕಟ್ಟಡದ ಒಳಗೆ ಇಡಿಯಾಗಿ ಮಣ್ಣನ್ನು ತುಂಬುತ್ತಿದ್ದರು. ಬಿಜಾಪುರದ ಗೋಳಗುಮ್ಮಟದ ಬೃಹತ್ ಗುಮ್ಮಟವನ್ನು ಕೂಡಾ ಗುಮ್ಮಟಾಕಾರದಲ್ಲಿ ಮಣ್ಣನ್ನು ತುಂಬಿ ಅದರ ಮೇಲೆ ಗಾರೆ ಹಾಕಿ ಅದು ಬಿಗಿದ ನಂತರ ಮಣ್ಣನ್ನು ತೆಗೆಯಲಾಗಿದೆ ಎಂಬುದು ವಿದ್ವಾಂಸರ ಅಭಿಪ್ರಾಯ. ಇದಕ್ಕೆ ಸಾಕ್ಷಿಯಾಗಿ ಗೋಲಗುಂಬಜ್‌ದ ಹಿಂಬದಿಯಲ್ಲಿ ಮಣ್ಣಿನ ರಾಶಿಯನ್ನು ಇಂದಿಗೂ ಕಾಣಬಹುದು.

ಇತರ ಶಿಲೆಗಳು : ಕಣಶಿಲೆಯ ಜೊತೆಗೆ ಇತರ ಶಿಲೆಗಳನ್ನು ಅಪರೂಪವಾಗಿ ಬಳಸಲಾಗಿದೆ. ಬಡವಿಲಿಂಗವನ್ನು ಹಜಾರರಾಮ ದೇವಾಲಯದ ರಂಗಮಂಟಪ ಮಧ್ಯದಲ್ಲಿ ಕಂಡುಬರುವ ಕಪ್ಪುಶಿಲೆಯ ಕಂಬಗಳನ್ನು ಒಡ್ಡುಶಿಲೆ (ಆಥಿಇಜ ಡಿಂಛಿಇ) ಯಲ್ಲಿ ನಿರ್ಮಿಸಲಾಗಿದೆ. ಮಹಾನವಮಿ ದಿಬ್ಬದ ಮಧ್ಯಭಾಗದಲ್ಲಿ ಉಬ್ಬುಶಿಲ್ಪಗಳಿಗಾಗಿ ಹಸಿರುಮಿಶ್ರಿತ ಕಪ್ಪುಬಣ್ಣದ ಶಿಲೆಯ ಪೀಲ್ಲೈಟ್ (Phylite) ಬಳಸಲಾಗಿದೆ. ಮಹನವಮಿ ದಿಬ್ಬಕ್ಕೆ ಸಮೀಪದಲ್ಲಿರುವ ಕಲ್ಲಿನ ಪುಷ್ಕರಣಿಯನ್ನು ಕಪ್ಪುಬಣ್ಣದ ಫಿಲ್ಲೈಟ್‌ನಲ್ಲಿ ಕಟ್ಟಲಾಗಿದೆ.[5]

ಇಟ್ಟಿಗೆ : ಇಟ್ಟಿಗೆಯ ಕೂಡಾ ಅಪಾರ ಪ್ರಮಾಣದಲ್ಲಿ ಬಳಕೆಯಾಗಿವೆ. ಪ್ರಾಯಶಃ ಇವನ್ನು ಕೂಡಾ ತುಂಗಭದ್ರಾ ನದಿ ತೀರದ ಮಣ್ಣಿನಿಂದ ತಯಾರಿಸಲಾಗಿದ್ದು, ಹಂಪಿಯ ಸುತ್ತ ಮುತ್ತ ಅನೇಕ ಇಟ್ಟಿಗೆ ಭಟ್ಟಿಗಳಿದ್ದು, ಅವುಗಳಲ್ಲಿ ಸಾವಿರಾರು ಕಾರ್ಮಿಕರು ತೊಡಗಿದ್ದರೆಂಬುದು ಗ್ರಹಿಸಬಹುದು. ಈ ಕಾಲದ ಇಟ್ಟಿಗೆಗಳು ಸಾಮಾನ್ಯವಾಗಿ 16.5 ಸೆಂ.ಮೀ. ಉದ್ದ, 12 ಸೆಂ.ಮೀ. ಅಗಲ ಹಾಗೂ 2.5 ಸೆಂ.ಮೀ. ದಪ್ಪವಾಗಿರುತ್ತವೆ. ಇಟ್ಟಿಗೆಗಳನ್ನು ದ್ವಾರಗೋಪುರ, ಶಿಖರ, ಇಸ್ಲಾಮಿಕ್ ಶೈಲಿಯ ಕಟ್ಟಡಗಳಲ್ಲಿ ಪ್ರಧಾನವಾಗಿ ಬಳಸಲಾಗಿದೆ.

ಗಾರೆ : ವಿಜಯನಗರ ಕಾಲದಲ್ಲಿ ಆದ ಕಟ್ಟಡಗಳ ನಿರ್ಮಾಣದ ತೀವ್ರತೆ ಹಾಗೂ ಕಡಿಮೆ ಸಮಯಾವಕಾಶದಲ್ಲಿ ಅವುಗಳನ್ನು ಪೂರ್ಣಗೊಳಿಸುವ ಅನಿವಾರ್ಯತೆಯ ಹಿನ್ನಲೆಯಲ್ಲಿ ಹೊಸ ಹೊಸ ನಿರ್ಮಾಣ ಸಾಮಗ್ರಿಗಳನ್ನು ಬಳಸಿಕೊಂಡರು ಅವುಗಳಲ್ಲಿ ಗಾರೆ ಪ್ರಮುಖವಾಗಿದೆ. ನಮ್ಮ ದೇಶದಲ್ಲಿ ಗಾರೆ ಬಳಕೆಗೆ ಹರಪ್ಪ ನಾಗರಿಕತೆಯಷ್ಟು ಪ್ರಾಚೀನತೆ ಇದೆ. ಗ್ರೀಕ್ ರೋಮನ್ ನಾಗರಿಕತೆಗಳ ಕಟ್ಟಡದಲ್ಲೂ, ವಿಶೇಷವಾಗಿ ಪಿರಮಿಡ್‌ಗಳಲ್ಲಿ ಗಾರೆ ಬಳಕೆಯಾಗಿದೆ. ಅಜಂತಾದ ಗುಹೆಗಳ ಗೋಡೆಗಳಿಗೆ ಗಾರೆ ಲೇಪಿಸಿ ಮೇಲೆ ವರ್ಣಚಿತ್ರಗಳನ್ನು ಬಿಡಿಸಲಾಗಿದೆ.

ಸಿಮೆಂಟಿನಷ್ಟೇ ಗಟ್ಟಿಯಾದ ಗಾರೆಯನ್ನು ತಯಾರಿಸಿ ಹಲವು ದಿನಗಳ ಕಾಲ ಹಾಗೆ ಇಡಬಹುದು. ಆದರೆ ಸಿಮೆಂಟ್ ಹಾಗಲ್ಲ ನೀರಿನೊಡನೆ ಬೆಳೆತ ಕೆಲವೇ ಗಂಟೆಗಳಲ್ಲಿ ಗಟ್ಟಿಯಾಗಿಬಿಡುತ್ತದೆ. ಗಾರೆಯನ್ನು ಮುಖ್ಯವಾಗಿ ಸೋಸಿ ತೆಗೆದ ಕಪ್ಪೆಚಿಪ್ಪಿನ ಸುಣ್ಣ, ಕಲ್ಲುಸುಣ್ಣ, ಉತ್ತಮ ಮರಳು, ಲೋಳೆಸರ, ಬಿಲ್ವಪತ್ರೆಕಾಯಿ, ಬೆಲ್ಲ ಅಥವಾ ಕೆಲವು ಸಲ ಮೊಟ್ಟೆಯನ್ನು ಸೇರಿಸಿ ತಯಾರಿಸಲಾಗುತ್ತಿತ್ತು. ಇವೆಲ್ಲವನ್ನು ಹದಕ್ಕೆ ತಕ್ಕಂತೆ ಸೇರಿಸಿ ಚೆನ್ನಾಗಿ ರುಬ್ಬಬೇಕು ರುಬ್ಬಿದ ನಂತರ ಬೆಣ್ಣೆಯ ಹಾಗೆ ಬಂದಾಗ ಮಾತ್ರ ಗಾರೆ ಕಟ್ಟಡಗಳ, ಶಿಲ್ಪಗಳ ರಚನೆಗೆ ಬರುತ್ತದೆ.[6] ವಿಜಯನಗರ ಕಾಲದಲ್ಲಿ ಗಾರೆಯ ತಂತ್ರಜ್ಞಾನ ಚೆನ್ನಾಗಿ ಬೆಳೆದಿತ್ತು. ಹಂಪಿ ಸಹಿತ ದಕ್ಷಿಣಭಾರತಾದ್ಯಾಂತ ನಿರ್ಮಾಣವಾದ ಬಹುತೇಕ ಎಲ್ಲ ದೇವಾಲಯಗಳಲ್ಲೂ ಗಾರೆ ಬಳಕೆಯಾಗಿದೆ. ಹಂಪಿಯ ವಿರೂಪಾಕ್ಷ, ಬಾಲಕೃಷ್ಣ, ಕನಕಗಿರಿಯ ಲಕ್ಷ್ಮೀನರಸಿಂಹ ದೇವಾಲಯಗಳು, ಕಮಲಮಹಲ, ರಾಣಿಯರ ಸ್ನಾನಗೃಹ, ಆನೆಲಾಯ, ಆನೆಗೊಂದಿಯ ಗಗನಮಹಲ, ಚಂದ್ರಗಿರಿಯ ಅರಮನೆಗಳಲ್ಲಿ ಗಾರೆಯ ಬಳಕೆ ವೈಶಿಷ್ಟ್ಯಪೂರ್ಣವಾಗಿದೆ. ಇವುಗಳಿಂದ ಗಾರೆ ಕಲೆಯಲ್ಲಿ ವಿಜಯನಗರವು ಸಾಧಿಸಿದ ಪ್ರಗತಿ ಹಾಗೂ ರಚನೆಯಲ್ಲಿ ಸಾಧಿಸಿದ ತಾಂತ್ರಿಕ ಪರಿಣಿತಿ ವ್ಯಕ್ತವಾಗುತ್ತದೆ.

ರಕ್ಷಣಾ ವಾಸ್ತು :

ವಿಜಯನಗರ ಕಾಲದ ಕೋಟೆ, ಕೊತ್ತಳದಂತಹ ರಕ್ಷಣಾವಾಸ್ತು ಕೂಡಾ ತನ್ನದೇ ಆದ ನಿರ್ಮಾಣ ತಾಂತ್ರಿಕತೆಯಿಂದ ಗಮನ ಸೆಳೆಯುತ್ತದೆ. ಹಂಪಿಯ ಸುತ್ತಲೂ ನಿರ್ಮಿಸಿರುವ ಕೋಟೆಗೋಡೆಗಳು ಬಹಳ ದಪ್ಪವಾಗಿದ್ದು, ಹೊರಮೈಗೆ ದಪ್ಪ ಕಲ್ಲುಗಳಿದ್ದು, ಒಳಮೈಗೆ ಮಣ್ಣಿನ ಇಳಿವೋರೆ ಇದೆ. ಹೊರಭಾಗದಲ್ಲಿ ದೊಡ್ಡ ಕಲ್ಲುಗಳ ಮಧ್ಯಭಾಗದಲ್ಲಿ ಯಾವುದೇ ಗಾರೆಯನ್ನು ಉಪಯೋಗಿಸದೆ ಒಂದು ಕಲ್ಲು ಮತ್ತೊಂದರ ಜೊತೆಗೆ ಸರಿಯಾಗಿ ಹೊಂದಿಕೊಳ್ಳುವಂತೆ ಸಂದುಗಳಿಲ್ಲದೆ ಕಟ್ಟಲಾಗಿದೆ. ದೊಡ್ಡ ಕಲ್ಲುಗಳನ್ನು ಮೇಲಕ್ಕೆತ್ತುವಾಗ ಆಗುವ ಭಾರವನ್ನು ಕಡಿಮೆ ಮಾಡುವುದಕ್ಕಾಗಿ ಬೆಣೆಯಾಕಾರದ ಕಲ್ಲುಗಳನ್ನು ಬಹಳ ಜಾಣ್ಮೆಯಿಂದ ಆಯತಾಕಾರದ ಕಲ್ಲುಗಳ ಬದಲಿಗೆ ಉಪಯೋಗಿಸಲಾಗಿದೆ. ಇವುಗಳ ಹೊರಭಾಗ ಅಗಲವಾಗಿದ್ದು, ಒಳಭಾಗವು ಚೂಪಾಗಿರುತ್ತದೆ. ಒಳಭಾಗದಲ್ಲಿ ಕಲ್ಲುಗಳ ಮಧ್ಯದ ಸಂದುಗಳನ್ನು ಸಣ್ಣಕಲ್ಲು ಮತ್ತು ಮಣ್ಣಿನಿಂದ ತುಂಬಲಾಗಿದೆ. ಕೋಟೆಯ ಗೋಡೆಯ ಭದ್ರತೆಯನ್ನು ಹೆಚ್ಚಿಸುವ ಸಲುವಾಗಿ ಅಲ್ಲಲ್ಲಿ ಚೌಕಾಕಾರದ ಕೊತ್ತಳಗಳನ್ನು ನಿರ್ಮಿಸಲಾಗಿದೆ. ಯದ್ಧದ ಸಮಯದಲ್ಲಿ ಹೆಚ್ಚು ಸೈನಿಕರು ನಿಲ್ಲಲು ಸಹ ಕೊತ್ತಳಗಳು ಉಪಯೋಗವಾಗುತ್ತವೆ. ಕೊತ್ತಳಗಳ ಮೇಲೆ ಕಾವಲಿನವರು ನಿಂತು ಕೋಟೆಯನ್ನು ಸಂರಕ್ಷಿಸುತ್ತಿದ್ದರು.[7] ಇಂತಹ ಸುವ್ಯವಸ್ಥಿತವಾದ ಮತ್ತು ಭದ್ರವಾದ ಕೋಟೆಯಿಂದ ವಿಜಯನಗರ ಸಾಮ್ರಾಜ್ಯವು ಬಹುಕಾಲ ವಿಜೃಂಭಿಸಿತು.

ನೀರಾವರಿ ತಾಂತ್ರಿಕತೆ :

ವಿಜಯನಗರದ ಅರಸರು ನೀರಾವರಿಗೆ ಹೆಚ್ಚಿನ ಆದ್ಯತೆ ನೀಡಿದ್ದರು. ತುಂಗಭದ್ರಾನದಿಗೆ ಅಲ್ಲಲ್ಲಿ ಅಣೆಕಟ್ಟುಗಳನ್ನು ನಿರ್ಮಿಸಿ ಅದರಿಂದ ಜಮೀನಿಗೆ ಹಾಗೂ ವಿಜಯನಗರ ಪಟ್ಟಣಕ್ಕೆ ನೀರೊದಗಿಸಿದ ತಾಂತ್ರಿಕ ಕೌಶಲ್ಯ ವಿಸ್ಮಯದಾಯಕವಾಗಿರುವಂತಹದು. ಗಂಗಾವತಿಯ ಸಾಣಾಪುರ ಅಣೆಕಟ್ಟೆಯಿಂದ ಕಾಲುವೆಯ ಮೂಲಕ ವಿಜಯನಗರದ ಕೆಲವು ಭಾಗಗಳಿಗೆ ನೀರನ್ನು ಪೂರೈಸಲಾಗುತ್ತಿತ್ತು. ಈ ಕಾಲುವೆ ವಿರುಪಾಪುರ ಗಡ್ಡಿಯ ಬಳಿ ಮೇಲ್ಗಾಲುವೆ (ಅಕ್ವಡೆಕ್ಟ್) ಮೂಲಕ ಋಷ್ಯಮೂಖ ಪರ್ವತವನ್ನು ಸೇರಿ ಅಲ್ಲಿಂದ ನದಿಯನ್ನು ರಾಮರಾಯ ಸೇತುವೆಯೊಂದಿಗೆ ವಿಠ್ಠಲಪುರವನ್ನು ಸೇರಿಕೊಳ್ಳುತ್ತಿತ್ತು. ಈ ಕಾಲುವೆಯ ಅವಶೇಷಗಳು ಇಂದಿಗೂ ಇದ್ದು ವಿಜಯನಗರ ಕಾಲದ ನೀರಾವರಿ ತಾಂತ್ರಿಕ ಉನ್ನತಿಗೆ ನಿದರ್ಶನವಾಗಿವೆ. ವಿಜಯನಗರದ ಎಲ್ಲಾ ಕಾಲುವೆಗಳು ಇಂದಿಗೂ ಬಳಕೆಯಲ್ಲಿರುವುದು ಅವುಗಳ ನಿರ್ಮಾಣದ ಹಿಂದಿನ ದೂರಾಲೋಚನೆಯನ್ನು ಬಿಂಬಿಸುತ್ತವೆ.

ವಿಜಯನಗರದ ಅಣೆಕಟ್ಟು, ಕಾಲುವೆಯನ್ನು ಕಲ್ಲುಗುಂಡು, ಗಾರೆಗಳಿಂದ ನಿರ್ಮಿಸಲಾಗಿದೆ ಇಷ್ಟು ವರ್ಷಗಳಾದರೂ ಇವು ಒಡೆದಿರುವುದಿಲ್ಲ. ಗಂಗಾವತಿ ತಾಲೂಕಿನ ಬೆನ್ನೂರ ಬಳಿಯ ಅಣೆಕಟ್ಟನ್ನು ಒಡೆಯಲು ಹೈಡ್ರೋ ಪವರ್ ಪ್ರಾಜೆಕ್ಟ್ ಕಂಪನಿಯವರು ಎಷ್ಟೇ ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ. ಹಾಗಾಗಿ ಹಳೆಯ ಅಣೆಕಟ್ಟಿನ ಮೇಲೆಯೇ ಹೊಸದಾಗಿ ತಡೆಗೋಡೆಯನ್ನು ನಿರ್ಮಿಸಿದರು. ಕೇವಲ ಕಲ್ಲುಗುಂಡುಗಳಿಂದಲೇ ನಿರ್ಮಿಸಿರುವ ಈ ಅಣೆಕಟ್ಟೆಯ ನಿರ್ಮಾಣ ಆಶ್ಚರ್ಯದಾಯಕ.[8]

ಒಟ್ಟಿನಲ್ಲಿ ವಿಜಯನಗರದ ಸ್ಮಾರಕಗಳು ಭಾರತೀಯ ದೇವಾಲಯ ವಾಸ್ತುಶೈಲಿಯ ದಾಕ್ಷಿಣಾತ್ಯ ಪ್ರಕಾರವಾದ ದ್ರಾವಿಡ ಶೈಲಿಯ ಉತ್ಕೃಷ್ಟ ಮಾದರಿಗಳಾಗಿದ್ದು, ಹಿಂದೆ ಇರದ ಭವ್ಯತೆ, ವಿಸ್ತಾರತೆ ಮತ್ತು ಬೃಹತ್ ಪ್ರಮಾಣತೆಗಳಿಂದ ಗಮನ ಸೆಳೆಯುತ್ತವೆ. ವಿಜಯನಗರ ಕಾಲದ ಕಟ್ಟಡಗಳು ಕೇವಲ ಕಲಾ ಪರಂಪರೆಯ ಪ್ರತೀಕಗಳಾಗಿರದೆ ಸಮಕಾಲೀನ ವಾಸ್ತು ತಾಂತ್ರಿಕತೆಯನ್ನು ಪ್ರತಿಬಿಂಬಿಸುತ್ತವೆ. ನಮ್ಮ ಪ್ರಾಚೀನ ಕಟ್ಟಡಗಳ ತಾಂತ್ರಿಕ ನೆಲೆಯ ಗಂಭೀರ ಅಧ್ಯಯನಗಳು ನಡೆಯಬೇಕಾಗಿದೆ. ಅಂದಾಗ ಮಾತ್ರ ಭಾರತೀಯ ಶಿಲ್ಪಿಗಳ ತಾಂತ್ರಿಕ ಕೌಶಲ್ಯದ ವೈಜ್ಞಾನಿಕ ಮೌಲ್ಯೀಕರಣವು ಸಾಧ್ಯವಾಗುತ್ತದೆ.

ಆಧಾರಸೂಚಿ

1) ಶರಣಬಸಪ್ಪ ಕೋಲ್ಕಾರ, 2010, "ವಿಜಯನಗರ ಉತ್ತರ ದಿಕ್ಕಿನ ಬಸವಪಟ್ಟಣ ದ್ವಾರ ಶೋಧನೆ" ಪುಟ 217–222, **ವಿಜಯನಗರ ಅಧ್ಯಯನ**, ಸಂ. 14, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.

2) ಜ್ಞಾನಾನಂದ. ಜೆ., 2002, **ಶಿಲ್ಪಾದರ್ಶ,** ಸಂ. 2, ಪು.ಸಂ. 75–80, ಕನ್ನಡ ವಿ.ವಿ. ಹಂಪಿ.
3) ಕೇಶವ. ಟಿ.ಎಂ., ವಿಶ್ವೇಶ್ವರ ಎಂ.ವಿ., **"ವಿಜಯನಗರ ವಾಸ್ತು ನಿರ್ಮಾಣಕ್ಕೆ ಉಪಯೋಗಿಸಿದ ಕಲ್ಗಣಿಗಳು"** ಪು.ಸಂ. 275–284, **ವಿಜಯನಗರ ಅಧ್ಯಯನ,** ಸಂ. 14, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.
4) ಚನ್ನಬಸಪ್ಪ ಪಾಟೀಲ್, 1999, ಪು.ಸಂ. 45–46 **ಕರ್ನಾಟಕದ ಕೋಟೆಗಳು,** ಕ.ವಿ.ವಿ. ಹಂಪಿ.
5) ಚಂದ್ರಶೇಖರ. ಹೆಚ್., 2006, **"ಹಂಪೆಯ ಸ್ಮಾರಕಗಳ ಶಿಲೆ ಮತ್ತು ಸಂರಕ್ಷಣೆ"** ಪು.ಸಂ. 498–503, ಹಂಪಿ ಸಂಪುಟ, ಕ.ವಿ.ವಿ. ಹಂಪಿ.
6) ಕುಲಕರ್ಣಿ ಆರ್.ಹೆಚ್., 2006, **"ವಿಜಯನಗರದ ಗಾರೆಕಲೆ"** ಪು.ಸಂ. 114–127, ಹಂಪಿ ಸಂಪುಟ, ಕ.ವಿ.ವಿ. ಹಂಪಿ.
7) ಚನ್ನಬಸಪ್ಪ ಪಾಟೀಲ್, 1999, **ಕರ್ನಾಟಕದ ಕೋಟೆಗಳು,** ಪು.ಸಂ. 46–47, ಕ.ವಿ.ವಿ. ಹಂಪಿ.
8) ಶರಣಬಸಪ್ಪ ಕೋಲ್ಕಾರ, 1997, **"ಬೆನ್ನೂರಿನ ಬಸವನ ಆಣೆ"** ಪು.ಸಂ.13–14 ಸುಧಾ ವಾರಪತ್ರಿಕೆ, ಬೆಂಗಳೂರು.

24. ಕೊಚ್ಚಿನ್‌ನಲ್ಲಿ ದೊರೆತ ಒಂದನೆಯ ದೇವರಾಯನಕಾಲದ ಅಪ್ರಕಟಿತ ವೀರಗಲ್ಲು ಶಾಸನ

– ಆರ್.ವಿ. ಅನಿಲ್ ಕುಮಾರ್

ಅರಬ್ಬಿ ಸಮುದ್ರದ ರಾಣಿಯೆಂದೆ ಪ್ರಖ್ಯಾತವಾಗಿರುವ ಕೊಚ್ಚಿನ್ ಪ್ರದೇಶವು ಕೊಚಿ, ಕೊಚ್ಚಿನ್ ಎಂಬುವ ಹೆಸರುಗಳ ಮೂಲಕ ಕೇರಳ ರಾಜ್ಯ ಮಾತ್ರವಲ್ಲದೆ ದೇಶದಾದ್ಯಂತ ಬಹುಮುಖ್ಯವಾದ ವ್ಯಾಪಾರ ಕೇಂದ್ರವಾಗಿ ಪ್ರಸಿದ್ಧವಾಗಿರುವ ನಗರ. ಇತಿಹಾಸದ ದೃಷ್ಟಿಕೋನದಿಂದ ನೋಡುವುದಾದರೆ ಅನೇಕ ದೇಶಿಯ ಮತ್ತು ವಿದೇಶಿಯ ರಾಜರುಗಳ ಆಳ್ವಿಕೆಗೆ ಒಳಪಟ್ಟು ಪ್ರಮುಖವಾಗಿ ಚೇರ, ವಿಜಯನಗರ, ಸುಲ್ತಾನರು, ಸ್ಥಳೀಯ ನಾಯಕರು ಹಾಗೂ ರೋಮನ್ನರು, ಅರಬ್ಬರು, ಪೋರ್ಚುಗೀಸರು, ಡಚ್ಚರು, ಆಂಗ್ಲರ ಆಡಳಿತಕ್ಕೆ ಒಳಪಟ್ಟಿತ್ತು. ಈ ಪ್ರದೇಶದ ಪ್ರಮುಖ ಬೆಳೆ ಮೆಣಸು ಮತ್ತು ಶುಂಠಿ. ಆದ್ದರಿಂದ ಪಾಶ್ಚಾತ್ಯರ ಪ್ರಭಾವಕ್ಕೆ ಒಳಗಾಗಿ ಭಾರತದ ಪ್ರಮುಖ ವಸಾಹತು ನೆಲೆಯಾಗಲು ಕಾರಣವಾಗಿದೆ.

ಪ್ರಕೃತ ವೀರಗಲ್ಲು ಶಾಸನವು ನನ್ನ ಗಮನಕ್ಕೆ ಕಂಡು ಬಂದಂತೆ ಅಪ್ರಕಟಿತವಾಗಿದ್ದು, ಕೊಚ್ಚಿನ್‌ನಿಂದ ಸರಿಸುಮಾರು 5 ಕಿ.ಮೀ ದೂರದಲ್ಲಿರುವ ಮಟ್ಟನ್‌ಚೆರ್ರಿ ಎಂಬ ದ್ವೀಪದಲ್ಲಿ ನೆಲೆಸಿರುವ ಪ್ರಾಚ್ಯವಸ್ತು ಸಂಗ್ರಹಕಾರರೊಬ್ಬರ ಒಡೆತನದಲ್ಲಿದೆ. ಈ ವೀರಗಲ್ಲು ಸುಮಾರು 3 ಅಡಿ ಅಗಲ, 5.8 ಅಡಿ ಉದ್ದ, 18 ಸೆಂ.ಮೀ ದಪ್ಪವಿದೆ. ಶಾಸನವು ಕನ್ನಡ ಲಿಪಿ ಮತ್ತು ಭಾಷೆಯನ್ನು ಹೊಂದಿದ್ದು, ಎರಡು ಪಟ್ಟಿಕೆಗಳ ಮೇಲೆ ಶಾಸನವನ್ನು ಕಂಡರಿಸಲಾಗಿದೆ.

ಈ ಮೇಲೆ ಪ್ರಸ್ತಾಪಿಸಿರುವ ಶಾಸನವು 12 ಸಾಲುಗಳನ್ನು ಒಳಗೊಂಡಿದ್ದು ಈ ಕೆಳಗಿನಂತೆ ಕಾಣಬಹುದಾಗಿದೆ.

ಶಾಸನಪಾಠ

ಮೊದಲನೆಯ ಪಟ್ಟಿಕೆ

1. ಸ್ವಸ್ತಿ ಸಮಸ್ತ ಪ್ರಸಸ್ತಿ ಸಹಿತ[ಂ]
2. ಶ್ರೀ ಮನುಂ ಮಹಾರಾಜಾ[ಧಿ*]ರಾಜ ರಾಜಪರ
3. [ಮೇ]ಸ್ವರ ಶ್ರೀ ವೀರದೇವರಾಯರು ಸುಖಧಿ[ಂ*]
4. ರಾಜ್ಯಂಗೆಯ್ವ ಕಾಲದ್ದ [ಲ್ಲಿ] ಶ
5. ಕವರುಶ 1343 . . . .
6. ಸಂವತ್ಸರ . . . . ಕ ಸು
7. . . . 5 ಸೋ ಶ್ರೀಮತು ಸಬ

ಎರಡನೆಯ ಪಟ್ಟಿಕೆ

8. [ರಿ]ಗಿ ತಾಮಗೌಡರನು ಸಬಾಯರು ತುಱುಸೆಱೆಯ ಹಿಡಿದಲಿ ಆ ತಾಮಗೌಡರ
9. ಸೆಱೆ ತುಱುವ ಮರಳಿಚಿ ಮಡಿದವನು ಹವಸೆಯ ಬೀರಗಉಡನು ಹಾ[ಯ್ದು] .
10. [ಗೂ]ಯಿಸಿ [ಕೂ]ಂದಬಿದಲಿ ಆತನ ಮದವಳಿಗೆ ಗೌರಾಯಿ ಸಹಗಮನವ ಮಾಡಿ
11. ವೀರ ಸ್ವರ್ಗ್ಗವ ಪಡದರು ಯಿ ಸಾಸನವ ಬರದವನು ಕರ[ಱ]ಕೆವಿರಜ್ಯನು
12. ಕಲ ಮಾಡಿದಾತ ಹರಿಯಕೊಪ[ಪ್ಪ*]ದ ಮಗೋಜ೨೦

ಶಾಸನದ ತಿಳಿಸುವಂತೆ ಕಾಲವು ಶಕವರುಶ 1343 ಎಂದಿದ್ದು, ಸಂವತ್ಸರದ ಭಾಗವು ತ್ರುಟಿತವಾಗಿದ್ದು, ಮುಂದುವರಿದಂತೆ 5 ಸೋಮವಾರವನ್ನು ಉಲ್ಲೇಖಿಸುತ್ತದೆ. ತೇದಿಯ ಭಾಗವು ತ್ರುಟಿತವಾದ್ದರಿಂದ ನಿಖರವಾದ ಕಾಲವನ್ನು ಹೇಳುವುದು ಕಷ್ಟಸಾಧ್ಯ. ಆದರೆ ಶಾಸನವು ಪ್ರಸ್ತಾಪಿಸುವ ಶಕವರುಶ 1343 ಮತ್ತು ವೀರ ದೇವರಾಯ ಎಂದು ಉಲ್ಲೇಖಿಸುವ ರಾಜನ ಆಳ್ವಿಕೆಯ ಕಾಲವು ಒಂದನೇ ದೇವರಾಯನ ಕಾಲವಾದ ಕ್ರಿ.ಶ.1421ಕ್ಕೆ ಸರಿಹೊಂದುತ್ತದೆ. ಪ್ರಸ್ತುತ ಲಭ್ಯವಿರುವ ಶಾಸನಗಳ ಪ್ರಕಾರ ಒಂದನೆಯ ದೇವರಾಯನು ಕ್ರಿ.ಶ. 1406 ರಿಂದ 1422 ರವರೆಗೆ ವಿಜಯನಗರ ಸಾಮ್ರಾಜ್ಯದ ಅಧಿಪತಿಯಾಗಿ ಆಳ್ವಿಕೆಯನ್ನು ನಡೆಸಿದ ಸಂಗಮ ವಂಶದ ರಾಜನು, ಉತ್ತಮ ಆಡಳಿತಗಾರನಾಗಿದ್ದನು.

ಪ್ರಸ್ತುತ ಶಾಸನವು ತುಱುಗೋಳ್ ಶಾಸನವಾಗಿದ್ದು, ಹವಸೆಯ ಬೀರಗೌಡನು ತಾಮಗೌಡರಿಗೆ ಸೇರಿದ ತುಱುಗಳನ್ನು ಅಥವಾ ಗೋವುಗಳನ್ನು ಶತ್ರುಗಳು ಸೆರೆ ಹಿಡಿದಾಗ ವೀರತನದಿಂದ ಅವರೂಡನೆ ಹೋರಾಡಿ ಪುನಹ ತಾಮಗೌಡರಿಗೆ ತುಱುಗಳನ್ನು ಮರಳಿಸುವಾಗ ಮಡಿದು ವೀರ ಸ್ವರ್ಗವ ಪಡೆದದ್ದನ್ನು ದಾಖಲಿಸುವುದರ ಜೊತೆಗೆ, ವೀರನಾದ ಬೀರಗೌಡನ ಮದವಳಿಗೆ ಅಥವಾ ಹೆಂಡತಿ ಗೌರಾಯಿಯು ಸಹಗಮನಮಾಡಿ ಇಬ್ಬರೂ ವೀರ ಸ್ವರ್ಗವ ಪಡೆದ ಸಂಗತಿಯನ್ನು ತಿಳಿಸುತ್ತದೆ.

ಶಾಸನದ ಕೊನೆಯ ಎರಡು ಸಾಲುಗಳ ಪ್ರಕಾರ ಶಾಸನವನ್ನು ಬರೆದ ಕವಿ ಕರಱ ಇಲ್ಲವೆ ಕರಱನಾಗಿದ್ದು, ಈ ವೀರಗಲ್ಲನ್ನು ಕೆತ್ತಿದ ಶಿಲ್ಪಿಯು ಹರಿಯಕೊಪ್ಪದ ಮಗೋಜ ಎಂಬುವ ಅಂಶವನ್ನು ತಿಳಿದುಕೊಳ್ಳಬಹುದಾಗಿದೆ.

ವೀರಗಲ್ಲು ಶಿಲ್ಪ

ಡಾ. ಕೆ.ವಿ. ರಮೇಶರ ಪ್ರಕಾರ ವಿಜಯನಗರದ ಅವಧಿಯು ಶಾಸನಗಳ ಲಿಪಿ ಮತ್ತು ಭಾಷೆಯ ಅವನತಿಯ ಕಾಲ ಎಂಬುವ ವಿಷಯವು ವೀರಗಲ್ಲುಗಳಿಗೂ ಅನ್ವಯಿಸುವುದರಲ್ಲಿ ಸಂಶಯವಿಲ್ಲ. ಈ ಕಾಲದ ಒರಟಾದ ಕಲ್ಲಿನ ಉಪಯೋಗ ಮತ್ತು ಶಿಲೆಯ ಅಭಾವ, ಇಲ್ಲವೆ ಶಿಲ್ಪಿಯ ಚಾತುರ್ಯ್ಯತೆಯ ಕೊರತೆ ಇದಕ್ಕೆ ಕಾರಣವಿರಬಹುದು.

ಪ್ರಸ್ತುತ ವೀರಗಲ್ಲು ಶಿಲ್ಪವು ನಾಲ್ಕು ಹಂತ ಹೊಂದಿರುವ ವಿಭಿನ್ನ ಮಾದರಿಯದ್ದಾಗಿದೆ. ವೀರಗಲ್ಲಿನ ಮುಖ್ಯ ಉದ್ದೇಶವು ವೀರನ ಮರಣದ ನಂತರ ಭೂಲೋಕದಿಂದ ಸ್ವರ್ಗಕ್ಕೆ ಹೋಗುವುದಾದ್ದರಿಂದ, ಶಿಲ್ಪದ ನಿರೂಪಣೆಯು ಕೆಳಗಿನ ಹಂತದಿಂದ ಮೊದಲಾಗುವುದು. ತಳಭಾಗದ ಮೊದಲನೆಯ ಹಂತದಲ್ಲಿ ಯುದ್ಧದ ಚಿತ್ರಣವು ಮೂಡಿಬಂದಿದ್ದು, ಇಲ್ಲಿ ಬಹುಶಃ ಕುದುರೆಯನ್ನೇರಿ ಈಟಿ, ಕಠಾರಿ ಮತ್ತು ಗುರಾಣಿಯನ್ನು ಹಿಡಿದಿರುವವರ ನಡುವಿನ ಶಿಲ್ಪವನ್ನು ವೀರನೆಂದು ಗುರುತಿಸಲಾಗಿದೆ. ವೀರನು ತನ್ನ ಬಲಗೈಯಲ್ಲಿ ಖಡ್ಗವನ್ನು, ಎಡಗೈಯಲ್ಲಿ ಗುರಾಣಿಯನ್ನು ಹಿಡಿದು ಎಡಪಾರ್ಶ್ವದಿಂದ ಕುದುರೆಯನ್ನೇರಿದ ಶತ್ರುವಿನ ಈಟಿಯಿಂದ ತಪ್ಪಿಸಿಕೊಂಡು, ಆಕ್ರಮಣ ಮಾಡುತ್ತಿರುವಂತೆ ಹಾಗೂ ಬಲಪಾರ್ಶ್ವದಿಂದ ಬಂದ ಮತ್ತೊಬ್ಬ ಶತ್ರುವಿನ ಕಠಾರಿಯು ದೇಹವನ್ನು ನಾಟಿದ್ದರೂ ಲೆಕ್ಕಿಸದೆ, ತನ್ನ ಬಲಗಾಲಿನಿಂದ ವೈರಿಗಳನ್ನು ತುಳಿಯುತ್ತ, ಸತ್ತ ಶತ್ರುಗಳ ನಡುವೆ ಹೋರಾಟವನ್ನು ಮಾಡುತ್ತಿರುವ ವೀರನ ಚಿತ್ರವನ್ನು ತೋರಲಾಗಿದೆ. ತೆಳುವಾದ ಉಡುಪನ್ನು ಧರಿಸಿರುವ ವೀರನ ನಡುವಿನ ಪಟ್ಟಿಯಲ್ಲಿ ಕಠಾರಿಯನ್ನಿರಿಸಿ ಕೊಂಡಿರುವುದನ್ನು ಕಾಣಬಹುದು. ಈ ರೀತಿಯಾಗಿ ಸೊಂಟದಲ್ಲಿ ಕಠಾರಿಯನ್ನಿರಿಸುವುದು

ವಿಜಯನಗರದ ವೀರಶಿಲ್ಪದ ಪ್ರಮುಖಲಕ್ಷಣ. ಆದರೆ ಇಲ್ಲಿ ತುಱುಗೋಳ್ ವೀರಗಲ್ಲುಗಳಲ್ಲಿ ಸಾಮಾನ್ಯವಾಗಿ ಕಂಡು ಬರುವಂತೆ ಗೋವುಗಳನ್ನು ರಕ್ಷಿಸುವ ದೃಶ್ಯಾವಳಿ ಕಂಡರಿಸದಿರುವುದು ಗಮನಿಸಬೇಕಾದ ಅಂಶ.

ಎರಡನೆಯ ಹಂತದಲ್ಲಿ ನೃತ್ಯಕಾರ ಮತ್ತು ವಾದ್ಯಗಾರರು ವೀರನನ್ನು ಸ್ವರ್ಗಕ್ಕೆ ಸ್ವಾಗತಿಸುವಂತೆ ಇಲ್ಲವೆ ಕರೆದೊಯ್ಯುತ್ತಿರುವಂತೆ ತೋರಲಾಗಿದ್ದು, ಈ ರೀತಿಯ ಶಿಲ್ಪಗಳು ವೀರನ ಮರಣದ ನಂತರ ಅವನಿಗೆ ಸಿಗುವ ಸವಲತ್ತುಗಳ ವೈಭವೀಕರಣದ ಸಾಂಕೇತಿಕ ಚಿತ್ರಣವೆಂಬುವುದರಲ್ಲಿ ಸಂಶಯವಿಲ್ಲ. ಈ ಹಂತದಲ್ಲಿ ವೀರಗಲ್ಲಿನ ಬಲಭಾಗದಲ್ಲಿ ವೀರನು ತನ್ನ ಬಲಗೈಯಲ್ಲಿ ಕಠಾರಿಯನ್ನಿಡಿದು ಪೀಠದ ಮೇಲೆ ಕುಳಿತ್ತಿದ್ದು, ಕೇಶಾಲಂಕಾರ, ಕಿವಿಯಲ್ಲಿ ಕರ್ಣಾಭರಣ, ಕತ್ತಿನಲ್ಲಿ ಹಾರ, ತೋಳ್ಬಂದಿಗಳು, ಕೈ ಹಾಗೂ ಕಾಲಿನಲ್ಲಿ ಖಡಗಳು ಇತರೆ ಆಭರಣಗಳು ಮತ್ತು ಉಡುಗೆಗಳು ವೈಭವೀಕೃತವಾಗಿ ಮೂಡಿ ಬಂದಿದೆ. ನೃತ್ಯ ಪ್ರದರ್ಶನವನ್ನು ವೀಕ್ಷಿಸುತ್ತ ವೀರನು ಮುಗುಳ್‌ನಗುತ್ತಿರುವ ದೃಶ್ಯವನ್ನು ಶಿಲ್ಪಿ ಸೋಗಸಾಗಿ ತೋರಿದ್ದಾನೆ. ಮೃದಂಗ ಬಾರಿಸುತ್ತಿರುವ ಪುರುಷ, ಜಾಗಟೆಯನ್ನಿಡಿದ ಮಹಿಳೆ ವಾದ್ಯಕಾರರ ನಡುವೆ ನರ್ತಿಸುತ್ತಿರುವ ನೃತ್ಯಕಾರನ ಶಿಲ್ಪಗಳ ಉಡುಗೆ–ತೊಡುಗೆಯು ಕೂಡ ವೈಭವೀಕೃತವಾಗಿ ಕಂಡು ಬಂದಿದೆ.

ಮೂರನೆಯ ಹಂತದಲ್ಲಿ ತಿಳಿದು ಬರುವ ಪ್ರಮುಖ ಅಂಶವೆಂದರೆ, ಶಿಲ್ಪಿಯು ಮೊದಲಿಗೆ ಶಾಸನ ಪಟ್ಟಿಕೆಯನ್ನು ತಯಾರಿಸಿದ್ದು ನಂತರ ಶಿಲ್ಪ ಕೆತ್ತಲು ಸ್ಥಳದ ಅಭಾವ ಎದುರಾಗಿ, ಶಾಸನ ಪಟ್ಟಿಕೆಯ ಅರ್ಧ ಭಾಗವನ್ನು ಬಳಸಿರುವಂತೆ ತೋರುತ್ತದೆ. ಈ ಹಂತದಲ್ಲಿ ವೀರನು ಪದ್ಮಾಸನದಲ್ಲಿ ಕುಳಿತ್ತಿದ್ದು, ಅಂಜಲಿಮುದ್ರೆಯಲ್ಲಿದ್ದಾನೆ. ಅವನ ಬಲಪಾರ್ಶ್ವದಲ್ಲಿ ಬಲಗೈಯಲ್ಲಿ ಚಾಮರ ಮತ್ತು ಎಡಗೈಯಲ್ಲಿ ವಿಶಿಷ್ಟ ರೀತಿಯ ಆಯುಧವನ್ನಿಡಿದ ಪುರುಷ, ಎಡಪಾರ್ಶ್ವದಲ್ಲಿ ಬಲಗೈಯಲ್ಲಿ ಆಯುಧ ಮತ್ತು ಎಡಗೈಯಲ್ಲಿ ಕಮಂಡಲವನ್ನಿಡಿದ ಮಹಿಳೆಯನ್ನು ಕಾಣಬಹುದು.


ನಾಲ್ಕನೆಯ ಹಂತದ ಶಿಲ್ಪಪಟ್ಟಿಕೆಯಲ್ಲಿ ವೀರ ತನ್ನ ಹೆಂಡತಿಯೊಡನೆ ಪದ್ಮಾಸನದಲ್ಲಿ ಕುಳಿತ್ತಿದ್ದು, ಅಂಜಲಿಮುದ್ರೆಯಲ್ಲಿದ್ದಾನೆ. ಇವರ ಎಡಪಾರ್ಶ್ವದಲ್ಲಿ ಶಿವಾಚಾರ್ಯನು ಶಿವಲಿಂಗವನ್ನು ಪೂಜಿಸುತ್ತಿದ್ದು, ಲಿಂಗದ ಮುಂಭಾಗದಲ್ಲಿ ನಂದಿ ವಿಗ್ರಹ ಮೂಡಿ ಬಂದಿದೆ.

ವಿಜಯನಗರ ಆರಂಭದ ಕಾಲಘಟ್ಟಕ್ಕೆ ಸೇರುವ ಈ ವೀರಗಲ್ಲು ವಿಶಿಷ್ಟ ಲಕ್ಷಣಗಳನ್ನೊಳಗೂಂಡಂತೆ, ಶಿಲ್ಪಿಯು ಶಿಲ್ಪವನ್ನು ಕೆತ್ತುವ ಸಂದರ್ಭದಲ್ಲಿ ತಬ್ಬಿಬ್ಬಾದ ಪ್ರಸಂಗವನ್ನು ಮನಗಾಣ ಬಹುದಾಗಿದೆ. ಈ ಶಾಸನದ ಜೊತೆಯಲ್ಲಿ ಎರಡು ವೀರಗಲ್ಲುಗಳು ಅದೇ ಪ್ರಾಚ್ಯ ಸಂಗ್ರಹಕಾರನ ಗೋದಾಮಿನಲ್ಲಿ ಕಂಡು ಬಂದಿದ್ದು, ಕೇವಲ ಒಂದು ಮಾತ್ರ ಶಾಸನೋಕ್ತ ವೀರಗಲ್ಲಾಗಿದ್ದು ಹೊಯ್ಸಳ ಅರಸ ವೀರ ಬಲ್ಲಾಳನ ಕಾಲದ್ದಾಗಿದೆ. ಇದರೊಂದಿಗೆ ಈ ಸಂಗ್ರಹಕಾರನ ಬಳಿ ಚೋಳ, ಕಲ್ಯಾಣದ ಚಾಲುಕ್ಯ, ಹೊಯ್ಸಳ, ವಿಜಯನಗರ ಕಾಲಾವಧಿಯ ಮೂರ್ತಿಶಿಲ್ಪಗಳನ್ನು ಮತ್ತು ಇತರೆ ಪ್ರಾಚ್ಯಾವಶೇಷಗಳನ್ನು ಕಾಣಬಹುದಾಗಿದೆ.

ಆಧಾರಸೂಚಿ


1. ಶೇಷಶಾಸ್ತ್ರಿ. ಆರ್, 1982, **ಕರ್ನಾಟಕದ ವೀರಗಲ್ಲುಗಳು,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
2. ಪರಮಶಿವಮೂರ್ತಿ ಡಿ. ವಿ., 1999, **ಕನ್ನಡ ಶಾಸನಶಿಲ್ಪ,** ಕನ್ನಡ ವಿಶ್ವ ವಿದ್ಯಾನಿಲಯ, ಹಂಪಿ
3. ಗೋಪಾಲಕೃಷ್ಣ ಕೆ. ಜಿ. ಮತ್ತು ನಾಗರಾಜ್ ಎಂ. ಜಿ., 2003, ರಾಮನಗರದ ಒಂದು ಅಪ್ರಕಟಿತ ವೀರಗಲ್ಲು ಶಾಸನ., **ಇತಿಹಾಸ ದರ್ಶನ** ಸಂಪುಟ 18, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು
4. ನರಸಿಂಹನ್ ಅ. ಲ. ಮತ್ತು ಮರಿಶಾಮಾಚಾರ್ ಎನ್., 1994, **ಶಿಲ್ಪಕಲಾ ಪ್ರಪಂಚ,** ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು
5. Swamikannu Pillai., 1982, **Indian Ephimeries,** Vol.5, Agam Kala Prakashan, Delhi

ಶಾಸನದ ಪಡಿಯಚ್ಚು ಮತ್ತು ವೀರಗಲ್ಲಿನ ಛಾಯಾಚಿತ್ರಗಳು



ಮೊದಲನೆಯ ಪಟ್ಟಿಕೆ





ಎರಡನೆಯ ಪಟ್ಟಿಕೆ

25. ದಕ್ಕಲರಿಗೆ ಸಂಬಂಧಿಸಿದ ವಿಜಯನಗರ ಕಾಲದ ಒಂದು ಕಂಚಿನ ಪತ್ರ

– ಡಾ. ಎಚ್. ತಿಪ್ಪೇಸ್ವಾಮಿ

ಪೀಠಿಕೆ

ವಿಶ್ವೀಕರಣದ ಇಂದಿನ ಆಧುನಿಕ ದಿನಗಳಲ್ಲೂ ರಾಜ್ಯದ ಅನೇಕ ಬುಡಕಟ್ಟು ಮತ್ತು ಅಲೆಮಾರಿ ಸಮುದಾಯಗಳು ಸಮಾಜಿಕ ಹಕ್ಕುಗಳಿಂದ ವಂಚಿತರಾಗಿ ಇನ್ನೂ ಅತಂತ್ರವಾಗಿ ಜೀವಿಸುತ್ತಿವೆ. ಅವುಗಳಲ್ಲಿ ಅಲೆಮಾರಿ ಸಮುದಾಯವಾದ "ದಕ್ಕಲ" ಸಮುದಾಯವು ಒಂದಾಗಿದೆ. ಬಹು ಪ್ರಾಚೀನ ಇತಿಹಾಸ, ಪರಂಪರೆ ಮತ್ತು ಶ್ರೀಮಂತ ಸಂಸ್ಕೃತಿಯನ್ನು ಹೊಂದಿರುವ ಈ ಸಮುದಾಯ ಇಂದಿಗೂ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ವಲಸೆ ಹೋಗುವುದನ್ನು ರೂಢಿಸಿಕೊಂಡಿದೆ. ಈ ಸಮುದಾಯಕ್ಕೆ ಇದುವರೆಗೂ ಮೂಲಭೂತ ಸೌಕರ್ಯಗಳಾಗಲಿ, ಶಿಕ್ಷಣವಾಗಲಿ ಅಥವಾ ಉಳುಮೆ ಮಾಡಲು ಭೂಮಿಯಾಗಲಿ ಇದುವರೆಗೆ ಸರಿಯಾಗಿ ಸಿಕ್ಕಿಲ್ಲ. ಆರ್ಥಿಕವಾಗಿ ಸಂಕಷ್ಟ ಸ್ಥಿತಿಯಲ್ಲಿರುವ ಈ ಜನರು ನೆಲೆ ನಿಲ್ಲಲು ವಾಸದ ಮನೆಗಳಿಲ್ಲದೆ, ಮಾಡಲು ನಿರ್ದಿಷ್ಟ ಉದ್ಯೋಗವಿಲ್ಲದೆ ಇಂದಿಗೂ ಅತಂತ್ರ ಸ್ಥಿತಿಯಲ್ಲಿ ಬದುಕುತ್ತಿರುವುದು ಅತ್ಯಂತ ವಿಪರ್ಯಾಸ. ಎತ್ತುಗಳ ಕೋಡುಗಳನ್ನು ಕೆತ್ತುವುದು, ಚಾಪೆ ಹೆಣೆಯುವುದು, ಹಂದಿ, ಹಸು, ಎತ್ತು ಸಾಕಾಣಿಕೆ ಇವರ ಮೂಲ ಕಸುಬುಗಳಾಗಿವೆ. ಈ ಸಮುದಾಯ ಜಾಗತೀಕರಣದ ಇಂದಿನ ಸಂದರ್ಭದಲ್ಲಿಯೂ ನಿರ್ದಿಷ್ಟ ಪ್ರದೇಶದಲ್ಲಿ ನೆಲೆ ನಿಲ್ಲದೆ, ಇನ್ನೂ ಅಲೆಮಾರಿಗಳಾಗಿ ಜೀವನ ನಡೆಸುತ್ತಿರುವುದು ಅತ್ಯಂತ ದುರಾದೃಷ್ಟಕರ.

ಈ ಸಮುದಾಯದ ಕುಲ ಕಸಬಿಗೆ ಸಂಬಂಧಿಸಿದ ವಿಜಯನಗರ ಕಾಲದ ಕಂಚಿನಪತ್ರ (ತಾಮ್ರಪತ್ರ) ವೊಂದು ಇತ್ತೀಚಿಗೆ ದೊರೆತಿದೆ. ಇದರಲ್ಲಿ ಈ ಸಮುದಾಯದ ಚಾರಿತ್ರಿಕ ಹಿನ್ನಲೆ, ಮಹತ್ವ ಮತ್ತು ಅವರ ಕುಲ ವೃತ್ತಿಗೆ ಸಂಬಂಧಿಸಿದಂತೆ ಹಲವು ವಿವರಗಳು ಉಲ್ಲೇಖಿತವಾಗಿದ್ದು, ಆ ವಿವರಗಳು ಈ ಮುಂದಿನಂತಿವೆ.

ದಕ್ಕಲ ಸಮುದಾಯದ ಚಾರಿತ್ರಿಕ ಹಿನ್ನೆಲೆ

ಜಂಬೂದ್ವೀಪದ ಮೂಲ ನಿವಾಸಿಗಳಲ್ಲಿ ಒಬ್ಬರಾದ ದಕ್ಕಲ ಸಮುದಾಯದವರು ಸಹಾ ಇತರೆ ಸಮುದಾಯಗಳಂತೆ ತಮ್ಮ ಹುಟ್ಟು ಮತ್ತು ತಮ್ಮ ಮೂಲಗಳಿಗೆ ಸಂಬಂಧಿಸಿದಂತೆ ಪುರಾಣಗಳನ್ನು ಆರೋಪಿಸಿಕೊಂಡಿದ್ದಾರೆ. ಅವುಗಳಲ್ಲಿ 'ಜಾಂಬವಂತನ ಪುರಾಣವು' ಮುಖ್ಯವಾಗಿದ್ದು, ಅದು ಇವರ ಹುಟ್ಟು ಮತ್ತು ಚಾರಿತ್ರಿಕ ಮಹತ್ವವನ್ನು ನೀಡುತ್ತದೆ. ಇವರು ತಮ್ಮನ್ನು ತಾವು ಜಾಂಬವಂತನ ಮಕ್ಕಳು ಇಲ್ಲವೇ ದಕ್ಕಲ ಮುನಿಯ ವಂಶಸ್ಥರು ಎಂದು ಹೇಳಿಕೊಳ್ಳುತ್ತಾರೆ. ಇವರಿಗೆ ಅಸ್ಪೃಶ್ಯರಾದ ಮಾದಿಗರ ಕೇರಿ ಮತ್ತು ಮನೆಗಳ ಪ್ರವೇಶವನ್ನು ಇಂದಿನ ಆಧುನಿಕ ದಿನಗಳಲ್ಲಿಯೂ ನಿರ್ಬಂಧಿಸಲಾಗಿದೆ. ಅಲ್ಲದೆ ಅವರೊಟ್ಟಿಗೆ ಕೂಡು–ಕೊಳ್ಳುವಿಕೆಯನ್ನು ಸಹಾ ನಿಷೇಧಿಸಲಾಗಿದೆ. ಅವರಲ್ಲಿನ ಸಂಪ್ರದಾಯದಂತೆ ಮತ್ತು ಜಾಂಬವಂತ ಪುರಾಣದ ಪ್ರಕಾರ "ಇವರು ಮಾದಿಗ ಸಮುದಾಯದವರನ್ನು ತಮ್ಮ ಒಡೆಯರು, ಯಜಮಾನರು ಎಂದು ಭಾವಿಸಿದ್ದಾರೆ. ಮಾದಿಗ ಜನಾಂಗದವರ ಬಳಿ ಹೋಗಿ ಭಿಕ್ಷಾಟನೆ ಮಾಡುವುದು ಇವರ ಪ್ರಧಾನ ಮತ್ತು ವಂಶಾಪರ್ಯಂಪರ್ಯ ವೃತ್ತಿ". ಇವರು ಇಂದಿಗೂ ಮಾದಿಗ ಸಮುದಾಯ ನೆಲೆಸಿರುವ ಪ್ರದೇಶಗಳಿಗೆ ಹೋಗಿ ಅವರಿಂದ ಭಿಕ್ಷೆಯನ್ನು ಈ ಮುಂದಿನಂತೆ

ಬೇಡುತ್ತಾರೆ "ಗೌಡ್ರೇ, ಗೌಡಸಾನಿ, ಗೊಂಚಿಗಾರ್ರೇ, ತರ್ರಪ್ಪೋ ಅನ್ನ, ನೀರು, ಮುದ್ದೆ ಕೊಡ್ರಪ್ಪೋ" ಎನ್ನುತ್ತಾರೆ. ಇದನ್ನು ಕೇಳಿದಾಕ್ಷಣವೇ ಮಾದಿಗ ಸಮುದಾಯದವರು ಪ್ರತಿ ಮನೆಯಿಂದ ತಮ್ಮ ಮನೆಯಲ್ಲಿರುವ ಅನ್ನ, ಮುದ್ದೆ, ಸಾಂಬಾರು ಜೊತೆಗೆ ನೀರು ಸಹ ತಂದು ಇವರಿಗೆ ಮೇಲಿಂದ ಎತ್ತಿ ಹಾಕುತ್ತಾರೆ. ಇದನ್ನು ಪಡೆದ ದಕ್ಕಲರು ತಾವು ತಮಗೆ ಬೇಕಾಗಿದ್ದನ್ನು ಆಹಾರವಾಗಿ ಸೇವಿಸಿ ಉಳಿದಿದ್ದನ್ನು ಹಂದಿ, ನಾಯಿ ಹಸುಗಳಿಗೆ ಹಾಕುತ್ತಾರೆ.

ದಕ್ಕಲರು ಕರ್ನಾಟಕದ ಬಳ್ಳಾರಿ, ಚಿತ್ರದುರ್ಗ, ರಾಯಚೂರು ಮೊದಲಾದ ಜಿಲ್ಲೆಗಳಲ್ಲಿ ಹೆಚ್ಚಾಗಿ ನೆಲೆಸಿದ್ದಾರೆ. ಬಳ್ಳಾರಿ ಜಿಲ್ಲೆಯ ಮೆಟ್ರಿ, ತಾಳೂರು, ಸಿದ್ದಾಪುರ, ಮೀರಸಾಬಿಹಳ್ಳಿ, ಜಾನಪುರ, ಚಿಕ್ಕನಾಯಕನ ಹಳ್ಳಿ, ವದ್ದಿಗೇರಿ, ಗುಂಡ್ಲು ವದ್ದಿಗೇರಿ, ಸಂಡೂರು, ಹೊಸಹಳ್ಳಿ, ಕೋಟಿಗನಾಳು, ಧರ್ಮಪುರ ಮೊದಲಾದ ಊರುಗಳಲ್ಲಿ ಇವರು ನೆಲೆಸಿದ್ದಾರೆ. ವರ್ಷದ ವಿಶೇಷ ದಿನಗಳಲ್ಲಿ ಮಾತ್ರ ಇವರು ತಮ್ಮ ಮೂಲ ನೆಲೆಗಳಲ್ಲಿ ಕಾಣಸಿಗುತ್ತಾರೆ. ಉಳಿದಂತೆ ವರ್ಷಪೂರ್ತಿ ಅಲೆಮಾರಿಗಳಾಗಿಯೇ ಒಂದೂರಿನಿಂದ ಮತ್ತೊಂದು ಊರಿಗೆ ಸಂಚರಿಸುತ್ತಾ ಕಾಲ ಕಳೆಯುತ್ತಾರೆ.1 ಮಾದಿಗರಂತೆ ದಕ್ಕಲರಲ್ಲಿಯೂ ಐಹೊಳೆ, ಹೆಗ್ಗಡೆ, ಕುರಿಯರು ಎನ್ನುವ ಕುಲ ಗೋತ್ರ (ಬೆಡಗು)ಗಳಿದ್ದು, ತಮ್ಮ ತಮ್ಮ ಬೆಡಗುಗಳನ್ನುಳಿದು ಉಳಿದ ಬೆಡಗುಗಳೊಂದಿಗೆ ವೈವಾಹಿಕ ಸಂಬಂಧ ಬೆಳೆಸುತ್ತಾರೆ. ಸಾಮಾನ್ಯವಾಗಿ ಇವರಲ್ಲಿ ಅಕ್ಕನ ಮಗಳನ್ನು ಇಲ್ಲವೇ ಅತ್ತೆಯ ಮಗಳನ್ನು ಮದುವೆ ಆಗುವ ಸಂಪ್ರದಾಯವಿದೆ. ಅಲ್ಲದೆ ತಮ್ಮ ಮಗಳನ್ನು ಆಕೆಯ ಸೋದರ ಮಾವನಿಗೆ ಕೊಟ್ಟು ಮದುವೆ ಮಾಡುವ ಪದ್ಧತಿಯಿದೆ. ಇಂದಿಗೂ ಮೈಲಾರ ಲಿಂಗಪ್ಪನನ್ನು, ಹುಲಿಗೆಮ್ಮನನ್ನು ತಮ್ಮ ಮನೆದೇವರನ್ನಾಗಿ ಇವರು ಸ್ವೀಕರಿಸಿದ್ದಾರೆ. ಇವರಲ್ಲಿ ಅನೇಕ ಕಟ್ಟೆ ಮನೆಗಳಿದ್ದು, ಮುದುಗಲ್ ಕಟ್ಟೆಮನೆ ಅತ್ಯಂತ ಪ್ರಮುಖವಾದ ಕಟ್ಟೆಮನೆಯಾಗಿದೆ. ಇದರಂತೆ ಯಾದಗೀರ, ಸುರಪುರ, ಶಹಾಪುರ ಮೊದಲಾದೆಡೆ ಇವರ ಕಟ್ಟೆಮನೆಗಳಿವೆ. ಆಯಾ ಕಟ್ಟೆಮನೆಯ ದೇವಸ್ಥಾನದಲ್ಲಿ ದೇವರ ನೀರನ್ನು ಹಾಕಿಸಿಕೊಂಡ ಬಂದ ತರುವಾಯವೇ ಇವರ ವೈವಾಹಿಕ ಕಾರ್ಯಗಳು ಆರಂಭವಾಗುತ್ತವೆ.

ತೆಲುಗು ಮಾತನಾಡುವ ದಕ್ಕಲರು ತಮ್ಮ ಮೂಲ ಕುಲ ವೃತ್ತಿಯ ಕುರಿತು ಇಲ್ಲದ ಅಭಿಮಾನವನ್ನು ಬೆಳೆಸಿಕೊಂಡಿದ್ದಾರೆ. ಅವುಗಳನ್ನು ಯಾವುದೇ ಕಾರಣಕ್ಕೂ ಕೈಬಿಡದೆ ಇಂದಿನ ಆಧುನಿಕ ದಿನಗಳಲ್ಲೂ ಆಚರಿಸುತ್ತಿದ್ದಾರೆ. ಈ ಕುರಿತಂತೆ ಈ ಸಮುದಾಯದ ಹಿರಿಯರನ್ನು ವಿಚಾರಿಸಿದಾಗ ಅವರು "ನಾವು ಹಿಂದೆ ರಾಜವಂಶಸ್ಥರಾಗಿದ್ದೆವು. ದೇವಲೋಕದ ದೇವಪುರುಷರಿಂದ ಶಾಪಕ್ಕೊಳಗಾದ ಪರಿಣಾಮವಾಗಿ ಈ ಭೂಮಿಗೆ ದಕ್ಕಲರಾಗಿ ಬಂದಿದ್ದೇವೆ" ಎಂದು ಹೇಳುತ್ತಾರೆ.2 ದಕ್ಕಲ ಮಹಾಮುನಿ ನಮ್ಮ ಪೂರ್ವಜನಾಗಿದ್ದು ಅವರ ಮೂಲ ಕಾಯಕ ಭಿಕ್ಷಾಟನೆ ಮಾಡುವುದು. ಹಾಗಾಗಿ ನಾವು ಭಿಕ್ಷೆಯನ್ನು ಮೂಲ ವೃತ್ತಿಯನ್ನಾಗಿ ಮಾಡಿಕೊಂಡಿದ್ದೇವೆ. ನಮ್ಮ ಪ್ರತಿ ದಕ್ಕಲಿಗನಿಗೆ ಒಂದು ನಿರ್ದಿಷ್ಟ ಪ್ರದೇಶದಲ್ಲಿ ಬರುವ ಇಂತಿಷ್ಟು ಹಳ್ಳಿಗಳು ಸೇರಿರುತ್ತವೆ. ಆ ಹಳ್ಳಿಗಳಲ್ಲಿ ನಿಗದಿತ ವ್ಯಕ್ತಿಯನ್ನು ಬಿಟ್ಟು ಬೇರೆ ಯಾರೂ ಭಿಕ್ಷಾಟನೆ ಮಾಡುವಂತಿಲ್ಲ. ಮಾಡಿದರೆ ಅವರಿಗೆ ನಮ್ಮ ಕಟ್ಟೆ ಪಂಚಾಯತಿಯಲ್ಲಿ ಕೂಡಿಸಿ ದಂಡ ಹಾಕುತ್ತೇವೆ ಎನ್ನುತ್ತಾರೆ ಈ ಕುಲದ ಹಿರಿಯರು. ಇದಕ್ಕೆ ಸಂಬಂಧಿಸಿದಂತೆ ಮತ್ತು ತಮ್ಮ ವೃತ್ತಿ ಹಂಚಿಕೆ ಕುರಿತು ತಮ್ಮಲ್ಲಿರುವ ಕಂಚಿನ ಪತ್ರವನ್ನು ಇಂದಿಗೂ ಸಾಕ್ಷಿಯಾಗಿ ಇವರು ತೋರಿಸುತ್ತಾರೆ. ಇದೇ ರೀತಿಯ ವಿವರಗಳು ಮೇಲೆ ಹೇಳಿದ ಕಂಚಿನ ಪತ್ರದಲ್ಲಿದ್ದು, ಅದರ ವಿವರಗಳು ಈ ಮುಂದಿನಂತಿವೆ.

ವಿಜಯನಗರ ಕಾಲದ ಕಂಚಿನ ಪತ್ರ

ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲ್ಲೂಕಿನ ಕಮಲಾಪುರದ ನಿವಾಸಿಯಾದ ರಾಮಪ್ಪ ಸನ್ ಆಫ್ ಲೇಟ್ ಹುಸೇನಪ್ಪ (87) ಇವರ ಬಳಿ ದಕ್ಕಲರ ಕುಲವೃತ್ತಿಗೆ ಸಂಬಂಧಿಸಿದ ಕಂಚಿನ ಪತ್ರವೊಂದು ಇತ್ತೀಚಿಗೆ ದೊರೆತಿದೆ. ವಿಜಯನಗರ ಸಾಮ್ರಾಜ್ಯದ ಸಂಗಮವಂಶ(ಕ್ರಿ.ಶ.1336–ಕ್ರಿ.ಶ.1485)ದ ಖ್ಯಾತ ದೊರೆಯಾದ 2ನೇ ದೇವರಾಯ/ಪ್ರೌಢದೇವರಾಯನು(ಕ್ರಿ.ಶ.1426 – ಕ್ರಿ.ಶ.1449) ತನ್ನ ಅಧಿಕಾರವಧಿಯಲ್ಲಿ ಅಂದರೆ ಕ್ರಿ.ಶ.1442ರಲ್ಲಿ ದಕ್ಕಲ ಸಮುದಾಯದ ಜೀವನ ನಿರ್ವಹಣೆ ಮತ್ತು ಅವರ ಶ್ರೇಯೋಭಿವೃದ್ಧಿಗಾಗಿ ಕೆಲವು ಹಳ್ಳಿಗಳನ್ನು ದಕ್ಕಲ ಸಮುದಾಯದ ರಾಮಪ್ಪನವರ ಪೂರ್ವಕರಿಗೆ (ದೊಡ್ಡ ಹನುಮಪ್ಪನವರಿಗೆ) ಬಿಟ್ಟುಕೊಟ್ಟ ಮಹತ್ವದ ಸಂಗತಿಯನ್ನು ಈ ಕಂಚಿನ ಪತ್ರವು ದಾಖಲಿಸಿದೆ. ತಾಮ್ರ ಶಾಸನವಾಗಿರುವ

ಇದನ್ನು ಈ ಸಮುದಾಯದವರು ಕಂಚಿನ ಪತ್ರವೆಂದು ಸಂಬೋಧಿಸುತ್ತಾರೆ. ದಕ್ಕಲ ಸಮುದಾಯದವರ ಜೀವನ ನಿರ್ವಹಣೆಗಾಗಿ ಕೆಲವು ಹಳ್ಳಿಗಳ ಭೀಕ್ಷಾಟನೆಯ ಹಕ್ಕನ್ನು ಬಿಟ್ಟು ಕೊಟ್ಟ ವಿವರ ಹಾಗೂ ಈ ಸಮುದಾಯದ ಉಗಮ, ಅದರ ಹಿನ್ನೆಲೆ ಹಾಗೂ ಅವರ ಮೂಲ ವೃತ್ತಿ ಭಿಕ್ಷಾಟನೆಗೆ ಸಂಬಂಧಿಸಿದಂತೆ ವಾಗ್ವಾದ ಅಥವಾ ವ್ಯಾಜ್ಯ ಉಂಟಾದಾಗ ಈ ಸಮುದಾಯದ ಮುಖಂಡರು ಕಂಚಿಯಲ್ಲಿ ಸಭೆ ಸೇರಿ ನ್ಯಾಯ ನಿರ್ಣಯ ಮಾಡಿ ಆ ವ್ಯಾಜ್ಯವನ್ನು ಬಗೆಹರಿಸಿ ಕೆಲವು ಹಳ್ಳಿಗಳನ್ನು ಈ ಸಮುದಾಯದ ಕೆಲವು ವ್ಯಕ್ತಿಗಳಿಗೆ ನಿಗದಿಪಡಿಸಿದ ವಿವರಗಳಿವೆ. ಈ ಮೂಲ ಕಂಚಿನ ಪತ್ರದ ವಿವರಗಳನ್ನು ಬಿಳಿ ಕಾಗದದಲ್ಲಿ ಕನ್ನಡ ಭಾಷೆ ಮತ್ತು ಕನ್ನಡ ಲಿಪಿಯಲ್ಲಿ ಕಾಲಾಂತರದಲ್ಲಿ ಪ್ರತಿ ತಯಾರಿಸಿದ್ದಾರೆ. ಈ ಪ್ರತಿಯನ್ನು ಪ್ಲಾಸ್ಟಿಕ್ ಹಾಳೆಯಿಂದ ಹೊಲೆದು, ಅದನ್ನು ಕೊಳವೆಯಾಕಾರದ ಬಿದಿರು ಮತ್ತು ತಗಡಿನಿಂದ ಮಾಡಿದ ಕೊಳವೆಯಲ್ಲಿ ರಾಮಪ್ಪನವರು ಸಂರಕ್ಷಿಸಿಟ್ಟಿದ್ದಾರೆ. ಕ್ಷೇತ್ರಕಾರ್ಯದ ವೇಳೆ ರಾಮಪ್ಪನವರು ಮೂಲ ಕಂಚಿನ ಪತ್ರವನ್ನು ಕೆಲ ಕಾರಣಗಳಿಗಾಗಿ ನಮಗೆ ನೀಡದೆ ಅದರ ಯಥಾವತ್ತಾದ ಕಾಗದದ ಪ್ರತಿಯನ್ನು ಮಾತ್ರ ನಮಗೆ ನೀಡಿದರು. ಅದರಲ್ಲಿರುವ ಮುಖ್ಯ ವಿವರಗಳನ್ನು ಈ ಮುಂದೆ ದಾಖಲಿಸಿದೆ.

ಮುಖ್ಯ ಕಂಚಿನ ಪತ್ರದ ಪ್ರತಿಯ ಆರಂಭದಲ್ಲಿ "ನಮ್ಮ ಜಾಂಬವ ಮುನಿಗಳಿಗೆ ಒಬ್ಬ ಮಾಯಾಶಕ್ತಿ ಬಂದಳು. ಆಕೆಯ ಹೆಸರು ಚಂದ್ರಿಕೆ ಅಥವಾ ಮಾದರಿ ಕನ್ನಿಕೆ. ಜಾಂಬವಂತನಲ್ಲಿ ಜಗಮುನಿ, ದಿಗಮುನಿ, ಯುಗಮುನಿ, ಜಗತ್ತು ಮುನಿ, ಹೆಪ್ಪುಮುನಿ, ರಗತಮುನಿ, ಗುರುಮುನಿ ಎನ್ನುವ ಏಳು ಮಕ್ಕಳು ಜನಿಸುತ್ತಾರೆ. ಜಾಂಬವ ಮುನಿ ವಿಶ್ವ ಬ್ರಹ್ಮನ ಮಂತ್ರೋಪದೇಶದಿಂದ ಈ ಮಕ್ಕಳನ್ನು ಪಡೆದನೆಂಬ" ವಿವರವಿದ್ದು, ಅವರಿಗಿರುವ ಅಧಿಕಾರವನ್ನು ಸಹಾ ಈ ದಾಖಲೆ ಮುಂದಿನಂತೆ ಉಲ್ಲೇಖಿಸಿದೆ.[3]

1. ಮಾಂಸದಲ್ಲಿ ಹುಟ್ಟಿದ ಮಾಚಾಳ ಮುನಿಗೆ ನಗಾರಿ, ಕತ್ತಿ, ಡೋಲು, ಮುಂದೆ ಬಳಸುವ ಕಂಚು ಕಹಳೆಗಳನ್ನು ನೀಡಿದರು ಎನ್ನುವ ವಿವರವಿದೆ.
2. ದಕ್ಕೆಯಲ್ಲಿ ಹುಟ್ಟಿದ ದಕ್ಕದ ಮುನಿಗೆ ವೀರಗಂಧ, ಶಿವದಾರ, ರುದ್ರಾಕ್ಷಿ, ಕಾವಿ, ಕಮಂಡಲ, ವಿಭೂತಿ, ಕೆಂಪು ಛತ್ರಿ, ತುದಿಗಾಲು ಪಾಪಾಸು, ವೇದ ಪುಸ್ತಕಗಳನ್ನು ನೀಡಲಾಯಿತು. ಈ ಬಿರುದುಗಳಿಂದ ದಕ್ಕದ ಮುನಿ ಬ್ರಹ್ಮಜ್ಞಾನದಲ್ಲಿ ನಿಂತನು.
3. ಅರುಂಧತಿ ಗೋಸಂಗಿ ಮನೆತನದವಳು. ಈಕೆಯನ್ನು ವಸಿಷ್ಠ ಮಹಾಮುನಿಗೆ ಕೊಟ್ಟಿರುತ್ತಾರೆ. 33 ಕೋಟಿ ದೇವತೆಗಳು, ಜಾಂಬವರು, ವಸಿಷ್ಠರು, ಮೊದಲು ಭೂಮಿಗೆ ಹೆಪ್ಪು ಕೊಟ್ಟಂಥ ಮಗನನ್ನು ನೋಡಿ ಏಕಾಂಗಿಯಾಗಿರುವ ದಕ್ಕದ ಮುನಿಯನ್ನು ಕರೆಸಿ, ಮುಂದೆ ಕಲಿ ಲೋಕ, ಕಲ್ಪ ನಿರ್ಮಿತವಾದಾಗ್ಯೆ ನಿನಗೆ ನಿರ್ಣಯವೇನೆಂದರೆ, "ಜಾಂಬವರು ಮನೆವೊಂದಕ್ಕೆ ಎರಡು ರೂಪಾಯಿ, ಒಂದು ಕೊಳಗದ ರಾಗಿ, ಅಡಿಗಲ್ಲು ತೂಕದ ಬಂಗಾರ, ಒಂದು ಬೇಟೆ, ಸುರಪಾನ ಹಾಕಿಸಿ, ಉಪ್ಪು, ಹುಳಿ, ಅನ್ನ, ಅಡಿಕೆ, ಎಲೆ, ಅರಿಶಿಣ, ಕುಂಕುಮ ಅಂಗನೂಲು ಕೊಟ್ಟು ಸಂತೋಷ ಮಾಡಿ ಕಳಿಸಬೇಕು ಈ ದಕ್ಕದ ಮುನಿಗೆ ಯಾರು ಕೊಡುವುದಿಲ್ಲವೆಂದು ಉದಾಸೀನ ಮಾಡುತ್ತಾರೋ ಅಂಥವರಿಗೆ ಜಾಂಬವರ ಶಾಪದಿಂದ ಅವರ ತಲೆ ಸಹಸ್ರ ಹೋಳು ಆಗಬೇಕು ಎಂದು ನಿಬಂಧನೆ ಹಾಕಬಹುದು ಮತ್ತು ಸೀಕಿ ಬಿಟ್ಟ ಎಲುಬು, ತೊಟ್ಟು ಬಿಟ್ಟ ಪಾದರಕ್ಷೆ, ನಾಯಿ ಕೊರಳಿಗೆ ಗೊಂಬೆ ಮಾಡಿ ಕಟ್ಟಿ ದೇಶ ಮಧ್ಯದಲ್ಲಿ ಅಪಮಾನ ಗೊಳಿಸಲಿಕ್ಕೆ ಅಡ್ಡಿಯಿಲ್ಲ. ಅಥವಾ ಸೇದು ಬಾವಿಗೆ ಹಗ್ಗ ಹಾಕಿ ಯಾರು ಭಿಕ್ಷೆ ನೀಡಿಲ್ಲವೋ ಅವರ ಹೆಸರನ್ನು ಹೇಳಿ ಅವರ ಹೆಸರೆತ್ತಿ ಕೂಗಿ ಅವಮಾನ ಗೊಳಿಸುವ ಅಧಿಕಾರ ದಕ್ಕಲನಿಗಿದೆ" ಎನ್ನುವ ವಿವರ ವಿದೆ. ಮುಂದುವರೆದ ಈ ದಾಖಲೆ ದಕ್ಕಲ ಮತ್ತು ಆತನ ಪ್ರಾಣಿಗಳು ಸತ್ತರೆ ಯಾರು ಶವ ಸಂಸ್ಕಾರ ಮಾಡಬೇಕು ಎನ್ನುವ ವಿವರವನ್ನು ಸಹಾ ನೀಡುತ್ತದೆ.
4. ದಕ್ಕದ ಮುನಿ ಸತ್ತರೆ ಜಂಗಮರ ಪಟ್ಟದ ಲಿಂಗಮುದ್ರೆ ಭೂಮಿಯಲ್ಲಿ ಮುಕ್ತಿ ಹೊಂದಿಸಿಕೊಳ್ಳಬೇಕು. ಈತನ ಸಾಮಾನು ಸರಂಜಾಮು ಹೇರುವ ಕತ್ತೆ ಸತ್ತರೆ, ನಾಯಿ ಸತ್ತರೆ, ಅಗಸರು ಅವುಗಳನ್ನು ಅಂತ್ಯ ಸಂಸ್ಕಾರ ಮಾಡಬೇಕು.

ಅದೇ ರೀತಿ ಮಂಗ ಸತ್ತರೆ ಪಂಚಾಂಗದವರು (ದೇವಾಂಗದವರು), ಆನೆ ಸತ್ತರೆ ಗಾಣಿಗರು, ಒಂಟೆ ಮತ್ತು ಎತ್ತು ಸತ್ತರೆ ಜಾಂಬವರು ಎತ್ತಿ ಅವುಗಳ ಅಂತ್ಯ ಸಂಸ್ಕಾರ ಮಾಡಬೇಕು ಎನ್ನುವ ವಿವರವನ್ನು ನೀಡುತ್ತದೆ.

5. ಇದರ ಕೊನೆಯ ಭಾಗದಲ್ಲಿ ರಾಮಪ್ಪನವರ ಪೂರ್ವಕರಿಗೆ ಬಳ್ಳಾರಿ, ಚಿತ್ರದುರ್ಗ ಜಿಲ್ಲೆ ಹಾಗೂ ಆಂಧ್ರಪ್ರದೇಶದ ರಾಯದುರ್ಗದವರೆಗಿನ ಹಳ್ಳಿಗಳು ಅವರಿಗೆ ಸೇರಿದ್ದು, ಈ ಎಲ್ಲ ಪ್ರದೇಶಗಳಲ್ಲಿ ರಾಮಪ್ಪನವರು ಭಿಕ್ಷಾಟನೆ ಮಾಡುವ ಅಧಿಕಾರವನ್ನು ಹೊಂದಿದ್ದಾರೆ ಎನ್ನುವ ವಿವರವನ್ನು ಈ ಕಾಗದದ ಹಸ್ತಪ್ರತಿ (ಕಂಚಿನ ಪತ್ರ) ಒಳಗೊಂಡಿದೆ. ಪೂರ್ವಕರಿಂದ ರಾಮಪ್ಪನವರಿಗೆ ವಂಶಪಾರಂಪರ್ಯವಾಗಿ ಹಸ್ತಾಂತರವಾದ ಹಳ್ಳಿಗಳ ವಿವರಗಳು ಈ ದಾಖಲೆಯಲ್ಲಿವೆ. ಅವುಗಳಲ್ಲಿ ಪ್ರಸಕ್ತ ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ತಾಲ್ಲೂಕಿನ ದ್ಯಾಸನೂರು, ಕುಂಬಳೂರು, ಅಲಕನಾಳು, ಚಂದ್ರಾಳು, ನಿಟ್ಟೂರು, ಬಲ್ಕುಂದಿ, ಬೂದುಗುಂಪ, ಕಂಚಗಾರ ಬೆಳಗಲ್ಲು, ಲಿಂಗದಹಳ್ಳಿ, ಚೀರಳ್ಳಿ, ಬಸ್ರಳ್ಳಿ, ಅಮ್ಮಳ್ಳಿ, ಜಾಂಪುರ, ಸಜ್ಜಲಗುಡ್ಡ, ತಾಳೂರು, ರಾರಾವಿ, ಎಮ್ಮಿಗನೂರು, ದರೋಜಿ, ದ್ಯಾಮಸಂದ್ರ, ಉಡೇಗೋಳ, ಎರಕಲ್ಲು, ತೆಕ್ಕಲುಕೋಟೆ, ಹಳೇಕೋಟೆ, ಕೆಂಚಿನಗುಡ್ಡ, ಹಾಗೂ ಹೊಸಪೇಟೆ ತಾಲೂಕಿನ ಬೈಲುವದಿಗೇರಿ, ಗುಂಡ್ಲು ವದ್ದಿಗೇರಿ, ಮರಿಯಮ್ಮನಹಳ್ಳಿ, ಹೋತಿನಕಟ್ಟೆ, ಧರ್ಮಸಾಗರ, ದ್ಯಾವಲಾಪುರ, ಉಪ್ಪಾರಹಳ್ಳಿ, ಮೆಟ್ರಿ ಕಟ್ಟೆಮನಿ, ಜಾಗಿನೂರು, ಬಳ್ಳಾಪುರ ಮತ್ತು ಸಂಡೂರು ಕಸಬೆ, ಹೊಸಹಳ್ಳಿ, ಬಾವಳ್ಳಿ, ಕೊಟಿಗನಹಾಳು, ದೇವಲಾಪುರ, ಬಲ್ಲಕುಂದೆ, ಒಪ್ಪನಾಳು, ಮುದೇನೂರು, ಬೈರಾಪುರ, ಗೋಸಬಾಳು, ದರೂರು, ಹಗಲೂರು ಮೊದಲಾದ ಹಳ್ಳಿಗಳು ರಾಮಪ್ಪನಿಗೆ ಸೇರಿವೆ ಎಂದು ಈ ದಾಖಲೆ ವಿವರಿಸುತ್ತದೆ. ಅಲ್ಲದೇ ಇಂದಿನ ದಾವಣಗೆರೆ ಜಿಲ್ಲೆಯ ಜಗಳೂರಿನ ಮರಿಕಟ್ಟೆ, ತಿಮ್ಮನಕಟ್ಟೆ, ಕ್ಯಾಸನಾಳು, ಗೌರಿಪುರ, ಚಿಕ್ಕ ಉಜ್ಜಿನಿ, ಗಡವನಹಳ್ಳಿ, ಹಿರೇಬನ್ನಿಹಟ್ಟಿ, ಮಾಚಿಕೆರೆ, ಚಿಕ್ಕಬನ್ನಿಹಟ್ಟಿ, ಕೆಚ್ಚೇನಳ್ಳಿ, ಕೆಳಗೋಟೆ, ಕಸಿವೆ, ಚಿಕ್ಕಮ್ಮನಾಳ, ಜಗಲೂರು ಕಟ್ಟೆಮನೆ, ರಾಜನಹಳ್ಳಿ, ಗೆದ್ದಲಕಟ್ಟೆ, ರಸ್ತೆ ಮಾಚಿಕೆರೆ, ಗೋಪನಹಳ್ಳಿ, ಕೂಡ್ಲಿಗಿ ತಾಲೂಕಿನ ತುಂಬುರಗುದ್ದಿ, ರಂಗೇನಹಳ್ಳಿ, ಗಳಿಗನೂರುಗಳನ್ನು ರಾಮಪ್ಪನಿಗೆ ಭೀಕ್ಷಾಟನೆಗಾಗಿ ಬಿಟ್ಟುಕೊಟ್ಟ ವಿವರಗಳಿವೆ.

ಮೇಲಿನ ಮುಖ್ಯ ಕಂಚಿನ ಪತ್ರದೊಂದಿಗೆ ರಾಮಪ್ಪನವರ ಬಳಿಯೇ ಒಂದು ಪುಟದ ಕೈಯಲ್ಲಿ ಬರೆದ ಏಳು ಕಾಗದದ ಹಸ್ತ ಪ್ರತಿಗಳು ಸಹಾ ಇವೆ. ಈ ಮೇಲಿನ ಪತ್ರಕ್ಕೆ ಪೂರಕ ಎನ್ನುವ ವಿವರಗಳನ್ನು ಇವು ಸಹಾ ಒಳಗೊಂಡಿವೆ. ಅವುಗಳಲ್ಲಿ ದಕ್ಕಲರಿಗೆ (ರಾಮಪ್ಪನವರಿಗೆ) ಸಂಬಂಧಿಸಿದ 269 ಹಳ್ಳಿಗಳನ್ನು ಕಾಲಾಂತರದಲ್ಲಿ ಬೇರೆ ಬೇರೆಯವರಿಗೆ ಬಿಟ್ಟು ಕೊಟ್ಟ ವಿವರಗಳಿವೆ. ಅಲ್ಲದೇ ಬಹಳ ಮುಖ್ಯವಾಗಿ ರಾಮಪ್ಪನವರ ವಂಶದವರಿಗೆ ಮಾತ್ರ ಭೀಕ್ಷಾಟನೆಗಾಗಿ ನಿಗದಿಯಾಗಿದ್ದ ಹಳ್ಳಿಗಳಲ್ಲಿ ಬೇರೆ ವ್ಯಕ್ತಿಗಳು ಮೂಲ ವಾರಸುದಾರರ ಅನುಮತಿ ಪಡೆಯದೇ ಅಕ್ರಮವಾಗಿ ಈ ಹಳ್ಳಿಗಳಲ್ಲಿ ಭೀಕ್ಷೆ ಬೇಡಿದ್ದಕ್ಕಾಗಿ ವಿಧಿಸಿದ ದಂಡ ಮತ್ತು ಮಾಡಿದ ಸಾಲ ತೀರಿಸಲು ಕೆಲ ಭೀಕ್ಷಾಟನೆಯ ಹಳ್ಳಿಗಳನ್ನು ತಮ್ಮ ಸ್ವಹಕ್ಕು ಅಧೀನದಲ್ಲಿದ್ದ ಕೆಲ ಹಳ್ಳಿಗಳನ್ನು ಬೇರೆಯವರು ರಾಮಪ್ಪನವರಿಗೆ ಬಿಟ್ಟುಕೊಟ್ಟ ವಿವರ ಹಾಗೂ ಈ ವಿವಾದಗಳಿಗೆ ಸಂಬಂಧಿಸಿದಂತೆ ಹಿರಿಯರ ಸಮ್ಮುಖದಲ್ಲಿ ಕಟ್ಟೆಮನೆಗಳಲ್ಲಿ 1953ರಲ್ಲಿ ನ್ಯಾಯ ನಿರ್ಣಯ ಕೈಗೊಂಡು ವಿವರಗಳನ್ನು ಈ ಇತರೆ ಹಸ್ತ ಪ್ರತಿಗಳು ಒಳಗೊಂಡಿವೆ.

ಉಪಸಂಹಾರ

ದಕ್ಕಲ ಸಮುದಾಯದ ಮೂಲ ಕುಲವೃತ್ತಿಯ ಮೇಲೆ ಬೆಳಕು ಚೆಲ್ಲುವ ಈ ಅಪರೂಪದ ದಾಖಲೆಯ ಸಹಾಯದಿಂದ ವಿಜಯನಗರ ಕಾಲದ ಸಮಾಜಿಕ ಮತ್ತು ಆರ್ಥಿಕ ಜನಜೀವನವನ್ನು ಮರು ವ್ಯಾಖ್ಯಾನಿಸಲು ಸಹಾಯಕವಾಗುತ್ತದೆ. ಅಲ್ಲದೆ ಇದರ ಆಧಾರದಿಂದ ಅಂದಿನ ಕಾಲವಧಿಯಲ್ಲಿದ್ದ ವಿವಿಧ ತಳ ಸಮುದಾಯಗಳ ಚಾರಿತ್ರಿಕ ವೈಶಿಷ್ಟತೆಯನ್ನು ಅರಿಯಲು ಸಾಧ್ಯವಾಗುತ್ತದೆ. ಈ ಹಿನ್ನೆಲೆಯಲ್ಲಿ ನಾವು ಈ ಕೆಳಕಂಡ ಅಂತಿಮ ನಿರ್ಣಯಗಳಿಗೆ ಬರಬಹುದಾಗಿದೆ.

1. ವಿಜಯನಗರ ಕಾಲಾವಧಿಯಲ್ಲಿ ಜೀವಿಸಿದ್ದ ಹಲವಾರು ಸಮುದಾಯಗಳಲ್ಲಿ ದಕ್ಕಲ(ಡಕ್ಕಲ) ಸಮುದಾಯವು ಸಹಾ ಒಂದಾಗಿತ್ತು.

2. ಶ್ರೀಮಂತ ಪರಂಪರೆ, ಇತಿಹಾಸ ಮತ್ತು ಸಂಸ್ಕೃತಿಯನ್ನು ಹೊಂದಿರುವ ದಕ್ಕಲ ಸಮುದಾಯವು ಅಂದು ಅಂದರೆ ವಿಜಯನಗರ ಕಾಲದಲ್ಲಿಯೂ ಸಹಾ ಭಿಕ್ಷೆ ಬೇಡುವುದನ್ನು ತನ್ನ ಮೂಲ ವೃತ್ತಿಯಾನ್ನಾಗಿಸಿಕೊಂಡಿತ್ತು. ಅದನ್ನೇ ನಂತರ ಕಾಲಾವಧಿಯಲ್ಲಿಯೂ ಸಂಪ್ರದಾಯದ ಹೆಸರಿನಲ್ಲಿ ಇಂದಿಗೂ ಅದನ್ನೇ ಮುಂದುವರಿಸಿಕೊಂಡು ಬಂದಿರುವುದನ್ನು ಗುರುತಿಸಬಹುದಾಗಿದೆ.

3. ಅಂದು ರಾಜಾಶ್ರಯದ ಕೃಪೆಯಲ್ಲಿದ್ದ ಈ ಸಮುದಾಯ ತನ್ನ ಜೀವನ ನಿರ್ವಹಣೆಗಾಗಿ ಕೆಲ ಹಳ್ಳಿಗಳಲ್ಲಿ ಭಿಕ್ಷೆ ಬೇಡುವ ಹಕ್ಕನ್ನು ಪಡೆದಿತ್ತು ಎಂಬದು ಇದರಿಂದ ಸ್ಪಷ್ಟವಾಗುತ್ತದೆ. ಅಲ್ಲದೇ ವಿಜಯನಗರದ ರಾಜರು ವಿವಿಧ ಕಾರಣಗಳಿಗಾಗಿ ಇತರೆ ಆಯಾಗಾರರಿಗೆ ಕೆಲ ದಾನದತ್ತಿಗಳನ್ನು ಬಿಟ್ಟ ಹಾಗೇಯೇ, ದಕ್ಕಲ ಸಮುದಾಯಕ್ಕೆ ಸಹಾ ಕೆಲವು ಹಳ್ಳಿಗಳನ್ನು ಇಲ್ಲವೇ ಆ ಹಳ್ಳಿಗಳಲ್ಲಿನ ಮಾದಿಗ ಸಮುದಾಯದಿಂದ ಬರುವ ಆದಾಯವನ್ನು ಸ್ವೀಕರಿಸಿ ಅದರಿಂದ ತಮ್ಮ ಜೀವನ ನಿರ್ವಹಿಸಿಕೊಳ್ಳಲು ಅವಕಾಶ ಕಲ್ಪಿಸಿಕೊಟ್ಟಿದ್ದರು ಎನ್ನುವ ಅಂಶ ಇದರಿಂದ ಸ್ಪಷ್ಟವಾಗುತ್ತದೆ.

4. ಈ ಸಮುದಾಯದ ಮಾತೃಭಾಷೆ ತೆಲುಗು, ಇದರ ಆಧಾರದಿಂದ ಇವರು ಮೂಲತಃ ಇಂದಿನ ಆಂಧ್ರ ಪ್ರದೇಶದವರಾಗಿದ್ದರು ಮತ್ತು ಕಂಚಿ ಅವರ ನ್ಯಾಯ ನಿರ್ಣಯದ ಅಂತಿಮ ಕೇಂದ್ರವಾಗಿತ್ತು ಎಂದು ನಿರ್ಣಯಿಸಬಹುದಾಗಿದೆ.

5. ಬಲಾಢ್ಯ ಸಮುದಾಯಗಳು ಅಸ್ಪೃಶ್ಯತೆಯ ಹೆಸರಿನಲ್ಲಿ ಮಾದಿಗ ಸಮುದಾಯವನ್ನು ಶೋಷಣೆ ಮಾಡುವುದು ಸಾಮಾನ್ಯ. ಆದರೆ ಅಂಥಹ ಶೋಷಿತ ಸಮುದಾಯವೊಂದು ಮತ್ತೊಂದು ಕೆಳ ಸಮುದಾಯವಾದ ದಕ್ಕಲರನ್ನು ತಮ್ಮ ಕೇರಿ ಮತ್ತು ಮನೆಯೊಳಗಡೆ ಬಿಟ್ಟುಕೊಳ್ಳದೆ ಅವರನ್ನು ಸಂಪ್ರದಾಯ ಮತ್ತು ಜಾತಿಯ ಹೆಸರಿನಲ್ಲಿ ಶೋಷಣೆ ಮಾಡುತ್ತಿರುವುದು ಆಶ್ಚರ್ಯವೇ ಸರಿ. ಅಲ್ಲದೆ ದಕ್ಕಲರನ್ನು ತಮ್ಮ ಮನೆಯ ಮಕ್ಕಳೆಂದು ಭಾವಿಸಿ ಅವರಿಗೆ ಆಹಾರ, ವಸ್ತ್ರ, ಹಣವನ್ನು ಅವರು ಕೇಳಿದಾಗ ನೀಡುವುದು ವಿಶೇಷವಾಗಿದೆ. ದಕ್ಕಲರ ಕುರಿತು ಮಾಹಿತಿ ನೀಡುವ ಈ ರೀತಿಯ ದಾಖಲೆಗಳ ಸಂರಕ್ಷಣೆಯ ಅಗತ್ಯತೆ ಇದೆ. ಅಭಿವೃದ್ಧಿಯಿಂದ ವಂಚಿತರಾಗಿರುವ ಇವರನ್ನು ಸರ್ಕಾರ ಸಮೀಕ್ಷೆ ಮಾಡಿ ಸರಿಯಾದ ರೀತಿಯಲ್ಲಿ ಗುರುತಿಸಿ, ಅವರಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಿಕೊಡುವ ತುರ್ತು ಅಗತ್ಯತೆ ಇದೆ.

ಆಧಾರಸೂಚಿ ಮತ್ತು ಟಿಪ್ಪಣಿಗಳು

1. ನರಸಿಂಹಪ್ಪ (56) ಮುದಗಲ್ ಇವರು ನೀಡಿದ ಮಾಹಿತಿ
2. ಹನುಮಂತಪ್ಪ (68) ಕಮಲಾಪುರ ಇವರು ನೀಡಿದ ಮಾಹಿತಿ
3. ರಾಮಪ್ಪ, ಕಮಲಾಪುರ ಇವರ ಬಳಿ ಇರುವ ದಾಖಲೆ

26. ವಿಜಯನಗರ ಕಾಲದ ಅಪ್ರಕಟಿತ ಮಹಾಸತಿ ಶಾಸನ ಸ್ಮಾರಕಗಳು

– ಜಯದೇವಪ್ಪ ಜೈನಕೇರಿ

ಶಿವಮೊಗ್ಗ ಜಿಲ್ಲೆ ಹೊಸನಗರ (ತಾ) ಹರತಾಳು ಐತಿಹಾಸಿಕವಾಗಿ ಮುಖ್ಯವಾದ ಗ್ರಾಮ. ಲಿಂಗನಮಕ್ಕಿ ಡ್ಯಾಂನ ಮುಳುಗಡೆ ಜನರ ಪುನರ್ ವಸತಿ ಗ್ರಾಮ. ಈ ಗ್ರಾಮದಲ್ಲಿ ಎಲ್ಲೆಂದರಲ್ಲಿ ಮಹಾಸತಿ ಸ್ಮಾರಕ ಶಿಲ್ಪಗಳು ಕಂಡು ಬರುತ್ತಿರುವುದು ಅಧ್ಯಯನ ಯೋಗ್ಯವಾಗಿದೆ. ಇಲ್ಲಿ ಹಲವು ವೀರಗಲ್ಲುಗಳೂ ಕಂಡು ಬರುತ್ತವೆ. ಇನ್ನು ಹಲವಾರ ಮಹಾಸತಿ ಕಲ್ಲುಗ ‘ಳು, ವೀರಗಲ್ಲುಗಳು ಉತ್ಖನನದಿಂದ ಸಿಗಬಹುದಾದ ಪ್ರದೇಶ ಹರತಾಳು ಇಲ್ಲಿರುವ ಎರಡು ವೀರಗಲ್ಲುಗಳು ತ್ರುಟಿತವಾಗಿದೆ. ಹರತಾಳು ಗ್ರಾಮದ ರಾಮಪ್ಪನವರ (ಈಗ ಜಯಶೀಲಪ್ಪ ಗೌಡರ) ತೋಟದ ಪಕ್ಕದ ಹಕ್ಕಲಿನಲ್ಲಿರುವ ಈ ಶಾಸನಗಳು ವಿಜಯನಗರ ಅರಸು ವೀರಪ್ರತಾಪ ದೇವರಾಯರು ಆಳುತ್ತಿದ್ದಾಗ ಕುವ ರಾರ ವೀರಂಣ ಒಡೆಯರು ಆರಗದ ಹದಿನೆಂಟು ಕಂಪಣದಲ್ಲಿ ಅಗ್ರೇಸರಿಗಳಾದ ಬೋಳೆಯ ಮುಂಮೆಯ ನಾಯಕರು. ತಮ್ಮ ಪ್ರಾಂತ್ಯದಲ್ಲಿ ಬೇಡರ ಉಪಟಳವನ್ನು ಅಡಗಿಸುವಂತೆ ವಿನಂತಿಸಿದಾಗ ವೀರಣ್ಣ ಒಡೆಯರು ದಂಡೆತ್ತಿ ಬಂದರು. ಈ ಕಾಳಗದಲ್ಲಿ ಮಡಿದ ವೀರನಸ್ಮಾರಕ ಶಾಸನವಾಗಿದೆ. ಹರತಾಳು ಗ್ರಾಮದ ಉಲ್ಲೇಖವಿರುವ ಈ ವೀರಗಲ್ಲು ಶಾಸನ ಗಳಲ್ಲಿ 11 ಮತ್ತು 20 ಸಾಲುಗಳಿವೆ.

ಇದೊಂದು ತ್ರುಟಿತವಾದ ದಾನ ಶಾಸನವಾಗಿದೆ. ಈಗ ಈ ವೀರಗಲ್ಲುಗಳ ಪಕ್ಕದಲ್ಲಿ ಎಂಟು ಮಹಾಸತಿ ಸ್ತಾರಕಗಳಿವೆ ಇವುಗಳಲ್ಲಿ ಐದು ಶಿಲ್ಪಗಳಲ್ಲಿ ಶಾಸನವಿದೆ. ಮೂರು ಸ್ಮಾರಕಗಳು ತ್ರುಟಿತವಾಗಿವೆ. ಉಳಿದ ಎರಡು ಮಹಾಸತಿ ಶಾಸನ ಶಿಲ್ಪಗಳನ್ನು ಪರಿಶೀಲಿಸಿ (ಅಪ್ರಕಟಿತ) ಈ ವಿದ್ವತ ಸಭೆಯಲ್ಲಿ ಮಂಡಿಸುತ್ತಿದ್ದೇನೆ. ಪ್ರಾಚೀನವಾಗಿ ಅರಮನೆ ಕೂಪ್ಪಲು ಪ ದೇಶದಲ್ಲಿರುವ ಈ ಮಹಾಸತಿ ಶಿಲ್ಪಗಳು ಒಂಟಿ ಕೈಸ್ಮಾರಕ ಶಿಲ್ಪಿಗಳಾಗಿವೆ. ಕನ್ನಡ ಭಾಷೆ ಮತ್ತು ಲಿಪಿಯಲ್ಲಿದೆ.

1) ಶಿವಮೊಗ್ಗ ಜಿಲ್ಲೆ ಹೊಸನಗರ (ತಾ) ಹರತಾಳು ಗ್ರಾಮದ ಅರಮನೆ ಕೊಪ್ಪಲು ಸಮೀಪ ಜಯಶೀಲಪ್ಪ ಗೌಡರ ತೋಟದ ಪಕ್ಕದಲ್ಲಿರುವ ಹಕ್ಕಲಿನಲ್ಲಿರುವ ಒಚಿಟಿ ಕೈ ಶಾಸನ ಶಾ . ಶಕ. ವರುಷ 1350 ಕೀಲಕ ಸಂವತ್ಸರ ಮಾಘ ಬ 2(ಕ್ರಿ.ಶ.1428) ಮೂರು ರಾಯರ ಗಂಡ ಹರತಾಳ ಮದೇವ ಗೌಉಡರು ಸ್ವರ್ಗಸ್ಥರಾದರು, ಅವ ವರ ಪಡೆ ಮಾಚ ಸಹಗಮನವನ ಮಾಡಿ ದೇವಲೋಕ ಪ್ರಾಪ್ತ ಎಂಬ ಉಲ್ಲೇಖವಿದೆ. 11 ಸಾಲುಗಳ ಈ ಶಾಸನದ ಮೇಲುಭಾಗದಲ್ಲಿ ಚಕ್ರದ ಕೆತ್ತನೆ ಮತ್ತು ದುಂಡನೆಯ ಗುಮ್ಮಟ ಇದೆ. 2) ಶಾ.ಶಕ ವರುಷ 1350 (ಕ್ರಿ.ಶ 1428). ರಾಯರಗ ಂಡ ಹರತಾಳು ಬೊಂವ ಗೌಉಡರು ಸ್ವರ್ಗಸ್ಥರಾದರು. ಪರ ಕೂಡಿ ನಗಯಿ ಸಹಗಮನವ ಮಾಡಿದ ಈ ಸ್ಮಾರಕದಲ್ಲಿ ವಿಜಯ ಬುಕರಾಯರ ಕುಮಾರ ಮಹಾರಾಯರು ವಿಜಯ ನಗರದಲ್ಲಿ ಆಳುತ್ತಿದ್ದಾಗ ಆರಗ ರಾಜ್ಯವನ್ನು ಪಾಲಿಸುವ ಕಾಲದಲ್ಲಿ ಎಂಬ ಉಲ್ಲೇಖವಿರುವುದು ವಿಶೇಷ. 20 ಸಾಲುಗಳ ಈ ಒಂಟಿ ಕೈ ಶಾಸನದಲ್ಲಿ ನಾಲ್ಕು ಅಪ್ಸರೆಯರು ಕೈಮುಗಿದು ಕುಳಿತಿದ್ದಾರೆ. ಮೇಲು ಪ ‘ಟ್ಟಿಯಲ್ಲಿ ಸೂರ್ಯ, ಚಂದ್ರರು. ಶಿವಲಿಂಗ ಬಸವಣ್ಣ ಮತ್ತು ವೀರನ ಚಿತ್ರಗಳಿವೆ. ಮೇಲು ಗಡೆ ದುಂಡನೆಯ ಗುಮ್ಮಟ ಕೆತ್ತನೆ ಇದೆ. ಈ ಶಾಸನಗಳನ್ನು ಪರಿಶೀಲಸಲು ಸಹಾಯಕರಾದ ಹರತಾಳು ಹೊಸರೋಟೆ ಹಾಲಪ್ಪನವರಿಗೆ ಶಾಸನ ಓದಲು ಸಹಕರಿಸಿದ ಡಾ.ಜಗದೀಶ ಅವರಿಗೆ ಕೃತಜ್ಞತೆಗಳು.

ಶಾಸನಗಳು

1) ಹರತಾಳು, ಹೊಸನನಗರ ತಾಲೂಕು ಶಿವಮೊಗ್ಗ ಜಿಲ್ಲೆ

1. ಶಕ ವರುಶ 1350 ನೆ
2. ಯ ಕೀಲಕ ಸಂವತ್ಸ
3. ರದ ಮಾಘ ಬ 7
4. ಮೂರು ರಾಯರ
5. ಗಂಡ ಹರತಾಳ
6. ಮದೇವ ಗಉಡರು ಸ್ವ
7. ರ್ಗ್ಗಸ್ತರಾದರು ಅವ
8. ವರ ಪಡೆ ಮಾಚ ಸಹ
9. ಗಮನವನ
10. ಮ. ಮಾಡಿ ದೇವ
11. ಲೋಕ ಪ್ರಾಪ್ತ

1. ಶಕ ವರುಶ ಸಾ 1350 ನೆಯ ಕೀಲಕ ಸಂತ್ಸರದ ಮಾಘ ಬಹುಳ 7
2. ರಾಯರ ಗಂಡ ಹರತಾಳ ಬೊಂಮ
3. ಗಉಡರು ಸ್ವರ್ಗ್ಗಸ್ತರಾದರು
4. ಪರ ಕೂಡಿ ನ
5. ಗಯಿ ಸಹ
6. ಗಮನವ ಮಾ
7. ಡಿ . . .
8. ಶ್ರೀ ಮಂನ್ಮಾ
9. ಹಾ ರಾಜಾಧಿ
10. ರಾಜ ರಾಜ ಪ
11. ರಮೇಶ್ವರ ವಿಜಯ ಬುಕರಾಯರ ಕು
12. ಮಾರ ವ ಁಹಾರಾಯರು ವಿಜಯ ನ
13. ಗರದಲ್ಲಿ ಸುಖಸಂಕಥಾವಿನೋ
14. . . . ರಾಜ್ಯಂಗೆಯ್ಯು ಉತ್ತ
15. ಮಿರ್ಪ್ಪ . ಲಿನಾಥ
16. ಆರಗ ರಾಜ್ಯವ ಪಾಲಿಸುವ ಕಾಲ
17. ದಲಿ ತಾಗಹರ ಬಳಿ
18. . ದ ಹೊಳೆ . ಬಡಿನ ಹನುಮ
19. .... ಜಯದೇವಪ್ಪ ಜೈನಕೇರಿ
20. ....





27. ವಿಜಯನಗರ ಕಾಲದ ತಿ.ನರಸೀಪುರ ಪ್ರದೇಶದ ಶಾಸನಗಳಲ್ಲಿ ದಾನದತ್ತಿಗಳು

– ಡಾ. ಎಸ್. ಶಿವರಾಮು

ಮೈಸೂರು ಜಿಲ್ಲೆಯ ಏಳು ತಾಲ್ಲೂಕುಗಳಲ್ಲಿ ಒಂದಾದ ತಿರುಮಕೂಡಲು ನರಸೀಪುರವು ಭೌಗೋಳಿಕವಾಗಿ ಜಿಲ್ಲೆಯ ಚಿಕ್ಕ ತಾಲ್ಲೂಕಾಗಿದೆ. ಕಾವೇರಿ ಕಪಿಲಾ ಸಂಗಮ ಸ್ಥಾನದಿಂದಾಗಿ ಧಾರ್ಮಿಕ ಮಹತ್ವವನ್ನು ಹೊಂದಿರುವ 'ತಿರುಮಕೂಡಲು ನರಸೀಪುರ' ವನ್ನು ತಾಲ್ಲೂಕು ಕೇಂದ್ರವನ್ನಾಗಿಯೂ ಹೊಂದಿರುವ ಈ ತಾಲ್ಲೂಕು ಚಾರಿತ್ರಿಕ ಮಹತ್ವವನ್ನೂ, ಸಾಂಸ್ಕೃತಿಕ ಪ್ರಾಮುಖ್ಯತೆಯನ್ನೂ ಹೊಂದಿದ್ದು, ಸಾಮಾಜಿಕ, ಆರ್ಥಿಕ ಹಾಗೂ ಧಾರ್ಮಿಕ ವೈವಿಧ್ಯತೆಗಳಿಂದಾಗಿ ವಿಶಿಷ್ಟ ತಾಲ್ಲೂಕಾಗಿದೆ.

ಈ ಪ್ರದೇಶದಲ್ಲಿ ದೊರಕಿರುವ ಶಾಸನಗಳನ್ನು ಅವಲೋಕಿಸಿದಾಗ ವಿಜಯನಗರ ಸಾಮ್ರಾಟರು, ಆಡಳಿತಾಧಿಕಾರಿಗಳು, ವರ್ತಕರು, ಶ್ರೀಸಾಮಾನ್ಯರು ಹಾಗೂ ಇನ್ನಿತರರು ದಾನದತ್ತಿಗಳನ್ನು ನೀಡಿರುವುದು ಕಂಡು ಬರುತ್ತದೆ. ವಿಜಯನಗರರಸರ ಹಲವಾರು ಶಾಸನಗಳು ತಿರುಮಕೂಡಲು ನರಸೀಪುರ ಪ್ರದೇಶದಲ್ಲಿ ಲಭ್ಯವಾಗಿವೆ. ಸಂಗಮ ವಂಶದ ಕಾಲದ್ದೆಂದು ಹೇಳಲಾಗಿರುವ ನರಸೀಪುರ ಪ್ರದೇಶದ ಹಿರಿಯೂರಿನ ವೀರಗಲ್ಲು ಶಾಸನವು ಬುಕ್ಕಣಒಡೆಯನ ಕಾಲದಲ್ಲಿ ಊರ ರಕ್ಷಣೆಗೆ ಕಳ್ಳರ ವಿರುದ್ಧ ಹೋರಾಡುತ್ತಾ ಮಡಿದ ರಾಮೋಜಿನಿಗಾಗಿ ಮಾದೋಜನು ನಿಲ್ಲಿಸಿದ ಶಾಸನವು ತ್ರುಟಿತವಾಗಿದ್ದು, ಮಹಾಪ್ರಧಾನ ಬಸವ ದಂಡನಾಯ್ಕ ಹಾಗೂ ಅಧಿಕಾರಿ ರಾಘವ ರಾಘವ ದೇವರಸನ್ನಷ್ಟೇ ಉಲ್ಲೇಖಿಸುತ್ತದೆ.[1] ಇಮ್ಮಡಿ ಹರಿಹರನ ಕಾಲಕ್ಕೆ ಸೇರಿದ ಭೈರಾಪುರದ ಕ್ರಿ.ಶ. 1392ರ ಶಾಸನ ಆಲ್ಗೊಡ ಕೇದಾರನಾಥ ಭಟ್ಟನು ರಾಮಭಕ್ತರಿಗೆ ದೇವಾದಾಯವಾಗಿ ಭೈರಾಪುರವನ್ನು 11 ಗದ್ಯಾಣದ ವಾರ್ಷಿಕ ಕಟ್ಟು ಗುತ್ತಿಗೆ ಕರಾರಿನ ಮೇಲೆ ಅನುಭವಿಸಲು ಅನುಮತಿ ನೀಡಿದ ಅಂಶವನ್ನು ಒಳಗೊಂಡಿದೆ.[2]

ನರಸೀಪುರ ತಾಲ್ಲೂಕು ಖಜಾನೆಯಲ್ಲಿನ ತಾಮ್ರಶಾಸನ ಕ್ರಿ.ಶ.1397ರಲ್ಲಿ ಹರಿಹರರಾಯನ ಆಳ್ವಿಕೆಯಲ್ಲಿ ಮಹಾ ಮಂಡಳೇಶ್ವರ ಮಲ್ಲಪೊಡೆಯರ ಕುಮಾರ ನಾರಾಯಣ ದೇವೋಡೆಯ ತಮ್ಮ ತಂದೆ ಪ್ರತಾಪ ಹರಿಹರ ಮಹಾರಾಯರಿಗೆ ಆಯುರಾರೋಗ್ಯ ಐಶ್ವರ್ಯಾ ಭಿವೃದ್ಧಿಯಾಗಲೆಂದು ಅಗಸ್ತ್ಯನಾಥನ ಸನ್ನಿಧಿಯಲ್ಲಿ ಚನ್ನಪಟ್ಟಣದೊಳಗಣ ಕೊಳತೂರ ಗ್ರಾಮವನ್ನು "ಪ್ರತಾಪ ಹರಿಹರಪುರ" ವೆಂದು ಅಗ್ರಹಾರವನ್ನು ಮಾಡಿ 36 ವ್ರಿತ್ತಿಗಳನ್ನು ಮಹಾಜನರಿಗೆ ಸರ್ವ ಮಾನ್ಯವಾಗಿ ಕೊಟ್ಟು ಸ್ವಹಸ್ತದೊಪ್ಪಹಾಕಿ ದಾನ ಮಾಡಿದೆ.[3]

ಒಂದನೇ ದೇವರಾಯನ ಆಳ್ವಿಕೆಗೆ ಸೇರಿದ ಕ್ರಿ.ಶ. 1420ರ ಚಿದರಳ್ಳಿಶಾಸನ ತಲಕಾಡು ನಾಡಿನ 42 ಪುರಗಳಲ್ಲಿ ಮುಖ್ಯವಾದ ಮಲ್ಲಿನಾಥಪುರ, ಸಿಂದೆಯಪುರ, ರಾಮಗೊಂಡನಪುರ, ಚಿದರವಳ್ಳಿಪುರ ಮುಂತಾದ ಪುರಗಳ ಸಮಸ್ತ ಪುರ ಬೋವಗಳು ಚಿದುರಹಳ್ಳಿಯ ಸೋಮೇಶ್ವರ ದೇವರ ಸ್ಥಾನಿಕರಿಗೆ ಉಂಬಳಿ ನೀಡಿದ ಅಂಶವನ್ನು ಶಾಸನದಿಂದ ಕಿರುನಗರದ (ವಿಜಯಪುರ) ಅರ್ಕನಾಥ ದೇವರಿಗೆ ಅಧಿಕಾರಿ ಸೋಮರಸನು ಮಗ್ಗದೆರೆಯ ಬಾಬ್ತಿನಿಂದ ಒಂದು ಗದ್ಯಾಣವನ್ನು ದಾನಬಿಟ್ಟ ಅಂಶವೇದ್ಯವಾಗುತ್ತದೆ.[4] ವಿರೂಪಾಕ್ಷನ ಆಡಳಿತಕ್ಕೆ ಸೇರಿದ ಕ್ರಿ.ಶ.1482 ರ ತಡಿಮಾಲಂಗಿ ಶಾಸನ ಕಲಿವರ್ಷವನ್ನು ಉಲ್ಲೇಖಿಸುತ್ತಾ ಸೋಮಣ್ಣನಾಯಕರು ತಾಯಿ ಸಾಯಮ್ಮನವರಿಗೆ ಕೊಟ್ಟಿದ್ದ ಉಂಬಳಿಯನ್ನು ಶ್ರೀರಂಗಪುರವಾದ ಮಾಲಂಗಿಯ ಜನಾರ್ದನ ದೇವರ ಸೇವೆಗೆಂದು ದತ್ತಿಬಿಟ್ಟ ಅಂಶವನ್ನು ತಿಳಿಸುತ್ತದೆ.[5]

ತಿ.ನರಸೀಪುರ ತಾಲ್ಲೂಕು ವಿಜಯಪುರದ ಅರ್ಕೇಶ್ವರ ಗುಡಿಯ ಹಿಂದುಗಡೆ ಇರುವ ಶಾಸನವು ಪ್ರತಾಪ ದೇವರಾಯವೊಡೆಯರು ರಾಜ್ಯವಾಳುವಾಗ ಹೊಯ್ಸಳ ನಾಡಿನ ಸೋವರಸನು ಕಿರುನಾಗರದ ಅರ್ಕನಾಥ ದೇವರಿಗೆ ನಂದಾ ದೀಪಕ್ಕಾಗಿ ಹಾಳಹೊಲೆ ಕೊಂಕನಕುಳ ಮಗ್ಗ–1 ಕರವಗ–1 ಹೊನ್ನನ್ನು ದಾನ ಬಿಟ್ಟ ವಿಷಯವಿದೆ.[6] ಇಮ್ಮಡಿ ನರಸಿಂಹನ ಆಳ್ವಿಕೆಗೆ ಸೇರಿದ ಕ್ರಿ.ಶ. 1497 ರ ಸೋಮನಾಥಪುರ ಶಾಸನ ಶಿಥಿಲಗೊಂಡಿದ್ದ ಸೋಮನಾಥಪುರ ಅಗ್ರಹಾರವನ್ನು ಅರಸನ ಆದೇಶದಂತೆ ಜೀರ್ಣೋದ್ಧಾರ ಮಾಡಿ ಹಲವು ಬ್ರಾಹ್ಮಣರಿಗೆ ದತ್ತಿಬಿಟ್ಟ ಅಂಶವನ್ನು ದಾಖಲಿಸಿದೆ.[7]

ವಿಜಯನಗರ ಸಾಮ್ರಾಜ್ಯದ ಪ್ರಖ್ಯಾತ ಅರಸನಾದ ಶ್ರೀ ಕೃಷ್ಣದೇವರಾಯನ ಹಲವು ಶಾಸನಗಳು ನರಸೀಪುರ ಪ್ರದೇಶದಲ್ಲಿ ಲಭ್ಯವಾಗಿವೆ. ಕೃಷ್ಣದೇವರಾಯನು ದಕ್ಷಿಣದಲ್ಲಿದ್ದ ಉಮ್ಮತ್ತೂರು ಪಾಳೆಯಗಾರರನ್ನು ಸೋಲಿಸಿ ಸಾಳುವಗೋವಿಂದರಾಜನನ್ನು ಆ ಪ್ರಾಂತದ ರಾಜ್ಯಪಾಲನನ್ನಾಗಿ ನೇಮಿಸಿದನು. ಇವನ ಆಳ್ವಿಕೆಗೆ ಸೇರಿದ ಕ್ರಿ.ಶ. 1514 ರ ತಡಿಮಾಲಂಗಿಯ ಶಾಸನವು ಆದಿ ನಿರಂಜನ ವಿಶ್ವಮೂರ್ತಿ ಗುರುರಾಯರು ಕಾಶಿಯಿಂದ ವಿಶ್ವೇಶ್ವರಲಿಂಗವನ್ನು ತಂದಿಲ್ಲಿ ಪ್ರತಿಷ್ಠಾಪಿಸಿ ಅದರ ಪೂಜಾವಿಧಿಗೆಂದು ವಿವಿಧ ಜನರು ನೀಡಿದ ಭೂಮಿಯನ್ನು ದಾನವಾಗಿ ನೀಡುತ್ತಾರೆ. ಈ ಮಾಲಂಗೆಯು ಶ್ರೀರಂಗಪುರವೆಂದು ಹೆಸರನ್ನು ಪಡೆದು ಹೊಯ್ಸಣ ದೇಶದ ಹದಿನಾಡ ವೇಂಠೆಗೆ ಸೇರಿತ್ತೆಂದು ಶಾಸನ ತಿಳಿಸುತ್ತದೆ. ಚವಡೆ ತಂಮನಹೊಂನಪ್ಪ, ಮಾದಿಗೊಂಡನಹೊನ್ನಪ್ಪ, ಕೆಂಪನಾಗಿದೇವ, ಮುತ್ತಣಗಳಲಿಂಗರಸ, ಪಂದರಿದೇವ, ಸಂಪಂಣಗಉಡ, ಕಠಾರಿಬಂಟಗೊಂಣಗಉಡ, ವೀರಣಗವಡ, ರಾಯಣಹೆಬ್ಬಾರ, ಹಿರಿಯ ಸಾಧಿಯಪ್ಪಗಉಡರು, ವಿರುಪಣ್ಣರುಗಳು ನೀಡಿದ ಗದ್ದೆ, ಕಬ್ಬಿನಗದ್ದೆ, ಕೆರೆಕೆಳಗಣ ಗದ್ದೆಗಳನ್ನು ದೇವರಸೇವೆಗೆ ನೀಡಲಾಗಿದೆ. ಬಗುತನಕೆರೆ, ಅವರೇಗಾಲಸೀಮೆ, ಮಳಲಹೊಲ, ಕೆರೆಹೊಲ, ಬೆಟ್ಟಸಾಂದವಕೆರೆ, ದೇವರಕೆರೆ, ಚಿಕ್ಕಮಾಲಂಗಿ ಹಲೆಹೊನ್ನಾಗವಿ, ಮಲ್ಲಿಕಾರ್ಜುನ ದೇವಾಲಯ, ಗೌರಿಗೊಂಡನಕೆರೆ, ಹೊಲಗದ್ದೆ ಗೋಪಿನಾಥ ದೇವಾಲಯ, ತಳಕಾಡು ಕೀರ್ತಿನಾರಾಯಣ ದೇವಾಲಯ, ಕಿಲುನಾಗರ, ಧಾರಾಪುರ, ದಾಸನೂರು ಮುಂತಾದ ಸ್ಥಳಗಳ ಉಲ್ಲೇಖವಿದೆ.8 ಇದೇ ತಾಲ್ಲೂಕಿನ ಮಾದಾಪುರದ ಕ್ರಿ.ಶ. 1519ರ ಶಾಸನ ವೀರಕೃಷ್ಣರಾಯರ ನಿರೂಪದಿಂದ ಮಹಾಪ್ರಧಾನ ಸಾಳುವ ಗೋವಿಂದರಾಜ ಉಮ್ಮತ್ತೂರ ಸೀಮೆಯ ಮೂಗೂರಸ್ತಳದ ಮಾಧವಪುರವನ್ನು ಉಮ್ಮತ್ತೂರ ದೇವರಾಯ ಅರಸರ ಮಗ ನಂಜಯ್ಯ ಅರಸನು ವಿರೂಪಾಕ್ಷ ವಿಠಲ ದೇವರ ಸನ್ನಿಧಿಯಲ್ಲಿ ಸಹಿಹಿರಣ್ಯೋದಕ ಸಹಿತ ಸರ್ವಮಾನ್ಯ ಅಘ್ರಾರವಾಗಿ ಧಾರೆಯೆರೆದು ಗ್ರಾಮಕ್ಕೆ ಸಲ್ಲುವ ಸ್ವಾಮ್ಯಸುಂಕ ಸಹ ಬಿಟ್ಟಿದ್ದನ್ನು ಹೇಳಿದೆ.9 ಕಲಿಯೂರಿನ ಕ್ರಿ.ಶ. 1521ರ ಶಾಸನ ವಿಜಯನಗರದ ಅರಸ ಕೃಷ್ಣರಾಯನು ಹಿಂದೆ ಹೊಯ್ಸಳ ಬಲ್ಲಾಳರಾಯನು ತಾಮ್ರಶಾಸನ ಮೂಲಕ ಕೊಟ್ಟಿದ್ದ ಮುಳುರಸ್ತಲದ ಕಲವೂರುಖಿಲವಾಗಿದ್ದುದನ್ನು ಜೀರ್ಣೋದ್ಧಾರ ಮಾಡಿ ಕೃಷ್ಣಾಪುರವೆಂದು ಪ್ರತಿನಾಮದೇಯವನ್ನು ಕೊಟ್ಟು ಕಲವೂರನ್ನು ಅಗ್ರಹಾರವನ್ನಾಗಿ ಸಹಿರಣ್ಯೋದಕ ಧಾರಾಪೂರ್ವಕ ದಾನವನ್ನು ಮಾಡಿಚತುಸ್ಸೀಮೆ ಒಳಗಾಗಿ ಸಲುವ ಹಳಿ ಹಿರಿಊರುಕೆರೆ, ಕಟ್ಟೆ, ಕಾಲ್ವೆ, ಹೊಳೆ, ಬೆಟ್ಟ, ಆಡು, ಹುಲ್ಲು ಹೊರೆ ಒಕ್ಕಲುಸುಂಕ, ಸುವರ್ಣಾದಾಯ ಮಗ್ಗ, ಮನೆವಣ ಮೊದಲಾದವುಗಳನ್ನು 37 ವ್ರಿತ್ತಿಗಳನ್ನಾಗಿ ವಿಂಗಡಿಸಿ ಅನೇಕ ಬ್ರಾಹ್ಮಣರಿಗೆ ಕೊಡಲಾಗಿದೆ.[10]

ನರಸೀಪುರದ ತಾಲ್ಲೂಕಿನ ಹೊಸಪುರದ ಶಾಸನವು ಕೃಷ್ಣದೇವ ಮಹಾರಾಯನು ಆಳುತ್ತಿರುವಾಗ ರಾಜರಾಜುಗಳ ಮಕ್ಕಳಾದ ಸಾಳುವ ಗೋವಿಂದರಾಜನು ತಿರುಮಕೂಡಲ ಅಗಸ್ತೇಶ್ವರ ದೇವರಿಗೆ ಮೂಗೂರು ಸ್ತಳದ ಹೊಸಪುರ ಗ್ರಾಮವನ್ನು ದಾನವಾಗಿ ನೀಡಿರುವನು. ದಾನಭಾಗದಲ್ಲಿ ಶಾಸನವು ತ್ರುಟಿತವಾಗಿರುವುದರಿಂದ ಪೂರ್ಣ ವಿಷಯ ತಿಳಿದು ಬರುವುದಿಲ್ಲ. ಈ ಗ್ರಾಮದ ಮಗ್ಗ ಮನೆವಣ ತೆರಿಗೆ ಸಮೇತ ದಾನವಾಗಿ ನೀಡಿದೆ. ಅಗಸ್ತ್ಯೇಶ್ವರ ದೇವರನ್ನು ದಕ್ಷಿಣ ವಾರಣಾಸಿ, ಕಾವೇರಿ ಕಪಿಲಾ ಸಂಗಮ ಪಂಚಕ್ರೋಶಷಟಸ್ಥಲ ಮಧ್ಯಸ್ತಿಕ ಕಯಿಲಾಸ ಶ್ರೀ ರುದ್ರ ಪಾದಸಾಂನಿಧ್ಯವೆಂದು ಹೊಗಳಿದೆ.[11] ಇದೇ ತಾಲ್ಲೂಕಿನ ಒಂದು ಶಾಸನ ಕ್ರಿ.ಶ. 1521ರಲ್ಲಿ ಕೃಷ್ಣರಾಯನ ಪುಣ್ಯಕ್ಕೋಸ್ಕರ ಕಠೌರುಗ್ರಾಮವನ್ನು ಕೃಷ್ಣಾಪುರವೆಂದು ಹೆಸರಿಸಿ 37 ಪಾಲುಗಳನ್ನಾಗಿ ವಿಂಗಡಿಸಿ ಸಾಳುವ ಗೋವಿಂದರಾಜ ಮಂತ್ರಿ ಬ್ರಾಹ್ಮಣರಿಗೆ ಕೊಟ್ಟನು.[12] ನರಸೀಪುರ ತಾಲ್ಲೂಕು ಸೋಸಲೆಯ ವ್ಯಾಸರಾಯ ಮಠದಲ್ಲಿರುವ ತಾಮ್ರ ಶಾಸನವು ಕೃಷ್ಣದೇವರಾಯನು ಬ್ರಹ್ಮಣ್ಯ ತೀರ್ಥರ ಶಿಷ್ಯರಾದ ವ್ಯಾಸತೀರ್ಥರಿಗೆ ಕನಕಗಿರಿ ದೇಶದ ಕಂನೇರುಮಡು ಗ್ರಾಮವನ್ನು ದಾನವಾಗಿ ನೀಡಿದೆ. ವ್ಯಾಸತೀರ್ಥರನ್ನು

ಶ್ರೀಮತ್ಪರ ಮಹಂ ಸಾಖ್ಯೆ ಪರಿವ್ರಾಜೇ ಮಹಾತ್ಮ, ವೈಷ್ಣವ ಸಿದ್ಧಾಮತ ಪ್ರತಿಷ್ಠಾ ಜಾತನೆಂದು ಹೊಗಳಿದೆ. ಈ ಶಾಸನದ ಕವಿ ಸಭಾಪತಿ[13] ಟಿ ನರಸೀಪುರ ತಾಲ್ಲೂಕು ಹೆಮ್ಮಿಗೆಯ ವರದರಾಜ ದೇವಾಲಯದ ಆಗ್ನೇಯದಲ್ಲಿರುವ ಎರಡು ಕಲ್ಲುಗಳ ಮೇಲೆ ಇರುವ ಶಾಸನವು ಕೃಷ್ಣದೇವರಾಯನು ರಾಜ್ಯವಾಳುವಾಗ ಹಿರಿಯ ಮಾಧವಪುರದ ತಿಮಂಣ ಉಪಾಧ್ಯರ ಮಗನಾದ ಲಕ್ಷ್ಮಿನಾಥಭಟ್ಟರಿಗೆ ಉಂಮತ್ತೂರು ಚಾವಡಿಯ ತಾಯೂರ ಸ್ಥಳದ ಪಶ್ಚಿಮ ವಾಹಿನಿ ತೀರದ ಹೆಂಮುಗೆ ಗ್ರಾಮವನ್ನು ದಾನವಾಗಿ ನೀಡುತ್ತಾರೆ. ಆ ಗ್ರಾಮದ ಮಹಾ ವಿಷ್ಣುದೇವರಿಗೆ ಈ ದಾನವನ್ನು ನೀಡಿರಬೇಕು. ಶಾಸನದ ಕೊನೆಯಲ್ಲಿ ಕೋನವ್ವ ಅಣ್ಣನ ಧರ್ಮ, ನರಸಪ್ಪ ಅಯ್ಯನ ಪ್ರತಿಷ್ಠೆ ಎಂದಿದೆ.[14] ಟಿ.ನರಸಿಪುರದ ತೊಟ್ಟವಾಡಿಯ ನಾರಾಯಣಸ್ವಾಮಿ ದೇವಾಲಯದ ಬಲಭಾಗದಲ್ಲಿರುವ ಶಾಸನವು ಕೃಷ್ಣದೇವರಾಯನು ರಾಜ್ಯವಾಳುತ್ತಿದ್ದಾಗ ಉಮ್ಮತ್ತೂರ ವೀರಶೂರ ನಂಜಪ್ಪೊಡೆಯರ ನಿರೂಪದಿಂದ ಕೃಷ್ಣದೇವರಾಯನ ತಂದೆ ನರಸಂಣ ನಾಯಕನಿಗೆ ಪುಂಣ್ಯವಾಗಲಿಯೆಂದು ತೊಟ್ಟವಾಡಿ ಗ್ರಾಮವನ್ನು ನರಸಪ್ಪಯ್ಯ ನೆಂಬುವನು ಉಮ್ಮತ್ತೂರಿನ ಚಾಮರಸರ ಮಗ ಹೊಂನಕಳಸ ದೇವನಿಗೆ ದಾನವಾಗಿ ವಾಮನ ಮುದ್ರೆ ಕಲ್ಲನ್ನು ನೆಡಿಸಿ ಗ್ರಾಮ ಮಧ್ಯೆದಲ್ಲಿ ಶಿಲಾಶಾಸನವನ್ನು ನಿಲ್ಲಿಸಿ ಈ ದಾನ ನೀಡಿದೆಯೆಂದು ಶಾಸನವು ತಿಳಿಸುತ್ತದೆ.[15]

ನರಸೀಪುರ ತಾಲ್ಲೂಕಿನ ಮರಡೀಪುರದ ಕ್ರಿ.ಶ. 1528ರ ಶಾಸನವು ಕೃಷ್ಣದೇವರಾಯನು ವಿಜಯನಗರದಲ್ಲಿ ಆಳುತ್ತಿದ್ದಾಗ ಈ ರಾಯರ ಬಾಗಿಲ ಪ್ರಧಾನಿಯಾದ ಸಾಳುವ ಗೋವಿಂದರಾಜವೊಡೆಯರು ಆಚಾರ್ಯರೊಬ್ಬರಿಗೆ ಮೊರಡಿಪುರ ಗ್ರಾಮವನ್ನು ಅಗ್ರಹಾರವನ್ನಾಗಿ ಪರಿವರ್ತಿಸಿ ದಾನವಾಗಿ ನೀಡಿದ್ದಾನೆ. ಈ ಶಾಸನವನ್ನು ಬರೆದವನು ಲಿಂಗಣ್ಣನೆಂಬುವನು.[16] ತಿರುಮಕೂಡಲಿನ ಕೃಷ್ಣದೇವರಾಯನ ಕಾಲದ ಬಹಳ ತ್ರುಟಿತವಾಗಿರುವ ಶಾಸನವು ಕೃಷ್ಣದೇವರಾಯನ ಮನೆಯ ಬೆವಹಾರಿ ಬೆಟಪ್ಪ ಸೆಟಿಯರ ಮಗ ಶರಣಪ್ಪ ಸೆಟ್ಟಿಯರು ಪಾರ್ವತಿ ದೇವಿಗುಡಿಯನ್ನು ಕಟ್ಟಿಸಿ ಕೊಳಿಗಾಲದ ಸ್ಥಳದ ಹೊಂನರದ .. ಎಂಬ ಗ್ರಾಮವನ್ನು ದಾನವಾಗಿ ನೀಡಿದ್ದಾನೆ. ಇಷ್ಟೇ ಅಲ್ಲದೇ ಮೂಗೂರು ಸ್ಥಳದ ಹೊಸಪುರ ಗ್ರಾಮದಲ್ಲಿಯೂ ಭೂಮಿಯನ್ನು ನೀಡಿದ್ದಾನೆ. ಕೃಷ್ಣರಾಯನ ಮಹಾ ಸಾಳುವ ಗೋವಿಂದ ರಾಜೊಡೆಯರು ಈ ಗ್ರಾಮವನ್ನು ಸೆಟ್ಟಿ ಕುಟುಂಬದವರಿಗೆ ಉಂಬಳಿಯಾಗಿ ನೀಡಿರುತ್ತಾರೆ.[17] ಟಿ.ನರಸೀಪುರದ ಒಂದು ಶಾಸನವು ಕೃಷ್ಣದೇವರಾಯನ ಶಿರಪ್ರಧಾನಿ (ಮಹಾಪ್ರಧಾನಿ) ಯಾದ ರಾಜರಾಜಗಳ ಮಗ ಸಾಳುವ ಗೋವಿಂದ ರಾಜಗಳು ತಿರುಮಕೂಡಲು ನರಸೀಪುರದ ನಾರಸಿಂಹದೇವರಿಗೆ ದಾನವಾಗಿ ನೀಡಿದ ವಿಷಯವಿದೆ.[18] ನರಸೀಪುರ ತಾಲ್ಲೂಕಿನ ಮೂಗೂರಿನ ಒಂದು ಶಾಸನವು ದೇಶಿನಾಥ ದೇವರಿಗೆ ಸ್ಥಳೀಯ ಅಧಿಕಾರಿ ಶಂಕಣ್ಣನ ಅನುಮತದೊಂದಿಗೆ ಕೇಶವಪ್ಪವೊಡೆಯನ ಮಗ ದೇವಪ್ಪನು ತೆರಿಗೆ ಮುಕ್ತ ಭೂಮಿಯನ್ನು ನಿತ್ಯ ದೀಪೋತ್ಸವಕ್ಕಾಗಿ ದಾನವಾಗಿ ನೀಡಿದ್ದನ್ನು ದಾಖಲಿಸಿದೆ.[19]

ಕ್ರಿ.ಶ. 1541 ರ ಬನ್ನೂರಿನ ಅಚ್ಯುತರಾಯನ ಕಾಲದ ಶಾಸನದಿಂದ ಮಹಾಪ್ರಧಾನ ವರದಪ್ಪನಾಯಯಕನ ಆದೇಶದಂತೆ ತಮ್ಮಣ್ಣನಾಯಕನು ಬನ್ನೂರಿನ ಹನುಮಂತೇಶ್ವರ ದೇವರಿಗೆ ದಿವ್ಯರಥ,ಉಮಾಸ್ಕಂದ ವಿಘ್ನೇಶ್ವರ ದೇವತಾ ಮೂರ್ತಿಗಳನ್ನು ಮಾಡಿಸಿ ರಥೋತ್ಸವ ಆಚರಣೆಗೆಂದು ಭೂದಾನ ನೀಡಿದ ಅಂಶಗೊತ್ತಾಗುತ್ತದೆ.[20] ಸೋಮನಾಥಪುರದ ಸದಾಶಿವರಾಯನ ಕಾಲದ ಕ್ರಿ.ಶ. 1550 ರ ಶಾಸನವು ಅರವೀಡು ವಂಶದ ಅಹೋಬಲರಾಜ ಮಹಾಅರಸನು ಸೋಮನಾಥಪುರದ ಪ್ರಸನ್ನ (ಕೇಶವ) ಗುಡಿಯ ಈಶಾನ್ಯ ಭಾಗದಲ್ಲಿದ್ದ ಪಂಚಲಿಂಗದೇವರ್ಗೆ ದಾನಬಿಟ್ಟ ಅಂಶವನ್ನು ದಾಖಲಿಸುತ್ತಾ ಸೋಮನಾಥಪುರವು ವಿಶಿಷ್ಟಾಶ್ರಮವಿದ್ದ ಪುಣ್ಯಕ್ಷೇತ್ರ ಆಗಿತ್ತೆಂದೂ ಉಲ್ಲೇಖಿಸುತ್ತದೆ.[21] ನರಸೀಪುರದ ಕ್ರಿ.ಶ. 1556ರ ಶಾಸನದಿಂದ ರಾಯಸದ ವೆಂಕಟಾದ್ರಿಯ ತಿರುಮಕೂಡಲಿನ ಅಗಸ್ತೇಶ್ವರದೇವರ ಪೂಜೆ ರಥೋತ್ಸವಗಳಿಗೆ ಹನುಮಂತೇಶ್ವರ ಹಾಗೂ ಆದಿಗುಂಜಿಯನರಸಿಂಹದೇವರ ತಿರುವಿಡಿಯೂಟ ಕ್ಕೆಂದು ಶ್ರೀರಂಗಪಟ್ಟಣದ ಸ್ಥಳಕ್ಕೆ ಸೇರಿದ ಗ್ರಾಮವೊಂದನ್ನು ದಾನಬಿಟ್ಟ ಅಂಶ ಗೊತ್ತಾಗುತ್ತದೆ.[22]

ವಿಜಯನಗರ ಕಾಲದ ಕೊನೆಗಾಲದ ನರಸೀಪುರ ತಾಲ್ಲೂಕಿನ ಕ್ರಿ.ಶ. 1568ರ ಮುಡಕನಪುರ ಶಾಸನದಲ್ಲಿ ಜಗದೇವರಾಯ ಒಡೆಯನ ಮಗ ದೇವರಾಯ ಒಡೆಯನು ಆ ಗ್ರಾಮವನ್ನು ಪಲ್ಲಕ್ಕಿ ಉಂಬಳಿಯಾಗಿ ದಾನ ನೀಡುವ ಸಂದರ್ಭದಲ್ಲಿ ಇಮ್ಮಡಿ ವೆಂಕಟಾದ್ರಿಯ ಉಲ್ಲೇಖವಿದೆ. ವಿಜಯನಗರ ಸಾಮ್ರಾಜ್ಯವು ದುರ್ಬಲಗೊಳ್ಳುತ್ತಿದಂತೆ ಶ್ರೀರಂಗಪಟ್ಟಣ, ಉಮ್ಮತ್ತೂರು

ಪ್ರದೇಶದಲ್ಲಿ ಸ್ಥಳೀಯ ರಾಜಕೀಯ ಶಕ್ತಿಗಳು ಪ್ರಬಲಗೊಂಡ ನಂತರ ನರಸೀಪುರ ಪ್ರಾಂತ್ಯವು ಹದಿನಾಡು ಹಾಗೂ ಮೈಸೂರು ಅರಸರ ಆಡಳಿತಕ್ಕೆ ಒಳಪಟ್ಟಿತು. ಹೀಗೆ ವಿಜಯನಗರ ಕಾಲದಲ್ಲಿ ಸಾಮ್ರಾಟರ ಹಾಗೂ ಅಧೀನ ಆಡಳಿತ ವರ್ಗದವರ ಉದಾರ ನಿಲುವಿನಿಂದ ತಿ.ನರಸೀಪುರ ಪ್ರದೇಶವು ಹಲವು ದಾನದತ್ತಿಗಳನ್ನು ಪಡೆಯಿತು. ಆ ದಾನದತ್ತಿಗಳ ನೆರವಿನಿಂದ ಈ ಪ್ರದೇಶವು ಅಭಿವೃದ್ಧಿಗೊಂಡಿತು.

ಆಧಾರಸೂಚಿ ಮತ್ತು ಟಿಪ್ಪಣಿಗಳು

1. ಎಪಿಗ್ರಾಫಿಯ ಕರ್ನಾಟಕ–III ಟಿ.ನರಸೀಪುರ.127.ಹಿರಿಯೂರು.ಪು.543
2. ಎ.ಕ. V.ತಿನ.30 ಭೈರಾಪುರ.ಪು.426–427
3. ಎ.ಕ. V.ತಿನ.17. ಪು.416–417
4. ಎ.ಕ. V.ತಿನ.99 ಚಿದರವಳ್ಳಿ.ಪು.499
5. ಎ.ಕ. V.ತಿನ.237 ತಡಿಮಾಲಿಂಗಿ ಪು.618–619
6. ಪರಶಿವಮೂರ್ತಿ, ಡಿ.ವಿ.(ಸಂ)2007–ಪ್ರೌಢದೇವರಾಯನ ಶಾಸನಗಳು–ಹಂಪಿ.ಪು.481
7. ಎ.ಕ. V.ತಿನ.95 ಸೋಮನಾಥಪುರ.ಪು.488–489.
8. ಎ.ಕ. V.ತಿನ.245 ತಡಿಮಾಲಿಂಗಿ.ಪು.626–627
9. ಎ.ಕ. V.ತಿನ.128 ಮಾದಾಪುರ.ಪು.543–544
10. ಎ.ಕ. V.ತಿನ.225 ಕಲಿಯೂರು.ಪು.604–605
11. ಪರಮಶಿವಮೂರ್ತಿ.ಡಿ.ವಿ.(ಸಂ.)2010–ಕೃಷ್ಣದೇವರಾಯನ ಶಾಸನಗಳು.ಸಂಪುಟ–1 ಹಂಪಿ.ಪು.245
12. ಎ.ಕ. III. (ಹಳೆಯ ಆವೃತ್ತಿ) ತಿನ.42
13. ಎ.ಕ. V.ತಿನ.106 ಸೋಸಲೆ.ಪು.510–511
14. ಎ.ಕ. V.ತಿನ.248 ಹೆಮ್ಮಿಗೆ–ಪು.631
15. ಎ.ಕ. V.ತಿನ.258 ತೊಟ್ಟವಾಡಿ.ಪು.640–641
16. ಎ.ಕ. V.ತಿನ.132 ಮರಡೀಪುರ.ಪು.545
17. ಎ.ಕ. V.ತಿನ.26 ಪು.424
18. ಎ.ಕ. V.ತಿನ.2 ಪು.325
19. ಎ.ಕ. V.ತಿನ.264 ಮೂಗೂರು.ಪು.646
20. ಎ.ಕ. V.ತಿನ.55 ಬನ್ನೂರು.ಪು.451–452
21. ಎ.ಕ. V.ತಿನ.94 ಸೋಮನಾಥಪುರ.ಪು.487
22. ತಿರುಮಲಕೂಡಲುನರಸೀಪುರ ತಾಲ್ಲೂಕು ಗ್ಯಾಸೆಟಿಯರ್–(2010)ಬೆಂಗಳೂರು ಪು.32.

28. ವಿಜಯನಗರದ 2ನೆಯ ದೇವರಾಯನ ಕಾಲದ ತೀರ್ಥಹಳ್ಳಿಯ ಅಮರೇಂದ್ರಪುರಿ ಮಠ – ಟಿಪ್ಪಣಿ

– ಡಾ. ಕೆಳದಿ ವೆಂಕಟೇಶ್ ಜೋಯಿಸ್

ಹೊಸನಗರದಲ್ಲಿರುವ ಶ್ರೀರಾಮಚಂದ್ರಾಪುರ ಪ್ರಧಾನ ಮಠದಿಂದ ಸು. 42 ಕಿ.ಮೀ. ದೂರದಲ್ಲಿ ಈ ಮಠವಿದೆ. ತೀರ್ಥಹಳ್ಳಿಯಲ್ಲಿಯ ತುಂಗಾನದಿ ತೀರದಲ್ಲಿ ವಿಜಯನಗರ ಅರಸರ ಕಾಲದಲ್ಲಿ ಸ್ಥಾಪಿತವಾಗಿದ್ದ ತೀರ್ಥರಾಜಪುರ ಅಗ್ರಹಾರದಲ್ಲಿ ಕ್ರಿ.ಶ. 1565ನೆಯ ಕ್ರೋಧನ ಸಂವತ್ಸರದಲ್ಲಿ ಈ ಅಮರೇಂದ್ರ ಪುರಿ ಮಠ ಸ್ಥಾಪನೆಯಾಯಿತು. ಕೆಳದಿ ಅರಸರೂ ಸಹ ತೀರ್ಥರಾಜಪುರ ಅಗ್ರಹಾರಕ್ಕೆ ವಿಶೇಷ ದಾನದತ್ತಿಗಳನ್ನು ನೀಡಿದ್ದರು. ಇಲ್ಲಯ ಶ್ರೀ ಮಠದ ಆರಾಧ್ಯ ದೈವ ಲಕ್ಷ್ಮೀನರಸಿಂಹ. ಈ ಮಠದ ಕೊನೆಯ ಗುರುಗಳಾದ ಅಮರೇಂದ್ರ ಪುರಿಗಳಿಗೆ ರಾಮಚಂದ್ರಾಪುರ ಪ್ರಧಾನ ಮಠದ 32ನೆಯ ಗುರುಗಳಾದ ಶ್ರೀ ರಾಘವೇಂದ್ರ ಭಾರತಿಗಳು ಕ್ರಿ.ಶ. 1850–51ರಲ್ಲಿ ಸಂನ್ಯಾಸದೀಕ್ಷೆ ನೀಡಿದ್ದರು. ನಂತರ ಕ್ರಿ.ಶ. 1858ರಲ್ಲಿ ಇವರು ತೀರ್ಥಹಳ್ಳಿ ಮಠದ ಸರ್ವಾಧಿಕಾರವನ್ನು ಶ್ರೀ ರಾಮಚಂದ್ರಾಪುರ ಮಠಕ್ಕೆ ವಹಿಸಿಕೊಟ್ಟರು. ಶ್ರೀ ಮಠದ 35ನೆಯ ಗುರುಗಳಾಗಿದ್ದ ಶ್ರೀ ರಾಘವೇಂದ್ರ ಭಾರತಿಗಳ ಕಾಲದಲ್ಲಿ ಈ ಮಠವು ಆಡಳಿತ ಕೇಂದ್ರವಾಗಿ ಕಾರ್ಯನಿರ್ವಹಿಸಸಿತ್ತು. ಇವರು 44ನೇ ಚಾತುರ್ಮಾಸ್ಯ ವ್ರತಗಳನ್ನು ಈ ಮಠದಲ್ಲಿಯೇ ನೆರವೇರಿಸಿರುವುದು ಒಂದು ದಾಖಲೆಯಾಗಿದೆ. ಈ ಮಠದ ಎದುರಲ್ಲಿ ಕುರುವಳ್ಳಿ ಗ್ರಾಮ ಇದೆ. ಅಲ್ಲಿರುವ ಗಂಗಾವಿಶ್ವೇಶ್ವರ ದೇವಾಲಯದ ಆಡಳಿತವೂ ಈ ಮಠಕ್ಕೇ ಸೇರಿತ್ತು. ಮಠದ ಆವರಣದಲ್ಲಿ ಹಿಂದಿನ ಗುರುಗಳ ಮೂರು ಸಮಾಧಿಗಳಿವೆ.

ಮಠದ ಮೂರು ಪಾರ್ಶ್ವಗಳಲ್ಲಿ ಚಂದ್ರಶಾಲೆ ಇದೆ. ಚಂದ್ರಶಾಲೆಯು 1973ರಲ್ಲಿ ಮತ್ತು ಮಠದ ಮುಂಭಾಗ ಮತ್ತು ಮಠದ ಇತರ ಭಾಗಗಳು 1992ರಲ್ಲಿ ಜೀರ್ಣೋದ್ಧಾರಗೊಂಡಿರುವುದು ಕಂಡುಬರುತ್ತದೆ. ಈ ಮಠಕ್ಕೆ ವಿಜಯನಗರದ ಎರಡನೇ ದೇವರಾಯ ಮಹಾರಾಯರ ಕಾಲದಲ್ಲಿ ದಾನ ಪಡೆದಿರುವುದು ಕಂಡುಬರುತ್ತದೆ. ಇದಕ್ಕೆ ಸಂಬಂಧಿಸಿದಂತೆ ಎರಡು ಶಾಸನಗಳು ಈ ಮಠದ ಎದುರಲ್ಲಿ ಇಂದೂ ಇವೆ. ಶಾಸನದ ಪಾಠ ಈ ಕೆಳಗಿನಂತಿದೆ.

151 (8 ತೀರ್ಥ 1) ತೀರ್ಥಹಳ್ಳಿ ಅದೇ ಮಠದ ಮುಂದೆ ನೆಟ್ಟಿರುವ ಒಂದನೆಯ ಕಲ್ಲು

1. ––––––––––––––ಪತಯೇ ನಮಃ ನಮಸ್ತುಂಗ ಶಿರಶ್ಚುಂ
2. ಬಿ. ಚಂದ್ರಚಾಮರ ಚಾರವೇ ತ್ರೈಲೋಕ್ಯನಗರಾರಂಭಮೂಲಸ್ತಂಭಾಯ ಶಂಭವೇ॥ ಸ್ವಸ್ತಿ
3. –––––––––1353ರನೆಯ ವರ್ತ್ತಮಾನ ವಿರೋಧಿಕೃತು ಸಂವಛ್ಬರದ ––––––––
4. ––––ಮಸ ––––– ವರಸೂರಿಯಗ್ರಹಣ ಪುಣ್ಯೆಕಾಲದಲು ಶ್ರೀಮದ್ರಾಜಾಧಿ
5. ರಾಜ ರಾಜ ರಮೇಶ್ವರ ಶ್ರೀವೀರಪ್ರತಾಪ ದೇವರಾಯಮಹಾರಾಯರು ವಿಜನಗರದಲು ಸು
6. ಕಸಾಂಬ್ರಾಜ್ಯಂಗೆಯಿಉತ್ತಂ ಯಿಹ ಕಾಲದಲು ಆ ರಾಯರ ನಿರೂಪದಿಂ ಆರಗದ ರಾಜ್ಯವನು

7. ------ಪ್ರತಿಪಾಲಿಸುತ್ತಂ ಯಿಹಕಾಲದಲು ಯೀಶ್ವರಸ್ವರೂಪ ಒಡೆಯರ ಹೆಸ
8. ರಲುಗಂ---- ಪುರಿ ಶ್ರೀಪಾದಂಗಳು ಮಾಡಿಧರ್ಮ್ಮದಛತ್ರದ ಭೂಮಿಯ ಬುಕ್ಕರಾಯಪು
9. ರದ ದೇವರುಗಳು ನಾಗಂಣ---- ಕ್ರಯದಾನಧಾರಾಪೂರ್ವ್ವಕವಾಗಿ ಬರದ ಗುತ್ತಿಗೆರೆಯ
10. ----ಚತುಸೀಮೇವಿವರ ಮೂಡಲು ಆ ದೇವರುಗಳ ನಾಗಣ್ಣಗಳ ತೋಟದಿಂ ಮೂಡಲು ಅವ
11. --ಳಿಯ ಅಜ್ಜ ನಾಗಂಣನ ತೋಟದಿಂ ಮೂಡಲು ಬಡಗಲು ತೆಂಕಲು ನೀರವರಿಯ ಸೀಮೆ
12. ಗಳಗಡಿ ಯಿ ಚುತುಸೀಮೆಯ ಒಳಗಣ ಅಡಕೆಯಮರ ಆಋಉಉನುರ ಅಯಿವತ್ತು----
13. ----ನಾಗುಪಾಧ್ಯರ ಮಕ್ಕಳು ಸುಬ್ರಹ್ಮಣ್ಯೆದೇವಗಳು ತಮಗೆ ಬಂದ ಹೊಂನಂಗೆಯ ಮೇ
14. ಲೆ ಅರವತ್ತು ಹೊಣನನು ತೆಗದುಕೊಂಡು ಆ ಹೊಣನಂಗೆಯ ಆದ ಭೂಮಿ ಹಂನೆರಡುವರೆ ಸಲೆ
15. ಗೆ ಬೀಜವರಿ ಅದಕ್ಕೆ ಸಲುವ ಸೀಮೆಸ್ವಾಮ್ಯ ಹೆ- ಗಾಣಿಕೆ ಸಹ ಅಯಿವತ್ತು ಖಂಡುಗ ಗದ್ದೆಯ
16. ------ ಜೋಜಿಗನ ಅಳಿಯ ಬಾಲತಂಮನ ಚಾರಂಣಹೆಗ್ಗಡೆ - ನಮ ಕೋಟಿಯಪ್ಪ ಆತನ
17. ಗ್ಗಡತ್ತಿಯ ಮಕ್ಕಳು ಬಾಲತಮ್ಮಹೆಗ್ಗಡೆ ಆತನ ತಂಮ ತಿರಿಕೆಗೆಡೆ ಪಾಯಂಣ ಮುದಕಹೆಗ್ಗಡ
18. ತಿಯ ಮಕ್ಕಳು ಬೊಂಮಂಣ ವೀರಂಣ ಕಾಮಂಣ ನಾಗಂಣ ಹೆಗ್ಗಡತಿಯ ಮಕ್ಕಳು ಕೋಟಿಯಪ್ಪ
19. ---ಬಾಲತಂಮ ಯಿವರು ಒಳಗಾದ ಕಂಕಣಲೆ ಹೊಸಕೊಪಕೆ ಸಲುವ ಅಳಿಯಂದಿರು---
20. ಕಾತುವಳಿಗೆ ಸಲುವ ಅಸಗನಹಳಿಯ ದಾನಮುಲಿಗಳು ಅವರ ಹಣ ಸಂದಯಲ್ಲರು ಸರ್ವೆಕಮತ್ಯವಾಗಿ-
21. ಟ್ಟಭೂಮಿಯ ಚತುಸೀಮೆ ಮೂಡಲು ಮಾನಿಗೆ ಹೋಹ ಹೆದ್ದಾರಿಯಿಂ ಪಡುವಲು ತೆಂಕಲು ಬುಕ್ಕರಾಯಪುರದ
22. ಭೂಮಿಯಿಂ ಬಡಗಲು ಪಡುವಲು ಬುಕ್ಕರಾಯಪುರದ ಮೂಡಲು ಬಡಗಲು ಗುಡ್ಡೆಯನೀರು
23. ವರಿ ತೆಂಕಲಿಂ ತೆಂಕಲು ಅಂತು ಚತುಸೀಮೆಯ ವೊಳಗಾದ ಭೂಮಿ-----------
24. ಯನು ಯೀಶ್ವರಸ್ವರೂಪಶ್ರೀಪಾದಂಗಳು ಕ್ರಯದಾನಧಾರಾಪೂರ್ವ್ವಕವಾಗಿ ಕೊಂಡು
25. ------ರಾಮಭಟ್ಟರಿಗೆ ಪೂರ್ವ್ವದಲು ಹಾರುವಗೊಳ---------
26. ------ಯರು ರಾಮಭಟ್ಟರಿಗೆ ಶಾಸನಸ್ಥವಾಗಿ ಕೊಟಯ --ಹತ್ತು ಸಲಗೆ -----------
27. ------ವೊಡೆಯರು ---ಅಸಗಯಂನು----------
28. - ಭೂಮಿಯನು ಮೂವತ್ತಯೆರಡು ಸಲಗೆ ಭತ್ತವನು--------
29. -ಗಿಹದಿಮೂರು ಸಲಗೆ ಭತ್ತವನು ನಾರಸಿಂಹ್ಯದೇವರ ದೇವಕಾರ್ಯ-
30. ---------ಸಲಗೆಭತ್ತವನು ಮಠಕ್ಕೆ ನಾರಸಿಂಹ್ಯದೇವರಸ ಕಳ----
31. -----ಪುರದೊಳಗೆ ನಾಲುಕು ಸಲಗೆ ಭೂಮಿಯನು ನ ------
32. ----ವಂಸ ಮಾಘಮಾಸ ಮೂರು ------------
33. ಸ-----ಹೇಳಿ ಆ ದೇವರ ವಿನಯೋಗವನು ಅ ----------
34. ------ಹುಣಿಸವಳಿಯ ಕೊಟ್ಟ ಕೊಡ ----------
35. ದಾನಧಾರಾಪೂರ್ವ್ವಕವಾಗಿ ಬಂದ ಹೆಗ್ಗಡತ್ತಿಯ ----------
36. ---ಸಲಗೆ ಭೂಮಿಯನು ಕಳೆದು ಮೆ--------ಸಲಗೆಭೂ------
37. ---ಮೂರಸಲಗೆ ಭತ್ತ ಹಂನಂಗಿಯಿಂದ ಅಯಿವತ್ತುಖಂಡು---------
38. -----ಕೊಡುವ ಹಂನೆರಡು ಹೊಂನಿಗೆ ಕೊಡ ----------

39. --ಳರ ಆರು ಹೊಂನಿನ ಬಡಿ ಹಣ ಆರುಗುತ್ತಿಗೆರಯ ---------
40. -------ದಿನದ ಮೇಲು ಕೆ ವರಹ ಆರು ವರಹ – ದಿವಸ -----------
41. ---ಗೆಯ ಮಾಡುವ ಜನ ಯೆರಡಕಂ ಭತ್ತ ಖಂಡಗ ಯಿಪ್ಪತ್ತುಯಿ ---------
42. ಕವೆರಡಕಂ ಬತ್ತ ಯಿಪ್ಪತ್ತು ಖಂಡುಗ ಮೇಲಾಗೆ ಭತ್ತ ಯೆಂಭತ್ತು -----
43. –ಹತ್ತು ಹಣ ಅಡಿಕೆಯಾತಗೆ ಪಾರುಪತ್ಯಮಾಡುವಾತಗೆ ಹತ್ತು ಹಣಹ---------
44. ಪಳಿದ್ಯತೊವೆತುಪ್ಪಮಜ್ಜಿಗೆ ಅ–ತದ–ಳಿಯ ಅಸಾಧ್ಯ ದಾ.ರು ನಾರಾಯ
45. -------ಯಲಿ ಆ ಹಳಿಯ ಭತ್ತವನೂ ಹೊಂನನೂ ಯೆತ್ತಿ ಆ ದವಸ -----ವನು
46. --------ಕರನು ಆ ಹಳಿಗಳಿಗೆ ಹೊರಗಣಬಾಗೆ--ಬಂದ ಆರು------
47. --ಪರಿಹರಿಸಿಕೊಡುವರು ತಾ.ರುಹಳಿಗಳಿ---------
48. --ಯೀ ಧರ್ಮಕೆ ಅಳುಪಿದವರು ಗಂಗೆ ಬರಣಾಸಿ – ಕಪಿಲೆಯವಧಿಸಿದಾ ಪಾ
49. ಪ ಯಿಾ ಧರ್ಮವ ಪಾಲಿಸಿದವರೆಗೆ ವರಣಾಸಿಯಲಿ--- ಕೋಟಿಕಪಿಲೆಯ ದಾನಮಾಡಿದ ಫ
50. ಲ ಆ ನಾರಾಯಣಪ --- ಸ್ವಸೆಗೆತಲೆಯಾ ಯ ಭೂಮಿಯನು
51. –ರ್ಮ ಕೆಡೆದ ಹಾಗೆ ಯೋಗಕ್ಷೇಮವನೂ ಮಾಡಿಕೊಂಡು ಯಿಹರು ಯೀ ಧರ್ಮವ ಮಾಡಿದ ಮಠ
52. ದ ಗಂಗಾಧರ ಪುರಿಶ್ರೀಪಾದಂಗಳ ಒಪ್ಪ ಶ್ರೀನರಸಿಂಹದೇವರು ॥ ದಾನಪಾಲನ
53. ಯೋರ್ಮಧ್ಯೇ ದಾನಾಶ್ರೇಯೋನುಪಾಲನಂ। ದಾನಾಸ್ವರ್ಗಮವಾಪ್ನೋತಿ ಪಾಲನಾದಚ್ಚಯುತಂ ಪದಂ।
54. ಸ್ವಚತ್ತಾ ದ್ವಿಗುಣಂ ಪುಂಣ್ಯಂ ಪರದತ್ತಾನುಪಾಲನಂ ಪರದತ್ತಾಪಹಾರೇಣ ಸ್ವದತ್ತಾಂ ನಿಷ್ಪಲಂ ಭ
55. ವೇತ್॥ ಸ್ವದತ್ತಾಂ ಪರದತ್ತಾಂ ವಾ ಯೋ ಹರೇತಿ ವಸುಂಧರಾಂ। ಷಷಿಟರ್ವರಿಷಸಹಸ್ರಾಣಿ ವಿಷ್ಟಾ
56. ಯಾಂ ಜಾಯತೇ ಕ್ರಿಮಿಃ ॥

ಇದು ವಿಜಯನಗರ ಆಡಳಿತದಲ್ಲಿ ಕಂಡುಬರುವ ಎರಡನೇ ದೇವರಾಯನ ಕಾಲದಲ್ಲಿ ಕೊಟ್ಟಿರುವ ಶಾಸನ ಇದಾಗಿದೆ. ಇದು ಭೂಮಿಯನ್ನು ಧರ್ಮ ಛತ್ರಕ್ಕೆ ಕೊಟ್ಟಿರುವುದನ್ನು ತಿಳಿಸುತ್ತದೆ. ಗಂಗಾಧರಪುರಿ ಶ್ರೀಪಾದ ಇವರಿಗೆ ಈಶ್ವರ ಸ್ವರೂಪ ಒಡೆಯರ ಹೆಸರಲ್ಲಿ ಕೊಟ್ಟಿರುವ ದಾನ ಇದಾಗಿದೆ. ಅಲ್ಲದೆ ಈ ಶಾಸನವು ಪಾರುಪತ್ಯಗಾರನಿಗೆ ಮತ್ತು ಇತರರಿಗೆ ನಿಗದಿತ ಹಣವನ್ನು ಪಾವತಿಸಿರುವುದನ್ನು ತಿಳಿಸುತ್ತದೆ. ಇದರಲ್ಲಿ ಲಭ್ಯವಿರುವ ಶಾ.ಶ. 1353ನೇ ವಿರೋಧಿಕೃತು ಸಂವತ್ಸರ ಕ್ರಿ.ಶ. 1431–32ಕ್ಕೆ ಸರಿಹೊಂದುತ್ತದೆ. ಈ ಶಾಸನವು ಹೆಚ್ಚು ತ್ರುಟಿತಗೊಂಡಿದೆ.

152 (8 ತೀಥ –2) ತೀರ್ಥಹಳ್ಳಿ : ಅದೇ ಮಠದ ಮುಂದೆ ನೆಟ್ಟಿರುವ ಎರಡನೆ ಶಾಸನ

1. ಶ್ರೀಗಣಾಧಿಪತಯೇ ನಮಃ ನಮಸ್ತುಂಗಶಿರಶುಂಬಿಚಂದ್ರಚಾಮರ ಛಾರವೇತ್ರೈ
2. ಲೋಕ್ಯನಗರಾರಂಭಮೂಲಸ್ತಂಭಾಯ ಶಂಭವೇಸ್ವಸ್ತಿ ಶ್ರೀ ಜಯಾಭ್ಯದಯ ಶಕ ವರುಷ 1346ನೆಯವರ್ತ್ತಮಾನ
3. ಶುಭಕ್ರುತುಸಂವತ್ಸರದ ಚಯಿತ್ರ ಶು 1ಆಲೂ ಶ್ರೀಮನ್ಮಹಾರಾಜಾಧಿರಾಜ ರಾಜಪರಮೇಶ್ವರ ಶ್ರೀವೀರಪ್ರ
4. ತಾಪದೇವರಾಯ ಮಹಾರಾಯರು ವಿಜಯಾನಗರಿಯ ರಾಜಧಾನಿಯೊಳು ಸುಖಸಾಂಬಾಜ್ಯ
5. ವಾಳುತ್ತ ಸಮಸ್ತವರ್ನಾಶ್ರಮಧರ್ಮ್ಮಂಗಳನು ಸುಧರ್ಮ್ಮದಿಂ ಪ್ರತಿಪಾಲಿಸುತ್ತಲಿಹಕಾಲದಲಿ ಆ ರಾಯರ ನಿ
6. ರೂಪದಿಂ ಆರಗದ ರಾಜ್ಯವನೂ ಸಿರಿಗಿರಿನಾಥದೇವಗಳು ಸುಧರ್ಮ್ಮದಿಂ ಪ್ರತಿಆಲಿಸುತ್ತಲಿಹ ಕಾಲದಲು
7. ಆರಗದವೇಂಠೆಯ ತೀರ್ಥದಹಳ್ಳಿಯ ದೇವೇಂದ್ರಪುರಿ ಶ್ರೀಪಾದಂಗಳ ಶಿಷ್ಯರು ಗಂಗಾಧರಪುರಿಶ್ರೀಪಾ
8. ದಂಗಳು ಬುಕ್ಕರಾಯಪುರದ ನಾಗುಪಾಧ್ಯರ ಮಕ್ಕಳು ಸುಬ್ರಹ್ಮಂಣ್ಯಭಟ್ಟರು ಚೆಂನಮಾಂಬೆಗಳ ಮಕ್ಕ

9. ಳು ರಾಮಂಣಗಳ ಕೈಯಲಿ ಆ ಬುಕ್ಕರಾಜಪುರದ ಕಾಲುವಳಿಹೆಂನಂಗಿಯ ಭೂಮಿಯನೂ ಕ್ರ
10. ಯವನೂ ಕೊಂಡು ತೀರ್ಥದಹಳ್ಳಿಯ ಶ್ರೀರಾಮನಾಥದೇವರು ಶ್ರೀನಾರಸಿಂಹದೇವರ ಸಂನಿಧಿ
11. ಯಲ್ಲಿ ತುಂಗಭದ್ರಾತೀರದಲ್ಲಿ ಆ ಮಹಾಜನಂಗಳ ಸಮಕ್ಷದಲ್ಲಿ ಸೂರ್ಯ್ಯಗ್ರಹಣಪುಂ
12. ಣ್ಯಕಾಲದಲ್ಲಿ ತ್ಸತ್ರಧರ್ಮ್ಮಕ್ಕೆ ಧಾರೆಯನೆರದ ಧರ್ಮ್ಮಶಾಸನದ ಕ್ರಮವೆಂತೆಂದರೆ ನಿಡುವಲ
13. ನಾಡುವೊಳಗಣ ಬುಕ್ಕರಾಜಪುರದ ಅಘ್ರಾರಕ್ಕೆ ಸಲುವ ಕಾಲುವಳ್ಳಿ ಹೆಂನಂಗಿಯನೂ ಆ ಸುಬ್ರ
14. ಹ್ಮಂಣ್ಯಭಟರು ರಾಮಂಣಗಳು ಅಯಿಕ್ಕರ್ತ್ತರ ಕೈಯಿಲಿ ಯೇಕಸ್ವಾಮ್ಯವಾಗಿ ಕ್ರಯವಾಗಿ
15. 140 ಹೊಂನಿಗೆ ಕೊಂಡ ಕಾಲೆಕೊರೆ ಸಹ ಯಿಪ್ಪತ್ತಯಿದು ಸಲಗೆ ಭೂಮಿಗೆ ತೆರುವ ಗ
16. ಡಿ ನೂರಸಲಗೆ ಭತ್ತವೆಲ್ಲ ಭಂಡಿಯ ಪುಟ್ಟಂಣಗಳು ತಂಮ ತಿರುಳಿಯಬಯಲ ಒಳ
17. ಗೆ ಯೇಳೂವರೆ ಖಂಡುಗಭೂಮಿಯನೂ ನಂಮಲ್ಲಿ ಭೋಗ್ಯಾಡಿಯಾಗಿರಿಸಿ ತೆಗದುಕೊಂಡ ಯಿಪ್ಪ[ತ್ತು]ನಾ
18. ಲ್ಕು ಹೊಂನಿನ ಬಡ್ಡಿ ಹಂನೆರಡು ಸಲಗೆ ಭತ್ತ ಯೀಶ್ವರ ಸ್ವರೂಪೊಡೆಯರು ಸಸಿಯನಿಕಿ ಮಾಡಿದ ತೋ
21. ಟದ ಚತುಸ್ಸೀಮೆ ವಿವರ ಮೂಡಲು ಹಡಿಲಬಯಲ ತೆವರ ನೀರುವರಿಯಿಂದಂ
22. ಪಡುವಲು ತೆಂಕಲು ರುರುವಳ್ಳಿಯ ಗದ್ದೆಯಿಂದಂ ಬಡಗಲು ಪಡುವಲು ಕೋಟಿನಾಥನ ಮನೆ
23. ಯಿಂದಂ ತೆಂಕಲು ಅಂತು ಯೀ ಚತುಸ್ಸೀಮೆಯೊಳಗಣ ದೊಡ್ಡ ಹೆಬಾರುವವಿಟ್ಟಮನೆ
24. ಮಾನಯ ಬೋಳೆಗ್ಗಡೆಯ ಅಳಿಯಂದಿರು ಕರಿಯತಂಮ ಸಂಣತಂಮ ಕಾಮುಗಳು ಮಾನಿಗೆ ಸ
25. ಲುವ ತಿರುಳಿಬಯಲಮೇಲೆ ತೆರುವ ಸಿದ್ಧಾಯವನೂ ಮಾನಿಮೇಲೆಹಾಕಿಕೊಂಡುನಮಗೆ
26. 124ಹೊಂನಿಗೆ ಕ್ರಯವಾಗಿ ಕೊಟ್ಟ ತಿರುಳೆಬಯಲಸಹಿತವಾದ 35 ಸಲಗೆ
27. ಭೂಮಿಗೆ ತೆರುವ ಗಡಿ ತೊಂಭತ್ತು ಖಂಡುಗ ಭತ್ತ ಕುರ್ವಳಿಯಲಿ ಸೋಗಾನಿಯ ಕೇಶವಪು
28. ಟ್ಟಗಳಿಗೆ ನಾಲು ಶ್ರೋತ್ರಗುತ್ತಗೆಯಾಗಿ ಕೊಟ್ಟ ಪಟ್ಟಿ ಒಳಗಿದ್ದ ಚತುಸೀಮೆಸಹಿತವಾಗಿ
29. ಡ ತೋಟಕೆ ತೆರುವ ಸಿದ್ಧಾಯದ ಯಿಪ್ಪತ್ತು ಹಣ ಹಬ್ಬಗಾಣಿಕೆ ಹೊಂನಂಗಿಯಲಿ 2 ಹ
30. ಣ ತಿರುಳಿಯ ಬಯಲಲಿ 2 ಹಣ ಅಂತು 226 ಸಲಗೆ ಭತ್ತ 26 ಹಣವನೂ ಧಾರೆ
31. ನೆರದು ಮಾಡಿದ ಛತ್ರಧರ್ಮದ ವಿವರ ನಂಮ ಕನಿಷ್ಠ ಗುರುಗಳು ಯೀಶ್ವರಸ್ವರೂ
32. ಪಪಾದಂಗಳು ರಕ್ತಹತರಾಗಿ ಮುಕ್ತರಾದರಾಗಿ ಅವರ ಹೆಸರಲ್ಲಿ ನಡವ
33. ಧರ್ಮ 8 ಮಂದಿ ಬ್ರಾಹ್ಮರು ನಂಮ ಹೆಸರಲಿ ನಡವ ಧರ್ಮ ಇಬ್ರು ಬ್ರಾಹ್ಮರು
33. ಧರ್ಮ 8 ಮಂದಿ ಬ್ರಾಹ್ಮರು ನಂಮ ಹೆಸರಲಿ ನಡವ ಧರ್ಮ ಇಬ್ರು ಬ್ರಾಹ್ಮರು
34. ಅಂತು ಜನ 10ಕ್ಕ ಪ್ರತಿ ಜ 1ಕ್ಕಂ ವರ್ಷ 1ಕ್ಕಂ 9 ಸಲಗೆ ಭತ್ತದ ಲೆಕ್ಕದಲು ಹೆಂನಂ
35. ಗಿಯಲಿ ಸಿದ್ಧವಾಗಿದ್ದ 100 ಸಲಗೆ ಭತ್ತದವೊಳಗೆ 9 ಸಲಗೆ ಭತ್ತ ಯೀ ಬ್ರಾಹ್ಮಣ
36. ಭೋಜನದ ಮೇಲು ವೆಚ್ಚಕ್ಕೆ ಪ್ರತಿಜನ 1ಕ್ಕರಂ 5 ಸಲಗೆ ಭತ್ತದ ಲೆಕ್ಕದಲು ಬ್ರಾಹ್ಮರ ಜ 10
37. ಕ್ಕೆ ಕೆಳಗಣ ತಿರುಳಿಯಬಯಲಸಿಧವಹ98 ಸಲಗೆ ಭತ್ತದವೊಳಗೆ 50 ಸಲಗೆ ಭತ್ತ ನಂಮ ಗುರು
38. ದೇವೇಂದ್ರಪುರಿಶ್ರೀಪಾದಂಗಳ ಹೆಸರಲಿ ನಡವ ವೊಬ್ಬಬ್ರಾಹ್ಮಣಗೆ ಸೋಗಾನಿಯ ಕೇಶವಪುಟ್ಟ
39. ನು ತೆರುವ ತೋಟದ ಸಿದ್ಧಾಯದೊಳಗೆ ಮೇಲು ವೆಚ್ಚಸಹ 16 ಹಣ ದೇವೇಂದ್ರಪುರಿ ಶ್ರೀ
40. ಪಾದಂಗಳ ವೇದಿಕೆಯ ನೈವೇದ್ಯಕ್ಕೆ ಹಲಸಿನಹಳ್ಳಿಯಲಿ 10 ಸಲಗೆ ಭತ್ತ ಯೆರಡು ವೇ
41. ದಿಕೆಯ ಸಂಧ್ಯಾದೀಪ್ತಿಗೆ ಮೂರು ಹಣ ಯೀ ಛತ್ರವ ನಡುವ ಬ್ರಾಹ್ಮಣರ್ದೆ ಹೆಂನಂಗಿಯ

42. ಲ್ಲಿ 10 ಸಲಗೆ ಕೆಳಗಣ ತಿರುಳಿಬಯಲಲಿ 6 ಸಲಗೆ ಮೇಲಣ ತಿರುಳಿಬಯ
43. ಲಲ್ಲಿ 14 ಸಲಗೆ ಅಂತು 30 ಸಲಗೆ ಭತ್ತ ಯೀ ಧರ್ಮದ ಹಳ್ಳಿಗಳಿಗೆ ವೊಕ್ಕಲನಿಕ್ಕಿ ಭ
44. ತ್ತಹಣಗಳನೂ ಯೆತಿಕೊಟು ಉಂಡಿಗೇನೂ ಕೊಟ್ಟು ಛತ್ರದ ಯೆಲ್ಲಾ ಪಾರುಪತ್ಯವನೂ
45. ಮಾಡಿಕೊಂಡಿಹ ಸಂಕರಪುಟ್ಟರಿಗೆ 40 ಸಲಗೆ ಭತ್ತ ಅಂತು 220 ಸಲಗೆ ಭತ್ತ 20 ಹ
46. ಣ ಮಿಕ್ಕ ಆರು ಸಲಗೆ ಭತ್ತಲು – ಕುಹಣ ಯೀ ಛತ್ರದ ತಗ್ಗುಮುಗ್ಗಿಗೆ ನಡಉದು
47. ಯೀ ಧರ್ಮದಲಿ ಮೂರು ಕಾಯಿಸಾಕ ಒಂದು ಸೊಪುಸಾಕ ತೊಯೆಪಳಿದ್ಯತುಪ್ಪಮಜಿ
48. ಗೆ ಒಂದು ಪ್ರಕಾರದ ಉಪ್ಪಿನಕಾಯಿ ಬಾಳೆಯೆಲೆ ವೀಳ್ಯೆವನೂ ಅಜ್ಜಲಾತ ನಡಸಿಬಹನು ಮ
49. ಠದ ಶುಕ್ಲಪಟರುಯತೀಶ್ವರರು ಆರನೂ ಛತ್ರಕ್ಕೆ ಕಳುಹಸಲ್ಲದು ಯೀಶ್ವರಸ್ವರೂಪ ಪ್ರಸಾ
50. ದಂಗಳ ಸಮಾರಾಧನೆಯನು ನಂಮ ಮಠಕೆಆದಿಪತಿಯಾಗಿದ್ದವರು ಯಿಂನೂರು
51. ಮಂದಿಗೆ ನಡಸಬಹರು ತೀರ್ಥದಹಳ್ಳಿಯ ಮಠಕ್ಕೆ ಸಲುವ ರಾಯದತ್ತವಹ ಕುರುವಳ್ಳಿಮಾನಿ
52. ಬಾಗಿಗೆ ಸಲ್ಲದಂದು ವೊಡೆಯರು ನಿರೂಪ ಕೊಟಿಧಾರಾಗಿ ಆ ಯೆರಡು ಬಾಗಿಗಳು
53. ಯೀ ಧರ್ಮಕ್ಕೆ ಬಾಧೆ ಬಂದರೆ ನಂಮ ಸಂಪ್ರದಾಯಪ್ರವರ್ತಕರಾಗಿ ನಂಮ ಮಠದಲ್ಲಿ
54. --ಪಳಿಗಳಕಿಗಿಯಿದವರು ಆ ಬಾಧೆಯ ಪರಿಹರಿಸಿ ಕೊಡುತ ಬಹರು ಯೀ ಧರ್ಮಪ್ರತಿ
55. ಪಲಕರು ಬುಕ್ಕರಾಜಪುರದ ತೀರ್ಥದಹಳ್ಳಿಯ ಮಹಾಜನಂಗಳು ಯೀ ಧರ್ಮವನೂ---
56. ವದಕ್ಕೆ ಪ್ರತ್ಯಕ್ಷಪರೋಕ್ಷದಲ್ಲಿ ಒಡಂಬಟ್ಟು ಕಡಿಗೆಕೆಡಿಸ್ತವರಿಗೆ ಉಪೇಕ್ಷಿಸವಳಿದ
57. ಣಾಸಿಯಲ್ಲಿ ಸಹಸ್ರಕವಿಲೆ[ಯ] ನೂ ಕೊಂದ ದೋಷ ಯೀ ಧರ್ಮವನೂ-----------
58. ಯಲ್ಲಿ ಸಹಸ್ರಕವಿಲೆಯ ಕೊಟ್ಟ ಫಲ ದಾನಪಾಲನಯೋರ್ಮಧ್ಯೇ ದಾನಾಚ್ಛೇಯೋನುಪಾಲ
59. ನಂದಾನಾತ್ಸ್ವರ್ಗಮವಾಪ್ನೋತಿ ಪಾಲನಾದಚ್ಯುತಂ ಪದಂ।ಸ್ವದತ್ತಾಂ ಪರದತ್ತಾಂ ವಾಯೋ ಹ
60. ರೇತ ವಸುಂಧರಾಂ ಷಷ್ಟಿವರ್ಷಸಹಸ್ರಾಣಿ ವಿಷ್ಟಾಯಾಂ ಜಾಯತೇ ಕ್ರಿಮಿಃ॥ ಸಾಮಾನ್ಯೋಯಂ
61. ಧರ್ಮಸೇತುರ್ನೃಪಾಣಾಂ ಕಾಲೇಕಾಲೇ ಪಾಲನೀಯೋ ಭವದ್ಭಿಃ। ಸರ್ವಾನೇತಾನ್ಭಾವಿನಃ ಪಾರ್ಥಿ
62. ವೇಂದ್ರಾನ್ಭೂಯೋ ಭೂಯೋ ಯಾಚತೇ ರಾಮಚಂದ್ರಃ ವಾಕ್ಕರ್ಮಬುದ್ಧಿತೋೞಯೇನ

ಈ ಶಾಸನವೂ ಸಹ ವಿಜಯನಗರದ ಎರಡನೇ ದೇವರಾಯನ ಕಾಲದಾಗಿದೆ. ಶಾಸನದಲ್ಲಿ ಶ್ರೀಮನ್ಮಹಾರಾಜಾಧಿರಾಜ ರಾಜ ಪರಮೇಶ್ವರ ಶ್ರೀ ವೀರ ಪ್ರತಾಪ ದೇವರಾಯ ಮಹಾರಾಯರು ವಿಜಯಾನಗರಿಯ ರಾಜಧಾನಿಯೊಳು ಸುಖ ಸಾಮ್ರಾಜ್ಯವಾಳುತ್ತ ಸಮಸ್ತ ವರ್ಣಾಶ್ರಮ ಧರ್ಮಂಗಳನ್ನು ಸುಧರ್ಮದಿಂದ ಪ್ರತಿಪಾಲಿಸುತ್ತಲಿದ್ದ ಕಾಲದಲ್ಲಿ ರಾಯರ ನಿರೂಪದಿಂದ ಆರಗದ ರಾಜ್ಯವನ್ನು ಸಿರಿಗಿರಿನಾಥದೇವಗಳು ಸುಧರ್ಮದಿಂದ ಆಳುತ್ತಿದ್ದ ಕಾಲದಲ್ಲಿ ಆರಗದ ವೇಂಠೆಯಲ್ಲಿರುವ ತೀರ್ಥದಹಳ್ಳಿಯ ದೇವೇಂದ್ರಪುರಿ ಶ್ರೀಪಾದಂಗಳ ಶಿಷ್ಯರು, ಗಂಗಾಧರ ಪುರಿ ಶ್ರೀಪಾದಂಗಳು ಬುಕ್ಕರಾಯಪುರದ ನಾಗುಪಾದ್ಯರ ಮಕ್ಕಳು ಸುಬ್ರಹ್ಮಂಣ್ಯಭಟ್ಟರು ಚೆಂನಮಾಂಬೆಗಳ ಮಕ್ಕಳು ರಾಮಂಣನ ಕೈಯಲ್ಲಿ ಬುಕ್ಕರಾಜಪುರದ ಹೆಂನಂಗಿಯಲ್ಲಿಯ ಭೂಮಿಯನ್ನು ಕ್ರಯವಾಗಿ ಕೊಂಡು ತೀರ್ಥದಹಳ್ಳಿಯ ಶ್ರೀರಾಮನಾಥದೇವರು ಶ್ರೀ ನಾರಸುಣಗ ದೇವರ ಸನ್ನಿಧಿಯಲ್ಲಿ ತುಂಗಭದ್ರಾತೀರದಲ್ಲಿ ಮಹಾಜನರುಗಳ ಸಮಕ್ಷಮದಲ್ಲಿ ಸೂರ್ಯಗ್ರಹಣ ಪುಣ್ಯ ಕಾಲದಲ್ಲಿ ಛತ್ರ ಧರ್ಮಕ್ಕೆ ಧಾರೆ ಎರೆದುದನ್ನು ತಿಳಿಸುತ್ತದೆ. ಈ ಛತ್ರಕೆ ಶುಕ್ಲ ಪಟರು ಯತೀಶ್ವರರು ಯಾರನ್ನೂ ಕಳುಹಿಸಕೂಡದು. ಯೀಶ್ವರ ಸ್ವರೂಪ ಪ್ರಸಾದಂಗಳ ಸಮಾರಾಧನೆಯನು ಮಠಕೆ ಅದಿಪತಿಯಾಗಿದ್ದವರು ಯಿಂನ್ನೂರು ಮಂದಿಗೆ ನಡೆಸಬಹುದು. ಎಂಬುದಾಗಿ ಶಾಸನ ಹೇಳುತ್ತದೆ. ಈಶಾಸನ ಶಕ ವರ್ಷ 1346ರ ಶುಭಕೃತ ಸಂವತ್ಸರದ ಚೈತ್ರ ಶು 1 ಭಾನುವಾರ ಅಂದರೆ ಮಾರ್ಚ 22, 1422ಕ್ಕೆ ಸರಿಹೊಂದುತ್ತದೆ. ಆದರೆ ಇದು ಸಕ ವರ್ಷ 1344 ಆಗುತ್ತದೆ.

ಶ್ರೀ ಲಕ್ಷ್ಮೀ ನರಸಿಂಹ ದೇವಸ್ಥಾನ :

ದೇವಾಲಯವು ಎತ್ತರದ ದಿಬ್ಬದಲ್ಲಿದ್ದು ಇದು ಸಂಪೂರ್ಣ ಶಿಲೆಯಲ್ಲಿ ನಿರ್ಮಾಣವಾಗಿದೆ. ದೇವಾಲಯ ಆಯತಾಕಾರವಾಗಿದೆ. ದೇವಸ್ಥಾನವು ಪ್ರದಕ್ಷಣಾಪಥ, ಅಂತರಾಳ, ಗರ್ಭಗೃಹವನ್ನು ಒಳಗೊಂಡಿದೆ. ಗರ್ಭಗೃಹದಲ್ಲಿ ನೆಲಕ್ಕೆ ಹಾಸುಗಲ್ಲು ಹಾಕಲಾಗಿದೆ. ದೇವಾಲ0ಯ ಪೂರ್ವಾಭಿಮುಖವಾಗಿದೆ. ಗರ್ಭ ಗೃಹದಲ್ಲಿ ಪಂಚಲೋಹದ ಶಿಲ್ಪಗಳಿವೆ. ಗರ್ಭಗೃಹವು ಸುಮಾರು 6 ಅಡಿ ಚಚೌಕದ ಒಳಾ0ಯವನ್ನು ಹೊಂದಿದೆ. ಪ್ರಾಕಾರವು ಸುಮಾರು 22 ಅಡಿ ಉದ್ದ 15 ಅಡಿ ಅಗಲ ಇದೆ. ಈ ಮಠದ ಮುಂಭಾಗದಲ್ಲಿ ವ್ಯಾಸರಾಯ ಮಠ ಮತ್ತು ಮಠದ ಹಿಂಭಾಗ ಕೆಲವು ಬೃಂದಾವನಗಳಿವೆ. ಗರ್ಭಗೃಹದಲ್ಲಿ ಹಿಂದಿನಿಂದ ಬಂದಂತೆ ಲಕ್ಷ್ಮೀನರಸಿಂಹ, ದೇವಿ, ಲಕ್ಷ್ಮೀನಾರಾಯಣ, ಗಣಪತಿ, ಆಂಜನೇಯ, ಗೌರಿ ಮುಖ,ಕೃಷ್ಣ ಮೊದಲಾಗಿ ಪಂಚಲೋಹದ ವಿಗ್ರಹಗಳು ಮತ್ತು ಎರಡು ಲಿಂಗವಿದೆ.

ಭಾಗವತ ಸಂಪ್ರದಾಯಕ್ಕೆ ಹತ್ತಿರ ಇದ್ದುದರಿಂದ ಶ್ರೀ ರಾಮಚಂದ್ರಾಪುರ ಮಠದ ಜೊತೆ ಇವರ ಸಂಪರ್ಕ ಆಗಲು ಕಾರಣವಾಗಿರಬೇಕು. ಈ ಮಠದಿಂದ ಸುಮಾರು ನಾಲ್ಕಾರು ಕಿ.ಮೀ. ದೂರದಲ್ಲಿರುವ ದೂರ್ವಾಸ ಪುರದಲ್ಲಿ ಉತ್ತರದ ದ್ವಾರಕ ಪೀಠಕ್ಕೆ ಸೇರುವ, ಅದರ ಉಪಶಾಖೆ ಎಂದೇ ಕರೆಯಲ್ಪಡುವ ಭಾಗವತ ಸಂಪ್ರದಾಯದ ಮಠವೊಂದಿದೆ. ಇದೂ ಈ ನಿಟ್ಟಿನಲ್ಲಿ ಗಮನ ಸೆಳೆಯುತ್ತದೆ. ಈ ಮಠವನ್ನು ಮಲೆಯಾಳ ಮಠ ಎಂದೂ ಕರೆಯುವುದು ಇಲ್ಲಿ ರೂಢಿಯಲ್ಲಿದೆ.

ಈ ಮಠದ ಗುರುಗಳಿಗೆ ಅಂಟಿಕೊಂಡಿರುವ ಪುರಿ ಎಂಬ ಉಪನಾಮವು ಗಮನ ಸೆಳೆಯುತ್ತದೆ. ತಲಕಾಡಿನಲ್ಲಿ ಇರುವ ಮಠವೊಂದರ ಗುರುಗಳಿಗೂ ಪುರಿ ಎಂಬ ಉಪನಾಮ ಇರುವುದು ಕಂಡುಬರುತ್ತದೆ. ಅಂತೆಯೇ ಕೋಲಾರ ಜಿಲ್ಲೆಯ ಮುಳಬಾಗಿಲಿನಲ್ಲಿಯೂ ಸಹ ಪುರಿ ಉಪನಾಮ ಹೊಂದಿರುವ ಪರಂಪರೆಯ ಮಠ ವಿದೆ. ಈ ಮಠಗಳೂ ಸಹ ಭಾಗವತ ಸಂಪ್ರದಾಯವನ್ನು ಅನುಸರಿಸುವ ಮಠವಾಗಿವೆ. ಈ ನೆಲೆಯಲ್ಲಿ ತೀರ್ಥಹಳ್ಳಿಯ ತೀರ್ಥರಾಜಪುರ ಅಗ್ರಹಾರದಲ್ಲಿ ವಿಜಯನಗರ ಕಾಲದಲ್ಲಿ ಅಂದರೆ ಎರಡನೆ ದೇವರಾಯನ ಕಾಲದಲ್ಲಿ ಸ್ಥಾಪಿತವಾದ ಈ ಮಠವೂ ಸಹ ಭಾಗವತ ಸಂಪ್ರದಾಯದ ಮಠ ಆಗಿತ್ತೆನ್ನಬಹುದಾಗಿದೆ. ಈಗ ಇದು ಸ್ಮಾರ್ತ ಸಂಪ್ರದಾಯದ ಶ್ರೀ ರಾಮಚಂದ್ರಾಪುರ ಮಠದ ಆಡಳಿತಕ್ಕೆ ಒಳಪಟ್ಟು ಸ್ಮಾರ್ತ ಮಠವಾಗಿ ತನ್ನ ಚಟುವಟಿಕೆಗಳನ್ನು ನಡೆಸಿಕೊಂಡುಬರುತ್ತಿದೆ.

ಶ್ರೀ ರಾಮಚಂದ್ರಾಪುರ ಮಠದ 32ನೆ ಪೀಠಾಧಿಪತಿಗಳಾದ ಶ್ರೀ ರಾಘವೇಂದ್ರಭಾರತಿಗಳು 1851ರಲ್ಲಿ ಶ್ರೀ ಅಮರೇಂದ್ರ ಪುರಿಗಳಿಗೆ ಸನ್ಯಾಸ ದೀಕ್ಷೆ ನೀಡಿ ಮಹಾವಾಕ್ಯೋಪದೇಶವನ್ನು ನೀಡಿದ್ದಾರೆ. ನಂತರ 1859ರಲ್ಲಿ ಅಮರೇಂದ್ರಪುರಿಗಳು ತಮ್ಮ ದೀಕ್ಷಾ ಗುರುಗಳಿಗೇ ಮಠವನ್ನು ಸಮರ್ಪಣೆ ಮಾಡುತ್ತಾರೆ. ಅಲ್ಲಿಗೆ ತೀರ್ಥರಾಜಪುರ ಮಠವು ಶ್ರೀರಾಮಚಂದ್ರಾಪುರ ಮಠದಲ್ಲಿ ವಿಲೀನವಾಯಿತು. (ಮಾಹಿತಿ: ಹವ್ಯಕರ ಇತಿಹಾಸ ದರ್ಶನ, ಪುಟ 94–95, ಎಚ್. ಎಂ. ತಿಮ್ಮಪ್ಪ, ಕಲಸಿ. ಹವ್ಯಕ ಅಧ್ಯಯನ ಕೇಂದ್ರ, ಶ್ರೀ ಅಖಿಲ ಹವ್ಯಕ ಮಹಾಸಭಾ(ರಿ) ಬೆಂಗಳೂರು 2012 ಮತ್ತು ಎಪಿಗ್ರಾಫಿಯ ಕರ್ನಾಟಕ ವಾಲ್ಯುಂ 8 ತೀರ್ಥಹಳ್ಳಿ ತಾಲ್ಲೂಕು.)


ಈ ಲೇಖನ ಸಿದ್ಧಪಡಿಸಲು ಛಾಯಾಚಿತ್ರ ಮತ್ತು ಮಾಹಿತಿ ನೀಡಿ ಸಹಕರಿಸಿದ ಶ್ರೀ ಹೆದ್ಲಿ ಅಶೋಕ್ ಮತ್ತು ಕುಮಾರಿ ಅರ್ಪಿತ ಇವರಿಗೆ ಲೇಖನ ಮಂಡಿಸಲು ಅವಕಾಶವಿತ್ತ ರಾಜ್ಯ ಪ್ರಾಚ್ಯವಸ್ತು ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆಯ ಅಧಿಕಾರಿಗಳಿಗೆ ನಾನು ಅಭಾರಿಯಾಗಿದ್ದೇನೆ.



ತೀರ್ಥಹಳ್ಳಿ ಅಮರೇಂದ್ರ ಪುರಿ ಮಠ



ಮಠದಲ್ಲಿರುವ ಕಂಚಿನ ಮೂರ್ತಿಗಳು



ಮಠದ ಆವರಣದಲ್ಲಿರುವ ಶಾಸನಗಳು

29. ನೀರಾವರಿ–ಶಾಸನೋಕ್ತ ಹೂಡಿಕೆಯ ಆರ್ಥಿಕ ಆಯಾಮಗಳು : ಒಂದು ಪರಿಶೀಲನೆ

– ಡಾ. ಟಿ.ವಿ. ನಾಗರಾಜ

ಕೆ.ವಿ. ನೀಲಕಂಠಶಾಸ್ತ್ರಿ ಮತ್ತು ಟಿ.ವಿ. ಮಹಾಲಿಂಗಂ ಅವರು ಹಾಕಿದ ಸಂಶೋಧನಾ ತಳಹದಿಯ ಮೇಲೆ ಭದ್ರವಾಗಿ ಬೇರೂರಿದ ದಕ್ಷಿಣ ಭಾರತದ ಚಾರಿತ್ರ್ಯಕ ಅಧ್ಯಯನದಲ್ಲಿ ಮಧ್ಯಕಾಲೀನ ರಾಜ್ಯ ವ್ಯವಸ್ಥೆಯನ್ನು ಕೇಂದ್ರೀಕೃತ ರಾಜ್ಯವ್ಯವಸ್ಥೆ ಎಂದು ಅರ್ಥೈಸಲಾಗಿದೆ. ಮಧ್ಯಕಾಲೀನ ರಾಜ್ಯವ್ಯವಸ್ಥೆ ಕೇಂದ್ರೀಕೃತವಾಗಿರಲಿಲ್ಲ ಎಂಬ ವಾದವನ್ನು ಮಂಡಿಸಿದ ಬರ್ಟನ್‌ಸ್ಟೈನ್, ಪೂರಕವಾಗಿ ಚೀನಾ ಹಾಗೂ ಮೆಸಪಟೋಮಿಯಾದಲ್ಲಿದ್ದಂತೆ ದೊಡ್ಡಪ್ರಮಾಣದ ಕೆರೆ, ಕಾಲುವೆಗಳನ್ನು ಕಟ್ಟಿಸಿ ಸರ್ಕಾರ ನಿರ್ವಹಿಸಿದುದಕ್ಕೆ ಪುರಾವೆಗಳೇ ಇಲ್ಲ ಎಂಬ ಅಭಿಪ್ರಾಯಕ್ಕೆ ಬರುತ್ತಾರೆ.[1] ರಾಜ್ಯದ ಯಾವ ಚಟುವಟಿಕೆಯನ್ನು ತನ್ನ ವಿಷಯ ವೈಶಾಲ್ಯತೆಯಿಂದ ಬಿಡದ ಕೌಟಿಲ್ಯನ ಅರ್ಥಶಾಸ್ತ್ರ ಕೂಡ ರಾಜ್ಯ ನೀರಾವರಿ ವ್ಯವಸ್ಥೆಯನ್ನು ನಿರ್ವಹಿಸುದಕ್ಕೆ ಅಥವಾ ನೀರಾವರಿ ಕಾಮಗಾರಿಗಳಲ್ಲಿ ಪ್ರಭುತ್ವದ ಪಾತ್ರ ಕುರಿತಂತೆ ಮಾಹಿತಿ ನೀಡುವುದಿಲ್ಲ.[2] ವಿಜಯನಗರ ಆಳ್ವಿಕೆಯ ಸಂದರ್ಭದಲ್ಲಿ ಕೃಷ್ಣದೇವರಾಯ ನೀರಾವರಿ ಚಟುವಟಿಕೆಗಳನ್ನು ಕೈಗೊಂಡರೆ ಕೃಷಿ ಪ್ರಗತಿ ಹೊಂದಿ ರಾಜ್ಯದ ಆರ್ಥಿಕಾಭಿವೃದ್ಧಿಯಾಗುತ್ತದೆ ಎಂದು ಆಪೇಕ್ಷೆಪಟ್ಟರೂ ಸಹ, ವಿಜಯನಗರವೂ ಸೇರಿದಂತೆ ದಕ್ಷಿಣಭಾರತದ ಯಾವ ರಾಜ್ಯವೂ ನೀರಾವರಿ ಇಲಾಖೆಯನ್ನೆ ಹೊಂದಿರಲಿಲ್ಲ.[3]

ಇತರಡೆಗಳಂತೆ ವಿಜಯನಗರ ಸಾಮ್ರಾಜ್ಯದ ರಾಜಧಾನಿ ಮತ್ತು ಅದರ ಪರಿಸರದಲ್ಲಿ (Core region) ಬೃಹತ್ ಮತ್ತು ವ್ಯಾಪಕ ಪ್ರಮಾಣದ ನೀರಾವರಿ ಕಾಮಗಾರಿಗಳು ಅನುಷ್ಠಾನಗೊಂಡಿರುವುದು ಇದುವರೆಗಿನ ಅಧ್ಯಯನಗಳು ದೃಢಪಡಿಸಿವೆ.[4] ನಗರೀಕರಣ ಸೈನಿಕನೆಲೆ, ಧಾರ್ಮಿಕ ಸಂಸ್ಥೆಗಳು, ಅರಮನೆ ಮತ್ತು ರಾಜ್ಯಾಧಿಕಾರದ ನೆಲೆ ಮತ್ತು ಪರಿವಾರ–ಹೀಗೆ ಅನೇಕ ಅಂಶಗಳು ಇಂತಹ ನೀರಾವರಿ ಕಾಮಗಾರಿಗಳ ಅನುಷ್ಠಾನವನ್ನು ಅಗತ್ಯ ಮತ್ತು ಅನಿವಾರ್ಯಗೊಳಿಸಿದ್ದವು. ಹೀಗಾಗಿ ಪ್ರಭುತ್ವ ಮೂಲದ ಸಂಪನ್ಮೂಲಗಳು ಬಳಕೆಯಾಗಿ ತಾಂತ್ರಿಕ ನೈಪುಣ್ಯತೆಯೊಂದಿಗೆ ಪೂರ್ಣಪ್ರಮಾಣದ ಜಲಸಂಪನ್ಮೂಲಗಳನ್ನು ಬಳಸಿಕೊಳ್ಳುವ ಕಾಮಗಾರಿಗಳು ಜಾರಿಗೊಂಡಿದೆ. ಈ ರಾಜಧಾನಿ ಕೇಂದ್ರಿತ ನೀರಾವರಿ ಕಾಮಗಾರಿಗಳ ಅನುಷ್ಠಾನಕ್ಕೆ ಬಳಕೆಯಾದ ಹಣಕಾಸಿನ ಆಯಾಮಗಳು ಎಲ್ಲಿಯೂ ಗೋಚರವಾಗುವುದಿಲ್ಲ. ಪ್ರಾಯಶಃ ಭಂಡಾರದ ಹೂಡಿಕೆಯಾಗಿರಬಹುದಾದ ಹಿನ್ನೆಲೆಯಲ್ಲಿ, ಲೆಕ್ಕ–ಪತ್ರಗಳ ಲಭ್ಯತೆ ಮೇಲೆ ಯಾವುದೇ ರೀತಿಯ ಆಧಾರಗಳು ಬೆಳಕು ಚೆಲ್ಲುತ್ತಿಲ್ಲ!

ಪ್ರಭುತ್ವದ ಆಡಳಿತ ಪದ್ಧತಿ, ಸೈನ್ಯ ಸಂಘಟನೆ, ಹಣಕಾಸು, ವ್ಯಾಪಾರ–ವಾಣಿಜ್ಯ, ವಿದೇಶಿ ವ್ಯವಹಾರ ಮುಂತಾದ ಆಡಳಿತಾತ್ಮಕ ಚೌಕಟ್ಟು ಹಲವಾರು ಸಾಹಿತ್ಯಕ ಮತ್ತು ಶಾಸನಗಳು ಬೆಳಕು ಚೆಲ್ಲುತ್ತವೆಯಾದರೂ ನೀರಾವರಿ ಇಲಾಖಾ ಚೌಕಟ್ಟಿನ ಕುರಿತಂತೆ ಮಾಹಿತಿ ಇಲ್ಲ. ಸಾಮ್ರಾಜ್ಯದ ವೆಚ್ಚದ ಬಾಬ್ತುಗಳಲ್ಲಿ ನೀರಾವರಿ ಮತ್ತು ಸಾರ್ವಜನಿಕ ಕಾಮಗಾರಿಗಳು ಒಂದು ಬಾಬು ಎಂದು ಪರಿಗಣಿಸಲ್ಪಟ್ಟಿದ್ದರೂ ಈ ಕುರಿತಂತೆ ಹೆಚ್ಚಿನ ಮಾಹಿತಿ ಇಲ್ಲ.[5] ಸ್ವತಃ ರಾಜರೇ ಅಧಿಕಾರ ಕೇಂದ್ರಿತ ಸ್ಥಳ ಮತ್ತು ಪರಿಸರದಲ್ಲಿ ಅನೇಕ ನೀರಾವರಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಿರುವುದು ಆದ್ಯತಾ ವಲಯದ

ಪರಿಭಾವನೆಯಲ್ಲಿಯೇ! ಈ ಹಿನ್ನೆಲೆಯಲ್ಲಿ ಸಾಮ್ರಾಜ್ಯದಾದ್ಯಂತ ನೀರಾವರಿ ಕಾಮಗಾರಿಗಳನ್ನು ಕೈಗೊಂಡ ಪ್ರಕ್ರಿಯದಲ್ಲಿ ಅನೇಕ ವ್ಯಕ್ತಿ, ಅಧಿಕಾರಿ, ಮತ್ತು ದೇವಾಲಯಗಳಂತಹ ಸಂಸ್ಥೆಗಳು ಸಕ್ರಿಯವಾಗಿ ಪಾಲ್ಗೊಂಡು ಹಣ ಹೂಡಿಕೆ ಮಾಡಿರುವ ಬಗ್ಗೆ ಹಲವಾರು ಶಾಸನಗಳು ಉಲ್ಲೇಖಿಸಿವೆ.

ವಿಜಯನಗರ ಕಾಲದ ನೀರಾವರಿ ವ್ಯವಸ್ಥೆ ಕುರಿತಂತೆ ಸಿ.ಟಿ.ಎಂ. ಕೊಟ್ರಯ್ಯ, ಸರಸ್ವತಿ, ಕುಪ್ಪಸ್ವಾಮಿ, ಜಿ.ಎಸ್. ದೀಕ್ಷಿತ್ ಮತ್ತು ವಿದೇಶಿ ವಿದ್ವಾಂಸರಾದ ಡಾಮೆನಿಕ್ ಜೆ. ಜೆನ್‌ಕಿನ್ಸ್ ಮುಂತಾದವರು ವಿಸ್ತೃತ ಅಧ್ಯಯನ ನಡೆಸಿದ್ದಾರೆ. ನೀರಾವರಿ ಕಾಮಗಾರಿಗಳ ಅನುಷ್ಠಾನದಲ್ಲಿ ಹೂಡಿಕೆ ಆದಂತಹ ಸಂಪನ್ಮೂಲಗಳ ಕುರಿತಂತೆ ಅಧ್ಯಯನಗಳ ಕೊರತೆ ಕಂಡುಬಂದಿದೆ. ಈ ಹಿನ್ನೆಲೆಯಲ್ಲಿ ಶಾಸನಗಳಲ್ಲಿ ಉಲ್ಲೇಖಿತ (ಪಣ, ಗದ್ಯಾಣ, ಪೊನ್, ವರಾಹ, ಸಿಂಗಾಯ, ವೇದ) ಹೂಡಿಕೆಗಳ ಆರ್ಥಿಕ ಆಯಾಮಗಳನ್ನು ಪ್ರಸ್ತುತ ಅಧ್ಯಯನದಲ್ಲಿ ಪರಿಶೀಲನೆಗೆ ಒಳಪಡಿಸಲಾಗಿದೆ. ವಿಜಯನಗರ ಸಾಮ್ರಾಜ್ಯದಲ್ಲಿ ಕೈಗೊಂಡ ನೀರಾವರಿ ಕಾಮಗಾರಿಗಳನ್ನು (ರಾಜಧಾನಿ ಕೇಂದ್ರಿತ ಹೊರತುಪಡಿಸಿ) ಬಹುತೇಕ ಸ್ಥಳೀಯರ ನಿರ್ವಹಿಸಿಕೊಂಡು ಬಂದಿರುವುದು ಇದುವರೆಗಿನ ಅಧ್ಯಯನಗಳಿಂದ ಕಂಡುಬಂದಿದೆ. ಅಲ್ಲದೆ ಈ ತೆರನಾದ ಚಟುವಟಿಕೆಗಳು ಒಂದು ಪರಂಪರೆಯಾಗಿ ಮುಂದುವರಿದಿರುವುದು ಉಂಟು. ಈ ಚಟುವಟಿಕೆಗಳನ್ನು ಪ್ರೋತ್ಸಾಹಿಸಿದ ರಾಜರು ಭೂಮಿ, ಹಣ, ತೆರಿಗೆ ವಿನಾಯಿತಿ ಮೂಲಕ ಕೆರೆ ನೀರಾವರಿ ವ್ಯವಸ್ಥೆಯಲ್ಲಿ ಪಾಲ್ಗೊಂಡವರಿಗೆ ಮನ್ನಣೆ ನೀಡಿದರು. ಈ ರೀತಿಯ ಕೊಡುಗೈ, ಮಾನ್ಯಗಳು ನೀರಾವರಿ ವ್ಯವಸ್ಥೆ ಸಮರ್ಪಕವಾಗಿ ಕಾರ್ಯನಿರ್ವಹಿಸಲು ಅನುವು ಮಾಡಿಕೊಡುವುದರ ಜೊತೆಗೆ, ಇಂತಹ ಪ್ರಕ್ರಿಯೆಯಲ್ಲಿ ಪಾಲ್ಗೊಂಡವರಿಗೆ ಸಾಮಾಜಿಕ ಹಾಗೂ ರಾಜಕೀಯ ಮನ್ನಣೆ ದೊರೆಕಿಸಿಕೊಟ್ಟವು.[6]

ಮಧ್ಯಕಾಲೀನ ಚಾರಿತ್ರ್ಯಕ ಬರವಣಿಗೆಯಲ್ಲಿ ದೇವಾಲಯಗಳು ಆರ್ಥಿಕ ಕೇಂದ್ರಗಳಾಗಿದ್ದವು. ಕೃಷಿ ಹಾಗೂ ನೀರಾವರಿ ಅಭಿವೃದ್ಧಿಯಲ್ಲಿ ಸಕ್ರಿಯ ಪಾತ್ರವಹಿಸಿದ್ದವು. ದೇವಾಲಯಗಳು ಅರಸರು ಹಾಗೂ ಇತರ ಭಕ್ತರಿಂದ ಭೂಮಿ, ಗ್ರಾಮದ ಉತ್ಪನ್ನ ಹಾಗೂ ಹಣದ ರೂಪದಲ್ಲಿ ಕಾಣಿಕೆಗಳನ್ನು ಹೆಚ್ಚಾಗಿ ಪಡೆದವು. ಈ ಕಾಣಿಕೆಗಳನ್ನು ವ್ಯವಸ್ಥಿತವಾಗಿ ರೂಢಿಸಿಕೊಂಡು ದಾನ ಕೊಟ್ಟ ಭಕ್ತರು ಅಪೇಕ್ಷಿಸಿದ ಸೇವೆಯನ್ನು ದೇವಾಲಯಗಳಲ್ಲಿ ನಡೆಸುವುದು ದೇವಾಲಯದ ಅಧಿಕಾರಿಗಳ ಜವಾಬ್ದಾರಿಯಾಗಿದ್ದಿತು. ಈ ದಿಸೆಯಲ್ಲಿ ದೇವಾಲಯದ ಆಡಳಿತಗಾರರು ದಾನವಾಗಿ ಬಂದ ಭೂಮಿಯನ್ನು ಅಭಿವೃದ್ಧಿಗೊಳಿಸಲು, ನೀರಾವರಿ ಅನುಕೂಲತೆಗಳನ್ನು ಕಲ್ಪಿಸಲು ದೇವಾಲಯಕ್ಕೆ ಕೇವಲ ಧಾರ್ಮಿಕ ಕೇಂದ್ರಗಳಾಗಿದ್ದ ದೇವಾಲಯಗಳು ನೀರಾವರಿ ಕ್ಷೇತ್ರದಲ್ಲಿ ಸಕ್ರಿಯ ಪಾತ್ರವಹಿಸಿದೆವು. ಕೆಲವೊಮ್ಮೆ 250–300 ಗ್ರಾಮಗಳು ದೇವಾಲಯದ ಅಧೀನದಲ್ಲಿದ್ದು, ವ್ಯಾಪಕ ಪ್ರಮಾಣದಲ್ಲಿ ದೇವಾಲಯಗಳು ನೀರಾವರಿ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವುದನ್ನು ಬರ್ಟನ್‌ಸ್ಟೈನ್ ಗುರುತಿಸಿದ್ದಾರೆ.[7]

ವಿಜಯನಗರ ಸಾಮ್ರಾಜ್ಯದ ಕಾಲಘಟ್ಟದಲ್ಲಿ ನೀರಾವರಿ ಕಾಮಗಾರಿಗಳ ನಿರ್ಮಾಣ, ದುರಸ್ತಿ ಹಾಗೂ ನಿರ್ವಹಣೆಯಲ್ಲಿ ರಾಜರು, ರಾಣಿಯರು, ಮಂತ್ರಿಗಳು, ಅಧಿಕಾರಿಗಳು, ಸಾಮಂತರಷ್ಟೇ ಅಲ್ಲದೆ ವ್ಯಕ್ತಿಗಳು ಮತ್ತು ಸಂಸ್ಥೆಗಳು ಸಕ್ರಿಯ ಪಾತ್ರವಹಿಸಿವೆ. ಈ ಪಾಲ್ಗೊಳ್ಳುವಿಕೆಗೆ ಬಹುತೇಕ ಧಾರ್ಮಿಕ ಮಹೋನ್ನತಿಯೇ ಪ್ರೇರಕವಾಗಿರುವುದು ಕಂಡುಬರುತ್ತದೆ. ದೇವಾಲಯಗಳು ಕೇವಲ ಧಾರ್ಮಿಕ ಸಂಸ್ಥೆಗಳಷ್ಟೇ ಅಲ್ಲದೆ ಆರ್ಥಿಕ ಸಂಸ್ಥೆಗಳಾಗಿ ಕಾರ್ಯನಿರ್ವಹಿಸಿ, ಕೃಷಿ–ನೀರಾವರಿಯಂತಹ ಅಭಿವೃದ್ಧಿ ಚಟುವಟಿಕೆಗಳಲ್ಲಿ ಕ್ರಿಯಾಶೀಲ ಪಾತ್ರವಹಿಸುತ್ತಾ ಬಂದಿರುವುದು ವಿಜಯನಗರ ಕಾಲದ ಪ್ರಧಾನ ಅಂಶಗಳಲ್ಲಿ ಒಂದಾಗಿದೆ. ದೇವಾಲಯಗಳಿಗೆ ದೇಣಿಗೆ, ಕಾಣಿಕೆ ದಾನ–ಹೀಗೆ ಹಲವು ರೂಪಗಳಲ್ಲಿ ಸಲ್ಲಿಕೆಯಾದ ಮೊತ್ತವನ್ನು ಧಾರ್ಮಿಕ ಚಟುವಟಿಕೆ–ಸೇವೆಗಳಿಗಷ್ಟೆ ಬಳಸಿಕೊಳ್ಳದೆ ಸುಸ್ಥಿರ ಆದಾಯದ ಬಾಬುಗಳನ್ನು ವೃದ್ಧಿಕೊಳ್ಳುವ ಪ್ರಕ್ರಿಯ ಗಮನಾರ್ಹ ಅಂಶವಾಗಿದೆ. ಸಾಮ್ರಾಜ್ಯದಾದ್ಯಂತ ಈ ಪ್ರಕಿಯೆ ಒಂದು ಸ್ವಾಭಾವಿಕ ಕ್ರಿಯೆಯಾಗಿ ಗೋಚರಿಸಿದೆ.

ಸಾಮ್ರಾಜ್ಯದ ಅರ್ಥ–ವ್ಯವಸ್ಥೆಯಲ್ಲಿ ಸೈನ್ಯ, ವ್ಯಾಪಾರ–ವಾಣಿಜ್ಯ, ಆಮದು–ರಫ್ತು ಮುಂತಾದ ಅಂಶಗಳ ಕುರಿತಂತೆ ಶಾಸನೋಕ್ತ ಹಾಗೂ ಸಾಹಿತ್ಯಕ ಆಧಾರಗಳು ಬೆಳಕು ಚೆಲ್ಲಿದರೂ ಸಾರ್ವಜನಿಕ ಕಾಮಗಾರಿ ಕೃಷಿ ಮತ್ತು ನೀರಾವರಿ ಚಟುವಟಿಕೆಗಳ ಆರ್ಥಿಕ ಆಯಾಮಗಳು ಕುರಿತಂತೆ, ಚರ್ಚೆ–ಅಧ್ಯಯನಗಳು ತೀರ ಅಪರೂಪ. ಈ ಹಿನ್ನೆಲೆಯಲ್ಲಿ ಕೆರೆ

ಕಾಲುವೆ, ಮುಂತಾದ ನೀರಾವರಿ ಕಾಮಗಾರಿಗಳು ಕುರಿತಂತೆ ಲಭ್ಯವಿರುವ ಶಾಸನೋಕ್ತಿ ಆರ್ಥಿಕ ಉಲ್ಲೇಖ ಆಧಾರಗಳ ಚೌಕಟ್ಟಿನಲ್ಲಿ ಒಂದು ಪರಾಮರ್ಶೆ ನಡೆಸುವ ಪ್ರಯತ್ನ ಇದಾಗಿದೆ.

ದೇವಾಲಯಕ್ಕೆ ಸಂದಾಯವಾದ ನಿರ್ದಿಷ್ಟ ಮೊತ್ತವನ್ನು ನೀರಾವರಿ ಕಾಮಗಾರಿಗಾಗಿ ಹೂಡಿಕೆ ಮಾಡಿದ್ದು, ಕೃಷಿ ಉತ್ಪನ್ನ ಮತ್ತು ಆದಾಯದ ಹೆಚ್ಚಳಕ್ಕೆ ವಿನಿಯೋಗಿಸಿರುವುದು ಕಂಡುಬಂದಿದೆ. ಕೊಯಿಲ್‌ಕೆಲ್ಲಿ ಎಂಚರುಮನಾರ್‌ಜೀಯ ಎಂಬುವನು ಅಲ್ಲಿನ ದೇವಾಲಯಕ್ಕೆ ನೀಡಿದ 5000 ಪಣಮ ಮೊತ್ತವನ್ನು ಅರಿಳಾಳು ಬಳಿ ಕೆರೆ ನಿರ್ಮಾಣಕ್ಕೆ ಬಳಸಿಕೊಂಡಿರುವುದು ದಾಖಲಾಗಿದೆ.[9] ಆದಿರಾಜ ಎಂಬುವನು ಶ್ರೀ ವೆಂಕಟೇಶ ಸನ್ನಿಧಿಗೆ ಮತ್ತು ಸೇವೆಗಾಗಿ ನೀಡಿದ 1000 'ಪಣಂ' ಕಲಿದಿರಮಂಗಲಂ ಎಂಬಲ್ಲಿ ಕೆರೆ ನಿರ್ಮಾಣಕ್ಕೆ ಹೂಡಿಕೆ ಮಾಡಿರುವುದು ದಾಖಲಾಗಿದೆ.[10]

ಗ್ರಾಮದ ದೇವಾಲಯದ ಕೆರೆಯೊಂದರ ದುರಸ್ತಿಗಾಗಿ 1000 ಪಣ ಖರ್ಚಾಗಿದ್ದು ಅಷ್ಟು ಮೊತ್ತ ದೇಣೀಗೆ ರೂಪದಲ್ಲಿ ಸಂದಾಯವಾಗಿದ್ದಿತು. ಆ ಕೆರೆಯ ಆದಾಯದಿಂದ ದೇವಾಲಯದ ಕೈಂಕರ್ಯಗಳಿಗೆ ನಿತ್ಯ ಪೂಜೆಗೆ ಬಳಸಲು ನಿರ್ಧಾರ ಕೈಗೊಂಡಿದ್ದರು. ಇಲ್ಲಿ ಕಾಮಗಾರಿ ದುರಸ್ತಿಯ ಪೂರ್ಣ ವೆಚ್ಚ ವಿವರ ವ್ಯಕ್ತಿಗಳಿಂದ ಸಂದಾಯವಾಗಿದ್ದು, ಹೂಡಿಕೆಯಲ್ಲಿ ದೇವಾಲಯದ ಖರ್ಚು-ವೆಚ್ಚಗಳಿಗೆ ನಿರಂತರ ಆದಾಯದ ಮೂಲ ಸೃಷ್ಟಿಯಾಗಲು ನೆರವಾಗಿದೆ.[11] ಕಾಳಹಸ್ತಿಯ ದೇವಾಲಯದ ಅಧಿಕಾರಿಗಳು, ದೇವಾಲಯಕ್ಕೆ ರಾಮಭಟ್ಟ ಅಯ್ಯನ್‌ರಿಂದ ಸಂದಾಯವಾದ ಕಾಣಿಕೆ 4000 ಪಣಂ ಅನ್ನು ದೇವದಾನ ಗ್ರಾಮದ ಕೆರೆ ಮತ್ತು ಅಲ್ಲಿನ ಅಚ್ಚುಕಟ್ಟು ಭೂಮಿಯನ್ನು ಉತ್ತಮಪಡಿಸಲು ವಿನಿಯೋಗಿಸಿರುವುದು ದಾಖಲಾಗಿದೆ.[12] ಹನುಮಂತಯ್ಯ ಎಂಬುವರು ಕಾಳಹಸ್ತಿಯ ದೇವಾಲಯದ ದೇವಸನ್ನಿಧಿಗೆ ತಮ್ಮ ಮಾತಾಪಿತೃಗಳಿಗೆ ಪುಣ್ಯವಾಗಲೆಂದು ಅರ್ಪಿಸಿದ 1020 ಪಣಂ ಮೊತ್ತವನ್ನು ಪನ್ನಾಲಿಗ್ರಾಮದ ಕೆರೆ ಮತ್ತು ಅಚ್ಚುಕಟ್ಟನ್ನು ಪುನಶ್ಚೇತಗೊಳಿಸಲು ವಿನಿಯೋಗಿಸಿರುವುದು ದಾಖಲಾಗಿದೆ.[13] ಹೀಗಾಗಿ ದೇವಾಲಯಗಳು ಸ್ವೀಕರಿಸಿದ ದೇಣಿಗೆ/ಕಾಣಿಕೆಗಳು ಕೃಷಿ ಮತ್ತು ನೀರಾವರಿ ಸೌಲಭ್ಯಗಳನ್ನು ವಿಸ್ತರಿಸಲು, ಉತ್ತಮಪಡಿಸಲು ವಿನಿಯೋಗಿಸಿರುವುದು ಕಂಡುಬಂದಿದೆ.

ಮೊಸಾಪುರದ ತಮ್ಮಣ್ಣ ಒಡೆಯರ್ 12000 ಪಣಂ ಮೊತ್ತವನ್ನು ಶ್ರೀ ವೆಂಕಟೇಶ್ವರ ಸನ್ನಿಧಿಗೆ ಸಲ್ಲಿಸಿದ ಮೊತ್ತ ಕೆರೆ-ಕಾಲುವೆಗಳು ದುರಸ್ತಿಗಾಗಿ ಬಳಸಿಕೊಳ್ಳಲಾಗಿದೆ.[14] ಮಕರ ಸಂಕ್ರಮಣ ಕಾಲದ ಸೇವೆಗಳಿಗಾಗಿ ವ್ಯಕ್ತಿಯೋರ್ವ 250 ಪಣಂ ಮೊತ್ತವನ್ನು ದೇಣಿಗೆಯಾಗಿ ನೀಡುತ್ತಾನೆ. ಆ ಮೊತ್ತವನ್ನು ಕೆರೆಯ ದುರಸ್ತಿ ಮತ್ತು ಅಚ್ಚುಕಟ್ಟಿನ ನಿರ್ವಹಣೆಗಾಗಿ ಬಳಸಿಕೊಂಡಿರುವುದು ದಾಖಲಾಗಿದೆ.[15] ಕ್ರಿ.ಶ. 1507ರ ತಿರುಪತಿಯ ಒಂದು ಶಾಸನದಲ್ಲಿ ತಿಪ್ಪಶೆಟ್ಟಿ ಎಂಬ ವ್ಯಾಪಾರಿ 8305 ಪಣ(ಚಿನ್ನದ ನಾಣ್ಯ)ವನ್ನು ದೇವಾಲಯದ ಖಜಾನೆಗೆ ಹೂಡಿ, ಆ ಗ್ರಾಮದ ಕೆರೆ-ಕಾಲುವೆಗಳನ್ನು ದುರಸ್ತಿ ಮತ್ತು ನಿರ್ವಹಣೆಗಾಗಿ ವಿನಿಯೋಗಿಸಿರುವುದು ದಾಖಲಾಗಿದೆ.[16]

ಮುಲಿಕನಾಡುವಿನ ಪೆಂಡ್ಲಿಮಾಲಿಗ್ರಾಮದ ಕೆರೆಯ ಏರಿ ದುರಸ್ತಿ ಮತ್ತು ನಿರ್ವಹಣೆಗಾಗಿ ಭೂಮಿ ದಸವಂದ ರೂಪದಲ್ಲಿ ಮಲ್ಲಣ್ಣ ಮತ್ತು ಇತರರಿಗೆ ನೀಡಲಾಗಿತ್ತು. ಈ ಕಾಮಗಾರಿಯ ಒಟ್ಟು ವೆಚ್ಚ 300 ಸಿಂಗಾಯ-ಮಾದ ಆಗಿದ್ದು, ಅಷ್ಟು ಮೊತ್ತಕ್ಕೆ ಸಮನಾದ ಮೌಲ್ಯದ ಭೂಮಿಯನ್ನು ನೀಡಲಾಗಿದ್ದನ್ನು ದಾಖಲಿಸಿದೆ.[17] ಚಿತ್ತೂರಿನ ಒಂದು ಶಾಸನದಲ್ಲಿ ಮಲ್ಲಣ್ಣ ಒಡೆಯರ್ ನಿರೂಪದ ಮೇರೆಗೆ ಮಾದಿ ಅರಸರ್ ಎಂಬ ವ್ಯಕ್ತಿ ಪಗನವೇಡು ಕೆರೆಯ ಮೀನಿನ ಮಾರಾಟದಿಂದ ಒಂದೂವರೆ 100 ಪಣ ಆ ಕೆರೆಯಾ ಹೂಳು ತೆಗೆಸಲು ವಿನಿಯೋಗಿಸಿದ್ದನ್ನು ದಾಖಲಿಸಿದೆ.[18] ತಿರುಪ್ಪನಗೂಡು ದೇವಾಲಯದ ಅಧಿಕಾರಿಗಳು ಅಲ್ಲಿನ ಕೆರೆ ಒಡೆದುಹೋಗಿದ್ದು, ಅಚ್ಚುಕಟ್ಟು ಪ್ರದೇಶ ಸಾಗುವಳಿಯಾಗದೆ, ದೇವಾಲಯಗಳ ಆದಾಯಕ್ಕೆ ತೀವ್ರ ಖೋತಾ ಆಗಿದ್ದಿತು. ಹೀಗಾಗಿ ದೇವಾಲಯ ತನ್ನ ಹಲವು ಭೂಮಿಗಳನ್ನು ಮಾರಾಟ ಮಾಡಿ, 3500 ಪಣಂ ಹಣವನ್ನು ಕೆರೆ ಕಟ್ಟಿಸಿ ದುರಸ್ತಿಗಾಗಿ ಹೂಡಿಕೆ ಮಾಡಿರುವುದು ದಾಖಲಾಗಿದೆ.[19] ಇಲ್ಲಿ ದೇವಾಲಯವೇ ತನ್ನ ಆಸ್ತಿಯೊಂದನ್ನು ಮಾರಾಟ ಮಾಡಿ ಸಂಪನ್ಮೂಲ ರೂಡಿಸಿಕೊಂಡು, ಅದನ್ನು ನೀರಾವರಿ ಕಾಮಗಾರಿ ದುರಸ್ತಿಗಾಗಿ ಬಳಸಿಕೊಂಡಿರುವುದು ಕಂಡು ಬಂದಿದೆ.

ಉತ್ತರ ಆರ್ಕಾಟ್ ಶಾಸನವೊಂದರಲ್ಲಿ ತಮ್ಮ ನಾಯಕನ ಪ್ರತಿನಿಧಿ, ವಿರೇಪಲ್ಲಿ ಮುಕುಂದರೆಡ್ಡಿಗೆ, ಕೆರೆ ಏರಿಯ ಮೇಲಿನ ಮರಗಳ ಉತ್ಪನ್ನದಿಂದ ಬಂದ ಆದಾಯ ಮತ್ತು ಮೀನು ಮಾರಾಟದಿಂದ ಬಂದಂತಹ 100 ಪಣಂ ಆದಾಯವನ್ನು ಓಡಲಿತಡಿ ಕೆರೆ ದುರಸ್ತಿಗಾಗಿ ಬಳಸಲು ಆದೇಶಿಸಿದ್ದನ್ನು ದಾಖಲಿಸಿದೆ.[20] ಹೀಗಾಗಿ ಸ್ಥಳೀಯ ಆಡಳಿತ ಘಟಕದ ಅಧಿಕಾರಿಗಳು, ಸ್ಥಳೀಯ ಹಂತದಲ್ಲೇ ಲಭ್ಯವಾಗುವ ಸಂಪನ್ಮೂಲಗಳನ್ನು ಕ್ರೋಢೀಕರಣಗೊಳಿಸಿಕೊಂಡು ನೀರಾವರಿ ಕಾಮಗಾರಿಗಳ ನಿರ್ವಹಣೆ ಕೈಗೊಂಡಿರುವುದು ವೇದ್ಯವಾಗುತ್ತಿದೆ.

ಕೃಷ್ಣಾಜಿನದ ಖಜಾನೆ ಅಧಿಕಾರಿ ಗೆಲುಪು ವೆಂಕಟಪತಿರಾಜುವಿನ ಮಡದಿ 10 ವರಾಹಗಳನ್ನು ಶ್ರೀ ಪೆರೆಂಬೂರಿನ ಇಬ್ಬರ ವ್ಯಕ್ತಿಗಳಲ್ಲಿ ಠೇವಣಿ ಇರಿಸಿ, ಅದರಿಂದ ಬಂದಂತಹ ಬಡ್ಡಿಯಿಂದ ದೇವಾಲಯದ ಹಲವು ಸೇವೆಗಳನ್ನೇ, ನೀರಾವರಿ ಕಾಮಗಾರಿಗಳ ದುರಸ್ತಿ ಕೈಗೊಳ್ಳಬೇಕೆಂದು ಆದೇಶಸಿದ್ದು ಗಮನಾರ್ಹ.[21]

ಧಾರ್ಮಿಕ ಮಹೋನ್ನತಿ ಉದ್ದೇಶವೇ ದಾನ, ದೇಣಿಗೆಗಳಲ್ಲಿ ಪ್ರಧಾನ ಪಾತ್ರವಹಿಸಿರುವುದು. ಅದು ನೀರಾವರಿ ಕಾಮಗಾರಿಗಳಲ್ಲಿ ಸ್ಪಷ್ಟವಾಗಿ ಗೋಚರವಾಗಿದೆ. ಈ ನಿಟ್ಟಿನಲ್ಲಿ ಹಲವು ವ್ಯಕ್ತಿಗಳು ಸ್ವಯಂಪ್ರೇರಿತರಾಗಿ, ನೇರವಾಗಿ ತಮ್ಮ ಹಣವನ್ನು ನೀರಾವರಿ ಕಾಮಗಾರಿಗಳ ಅಭಿವೃದ್ಧಿ ಮತ್ತು ನಿರ್ವಹಣೆಗಾಗಿ ಹೂಡಿಕೆ ಮಾಡಿರುವುದು ಕುರಿತಂತೆ ಹಲವು ಶಾಸನಗಳು ಬೆಳಕು ಚೆಲ್ಲುತ್ತವೆ. ಕಡಲಗೇರೆ ಮತ್ತು ಕೃಷ್ಣದೇವ ಒಡೆಯರ್ ಕೆರೆ ಒಡೆದು ಹೋಗಿದ್ದು, ದುಸ್ಥಿತಿಯಲ್ಲಿನ ಕೆರೆಗಳನ್ನು ಪೇರಿರಾಜ ಎಂಬುವನು ತನ್ನ ಸ್ವಂತ ಹಣದಿಂದ ಕಡಲಗೆರೆಗೆ 100 ಗದ್ಯಾಣ ಮತ್ತು ಕೃಷ್ಣದೇವ ಒಡೆಯರ್ ಕೆರೆಗೆ 50 ಗದ್ಯಾಣ ವ್ಯಯಮಾಡಿ ದುರಸ್ತಿಪಡಿಸುತ್ತಾನೆ.[22] ಬೆಂಗಳೂರು ಜಿಲ್ಲೆಯ ಹೊಸಕೋಟೆ ತಾಲ್ಲೂಕಿನ ಕೊರಟಿಯ ದೊಡ್ಡಕೆರೆಯನ್ನು ಸುಬ್ಬರಾಯ ಎಂಬುವನು ತನ್ನ ಸ್ವಂತ ವೆಚ್ಚದಿಂದ 150 ಗದ್ಯಾಣ ವ್ಯಯಮಾಡಿ ದುರಸ್ತಿಪಡಿಸಿದನೆಂದು ಅದಕ್ಕಾಗಿ ಕಟ್ಟು–ಕೊಡುಗೆ ರೂಪದಲ್ಲಿ ಪ್ರತಿಫಲ ಪಡೆಯುತ್ತಾನೆ. ಕುಪ್ಪ ವೆಂಕಟ್ಟಿರಸು ಮತ್ತು ವೆಂಕಟ್ಟನಿವಾರ ಸಿದ್ದಾಯಿನ್ 400 ಪಣ ವೆಚ್ಚದಲ್ಲಿ ನೀರಾವರಿ ಕಾಲುವೆಯೊಂದನ್ನು ತೋಡಿಸಿರುವುದು ಕಂಡುಬಂದಿದೆ.[23] ಸೀಗಲ್‌ನಾಡು ಮಹಾಪ್ರಭು ಅಳ್ಳಾಳಗೌಡ ಇರುಕೊವ್ವೆಗ್ರಾಮದ ದೇವಾಲಯದ ಕೆರೆ ದುರಸ್ತಿಗಾಗಿ 1000 ಪಣವನ್ನು ದೇಣಿಗೆಯಾಗಿ ನೀಡಿದ್ದು ದಾಖಲಾಗಿದೆ.[24]

ಒಬ್ಬ ಅಧಿಕಾರಿ ಮಹಾಮಂಡಲೇಶ್ವರ ಶ್ರೀ ವೀರಚಿಕ್ಕ ಒಡೆಯರ್ 100 ಚಿನ್ನದ ನಾಣ್ಯಗಳನ್ನು ಹೂಡಿಕೆ ಮಾಡಿ, 50 ಖಂಡುಗ ಭತ್ತವನ್ನು ವ್ಯಯಿಸಿ ಕೆರೆಯೊಂದನ್ನು ನಿರ್ಮಿಸಿದನೆಂದು ದಾಖಲಾಗಿದೆ.[25]

ಒಬ್ಬ ಮಹಾಮಂಡಲೇಶ್ವರ ಶ್ರೀತೆರೆಂಬೂರಿನ ಕೆರೆಯೊಂದನ್ನು ದುರಸ್ತಿಗೊಳಿಸಿ, ಆ ಕೆರೆಯ ನೀರಿನ ಸಂಗ್ರಹಣಾ ಸಾಮರ್ಥ್ಯ ಹೆಚ್ಚಿಸಲು 150 ಪಣ ವ್ಯಯಿಸಿದನೆಂದು, ಹಾಗೂ ಅಚ್ಚುಕಟ್ಟು ವಿಸ್ತರಣೆಯಿಂದಾಗಿ ಬರುವ ಹೆಚ್ಚುವರಿ ಆದಾಯವನ್ನು ಆದಿಕೇಶವ ದೇವಾಲಯದ ಸೇವೆಗಳಿಗಾಗಿ ಮೀಸಲು ಇಡಲು ಆದೇಶಿಸುತ್ತಾನೆ.[26]

ಚೆಲ್ಲಿಪರಾಯ ದೇವಾಲಯದ ಹೊಸದೊಂದು ಕೆರೆ ಒಡೆದುಹೋದಾಗ, ಲಕ್ಷ್ಮಿಪತಿಶೆಟ್ಟಿ ಎಂಬುವನು ದುರಸ್ತಿಪಡಿಸಿ, ತೂಬನ್ನು ಇರಿಸಿ, ಕೋಡಿಯನ್ನು ಭದ್ರಪಡಿಸಿದನೆಂದು, ಇದಕ್ಕಾಗಿ ಅವನು 300 ಗದ್ಯಾಣವನ್ನು ವ್ಯಯಿಸಿದ್ದನೆಂದು ಶಾಸನ ಉಲ್ಲೇಖಿಸಿದೆ.[27] ಹೀಗಾಗಿ ವ್ಯಕ್ತಿಗಳು ಕೈಗೊಂಡ ನೀರಾವರಿ ಕಾಮಗಾರಿಗಳು ವೆಚ್ಚದ ಪ್ರಮಾಣ ಹಲವೇ ಶಾಸನಗಳಲ್ಲಿ ಉಲ್ಲೇಖಿಸಿಗೊಂಡಿರುವುದು. ಖಾಸಗಿ ಪ್ರಯೋಜಕತ್ವದ ಸ್ವರೂಪ ಮತ್ತು ಪ್ರಮಾಣದ ಸ್ಥೂಲ ಪರಿಚಲಯ ಮಾಡಿಸುತ್ತದೆ. ದೇವಾಲಯದ ಒಡೆತನಕ್ಕೆ ಸೇರಿದ ಕೆರೆಯ ದುರಸ್ತಿಗಾಗಿ ವ್ಯಯಿಸಿದ್ದ 1000 ಪಣಂ ಮೊತ್ತವನ್ನು ವಂತಿಗೆಯಾಗಿ ವ್ಯಕ್ತಿಯೋರ್ವ ನೀಡಿದ್ದು ದಾಖಲಾಗಿದೆ.[28]

ನೀರಾವರಿ ಚೌಕಟ್ಟು ಸಾಮ್ರಾಜ್ಯದಾದ್ಯಂತ ವಿಸ್ತೃತವಾಗಿ ಅಭಿವೃದ್ಧಿ ಹೊಂದಿದ್ದಿತು. ಸ್ವಾಭಾವಿಕವಾಗಿ ಈ ತೆರನಾದ ನೀರಾವರಿ ಕಾಮಗಾರಿಗಳು ಕೇಂದ್ರ ಸ್ಥಾನದಲ್ಲಿ (core region)ನಲ್ಲಿ ಅತ್ಯಂತ ವ್ಯವಸ್ಥಿತ ಮತ್ತು ವ್ಯಾಪಕವಾಗಿ ಕಂಡುಬಂದಿವೆ. ಪ್ರಭುತ್ವವೇ ನೇರವಾಗಿ ಅಗತ್ಯವಾದ ಆರ್ಥಿಕ, ಮಾನವ ಮತ್ತು ತಾಂತ್ರಿಕ ಸಂಪನ್ಮೂಲಗಳನ್ನು ಹೂಡಿಕೆ ಮಾಡಿರುವುದು ಕಂಡು ಬಂದರೂ, ನಿರ್ದಿಷ್ಟ ಮೊತ್ತ ಪ್ರಮಾಣಗಳು ಎಲ್ಲೂ ಉಲ್ಲೇಖಿತಗೊಂಡಿಲ್ಲ! ತನ್ನ ಅಧೀನ ಪ್ರದೇಶ ಮತ್ತು

ಸಾಮ್ರಾಜ್ಯದಾದ್ಯಂತ ಸ್ಥಳೀಯ ಆಡಳಿತ ಘಟಕಗಳೇ ಸ್ವತಂತ್ರವಾಗಿ, ಪ್ರಭುತ್ವದ ಪರವಾಗಿ, ನೀರಾವರಿ ಚಟುವಟಿಕೆಗಳಿಗೆ ಪ್ರೋತ್ಸಾಹದಾಯಕ ಪಾತ್ರವಹಿಸಿವೆ. ಪ್ರಾದೇಶಿಕ ಸಾಮಂತರು, ಆಡಳಿತಾಧಿಕಾರಿಗಳು ಸ್ವಂತ ನೆಲೆಯಲ್ಲಿ ಧಾರ್ಮಿಕ ಮಹೋನ್ನತಿ ಉದ್ದೇಶ ಮತ್ತು ಆಶಯಗಳೊಂದಿಗೆ ನೀರಾವರಿ ಕಾಮಗಾರಿಗಳಲ್ಲಿ ತೊಡಗಿಸಿಕೊಂಡಿರುವುದು ಕಂಡುಬಂದಿದೆ. ವ್ಯಕ್ತಿಗಳು ಮತ್ತು ದೇವಾಲಯಗಳು ತಮ್ಮ ದಾನ, ಕಾಣಿಕೆಗಳನ್ನು ಕೃಷಿ–ನೀರಾವರಿ ಚಟುವಟಿಕೆಗಳಲ್ಲಿ ವಿನಿಯೋಗಿಸಿ ಅಭಿವೃದ್ಧಿ ಪಥಕ್ಕೆ ವಿಶೇಷ ಅಭಿದಾನ ನೀಡಿರುವುದು ಗಮನಾರ್ಹ.

ಇಂದಿನ ದಿನಗಳಲ್ಲಿಯೂ ಅಪಾರ ಪ್ರಮಾಣದ ಐಶ್ವರ್ಯ ಹೊಂದಿರುವ ದೇವಾಲಯಗಳು, ಇಂತಹ ಪಾರಂಪರಿಕ ಪ್ರಕ್ರಿಯೆಗಳಿಂದ ದೇವಾಲಯಗಳ ಆಡಳಿತಾಧಿಕಾರಿಗಳು ಸ್ಫೂರ್ತಿ ಮತ್ತು ಪ್ರೇರಣೆ ಪಡೆಯುವುದೇ?

ಆಧಾರಸೂಚಿ ಮತ್ತು ಟಿಪ್ಪಣಿಗಳು

1. Buston Stein : The State and Agration order in Medievd Indian
   -A Historiographical Critique.
   -Essays on South India(ed.) p-76.
2. Ronilla Thoper : From Lineage to State. Oxford University Press, Bombay 1984, P-136.
3. Burton Stein : Essays on South India Op. cit-p.77
4. ನಾಗರಾಜ ಟಿ.ವಿ. : "ವಿಜಯನಗರ ಸಾಮ್ರಾಜ್ಯದಲ್ಲಿ ನೀರಾವರಿ ಕಾಲುವೆಗಳು – ಒಂದು ವಿಶ್ಲೇಷಣೆ." ವಿಜಯನಗರ ಅಧ್ಯಯನ ಸಂಪುಟ 14, (ಸಂ) ಡಾ. ಆರ್ ಗೋಪಾಲ್ ಮತ್ತು ಇತರರು. 2010 ಪುಟ.285.
5. Mahalingam T.V. : Economic life in Vijayanagara Empire 1951, p-77.
6. Buston Stein : Essays on South India Op.cit.73.
7. Buston Stein : Ibid.
8. Thirumala- TTDI-Vol-I-No.190. P-289.
9. Thirumala-TTDI-Vol-II. No.52, TT, P.76.
10. Thirumala-TTDI-Vol-II, No152.TT, p-13
11. Thirumala-ARSIE-1924, App-C. No.180. p-56.
12. Chittor ARISE 1924, Appc No.152, P-54.
13. Thirumala TTDI, Vol-V-No.400, GT P. 200.
14. Chittor ARSIE-App C. No.153, P-54.
15. TTDI Vol-III-No.11.
16. Cudapha ARSIE-1938-39-APP-No.407.
17. Chittor ARSIE-1943-44-App-B.No.167 P-25.
18. Nellore ARSIE-1906 APP B-251, P-29.
19. North Arcot-ARSIE-1914-42 Arp B No.146. P-145.
20. Chinglepet-ARSIE-1922-App B-195, P-72.
21. Epigrapia Coarnatia, Mandya, Vol-VI ಪಾಂಡವಪುರ 138.
22. EC IX, Hosakote-44.
23. Thirumala TTDI Vol-V No.35, GT-P.170.
24. E.C. Vol.IX, Kanakanahalli No.97.
25. E.C. Vol XII – Sira – P.303.
26. Chinglepet – ARSIE 1922, APP B-201, P-149.
28. E.C. Mandya VI, Pandavapura – 135.
29. Thirumala TTDI Vol-II-No.152, TT. P-13.

30. ವಿಜಯನಗರ ಕಾಲದ ಗದಗ ಜಿಲ್ಲೆಯ ಶಾಸನಗಳ ಸಾಂಸ್ಕೃತಿಕ ಮಹತ್ವ :

– ಡಾ. ಎಚ್.ಈ. ಬಸವರಾಜಪ್ಪ

ಕರ್ನಾಟಕ ಸಾಂಸ್ಕೃತಿಕ ಚರಿತ್ರೆಯ ನಿರ್ಮಾಣವೆಂದರೆ ಸಮಸ್ತ ವಸ್ತು ವಿವರಗಳ ವ್ಯಾಖ್ಯಾನವೆಂದೇ ಅರ್ಥ 'ಬಖೈರು' 'ಕೈಫಿಯತ್ತು' 'ಪ್ರವಾಸಿಗರ ಬರಹಗಳು' 'ಶಾಸನಗಳು' ಸಬಾಲ್ಟ್ರನ್ ಅಧ್ಯಯನಕ್ಕೆ ಹೊಸ ಬಗೆಯ ಆಕರಗಳಾಗಿರುವುದನ್ನು ನಾವು ಗಮನಿಸಿದ್ದೇವೆ. ಈ ಬಗೆಯ ಬಹುಶಿಸ್ತೀಯ ಅಧ್ಯಯನಗಳು ಕಳೆದ ಹಾಗೂ ಈ ದಶಕದ ಚಾರಿತ್ರಿಕ ಅಧ್ಯಯನಕ್ಕೆ ಹೊಸ ಬೆಳಕನ್ನೂ ನೀಡಿವೆ. ವಿಜಯನಗರ ಸಾಮ್ರಾಜ್ಯದ ಹಾಗೂ ಅದರ ವಿವಿಧ ಭಾಗಗಳ ರಾಜಕೀಯ, ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಚರಿತ್ರೆಯನ್ನು ಕಟ್ಟಿಕೂಡುವ ಅಧ್ಯಯನಗಳು ನಡೆದಿವೆ. ಈ ದೃಷ್ಟಿಯಿಂದ ವಿಜಯನಗರ ಸಾಮ್ರಾಜ್ಯದ ಆಡಳಿತಕ್ಕೆ ಸೇರಿದ್ದ ಗದಗ ಪ್ರದೇಶದ ಶಾಸನಗಳ ಸಾಂಸ್ಕೃತಿಕ ಮಹತ್ವವನ್ನು ಕುರಿತು ವಿವೇಚಿಸುವ ಪ್ರಯತ್ನ ಮಾಡಲಾಗಿದೆ. ಕ್ರಿ.ಶ. 1336 ರಿಂದ 1565ರವರೆಗೆ ಸುಮಾರು 229 ವರ್ಷಗಳ ಬಹು ದೀರ್ಘವಾದ ಅವಧಿವರೆಗೆ ಈ ವಿಶಾಲವಾದ ರಾಜ್ಯವು ಅಸ್ತಿತ್ವದಲ್ಲಿತ್ತು.

ಕ್ರಿ.ಶ. 1336ರಲ್ಲಿ ವಿಜಯನಗರ ಸಾಮ್ರಾಜ್ಯ ಸ್ಥಾಪಿತವಾಯಿತು. ಈ ಸಾಮ್ರಾಜ್ಯವನ್ನು ಪ್ರಮುಖ ನಾಲ್ಕು ಮನೆತನಗಳು ಆಳಿದವು. ಗದಗ ಪ್ರದೇಶದಲ್ಲಿ ವಿಜಯನಗರ ಅರಸರ ಶಾಸನಗಳು ಸಂಖ್ಯಾದೃಷ್ಟಿಯಿಂದ ಕಡಿಮೆ ಇದ್ದರೂ ಅವು ಸಾಂಸ್ಕೃತಿಕ ಮಹತ್ವ ಪಡೆದಿವೆ.ಗದಗ ತಾಲೂಕಿನ ಕಣವಿ, ಕಲ್ಲೂರ, ಕಳಸಾಪೂರ, ಗದಗ, ಸೊರಟೂರ ಮತ್ತು ಹೊಂಬಳ, ರೋಣ ತಾಲೂಕಿನ ಸವಡಿ, ನರಗುಂದ ತಾಲ್ಲೂಕಿನ ಚಿಕ್ಕನರಗುಂದ ಮತ್ತು ನರಗುಂದ ಶಿರಹಟ್ಟಿ ಪ್ರದೇಶದ ಲಕ್ಷೇಶ್ವರ ಈ ಪ್ರದೇಶಗಳಲ್ಲಿ ವಿಜಯನಗರದ ಅರಸರ ಶಾಸನಗಳು ದೊರೆತಿವೆ. ಕ್ರಿ.ಶ. 1356ರ 1ನೇ ಹರಿಹರನ ಕಾಲದ ಲಕ್ಷ್ಮೇಶ್ವರದ ಶಾಸನವು ಚಿಕ್ಕಕೆರೆಯ ನಾಯಕನಿಂದ ಸೋಮಯ್ಯ ದೇವಾಲಯದ ಜೀರ್ಣೋದ್ಧಾರದ ವಿವರ ತಿಳಿಸುತ್ತದೆ. ಇಮ್ಮಡಿ ಹರಿಹರನು ಗದುಗಿನ 22 ಗ್ರಾಮಗಳನ್ನು ವೀರನಾರಾಯಣ ಹಾಗೂ ತ್ರಿಕೂಟೇಶ್ವರ ದೇವಾಲಯದ ನಿರ್ವಹಣೆಗೆ ಉಂಬಳಿಯಾಗಿ ನೀಡಿದ ಬಗ್ಗೆ ಕ್ರಿ.ಶ. 1379ರ ಶಾಸನ ದಿಂದ ತಿಳಿದು ಬರುತ್ತದೆ. ಕ್ರಿ.ಶ.1407ರ 2ನೇ ಹರಿಹರನ ಕಾಲದ ಎರಡು ಶಾಸನಗಳು ಸಿಕ್ಕಿವೆ. ಕಣವಿ ವೀರಗಲ್ಲಿನ1 ಶಾಸನದಲ್ಲಿ ಕೆಲಾರಿ ಸಾಯಿನಾಯಕನ ಮಗ ದೇವೆನಾಯಕ ಮತ್ತು ಆತನ ಹೆಂಡತಿಯರಾದ ನಾಗಾಯಿ ದೇಮಾಯಿಯರು ಮಹಾಸತಿಯರಾದ ಮರಣದ ವಿಷಯ ಸ್ಪಷ್ಟವಾಗಿದೆ. ಸತಿ ಆಚರಿಸಿ ಮಹಾಸತಿಯರಾಗಿ ಪತಿಯ ಸಂಗಡ ಸ್ವರ್ಗಸ್ಥರಾದರೆಂದು ತಿಳಿದುಬರುತ್ತದೆ. ಹೀಗೆ ಪತಿ ಸತ್ತ ನಂತರ ಸತಿಯೊಬ್ಬಳು ಆತನ ಚಿತೆ ಏರಿ ಸಾಯುವುದುನ್ನು ಮಹಾಸತಿ ಶಾಸನ ತಿಳಿಸುತ್ತದೆ. ಗಣ್ಯವರ್ಗದ ಸ್ತ್ರೀಯರು ಅವರ ಪತಿಯು ಸತ್ತಾಗ ಅಥವಾ ಯುದ್ಧದಲ್ಲಿ ಕೊಲೆಯಾದಾಗ ಸತಿಯನ್ನಾಚರಿಸುತ್ತಿದ್ದರು. ಇತರ ಸಮುದಾಯಗಳ ಮಹಿಳೆಯರೂ ಅವರ ಮಾದರಿಯನ್ನು ಅನುಸರಿಸುತ್ತಿದ್ದರು. ಅದು ತಮಗೆ ದೊಡ್ಡ ಗೌರವದ, ಪುಣ್ಯಪ್ರದವಾದ ಕಾರ್ಯ ಎಂದು ಅವರು ಭಾವಿಸಿದ್ದರು.ಆದರೆ ಕೆಳಜಾತಿಗಳಲ್ಲಿ ಸತಿ ಆಚರಣೆ ಇರಲಿಲ್ಲ. ಬೆಟಗೇರಿಯ ಒಂದು ವೀರಗಲ್ಲಿನಲ್ಲಿ ಅಪ್ಸರೆಯು ತನ್ನ ಕೂದಲನ್ನು ಪೂರ್ತಿಯಾಗಿ ಹಿಂದಕ್ಕೆ ಬಾಚಿಕೊಂಡು ತಲೆಯ ಮೇಲ್ಭಾಗದಲ್ಲಿ ಕುಪ್ಪೆಯಂತೆ ಕೂಡಿಸಿ ಕೊಂಡಿದ್ದಾಳೆ. ಮಹಾಸತಿಯರ ಮುಡಿಗಳಂತೆ ಅಪ್ಸರೆಯರ ಮುಡಿಗಳೂ ಬಹಳ ವಿಶೇಷವಾಗಿರುತ್ತವೆ.

ಕ್ರಿ.ಶ. 1392ರ ಲಕ್ಷ್ಮೇಶ್ವರ ಶಾಸನದಲ್ಲಿ[2] ಕುಮಾರ ಶಿವರಾಮಯ್ಯನ ಸೇವಕ ಕೇಯಿದೇವನ ಮಗನಾದ ಬೈಯಿಕದೇವನು ಸೋಮೇಶ್ವರಗುಡಿಯ ದಕ್ಷಿಣದ್ವಾರವನ್ನು ಜೀರ್ಣೋದ್ಧಾರ ಮಾಡಿದನು. ಕ್ರಿ.ಶ.1412ರ ಲಕ್ಷ್ಮೇಶ್ವರ ಶಾಸನದಲ್ಲಿ[3] "ಶ್ರೀಮದ್ರಾಜಾಧಿರಾಜ ಪರಮೇಶ್ವರ ಶ್ರೀ ವೀರಪ್ರತಾಪ ಹರಿಹರ ಮಹಾರಾಯರ ಕುಮಾರರು ದೇವರಾಯರು ಪೃಥ್ವೀರಾಜ್ಯಗೈವಲ್ಲಿ" ಎಂಬ ಉಲ್ಲೇಖವಿದೆ. 2ನೇ ದೇವರಾಯನ ಕಾಲದ ಸವಡಿ[4] ಶಾಸನವು ಬಾಗಿಲವಾಡದ ತಿಪನನಾಯಕನಮಗ ಚವುಟಯ್ಯ ನಾಯಕನು ಬಾದಾಮಿ ಸೀಮೆಯ ಸವಡಿ ಗ್ರಾಮದ ತ್ರಿಮೂರ್ತಿ ದೇವಾಲಯದ ಜೀರ್ಣೋದ್ಧಾರ ಮಾಡಿದ ವಿಷಯವನ್ನು ಉಲ್ಲೇಖಿಸುತ್ತದೆ.

ಕ್ರಿ.ಶ.1420ರ ಮುಳಗುಂದ ಶಾಸನದಲ್ಲಿ[5] ಮುಳಗುಂದದ ಬುಳಶೆಟ್ಟಿಯ ಮಗ ಕೇಶಪ್ಪನು ಸ್ವರ್ಗಸ್ಥನಾದುದರ ಪ್ರಯುಕ್ತ ನಿಷಧಿಗಲ್ಲನ್ನು ಹಾಕಿಸಿದ ವಿವರವಿದೆ. ಕಲ್ಲೂರ ಶಾಸನ6 ಮುಳಗುಂದ ಪ್ರದೇಶಕ್ಕೆ ಸಂಬಂಧಿಸಿದ ಕಲ್ಲೂರ ಗ್ರಾಮವನ್ನು ಚವಡಿ ಕದಂಬ ನಾಯಕನು ಜೇಕನಕಟ್ಟಿಯ ಹುತ್ತದ ಮಲ್ಲಿಕಾರ್ಜುನ ದೇವರಿಗೆ ದಾನ ನೀಡಿದ ವಿವರವಿದೆ. ಕ್ರಿ.ಶ. 1519ರ ಗದಗ ಶಾಸನವು[6] ಕೃಷ್ಣದೇವರಾಯನ ಬಗ್ಗೆ ಮಾಹಿತಿ ನೀಡುತ್ತದೆ. ಹಾಗೂ ಅರವಟ್ಟಿಗೆಗಳಿಗಾಗಿ ಭೂದಾನ ನೀಡಿದ್ದನ್ನು ಉಲ್ಲೇಖಿಸಿದೆ. ಅಲ್ಲದೆ ರೋಣ ಪ್ರದೇಶದ ಗಾಡಗೂಳಿ ಶಾಸನದಲ್ಲಿ[7] ಕೃಷ್ಣದೇವರಾಯನು ಭೂದಾನ ಮಾಡಿದ ವಿವರವಿದೆ. ಕ್ರಿ.ಶ. 1519ರ ಶಾಸನ ವಿಜಯನಗರ ಅರಸ ಕೃಷ್ಣದೇವರಾಯನ ಆಳ್ವಿಕೆಯ ಕಾಲದಲ್ಲಿ ಅರವಟ್ಟಿಗೆ ಮಾನ್ಯದ ಹೊಲದ ಧರ್ಮ ಶಾಸನದಲ್ಲಿ[8] (ಗದಗ, ಎಸ್.ಐ.ಐ. 18.ಶಾ.ಸಂ 283, ಕ್ರಿ.ಶ.1539) ಗದಗಿನ ವೀರನಾರಾಯಣ ತೇರಬೀದಿಯ ಒಳಗಣ ಕೋಟೆಯ ಮುಂದೆ ಒಂದು ಅರವಟ್ಟಿಗೆ, ಬೆಟಗೇರಿ ಮತ್ತು ಬೆನಕೋಪ್ಪ ಗ್ರಾಮಗಳ ನಡುವಿನ ಉಭಯ ಮಾರ್ಗದ ದಾರಿಯಲ್ಲಿ ಒಂದು ಅರವಟ್ಟಿಗೆ ಹೀಗೆ ಒಟ್ಟು ಎರಡು ಅರವಟ್ಟಿಗೆಗಳಿಗೆ ಬೆಟಗೇರಿಯ ಪೂರ್ವದಲ್ಲಿ ನಾಗಸಮುದ್ರದ ದಕ್ಷಿಣದಲ್ಲಿ ಲಕ್ಷ್ಮೀನಾರಾಯಣಪುರಕ್ಕೆ ಹೋಗುವ ಕಾಲುದಾರಿಯ ಉತ್ತರಕ್ಕೆ ಈ ನಾಲ್ಕ ಸೀಮೆಯ ನಡುವೆ ಬರುವ ಕೊಳದ ಬಳಿಯ ಭೂಮಿಯನ್ನು ಅರವಟ್ಟಿಗೆಯ ನಿರ್ವಹಣೆಗಾಗಿ ನೀಡಲಾಗಿದೆ. ಈ ಅರವಟ್ಟಿಗೆಗೆ ಕೊಟ್ಟ ಮಾನ್ಯದ ಹೊಲವನ್ನು ವಂಶಪಾರಂಪರ್ಯವಾಗಿ ಉಂಬಳಿಯಾಗಿ ಅನುಭವಿಸಬೇಕೆಂದು ಶಾಸನದಿಂದ ತಿಳಿದು ಬರುತ್ತದೆ. ಈ ಭೂಮಿ ದಾನವನ್ನು ಬಾಗಿಲನಾಯಕನ ಮಗ ನಾಯನಪ್ಪ ನಾಯಕನು ಪರುವತ್ತೊಡೆಯರಿಗೆ ದಾನ ನೀಡಿದನು. ಈ ದಾನವನ್ನು ತಿಮ್ಮಪ್ಪನಾಯಕ ಅಯ್ಯನವರಿಗೆ ಉಂಬಳಿಯಾಗಿ ನೀಡಲಾಗಿದೆ.

ಕ್ರಿ.ಶ. 1539ರ ಗದಗದಲ್ಲಿನ ಶಾಸನದಲ್ಲಿ[9] "ಸ್ವಸ್ತಿಸಮಸ್ತಭುವನಾಶ್ರಯ ಶ್ರೀ ಪ್ರಥ್ವಿವಲ್ಲಭ, ಮಹಾರಾಧಿರಾಜ, ಪರಮೇಶ್ವರ, ಶ್ರೀ ಪ್ರಥ್ವಿವಲ್ಲಭ, ಮಹಾರಾಜಾಧಿರಾಜ, ಪರಮೇಶ್ವರ, ಶ್ರೀ ವೀರಪ್ರತಾಪ, ಶ್ರೀ ಅಚ್ಯುತರಾಯ ಮಹಾರಾಯರು ವಿಜಯನಗರಿಯ ನೆಲೆವೀಡಿನೊಳು ಸುಖಸಂಕಥಾ ವಿನೋದದಿಂ ರಾಜ್ಯಂಗೈಯುತ್ತವಿರಲು" ಎಂಬ ಉಲ್ಲೇಖವಿದೆ. ಗದಗ ಜಿಲ್ಲೆಯ ಶಾಸನಗಳೂ ಈ ಪ್ರದೇಶದಲ್ಲಿ ಉಂಬಳಿ ಪಡೆದ ಗಣ್ಯರ ಬಗೆಗೆ ಮಾಹಿತಿಯನ್ನು ಕೊಡುತ್ತವೆ. ಅವರಲ್ಲಿ ಅನೇಕರು ಅವರದೇ ಬಿರುದುಬಾವಲಿಗಳು ಮತ್ತು ಭೂಪ್ರದೇಶಗಳು ಇದ್ದುವು. ಮೇಲಿನ ಚರ್ಚೆಯಿಂದ ಈ ಕೆಲವು ನಿರ್ಣಯಗಳಿಗೆ ಬರಬಹುದು. ಸಾಮಂತ ಒಕ್ಕೂಟ ರಚನೆಯಲ್ಲಿ, ವಿಜಯನಗರ ರಾಜ್ಯದಲ್ಲಿ ಗದಗ ಪ್ರದೇಶವು ಬಹುಮುಖ್ಯವಾದ ಪಾತ್ರ ನಿರ್ವಹಿಸಿದೆ. ಆರ್ಥಿಕ ದೃಷ್ಟಿಯಿಂದ ಅದು ಕೆಳದಿ ಮತ್ತು ಕರಾವಳಿ ಪ್ರದೇಶದಷ್ಟು ಶ್ರೀಮಂತವಾಗಿರಲಿಲ್ಲ. ಅದು ಒಣಬೇಸಾಯದಲ್ಲಿದ್ದ ಪ್ರದೇಶ. ಆದರೂ ಮಿಲಿಟರಿ ಮಹತ್ವದ ದೃಷ್ಟಿಯಿಂದ ನೋಡಿದಾಗ ಗದಗ ಪ್ರದೇಶವು ಬಹು ಮುಖ್ಯವಾದುದು. ಏಕೆಂದರೆ ಆದಿದ್ದುದು ವಿಜಯನಗರಕ್ಕೆ ಸಮೀಪದಲ್ಲಿ, ಸಹಜವಾಗಿಯೇ ವಿಜಯನಗರದ ರಾಜರು ಈ ಪ್ರದೇಶದ ಬಗೆಗೆ ಆಸಕ್ತಿ ವಹಿಸಿದರು. ಡಾ.ಡಿ.ವಿ. ಪರಮಶಿವಮೂರ್ತಿ ಗುರುತಿಸಿರುವಂತೆ "ಲಕ್ಷ್ಮೇಶ್ವರದ ವೀರಗಲ್ಲೊಂದರಲ್ಲಿ ಕೋಟೆ ಚಿತ್ರಣ ಅಪರೂಪದ ಮಾಹಿತಿ ನೀಡುತ್ತದೆ (ಲಕ್ಷ್ಮೇಶ್ವರ, ಶಿರಹಟ್ಟಿ, ತಾ, ಗದಗ ಜಿಲ್ಲೆ) ಇದರಲ್ಲಿ ಕೋಟೆಯ ಗೋಡೆಯು ಅಡ್ಡವಾದ ಐದು ಗೆರೆಗಳಿಂದ ಕೂಡಿದೆ. ಬಹುಶ: ಇದು ಕೋಟೆಯ ಎತ್ತರವನ್ನು ಸೂಚಿಸುತ್ತಿರಬೇಕು. ಒಂದು ಗೆರೆಯ ಪ್ರಮಾಣ ಒಂದು ಆಳಿನ ಎತ್ತರ ಎಂದಿಟ್ಟು ಕೊಂಡರೆ ಇಲ್ಲಿನ ಕೋಟೆಯು ಐದು ಆಳ ಎತ್ತರವಾಗುತ್ತದೆ. ಅಂದರೆ ಸುಮಾರು ಮೂವತ್ತು ಅಡಿ ಎತ್ತರವಾಗಿತ್ತು,ಎಂದು ತೋರುತ್ತದೆ. ಇದರ ಮೇಲೆ ನಿಂತಿರುವ ಇಬ್ಬರು ಸೈನಿಕರಲ್ಲಿ

ಒಬ್ಬನು ಬಾಣಗಳನ್ನು ತಡೆಯುವ ಅಡ್ಡೆಯನ್ನು ಹಿಡಿದು ನಿಂತಿದ್ದಾನೆ. ಇವನ ಹಿಂದೆ ಮತ್ತೊಬ್ಬನೂ ಎರಡೂ ಕೈಗಳಿಂದ ದಪ್ಪನಾದ ಕಲ್ಲುಗುಂಡನ್ನು ತಲೆಯ ಮೇಲೆ ಎತ್ತಿಕೊಂಡಿದ್ದಾನೆ, ಇದನ್ನು ಶತ್ರುಗಳ ಮೇಲೆ ಎಸೆಯಲು ಬಳಸುತ್ತಿರಬೇಕು." ಎಂದು ಗುರುತ್ತಿಸಿದ್ದಾರೆ. ಇದು ಸ್ಪಷ್ಟವಾಗಿ ಸೇನೆಯನ್ನು ಒದಗಿಸತಕ್ಕದ್ದುದನ್ನು ಸೂಚಿಸುತ್ತದೆ.

ಎರಡನೆಯದಾಗಿ ಕಡಮೆ ಶ್ರೇಣಿಯ ಇತರ ನಾಯಕರೂ ಇದ್ದರು. ಅಂದರೆ, ಈ ಪ್ರದೇಶವು ಅತ್ಯಂತ ಹೆಚ್ಚು ಊಳಿಗಮಾನ್ಯ ಪ್ರದೇಶವಾಗಿತ್ತು ಎಂದು ಅರ್ಥ. ಇದಕ್ಕೆ ವಿಜಯನಗರ ಅರಸರ ನೀತಿಯೆ ಎಂದು ಖಚಿತವಾಗಿ ಹೇಳಲು ಬರುವುದಿಲ್ಲ. ಯಾರೊಬ್ಬರೂ ಪ್ರಾಧಾನ್ಯ ಪಡೆಯದ ಹಾಗೆ ಅನೇಕ ಅಧೀನ ನಾಯಕರ ಕೈಗಳಲ್ಲಿ ಈ ಪ್ರದೇಶವನ್ನು ಇಡುವುದು ಸೂಕ್ತ ಎಂದು ಅರಸರು ಯೋಚಿಸಿರಬಹುದು. ಕೊನೆಯದಾಗಿ ಈ ಪ್ರದೇಶದ ಅಧೀನ ರಾಜರ ಇತಿಹಾಸವನ್ನು ಅಧ್ಯಯನ ಮಾಡಿದರೆ ಸಾಮಂತ ವ್ಯವಸ್ಥೆಯು ಕೆಲಸಮಾಡುತ್ತಿದ್ದ ರೀತಿಯ ಬಗೆಗೆ ತಿಳಿಯಬಹುದಾಗುತ್ತದೆ.

ಅಚ್ಯುತರಾಯನ ನಂತರ ಅಳಿಯ ರಾಮರಾಯನು ರಂಗರಾಯನ ಮಗ ಸದಾಶಿವರಾಯಯನನ್ನು 1543–1570 ರಲ್ಲಿ ವಿಜಯನಗರ ಸಿಂಹಾಸನದ ಮೇಲೆ ಕೂಡಿಸಿದನು. ಆದರೆ ರಾಮರಾಯನೇ ನಿಜವಾದ ದೊರೆಯಂತೆ ವರ್ತಿಸುತ್ತಿದ್ದನು. ಗದಗ ಜಿಲ್ಲೆಯಲ್ಲಿ ಸದಾಶಿವರಾಯನ ಬಗ್ಗೆ ವಿವರ ನೀಡುವ ಶಾಸನಗಳು ಸೊರಟೂರು[10] ಮತ್ತು ಲಕ್ಷ್ಮೇಶ್ವರಗಳಲ್ಲಿ ದೊರೆತಿವೆ. ಅಲ್ಲದೆ ಕೋಟುಮಚಗಿಯಲ್ಲಿ ದೊರೆತ ವಾಮನ ಮುದ್ರೆಕಲ್ಲಿನ ಮೇಲೆ ಕೋಟುಮಚಗಿಯ ಪ್ರತಿನಾಮ ಸದಾಶಿವರಾಯ ಸಮುದ್ರ ಎಂದು ದೇವನಗರಿ ಲಿಪಿಯಲ್ಲಿ ಬರೆದಿರುವುದು ಕಂಡುಬರುತ್ತದೆ. ನ್ಯೂನಿಜ್ ಹೇಳುತ್ತಾನೆ." ಎಲ್ಲ ಭೂಮಿಯೂ ರಾಜನಿಗೆ ಸೇರಿದೆ. ಅವನಿಂದ ಪಡೆದು ಸೇನಾನಾಯಕರು ಅದನ್ನು ಆಳುತ್ತಾರೆ. ಈ ರೀತಿಯಲ್ಲಿ ಬಿಸ್ನಗರ್ ರಾಜ್ಯವು ಇನ್ನೂರಕ್ಕೂ ಹೆಚ್ಚು ಜನ ನಾಯಕರಲ್ಲಿ ವಿಭಾಗಗೊಂಡಿದೆ. ಅವರೆಲ್ಲರೂ ವಿಧರ್ಮಿಯರು. ಅವರು ಹೊಂದಿರುವ ಭೂಪ್ರದೇಶ ಅವರಿಗಿರುವ ವರಮಾನಗಳ ಆಧಾರದಿಂದ ರಾಜನು ಅವರು ಕಾಪಾಡಲೇಬೇಕಾದ ಸೈನ್ಯದ ಪ್ರಮಾಣವನ್ನೂ, ಪ್ರತಿವರ್ಷ ತನಗೆ ಕೊಡಬೇಕಾದ ವರಮಾನವನ್ನೂ ನಿಗದಿ ಪಡಿಸುತ್ತಾನೆ. ಅದನ್ನು ಅವರು ಸೆಪ್ಟೆಂಬರ್ ತಿಂಗಳ ಮೊದಲ ಒಂಬತ್ತು ದಿನಗಳೊಳಗಾಗಿ ಪಾವತಿ ಮಾಡಬೇಕಾಗುತ್ತದೆ. ವಿಜಯನಗರ ರಾಜ್ಯವು ಏಕ ಕಾಲದಲ್ಲಿ ಸಾಮಂತ, ಒಕ್ಕೂಟ ಹಾಗೂ ವಿಕೇಂದ್ರೀಕೃತ ಅಂಶಗಳನ್ನು ಒಳಗೊಂಡಿತು. ಅನೇಕ ಪ್ರವಾಸಿಗರು, ವಿಶೇಷವಾಗಿ ನ್ಯೂನಿಜ್ ಮತ್ತು ಪೇಸ್ ಪ್ರಸ್ತುತ ಕಾಲದಲ್ಲಿ ಕರ್ನಾಟಕದಲ್ಲಿ ಪ್ರಚುರವಾಗಿದ್ದ, ಉಳಿಗಮಾನ್ಯ ಪದ್ಧತಿ ಎಂದು ತಾವು ಭಾವಿಸಿದ ವ್ಯವಸ್ಥೆಯನ್ನು ವರ್ಣಿಸಿದ್ದಾರೆ. ದೊಡ್ಡ, ಚಿಕ್ಕ ರಾಜ್ಯಭಾಗಗಳನ್ನು ಅನೇಕ ಸಂದರ್ಭಗಳಲ್ಲಿ ಒಂದೇ ಒಂದು ಹಳ್ಳಿಯನ್ನು ಗಣ್ಯ ಜನರಿಗೆ ವಹಿಸಲಾಗಿತ್ತಿತ್ತು. ಅಗತ್ಯ ಬಂದಾಗ ನಿರ್ದಿಷ್ಟ ಪಡಿಸಿರುವ ಸಂಖ್ಯೆಯ ಸೇನೆಯನ್ನು ಅವರು ಒದಗಿಸತಕ್ಕದ್ದು ಎಂಬುದೊಂದೇ ಷರತ್ತು, ಈ ಭೂಹಿಡುವಳಿಗಳನ್ನು ಅಮರಂ ಎಂದು ಕರೆಯುತ್ತಿದ್ದರು.

ಈ ಅಧ್ಯಯನದಲ್ಲಿ ಗದಗ ಜಿಲ್ಲೆಯ ಶಾಸನಗಳನ್ನು ಪ್ರಮುಖವಾಗಿ ಆಧರಿಸಿದ್ದು ಅದಕ್ಕೆ ಪೂರಕವಾಗಿ ಶಾಸನಗಳನ್ನೂ ಅನುಲಕ್ಷಿಸಲಾಗಿದೆ. ಶಾಸನಗಳಿಂದ ತಿಳಿದುಬರುವ ಸಾಂಸ್ಕೃತಿಕ ಅಂಶಗಳನ್ನು ಗುರುತಿಸಿ ವಿಶ್ಲೇಷಿಸುವುದು ಈ ಅಧ್ಯಯನದ ಮುಖ್ಯ ಉದ್ದೇಶ. ಈ ಅಧ್ಯಯನಕ್ಕೆ ಪೂರಕವಾಗಿ ಅನೇಕ ಸಾಹಿತ್ಯ ಕೃತಿಗಳನ್ನು ಜನಪದ ಸಾಹಿತ್ಯವನ್ನು ಮತ್ತು ಇನ್ನಿತರ ಮೂಲಗಳ್ನು ಇಲ್ಲಿ ಬಳಸಿಕೊಳ್ಳಲಾಗಿದೆ.

ಆಧಾರಸೂಚಿ ಮತ್ತು ಅಡಿಟಿಪ್ಪಣಿ

1. ಕಣವಿ, ಎಸ್.ಐ.ಐ. 18, ಕ್ರಿ.ಶ.1408
2. ಲಕ್ಷ್ಮೇಶ್ವರ ಎಸ್.ಐ.ಐ.20.ಶಾ.ಸಂ232.38.384.
3. ಲಕ್ಷ್ಮೇಶ್ವರ ಎಸ್. ಐ.ಐ. 20
4. ಸವಡಿ ಎಸ್.ಐ.ಐ. 15,ಶಾ.ಸಂ.246. ಕ್ರಿ.ಶ. 1420
5. ಕಲ್ಲೂರ ಎಸ್.ಐ.ಐ..15.ಶಾ.ಸಂ.673. ಪು.421
6. ಗದಗ ಎಸ್.ಐ.ಐ.15, ಶಾ.ಸಂ.28. ಕ್ರಿ.ಶ.1536
7. ಗಾಡಗೂಳಿ ಎಸ್.ಐ.ಐ. 15. ಶಾ.ಸಂ. 251

8. ಗದಗ .ಎಸ್.ಐ.ಐ. 18. ಶಾ.ಸಂ252. 252. 1539
9. ಸೊರಟೂರ ಎಸ್.ಐ.ಐ.15, ಶಾ.ಸಂ.262
10. ಲಕ್ಷ್ಮೇಶ್ವರ, ಎಸ್.ಐ.ಐ. 20. ಶಾ.ಸಂ48.
11. ಮಹಾಲಿಂಗಂ ಟಿ.ವಿ.: ಸೌ ಇಂಡಿಯನ್ ಪಾಲಿಟಿ. ಪು.370.
12. ಪ್ರಧಾನ ಸಂಪಾದಕರು, ಪ್ರೊ. ಬಿ. ಷೇಕ್ ಅಲಿ, ಸಂಪುಟ ಸಂಪಾದಕರು. ಪ್ರೊ. ಕೆ.ಎಸ್. ಶಿವಣ್ಣ, ಸಂಪುಟ–3, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 1997.
13. ಡಾ. ಡಿ.ವಿ. ಪರಮಶಿವಮೂರ್ತಿ, **ಕನ್ನಡ ಶಾಸನ ಶಿಲ್ಪ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 1999.
14. ಡಾ. ಎಂ.ಎಸ್. ನರೇಗಲ್ಲ, **ಉತ್ತರ ಗದಗ ಜಿಲ್ಲೆಯ ಶಾಸನಗಳು ಒಂದು ಅಧ್ಯಯನ**, ರವಿರಶ್ಮಿ ಪ್ರಕಾಶನ, ಗದಗ, 2009

31. ವಿಜಯನಗರ ಕಾಲದ ಪರಿಚಾರಕ ವರ್ಗದವರ ಕಾಯಕನಿಷ್ಠೆ

– ಪ್ರೊ. ಶಕುಂತಲಾ ಸಿಂಧೂರ

'ಉದ್ಯೋಗಂ ಪುರುಷ ಲಕ್ಷಣಂ' ಎಂಬ ಉಕ್ತಿ ಪುರಾತನವಾದುದು. ಈ ಉಕ್ತಿಯು ಈಗ ನವೀಕರಣಗೊಂಡು ಉದ್ಯೋಗಂ ಮನುಕುಲ ಲಕ್ಷಣಂ' ಎನ್ನುವಂತಾಗಿದೆ. ವಿಜಯನಗರ ಕಾಲದಲ್ಲಿ ಕಂಡುಬರುವ ಉದ್ಯೋಗವಕಾಶಗಳು ವೈಶಿಷ್ಟ್ಯಪೂರ್ಣವೂ ವೈವಿಧ್ಯಮಯವೂ ಆಗಿರುವದು ತಿಳಿದುಬರುತ್ತದೆ. ವಿಜಯನಗರ ಕಾಲದಲ್ಲಿ ದೇವಸ್ಥಾನಗಳು ಸಾಂಸ್ಕೃತಿಕ ಕೇಂದ್ರಬಿಂದುಗಳಾಗಿದ್ದವು. ಮಂದಿರದಲ್ಲಿ ನಿತ್ಯೋತ್ಸವ ಪಕ್ಷೋತ್ಸವ ಮಾಸೋತ್ಸವ ವಸಂತೋತ್ಸವ ಏರ್ಪಡಿಸಲು ಹಾಗೂ ದೇಗುಲದ ವಾರ್ಷಿಕ ಉತ್ಸವ ಜಾತ್ರೆ ಹಬ್ಬ ಹರಿದಿನ ಇತ್ಯಾದಿಗಳನ್ನು ಆಯೋಜಿಸಲು ನೌಕರರಿಗೆ ಅಪಾರ ರೂಪದ ಉದ್ಯೋಗವಕಾಶಗಳು ಲಭ್ಯವಿರುವದಾಗಿ ಶಾಸನಗಳಿಂದ ತಿಳಿದುಬರುತ್ತದೆ. ಈ ಉದ್ಯೋಗಾಕಾಂಕ್ಷಿಗಳನ್ನು "ಪರಿಚಾರಕವರ್ಗ"ವೆಂದು ಕರೆಯುತ್ತಿರುವುದನ್ನು ವಿಜಯನಗರ ಪೂರ್ವದ ಶಾಸನಗಳಿಂದ ಅರಿಯಬಹುದಾಗಿದೆ.[1] ದೇವಾಲಯದಲ್ಲಿ ಜರುಗುವ ತ್ರಿಕಾಲಪೂಜೆ ಪುನಸ್ಕಾರಕ್ಕೆ ನೈವೇದ್ಯಕ್ಕೆ ಗಂಧ ತೀಡುವುದಕ್ಕೆ ಪುಷ್ಪ ದೀಪ ಧೂಪ ಹಾಕಲು ಈ ಮೊದಲಾದ ದೇವರ ಅಂಗಭೋಗಕ್ಕೆ ಸೇವೆ ಸಲ್ಲಿಸುವ ಪರಿಚಾರಕರನ್ನು ಮತ್ತು ನಾಟ್ಯಗೈಯಲು ನರ್ತಕರನ್ನು ಹಾಡಲು ಸಂಗೀತಗಾರರನ್ನು, ವಾದ್ಯಕಹಳೆ ಇತ್ಯಾದಿ ನುಡಿಸಲು ವಾದ್ಯ ಕಲಾವಿದರನ್ನು ಆಹಾರ ಪಾನೀಯ ಸಿದ್ಧಪಡಿಸಲು ಪಾಕಪ್ರವೀಣರನ್ನು ರಾಜ ರಾಣಿಯರ ಸೇವೆಗೈಯಲು ದಾಸದಾಸಿಯರನ್ನು ಪರಿಚಾರಕರನ್ನಾಗಿ ನೇಮಿಸಿಕೊಳ್ಳಲಾಗುತ್ತಿತ್ತು.

ದೇವಾಲಯದ ಪರಿಚಾರಕ ಸೇವೆಯವರು ವಂಶಪಾರಂಪರ್ಯವಾಗಿ ತಮ್ಮ ಕಾರ್ಯ ನಿರ್ವಹಿಸುತ್ತಿದ್ದರು. ಒಮ್ಮೆ ನೇಮಿಸಲ್ಪಟ್ಟ ನೌಕರನು ತನ್ನ ಜೀವಮಾನವಿಡೀ ಅದೇ ಕಾಯಕದಲ್ಲಿ ಸೇವಾನಿರತನಾಗಿರುತ್ತಿದ್ದನು. ಅವನ ನಂತರ ಅವರ ವಂಶದವರಿಗೇ ಆ ಉದ್ಯೋಗವಕಾಶವು ವರ್ಗಾಯಿಸಲ್ಪಡುತ್ತಿತ್ತು. ಉದಾ : ದೇಗುಲದ ಪೂಜಾರಿ ಕೈಂಕರ್ಯವು ಇಲ್ಲಿಯವರೆಗೂ ಹಾಗೇ ಮುಂದುವರಿದಿರುವದಲ್ಲದೆ ಅದೇ ವಂಶದಲ್ಲಿ ಅಣ್ಣ–ತಮ್ಮಂದಿರ ಹೆಚ್ಚೆಚ್ಚು ಕುಟುಂಬಗಳು ಅವಿಭಕ್ತ ಕುಟುಂಬದಿಂದ ಬೇರ್ಪಟ್ಟಿರುವಾಗ ವರ್ಷಗಳಲ್ಲಿ ಇಂತಿಷ್ಟು ವರ್ಷ ಒಬ್ಬೊಬ್ಬರು ಪೂಜಾರಿಕೆ ಮಾಡಬೇಕೆಂಬ ಅವಧಿಯ ನಿರ್ಬಂಧ ಸಿದ್ಧಪಡಿಸಲಾಗುತ್ತಿತ್ತು.

ದೇವಾಲಯದ ಪೂಜಾರಿಗೆ ವೇತನವನ್ನು ಹಣದ ರೂಪದ ಬದಲು ಭೂಮಿ ಗದ್ದೆ ದತ್ತಿಯಾಗಿ ಕೊಡಲಾಗುತ್ತಿತ್ತೆಂಬುದನ್ನು ವಿಜಯನಗರದ ಶಾಸನಗಳು ಉಲ್ಲೇಖಿಸುತ್ತವೆ. ಇಂಥ ಪರಿಚಾರಕ ವರ್ಗದವರ ಸಂಖ್ಯೆಯನ್ನು ನಿರ್ದಿಷ್ಟವಾಗಿ ಯಾವ ಶಾಸನಗಳೂ ನಿರೂಪಿಸುವುದಿಲ್ಲ. ಪರಿಚಾರಕ ಉದ್ಯೋಗಿಗಳ ಸಂಖ್ಯೆಯು ಕಾಲದಿಂದ ಕಾಲಕ್ಕೆ ದೇಗುಲದಿಂದ ದೇಗುಲಕ್ಕೆ ಭಿನ್ನ ವಿಭಿನ್ನವಾಗಿರುತ್ತಿತ್ತು. ಪ್ರಾಚೀನ ಕಾಲದ ಆರಂಭದಲ್ಲಿ ದೇಗುಲಗಳು ಗಾತ್ರದಲ್ಲಿ ಕಿರಿದಾಗಿದ್ದು ಹೆಚ್ಚು ಪರಿಚಾರಕರ ಅಗತ್ಯವಿರಲಿಲ್ಲ. 8–9ನೇ ಶತಮಾನದಲ್ಲಿ ಕಾಳಾಮುಖ ಪಾಶುಪತರ ಉನ್ನತಿಯ ಕಾಲದಲ್ಲಿ ಮಂದಿರಗಳು ಬೃಹದಾಕಾರದಲ್ಲಿ ಬೆಳೆಯಲಾರಂಭಿಸಿದ್ದರಿಂದ ಆ ಕಾಲದಲ್ಲಿ ಗುಡಿಯ ಪರಿಚಾರಕರ ಸಂಖ್ಯೆ ಅಧಿಕವಾಗತೊಡಗಿತು.

ವಿಜಯನಗರದ ಅರಸರ ಕಾಲದಲ್ಲಿ ದೇವಸ್ಥಾನಗಳು ಉತ್ತರೋತ್ತರವಾಗಿ ಬೆಳೆದು ಹೆಮ್ಮರವಾಗಿದ್ದರಿಂದ ಅರಸರು ಅಧಿಕಾರಿಗಳು ಶ್ರೀಮಂತರು ಸಾಮಾನ್ಯರು ನಾಡಗೌಡರು ಭಕ್ತಿಯಿಂದ ದೇಗುಲದ ಸಂರಕ್ಷಣೆಯ ಖರ್ಚಿಗಾಗಿ ವಿಫುಲವಾಗಿ ದಾನದತ್ತಿಗಳನ್ನು ಬಿಟ್ಟಿರುವರು. ಹೀಗೆ ಆರ್ಥಿಕವಾಗಿ ಮಂದಿರಗಳು ಸಬಲೀಕರಣಗೊಳ್ಳಲು ಆಗ ಪರಿಚಾರಕ ಉದ್ಯೋಗಿಗಳ ಸಂಖ್ಯೆಯೂ ಹಂತ ಹಂತವಾಗಿ ಅಧಿಕವಾಯಿತು.

ಮಂದಿರದಲ್ಲಿ ಕಾರ್ಯಗೈಯುವ ವೃತ್ತಿಯವರನ್ನು ಅಧ್ಯಯನದ ಸೌಲಭ್ಯಕ್ಕಾಗಿ ವಿಭಾಗಿಸುವದು ಅತ್ಯವಶ್ಯ, ದೇವಸ್ಥಾನಗಳಲ್ಲಿ ಸೇವೆಸಲ್ಲಿಸುತ್ತಿರುವ ಪರಿಚಾರಕರನ್ನು ಡಾ. ದಯಾಳನ್ ಅವರು ಹೀಗೆ ವರ್ಗೀಕರಿಸಿದ್ದಾರೆ. 1) ಆಧ್ಯಾತ್ಮಿಕ ಸೇವೆಯಲ್ಲಿರುವವರು 2) ಆಡಳಿತದಲ್ಲಿ ಭಾಗಿಯಾಗಿದ್ದವರು. 3) ಇನ್ನಿತರ ಸೇವೆ ಮಾಡುವವರು. ಹೀಗೆ ಮೂರು ವಿಧದಲ್ಲಿ ವಿಭಜಿಸಿದ್ದು ಇದನ್ನೇ ಆಧರಿಸಿ ಡಾ.ಜೆ.ಎಂ. ನಾಗಯ್ಯನವರು ದೇವಸ್ಥಾನದ ಪರಿಚಾರಕ ವರ್ಗವನ್ನು ತಮ್ಮದೇ ಆದ ರೀತಿಯಲ್ಲಿ ವರ್ಗೀಕರಿಸಿದ್ದಾರೆ.

1) ಗುರುವರ್ಗದ ಪರಿಚಾರಕರು 2) ಅಂಗಭೋಗದ ಪರಿಚಾರಕರು 3) ರಂಗಭೋಗದ ಪರಿಚಾರಕರು 4) ಸೇವಾ ವರ್ಗದ ಪರಿಚಾರಕರು

ಡಾ.ಜೆ.ಎಂ. ನಾಗಯ್ಯನವರ ವರ್ಗೀಕರಣವು ಸಮಂಜಸವೆನಿಸಿದ್ದು ಅದನ್ನೇ ಸ್ವಲ್ಪ ಪರಿವರ್ತಿಸಿ ಪರಿಚಾರಕರನ್ನು ಹೀಗೆ ವಿಭಜಿಸಲಾಗಿದೆ. 1) ಮುಖ್ಯ ಪರಿಚಾರಕರು 2) ಗುರುವರ್ಗದ ಪರಿಚಾರಕರು 3) ಅಂಗಭೋಗದ ಪರಿಚಾರಕರು 4) ರಂಗಭೋಗದ ಪರಿಚಾರಕರು 5) ಸೇವಾವರ್ಗದವರು. ಈ ಪರಿಚಾರಕ ವರ್ಗದವರು ತಂತಮ್ಮ ಕಾಯಕವನ್ನು ನಿಷ್ಠೆ ಪ್ರಾಮಾಣಿಕತೆಯಿಂದ ಮಾಡುತ್ತಿದ್ದರು.

1) ಮುಖ್ಯ ಪರಿಚಾರಕರು : ದೇವಸ್ಥಾನದ ಆಡಳಿತದ ವರ್ಗದವರು ಪ್ರಮುಖ ಹೊಣೆಗಾರರಾಗಿದ್ದರಿಂದ ಇವರನ್ನು ಮುಖ್ಯ ಪರಿಚಾರಕ ಉದ್ಯೋಗಾಕಾಂಕ್ಷಿಗಳು ಎನ್ನಲಾಗಿದೆ. ಇವರನ್ನು 'ಸ್ಥಾನಪ' ಸ್ಥಾನಾಚಾರ್ಯ ಎಂದು ಶಾಸನಗಳು ಉಲ್ಲೇಖಿಸಿವೆ. ದೇವಾಲಯದ ಪ್ರತಿಯೊಂದು ಕಾರ್ಯ ಚಟುವಟಿಕೆಗಳ ಆಗುಹೋಗುಗಳ ಜವಾಬ್ದಾರಿ ಸ್ಥಾನಿಕರ ಮೇಲೆ ಅವಲಂಭಿಸಿರುತ್ತಿದ್ದವು. ದೇವಾಲಯಕ್ಕೆ ಸೇರಿದ್ದ ಭೂಮಿಯ ಹೊಣೆಗಾರಿಕೆ ಹಾಗೂ ದೇವಾಲಯದ ಪರವಾಗಿ ಧನರೂಪದ ಭೂಮಿಯನ್ನು ಸ್ವೀಕರಿಸುವದಾಗಿತ್ತು. ಕ್ರಿ.ಶ. 1487 ರಲ್ಲಿ ಬಸರೂರಿನ ಪಡುವಣ ಕೇರಿಯ ಸ್ಥಾನಪತಿ ರುದ್ರಾಕ್ಷಿ ಒಡೆಯನಿಗೆ ಮಠವನ್ನು ಕಟ್ಟಿಸಿ ಕೆಲವು ಭೂಮಿಯನ್ನು ದಾನ ನೀಡಿರುವುದನ್ನು ಶಾಸನವು ಉಲ್ಲೇಖಿಸಿದೆ.[2] ಭೂಮಿ ಖರೀದಿಸಿ ದೇಗುಲದ ಆಸ್ತಿ ಹೆಚ್ಚಿಸುವದು ಉತ್ಸವಗಳಿಗೆ ಹಣದ ಅವಶ್ಯಕತೆಯೆನಿಸಿದಾಗ ಭೂಮಿ ಮಾರುವದು. ಹೊಲ ಆಧಾರವಾಗಿಟ್ಟುಕೊಂಡು ದೇಗುಲದ ಹಣವನ್ನು ಬಡ್ಡಿಗೆ ಸಾಲವಾಗಿ ಕೊಡುವದು, ಹೊಲ ಒತ್ತೆಯಿಟ್ಟುಕೊಂಡವನು ಸಾಲ ತೀರಿಸದಿರುವಾಗ ಅವನ ಹೊಲವನ್ನೇ ಸ್ವಾಧೀನಪಡಿಸಿಕೊಳ್ಳುವದು, ದೇವಾಲಯಕ್ಕೆ ದಾನವಾಗಿ ಕೊಟ್ಟಿರುವ ಭೂಮಿಯನ್ನು ರೈತರಿಗೆ ಗೇಣಿರೂಪದಲ್ಲಿ ಕೊಡುವದು. ದೇಗುಲದಲ್ಲಿ ಸಂಗ್ರಹವಾದ ಸಂಪತ್ತಿನ ಮೇಲ್ವಿಚಾರಣೆ ಮಾಡುವದು. ದೇಗುಲಗಳಲ್ಲಿ ನಡೆಯುವ ಅಪರಾಧಗಳನ್ನು ವಿಚಾರಣೆಗೊಳಪಡಿಸುವದು ಇತ್ಯಾದಿ ಜವಾಬ್ದಾರಿಗಳನ್ನು ಸ್ಥಾನಿಕರು ಕೈಗೊಳ್ಳುತ್ತಿದ್ದರು. ಸ್ಥಾನಿಕನು ದೇಗುಲದ ಅವಿಭಾಜ್ಯ ಅಂಗವೆನಿಸಿದ್ದು ದೇವಾಲಯದ ಶ್ರೇಯೋಭಿವೃದ್ಧಿಗೆ ಅವನು ನಿರಂತರ ಹಗಲಿರುಳು ಶ್ರಮಿಸುತ್ತಿದ್ದನು.

ದೇವಾಲಯದಲ್ಲಿ ನಡೆಯುವ ಪ್ರತಿಯೊಂದು ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವದು ದೇಗುಲಕ್ಕೆ ಬಂದ ಸಂಪತ್ತನ್ನು ಹಾಗೂ ಭೂಮಿಯನ್ನು ದಾನವಾಗಿ ಸ್ವೀಕರಿಸುವದಲ್ಲದೆ ಉತ್ಸವಗಳು ನಿಯಮಿತ ಕಾಲದಲ್ಲಿ ಆಯೋಜಿಸುವಂತೆ ನೋಡಿಕೊಳ್ಳುವದು ಇತ್ಯಾದಿಗಳು ಸ್ಥಾನಾಚಾರ್ಯನ ಜವಾಬ್ದಾರಿಯಾಗಿದ್ದವು. ವಿಜಯನಗರದ ಮಧ್ಯಕಾಲಕ್ಕಾಗಲೇ ರಾಜನೇ ಸ್ಥಾನಾಚಾರ್ಯರನ್ನು ನೇಮಿಸುವ ಪದ್ಧತಿ ಜಾರಿಯಲ್ಲಿತ್ತು.

ಸದಾಶಿವರಾಯನ ಆಡಳಿತಾವಧಿಯಲ್ಲಿ 1547 ರಲ್ಲಿ ತಿರುಪತಿಯಲ್ಲಿ ರಾಮಾನುಜಕೂಟದ ಆಡಳಿತ ವ್ಯವಸ್ಥೆ ಹೇಗಿತ್ತೆಂಬುದನ್ನು ಟಿಟಿಡಿಐ 5,89 ರ ಶಾಸನವು ತಿಳಿಸುತ್ತದೆ. 1547 ಮಾರ್ಚ ತಿಂಗಳಿನಲ್ಲಿ ಉದಯಗಿರಿ ದೇವರಾಜಭಟ್ಟಾರ್ ಎಂಬುವನು

ತಿರುಪತಿಯ ದೇಗುಲದಲ್ಲಿ ವಿಠ್ಠಲೇಶ್ವರ ಪೆರುಮಾಳ್ ದೇವರನ್ನು ಪ್ರತಿಷ್ಠಾಪಿಸಿದನಲ್ಲದೇ, ಈ ಸಂಬಂಧದಲ್ಲಿ ಶಾಸನಕಲ್ಲನ್ನೂ ನೆಡಿಸುತ್ತಾನೆ. ಈ ದೇವಾಲಯದ ಸಂಪೂರ್ಣ ಆಯ–ವ್ಯಯವನ್ನು ಇದು ತಿಳಿಸುತ್ತದೆ. ಇದರ ಮೇಲುಸ್ತುವಾರಿ ಕೈಗೊಂಡಿದ್ದ ವ್ಯಕ್ತಿಗೆ ವಾರ್ಷಿಕ ಸಂಭಾವನೆ 50 ಪಣಂಗಳು (1980 ರ ವೇಳೆಗೆ ಇದರ ಮೌಲ್ಯವು ಸು. 12 ರೂ.ಗಳಷ್ಟಿತ್ತು) ಇಲ್ಲಿ ಸೇವೆ ಸಲ್ಲಿಸುತ್ತಿದ್ದ ಪೂರ್ಣಾವಧಿ ಅಡಿಗೆಯವರಿಗೆ ತಿಂಗಳಿಗೆ ಒಂದು ಪಣಂ ಅನ್ನು ಹಾಗೂ ನಿತ್ಯ ಅವರ ಪಾಲಿನ ಪ್ರಸಾದವನ್ನು ಒದಗಿಸಲಾಗುತ್ತಿತ್ತು. ಪ್ರತಿದಿನ ಸು. 2000 ಶ್ರೀವೈಷ್ಣವರು ಭೋಜನಗೈಯುತ್ತಿದ್ದ ಈ ರಾಮಾನುಕೂಟದಲ್ಲಿ ಊಟಬಡಿಸುವ ಇರ್ವರಿಗೆ ವರ್ಷಕ್ಕೆ ತಲಾ 62.1/2 ಪಣಂಗಳು (ತಿಂಗಳಿಗೆ 1 ರೂ. 4 ಆಣೆಗಳು) ಕಾವಲುಗಾರನಿಗೆ ತಿಂಗಳಿಗೆ 5 ಪಣಂಗಳು (1 ರೂ. 3 ಆಣೆ) ಭೋಜನಾಲಯವನ್ನು ಶುಚಿಗೊಳಿಸುತ್ತಿದ್ದ ಸೇವಕರಿಗೆ ಪ್ರತಿ ತಿಂಗಳು ತಲಾ 3 ಪಣಂಗಳು (11 ಆಣೆ 3 ಕಾಸು) ಪ್ರಸಾದ ಸ್ವೀಕರಿಸುವಾಗ ಕುಡಿಯುವ ನೀರು ಸರಬರಾಜು ಮಾಡುವ ಪ್ರತಿಯೊಬ್ಬರಿಗೆ ತಿಂಗಳಿಗೆ 4 ಪಣಂ (15 ಆಣೆ)ಗಳು ಮತ್ತು ರಾಮಾನುಜಕೂಟದ ಇಡೀ ವ್ಯವಸ್ಥೆಯ ಮೇಲುಸ್ತುವಾರಿ ನೋಡಿಕೊಳ್ಳುತ್ತಿದ್ದ ಅಧಿಕಾರಿಗೆ ತಿಂಗಳಿಗೆ 20 ಪಣಂ (6 ರೂ 11 ಆಣೆ) ಗಳು ಹೀಗೆ ವ್ಯವಸ್ಥೆ ನಿರ್ಧರಿಸಲಾಗಿತ್ತು. ಹೀಗೆ ರಾಮಾನುಜಕೂಟಗಳಿಗೆ ಪೋಷಣೆ ಒದಗಿಸುವ ನಿಟ್ಟಿನಲ್ಲಿ ಸದಾಶಿವರಾಯ ಸಲ್ಲಿಸಿದ ಸೇವೆ ಪ್ರಶಂಸಾರ್ಹವಾದರೂ ಆ ವೇಳೆಗೆ ದೇಗುಲದ ಆಡಳಿತದಲ್ಲಿ ಸ್ವಲ್ಪ ಮಟ್ಟಿನ ಶಿಥಿಲತೆ ಕಂಡುಬರುತ್ತಲಿತ್ತು. ತಿರುಪತಿ ದೇಗುಲ ಮತ್ತು ರಾಮಾನುಜಕೂಟಗಳ ಮೇಲುಸ್ತುವಾರಿ ವಹಿಸಿದ್ದ ಮತ್ತು ನಿತ್ಯ ವೆಚ್ಚದ ಹೊಣೆಗಾರಿಕೆಯನ್ನು ನಿರ್ವಹಿಸುತ್ತಿದ್ದ ಸ್ಥಾನಿಕರಿಗೆ ದಾನ ದತ್ತಿಗಳ ಸಂಪೂರ್ಣ ಜವಾಬ್ದಾರಿಯನ್ನು ಕೊಡಲಾಗಿತ್ತು. ತೆರಿಗೆ ವಸೂಲಿಯೂ ಅವರದೇ ಆಗಿತ್ತು. ಈ ವಿಷಯದಲ್ಲಿ ಅವರು ಸ್ವತಂತ್ರವಾಗಿ ತೀರ್ಮಾನಗಳನ್ನು ಕೈಗೊಳ್ಳಬಹುದಿತ್ತು. ಕೆಲವೊಮ್ಮೆ ಇಂಥಹ ಹಣದ ದುರುಪಯೋಗವಾಗುತ್ತಿರುವ ಬಗ್ಗೆ ಸಂಶಯಕ್ಕೆ ಆಸ್ಪದವಿರುವದಾಗಿ ತಿಳಿದುಬರುತ್ತದೆ. ಹೀಗಾಗಿ ಸದಾಶಿವರಾಯನು ಬದಲಾವಣೆ ತರುವದು ಅನಿವಾರ್ಯವಾಯಿತು. ದಾನಗಳಿಂದ ಮತ್ತು ತೆರಿಗೆಗಳಿಂದ ಸಂಗ್ರಹಿಸಲ್ಪಟ್ಟಿರುವ ನಿಧಿಯನ್ನು ದೇಗುಲದ ಸ್ಥಾನಿಕರಿಗೆ ಸಲ್ಲುವ ಬದಲು ನಮ್ಮಾಳ್ವಾರ್ ದೇಗುಲದ 'ರಾಮನುಜಕೂಟಛತ್ರ'ದ ವ್ಯವಸ್ಥಾಪಕರಿಗೆ ಸಲ್ಲುವಂತೆ ಕಟ್ಟುಕರಾರು ವಿಧಿಸಲಾಗಿತ್ತು.[3]

2) ಗುರು ವರ್ಗದ ಪರಿಚಾರಕರು : ಸಾಂಸ್ಕೃತಿಕ ಕೇಂದ್ರವೆನಿಸಿದ ವಿಜಯನಗರ ಕಾಲದ ದೇವಾಲಯಗಳು ಶೈಕ್ಷಣಿಕ ಕೇಂದ್ರಗಳೂ ಆಗಿದ್ದರಿಂದ ವಿದ್ಯಾಸಂಸ್ಥೆಗಳಿಗೆ ಉಪಾಧ್ಯಾಯರನ್ನು ನೇಮಿಸಿ ವಿದ್ಯಾರ್ಥಿಗಳಿಗೆ ಪಾಠಬೋಧಿಸಲು ಅನುವು ಮಾಡಿಕೊಡುತ್ತಿದ್ದವು. ದೇಗುಲಕ್ಕೆ ಸಂಬಂಧಿಸಿದ ಶಾಲೆಗಳಲ್ಲಿ ಪಾಠ ಹೇಳಲು ಉಪಾಧ್ಯಾಯರು ನೇಮಕಗೊಳ್ಳುತ್ತಿದ್ದರು. ಪ್ರಾಚೀನ ಶಾಸನಗಳು ಉಪಾಧ್ಯಾಯರನ್ನು "ಒಝ" ಉಪಾಧ್ಯಾಯ 'ಭಟ್ಟೋಪಾಧ್ಯಾಯ' ಎಂದು ಹೆಸರಿಸಿವೆ. ಆಯಾ ವಿಷಯಗಳಲ್ಲಿ ಪಂಡಿತರಾದವರನ್ನು ಶಿಕ್ಷಕರಾಗಿಯೂ ಅಲ್ಲದೆ ಪುರಾಣಗಳಿಗೊಬ್ಬ ಮತ್ತು ವ್ಯಾಖ್ಯಾನಕೊಬ್ಬರಂತೆ ಕೆಲವೊಮ್ಮೆ ಶಿಕ್ಷಕರನ್ನು ನೇಮಿಸಿಕೊಳ್ಳುತ್ತಿದ್ದರೆಂಬುದನ್ನು ಬಾಗಳಿಯ ಶಾಸನ ಸ್ಪಷ್ಟಪಡಿಸುತ್ತದೆ. ಪುರಾಣ ಋಗ್ವೇದ, ಯಜುರ್ವೇದ, ನ್ಯಾಸ, ವ್ಯಾಖ್ಯಾನ ವಿಷಯಗಳನ್ನು ಪ್ರಮುಖವಾಗಿ ಅಧ್ಯಯನಮಾಡಲಾಗುತ್ತಿತ್ತು. ಅಲ್ಲದೆ ಮಧ್ಯಯುಗೀನ ಕಾಲದಲ್ಲಿಯೂ ಇದು ಮುಂದುವರೆದಿತ್ತು. ದೇಶದ ವಿವಿಧೆಡೆಗಳಿಂದ ಬಂದ ಸನ್ಯಾಸಿಗಳಿಗೆ ಶಿಕ್ಷಣಾರ್ಥಿಗಳಿಗೆ ಶಿಕ್ಷಣ ಲಭಿಸುತ್ತಿತ್ತು. ಗುಲ್ಬರ್ಗ ಜಿಲ್ಲೆಯ ಹಂದರ್ಕಿ ಶಾಸನವು ಹೇಳುವಂತೆ "ಕನ್ನಡ ಓದುವ ವಿದ್ಯಾರ್ಥಿ ಮಣಿಗಳಿಗಂ ವೋದಿಸುವ ಉಪಾಧ್ಯಾಯರ್ಗ್ಗ" ದಾನ ಬಿಟ್ಟಿದ್ದನ್ನು ತಿಳಿಸುತ್ತದೆ. ವಿಜಯನಗರ ಕಾಲದಲ್ಲಿ ಪ್ರೌಢಸಾಹಿತ್ಯ ಲಭ್ಯವಿತ್ತು. ಈ ಸಾಹಿತ್ಯ ರಚಿಸಲು ಬೇಕಾಗುವ ವ್ಯಾಕರಣವನ್ನು ಅಂದಿನ ಕವಿಗಳು ಕಲಿತಿರಲೇಬೇಕು. ಕನ್ನಡ ವ್ಯಾಕರಣದ ಬೋಧನೆ ವಿಜಯಗರ ಕಾಲದಲ್ಲಿಯೂ ಮುಂದುವರಿದಿರುವದು ಇದರಿಂದ ವಿದಿತವಾಗುತ್ತದೆ. ವಿಜಯನಗರ ಕಾಲದಲ್ಲಿ ಮಂಡ್ಯ ಜಿಲ್ಲೆಯ ಮದ್ದೂರಿನಲ್ಲಿ ಅಲ್ಲಲ್ಲಿನ ಮಹಾಜನರು ದೇಗುಲಕ್ಕೆ ಹೊಂದಿಕೊಂಡಿರುವ ಛತ್ರಕ್ಕೆ ಮತ್ತು ವೇದಗಳನ್ನು ಪಾರಾಯಣ ಮಾಡಲು ಭೂಮಿದಾನ ಮಾಡಿರುವದನ್ನು ಶಾಸನ ಉಲ್ಲೇಖಿಸಿದೆ. ಮಧ್ಯಯುಗೀನ ಕಾಲದಲ್ಲಿ ವೇದಗಳನ್ನು ಅಧ್ಯಯನಗೈಯಲು ಪಾರಾಯಣಗೈಯಲು ವಿಶೇಷ ಪ್ರೋತ್ಸಾಹ ಕೊಡಲಾಗುತ್ತಿತ್ತೆಂಬುದನ್ನು ಶಾಸನದಲ್ಲಿ ದಾಖಲಿಸಿದೆ. ಕ್ರಿ.ಶ. 1474 ರಲ್ಲಿ ಗುಮ್ಮಳಾಪುರದ ವೀರಶೈವ ಶರಣರು ವೈದಿಕ ಮತದ ವೆಂಕಟೇಶ ಉಪಾಧ್ಯಾಯರಿಗೆ ದಾನವಿತ್ತರೆಂಬುದನ್ನು ಸ್ಪಷ್ಟವಾಗಿ ತಿಳಿಸುತ್ತದೆ. ವೀರಶೈವಧರ್ಮದ

ವಿದ್ಯಾರ್ಥಿಗಳೂ ಸಹ ಬ್ರಾಹ್ಮಣ ವರ್ಗದ ಉಪಾಧ್ಯಾಯರಿಗೆ ದಾನವಿತ್ತಿರುವದನ್ನು ಶಾಸನ ದಾಖಲಿಸಿರುವುದರಿಂದ ಎರಡೂ ಧರ್ಮೀಯರ ಬಾಂಧವ್ಯಕ್ಕೆ ಈ ಶಾಸನ ನಿದರ್ಶನದಂತಿದೆ.[4]

ಪುರಾಣಿಕರು : ಧಾರ್ಮಿಕ ಬೋಧನೆಯ ಕೇಂದ್ರಗಳೆನಿಸಿದ ದೇವಾಲಯಗಳಲ್ಲಿ ಪುರಾಣ ಹೇಳಲು ಪುರಾಣಿಕರನ್ನು ನೇಮಿಸಿಕೊಳ್ಳುತ್ತಿದ್ದರು. ಇವರಿಗೆ ಉಂಬಳಿ ರೂಪದಲ್ಲಿ ಸಂಬಳ ಕೊಡುತ್ತಿದ್ದರು. ಬಾಗಳಿಯ ಶಾಸನದಲ್ಲಿ ಪುರಾಣದ ಈಶ್ವರಭಟ್ಟೋಪಾಧ್ಯಾಯರಿಗೆ ತೋಟ ಗದ್ದೆಗಳನ್ನು ದಾನಬಿಟ್ಟಿದ್ದನ್ನು ದಾಖಲಿಸಿದೆ. ಪುರಾಣಿಕನ ಹುದ್ದೆಯು ಖಾಯಂ ಹುದ್ದೆಯಾಗಿದ್ದು ಅವನ ಜೀವನೋಪಾಯಕ್ಕಾಗಿ ಭೂಮಿ ದಾನವಿತ್ತಿರುವುದನ್ನು ಶಾಸನಗಳು ದಾಖಲಿಸಿವೆ. ಹಂಪೆಯ ಶಾಸನದಲ್ಲಿ ಇಬ್ಬರು ಪುರಾಣಿಕರಿಗೆ ದತ್ತಿ ಬಿಟ್ಟಿದ್ದರೆಂದು ಹೇಳಲಾಗಿದೆ.[5] ವಿಜಯನಗರ ಕಾಲದಲ್ಲಿ ಕೂಡಾ ಪುರಾಣಿಕರ ವೃತ್ತಿ ಮುಂದುವರೆದುದು ಸ್ಪಷ್ಟವಾಗುತ್ತದೆ.

ಜ್ಯೋತಿಷ್ಯ : ಜ್ಯೋತಿಷ್ಯಶಾಸ್ತ್ರ ಪಂಡಿತರು ಪೂಜಾದಿ ಉತ್ಸವಗಳನ್ನು ಕಾಲಕಾಲಕ್ಕೆ ನಡೆಸಲು ಆಯಾ ಹಬ್ಬ ಉತ್ಸವಗಳನ್ನು ಆಚರಿಸುವ ವಾರ, ತಿಥಿ, ನಕ್ಷತ್ರ, ಶುಭಮುಹೂರ್ತ ನಿಶ್ಚಯಿಸಲು ಜೋತಿಷಿಗಳನ್ನು ನೇಮಿಸುತ್ತಿದ್ದರು. ಇವರಿಗೆ ಭೂಮಿಯನ್ನು ದತ್ತಿಯಾಗಿ ಕೊಡುವುದು ಜಾರಿಯಲ್ಲಿತ್ತು.

ಅಂಗಭೋಗದ ಪರಿಚಾರಕರು : ಅಂಗಭೋಗ ಅಲಂಕಾರವು ಪ್ರಾಚೀನ ಕಾಲಕ್ಕಿಂತ ವಿಜಯನಗರ ಕಾಲದಲ್ಲಿ ಅತ್ಯಂತ ವಿಜೃಂಭಣೆಯಿಂದ ಜರುಗುತ್ತಿತ್ತು. ದೇವರ ಗರ್ಭಗುಡಿಯಲ್ಲಿ ಮೂರ್ತಿಗೆ ಸಲ್ಲುವ ಪೂಜೆ ದೀಪ ಧೂಪ ಶ್ರೀಗಂಧ ಅಭಿಷೇಕ ಇತ್ಯಾದಿ ಅಲಂಕಾರ ಮಂತ್ರೋಚ್ಚಾರಣೆಯಂತಹ ಸೇವೆಯನ್ನು ಅಂಗಭೋಗ ಸೇವೆ ಎನ್ನಲಾಗಿದೆ. ಈ ಪರಿಚಾರಕರನ್ನು ದೇಗುಲದ ಆಡಳಿತಗಾರರು ನೇಮಿಸಿಕೊಳ್ಳುತ್ತಿದ್ದರು. ದೇವರಿಗೂ ಭಕ್ತರಿಗೂ ಮಧ್ಯವರ್ತಿಯಾಗಿ ಕಾರ್ಯೈಯಲು ಪೂಜಾರಿಯಾಗಿ ಆಗಮಶಾಸ್ತ್ರಗಳನ್ನು ಬಲ್ಲ ಬ್ರಾಹ್ಮಣನನ್ನು ನೇಮಿಸುತ್ತಿದ್ದರು. ಕಾಳಾಮುಖ ಮತ್ತು ಪಾಶುಪತರ ದೇಗುಲಗಳಲ್ಲಿ ದೇವಾಲಯದ ಸ್ಥಾನಪತಿಯೇ ಪೂಜಾರಿಯಾಗಿದ್ದು ತಿಳಿದುಬರುತ್ತದೆ. ದಾವಣಗೇರಿ ಜಿಲ್ಲೆಯ ಹರಪನಹಳ್ಳಿ ತಾಲೂಕಿನ ಹಿರೇಮೇಗಳಗೇರಿಯಲ್ಲಿಯ ಸ್ವಯಂಭುದೇವರಿಗೆ ಸತತಂ ಪತ್ರೆ ಪುಷ್ಪಗಳಿಂ ಪೂಜೆಗೊಳ್ಳುವ ಪೂಜಾರಿಗಳಲ್ಲಿ ಸ್ಥಾನಪತಿ ಚಂದ್ರಭೂಷಣ ಪಂಡಿತರ ಕಾಲುತೊಳೆದು ಗದ್ದೆ ದಾನಬಿಟ್ಟಿದ್ದು ತಿಳಿಯುತ್ತದೆ. ಕ್ರಿ.ಶ. 1429 ರಲ್ಲಿ ಉಜ್ಜನಿಗ್ರಾಮದ ಜನತೆಯ ಪೂಜಾರಿಗಳಿಗಾಗಿ ತೆರಿಗೆರಹಿತ ಭೂಮಿದಾನ ಮಾಡಿದ್ದನ್ನು ಬಳ್ಳಾರಿ ಜಿಲ್ಲಾ ಹೊಸಪೇಟೆ ತಾಲೂಕು ನಾಗೇನಹಳ್ಳಿಯ ಶಾಸನ ತಿಳಿಸುತ್ತದೆ ಜನತೆ ಪೂಜಾರಿಗಳ ಮೇಲಿಟ್ಟಿದ್ದ ನಂಬಿಕೆಗೆ ಇದು ಸಾಕ್ಷಿಯಂತಿದೆ.

ಅಭಿಷೇಕದ ಪರಿಚಾರಕರು : ದೇವರಿಗೆ ಸಂದರ್ಭಕ್ಕನುಗುಣವಾಗಿ ನಡೆಯುವ ಅಭಿಷೇಕದಲ್ಲಿ ಪೂಜಾರಿಗಳಿಗೆ ಸಹಾಯಕರಾಗಿ ಅಭಿಷೇಕದ ಪರಿಚಾರಕರನ್ನು ನೇಮಿಸಿಕೊಳ್ಳುತ್ತಿದ್ದರು. ಹಂಪೆಯ ಶಾಸನವೊಂದು ಅಭಿಷೇಕದ ಜನರಿಗೆ ದಾನಬಿಟ್ಟಿದ್ದನ್ನು ದಾಖಲಿಸಿದೆ. ಅಭಿಷೇಕ ಸಮಯದಲ್ಲಿ ದೇವರಿಗೆ ಮಂತ್ರೋಚ್ಚಾರಣೆ ಮಾಡುವ ಸಂಪ್ರದಾಯವಿದ್ದುದರಿಂದ ವೇದಬಲ್ಲವರು ಆಗಮ ಕಲಿತವರು ಮಂತ್ರೋಚ್ಚಾರಕರಾಗಿ ನೇಮಕವಾಗುತ್ತಿದ್ದರು. ಹಂಪೆಯ ಶಾಸನವು ತಿರುಮಲರಾಜ ಒಡೆಯರು ದೇವರಿಗೆ ಮಂತ್ರ ಉಚ್ಚರಿಸಲು ಇಬ್ಬರು ಬ್ರಾಹ್ಮಣರನ್ನು ನೇಮಿಸಿದ್ದನ್ನು ಹೇಳುತ್ತದೆ. ಇರ್ವರಿಗೂ ರಾಜನು ಭೂಮಿದಾನ ನೀಡಿದ್ದುದಾಗಿ ಶಾಸನದಲ್ಲಿ ಹೇಳಲಾಗಿದೆ.

ಇತಿಹಾಸದ ಜನರು : ದೇವಸ್ಥಾನದ ಇತಿಹಾಸ ಹೇಳಲು ಪಂಡಿತರಾದ ಬ್ರಾಹ್ಮಣರನ್ನು ನೇಮಿಸಿಕೊಳ್ಳುತ್ತಿದ್ದರೆಂಬುದನ್ನು ಹಂಪಿಯ ಶಾಸಸವೊಂದು ತಿಳಿಸುತ್ತದೆ. ಈ ಇತಿಹಾಸಕಾರನಿಗೆ ಅಚ್ಯುತದೇವರಾಯ ದಾನಬಿಟ್ಟ ವಿಷಯವನ್ನು ತಿಳಿಸುತ್ತದೆ.

ಹೂಗಾರರು : ದೇಗುಲದ ದೇವರ ಪೂಜೆಗೆ ಹೂವು ತರಲು ಹೂಗಾರರನ್ನು ನೇಮಿಸುತ್ತಿದ್ದರು. ಕ್ರಿ.ಶ. 1368ರಲ್ಲಿ ತಗಡೂರಿನ ಅರಸ ನಾಡಿನಗೌಡ ಪ್ರಜೆಗಳು ದೇವಾಲಯದ ಪೂಜಾರಿಗೆ ದತ್ತಿ ನೀಡಿದ್ದಲ್ಲದೆ ಆ ಮೂಲಸ್ಥಾನೇಶ್ವರ ದೇವರ ನಂದಾದೀಪಕ್ಕೆ ಹೂಗಳನ್ನು ಸರಬರಾಜುಗೈಯುವವನಿಗೆ ಕಾಲಕಾಲಕ್ಕೆ ಕೊಡುತ್ತಿದ್ದ 120 ಪಗೋಡಗಳನ್ನು ಕೊಡುವುದರ ಬದಲು ಅವನಿಗೆ ಪ್ರತಿವರ್ಷವೂ ಆ ಪ್ರದೇಶದ ತೆರಿಗೆಯಲ್ಲಿ 120 ಪಗೋಡಗಳನ್ನು ಕೊಡಬಹುದೆಂದು ಹೇಳಲಾಗಿದೆ.

ಹೋಮದ ಬ್ರಾಹ್ಮಣರು : ದೇವಾಲಯದಲ್ಲಿ ನಡೆಯುವ ಪವಿತ್ರ ಕಾರ್ಯಗಳಲ್ಲಿ ಹೋಮ ಹವನ ಯಜ್ಞ ನಡೆಸಲು ಹೋಮದ ಬ್ರಾಹ್ಮಣರನ್ನು ನೇಮಿಸುತ್ತಿದ್ದರು. ಹೋಮವನ್ನು ಸಾಂಗೋಪಾಂಗವಾಗಿ ನೆರವೇರಿಸಲು ಇಬ್ಬರು ಬ್ರಾಹ್ಮಣರನ್ನು ಸೂಡಿಯ ನಾಗೇಶ್ವರ ದೇವಾಲಯದಲ್ಲಿ ನೇಮಿಸಿದ್ದು ವಿದಿತವಾಗುತ್ತದೆ.

ನಂದಾದೀವಿಗೆ ಮಾಣಿಗಳು : ಮಂದಿರಗಳಲ್ಲಿ ನಂದಾದೀಪಕ್ಕೆ ಎಣ್ಣೆ ಹಾಕಲು ದೀಪನಂದದಂತೆ ನೋಡಿಕೊಳ್ಳಲು ಪರಿಚಾರಕರನ್ನು ನೇಮಿಸಿಕೊಂಡು ಅವರಿಗೆ ದಾನದತ್ತಿ ಕೊಡುತ್ತಿದ್ದರು. ವಿಜಯನಗರ ಕಾಲದಲ್ಲಿ ಪವಿತ್ರ ದಿನಗಳಲ್ಲಿ ಉತ್ಸವಗಳಲ್ಲಿ ಪ್ರತಿನಿತ್ಯ ದೇವರ ಸಮ್ಮುಖದಲ್ಲಿ ನಂದಾದೀಪ ಪರಿಚಾರಕರು ಈ ಕಾರ್ಯಕ್ಕೆ ಮೀಸಲಾಗಿದ್ದರು.

ಅಡಿಗೆಯವರು : ದೇವರ ಪೂಜೆಯ ನಂತರ ನೈವೇದ್ಯಕ್ಕಾಗಿ ಛತ್ರದಲ್ಲಿ ಅಡಿಗೆ ಮಾಡುವವರನ್ನು ನೇಮಿಸಿಕೊಳ್ಳುತ್ತಿದ್ದರು. ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪೂರ ತಾಲೂಕಿನ ಕೋಟೇಶ್ವರದ ಶ್ರೀ ಕೋಟಿನಾಥದೇವರ ದರ್ಶನಕ್ಕೆ ಬಂದ ಭಂಡಾರದ ಗುರುರಾಜ ಒಡೆಯರು ಮಠದಲ್ಲಿ ಛತ್ರವನ್ನು ಪ್ರಾರಂಭಿಸುತ್ತಾರೆ. ಅಲ್ಲಿ 10 ಜನ ಬ್ರಾಹ್ಮಣರು ಊಟ ಮಾಡಲು ವ್ಯವಸ್ಥೆ ಏರ್ಪಡಿಸುತ್ತಾರೆ. ಅಡಿಗೆ ಮಾಡಲು ಒಬ್ಬ ಬ್ರಾಹ್ಮಣನು ಆ ಛತ್ರದಲ್ಲಿದ್ದುದನ್ನು ತಿಳಿಯಬಹುದಾಗಿದೆ. ಕ್ರಿ.ಶ. 1365 ರಲ್ಲಿ ಮಹಾಮಂಡಳೇಶ್ವರ ವೀರಬುಕ್ಕಣ್ಣ ಒಡೆಯರ ನಿರೂಪದ ಮೇರೆಗೆ ಮಲ್ಲೆಯ ದಂಡನಾಯಕರು ಬಾರಕೂರು ರಾಜ್ಯವನ್ನಾಳುವ ಅವಧಿಯಲ್ಲಿ ನಾಗಪ್ಪನವರ ಮಕ್ಕಳಾದ ಧರಣಿ ದೇವಂಗಳು ಕೋಪೇಶ ದೇವರಲ್ಲಿ 5 ಜನ ಬ್ರಾಹ್ಮಣರು ಅಡಿಗೆ ಮಾಡುವವನೊಬ್ಬನು ಒಟ್ಟು ಆರು ಜನ ಬ್ರಾಹ್ಮಣರಿಗೆ ಭೋಜನಕ್ಕೆ 4 ನಿವೇಶನ 124 ಮುಡಿ ಭತ್ತದ ಗದ್ದೆ 18 ಹೊನ್ನುಗಳನ್ನು ದಾನ ನೀಡುತ್ತಾನೆ. ಇದು ಅಡಿಗೆಯವನು ದೇಗುಲದ ಪೂಜಾದಿ ಉತ್ಸವಗಳಲ್ಲಿ ಮತ್ತು ಛತ್ರದಲ್ಲಿರಲೇಬೇಕಾದ ಅವಶ್ಯಕತೆಯನ್ನು ತಿಳಿಸುತ್ತದೆ.

4) ರಂಗಭೋಗದ ಪರಿಚಾರಕರು : ಪ್ರಾಚೀನ ಕಾಲಕ್ಕಿಂತ ಮಿಗಿಲಾಗಿ ವಿಜಯನಗರ ಕಾಲದಲ್ಲಿ ರಂಗಭೋಗ ಹೆಚ್ಚು ಪ್ರಚುರವಾಯಿತು. ಚಿಕ್ಕದಾದ ನವರಂಗದ ಪ್ರದೇಶವನ್ನು ಹೊರತುಪಡಿಸಿ ಹೊಸ ಮಹಾರಂಗ ಮಂಟಪ ರಚಿಸಲಾಯಿತು. 64 ಕಂಬಗಳುಳ್ಳ ಈ ಮಂಟಪದಲ್ಲಿ ಹೆಚ್ಚೆಚ್ಚು ಅಲಂಕೃತ ಕಂಬಗಳನ್ನು ಬಳಸಿ ಎತ್ತರ ವೇದಿಕೆಯ ಮೇಲೆ ರಚಿಸಿ ಹೆಚ್ಚೆಚ್ಚು ಜನರು ಕುಳಿತು ನೋಡುವ ಅವಕಾಶ ನಿರ್ಮಿಸಲಾಯಿತು. ವಿಜಯನಗರ ಕಾಲದಲ್ಲಿ ದೇಗುಲದ ರಂಗಮಂಟಪದಲ್ಲಿ ನಡೆಯುವ ನಾಟ್ಯ ನಾಟಕ ಸಂಗೀತ ವಾದ್ಯ ನೃತ್ಯ ಕುಣಿತ ಇತ್ಯಾದಿ ರಂಗಭೋಗದಲ್ಲಿ ಸ್ತ್ರೀ ಪುರುಷರಿಬ್ಬರಿಗೂ ಅವಕಾಶವಿತ್ತು. ದೇವದಾಸಿಯರು ರಂಗಭೋಗದ ಉಪಕರಣಗಳಾಗಿದ್ದರು. ದೇವದಾಸಿಯರೆಲ್ಲರೂ ವೇಶ್ಯೆಯರೇ ಆಗಿದ್ದರೂ. ವೇಶ್ಯೆಯರೆಲ್ಲರೂ ದೇವದಾಸಿಯರಾಗಿರಲಿಲ್ಲ. ರಾಜಸಭೆಯಲ್ಲಿ ವೇಶ್ಯೆಯರಿದ್ದರೆ ಶುಭಸೂಚನೆ ಎಂದು ಸೋಮನಾಥನು ಹೇಳಿದ್ದಾನೆ. ಈ ಪದ್ಧತಿಗೆ ಆಳುವರ್ಗವು ಪ್ರೋತ್ಸಾಹಿಸುತ್ತಿದ್ದುದರಿಂದ ರಾಜಧಾನಿಯಲ್ಲಿ ಅನಾರೋಗ್ಯಕರ ಸಂಸ್ಕೃತಿಯ ಸಮಾಜದ ನಿರ್ಮಾಣದೊಡನೆ ಸಮಾಜದ ನೈತಿಕತೆಯು ಕುಸಿಯಲಾರಂಭಿಸಿದ್ದು ದುರಂತದ ಸಂಗತಿ.[6] ಇದರಿಂದ ವಿಜಯನಗರದಲ್ಲಿ ಬಹುತೇಕ ದೇವಸ್ಥಾನಗಳು ಕಾಮಕೇಳಿಯ ತಾಣಗಳಾಗಿದ್ದು ಖೇದಕರವಾದ ಸಂಗತಿಯೇ ಆಗಿದೆ.

ಸಂಗೀತ ವಾದ್ಯಗಾರರು : ವಿಜಯನಗರ ಕಾಲದಲ್ಲಿ ದೇವರ ಉತ್ಸವವನ್ನು ಅತ್ಯಂತ ವಿಜೃಂಭಣೆಯಿಂದ ಆಚರಿಸುತ್ತಿದ್ದರಿಂದ ಸಂಗೀತ ಮತ್ತು ವಾದ್ಯ ವೃಂದದವರನ್ನು ಹೆಚ್ಚಿನ ಸಂಖ್ಯೆಯಲ್ಲಿ ನೇಮಿಸಿಕೊಳ್ಳುತ್ತಿದ್ದರು. ಹಬ್ಬ ಉತ್ಸವ ಪೂಜೆಗಳಲ್ಲಿ ನಾಗಸ್ವರ (ಓಲಗ) ಡೊಳ್ಳು, ತಾಳ ಮದ್ದಳೆ, ಸಂಗೀತ ವಾದ್ಯ ಮೇಳದವರ ಸೇವೆಗಾಗಿ ಸದಾಶಿವರಾಯನು ಭೂಮಿ ದತ್ತಿ ಬಿಟ್ಟಿರುವದಾಗಿ 1552 ರ ಶಾಸನದಲ್ಲಿ ಹೇಳಲಾಗಿದೆ. ಕುರುಗೋಡಿನ ಸೀಮೆಯಲ್ಲಿ ಸೋಮಸಮುದ್ರ ಅಗ್ರಹಾರದಲ್ಲಿ ತಾಳ ಮದ್ದಳೆಗಳನ್ನು ಬಾರಿಸಲು ಮಹಾಜನರು ದಾನಬಿಟ್ಟಿದ್ದನ್ನು ತಿಳಿಯಬಹುದಾಗಿದೆ.

5) ಸೇವಾ ವರ್ಗದ ಪರಿಚಾರಕರು : ವಿಜಯನಗರ ಕಾಲದಲ್ಲಿ ದೇವಾಲಯಗಳು ಬೃಹತ್ ಸಾಂಸ್ಕೃತಿಕ ಕೇಂದ್ರಗಳಾಗಿ ಹೊರಹೊಮ್ಮಿದ್ದರಿಂದ ಕೆಲಸಗಾರರ ಸಂಖ್ಯೆಯೂ ಅಧಿಕವಾಯಿತು. ಹೀಗಾಗಿ ದೇಗುಲದ ಲೆಕ್ಕ ಪರಿಶೋಧಕರು ದೇವಾಲಯದ ಹೊಸ ಕಟ್ಟಡ ಭಾಗ ನಿರ್ಮಿಸುವ ಶಿಲ್ಪಿಸ್ಥಪತಿಗಳು ವಿವಿಧ ಕಾರ್ಯನಿರ್ವಹಿಸುವ ಸೇವಾವರ್ಗದ ಪರಿಚಾರಕರನ್ನು ನೇಮಿಸಿಕೊಳ್ಳಲಾಗುತ್ತಿತ್ತು. ಪಲ್ಲಕ್ಕಿ ಸೇವಾಕರ್ತರನ್ನು ಛತ್ರಕ್ಕೆ ಅಡಿಗೆಗೆ ಹೋಮ ಹವನಕ್ಕೆ ಕಟ್ಟಿಗೆ ಪೂರೈಸಲು ಕಟ್ಟಿಗೆಯವರನ್ನು

ಆಡಳಿತಗಾರರು ನೇಮಿಸುತ್ತಿದ್ದರು. ದೇವಾಲಯದ ಭಕ್ತರ ಸಂಖ್ಯೆ ಹೆಚ್ಚುತ್ತಾ ಜನಪ್ರಿಯತೆ ಗಳಿಸಿದಂತೆ ಭೂಮಿ, ಹಣ, ಆಭರಣ, ಸಂಖ್ಯೆಯೂ ಹೆಚ್ಚಾಗಿ ಆದಾಯ ವರ್ಧಿಸಲಾರಂಭಿಸಿತು. ಭಕ್ತರು ದೇವರಿಗೆ ಬೆಳ್ಳಿ ಬಂಗಾರ ಸಾಮಾನುಗಳನ್ನು ಹರಕೆ ರೂಪದಲ್ಲಿ ಸಮರ್ಪಿಸುತ್ತಿದ್ದುದರಿಂದ ದೇವರ ಪೂಜಾ ಸಾಮಗ್ರಿಯ ವ್ಯಾಪಾರ ಮಳಿಗೆಗಳು ತಲೆಯೆತ್ತಿ ಪೇಟೆಯ ಸ್ವರೂಪ ಪಡೆಯಿತು. ಆದ್ದರಿಂದ ಆಯ-ವ್ಯಯ ಲೆಕ್ಕವಿಡಲು ಆಡಳಿತಗಾರರು ಸೇನುಭೋವನನ್ನು ನೇಮಿಸಿದರು. ಹಂಪೆಯಲ್ಲಿರುವ ಶಾಸನವೊಂದು ದೇವಾಲಯಕ್ಕೆ ನೇಮಕವಾದ ಸೇನುಭೋವನಿಗೆ ದತ್ತಿ ನೀಡಿದ ವಿಷಯ ಅರುಹುತ್ತದೆ.

ಕಾವಲುಗಾರರು : ಧನ ಕನಕ ಭೂಮಿ ಆಭರಣಗಳಂತಹ ಅಪಾರ ಸಂಪತ್ತಿನಿಂದ ಶ್ರೀಮಂತಿಕೆಯ ಆಗರವಾಗಿರುವ ದೇಗುಲಗಳ ಗೋಪುರದ ಚಿನ್ನದ ಹೊದಿಕೆ, ಚಿನ್ನದ ಕಳಸ ಕಾಯಲು ಕಾವಲುಗಾರರನ್ನು ಆಡಳಿತವು ನೇಮಿಸಿಕೊಳ್ಳುತ್ತಿದ್ದರು. ಹಂಪೆಯ ವಿರೂಪಾಕ್ಷತೀರ್ಥದ ರಕ್ಷಕನಾಗಿ ಸಾಮಂತ ಮಾದೆಯನಾಯಕ ನೇಮಕವಾಗಿದ್ದನೆಂದು ಹಂಪೆಯಶಾಸನ ತಿಳಿಸುತ್ತದೆ.[7] ಹೀಗೆ ಒಬ್ಬ ಸಾಮಂತನೇ ಮತ್ತಂಗ ಪರ್ವತದ ಕಾವಲಿನ ಹೊಣೆಗಾರನಾಗಿದ್ದನೆಂದರೆ ಅಲ್ಲಿನ ಕಾವಲು ಸೈನಿಕರ ಸಂಖ್ಯೆ ನೂರಾರು ಇರಬಹುದಾಗಿದ್ದರಿಂದ ದೇವಾಲಯದ ಸಂಕೀರ್ಣವು ನೂರಾರು ಜನ ಕಾವಲುಗಾರರನ್ನು ಹೊಂದಿರುವದು ಅತ್ಯವಶ್ಯವಾಗಿತ್ತು. ಕೋಲಾರ ಜಿಲ್ಲೆಯ ಮುಳುಬಾಗಿಲು ತಾಲೂಕಿನ ವಿರೂಪಾಕ್ಷಿಯ ವಿರೂಪಾಕ್ಷ ಮಂದಿರದ ಗೋಪುರಕ್ಕೆ ಚಿನ್ನದ ಹೊದಿಕೆ ಹೊದಿಸಿ ಚಿನ್ನದ ಕಳಸವನ್ನು ತೊಡಿಸಿದನೆಂದು ವಿರೂಪಾಕ್ಷಿಯ ಶಾಸನ ಅರುಹುತ್ತದೆ.

ಹೀಗೆ ವಿಜಯನಗರ ಅರಸರ ಕಾಲದ ಆಡಳಿತದಲ್ಲಿ ಉದ್ಯೋಗಾಕಾಂಕ್ಷಿಗಳಿಗೆ ವಿವಿಧ ಪರಿಚಾರಕರ ಹುದ್ದೆಗಳು ವಂಶಪಾರಂಪರ್ಯವಾಗಿ ಉದ್ಯೋಗ ಅವಕಾಶಗಳು ಮೀಸಲಾಗಿದ್ದವು. ದೇವಾಲಯದ ಪರಿಚಾರಕ ಹುದ್ದೆಗಳು ಶೈವವೈಷ್ಣವ ಎರಡೂ ದೇಗುಲಗಳಲ್ಲಿ ಒಂದೇ ರೂಪದ ಹೆಸರಿದುದ್ದನ್ನು ಶಾಸನಗಳು ದಾಖಲಿಸಿವೆ. ದೇವಸ್ಥಾನದ ಆಡಳಿತಗಾರನಾದ ಸ್ಥಾನಾಚಾರ್ಯರ ನೇತೃತ್ವದಲ್ಲಿ ಅಲ್ಲಿಯ ವಿವಿಧ ನೌಕರರು ತಮ್ಮ ಕಾಯಕದಲ್ಲಿ ಶ್ರದ್ಧೆ ನಿಷ್ಠೆಯಿಂದ ನಡೆದುಕೊಳ್ಳುತ್ತಿದ್ದರು. ಆಯಾ ಪರಿಚಾರಕರು ಸ್ಥಾನಾಚಾರ್ಯರು ವಹಿಸಿಕೊಟ್ಟ ವೃತ್ತಿಯನ್ನು ಪ್ರಾಮಾಣಿಕವಾಗಿ ನಿರ್ವಹಿಸುತ್ತಿದ್ದರು. ಹಾಗೂ ತಮಗೆ ದೇವಾಲಯದ ಆಡಳಿತ ಮಂಡಳಿಯವರು ಕೊಟ್ಟ ದತ್ತಿಯಿಂದ ಸಂತೃಪ್ತರಾಗಿ ನೆಮ್ಮದಿಯಿಂದ ಜೀವನ ನಿರ್ವಹಿಸುತ್ತಿದ್ದರು. ಮಧ್ಯಯುಗೀನ ಕಾಲದ ಸಮಾಜವು ಧಾರ್ಮಿಕ ಪ್ರವೃತ್ತಿಪ್ರೀಯರಾಗಿದ್ದುದರಿಂದ ಅಂದಿನ ಕಾಲದಲ್ಲಿ ದೇವರ ಬಗ್ಗೆ ಭಯ ಭಕ್ತಿವುಳ್ಳವರಾಗಿದ್ದರು. ಹೀಗಾಗಿ ಸ್ಥಾನಾಚಾರ್ಯರ ಯೋಗಿಗಳ ತಪಶ್ಯಕ್ತಿಗೆ ಹೆದರಿ ವಿನೀತರಾಗಿ ಸರ್ವ ಪರಿಚಾರಕರು ನಿಷ್ಠೆ ಶ್ರದ್ಧಾಭಕ್ತಿಯಿಂದ ಕಾಯಕದಲ್ಲಿ ಕಾರ್ಯನಿರತರಾಗಿರುತ್ತಿದ್ದರು. ವಿಜಯನಗರ ಕಾಲದ ಮಧ್ಯದ ವೇಳೆಗಾಗಲೇ ಸ್ಥಾನಪತಿಯನ್ನು ರಾಜರೇ ನೇಮಕ ಮಾಡುತ್ತಿದ್ದುದರಿಂದ ಪರಿಚಾರಕರು ಪ್ರಭುತ್ವಕ್ಕೆ ಹೆದರಿ ಕಾರ್ಯನಿರ್ವಹಿಸುತ್ತಿದ್ದರು. ಇದರಿಂದಾಗಿ ದೇವಾಲಯದ ಸರ್ವಕಾರ್ಯಗಳು ಸಮಯ ಸನ್ನಿವೇಶಕ್ಕನುಗುಣವಾಗಿ ನಡೆದು ಇಡೀ ದೇವಸ್ಥಾನದ ಆಡಳಿತ ಚಕ್ರವು ಸುಲಲಿತವಾಗಿ ಮುನ್ನಡೆಯುತಿತ್ತು.

ಆಧಾರಸೂಚಿ ಮತ್ತು ಟಿಪ್ಪಣಿಗಳು

1) **ವಿಜಯನಗರ ಕಾಲದ ಶೈವ ದೇವಾಲಯಗಳು** – ಡಾ. ಕೆ. ಸತೀಶ, ಕಸಾಪ, ಬೆಂಗಳೂರು ಪು–178
2) ಅದೇ ಪು–180
3) **ವಿಜಯನಗರಕಾಲದ ರಾಮಾನುಜಕೂಟಗಳು** – ಪ್ರೊ. ಲಕ್ಷ್ಮಣ ತೆಲಗಾವಿ, ಕವಿವಿ, ಹಂಪಿ, ಪು–21
4) ಶಾಸನಗಳಲ್ಲಿ ಶಿವಶರಣರು, ಎಂ.ಎಂ. ಕಲ್ಬುರ್ಗಿ, ಪು–114
5) SII, IX (ii) No. 546 ಕ್ರಿ.ಶ. 1534
6) **ಪ್ರವಾಸಿ ಕಂಡ ಇಂಡಿಯಾ**–ಸಂ. ಎಚ್.ಎಲ್. ನಾಗೇಗೌಡ ಸಂ.22 ಮೈವಿವಿ ಮೈಸೂರು ಪು–292
7) SII, IV No-260

32. ವಿಜಯನಗರ ಅರಸರ ಮಾಂಡಲೀಕರಾದ ಉಮ್ಮತ್ತೂರ ದೊರೆಗಳ ಆಶ್ರಿತ ಕವಿ ಆರಾಧ್ಯ ದೇವನಿಂದ ರಚಿಸಲ್ಪಟ್ಟ "ಅರುವತ್ತುಮೂವರ ಚಾರಿತ್ರ"

– ಡಾ. ಬಿ. ನಂಜುಂಡಸ್ವಾಮಿ

ಕನ್ನಡ ನಾಡಿನ ಮೂಲೆ ಮೂಲೆಯಲ್ಲಿ ಯುವ ವಿದ್ವಾಂಸರು ಸಂಶೋಧನೆ ಮಾಡಿದಲ್ಲಿ ನಮಗೆ ತಿಳಿಯದ ಹತ್ತಾರು ಹೊಸ ಕೃತಿಗಳು ಖಂಡಿತ ದೊರೆತೇ ದೊರೆಯುತ್ತವೆ. ನಾವು ನಿಧಾನ ಮಾಡಿದಷ್ಟು ಅವುಗಳು ಇದ್ದ ಜಾಗದಲ್ಲೇ ಶಿಥಿಲವಾಗಿ ಹೋಗುತ್ತವೆ. ಆಧುನಿಕ ಪರಿಕರಗಳನ್ನು ಉಪಯೋಗಿಸಿಕೊಂಡು Xerox, Scanning, Digitalization ಮುಂತಾದ ರೂಪದಲ್ಲಿ ಸಂರಕ್ಷಿಸಿ ಮುಂದಿನ ತಲೆಮಾರಿಗೆ ತಲುಪಿಸಬೇಕಾದ ಜವಾಬ್ದಾರಿ ನಮ್ಮಗಳದು. ಪ್ರೊ. ಸಿ. ಮಹಾದೇವಪ್ಪನವರು ತಮ್ಮ ಬಾಲ್ಯದಲ್ಲೇ ಆರಾಧ್ಯದೇವ ವಿರಚಿತ ಅರುವತ್ತುಮೂವರ ಚಾರಿತ್ರ ಹಸ್ತಪ್ರತಿಯನ್ನು ಹುಡುಕಿ ಸಂಪಾದಿಸಿ ಇಟ್ಟುಕೊಂಡಿದ್ದರು. ತುಮಕೂರಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿದ್ದಾಗ "The unknown pages in the history of Kannada literature" ಕಿರು ಪುಸ್ತಕದಲ್ಲಿ ಕೃತಿಯ ಬಗ್ಗೆ ಇಂಗ್ಲೀಷ್ ಭಾಷೆಯಲ್ಲಿ ವಿವರಣೆ ನೀಡಿದ್ದರು. ಈ ಕಿರು ಪುಸ್ತಕ 29.10.1960 ರಲ್ಲಿ ಪ್ರಕಟವಾಗಿತ್ತು. ಆ ಪುಸ್ತಕದಲ್ಲಿ ತಮ್ಮ ಅಭಿಪ್ರಾಯವನ್ನು ಈ ರೀತಿ ವ್ಯಕ್ತ ಮಾಡಿದ್ದಾರೆ.

This work has not been mentioned in any of the histories of Kannada literature. It is a shatapadi work of the poet son of Gujjaiahdeva whose father was veeranaradhya. the poet might have flourished at end of the 16th and the beginning of 17th Century in Mysore District. An unknown page in the history of Kannada literature is reveled by the finding of Aradhyadeva's Aruvattumuvara caritra.

It is a good literary work and since it deals with geneology of the great teachers and the mythology of the holy place trimukuta (ತ್ರಿಮಕೂಟ) and the river cauvery. It is a very useful and a rare work in kannada with both mythological and historical significance. The work is divided into nine sandhis containing in total 561 vardhaka shatpadis.

The date of copying of the palmleaf manuscript text by one mallarajaiah son of Depuvodeya is mentioned as on 10th Janujary 1679.

ಮೊದಲನೆ ಸಂಧಿಯ ಈ ಪೀಠಿಕಾಪ್ರಕರಣದ ಆದಿಯಲ್ಲಿ ಶ್ರೀ ಭುಜಂಗೇಶ್ವರನಾಮ ಶಿವಸ್ತುತಿಯಿದೆ. ಕ್ರಮೇಣ ಅಂಬಿಕಾಮಾತೆಯಾದ ಗಿರಿಜೆ, ಗುಹ, ವೀರೇಶ್ವರ, ವಿಘ್ನೇಶ್ವರ, ನಂದಿಕೇಶ್ವರ, ಭೃಂಗೀಶ್, ಶಾರದೆಯರನ್ನೂ ಮೋಕ್ಷಗಾಮಿಗಳಾದ ಹರದತ್ತಾಚಾರ್ಯ, ಬೋಧನಾರ್ಯ, ನೀಲಕಂಠಾಚಾರ್ಯ, ಅಘೋರ ಶೈವಾಚಾರ್ಯರ ಅಡಿಗೆರಗಿ ಭಕ್ತಿಭಾವದಿಂದ

ಸ್ಮರಿಸಿದ್ದಾರೆ. ಪಂಡಿತತ್ರಯರಾದ ಶ್ರೀಪತಿಪಂಡಿತ, ಶಿವಲೆಂಕಮಂಚಣ್ಣ ಮತ್ತು ಮಲ್ಲಿಕಾರ್ಜುನ ಪಂಡಿತ, ಪಾಲ್ಕುರಿಕೆ ಸೋಮೇಶ್ವರ ಮುಂತಾದ ಮುಖ್ಯದೇಶಿಕರ ವಾಕ್ಪ್ರಸಾದಶೇಷವನ್ನು ಕೋರಿದ್ದಾನೆ. ಬಾಣ, ಕಾಳಿದಾಸ ಭೋಜರಾಜ, ಶಿವನಿಷ್ಠಾವಲಂಬಿ ನಂಬಿ, ಹರಿಹರರನ್ನು ಸ್ತುತಿಸಿದ್ದಾನೆ. ಪೂರ್ವಕವಿಗಳ ಶಬ್ದಚಿತ್ರ, ರಸಭಾವಗಳ ಉತ್ತಮಾಂಶಗಳಿಂದ ಕೂಡಿದ ಕಥಾಲಾಪವನ್ನುಳ್ಳ, ತನ್ನ ಕೃತಿ ಸತ್ಕಾವ್ಯ ಈಶಸ್ತುತಿಯ ತನ್ನ ಈ ಚಾರಿತ್ರ ಸತ್ಪುರುಷರಿಗೆ ಪಾತ್ರ, ಕೃತಿಯ ಹೆಸರು "ಅರುವತ್ತುಮೂವರ ಚಾರಿತ್ರ" ಈ ಕೃತಿಗೆ ಅಧೀಶ್ವರ ಭುಜಂಗೇಶ್ವರ; ಸದ್ಭಕ್ತರೇ ಸಹಕಾರಿಗಳು ಎಂಬುದನ್ನು ಸ್ಪಷ್ಟಪಡಿಸಿದ್ದಾನೆ.

"ಚತುರಕವಿತಾಮನೋಹರ"ನಾದು ತಾನು ಇಳಾಭೂಷಣಾನ್ವಿತ ಧರ್ಮಪರವಾದ ಆರಾಧ್ಯದೇವ. ತನ್ನ ಕಾವ್ಯ ಸುಜನರಿಗೆ ಸಂತೋಷಜನಕ. "ಅರುವತ್ತುಮೂವರ ಚಾರಿತ್ರ"ವನ್ನು ವರ್ಣಕರೂಪದಿಂದ ರಚಿಸಿದುದಾಗಿ ವಿಶದಪಡಿಸಿದ್ದಾನೆ.

ಅಗಸ್ತ್ಯಮುನಿಗೆ ಶಿವನ ಶ್ರೀಮೂರ್ತಿಯ ಪ್ರತ್ಯಕ್ಷ ದರ್ಶನದಿಂದ ಪುಣ್ಯಮಯವಾದ ತ್ರಿಮಕೂಟ ಕ್ಷೇತ್ರದ ನೈರುತ್ಯದಿಕ್ಕಿನಲ್ಲಿರುವ ಕನಕಾಚಲ. ಆ ಕನಕಗಿರಿಯ ದಕ್ಷಿಣಕ್ಕೆ ಬ್ರಹ್ಮಪುರಿ. ಆ ರಾಜಧಾನಿಯಲ್ಲಿ ಮಹಾರಾಜ ಗೂರ್ಜರ. ಆತನ ಆಜ್ಞೆಯ ಕುಸುಮವಾಟಿ ಅಲ್ಲಿ ಕೂಷ್ಮಾಂಡಫಲಜಾತ ಅಯೋನಿಜ ವೀರರುದ್ರನಾಮನಾಗಿ ಜನಿಸಿ ಲಿಂಗಾರ್ಚನಾ ತತ್ಪರವಾಗಿರುವಂತೆ ಶಿವನ ಆದೇಶ. ಪ್ರಭೂತಿಗೊಳಿಸಿ ಮರಳಿ ಕೈಲಾಸಕ್ಕೆ ತಂದುಕೊಳ್ಳುವೆವು ಎಂಬ ಆಶ್ವಾಸನೆ ಬಳಿಕ ಕೂಷ್ಮಾಂಡಗಣನಾಥನನ್ನು ಮರ್ತ್ಯಲೋಕಕ್ಕೆ ಬೀಳ್ಕೊಟ್ಟ ಪ್ರಸಂಗದಿಂದ ಮೊದಲನೆಯ ಸಂಧಿ ಮುಕ್ತಾಯಗೊಂಡಿದೆ.

ಭರತಖಂಡದ ದಕ್ಷಿಣದಿಶಾಭಾಗದಲ್ಲಿ ಭಾರತೀದೇವಿಯ ವಿಲಾಸಕಾಸ್ಪದವಾದ ಕರ್ನಾಟದೇಶವು ಭೂವನಿತೆಯಿಟ್ಟ ತಿಲಕದಂತೆ ಮನೋಜ್ಞ, ಅಲ್ಲಿನ ಶ್ರೀವಿರೂಪಾಕ್ಷನ ಭಾಸ್ಕರಕ್ಷೇತ್ರಕ್ಕೆ ಯೋಜನ ಪಂಚವಿಂಶತಿ ದೂರದ ದಕ್ಷಿಣಕ್ಕೆ ತ್ರಿಮಕುಟ ಇಲ್ಲಿಗೆ ತಿರುಮಕೂಡಲು ಕಾವೇರಿ–ಕಪಿಲಾನದಿಗಳ ಸಂಗ ಸ್ಥಾನ. ಮಣಿಕರ್ಣಿಕಾಕಾಸಾರ, ಸ್ಪಟಿಕಕಾಸರ, ರುದ್ರಸರಸಿ ಈ ಮೂರು ಕೂಡುವ ಕಾರಣ ತ್ರಿಮಕೂಟವೆಂಬ ತೀರ್ಥಕ್ಷೇತ್ರವೆನಿಸಿದೆ. ಆ ಪವಿತ್ರಕ್ಷೇತ್ರವೆಂಬ ಕಮಲಕ್ಕೆ ಬಹುಪ್ರಾಚೀನ ಕಾಲದಿಂದಲೂ ಅಲ್ಲಿರುವ ಬ್ರಹ್ಮಾಶ್ವತ್ಥ, ರುದ್ರತೀರ್ಥಗಳ ಕರ್ಣಿಕೆಯಿದ್ದಂತೆ. ಆ ಕ್ಷೇತ್ರದ ಎಂಟು ದಿಕ್ಕುಗಳಲ್ಲಿರುವ ಪರ್ವತಗಳೂ ಆ ಕಮಲದ ಅಷ್ಟದಳಗಳಿದ್ದಂತೆ ಎಂದು ಪುರಾಣಪ್ರಸಿದ್ಧ.

ಕಾವೇರಿ ಕಪಿಲಾನದಿಗಳ ಮರಳಲಿಂಗದಲ್ಲಿ ಅಗಸ್ತ್ಯಮುನಿಗೆ ಶಿವನು ಪ್ರತ್ಯಕ್ಷವಾದುದರ ಕುರುಹಾಗಿ ಅಗಸ್ತ್ಯೇಶ್ವರ ದೇವಾಲಯವಿದ್ದು, ಆ ಲಿಂಗದ ಶಿರಸ್ಸಿನಿಂದ ಉದ್ಭವವಾಗುವ ತೀರ್ಥಸಹಿತ ನದಿಯಲ್ಲಿ ಸ್ನಾನಮಾಡುವ ಭಕ್ತರ ಆಚರಣೆ ಲೋಕರೂಢಿಯಲ್ಲಿರುವುದು ಇಂದಿಗೂ ಉಂಟು. ನಾರದ ಮಹರ್ಷಿಯು ಸೈಕತಲಿಂಗದಲ್ಲಿ ಶಿವನು ಪ್ರತ್ಯಕ್ಷವಾದ ಸಂಗತಿಯನ್ನು ಮುನಿಗಳಿಗೆ ತಿಳಿಸಿದುದನ್ನು ಕೇಳಿ ಬಂದ ಕವೇರರಾಜನು ಅಗಸ್ತ್ಯಮುನಿಯನ್ನು ಕಂಡು ಶಿವಸ್ತುತಿ ಮಾಡತೊಡಗಿದಾಗ ಸುರಸಂದಣಿಯ ಜಯ ಜಯಧ್ವನಿ ಮೊಳಗಿತು. ಮನದ ತಾಮಸವಳಿದು ಕವೇರರಾಜನು ಸಹ್ಯಪರ್ವತದಲ್ಲಿ ಮಾಡಿದ ತಪಸ್ಸಿಗೆ ಬ್ರಹ್ಮನು ಪ್ರಸನ್ನನಾದನು. ಭೂಮಂಡಲಾಧಿಪವೆಂಬ ಗರ್ವದಿಂದ ಜನರ ಮೇಲೆ ದೌರ್ಜನ್ಯ ಮಾಡಿದನು. ಯಮಶಿಕ್ಷೆಗೆ ಗುರಿಯಾದಂತೆ ಕಮಂಡಲದ ನದೀಕಾಂತೆಯನ್ನು ಬೇಡಲಾಗಿ ಬ್ರಹ್ಮನು ಆತನಿಗೆ ಲೋಪಾಮುದ್ರೆಯನ್ನು ಕವೇರಾತ್ಮಜೆಯೆಂಬ ನಾಮದಿಂದ ಕರುಣಿಸಿದನು. ಆಕೆಯಿಂದ ನಿನ್ನ ಇಷ್ಟಾರ್ಥ ನೆರವೇರುವುದೆಂದು ಹೇಳಿ ಬ್ರಹ್ಮನು ತೆರಳಿದನು. ಕವೇರನೃಪ ಆ ಮಗಳನ್ನು ಕಂಡು ಸಂತೋಷದಿಂದ ಕುಣಿದಾಡಿ ತನ್ನ ಚಿಂತೆ ಅಳಿಯಿತು. ಮುಂದೆ ಯಾರಿಂದ ಶ್ರೇಯಸ್ಸು ಲಭ್ಯವಾಗುವುದೋ ಎಂದು ಕಾಯುತ್ತಿದ್ದನು.

ಈ ಮಧ್ಯೆ ಗಿರಿಜಾವಿವಾಹಾ ನಂತರ ಸತಿಸಹಿತ ಉಮಾಪತಿಯು ಉತ್ತರಕ್ಕೆ ರಜತಗಿರಿಗೆ ಪ್ರಯಾಣ ಬೆಳೆಸುವಾಗ ಭರತಖಂಡದ ದಕ್ಷಿಣ ದೇಶ ತನ್ನ ಸಮತೂಕವನ್ನು ಕಳೆದುಕೊಂಡು ಮೇಲಕ್ಕೆ ಏಳುತ್ತಿದ್ದುದನ್ನು ತಿಳಿದ ಶೂಲಿ ಅಗಸ್ತ್ಯಮುನಿಯನ್ನು ಕರೆದು ಅತ್ತ ಕಳುಹಿಸಲಾಗಿ ಆತ ದಕ್ಷಿಣ ದೇಶದ ಸಮುದ್ರತಟದಲ್ಲಿ ನೆಲಸಿದುದರಿಂದ ಆ ಏರುಪೇರು ಹೋಗಿ ಮೊದಲಿನಂತೆ ಸಮಸ್ಥಿತಿಗೆ ಬಂದ ಪ್ರಸ್ತಾಪವಿದೆ. ಪಶ್ಚಿಮ ಅರಬ್ಬಿಸಮುದ್ರದ ತಡಿಯ ಸಹ್ಯಾದ್ರಿಯನ್ನು ಹತ್ತುವ ಸಲುವಾಗಿ ಬಂದ ಅಗಸ್ತ್ಯವನ್ನು ಕಂಡು ಕವೇರರಾಜನು ವಂದಿಸಿ, ಆತನು ನೀಡಿದ ಕೃಪಾಶೀರ್ವಾದಕ್ಕೆ ಕೃತಜ್ಞತೆ ಸಲ್ಲಿಸುವ ಸಲುವಾಗಿ ಬ್ರಹ್ಮನಿಂದ ತಾನು ಪಡೆದ ಲೋಪಾಮುದ್ರೆಯನ್ನು ಸವೀಕರಿಸಬೇಕೆಂದು ಅಗಸ್ತ್ಯನನ್ನು ಪ್ರಾರ್ಥಿಸಿದನು. ಹಾಗೆಯೇ

ಆಗಲೆಂದು ಬಯಸಿದಾಗ ಲೋಪಾಮುದ್ರೆಯು ಆತನೊಡನೆ "ಎನ್ನ ಅನುಮತದೊಳಿರ್ದೊಡಿಹೆನಲ್ಲದೊಡೆ ನಿಲ್ಲೆ"ನೆಂದು ಹೇಳಿದ ಕರಾರಿಗೆ ಮುನಿಯು ಸಮ್ಮತಿಸಿದನು. ಆ ಅನಂತರ ಆತನೊಡನೆ ಲೋಪಾಮುದ್ರೆಯು ಹಲಕಾಲ ಆನಂದದಿಂದಿದ್ದಳು. ಒಂದಾನೊಂದು ದಿನ ಬೆಳಗ್ಗೆ ಸುವರ್ಣಾವತಿಯನ್ನು ನೋಡಲು ಹೋಗಿ ಶಿವಧ್ಯಾನದಿಂದ ಆ ಮುನಿಸತಿ ಜಲಕ್ರೀಡೆ ನಡೆಸಿ ಬಂದುದನ್ನರಿತ ಕವೇರ ತನುಜೆ ಇನ್ನು ನನ್ನ ತಪ್ಪಿಲ್ಲವೆಂದು ಹೇಳಿ ಕರಕದಿಂದ ಊರ್ಧ್ವಮುಖವಾಗಿ ನೆಗೆದು ಪ್ರಳಯಜಲಧಿಯ ಘೋಷದಿಂದ ಹರಿದು ಹೋಗುವಾಕೆಯನ್ನು ನಿಲ್ಲು ನಿಲ್ಲೆಂದು ಕುಂಭಜನು ಕೂಗಿ ಕರೆಯುತ್ತಿದ್ದಂತೆಯೇ ಆಕೆ ಗುಪ್ತಗಾಮಿನಿಯಾದಳು, ಮುಂದೆ ಮೇಲುಕ್ಕೆ ಭೋರ್ಗರೆದು ನದಿಯಾಗಿ ಹರಿಯತೊಡಗಿದಾಗ ಬೇಗಬೇಗನೆ ಬಂದ ಅಗಸ್ತ್ಯಮುನಿಯು ಅಡಗಟ್ಟಲು, ಪರಮಪುರುಷಾ, ನಿನ್ನಿಂದ ತಪ್ಪಾಗಿದೆ. ಮರಳಿ ತಾ ಬರುವವಳಲ್ಲ, ಚಿತ್ತದಲಿ ಕೋಪವೇತಕೆ ಸ್ವಾಮಿ? ಸಾಗರಗಾಮಿಯಾದೆನು ನಾನು. ನನ್ನ ದಡದಲ್ಲಿ ಸಹಸ್ರ ಸಹಸ್ರ ಲಿಂಗಪ್ರತಿಷ್ಠೆ ಮಾಡಿದ ಪುಣ್ಯಮಯ ಕೀರ್ತಿ ತಮ್ಮದಾಗಲಿ. ಋಷಿಪತ್ನಿಯೆಂಬನಾಮ ಹೊಂದಿ ನಿಮ್ಮಿಂದ ನನ್ನ ಇಷ್ಟಾರ್ಥ ಫಲಿಸಿತು ಎಂದು ಬೀಳ್ಕೊಟ್ಟಳು.

ಈ ಕಾವೇರಿಯ ಮಹಿಮೆಯನ್ನು ಕವಿ ತುಂಬ ಹೃದಯದಿಂದ ಕೊಂಡಾಡಿದ್ದಾನೆ. ಕಾವೇರಿ ಸಕಲಜನರುಪಕಾರಿ. ಸದಾಚಾರಕ್ಕೆ ಅಧಿಕಾರಿ ಲೋಕದ ಬರಗಾಲದ ಉಪದ್ರವಕಾರಿ; ಪುಣ್ಯಾರ್ಜನೆಗೆ ದಾರಿ; ಪಾಪ ನಿರ್ಮೂಲನಕಾರಿ;' ತಪೋಮೂರ್ತಿಗಳ ತಪಾಚರಣೆಗೆ ಸಹಕಾರಿ ಅಜ್ಞಾನವೆಂಬ ಕಾವಳವನ್ನು ಕಾಲ್ಗೆಡಿಸುವ ತೇಜೋನ್ವಿತೆ. ತನ್ನನ್ನು ನುತಿಸುವವರ ಜನ್ಮಜಾಡ್ಯವನ್ನು ಕಳೆಯುವವಳು, ತನ್ನಲ್ಲಿ ಚರಿಸುವ ಜಲಜಂತುಗಳ ಜನ್ಮವೇ ಸಫಲ. ಮಿಂದವರ ಜನ್ಮದೋಷ ಪರಿಹಾರ. ಇಂತಹ ಮಹಿಮಾಮಯ ಕಾವೇರಿ ತಿರುಮಕೂಡಲ ಸುಕ್ಷೇತ್ರದಲ್ಲಿ ಕಪಿಲಾನದಿಯ ಸಂಗಮದ ಬಲದಿಂದ ಸಾವಧಾನವಾಗಿ ಹರಿದು ಸಾಗರವನ್ನು ಸೇರುವಳು. ಈ ಉಭಯನದಿಗಳ ಷಟ್ತಟಗಳಿಂದ ಕೂಡಿ ಶಿವನ ಆಜ್ಞೆಯಿಂದ ಶೋಭಿಸುವ ಈ ಕ್ಷೇತ್ರಕಮಲದ ಎಂಟುದಿಕ್ಕುಗಳಲ್ಲಿ ಅಷ್ಟದಳಗಳಂತಿರುವ ಗಿರಿಗಳು ಶಿವಧ್ಯಾನನಿರತ ಮುನಿಮುಖ್ಯರ ಜ್ಞಾನಪಿಪಾಸುಗಳಾದ ವಟುಗಳ ನೆಲೆ.

ಹೀಗೆ ಅಪಾರೂಪ ಪ್ರಾಚೀನ ಮಾಹಿತಿ ಈ ಕೃತಿಯಲ್ಲಿ ಮಡುಗಟ್ಟಿದೆ ಈ ಎಲ್ಲಾ ವಿಷಯವನ್ನು ಸೂಕ್ಷ್ಮವಾಗಿ ಯುವ ವಿದ್ವಾಂಸರು ಅಧ್ಯಯನ ಮಾಡಬೇಕು. ಎರಡನೆಯ ಸಂಧಿಯ ಪ್ರಾರಂಭದ ಪದ್ಯದಲ್ಲಿ;

ತ್ರಿಮಕೂಟವೆಂಬ ಪುಣ್ಯಕ್ಷೇತ್ರಮಂ ಬಳಸಿ
ರಮಣೀಯಮಾಗಿರ್ದ ದೇಶಾಧಿಪತಿಯಾಗಿ
ಉಮೆಯವಲ್ಲಭನಂಘ್ರೀಯಂ ಪೂಜಿಸುತೆ ಗೂರ್ಜರನೃಪಂ ಸುಖಮಿರ್ದನು ॥

ತಿರುಮಕೂಡಲು ಉಲ್ಲೇಖವನ್ನು ಮೇಲಿನ ಪದ್ಯದಲ್ಲಿ ಗಮನಿಸಬಹುದು. ಎರಡನೆಯ ಸಂಧಿ ಮೊದಲ ಪದ್ಯದ ಕಡೆಯ ಸಾಲಿನಲ್ಲಿ "ಧೂರ್ಜಟಿಮಹಾದೇವ ಜಯಜಯ ತ್ರಾಹಿ ಮಾಂ ಕನಕನಗರಾಧೀಶ್ವರಂ ॥ ಇಲ್ಲಿ ಕನಕನಗರಾಧೀಶ್ವರ ಅಂದರೆ ಉಮ್ಮತ್ತೂರು ನಗರದ ಅಧಿದೇವತೆ ಭುಜಂಗೇಶ್ವರನ ಸ್ತೋತ್ರ ಮಾಡಿರುವುದು ಮುಂದೆ ಐದನೇ ಪದ್ಯದಲ್ಲಿ ಐದನೇ ಸಾಲಿನಲ್ಲಿ "ಕನಕಭೂಧರ" ವರಣದೆಸೆಯಲ್ಲಿ ಎಂದರೆ ಕನಕ ಅಂದರೆ ಉಮ್ಮತ್ತ ಅರ್ಥಾತ್ ಉಮ್ಮತ್ತೂರ ಭೂಧರ ಭುಜಂಗೇಶ್ವರನನ್ನು ಕವಿ 'ಕನಕಭೂಧರ' ಎಂದು ಕರೆದಿದ್ದಾನೆ. ಇದೇ ಎರಡನೇ ಸಂಧಿ 21ನೇ ಪದ್ಯದಲ್ಲಿ;

ಸ್ವಾಮಿ ಕೇಳ್ಸಾಗರಸುಗಾಂಇಯಾದೆನು ನಾನು
ಪ್ರೇಮದಿಂದೆನನ್ ತಡಿವಿಡಿದು ಸರಭಸದಿಂದೆ
ಸೋಮಶೇಖರನಂ ಪ್ರತಿಷ್ಠೆಯಂ ಮಾಡು ಯೋಜನ–ಯೋಜನದ ಸಂಖ್ಯೆಯಿಂ
ಭೂವಿಯೊಳ್ಸತ್ಕೀರ್ತಿ ನಿನಗಿರಲಿ ಸುಕೃತಮಯ
ನಾಮಮಂ ಧರಿಸುವೆನು ನಿನ್ನ ದೆಸೆಯಿಂದೆನುತೆ
ಕಾಮಿತಾರ್ಥಂ ಬಂದುದೆನು ಬೀಳ್ಕೊಂಡಳಾ ಕಾವೇರಿ ಕಲುಶವೈರಿ ॥ 21 ॥

ಈ ಪದ್ಯದಲ್ಲಿ ಉಮ್ಮತ್ತೂರು ದೊರೆಗಳು ಕಾವೇರಿ ನದಿ ತೀರದಲ್ಲಿ ಶಿವನಸಮುದ್ರದಲ್ಲಿ ಕಟ್ಟಿದ ಸೋಮಶೇಖರ ದೇವಾಲಯದ ಪ್ರಸ್ತಾಪವಾಗಿರುವುದು ಗಮನಿಸಬಹುದು.

ಆರನೇ ಸಂಧಿಯಲ್ಲಿ 19ನೇ ಪದ್ಯದಲ್ಲಿ ಭುಜಂಗೇಶ್ವರನ ಸ್ಥಾಪನೆ ಮತ್ತು ಊರಿಗೆ "ಅಟವಿ ಕನಕಪುರ" ಎಂಬ ಹೆಸರು ಇಟ್ಟಿದ್ದು ಸ್ಪಷ್ಟವಾಗಿ ಹೇಳಲ್ಪಟ್ಟಿದೆ. ಮುಂದೆ ಅಟವಿ ಕೈಬಿಟ್ಟು ಕನಕಪುರ = ಉಮ್ಮತ್ತೂರು ಎಂಬುದು ಉಳಿದಿದ್ದು ಸ್ಪಷ್ಟವಾಗಿ ತಿಳಿದು ಬಂದಿರುವಂತಹದು.

ಧರಣಿಪಂ ಮುನಿಜನಂ ಶಿವಶರಣರೊಡಗೂಡಿ
ಹರುಷದಿಂದಂ ಭುಜಂಗೇಶ್ವರನುಮೆಂದೆಂಬ
ಪರಮನಾಮಂ ಸಲ್ವುದೀ ಅಟವಿ ಕನಕಪುರಮೆಂಬ ಪೆಸರುಚಿತಮೆನುತೆ ।
ಪರಮಮುನಿಗಳು ಪೇಳ್ದ ನೃಪನಿಂದೆ ಬೀಳ್ಕೊಂಡು
ಭರದಿಂದೆ ಪೋದರಿತ್ತವನೀಶ್ವರಂ ತನ್ನ
ಚರರನತಿವೇಗದಿಂದ ಕಳುಪಿದಂ ದುರ್ಗಾಧಿಪತಿಗಳಂ ಬರಲುವೇಳ್ದು ॥ 19 ॥

ಎಂಟನೇ ಸಂಧಿ ಮೊದಲನೇ ಪದ್ಯದಲ್ಲಿ ಕವಿ ಗೊಡವಾಗಿ ಪದ್ಯ ಕಡೆಯ ಸಾಲಿನಲ್ಲಿ ಉಮ್ಮತ್ತೂರು ಭುಜಂಗೇಶ್ವರನನ್ನು ಈ ರೀತಿ ಸ್ತೋತ್ರ ಮಾಡಿದ್ದಾನೆ. "ಶಾರ್ವರೀವರನೆ ತಪನೀಯನಗರಾಧೀಶ ಮಾಳ್ಪುದೆಮಗಿಷ್ಟಫಲಮಂ" ತಪನೀಯ ಅಂದರೆ ಚಿನ್ನ ಎಂದು ತಪನೀಯನಗರಾಧೀಶ ಅಂದರೆ ಉಮ್ಮತ್ತೂರು ಭುಜಂಗೇಶ್ವರ.

ಒಂಭತ್ತನೆಯ ಸಂಧಿ ಮೊದಲನೇ ಪದ್ಯದಲ್ಲಿ "ಸರ್ವಜ್ಞ ಹೇಮನಗರಾಧೀಶ ಕಾರುಣ್ಯದುರ್ವಿನಿಂ ಸಲಹೆಮ್ಮನು" ಎಂದಿದ್ದಾನೆ ಹೇಮ ಅಂದರೆ ಚಿನ್ನ ಹೇಮನಗರಾಧೀಶ ಅಂದರೆ ಉಮ್ಮತ್ತೂರಿನ ಭುಜಂಗೇಶ್ವರ ಎಂದು.

ಒಂಭತ್ತನೆಯ ಸಂಧಿ ಐವತ್ತೊಂದನೆಯ ಪದ್ಯದಲ್ಲಿ ಸ್ಪಷ್ಟವಾಗಿ ಈ ರೀತಿ ಹೇಳಿದ್ದಾನೆ.

ವೀರಶೈವೋಪದೇಶವನಿತ್ತು ಶಿಷ್ಯರಿಗೆ
ಪಾರಮಾರ್ಥಪ್ರಮಾಣವನು ತಿಳಿಪುತ್ತ ಭವ
ದೂರರಂ ಮಾಡಿ ರಾಜಿಸುತಿರ್ಪ ಗುರುವರೇಣ್ಯನ ತಮೊಭವವೆನಿಸಿದಾ ।
ಆರಾಧ್ಯದೇವಪ್ರಣೀತಮೀಕೃತಿಯಿದಂ
ಸಾರಹೃದಯರು ಕೇಳ್ದು ಸಂತೋಷಪರರಹುದು
ಗೌರೀಮನೋರಮಣನೆನಿಸುತಿಹ ಭುಜಂಗೇಶ್ವರಂ ರಕ್ಷಿಪಂ ಕಾರುಣ್ಯದಿಂ ॥ 52 ॥

ಈ ಗ್ರಂಥದಲ್ಲಿ ಸಂಗೀತಶಾಸ್ತ್ರಕ್ಕೆ ಸಂಬಂಧಿಸಿದ ಪಾರಿಭಾಷಿಕ ಪದಗಳಲ್ಲಿ ಅನೇಕ ಈಗ ರೂಢಿಯಲ್ಲಿ ಇಲ್ಲದಿರುವುದರಿಂದ ಆ ಪದಗಳ ಅರ್ಥವ್ಯಾಪ್ತಿಯನ್ನು ಹೇಳುವುದು ಕಷ್ಟ. ಈ ಪಾರಿಭಾಷಿಕ ಪದಗಳಲ್ಲಿ ಕೆಲವು ಈಗಲೂ ರೂಢಿಯಲ್ಲಿ ಇದೆ ಎಂದು ಹಲವು ಪದಗಳ ಅರ್ಥವನ್ನು ಗ್ರಂಥದ ಸಂಪಾದಕರಾದ ಪ್ರೊ॥ ಸಿ. ಮಹಾದೇವಪ್ಪನವರು ಸಂಗೀತಕಲಾನಿಧಿ ಆರ್.ಕೆ. ಶ್ರೀಕಂಠನ್‌ರವರ ಸಹಾಯದಿಂದ ನೀಡಿದ್ದಾರೆ. ಕವಿ ಪ್ರಯೋಗಿಸಿರುವ ವಿಶೇಷ ಪದಗಳನ್ನು ಮುಂದೆ ಕೊಡಲಾಗಿದೆ.

ಕಂಪಿತ, ಗಮಕ, ಗಮಕಮಾರ್ಗ, ಜತಿ, ಜೀವಾಳ, ಠಾಯ, ತಾಳಭೇದ, ತ್ರಿಭಿನ್ನ, ದೇಶಾಕ್ಷಿ, ಪ್ರಬಂಧ, ಮೃದಂಗ, ರಾಗಾಂಗ, ಶ್ರುತಿ, ಸ್ಥಾನತ್ರಯಪ್ರಯೋಗವ್ಯಾಪ್ತಿ, ಸ್ಫುರಿತ, ಪಾಟಾಕ್ಷರ (ಶೂಲ್‌ಕಟ್ಟು) ಚತುರ್ದಂಡಿ, ಗೀತ, ಆಲಾಪ.

ಧತ್ತೂರಿಗೆ ಪರ್ಯಾಯ ನಾಮಗಳು ಉಮ್ಮತ್ತ, ಕನಕ ಎಂದು ಇಂದಿಗೂ ಆಯುರ್ವೇದ ಔಷಧಿಗಳಲ್ಲಿ ಕನಕತೈಲ = ಅಂದರೆ ದತ್ತೂರಿ ಪಂಚಮೂಲ ಅದರಲ್ಲೂ ಅದರ ಕಾಯಿಯನ್ನು ಬಳಸಿ ಮಾಡಿರುವ ತೈಲ ನೋವು ನಿವಾರಕ ಆದರೆ ವಿಷಯುಕ್ತವಾದ್ದರಿಂದ ತಲೆಗೆ ಹಚ್ಚಬಾರದು ಕೈಕಾಲು ನೋವುಗಳಿಗೆ ಮಾತ್ರ ಹಚ್ಚಬೇಕು. ಕನಕಲೇಪ ದತ್ತೂರಿ ಗಿಡದ ಪಂಚಮೂಲವನ್ನು ಬೆಲ್ಲದ ಪಾಕದ ಜೊತೆ ಸೇರಿಸಿ ಕುದಿಸಿ ಮಾಡಿರುವಂತಹದು. ಈ ಔಷಧಿ ಕೈಕಾಲುಗಳಿಗೆ ನೋವು ಆದಾಗ ಲೇಪಿಸುವುದಕ್ಕೆ. ಕನಕಾಸವ ಈ ಔಷಧಿಯನ್ನು ದತ್ತೂರಿಗಿಡ ಔಷಧಿ ಗುಣವನ್ನು ಉಪಯೋಗಿಸಿ ಮಾಡಿರುವ ಔಷಧಿ ಕೆಮ್ಮು ದಮ್ಮುಗೆ ಬಹಳ ಉಪಯುಕ್ತವಾದದ್ದು. ಈ ಎಲ್ಲಾ ಔಷಧಿಗಳನ್ನು ತಜ್ಞ ವೈದ್ಯರ ಸಲಹೆ ಮೇರೆಗೆ ಉಪಯೋಗಿಸಬೇಕು. ಕವಿ ಆರಾಧ್ಯದೇವ ತಾನು ರಚಿಸಿದ "ಅರುವತ್ತು ಮೂವರ ಚಾರಿತ್ರ" ಕೃತಿಯಲ್ಲಿ ನೇರವಾಗಿ ಉಮ್ಮತ್ತೂರು ಎಂದು ಹೇಳದೆ ಇರುವುದರಿಂದ ಸಂಪಾದಕರು ಪರ್ಯಾಯ ಪದಗಳ ಅರ್ಥವನ್ನು ಗಮನಿಸದೆ ಮತ್ತು

ಭುಜಂಗೇಶ್ವರ ದೇವಾಲಯ ಉಮ್ಮತ್ತೂರಿನಲ್ಲಿ ಇರುವುದು ಅವರಿಗೆ ಅರಿವಿಲ್ಲದಿರುವುದರಿಂದ ಕೃತಿ ನೇರವಾಗಿ ಉಮ್ಮತ್ತೂರಿಗೆ ಸಂಬಂಧಿಸಿರುವುದು ಎಂದು ಅವರಿಗೆ ಗ್ರಹಿಸಲು ಸಾಧ್ಯವಾಗಲಿಲ್ಲ. ಈ ಕೃತಿಯಲ್ಲಿ ಕನ್ನಡನಾಡಿನ ಚಾಣ್ವಂಕಿ ವಂಶದ ಆಚಾರ್ಯರಾಜಮನೆತನ ಮತ್ತು ಆಂಧ್ರ ದೇಶದ ಓರುಗಲ್ಲ ಚಂದ್ರವಂಶದ ಕುಲೊತ್ತುಂಗ ರಾಜಮನೆತನ – ಇವುಗಳ ರಿಕ್ತ ಸಂಬಂಧದ ಮೇಲೆ ಬೆಳಕು ಚೆಲ್ಲುತ್ತದೆ.

ಚಿತ್ರದುರ್ಗ ಬೃಹನ್‌ಮಠದ ಹಸ್ತಪತಿ ಭಂಡಾರದ ಸಂಗ್ರಹದಲ್ಲಿ ಬಸವಣ್ಣನವರ ಷಟ್‌ಸ್ಥಲದ ವಚನದ ಕಟ್ಟು ಇದ್ದು ಆ ಕೃತಿ ಸಂಖ್ಯೆ 3569 ಕಟ್ಟಿನ ಸಂಖ್ಯೆ 963/1 ಗರಿಸಂಖ್ಯೆ 1–65 ಕೃತಿಯ ಕಡೆಯಲ್ಲಿ ಈ ಪುಷ್ಪಿಕೆ ಇದೆ. ಅಂತ್ಯ : ಇಂತು ಕನಕಪುರಾವರಾಧೀಶ್ವರರು ಸಂಗ್ರಹಿಸಿದ ಬಸವೇಶ್ವರ ದೇವರ ಷಟ್ಸ್ಥಲದ ವಚನಂಗಳು ಪರಿಪೂರ್ನ ಸಮಸ್ತ ಮಂಗಳಮಹಾ ಎಂದಿದೆ.

ಹಸ್ತಪ್ರತಿ ತಜ್ಞರಾದ ಲಿಂ॥ ಎಸ್.ಶಿವಣ್ಣನವರು ಉಮ್ಮತ್ತೂರು ದೊರೆ ವೀರನಂಜಾರ್ಯೊಡೆಯ ಬಸವಣ್ಣನವರ ಷಟ್ಸ್ಥಲ ವಚನದ ಸಂಕಲನಗಾರ ಎಂದು ನಿರ್ಧರಿಸಿದ್ದಾರೆ ಇವನ ಕಾಲ ಸುಮಾರು (1501–02)

ಕರ್ನಾಟಕ ವಿಶ್ವವಿದ್ಯಾನಿಲಯದ ಹಸ್ತಪ್ರತಿ ಭಂಡಾರದ ಹಸ್ತಪ್ರತಿ ಸೂಚಿ ಸಂಪುಟ 10 ರಲ್ಲಿ ಪ್ರಕಟವಾದ ಪುಷ್ಪಿಕೆಯಲ್ಲಿ ಈ ಮಾಹಿತಿ ಇದೆ. ರೇವಣ ಸಿದ್ಧೇಶ್ವರ ಪುರಾಣ ಬೊಮ್ಮರಸ ವಿರಚಿತ ತಾಳ ಪ್ರತಿ ಸಂಖ್ಯೆ 933 ವ 8"x1.5" (1–141) ಗರಿ ದುರದುಂಡೇಶ್ವರಮಠ, ಮುರಗೋಡ ನಗರದ್ದು.

ಕೃತಿಯ ಆದಿ : ಶ್ರೀಚನ್ನಬಸವೇಶ್ವರಾಯ ನಮಃ, ಶ್ರೀ ವೈರಾಗ್ಯ ಸ್ವರೂಪ ಶ್ರೀ ಅಲ್ಲಮ ಪ್ರಭುರಾಯ ನಮಃ ॥ ಶುಭಮಸ್ತು

ಕೃತಿಯ ಅಂತ್ಯ : ನಂಜನಗಳ xxxxx ಕೊಲ್ಲಿಪಾಕಿ ಪುರವರಾಧೀಶ್ವರಂ
ಶ್ರೀಸೋಮೇಶ್ವರಲಿಂಗದಲ್ಲಿ ಜನಿಸಿದ ಜಗದ್ವಿತಾ xxxxx ಪಟ್ಟಣಂಗಳಲ್ಲಿ
ಮೆರೆದ ಶ್ರೀರೇವಣಸಿದ್ಧೇಶ್ವರದೇವರ xxxxx ಕರಕೃತಮಪರಾಧಕ್ಷ್ವಂತು
ಮರ್ಹಂತಿ ಸಂ xxxxx ಶಾಶ್ವತ ಶೀವಸ್ತಾಣೋ ಭವೊಮಾಪತೆ
ಭೂತೇಶ ತ್ರಿಪುರಾಯ

ಅಂತು ಸಂದಿ 17ಕ್ಕಂ ಪದನು 565ಕ್ಕಂ ಮಂಗಳ ಮಹಾ ಶ್ರೀ ಶ್ರೀ ಶ್ರೀ ಸ್ವಸ್ತಿ ಶಕ ವರ್ಷ 1423ನೆಯ ರೌದ್ರ ಸಂವತ್ಸರದ ಆಶ್ವಯಜ ಶು 1 ಗುರುವಾರದಲ್ಲಿ ಶ್ರೀಮದಕ್ಷಿಣ ಕನಕಪುರವರಾಧೀಶ್ವರವೆನಿಪ ಶ್ರೀಮನ್ಮಹಾಮಂಡಲೇಶರ್ವರ ಶ್ರೀವೀರನಂಜರಾರ್ಯ್ಯಡೆಯರ ಗರ್ಭ ಸುಧಾಂಬೋನಿದಿ ಶ್ರೀಸುಧಾಕರನೆನಿಪ ಶ್ರೀ ಚನ್ನನಂಜರಾಯನ ಭಂಡಾರವ.

ಹಸ್ತಪ್ರತಿ ತಜ್ಞಲಿಂ॥ ಎಸ್. ಶಿವಣ್ಣನವರು ಸಂಕಲಿಸಿದ ವೀರಶೈವ ಹಸ್ತಪ್ರತಿ ಪುಷ್ಪಿಕೆಗಳು ಸಂಪುಟ 1 1994ರಲ್ಲಿ ಗದಗ ಶ್ರೀ ಜಗದ್ಗುರು ತೋಂಟದಾರ್ಯ ಮಠದಿಂದ ಪ್ರಕಟವಾಗಿದೆ. ಪುಟ 142 ರಲ್ಲ ಕೆಳಕಂಡ ಪುಷ್ಪಿಕೆ ಮುದ್ರಣವಾಗಿದೆ.

ಆದಿಃ ಶ್ರೀಗುರುಬಸವಲಿಂಗಾಯ ನಮಃ ಶುಭಮಸ್ತು ನಿರವಗ್ನಾಮಸ್ತು

ಅಂತ್ಯ : xxxxx ದೇವಾ ಪೃಥ್ವಿ ಮಹಾಮಹತ್ತಿನೊಳಗಾದ ಮೇಗಣಗವಿಯ ಮಠದ ಸಿದ್ಧವೀರಶಿಷ್ಯರು ಮಹತ್ತದೇವರಿಗೆ ಉಂಮತ್ತೂರು ಉಪ್ಪರಿಕೆಯ ಸಿಂಹಾಸನದ ಸಿದ್ಧಮಲ್ಲಿಕಾರ್ಜುನದೇವರ ಶಿಷ್ಯರು ಬಸವಲಿಂಗನು ಕಲಿ ಹುಟ್ಟಿದ ಶಾಲಿವಾಹನ ಸಕ ಸಂವತ್ಸರ 1519 ರಿಂ ಮೇಲೆ ಹೇಮಳಂಲಿ ಸಂವತ್ಸರದ ಭಾದ್ರಪದ ಶುದ್ಧ ಸೋಮವಾರದಲ್ಲಿ ಸಕಲ ಮಹೇಶ್ವರರ ಕೃಪೆಯಿಂದ ಬರದು ಮುಗದ ಗಣ xxxxx ಶಿವಾರ್ಪಣಮಸ್ತು ಕಲ್ಯಾಣಮಸ್ತು ಶುಭಮಸ್ತು ಮಂಗಳಮಸ್ತು ಶ್ರೀ ಶ್ರೀ ಶ್ರೀ.

ಈ ಮೇಲಿನ ಪುಷ್ಪಿಕೆಗಳ ಅಧ್ಯಯನದಿಂದ ಉಮ್ಮತ್ತೂರಿಗೆ, ಕನಕಪುರ ಎಂದು ಕರೆಯುತ್ತಾ ಇದ್ದದ್ದು ಸ್ಪಷ್ಟವಾಗುತ್ತವೆ. ಉಮ್ಮತ್ತೂರು ಅರಮನೆ ಮತ್ತು ಮಠಮಾನ್ಯಗಳಲ್ಲಿ ವೀರಶೈವ ಹಸ್ತಪ್ರತಿ ಸಂಗ್ರಹ ಇದ್ದದ್ದು ತಿಳಿದುಬರುತ್ತದೆ. ಉಮ್ಮತ್ತೂರು ರಾಜಗುರು ನೀಲಕಂಠಾರಾಧ್ಯ ವಿರಚಿತ 'ಆರಾಧ್ಯ ಚರಿತ್ರೆ' ಲಿಂ॥ ಪ್ರೊ॥ ಎನ್. ಬಸವಾರಾಧ್ಯರಿಂದ ಸಂಪಾದನೆಗೊಂಡು ಮೈಸೂರು ವಿಶ್ವವಿದ್ಯಾನಿಲಯದಿಂದಪ್ರಕಟವಾಗಿದೆ.

ಲಿಂ॥ ಪಂಡಿತ ಕೆ.ಸಿ. ನಂಜುಂಡಾರಾಧ್ಯರು ಶಿವಾನುಭವ ಪತ್ರಿಕೆಯಲ್ಲಿ 1938ರಲ್ಲಿ ಬರೆದ ಲೇಖನದಲ್ಲಿ ಆರಾಧ್ಯದೇವನು "ಭುಜಂಗೇಶ್ವರ ಪುರಾಣವನ್ನು" ಬರೆದಿದ್ದಾನೆ ಎಂದು ತಿಳಿಸಿದ್ದಾರೆ. ಕೃತಿಯ ಹಸ್ತಪ್ರತಿ ಬಗ್ಗೆ ಮಾಹಿತಿ ಇಲ್ಲ.

ಮಲೆಯೂರು ದೇವಚಂದ್ರನು ತನ್ನ ರಾಜಾವಳಿ ಗ್ರಂಥದಲ್ಲಿ ಉಮ್ಮತ್ತೂರು ರಾಜಗುರು ನೀಲಕಂಠಾರಾಧ್ಯನು "ಪರವಾದಿಗಳು ಜಯಿಸಿ ಬ್ರಾಹ್ಮಣಮಂತ್ರಿ ಅಪ್ಪಾಜಿಗೂ ಅಗ್ರಹಾರದಲ್ಲಿ ಬ್ರಾಹ್ಮಣರಿಗೂ ಆ ದೇಶದ ಜೈನಗೌಡಗಳಿಗೂ ಲಿಂಗಧಾರಣೆಯನ್ನು ಮಾಡಿದರೆಂದು ರಾಜಾವಳಿ ಗ್ರಂಥದಲ್ಲಿ ಹೇಳಿದೆ. ಉಮ್ಮತ್ತೂರು ದೊರೆಗಳು ವಿಜಯನಗರದ ಆಶ್ರಿತ ಮಾಂಡಲಿಕರಾಗಿ ತಮ್ಮ ಆಡಳಿತದ ಜೊತೆ ಕನ್ನಡ, ಸಂಸ್ಕೃತ ಸಾಹಿತ್ಯ ರಚನೆಗೂ ಪ್ರೋತ್ಸಾಹವನ್ನು ನೀಡಿದ್ದಾರೆ. ಆರಾಧ್ಯದೇವ "ಅರುವತ್ತುಮುವರ ಚಾರಿತ್ರ"ವನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿದರೆ ಇನ್ನಷ್ಟು ಮಾಹಿತಿ ಲಭ್ಯವಾಗುತ್ತವೆ.

ಆಧಾರಸೂಚಿ

1) **ಅರುವತ್ತುಮೇವರ ಚಾರಿತ್ರ – ಆರಾಧ್ಯದೇವ ವಿರಚಿತ** ಸಂಪಾದಕರು ಮತ್ತು ಪ್ರಕಾಶಕರು ಪ್ರೊ॥ ಸಿ. ಮಹಾದೇವಪ್ಪ, ಶಾರದಾ ನಿವಾಸ, ಬೆಂಗಳೂರು ಸಂಶೋಧನ ಕೋಟಿ 197, 5ನೇ ಮುಖ್ಯರಸ್ತೆ ವೈಯಾಲಿಕಾವಲ್, ಬೆಂಗಳೂರು–3, 2004.
2) **ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠದ ಹಸ್ತಪ್ರತಿ ಸೂಚಿ** ಸಂಪುಟ 1 ಸಂಪಾದಕರು ಎಸ್. ಶಿವಣ್ಣ ಪ್ರಕಾಶಕರು ಶ್ರೀ ಬೃಹನ್ಮಠ ಸಂಸ್ಥಾನ, ಚಿತ್ರದುರ್ಗ 1991
3) **ಅಖಿಲ ಭಾರತ ವೀರಶೈವ ಮಹಾಸಭಾ ಸ್ಮರಣ ಸಂಪುಟ,** 20ನೇ ಅಧಿವೇಶನ ಮೈಸೂರು, 1983.
4) **ಉಮ್ಮತ್ತೂರು ಅರಸರು ಒಂದು ಅಧ್ಯಯನ** ಡಾ. ನಿರ್ಮಲ್‌ರಾಜು ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು 2011.

33. ಲೇಪಾಕ್ಷಿ ಭಿತ್ತಿಚಿತ್ರಕಲೆ –ಒಂದು ಅವಲೋಕನ

– ಪ್ರೊ. ಎಸ್. ಸಿ. ಪಾಟೀಲ

ವಿಜಯನಗರದ ಕಾಲವನ್ನು ಕರ್ನಾಟಕದ ಸಾಂಸ್ಕೃತಿಕ ಇತಿಹಾಸದಲ್ಲಿ ಸುವರ್ಣ ಯುಗವೆಂದು ಕರೆಯಲಾಗುತ್ತದೆ. ಈ ಕಾಲದಲ್ಲಿ ವಾಸ್ತುಶಿಲ್ಪ, ಚಿತ್ರ, ಸಂಗೀತ, ನೃತ್ಯ, ನಾಟ್ಯ ಮುಂತಾದ ಕಲೆಗಳು ಈ ಕಾಲದಲ್ಲಿ ಬೆಳವಣಿಗೆಯ ಪರಾಕಾಷ್ಠತೆಯನ್ನು ಕಾಣುತ್ತೇವೆ. ಆಗ ವಿಜಯನಗರದ ಕಲೆಯ ವ್ಯಾಪ್ತಿ ಕರ್ನಾಟಕಕ್ಕೆ ಮಾತ್ರ ಸೀಮಿತವಾಗದೆ ಅದು ನೆರೆಯ ರಾಜ್ಯಗಳಿಗೂ ವಿಸ್ತರಿಸಿತು. ವಿಜಯನಗರದ ಚಿತ್ರಕಲೆಯನ್ನು ಎರಡು ಹಂತದಲ್ಲಿ ಗುರುತಿಸಿ ಅಧ್ಯಯನ ಮಾಡಲಾಗುತ್ತದೆ.

1. ವಿಜಯನಗರ ಕಾಲದ ಚಿತ್ರಕಲೆ

ವಿಜಯನಗರ ಕಾಲದ ಅವಧಿಯಲ್ಲಿ ರಚನೆಗೊಂಡ ಲಲಿತಕಲೆಗಳಲ್ಲೊಂದಾದ ಚಿತ್ರಕಲೆಯನ್ನು ವಿಜಯನಗರ ಕಾಲದ ಚಿತ್ರಕಲೆಯೆಂದು ಸಾಮಾನ್ಯವಾಗಿ ಕರೆಯಬಹುದಾಗಿದೆ. ಆಂಧ್ರಪ್ರದೇಶ, ತಮಿಳುನಾಡು, ಕೇರಳ ಮುಂತಾದ ಕಡೆಗೆ ಅಂದಿನ ದಿನಗಳಲ್ಲಿ ಈ ಕಲೆಯು ಹರಡಿಕೊಂಡು ಬೆಳೆದುಬಂದಿದೆ.

2. ವಿಜಯನಗರೋತ್ತರ ಕಾಲದ ಚಿತ್ರಕಲೆ

ವಿಜಯನಗರ ಅವನತಿಯ ನಂತರದ ಅವಧಿಯಲ್ಲಿ ವಿಜಯನಗರ ಸಂಪ್ರದಾಯವನ್ನು ಉಳಿಸಿಕೊಂಡು, ಅಲ್ಪಸ್ವಲ್ಪ ಬದಲಾವಣೆಯೊಂದಿಗೆ ಬೆಳೆದು ಬಂದ ಸಂಪ್ರದಾಯವನ್ನು ವಿಜಯನಗರೋತ್ತರ ಕಾಲದ ಚಿತ್ರಕಲೆಯೆಂದು ಗುರುತಿಸಲಾಗುತ್ತದೆ. ಈ ಸಂಪ್ರದಾಯ 18–19ನೇ ಶತಮಾನದವರೆಗೆ ಬೆಳೆದು– ಕೊಂಡು ಬಂದಿರುವುದು ಕಂಡುಬರುತ್ತದೆ. ಪ್ರಸ್ತುತ ವಿಜಯನಗರ ಕಾಲದಲ್ಲಿ ರಚನೆಯಾದ ಲೇಪಾಕ್ಷಿಯ ಭಿತ್ತಿಚಿತ್ರಗಳನ್ನು ಕುರಿತಾದ ಚರ್ಚೆ ಈ ಲೇಖನದಲ್ಲಿದೆ.

ಒಂದು ಕಾಲಕ್ಕೆ ಕನ್ನಡ ನಾಡಿನ ವಿಜಯನಗರ ಕಾಲದ ಲೇಪಾಕ್ಷಿ ಇಂದು ಆಂಧ್ರಪ್ರದೇಶಕ್ಕೆ ಸೇರಿದೆ. ಬೆಂಗಳೂರಿನಿಂದ 124 ಕಿ.ಮೀ. ಅಂತರದಲ್ಲಿರುವ ಲೇಪಾಕ್ಷಿಯು ಆಂಧ್ರಪ್ರದೇಶದ ಹಿಂದೂಪುರದ ರೈಲುನಿಲ್ದಾಣಕ್ಕೆ 16 ಕಿ.ಮೀ. ದೂರದಲ್ಲಿದೆ. 'ಲೇಪಾಕ್ಷಿ' ಈ ಊರಿನ ಹೆಸರಿನ ಕುರಿತು ದಂತಕತೆಗಳಿವೆ. "ಪ್ರಚಲಿತವಿರುವ ದಂತಕತೆಯೊಂದರ ಪ್ರಕಾರ, ಶ್ರೀರಾಮಚಂದ್ರನು ಲಕ್ಷ್ಮಣನೊಡನೆ ಸೀತೆಯನ್ನು ಹುಡುಕುತ್ತಾ ಇಲ್ಲಿಗೂ ಬಂದಿದ್ದನಂತೆ. ಸೀತೆಯನ್ನು ಕದ್ದೊಯ್ಯುತ್ತಿದ್ದ ರಾವಣನನ್ನು ಬೃಹದಾಕಾರದ ಪಕ್ಷಿ ರಾಜನಾದ ಜಟಾಯುವು ಇಲ್ಲಿಯೇ ಎದುರಿಸಿ, ಅವನೊಡನೆ ಸೆಣಸಿ ತನ್ನೆರಡು ರೆಕ್ಕೆಗಳನ್ನೂ ಕಳೆದುಕೊಂಡು ನೆಲಕ್ಕೆ ಬಿದ್ದು, ರಾಮನ ಬರವಿಗಾಗಿ ಕಾಯುತ್ತಿತ್ತಂತೆ. ಕೊನೆಗೂ ಅಲ್ಲಿಗೆ ಬಂದ ರಾಮನು ಆ ಪಕ್ಷಿಯನ್ನುದ್ದೇಶಿಸಿ 'ಲೇ–ಪಕ್ಷಿ (ಪಕ್ಷಿಯೇ ಏಳು) ಎಂದು ಸಂತೈಸಿದನಂತೆ. ಆದ್ದರಿಂದ ಆ ಊರಿಗೆ 'ಲೇಪಾಕ್ಷಿ' ಎಂದು ಹೆಸರು ಬಂದಿತಂತೆ.

ಅದರಂತೆ, ಇನ್ನೊಂದು ದಂತಕತೆಯು ಪ್ರಚಲಿತದಲ್ಲಿದೆ. ಪೆನುಗೊಂಡೆಯ ಸಾಮಂತನಾದ ವಿರೂಪಣ್ಣನು ವಿಜಯನಗರದ ಸಾಮ್ರಾಟ ಅಚ್ಯುತದೇವರಾಯನ ಅನುಮತಿಯಿಲ್ಲದೆ ಲೇಪಾಕ್ಷಿಯಲ್ಲಿ ವೀರಭದ್ರನ ದೇವಾಲಯವನ್ನು ನಿರ್ಮಿಸಿದನು. ಆದರೆ ರಾಜನು ದೇವಾಲಯದ ನಿರ್ಮಾಣಕ್ಕೆ ಭಂಡಾರದ ಹಣವನ್ನು ದುರುಪಯೋಗಪಡಿಸಲಾಗಿದೆಯೆಂದು ಆರೋಪ

ಮಾಡಿ, ಆತನ ಕಣ್ಣನ್ನು ಕೀಳಿಸಲು ಆಜ್ಞೆ ಮಾಡಿದನು. ಆ ಸುದ್ದಿಯನ್ನು ತಿಳಿದೇ ಅಮಾಯಕನಾದ ವಿರೂಪಣ್ಣನು, ತಾನೇ ತನ್ನ ಕೈಯಾರ ಕಣ್ಣುಗಳೆರಡನ್ನೂ ಕಿತ್ತು ದೇವಾಲಯದ ಗೋಡೆಯ ಮೇಲೆ ಎಸೆದನಂತೆ. ಇಂದಿಗೂ ಅಲ್ಲಿ ಎರಡು ಕುಳಿಗಳು ಮತ್ತು ಕೆಂಪು ಕಲೆಗಳೂ ಕಂಡುಬರುತ್ತವೆ. ಅದರಿಂದಾಗಿ, ವಿರೂಪಣ್ಣನ ಕಣ್ಣುಗಳು ಲೋಪವಾದುದರಿಂದ ಆ ಊರಿಗೆ ಲೋಪಾಕ್ಷಿಯೆಂದು ಹೆಸರಾಯಿತು. ಅದೇ ಮುಂದೆ ಲೇಪಾಕ್ಷಿಯೆಂದಾಯಿತು ! ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಲೇಪಾಕ್ಷಿ ತೆಲುಗು, ಲೋಪಾಕ್ಷಿ ಕನ್ನಡದ ಹೆಸರಾಗಿದೆ!" ಎಂಬ ಹೇಳಿಕೆಗಳು ಪ್ರಚಲಿತದಲ್ಲಿವೆ.

ಶ್ರೀ ವೀರಭದ್ರ ದೇವಾಲಯದ ನಿರ್ಮಾಣ

ವಿಜಯನಗರದ ದೊರೆ ಅಚ್ಯುತ್ತದೇವರಾಯನ ಕಾಲದಲ್ಲಿ ಕ್ರಿ.ಶ. 1530–41ರ ಅವಧಿಯಲ್ಲಿ ಪೆನುಗೊಂಡೆಯಲ್ಲಿ ಬಂಡಾರಿಯಾಗಿದ್ದ ವಿರೂಪಣ್ಣ ಮತ್ತು ಆತನ ಸಹೋದರ ವೀರಣ್ಣ ಇವರು ತಮ್ಮ ಕುಲದೈವ 'ವೀರಭದ್ರೇಶ್ವರನ ದೇವಾಲಯ'ವನ್ನು ಇಲ್ಲಿ ಕಟ್ಟಿಸಿರುವುದಾಗಿ ತಿಳಿದುಬರುತ್ತದೆ. "ಈ ದೇವಾಲಯದ ಆವರಣದೊಳಗೆ ಕ್ರಿ.ಶ. 1530 ರಿಂದ 1538ರ ಅವಧಿಯ ಹತ್ತು ಕನ್ನಡ ಶಾಸನಗಳು ದೊರೆತಿದ್ದು, ಅದರಲ್ಲಿ ಅಚ್ಯುತ್ತ ದೇವರಾಯ ಮತ್ತು ವಿರೂಪಣ್ಣನ ವಂಶಾವಳಿ ಹಾಗೂ ಆ ಪ್ರದೇಶದ ಬಗ್ಗೆ ವಿವರಗಳಿವೆ. ಅಲ್ಲದೆ, ದೇವಾಲಯಕ್ಕೆ ನೀಡಿದ ದಾನಧತ್ತಿಗಳ ವಿವರಗಳು ದೊರಕುತ್ತವೆ."

ಭಿತ್ತಿಚಿತ್ರ ರಚನೆಯ ಕಾಲ

ಲೇಪಾಕ್ಷಿಯ ಈ ದೇವಾಲಯವು ವಾಸ್ತುಶಿಲ್ಪ, ಶಿಲ್ಪ, ಚಿತ್ರಕಲೆಗಳ ತ್ರಿವೇಣಿ ಸಂಗಮವಾಗಿ ಪ್ರಸಿದ್ಧಿಯನ್ನು ಪಡೆದಿದೆ. ವಿಜಯನಗರ ಶೈಲಿಯಲ್ಲಿ ಕಟ್ಟಲಾದ ಈ ತ್ರಿಕೂಟ ದೇವಾಲಯದಲ್ಲಿ ಪ್ರಮುಖವಾಗಿ ವೀರಭದ್ರನ ಶಿಲ್ಪಕಲಾಕೃತಿಯನ್ನು ಕಾಣಬಹುದಾದರೂ ಇಲ್ಲಿ ಸರ್ವಧರ್ಮ ಸಮನ್ವಯದ ಹಿನ್ನೆಲೆಯಲ್ಲಿ ಪಾಪಾ ವಿನಾಶೇಶ್ವರನ ಹೆಸರಿನಲ್ಲಿ ಶಿವನನ್ನು, ರಘುನಾಥನ ಹೆಸರಿನಲ್ಲಿ ವಿಷ್ಣುವನ್ನು ಪ್ರತಿಷ್ಠಾಪಿಸಿದ್ದನ್ನು ಗುರುತಿಸಬಹುದಾಗಿದೆ. ಈ ಮೂರು ಗರ್ಭಗುಡಿಗಳಿಗೆ ಸೇರಿದಂತೆ ಒಂದೇ ನವರಂಗವನ್ನು ನಿರ್ಮಿಸಿದ್ದು, ಈ ನವರಂಗದಲ್ಲಿ ಮತ್ತು ಇತರ ಕಡೆಗಳಲ್ಲಿ ಚಿತ್ರಿಸಿದ್ದು, ಈ ಭಿತ್ತಿಚಿತ್ರಗಳು ದೇವಾಲಯ ನಿರ್ಮಾಣದ ಕಾಲದಲ್ಲಿ ರಚನೆಯಾಗಿವೆ. ಲೇಪಾಕ್ಷಿ ದೇವಾಲಯದ ಭಿತ್ತಿಚಿತ್ರಗಳು ರಾಮಾಯಣ, ಮಹಾಭಾರತ, ಭಾಗವತ, ಶಿವಪುರಾಣ ಮತ್ತು ಲೌಕಿಕ ವಿಷಯಗಳಿಗೆ ಸಂಬಂಧಿಸಿದಂತೆ ವಿಶೇಷವಾಗಿ ಚಿತ್ರಗಳು ರಚನೆಯಾಗಿವೆ. ಇಲ್ಲಿಯ ಭಿತ್ತಿಚಿತ್ರಗಳಲ್ಲಿ ಪ್ರಮುಖವಾಗಿ 'ಗಿರಿಜಾ ಕಲ್ಯಾಣ', 'ಕಿರಾತಾರ್ಜುನಿಯ ಪ್ರಸಂಗ', 'ಮಾರ್ಕಂಡೇಯ', 'ಚಂಡೇಶಾನುಗ್ರಹ', 'ಅಂದಕಾಸುರವಧ', 'ಭಿಕ್ಷಾಟನಾಲೀಲೆ', 'ತ್ರಿಪುರಸಂಹಾರ', 'ಗೌರಿಪ್ರಸಾದಕ', 'ಲಿಂಗೋದ್ಭವ ಶಿವ', 'ದಕ್ಷಿಣಾಮೂರ್ತಿ', 'ಅರ್ಧನಾರೀಶ್ವರ', 'ಕಲ್ಯಾಣಸುಂದರ', 'ದಶಾವತಾರಗಳು', 'ಅರ್ಜುನನು ಮತ್ಸ್ಯಯಂತ್ರವನ್ನು ಬೇಧಿಸುವ ದೃಶ್ಯ', 'ಪಾಂಡವರು ದ್ರೌಪದಿಯನ್ನು ಸ್ವೀಕರಿಸುವ ದೃಶ್ಯ' ಹಾಗೂ 'ವೀರಭದ್ರನ ಚಿತ್ರ' ಹೀಗೆ ನೂರಾರು ವಸ್ತುವಿಷಯಗಳನ್ನು ಒಳಗೊಂಡ ಚಿತ್ರಗಳು, ಪ್ರಾಣಿಪಕ್ಷಿಗಳು, ನಿಸರ್ಗದ ದೃಶ್ಯಗಳು, ಹೇರಳವಾಗಿ ಚಿತ್ರಿಸಲ್ಪಟ್ಟಿವೆ.

ಗಿರಿಜಾ ಕಲ್ಯಾಣ

ಈ ಗಿರಿಜಾ ಕಲ್ಯಾಣದ ವಿಷಯವು ಶಿಲ್ಪಿಗಳಿಗೆ, ಚಿತ್ರಕಲಾವಿದರಿಗೆ ತುಂಬಾ ಜನಪ್ರಿಯವಾದ ವಿಷಯವಾಗಿದ್ದು, ಗಿರಿಜಾ ಕಲ್ಯಾಣದ ಚಿತ್ರಶಿಲ್ಪ ಕಲಾಕೃತಿಗಳು ದಕ್ಷಿಣ ಭಾರತದ ಅನೇಕ ದೇವಾಲಯಗಳಲ್ಲಿ ಕಂಡುಬರುತ್ತದೆ. ಹೆಸರೇ ಸೂಚಿಸುವ ಹಾಗೆ ಗಿರಿಜೆಯ ಕಲ್ಯಾಣ ಅಂದರೆ ಶಿವಪಾರ್ವತಿಯರ ಮದುವೆಯ ದೃಶ್ಯದ ಚಿತ್ರಣ ಇದಾಗಿದೆ. ಇಲ್ಲಿ ದೇವಗಣಂಗಳು, ಋಷಿಮುನಿಗಳು ಜೊತೆಗೆ ವಿಷ್ಣು, ವಾಯು, ಅಗ್ನಿ, ಇಂದ್ರ ಮುಂತಾದ ದೇವತೆಗಳ ಸಮೂಹವೇ ಇಲ್ಲಿ ಪಾಲ್ಗೊಂಡ ದೃಶ್ಯಗಳನ್ನು ಇಲ್ಲಿ ಕಾಣಬಹುದಾಗಿದೆ. ವಿಷ್ಣು ಪಾರ್ವತಿಯ ಕೈಯನ್ನು ಪರಮೇಶ್ವರನ ಕೈಯಲ್ಲಿರಿಸಿ ಪಾಣಿಗ್ರಹಣ ಮಾಡಿ ಕನ್ಯಾದಾನವನ್ನು ಮಾಡುತ್ತಿರುವುದು, ಪಾರ್ವತಿ ಶಿವನ ಪಗಡೆಯಾಟ ಮುಂತಾದ ಅಂಶಗಳು ಮನೋಜ್ಞವಾಗಿ ಚಿತ್ರಣಗೊಂಡಿವೆ. ಈ ಚಿತ್ರದ ಸನ್ನಿವೇಶವು ಹಂಪಿಯ ವಿರೂಪಾಕ್ಷೇಶ್ವರ ದೇವಾಲಯದಲ್ಲಿ ಮತ್ತು ಎಲ್ಲೋರಾ, ಮಧುರೈ ಮುಂತಾದ ದೇವಾಲಯಗಳಲ್ಲಿಯ ಶಿಲ್ಪಗಳಲ್ಲಿ, ಚಿತ್ರಗಳಲ್ಲಿ ಚಿತ್ರಣಗೊಂಡಿರುವುದು ಕಂಡುಬರುತ್ತದೆ.

ಕಿರಾತಾರ್ಜುನೀಯ ಪ್ರಸಂಗ

ಈ ಚಿತ್ರದಲ್ಲಿ ಶಿವನು ಬೇಡನ ವೇಷಧಾರಿಯಾಗಿ ಮತ್ತು ಪಾರ್ವತಿಯು ಬೇಡತಿಯ ವೇಷದಲ್ಲಿ ಅರಣ್ಯದ ಮಧ್ಯದಲ್ಲಿ ಕಾಡು ಹಂದಿಯನ್ನು ಬೇಟೆಯಾಡುತ್ತ ಬರುವ ದೃಶ್ಯ. ಈ ಕಾಡು ಹಂದಿಗೆ ಅರ್ಜುನನು ಬಾಣ ಹೊಡೆಯುವುದು, ತನ್ನ ಬೇಟೆ ನನ್ನ ಬೇಟೆ ಎಂದು ಇಬ್ಬರಲ್ಲಿಯೂ ನಡೆದ ಜಗಳ ದ್ವಂದ್ವಯುದ್ಧ ಅರ್ಜುನನ ಶೌರ್ಯ ಸಾಹಸಗಳು ರಸವತ್ತಾದ ವರ್ಣವಿಲಾಸ, ಇವೆಲ್ಲವುಗಳನ್ನು ಹೃದಯಂಗಮವಾಗಿ ಚಿತ್ರಿಸಿರುವುದು, ಜೊತೆಯಲ್ಲಿ ಋಷಿಮುನಿಗಳ, ಬೇಟೆಗಾರರ ಚಿತ್ರಗಳನ್ನು ಸಹ ಸಾಲು ಸಾಲಾಗಿ ಚಿತ್ರಿಸಿದ್ದಾರೆ. ಸುಖಾಸೀನ ಭಂಗಿಯಲ್ಲಿ ಕುಳಿತಿರುವ ಶಿವನ ಚಿತ್ರಣ ಹಾಗೆಯೇ ಅರ್ಜುನನ ನಿರ್ಮಲ ಭಕ್ತಿಗೆ ಒಲಿದ ಶಿವನು ಅವನಿಗೆ ಅಮೋಘವಾದ ಪಾಶುಪಥವೆಂಬ ದಿವ್ಯಾಸ್ತ್ರವನ್ನು ನೀಡುತ್ತಿರುವ ದೃಶ್ಯ ಇಲ್ಲಿ ಕಲಾತ್ಮಕವಾಗಿ ಚಿತ್ರಣಗೊಂಡಿದೆ. ಪಾರಂಪರಿಕ ಶಾಸ್ತ್ರೀಯ ನೆಲೆಯ ಚಿತ್ರರಚನೆಯ ಷಡಂಗಗಳ ಲಕ್ಷಣಗಳನ್ನು ಇಲ್ಲಿ ಗುರುತಿಸಬಹುದಾಗಿದೆ.

ಮಾರ್ಕಂಡೇಯ

ಮುಚ್ಚಿಗೆಯ ಅರ್ಧಮಂಟಪದಲ್ಲಿರುವ ಸರಣಿ ಚಿತ್ರಗಳಲ್ಲಿ ಛಾವಣಿಯಲ್ಲಿರುವ ಶಿವನ ವಿವಿಧ ರೂಪಗಳು ಹಾಗೂ ಭಂಗಿಗಳ ಚಿತ್ರಣದೊಂದಿಗೆ, ಶಿವನು ಲಿಂಗದಿಂದುದ್ಭವಿಸಿ ಕೈಮುಗಿದು ನಿಂತಿರುವ ಭಕ್ತರಿಗೆ ವಿಶೇಷವಾಗಿ ಯಮಪಾಷದಿಂದ ಬಂಧನಕ್ಕೊಳಗಾಗಿರುವ ಮಾರ್ಕಂಡೇಯನಿಗೆ ಅಭಯವನ್ನು ನೀಡುತ್ತಿರುವ ದೃಶ್ಯ ಮನೋಹರವಾಗಿದೆ. ವಿಶೇಷವೆಂದರೆ ಇಲ್ಲಿ ಯಮನ ಚಿತ್ರವಿರುವುದಿಲ್ಲ. ಭಕ್ತ ಮಾರ್ಕಂಡೇಯನ ಈ ಚಿತ್ರದಲ್ಲಿ ಭಕ್ತಸಮೂಹದ ಸಂಯೋಜನೆಯು ಹದವರಿತು ವಿನ್ಯಾಸಗೊಂಡಿರುವುದು ಮತ್ತು ವರ್ಣಗಳ ಉಚಿತವಾದ ಬಳಕೆ ಚಿತ್ರಕ್ಕೊಂದು ಮೆರಗನ್ನು ತಂದಿದೆ. ಇಲ್ಲಿ ಪ್ರಧಾನ ಪಾತ್ರಕ್ಕೆ ವಿಶೇಷವಾದ ಸ್ಥಾನವನ್ನು ಕಲ್ಪಿಸಿ ಇನ್ನುಳಿದಂತೆ ಉಳಿದ ಚಿತ್ರಗಳು ಸಾಮಾನ್ಯವಾಗಿ ರಚನೆಯಾಗಿವೆ.

ಚಂಡೇಶಾನುಗ್ರಹ

ಈ ಚಿತ್ರದಲ್ಲಿ ಶಿವನ ಮಹಾಭಕ್ತನಾದ 'ಚಂಡೇಶನು' ಶಿವನಿಂದ ಪರುಶುವನ್ನು ಪಡದುಕೊಳ್ಳುತ್ತಿರುವ ದೃಶ್ಯವಿದ್ದು, ಈ ಚಿತ್ರಕ್ಕೆ ಪೂರಕವಾಗಿ ಅನೇಕ ಕುಬ್ಜಗಣಗಳ ಚಿತ್ರಗಳು ಮತ್ತು ದೈವೀಕೃಪೆಯ ದೃಶ್ಯವನ್ನು ನೋಡಲು ಬಂದಿರುವ ದೇವಾನು–ದೇವತೆಗಳು, ಋಷಿಮುನಿಗಳು, ಕಹಳೆ ಊದುವವರು ಮುಂತಾದ ಪರಿವಾರವನ್ನು ಕಾಣಬಹುದಾಗಿದೆ. ಇಲ್ಲಿಯ ಹದವರಿತ ವರ್ಣಗಳ ಬಳಕೆ, ಸಂಯೋಜನೆಯ ವೈಶಿಷ್ಟ್ಯತೆಯನ್ನು ಗುರುತಿಸಬಹುದಾಗಿದೆ.

ಅಂದಕಾಸುರ

ಅಂದಕಾಸುರ ರಾಕ್ಷಸನ ರೌದ್ರಾಕಾರ ಮತ್ತು ಶಿವನ ಸೌಮ್ಯರೂಪ ಇವುಗಳ ವ್ಯತ್ಯಾಸವನ್ನು ಸ್ಪಷ್ಟವಾಗಿ ಗುರುತಿಸಬಹುದು. ಈ ಚಿತ್ರವು ಸುಂದರವಾದ ಸಂಯೋಜನೆಯಿಂದ ಗಮನ ಸೆಳೆಯುತ್ತವೆ. ಅಂಧಕಾಸುರನ ರಾಕ್ಷಸೀ ಭಾವದ ಮುಖಚರ್ಯೆ ಹಾಗೇ ಶಿವನ ಶಾಂತ ಸುಂದರ ಮುಖಭಾವಗಳನ್ನು ಕಲಾವಿದ ಅತ್ಯಂತ ಸೂಕ್ಷ್ಮವಾಗಿ ಚಿತ್ರಿಸಿದ್ದಾನೆ. ಚಿತ್ರದ ಎರಡೂ ಬದಿಯಲ್ಲಿ ನೆರೆದಿರುವ ಋಷಿಮುನಿಗಳು ಮತ್ತು ಭಕ್ತಗಣಗಳು ಶಿವನನ್ನು ಆರಾಧಿಸುವ ಭಂಗಿಯಲ್ಲಿ ಚಿತ್ರಿಸಲಾಗಿದೆ. ಶಿವನ ಯಾವುದೇ ಚಿತ್ರರಚಿಸಿದ್ದರೂ ಅಲ್ಲಿ ಶಿವಗಣಗಳು, ಋಷಿಮುನಿಗಳು ಸಹಜವಾಗಿ ಚಿತ್ರಿಸಿರುವುದನ್ನು ಇಲ್ಲಿ ಗಮನಿಸಬಹುದು.

ಭಿಕ್ಷಾಟನಾಲೀಲೆ

ತುಂಬಾ ಪ್ರಸಿದ್ಧವಾದ ಈ ಕಥಾವಸ್ತುವನ್ನು ಹೊಂದಿದ ಈ ಚಿತ್ರವು ಶಿವನು ಭಿಕ್ಷಾಟನೆಗೆ ಹೊರಟ ದೃಶ್ಯವಿದಾಗಿದೆ. ಭಿಕ್ಷುಕನಾಗಿ ಹೊರಟ ಶಿವನು ಒಬ್ಬ ಕುಬ್ಜಗಣನೊಬ್ಬನ ಮೇಲೆ ಭಿಕ್ಷಾ ಪಾತ್ರೆಯನ್ನಿಟ್ಟುಕೊಂಡು ಹೊರಟಿರುವ ದೃಶ್ಯವಿದೆ. 'ಭಿಕ್ಷಾಂದೇಹಿ' ಎಂದು ಭಿಕ್ಷೆ ಬೇಡುತ್ತಿರುವ ಸಂದರ್ಭದಲ್ಲಿ ಋಷಿಮುನಿಗಳ ಪತ್ನಿಯರಲ್ಲಿ ಶಿವನ ಸೌಂದರ್ಯಕ್ಕೆ ಮನಸೋಲುವ ಭಾವವನ್ನು ಇಲ್ಲಿ ಚಿತ್ರಕಾರನು ಅದ್ಭುತವಾಗಿ ಚಿತ್ರಿಸಿದ್ದಾನೆ. ಶಿವನ ಶಾಂತಮುಖ ಮುದ್ರೆ, ಉದಾತ್ತವಾದ ವ್ಯಕ್ತಿತ್ವವನ್ನು ಚಿತ್ರಿಸುವುದರೊಂದಿಗೆ ಮತ್ತು ಶಿವನ ಜೊತೆಗೆ ಬಂದಿರುವ ಕುಬ್ಜಗಣಗಳ ಹಾಸ್ಯಾಸ್ಪದವಾದ ಮುಖಚರ್ಯೆಗಳನ್ನು

ಕಲಾವಿದ ಇಲ್ಲಿ ತುಂಬಾ ಸಂಯಮದಿಂದ ಚಿತ್ರಿಸಿದ್ದಾನೆನ್ನಬಹುದು. ಮಹಿಳೆಯರ ಮನಸ್ಸಿನಲ್ಲಿ ಉಂಟಾಗುತ್ತಿರುವ ವಿಕಾರಗಳನ್ನು ಸಹ ಚಿತ್ರಿಸುವಲ್ಲಿ ಚಿತ್ರಕಾರನ ಕೈಚಳಕ ಗಮನಸೆಳೆಯುತ್ತದೆ. ಹೆಣ್ಣು ಮಗಳೊಬ್ಬಳ ಸೊಂಟಕ್ಕೆ ಶಿಲುಕಿಸಿದ ಸೀರೆ ಜಾರಿ ಕೆಳಬೀಳುತ್ತಿರುವ ದೃಶ್ಯ ದೃಷ್ಟಿ ಚಂಚಲತೆಗೆ ಸಾಕ್ಷಿಯಾಗಿ ಚಿತ್ರಿಸಿರುವ ಭಾವವ್ಯಕ್ತವಾಗುತ್ತದೆ.

ತ್ರಿಪುರಸಂಹಾರ

ದಕ್ಷಿಣ ಭಾರತದ ಅನೇಕ ದೇವಾಲಯಗಳಲ್ಲಿ ಚಿತ್ರಿಸಿರುವ ಈ ಕಥಾನಕವು ಇಲ್ಲಿಯೂ ಕಲಾವಿದರಿಗೆ ಪ್ರಿಯವಾದ ವಿಷಯವಾಗಿರುವಂತಿದೆ. ಈ ಚಿತ್ರದಲ್ಲಿ ಅಸುರರ ಮೂರು ನಗರಗಳನ್ನು ಸಂಹಾರ ಮಾಡುವ ಶಿವನ ದೃಶ್ಯದ ಚಿತ್ರ ಇದಾಗಿದೆ. ಈ ಚಿತ್ರದ ವಿಶೇಷವೆಂದರೆ, ಸೂರ್ಯ–ಚಂದ್ರರು ರಥದ ಚಕ್ರಗಳಾಗಿ, ನಾಲ್ಕು ವೇದಗಳೇ ನಾಲ್ಕು ಕುದುರೆಗಳಾಗಿ, ರಥದ ಸಾರಥಿಯಾಗಿ ಬ್ರಹ್ಮದೇವ, ಸುಮೇರು ಪರ್ವತ ಧನುವಾಗಿ, ವಾಸುಕಿಯೇ ಹಗ್ಗವಾಗಿ, ಮಹಾವಿಷ್ಣುವೇ ಬಾಣವಾಗಿ ಹೀಗೆ ದೇವಾನು ದೇವತೆಗಳು ಈ ಅಸುರರ ಸಂಹಾರದ ಸಂದರ್ಭದಲ್ಲಿ ಬಿಲ್ಲುದಾರಿಯಾಗಿ ಶಿವನು ಚಿತ್ರಣಗೊಂಡಿದ್ದಾನೆ. ತ್ರಿಪುರಾಸುರರ ಮೂರು ನಗರಗಳನ್ನು ಅಂತರಿಕ್ಷದಲ್ಲಿ ಸುತ್ತುತ್ತಿರುವಂತೆ ಕಲಾತ್ಮಕವಾಗಿ ವರ್ಣಗಳ ಘಡ ವಿನ್ಯಾಸದಿಂದ ಚಿತ್ರಣಗೈಯಲಾಗಿದೆ. ಶಿವನಲ್ಲಿ ಗಾಂಭೀರ್ಯದ ಮುಖಮುದ್ರೆಯನ್ನು ವಿಶೇಷವಾಗಿ ವರ್ಣಗಳ ಮೂಲಕ ಚಿತ್ರಿಸಿರುವುದನ್ನು ಕಾಣಬಹುದಾಗಿದೆ.

ಗೌರಿಪ್ರಸಾದಕ

ಶಿವಪಾರ್ವತಿಯ ಈ ದೃಶ್ಯದಲ್ಲಿ ಶಿವನಿಂದ ಕೋಪಗೊಂಡ ಪಾರ್ವತಿಯ ಮುಖದ ಹಾವಭಾವಗಳನ್ನು ತುಂಬಾ ಕಲಾತ್ಮಕವಾಗಿ ಚಿತ್ರಿಸಲಾಗಿದೆ. ಗೌರಿಯನ್ನು ವರಿಸಿಕೊಂಡು ಬಂದಿರುವ ಶಿವನನ್ನು ಒಂದು ರೀತಿಯಲ್ಲಿ ತರಾಟೆಗೆ ತೆಗೆದುಕೊಳ್ಳುವ ಸನ್ನಿವೇಶದೊಂದಿಗೆ, ಶಿವನು ಕೋಪಗೊಂಡ ಪಾರ್ವತಿಯನ್ನು ಸಂತೈಸುತ್ತಿರುವ ದೃಶ್ಯವಿಲ್ಲಿದೆ. ಇಲ್ಲಿ ಶಿವನ ಪರಿವಾರದ ಗಣಂಗಳ ದೃಶ್ಯಗಳು ಸಹಜವಾಗಿ ಚಿತ್ರಣಗೊಂಡಿವೆ. ಶಿವನ ಲೀಲೆಯ ಚಿತ್ರಗಳಲ್ಲಿ ಮಾನವ ಸಹಜವಾದ ಭಾವನಾತ್ಮಕ ಘಟನೆಯ ಈ ಚಿತ್ರ ಗಮನ ಸೆಳೆಯುತ್ತದೆ.

ಲಿಂಗೋದ್ಭವ ಶಿವ

ಈ ಚಿತ್ರದ ದೃಶ್ಯದಲ್ಲಿ ಶಿವನು ಲಿಂಗದಲ್ಲಿ ಉದ್ಭವಿಸುವ ದೃಶ್ಯವಿದೆ. ಕಥೆಯೊಂದರ ಪ್ರಕಾರ ವಿಷ್ಣು ಮತ್ತು ಬ್ರಹ್ಮರಲ್ಲಿ ಯಾರು ಹೆಚ್ಚು ಎಂಬ ವಿವಾವದಲ್ಲಿ ತೊಡಗಿರುವ ಸಂದರ್ಭದಲ್ಲಿ ಅಲ್ಲಿ ಲಿಂಗವೊಂದು ಉದ್ಭವವಾಗುತ್ತದೆ. ಇಬ್ಬರೂ ಅದರ ತುದಿ ಮತ್ತು ತಳವನ್ನು ಹುಡುಕಲು ಹೋಗಿ ಇಬ್ಬರೂ ಸುಸ್ತಾಗುತ್ತಾರೆ, ವಿಫಲರಾಗುತ್ತಾರೆ. ಆಗ ಶಿವನು ಅಲ್ಲಿ ಲಿಂಗದಿಂದಲೇ ಹೊರಬಂದು ಇಬ್ಬರಿಗೂ ಸಮಾಧಾನ ಹೇಳಿ ನೀವು ಯಾರು ಹೆಚ್ಚು ಅಲ್ಲ ಕಡಿಮೆನೂ ಅಲ್ಲ. ನೀವಿಬ್ಬರು ನಿಮ್ಮ ನಿಮ್ಮ ಮಟ್ಟಿಗೆ ಶ್ರೇಷ್ಠರೆಂದು ತಿಳಿಸುತ್ತಿರುವ ದೃಶ್ಯ ಇದಾಗಿದೆ. ಬ್ರಹ್ಮ ಮತ್ತು ವಿಷ್ಣು ಶಿವನಿಗೆ ನಮಸ್ಕರಿಸುತ್ತ ನಿಂತ ಭಂಗಿ ಇಲ್ಲಿದೆ. ಶಿವನ ಕೈಯಲ್ಲಿ ಅಭಯ ಹಸ್ತವಿದ್ದು, ಕಪ್ಪುಮಿಶ್ರಿತ ವರ್ಣದಲ್ಲಿ ಶಿವನನ್ನು ಚಿತ್ರಿಸಲಾಗಿದೆ. ಸುಂದರವಾದ ವರ್ಣಸಂಯೋಜನೆಯೊಂದಿಗೆ ಬ್ರಹ್ಮ, ವಿಷ್ಣು ಚಿತ್ರಣಗೊಂಡಿದ್ದು, ಇಲ್ಲಿ ಶಾಂತವರ್ಣಗಳ ಹಿತಮಿತ ಭಾವವಿನ್ಯಾಸ ಮತ್ತು ಸ್ಥಳದ ಸರಿಯಾದ ಹೊಂದಾಣಿಕೆ ಗಮನ ಸೆಳೆಯುತ್ತದೆ.

ಒಟ್ಟಾರೆ ಲೇಪಾಕ್ಷಿಯ ಈ ಭಿತ್ತಿಚಿತ್ರಗಳಲ್ಲಿ ಹಸಿರು, ಹಳದಿ, ನೀಲಿ, ಕಪ್ಪು, ಕೆಂಪು ಬಣ್ಣಗಳಲ್ಲಿ ದೇವತೆಗಳ, ಸಾಮಂತರ, ಸುಂದರ ಸ್ತ್ರೀಯರ, ಹೂ ಬಳ್ಳಿಗಳ ದೃಶ್ಯಗಳು ಮನೋಜ್ಞವಾಗಿ ಚಿತ್ರಿತವಾಗಿವೆ. ಕಾಲಾಂತರದಲ್ಲಿ ಕೆಂಪು, ಕಪ್ಪು ಬಣ್ಣಗಳು ಮಾತ್ರ ಪ್ರಧಾನವಾಗಿದ್ದು ಉಳಿದ ಬಣ್ಣಗಳು ಮಸುಕಾಗಿವೆ. ಇಲ್ಲಿನ ಪೌರಾಣಿಕ ದೃಶ್ಯಗಳಲ್ಲಿ ಪ್ರಮುಖವಾದವು ಗಿರಿಜಾ ಕಲ್ಯಾಣ, ರಾಮಪಟ್ಟಾಭಿಷೇಕ, ಮೋಹಿನಿ ಭಸ್ಮಾಸುರ, ಉಮಾ–ಮಹೇಶ್ವರ, ತ್ರಿಪುರ ಸಂಹಾರ ದೃಶ್ಯ, ಅರ್ಧನಾರೀಶ್ವರ, ದ್ರೌಪದಿ ಕಲ್ಯಾಣ, ಭೂಕೈಲಾಸ, ವೀರಭದ್ರೇಶ್ವರ; ಅಪ್ಸರೆಯರಾದ ರಂಭಾ, ಊರ್ವಶಿ, ಮೋಹಿನಿ ಮತ್ತು ಉಮಾ, ಗಿರಿಜಾ

ಮೊದಲಾದವರ ಕೇಶಾಲಂಕಾರಗಳು, ಪುಷ್ಪಾಲಂಕಾರಗಳು, ವಿವಿಧ ವಸ್ತ್ರಾಲಂಕಾರಗಳು, ಆಭರಣಗಳು, ಅತ್ಯಂತ ಮನೋಜ್ಞವಾಗಿ ಚಿತ್ರಿತವಾಗಿವೆ.

ಅರ್ಜುನನ ತಪೋಭಂಗ ದೃಶ್ಯದಲ್ಲಿ ಪಶು–ಪಕ್ಷಿಗಳು (ಚಿಗರೆ, ಹಂದಿ, ಮೊಲ ಇತ್ಯಾದಿ) ಚಿತ್ರಿತವಾಗಿವೆ. ಮತ್ತೊಂದು ದೃಶ್ಯದಲ್ಲಿ ವಿಷ್ಣುವಿನ ದಶಾವತಾರಗಳು ಮನೋಜ್ಞವಾಗಿ ಚಿತ್ರಿಸಲ್ಪಟ್ಟಿವೆ. ಇವಲ್ಲದೆ ಅಂದಿನ ಶಸ್ತ್ರಾಸ್ತ್ರಗಳು ವೈವಿಧ್ಯಮಯವಾಗಿ ಚಿತ್ರಣಗೊಂಡಿರುವುದು ಆ ಕಾಲದ ಸಾಮಾಜಿಕ, ಸಾಂಸ್ಕೃತಿಕ ಜನಜೀವನದ ಪ್ರತೀಕವಾಗಿ ಈ ಕಲಾಕೃತಿಗಳು ರಚನೆಯಾಗಿರುವುದನ್ನು ಗುರುತಿಸಬಹುದಾಗಿದೆ.

ದೇವಾಲಯ ಮತ್ತು ಚಿತ್ರಗಳ ವೈಶಿಷ್ಟ್ಯತೆಗಳು

* ಲೇಪಾಕ್ಷಿಯ ದೇವಾಲಯದ ಹತ್ತಿರವಿರುವ 30 ಅಡಿ ಉದ್ದ, 20 ಅಡಿ ಎತ್ತರದ ವಿಶ್ವದಲ್ಲಿಯೇ ಬೃಹತ್ತಾದ ಏಕಶಿಲಾ ನಂದಿಯನ್ನು ಈ ಲೇಪಾಕ್ಷಿ ದೇವಾಲಯದಲ್ಲಿ ಕಾಣಬಹುದು.
* ಈ ದೇವಾಲಯದ ಆವರಣದೊಳಗಿರುವ 21 ಅಡಿ ಎತ್ತರದ ನಾಗಲಿಂಗ ಶಿಲ್ಪವೂ ಕೂಡಾ ದೇಶದಲ್ಲಿಯೇ ಅಪರೂಪದ ಕಲಾಕೃತಿ.
* ಈ ದೇವಾಲಯದಲ್ಲಿ ತೂಗಾಡುವ ಬೃಹತ್ ಶಿಲಾಸ್ತಂಭವೊಂದಿದ್ದು, ಈ ಕಂಬವು ಮೇಲ್ಛಾವಣಿಯನ್ನು ಆಧರಿಸಿ ನಿಂತಿದೆ. ಅದರ ಕೆಳಗಡೆ ಹಾಳೆಯನ್ನು ಸಲೀಸಾಗಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ಎಳೆದುಕೊಳ್ಳಬಹುದಾಗಿದೆ. ಇದೊಂದು ಆ ಕಾಲದ ಇಂಜಿನಿಯರು(ವಾಸ್ತುಶಿಲ್ಪಿ)ಗಳ ವಿಶಿಷ್ಟವಾದ ತಂತ್ರಜ್ಞಾನದ ಕೌಶಲವಾಗಿದೆ.
* ಇಲ್ಲಿರುವ ವಿರೂಪಣ್ಣನ ವರ್ಣಚಿತ್ರವು ವಿಜಯನಗರ ಕಾಲದ ಅತ್ಯಂತ ದೊಡ್ಡಪ್ರಮಾಣದ ಅಂದರೆ, ಹತ್ತು ಅಡಿ ಅಗಲ, ಮತ್ತು ಇಪ್ಪತ್ತು ಅಡಿ ಉತ್ತವಿರುವ ಚಿತ್ರವಿದೆಯೆಂದು ದಾಖಲಾಗಿದೆ.
* ವಿಜಯನಗರ ವಾಸ್ತುಶಿಲ್ಪ, ವರ್ಣಚಿತ್ರ ಶೈಲಿಯೇ ಇಲ್ಲಿಯೂ ಚಾಚೂತಪ್ಪದೇ ಮುಂದುವರೆದುಕೊಂಡು ಬಂದಿರುವುದು ಗಮನಾರ್ಹವಾಗಿದೆ.
* ಚಿತ್ರಗಳಲ್ಲಿ ಚೌಕಾಕಾರದ ಪಟ್ಟಿಕೆಗಳನ್ನು ನಿರ್ಮಿಸಿ ಅವುಗಳಲ್ಲಿ ಮತ್ತೆ ಪಟ್ಟಿಕೆಗಳನ್ನು ರಚಿಸಿ ಅದರೊಳಗೆ ಚಿತ್ರಗಳನ್ನು ರಚಿಸಲಾಗಿದೆ. ಇದು ವಿಜಯನಗರ ಶೈಲಿಯ ಮುಂದುವರೆದ ಶೈಲಿಯೆನ್ನಬಹುದು.
* ಪ್ರಾಣಿ–ಪಕ್ಷಿಗಳ ಕಣ್ಣುಗಳನ್ನು ಮನುಷ್ಯರ ಕಣ್ಣುಗಳಂತೆ ಚಿತ್ರಿಸಲಾಗಿದೆ.
* ಶಿಲ್ಪಶಾಸ್ತ್ರ ಮತ್ತು ಚಿತ್ರಶಾಸ್ತ್ರಗಳ ತಾಳಮಾನದ ಹಿನ್ನೆಲೆಯಲ್ಲಿ ಶಿಲ್ಪ ಮತ್ತು ಚಿತ್ರಗಳು ರಚನೆಯಾಗಿವೆ. ನುರಿತ ಅನುಭವಿ ಕಲಾವಿದರು ಪೌರಾಣಿಕ ಧಾರ್ಮಿಕ ಕಥಾನಕದ ಚಿತ್ರಗಳನ್ನು ಚಿತ್ರಿಸಿರುವುದು ಕಂಡುಬರುತ್ತದೆ.
* ನೈಸರ್ಗಿಕವಾದ ವರ್ಣಗಳನ್ನು ತಾವೆ ಸಿದ್ಧಪಡಿಸಿಕೊಂಡು ಆ ಬಣ್ಣವನ್ನು ಬಳಸಿಕೊಂಡಿರುವುದು ಈ ಚಿತ್ರಗಳ ವಿಶೇಷತೆಯಾಗಿದೆ.
* ಪೌರಾಣಿಕ ಕಥೆಗಳನ್ನಾಧರಿಸಿದ ಹಲವಾರು ಚಿತ್ರಗಳು ಹಂಪಿಯ ವಿರೂಪಾಕ್ಷೇಶ್ವರ ದೇವಾಲಯದಲ್ಲಿರುವಂತೆ ಇಲ್ಲಿಯೂ ಚಿತ್ರಣಗೊಂಡಿವೆ.
* ಶಿವನಿಗೆ ಮೂರು ಕಣ್ಣುಗಳನ್ನು ವಿಜಯನಗರ ವಿರೂಪಾಕ್ಷೇಶ್ವರ ದೇವಾಲಯದಲ್ಲಿಯಂತೆ ವಿಶೇಷವಾಗಿ ಚಿತ್ರಿಸಿರುವುದನ್ನು ಕಾಣಬಹುದು.
* ಇಲ್ಲಿಯೂ ಕೂಡಾ ಜಾನಪದ ತೊಗಲುಗೊಂಬೆ ಶೈಲಿಯ ಚಿತ್ರಗಳು ರಚನೆಗೊಂಡಿವೆ.
* ನೀಳಾಕಾರದ ಚಿತ್ರಗಳು ಒಂದೆಡೆಗೆ ವಾಲಿ ನಿಂತಿರುವಂತೆ ಸಹಜವಾಗಿ ಎಲ್ಲ ಚಿತ್ರರಚನೆಗಳಲ್ಲಿ ಕಂಡು ಬರುತ್ತವೆ.

ಆಧಾರಸೂಚಿ

01. ಡಾ. ಕೃಷ್ಣಾನಂದ ಕಾಮತ : **ನಾ ಕಂಡ ಕರ್ನಾಟಕ,** ಪ್ರ: ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ಧಾರವಾಡ. 2007–08
02. ಬಿ.ಎಂ. ಚಂದ್ರಶೇಖರಯ್ಯ : **ಕರ್ನಾಟಕದ ಸಾಂಸ್ಕೃತಿಕ ಇತಿಹಾಸ ಪರಂಪರೆ,** ಪ್ರ: ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು. 2005
03. ಪಿ.ಆರ್. ತಿಪ್ಪೇಸ್ವಾಮಿ (ಪ್ರ.ಸಂ) : **ಚಿತ್ರಕಲಾ ಪ್ರಪಂಚ,** ಪ್ರ: ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. 1993
04. ಡಾ. ಅ.ಲ. ನರಸಿಂಹನ್ : ಕರ್ನಾಟಕ ಭಿತ್ತಿಚಿತ್ರ ಪರಂಪರೆ, ಪ್ರ: ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. 1996
05. ಎನ್. ಮರಿಶಾಮಾಚಾರ್ : **ಕರ್ನಾಟಕದ ಚಿತ್ರಕಲಾ ಪರಂಪರೆ,** ಪ್ರ: ಸಿ. ಎಂ.ಎನ್. ಪ್ರಕಾಶನ, ಬೆಂಗಳೂರು. 2012
06. ನಿರಂಜನ (ಸಂ.) : **ಜ್ಞಾನಗಂಗೋತ್ರಿ,** ಸಂಪುಟ–5–ಕಲೆ ಮತ್ತು ಸಾಹಿತ್ಯ, ಪ್ರ: ಕರ್ನಾಟಕ ಸಹಕಾರೀ ಮಂದಿರ, ಬೆಂಗಳೂರು. 1973
07. ಡಾ. ಎಸ್. ರಾಜಶೇಖರ್ : **ಕರ್ನಾಟಕದ ವಾಸ್ತುಶಿಲ್ಪ ಮತ್ತು ಚಿತ್ರಕಲೆ,** ಪ್ರ: ಸುಜಾತಾ ಪಬ್ಲಿಕೇಷನ್, ಧಾರವಾಡ.
08. Percy Brown : **Indian Painting,** VMCA Publishing House #5, Russell Street, Calcutta. 1960
09. C. Sivarammurthy : **South Indian Painting,** Publication Division, Govt. of India, New Delhi. 1968
10. C. Sivarammurthy : **Vijayanagara Painting,** Publication Division, Soochna Bhawan, C.G.O Complex, Lodi road, New Delhi-03. 1985

34. ಹರಿಹರನ ರಗಳೆಗಳಲ್ಲಿ 'ಪಂಪಾ ನಗರದ' ವರ್ಣನೆ

– ಡಾ. ಮಲ್ಲಿಕಾರ್ಜುನ ಕುಂಬಾರ

ಹಂಪೆ ಕರ್ನಾಟಕದ ಮಹತ್ವಪೂರ್ಣವಾದ ಸಾಂಸ್ಕೃತಿಕ ನೆಲೆಗಳಲ್ಲಿ ಒಂದು ಅದ್ಭುತವಾದ ಧಾರ್ಮಿಕ ತಾಣ, ಇದು ಯಾರ ಒಡೆತನಕ್ಕೂ ಒಳಗಾಗದ ದೇವ ಸಾಮ್ರಾಜ್ಯ. ಇದು ಸುಮಾರು 14 ನೆಯ ಶತಮಾನದ ಪೂರ್ವದಲ್ಲಿಯೇ ಉದಯವಾದರೂ ಈ ನೆಲ ಯೋಗಿಗಳ, ಕವಿಗಳ,ಯತಿಗಳಿಂದೊಡಗೂಡಿದ ತುಂಗಭದ್ರಾ ತಟದಲ್ಲಿರುವ ನಿಸರ್ಗರಮಣೀಯ ತಾಣ. ವಿಜಯ ನಗರ ಸಾಮ್ರಾಜ್ಯ ಸ್ಥಾಪನೆಗೂ ಪೂರ್ವದಲ್ಲಿ ಅಳಿಯ–ಮಾವಂದಿರರ, ಗುರುಶಿಷ್ಯ ಪರಂಪರೆಯ ಹರಿಹರ ರಾಘವಾಂಕರ ನೆಲೆವೀಡು. ಅವರ ಭಕ್ತಿ ಪರಾಕಾಷ್ಠೆಯನ್ನು ಹೊಂದಿದ ನಗರ. ಅಗ ದಕ್ಷಿಣದಲ್ಲಿ ಹಂಪೆ ಪ್ರಸಿದ್ಧಿ ಹೊಂದಿದ ಧಾರ್ಮಿಕ ಕೇಂದ್ರ. ಇಲ್ಲಿ ರಾಜ್ಯ ಸ್ಥಾಪನೆಯ ಮೊದಲೇ ಇದು ದೊಡ್ಡ ನಗರವಾಗಿ, ಧಾರ್ಮಿಕ ಚಟುವಟಿಕೆಗಳಿಗೆ ಕೇಂದ್ರವೆನ್ನಿಸಿತ್ತು. ಹರಿಹರ ರಾಘವಾಂಕರ ಪೂರ್ವದಲ್ಲಿಯೇ ಬಸವಣ್ಣನವರು ತಮ್ಮ ಒಂದು ವಚನದಲ್ಲಿ ಈ ನಗರವನ್ನು 'ದ್ವಾಪರದಲ್ಲಿ ವಿರೂಪಾಕ್ಷನೆಂಬ ಮೂಲ ಸ್ಥಾನ'[1]ವೆಂದು ಈ ಪಂಪಾನಗರಿಯ ವಿರೂಪಾಕ್ಷನನ್ನು ನೆನೆದಿದ್ದಾರೆ. ಅವರು ನೆನೆದ ಪಂಪಾನಗರಿಯೇ ಹಂಪೆಯದ್ದು. ಈ ಕ್ಷೇತ್ರವನ್ನು ಧರ್ಮ ಸಾಮ್ರಾಜ್ಯದ ರಾಜಧಾನಿಯನ್ನಾಗಿ ಪರಿವರ್ತಿಸಿದವರೇ ಹರಿಹರ, ರಾಘವಾಂಕರು. ಅವರಿಗೆ ಮನುಜರಿಗಿಂತ, ದೇವಾನುದೇವತೆಗಳಿಗಿಂತ ಹಂಪೆಯಾಳ್ದರಸ ವಿರೂಪಾಕ್ಷನ ಮೇಲೆ ಎಲ್ಲಿಲ್ಲದ ಅವಿನಾಭಾವ ಭಕ್ತಿ. ಆತನ ಪೂಜೆಗಾಗಿ ತರುವ ನಾನಾ ಬಗೆಯ ಹೂಗಳನ್ನು ಕುರಿತು ಪುಷ್ಪ ರಗಳೆಯಲ್ಲಿ ಹರಿ, ಅಜರು ಈ ನಗರವನ್ನು ಮನದುಂಬಿ ಹೊಗಳಿದ್ದಾರೆ. ಇನ್ನು ಮಾನವರದ್ದೇನು? ಎಂದು ಪ್ರಶ್ನಿಸಿದ್ದಾನೆ. ಇದನ್ನು ಹೇಮಕೂಟಪ್ರಾಂಥ, ಶಿವಪುರ, ಶರಣರು ಒಲವಿಂದ ನಲಿದಿರ್ಪ ಪಂಪಾಪುರವೆಂದು ಮನದುಂಬಿ ವರ್ಣಿಸಿ, ಈ ಕ್ಷೇತ್ರವು ಅಮರವಾಗಿಸಿದ್ದಾರೆ. ಶಿವಕವಿ ಎನ್ನಿಸಿದ ಹರಿಹರ. ತನ್ನ ಗುರು ಪರಂಪರೆಯನ್ನು ಹೇಳಿಕೊಳ್ಳುವಾಗ ಹಂಪೆಯ ಶಂಕರದೇವ, ಮಾದಿರಾಜ, ಹಂಪೆಯ ಮಾಯಿದೇವರು ಇವರೆಲ್ಲರೂ ಹಂಪೆಯವರೆಂದು[2], ಅವರು ಶೈವಾಗಮ ಸಿದ್ಧರೂ, ಆಚಾರ್ಯ ಪುರುಷರು, ಪರಮ ಪಂಡಿತರಾಗಿದ್ದರೆಂದು ವಿವರಿಸುತ್ತಾನೆ. ಈ ಪರಂಪರೆಗೆ ಸೇರಿದವನೇ ಅವನ ಶಿಷ್ಯ ರಾಘವಾಂಕ. ಇವರು ವಿದ್ವತ್ ಪರಂಪರೆಯುಳ್ಳವರು. ಅವರ ಮುಂದಿನ ಅನೇಕ ಕವಿ ಪುಂಗವರು ವಿಜಯ ನಗರವನ್ನು ವಿಜಯ ಕಲ್ಯಾಣವಾಗಿಸಿದರು. ಹಿಂದೂಗಳಿಗೆ ಪವಿತ್ರ ತಾಣವಾದ ವಾರಣಾಸಿಗೆ ಮಿಗಿಲೆನಿಪ ನಗರವೆಂದು ಬಣ್ಣಿಸಿದ್ದಾರೆ. ಇಲ್ಲಿನ ಅನೇಕ ದೇವಾಲಯಗಳು, ತೀರ್ಥಗಳು ನಾಡಿನ ಜನರನ್ನು ತನ್ನತ್ತ ಸೂಜಿಗಲ್ಲಿನಂತೆ ಸೆಳೆದಿತ್ತು. ಇದು ಮುಂದೆ ವಿಜಯನಗರ ಸ್ಥಾಪನೆಗೆ ಕಾರಣವೂ ಆಗಿರಬಹುದು. ಕಾಲಿಡಲಿಂಬಿಲ್ಲದಂತೆ ಶಿವಲಿಂಗದ ಆಲಯಗಳು ಇದ್ದವು. ಹರಿಹರ ಹೇಳುವಂತೆ ಈ ದೇವ ಸಾಮ್ರಾಜ್ಯದಲ್ಲಿ ಪೂರ್ವದಲ್ಲಿ ಕಿನ್ನರೇಶ್ವರ, ಪಶ್ಚಿಮದಲ್ಲಿ ಸೋಮೇಶ್ವರ, ಉತ್ತರದಲ್ಲಿ ವಾಣಿಭದ್ರೇಶ್ವರ, ದಕ್ಷಿಣದಲ್ಲಿ ಜಂಬುಕೇಶ್ವರದವರಗೆ ವಿಸ್ತರಿಸಿದ್ದ ಇಲ್ಲಿನ ಅಧಿಪತಿ ವಿರೂಪಾಕ್ಷ. ಹರಿಹರ ಕವಿಯು ವಿರೂಪಾಕ್ಷನ ಪೂಜೆಗಾಗಿ ಮೀಸಲಿರಿಸಿದ ಪುಷ್ಪ ರಗಳೆ ಜೊತೆಗೆ ಹಂಪೆ ಅರಸನ ರಗಳೆ ಮತ್ತು ಪಂಪಾ ಕ್ಷೇತ್ರದ ರಗಳೆಯನ್ನು ರಚಿಸಿದ್ದಾನೆ. ಅಲ್ಲಿ ಪ್ರತಿ ಪದ್ಯ ನುಡಿಯ ಕೊನೆಗೆ 'ಪಂಪಾಪುರದರಸ ವಿರೂಪಾಕ್ಷ' ಎಂದೇ ಸಂಭೋಧಿಸಿದ್ದಾನೆ. ಈ ಹಂಪೆಯರಸ ವಿರೂಪಾಕ್ಷನನ್ನು ಎಷ್ಟು ಹೊಗಳಿದರೂ ಹರಿಹರನಿಗೆ ತೃಪ್ತಿಯೇ ಇಲ್ಲ. 'ಹರವಿರಂಚಿ ವಿಷ್ಣುವಂದ್ಯ ಪಾದ ಹಂಪೆಯರಸ' ಎನ್ನುವಲ್ಲಿ ಈ ಲೋಕಕ್ಕೆ

ಹಂಪೆಯರಸನನ್ನು ಬಿಟ್ಟರೆ ಇನ್ನಾವ ದೇವತೆಯೂ ಇಲ್ಲವೆಂದು ಬಗೆದಿದ್ದಾನೆ. ಹಂಪೆಯರಸನಿಗೆ ಸಮರ್ಪಣ ಭಾವದಿಂದ ಜೀವನದಲ್ಲಿ 'ನೊಂದು ಬೆಂದು ಗಾಸಿಯಾಗಿ, ನೊಂದು ಬೆಂದು ಬರಿದೆ ಬಳಲುತ್ತಿರ್ದೆನಯ್ಯ, ನನ್ನನ್ನು ಬದುಕಿಸು, ಜೀಯಾ ನಿತ್ಯಕಾಯ ದೇವರಾಯ ನೋಡು ಹಂಪೆಯರಸ, ವಿಷಯವೆಂಬ ಕೆಸರೊಳದ್ದ ಪಶುವನೆನ್ನ ರಕ್ಷಿಸಯ್ಯ, ಪಶುಪತಿ ಶಿವಭವ, ಭವಾನಿಯರಸ ಕರುಣಿಸಯ್ಯ"3 ಎಂದು ಕೇಳಿಕೊಳ್ಳುತ್ತಾನೆ. ಇಲ್ಲಿ ಬಸವಣ್ಣನವರ ವಚನದ ಪ್ರಭಾವ ಹರಿಹರನಿಗಿದೆ. ಮುಂದುವರಿದು ದೇವಾ ದಮ್ಮಯ್ಯಾ ನನ್ನನ್ನು ಕೈಬಿಡಬೇಡ ಎಂದು ಪಂಪಾಪುರದರಸನನ್ನು ದೈನ್ಯದಿಂದ ಬೇಡಿಕೊಳ್ಳುತ್ತಾನೆ. ಕವಿ ತಾನಾದರೂ, ಲಿಪಿಕಾರ ವಿರೂಪಾಕ್ಷನು ಎನ್ನುವ ಭಾವ ಈ ರಗಳೆಯಲ್ಲಿ ಎದ್ದು ಕಾಣುತ್ತದೆ. ಪುಷ್ಪ ರಗಳೆಯಲ್ಲಿ ವಿರೂಪಾಕ್ಷನ ಪೂಜೆಗಾಗಿ ಕವಿ ಪುಳಕಗೊಳ್ಳುತ್ತಿದ್ದ. ನಾನಾಬಗೆಯ ಹೂಗಳನ್ನು ತಿರಿದುಕೊಳ್ಳುವಾಗ ದುಂಬಿಗಳು ಎಂಜಲು ಮಾಡದಂತೆ ಜಾಗೃತೆ ವಹಿಸುತ್ತಿದ್ದನು. ಲೋಕ ಪ್ರಜ್ಞೆಯನ್ನು ಮರೆತು ವಿರೂಪಾಕ್ಷನನ್ನು ಪೂಜಿಸುವ ರೀತಿ ಅದ್ಭುತವಾದುದು.

ಪಂಪಾ ಕ್ಷೇತ್ರದ ರಗಳೆಯಲ್ಲಿ ಈ ಕ್ಷೇತ್ರದ ವರ್ಣನೆಯಲ್ಲಿ ಪಂಪಾವಿರೂಪಾಕ್ಷ, ಹನುಮಂತೇಶ್ವರ, ರಂಭೇಶ್ವರ, ನಳೇಶ್ವರ, ಮುಕ್ತೇಶ್ವರ, ಛಾಯಾಮಲ್ಲಿಕಾರ್ಜುನ, ರಾಮಲಕ್ಷ್ಮಣೇಶ್ವರ, ಮಹಾಕಾಳ, ಮಾರ್ಕಂಡೇಶ್ವರ, ಇಂದ್ರೇಶ್ವರ, ಹಿರಿಯ ಹಂಪಾದೇವಿ, ಚಿಕ್ಕಹಂಪಾದೇವಿ, ಆಜ್ಞೇಶ್ವರ, ಶಂಕರ, ಅಘೋರೇಶ್ವರ, ನಾಗೇಶ್ವರ, ಕೇದಾರೇಶ್ವರ, ವರುಣೇಶ್ವರ, ವಾಯುವೇಶ್ವರ, ಕುಬೇರೇಶ್ವರ, ಈಶಾನ್ಯದೇವರು, ಬ್ರಹ್ಮೇಶ್ವರ, ಅಗಸ್ತ್ಯೇಶ್ವರ, ಕೋಟಿಯ ಶಂಕರೇಶ್ವರ, ಜಡೆಯಶಂಕರದೇವರು, ಪಾತಾಳಗಂಗೆಯ ಸೋಮನಾಥ, ಲೋಕಪಾವನ ದೇವರು, ಕೋಟಿಶಂಕರ, ಏಕಾಂತರಾಮೇಶ್ವರ ಹೀಗೆ ದೇವಾಲಯಗಳ ಪಟ್ಟಿಯನ್ನೆ ಕೊಡುತ್ತಾನೆ. ಇದನ್ನು ಗಮನಿಸಿದರೆ ಅದು ಆಗ ಲಿಂಗದ ಆಲಯವುಳ್ಳ ಮತ್ತು ಶಿವಭಕ್ತರ ಪ್ರಸಿದ್ದ ಕೇಂದ್ರವಾಗಿತ್ತೆಂದು ಖಚಿತವಾಗುತ್ತದೆ.

ಇದರೊಂದಿಗೆ ಆಗ ಇಲ್ಲಿದ್ದ ಪವಿತ್ರ ತೀರ್ಥಗಳನ್ನು ವಿವರಿಸುತ್ತಾ, ಮನ್ಮಥತೀರ್ಥ, ಸೋಮತೀರ್ಥ, ಮಹಾಕಾಳತೀರ್ಥ, ತಾರಾತೀರ್ಥ, ಸೂರ್ಯತೀರ್ಥ, ವತ್ಸತೀರ್ಥ, ರೇಭ್ಯತೀರ್ಥ, ನಾಗಮಾರ್ಕಂಡೆಯತೀರ್ಥ, ಗಜಾಶ್ವತೀರ್ಥ, ಕಾದಾಂಭರಿತೀರ್ಥ, ಬ್ರಹ್ಮತೀರ್ಥಗಳೆಂಬ 11 ತೀರ್ಥಗಳೊಂದಿಗೆ, ತುಂಗಭದ್ರೆಯ ದಡದಲ್ಲಿರುವ ತೀರ್ಥ ಸಮಾನವಾದ ಋಷಿಗಳ ಆಶ್ರಮಗಳು, ವಶಿಷ್ಠಾಶ್ರಮ, ಅಲ್ಲಿರುವ ಪಾಪವಿನಾಶಿನಿ ತೀರ್ಥ, ದಶಾಶ್ವಮೇಧಾ ವಿಧಾನದ ತೀರ್ಥ, ಅದರೊಳಗಿರುವ ಬದರಿಕಾಶ್ರಮ, ಅಲ್ಲಿನ ಕೋಟಿತೀರ್ಥ, ಶಬರಿಕಾಶ್ರಮ ಅಲ್ಲಿ ಕೋಟಿ ತೀರ್ಥ, ಪಂಪಾಸರೋವರ, ಕಾಮದಹನ ಭಸಿತ ಮಾಲ್ಯವಂತ ಪರ್ವತದಲ್ಲಿರುವ ಋಣವಿಮೋಚನ ತೀರ್ಥ, ಅಕ್ಷಯತೀರ್ಥ, ಗಧಾತೀರ್ಥ, ಧನುತೀರ್ಥ, ಶಂಖಚಕ್ರತೀರ್ಥ, ಪದ್ಮದಳತೀರ್ಥ, ಹೇಮಕೂಟ ಪರ್ವತದ ಮೇಲಿರುವ ವತ್ಸನಾಭಿತೀರ್ಥ, ಅಗ್ನಿತೀರ್ಥ, ರಾಮತೀರ್ಥ,ಪಿತೃತೀರ್ಥ, ಮಾಂಗಲ್ಯತೀರ್ಥಗಳನ್ನು ಹೆಸರಿಸುತ್ತಾ ಇನ್ನುಳಿದ ತೀರ್ಥಗಳ ಹೆಸರನ್ನು ಹೇಳುವ ಸಾಮಥ್ಯ ನನಗಿಲ್ಲವೆಂದು ಹೇಳುತ್ತಾನೆ4. ಈ ತೀರ್ಥದಲ್ಲಿ ದೇವಾನು ದೇವತೆಗಳಿಗೆ ಪರಮಪದವಿಯನ್ನು ನೀಡುವ ಸಾಮರ್ಥ್ಯವಿದೆ ಎಂದು ಬಣ್ಣಿಸುತ್ತಾನೆ. ಇಲ್ಲಿ ಮೊರೆಹೊಕ್ಕವರನ್ನು ತನ್ನ ಒಡಲಿನಲ್ಲಿರಿಸಿಕೊಂಡು ಕಾಯುವ ಪಂಪಾಪುರವು, ಬೇಡಿದವರಿಗೆ ಬೇಡಿದ್ದನ್ನು ನೀಡುವ ಕಲ್ಪವೃಕ್ಷ, ಕಾಮಧೇನುವಾಗಿದೆ. ಕಾಮನನ್ನು ದಹಿಸಿದ, ತಪಕ್ಕೆ ನಿಂತ ಗಿರಿಜೆಗೆ, ಪತಿಯನ್ನು ಕಳೆದುಕೊಂಡ ರತಿಗೆ ಅಭಯವನ್ನು ನೀಡಿದ ಈ ಸ್ಥಳ, ಅಣಿಮಾದಿ ಸಿದ್ಧಿಗಳನ್ನು ದೊರಕಿಸಿಕೊಡುತ್ತದೆ. ಶಿವನೇ ಇಲ್ಲಿ ವಿರೂಪಾಕ್ಷನ ರೂಪದಲ್ಲಿರುವುದರಿಂದ ಇದು ನಿಜಕ್ಕೂ ಕೈಲಾಸವೆಂದು ಬಣ್ಣಿಸುತ್ತಾನೆ. ಇಂತಹ ಹರಿಹರನನ್ನು ರೂಪಿಸಿದ್ದು ಹಂಪೆ ಎನ್ನುವದರಲ್ಲಿ ಯಾವುದೇ ಸಂದೇಹವಿಲ್ಲ.

ನೂರೊಂದು ವಿರಕ್ತರನ್ನು, ಅನೇಕ ಕವಿಪುಂಗವರನ್ನು ನಾಡಿಗೆ ನೀಡಿದ ಪಂಪಾಪುರವೇ ಮುಂದೆ ವಿಜಯನಗರವೆಂದು,ವಿದ್ಯಾನಗರವೆಂದು ಕರೆಯಲ್ಪಟ್ಟರೂ ಅದು ಮುಂದೆ ಶಿವಕವಿ ಲಕ್ಕಣ್ಣದಂಡೇಶನ ಶಿವತತ್ವ ಚಿಂತಾಮಣಿಯಲ್ಲಿ ವಿಜಯ ಕಲ್ಯಾಣವೆಂದು ಕರೆಯಲ್ಪಟ್ಟಿದೆ. ಅದು ಪ್ರೌಢರಾಯನ ಕಾಲಕ್ಕೆ ಕೇವಲ ವಿಜಯನಗರವಾಗದೇ ಬಸವಣ್ಣನ ಕಲ್ಯಾಣದೊಂದಿಗೆ ಸೇರಿ 'ವಿಜಯಕಲ್ಯಾಣ'ವಾಗಿದೆ.

ಹೊಯ್ಸಳ ಅರಸರ ತರುವಾಯ ದಕ್ಷಿಣ ಹಿಂದುಸ್ಥಾನದಲ್ಲಿ ತಲೆ ಎತ್ತಿದ, ಕರ್ನಾಟಕ ಸಂಸ್ಕೃತಿಯನ್ನು ವಿನಾಶದ ದವಡೆಯಿಂದ ಪಾರುಮಾಡಿದ ಶ್ರೇಯಸ್ಸು ಇದಕ್ಕೆ ಸಲ್ಲುವದರಿಂದ ಇದು ಬರಿ ವಿಜಯನಗರ ಸಾಮ್ರಾಜ್ಯವಾಗದೇ 'ಕರ್ನಾಟಕ ಸಾಮ್ರಾಜ್ಯ'ವಾಗಿದೆ.

ಆಧಾರಸೂಚಿ ಮತ್ತು ಟಿಪ್ಪಣಿಗಳು

1. ಬಸವಣ್ಣನವರ ವಚನಗಳು, 394
2. **A Histry of Karnatak** (p.329)
3. ಹರಿಹರನ ರಗಳೆಗಳು, ಸಂ. ಎಂ.ಎಂ. ಕಲಬುರ್ಗಿ (ಹಂಪಿವಿವಿ), ಹಂಪೆಯರಸನ ರಗಳೆ (ಪು.498)
4. ಅದೇ, ಪಂಪಾಕ್ಷೇತ್ರದ ರಗಳೆ (ಪು.508)

35. ಋಷ್ಯಮೂಕ ಪರ್ವತದಲ್ಲೊಂದು ಅಪೂರ್ವ ನೂತನ ವಿಷ್ಣುವಿನ ಶಿಲ್ಪಶಾಸ್ತ್ರ ಪರಿಧಿಯನ್ನು ಮೀರಿದ ವಿಭಿನ್ನ ಶಿಲ್ಪ

– ಟಿ.ಎಂ. ಕೇಶವ

ಇತಿಹಾಸ ವಿದ್ವಾಂಸರುಗಳಿಗೆ, ಶೋಧಕರಿಗೆ, ಇತಿಹಾಸ ಹಾಗೂ ವಿಜಯನಗರ ವಾಸ್ತುಶಿಲ್ಪ ಪ್ರಾಕಾರಗಳ ವಿದ್ಯಾರ್ಥಿಗಳಿಗೆ, ಪುರಾತತ್ವ ಶಾಸ್ತ್ರಜ್ಞರಿಗೆ ಸಂರಕ್ಷಣಾ ಪರಿಣತರಿಗೆ ತನ್ನ ಪ್ರತಿಯೊಂದು ಓಣಿಯ, ಬೀದಿಯ, ರಾಜವೀಥಿಯ ತಿರುವಿನಲ್ಲೂ, ಸೂರ್ಯನ ಬೆಳಕಿನಲ್ಲಿ ವಿವಿಧ ರೂಪ ತಳೆಯುವ ಹಂಪಿಯಲ್ಲಿನ ಚಿತ್ತಾಕರ್ಶಕ ಬಂಡೆಗಳಂತೆ ವಿಸ್ಮಯಗಳನ್ನು ತನ್ನ ಬರಿದಾಗದ ಒಡಲಿನಿಂದ ಮೊಗೆ–ಮೊಗೆದು ನೀಡುತ್ತಲೇ ಇದೆ ವಿಜಯನಗರ.

ನನ್ನ ವಿಜಯನಗರದ ಒಡನಾಟದಲ್ಲಿ, ತನ್ನ ಬಸಿರಿನಲ್ಲಿರುವ ಅಮೂಲ್ಯ ಮಾಹಿತಿಯನ್ನು, ಆಗ್ಗಾಗ್ಗೆ ಬಂದು ಮಿಂಚಿ ರಾಮ–ಸೀತೆಯರ ಮನಗೆದ್ದ ಮಾಯಾ ಜಿಂಕೆಯಂತೆ ನೀಡುತ್ತಿದೆ ಈ ಮಾಯಾ ನಗರಿ. ದೇಗುಲಗಳ ಕಣಿವೆಯಾದ ಹಂಪಿಯಲ್ಲಿ ಋಷ್ಯಮೂಕ ಪರ್ವತ ನನ್ನ ನಿವೃತ್ತ, ಶಿಥಿಲಗೊಂಡ ಶರೀರ ಕೂಡ ಮುದಗೊಳ್ಳುವಂತೆ ಮಾಡಿದ ಶಿಲ್ಪಶಾಸ್ತ್ರ ಪರಿಧಿಯನ್ನು ಮೀರಿದ ಅಪೂರ್ವ ನೂತನ ವಿಷ್ಣುವಿನ ವಿಭಿನ್ನ ಶಿಲ್ಪ, ನೀಡಿದೆ. ಇದಕ್ಕೆ ಕಾರಣ ಹಂಪಿಯಲ್ಲಿ ಕೆಲಸ ಮಡುತ್ತಿದ್ದಾಗ ನನ್ನ ಜೊತೆಯಲ್ಲಿ ಕೆಲಸ ಮಾಡುತಿದ್ದ ದಿನಗೂಲಿ ಕಾರ್ಮಿಕ ಓಬಳಯ್ಯ. ಹಂಪಿಯ ಗುಡ್ಡ–ಗಾಡುಗಳಲ್ಲಿ ಅಲೆದಾಡುವ ಹವ್ಯಾಸವಿರಿಸಿಕೊಂಡಿರುವ ಈತ ಇದನ್ನು ನೋಡಿ ಬೆಂಗಳೂರಿನಲ್ಲಿರುವ ನನಗೆ ಅತ್ಯಂತ ಶೀಘ್ರವಾಗಿ ಹಂಪಿಗೆ ಮರುದಿನವೇ ಬರಬೇಕೆಂದು ನಕ್ಷತ್ರಿಕನಂತೆ ಕಾಡಿದ್ದು, ಒಂದು ವಿಧದಲ್ಲಿ ಶ್ರಮ ಪಟ್ಟ ನನಗೆ ಸಾರ್ಥಕ ಎನಿಸಿತು.

ಅಚ್ಯುತ ಬಜಾರು : ತಿರುವೇಂಗಳನಾಥ ಎಂದು ಶಾಸನಗಳಲ್ಲಿ ಉಕ್ತವಾಗಿರುವ ಅಚ್ಯುತರಾಯ ದೇವಾಲಯ ನಿರ್ಮಾತೃವಿನ ಹೆಸರಿನಿಂದ ಹೆಚ್ಚು ಪ್ರಸಿದ್ಧವಾಗಿದೆ. 148.53 ಮೀ ಉದ್ದ ಮತ್ತು 86.56 ಮೀ ಅಗಲ(ಹೊರ ಪ್ರಾಕಾರದ ಅಳತೆ) ಇರುವ ಈ ದೇವಾಲಯ ಎರಡು ಪ್ರಾಕಾರಗಳನ್ನು ಹೊಂದಿದ್ದು ಮಾತಂಗ ಪರ್ವತದ ಸೆರಗಿನಲ್ಲಿ ತುಸು ಪೂರ್ವ–ಈಶಾನ್ಯಕ್ಕೆ, ದಕ್ಷಿಣೋತ್ತರವಾಗಿ ನಿರ್ಮಿತವಾಗಿದೆ. ಉತ್ತರದಲ್ಲಿ 43.80 ಮೀ ಅಗಲವಾದ ಸುಮಾರು 374.64 (375.00) ಮೀಟರ್ ಉದ್ದದ ಬಜಾರು ಇದ್ದು ಅದರಲ್ಲಿ ಸುಮಾರು 22 ಮೀ. ಅಗಲದ ಕಲ್ಲು ಹಾಸಿನ ಬೀದಿಯಿದೆ. ತೇರು ಬೀದಿಯ ಎರಡೂ ಬದಿಗಳಲ್ಲಿ ದೇವಾಲಯದ ಪ್ರಾಕಾರ ಗೋಡೆಗಳ ಹೊರ ಅಳತೆಗೆ ದಕ್ಷಿಣೋತ್ತರವಾಗಿ ನಾಲಕ್ಕು ಅಂಕಣಗಳ ಎರಡು ಸಾಲಿನ ಮಂಟಪಗಳ ಬಜಾರನ್ನು ನಿರ್ಮಿಸಲಾಗಿದೆ.ಈ ಬಜಾರು ಮಳಿಗೆಗಳನ್ನು ಪೂರ್ವದ ಮಳಿಗೆಗಳು ಹಾಗೂ ಪಶ್ಚಿಮದ ಮಳಿಗೆಗಳು ಎಂದು ಹೇಳಲಡ್ಡಿಯಿಲ್ಲ. ಪೂರ್ವದ ಮಳಿಗೆಗಳ ಹಿಂಭಾಗದಲ್ಲಿ ಋಷ್ಯಮೂಕ ಮತ್ತು ಗಂಧಮಾದನ ಪರ್ವತಗಳಿದ್ದರೆ ಪಶ್ಚಿಮದ ಮಳಿಗೆಗಳ ಹಿಂಭಾಗದಲ್ಲಿ ಉತ್ತರಕ್ಕೆ ಮುಂದುವರೆದು, ಯಂತ್ರೋದ್ಧಾರಕ ಅಂಜನೇಯನ ದೇಗುಲಕ್ಕೆ ಸೇರುವ ಮಾತಂಗ ಪರ್ವತದ ಭಾಗವಿದೆ.

ಪ್ರಸ್ತುತ ವಿವರಣೆ ಹಾಗೂ ವಿಮರ್ಶಣೆಗೆ ಇರುವ ಈ ಹೆಬ್ಬಂಡೆ ಮೇಲಿನ ಶಿಲ್ಪ ಮೊದಲೇ ತಿಳಿಸಿದಂತೆ ಋಷ್ಯಮೂಕ ಪರ್ವತದ ಒಂದು ನಿಲಸು ಬಂಡೆಯಲ್ಲಿ, ದಕ್ಷಿಣಾಭಿಮುಖವಾಗಿ ಈಗಿನ ಅಲ್ಲಿನ ನೆಲ ಮಟ್ಟದಿಂದ ಸುಮಾರು 20–25

ಅಡಿ ಎತ್ತರದಲ್ಲಿ ಒಂದು ಏರಡು ಕಮಾನು ತೋರಣದಂತೆ ಕಂಡುಬರುವ ಸ್ವಲ್ಪ ಗೂಡಿನಂತೆ ಇರುವ ಸುಮಾರು 8–9 ಅಡಿ ಎತ್ತರ, 5–7 ಅಡಿ ಅಗಲ ಜಾಗದಲ್ಲಿ ಕಂಡು ಬರುತ್ತದೆ.

ಇಡೀ ಶಿಲ್ಪವನ್ನು ಒಂದು ಕಮಾನು ಕಿಡಕಿಯ (ಅನಲಂಕೃತ ಗವಾಕ್ಷಿ) ತರಹ ಕೆತ್ತಿದ್ದು, ಸ್ವಲ್ಪ ವಿಭಿನ್ನವಾಗಿದೆ. ಮೂರ್ತಿಯ ಕಿರೀಟದ ಅಲಂಕರಣೆಯಲ್ಲೂ ನಾವು ಕರ್ನಾಟಕಕ್ಕೆ ಹೊರತಾದ ಶೈಲಿಯನ್ನು ಕಾಣುತ್ತೇವೆ. ಮೂರ್ತಿಯ ಎದುರಿಗೆ ನಾವು ನಿಂತಾಗ, ಈ ಕಮಾನನ್ನು ರೂಪಿಸಲು (ಮಕರ ತೋರಣ) ಮಾಡಿದ ಪ್ರಾರಂಭಿಕ ಗುರುತುಗಳನ್ನು ಕಾಣಬಹುದು ಮೂರ್ತಿಯ ಬಲಬದಿಯಲ್ಲಿ, ತೋರಣದ

ಮಧ್ಯೆ ಶಿರೋ ಭಾಗದಲ್ಲಿ, ವಿಭಿನ್ನವಾಗಿ ಸುದರ್ಶನ ಚಕ್ರದ ಚಿತ್ರಣ ಕಾಣಸಿಗುತ್ತದೆ. ತೋರಣದ ಎಡ ಭಾಗದಲ್ಲಿ ಚಕ್ಕೆಗಳೆದ್ದಿದ್ದರೂ ತೋರಣ ಮಾಲೆಯನ್ನು ಎರಡು ಭಾಗವಾಗಿ ಕಮಾನಿಸಿರುವುದು ಕಂಡು ಬರುತ್ತದೆ. ಕಮಾನಿನ ಮೇಲ್ ಅಂಚಿನಲ್ಲಿ ಕೆತ್ತನೆ ಇನ್ನೂ ಸ್ವಲ್ಪ ಒರಟೊರಟಾಗಿಯೇ ಇದೆ.

ಮುಖ್ಯವಾದ ವಿಗ್ರಹಕ್ಕೆ ಬಂದರೆ, ಕಿರೀಟದ ಎರಡೂ ಬದಿ, ಚೌಕಾಕಾರದ ಸಣ್ಣ ಕುಳಿಗಳನ್ನು ಕಾಣಬಹುದು. ಈ ತರಹದ ಬಂಡೆಗಲ್ಲಿನಲ್ಲಿ ಕೆತ್ತಿರುವ ಶಿಲ್ಪಗಳಿಗೆ ಹೂವುಗಳಿಂದ ಅಲಂಕರಿಸಿ ಪೂಜಿಸಲು ಈ ತರಹದ ಕುಳಿಗಳನ್ನು ಮಾಡಿರುವುದನ್ನು ನಾವು ಅನೇಕ ಕಡೇ ಕಂಡಂತೆ ಇಲ್ಲಿಯೂ ಕಾಣಬಹುದು.

ಮೂಲ ಮೂರ್ತಿಯ ಮುಖವನ್ನು ಗಮನಿಸಿದಾಗ ಒಂದು ಆಳವಾದ ಬೋಗುಣಿಯಾಕಾರದ ಕರಂಡಕದಂತೆ ಕಾಣುತ್ತದೆ. ಹಣೆಯ ಮೇಲ್ಭಾಗ ಚಪ್ಪಟೆ ಆಗಿದೆ. ತುಸುವೇ ಕೆಳಗೆ ಸುಮಾರು 8–10 ಸೆಮೀ ಅಂತರದಲ್ಲಿ ವಿಶಾಲವಾದ ಹಣೆಯ ಮೇಲ್ಭಾಗದಲ್ಲಿ ಅಡ್ಡ ಗೆರೆ ಇದ್ದು ಅದರ್ ಮೇಲೆ ಒಂದು ವಜ್ರಾಕೃತಿಯ ಚಿನ್ಹೆ ಇದೆ. (ವಿಷ್ಣುವಿನ ಎದೆಯಮೇಲೆ ಕಂಡು ಬರುವ ಶ್ರೀವತ್ಸ ಚಿಹ್ನೆಯನ್ನು ಮೇಲಕ್ಕೆ ಹಣೆಯಲ್ಲಿ ತೋರಿಸಿರಬಹುದೇ. ವಿಷ್ಣುವಿಗೆ ಹಣೆಯಲ್ಲಿ ಶ್ರೀಚೂರ್ಣ ಅಥವಾ ನಾಮದ ಗುರುತು ಇರುವುದು ತಿಳಿದ ವಿಷಯವೇ. ಇದು ಏನಾದರೂ ಶಿಲ್ಪಿಯ ಅಚಾತುರ್ಯವಿರಬಹುದು). ಶ್ವಲ್ಪ ಕೆಳಗೆ ಏರಡು ಸಾಲಿನ ದಪ್ಪ ಹುಬ್ಬುಗಳನ್ನು ಕೂಡು ಹುಬ್ಬಿನ ರೀತಿ ಒಂದೇ ಓಘದಲ್ಲಿ ಕೆತ್ತಲಾಗಿದ್ದು, ವಿಶಾಲವಾದ ಮತ್ಸ್ಯಾಕಾರದ ಕಣ್ಣುಗಳನ್ನು ನೋಡಬಹುದು. ಈ ಕಣ್ಣುಗಳು ತೆರದ ಕಣ್ಣುಗಳಾಗಿದ್ದು ಎಡ ಕಣ್ಣಿನ ಪಾಪೆಯನ್ನು ಅತೀ ಸ್ಫುಟವಾಗಿ ಕೆತ್ತಲಾಗಿದೆ. ಬಲ ಕಣ್ಣು ಸ್ವಲ್ಪ ನಶಿಸಿದೆ. ಒಂದು ಸುಂದರವಾದ ನೀಳ ನಾಸಿಕ ಇಡೀ ಮುಖಕ್ಕೆ ಒಂದು ಮೆರುಗನ್ನು ನೀಡಿದೆ ಮತ್ತು ಮೂಗಿನ ಹೊಳ್ಳೆಗಳು ತುಸುವೇ ಅರಳಿದಂತಿದ್ದು ನಗುವ ತುಟಿಗಳಿಗೆ ಪೂರಕವಾಗಿ ಅರಳಿದಂತಿವೆ. ಇಡೀ ವಿಗ್ರಹದ ಕಾಂತಿಯನ್ನು ಹೇಚ್ಚಿಸಿರುವುದು ಅದರ ನಗು ಮುಖ. ಮೇಲಿನ ಹಗೂ ಕೆಳಗಿನ ತುಟಿಗಳು ಮೇಲ್ಮುಖವಾಗಿ ಬಿರಿದಿದ್ದು (ಅರಳಿದ್ದು) ಅತ್ಯಂತ ಸುಂದರವಾಗಿ ಮೂಡಿ ಬಂದಿದೆ.

ಶಿರದಲ್ಲಿ ಒಂದು 3 ಸ್ತರದ ಕಮಲಪುಷ್ಪ ದಳಗಳಿಂದ ಅಲಂಕೃತ ಕಿರೀಟವಿದ್ದು ತುದಿಯಲ್ಲಿ ಮೊಗ್ಗಿನಾಕಾರದ ರಚನೆ ಇದೆ. ಸೂಕ್ಷ್ಮವಾಗಿ ಗಮನಿಸಿದರೆ ಈ ಕಿರೀಟದ ರಚನೆಯೂ ಇಲ್ಲಿಗೆ ಸ್ವಲ್ಪ ಹೊಸದೇ. ಸಾಮಾನ್ಯವಾದ ವಿಜಯನಗರ ಶೈಲಿಯ ರತ್ನ ಖಚಿತ ಕಿರೀಟವನ್ನು ಈ ಶಿಲ್ಪದಲ್ಲಿ ಕಾಣಲಾಗದು. ಆದರೆ ಪಕ್ಕದಲ್ಲೇ ಇರುವ ಶ್ರೀದೇವಿ ಮತ್ತು ಭೂ ದೇವಿಗಳಲ್ಲಿ ಸಾಮಾನ್ಯವಾಗಿ ಕಾಣಬರುವ ರತ್ನಖಚಿತ ಕಿರೀಟವನ್ನು ಕಾಣಬಹುದು.

ಶಿರದಲ್ಲಿ ಒಂದು 3 ಸ್ತರದ ಕಮಲಪುಷ್ಪ ದಳಗಳಿಂದ ಅಲಂಕೃತ ಕಿರೀಟವಿದ್ದು ತುದಿಯಲ್ಲಿ ಮೊಗ್ಗಿನಾಕಾರದ ರಚನೆ ಇದೆ. ಸೂಕ್ಷ್ಮವಾಗಿ ಗಮನಿಸಿದರೆ ಈ ಕಿರೀಟದ ರಚನೆಯೂ ಇಲ್ಲಿಗೆ ಸ್ವಲ್ಪ ಹೊಸದೇ. ಸಾಮಾನ್ಯವಾದ ವಿಜಯನಗರ ಶೈಲಿಯ ರತ್ನ ಖಚಿತ ಕಿರೀಟವನ್ನು ಈ ಶಿಲ್ಪದಲ್ಲಿ ಕಾಣಲಾಗದು. ಆದರೆ ಪಕ್ಕದಲ್ಲೇ ಇರುವ ಶ್ರೀದೇವಿ ಮತ್ತು ಭೂ ದೇವಿಗಳಲ್ಲಿ ಸಾಮಾನ್ಯವಾಗಿ ಕಾಣಬರುವ ರತ್ನಖಚಿತ ಕಿರೀಟವನ್ನು ಕಾಣಬಹುದು.

ಈ ಮುಖಕ್ಕೆ ಅಲಂಕಾರ ಪ್ರಾಯವಾಗಿರುವುದು ಅದರ ಕಿವಿಗಳು. ಮಹಾ ಪುರುಷ ಲಕ್ಷಣ ತೋರುವ ನೀಳ ಕಿವಿಗಳಲ್ಲಿ ಕಿವಿಯ ಕೆಳಭಾಗದ ಆಲೆಯಲ್ಲಿ ಒಂದು ವೃತ್ತಾಕಾರದ ಓಲೆ ಇದೆ.

ಪಕ್ಕದಲ್ಲೇ ಇರುವ ಶ್ರೀದೇವಿ ಮತ್ತು ಭೂ ದೇವಿಗಳಲ್ಲಿ ಸಾಮಾನ್ಯವಾಗಿ ಕಾಣಬರುವ ರತ್ನಖಚಿತ ಕಿರೀಟವನ್ನು ಕಾಣಬಹುದು. ದ್ವಿಭುಜ ದೇವೀ ಮೂರ್ತಿಗಳು ತ್ರಿಭಂಗದಲ್ಲಿ ನಿಂತಿದ್ದು ತಮ್ಮ ಎಡ (ಶ್ರೀದೇವಿ) ಮತ್ತು ಬಲ (ಭೂ ದೇವಿ) ಕೈಗಳಲ್ಲಿ ಕಮಲ ಹಗೂ ನೀಲೋತ್ಪಲ ಪುಷ್ಪಗಳನ್ನು ಧರಿಸಿದ್ದಾರೆ. ಶ್ರೀ ದೇವಿ ಕಂಚುಕೀಯವನ್ನು ಧರಿಸಿದ್ದರೆ ಭೂ ದೇವಿ ಅದನ್ನು ಧರಿಸಿಲ್ಲ.

ರಾಮ–ಲಕ್ಷ್ಮಣ ಬಂಡೆ

ಪಕ್ಕದ ಬಂಡೆಯಲ್ಲಿ ಈ ಅಪೂರ್ವ ಶಿಲ್ಪದ ಜೊತೆಗೆ ಧನುರ್ಧಾರಿಗಳಾದ ರಾಮ–ಲಕ್ಷ್ಮಣ ದಕ್ಷಿಣಾಭಿಮುಖವಾಗಿ ತೆರಳುತ್ತಿರುವಂತೆ ಅದರಲ್ಲಿ ರಾಮನು ಹೆದೆಯೇರಿಸಿದಂತೆ ಇರುವ ಉಬ್ಬು ಶಿಲ್ಪಗಳನ್ನು ಕಾಣುತ್ತೇವೆ.

ಹೆದೆ ಏರಿಸಿದ ರಾಮನು ನಿರ್ದಿಷ್ಟ ದಿಕ್ಕಿನಲ್ಲಿ ಬಾಣ ಪ್ರಯೋಗ ಮಾಡುತ್ತಿರುವಂತೆ ಕಾಣುತ್ತದೆ. ಸಾಮಾನ್ಯವಾಗಿ ಒಬ್ಬ ಧನುರ್ಧಾರಿಯ ಬಾಣ ಪ್ರಯೋಗ ಮಾಡುವಾಗ ಧನುಸ್ಸನ್ನು ಎತ್ತರಿಸಿ ಇಲ್ಲಾ ಅಂದರೆ ಸಮಾನಾಂತರವಾಗಿ ಹಿಡಿದು ಬಾಣ ಪ್ರಯೋಗ ಮಾಡುತ್ತಿರುವಂತೆ ಕಂಡು ಬರುತ್ತದೆ. ಆದರೆ ಇಲ್ಲಿ ರಾಮನು ತುಸು ಕೆಳಕ್ಕೆ ಬಾಗಿ ಬಾಣ ಪ್ರಯೋಗ ಮಾಡುತ್ತಿರುವಂತಿದೆ. ಗುರಿಯ ಜಾಗದಲ್ಲಿ ವಾಲಿ ವಧೆ ಅಥವಾ ರಾಮನ ಶರಾಘಾತಕ್ಕೆ ಸಿಲುಕಿ ಪ್ರಾಣ ಬಿಟ್ಟ, ತಾಟಕಿ, ಮಾರೀಚ ಅಥವಾ ಇನ್ನಿತರ ರಾಕ್ಷಸ ಗಣವಿರುತ್ತದೆ. ಇಲ್ಲವೇ ರಾಮನು ತನ್ನ ಕುಶಲ ಹಾಗೂ ಶೌರ್ಯವನ್ನು ಸುಗ್ರೀವನಿಗೆ ತಿಳಿಸಿಕೊಡಲು ಸಪ್ತ ಸಾಲ ವೃಕ್ಷಗಳನ್ನು ಭೇಧಿಸುವಂತೆ ತೋರಿಸಲಾಗುತ್ತದೆ ಆದರೆ ಈ ಬಾಣದ ಗುರಿಯು ಈ ರಾಮ ಲಕ್ಷ್ಮಣ ಇರುವ ಗುಹಾ ದ್ವಾರವನ್ನು ತೋರಿಸುವಂತೆ ಚಿತ್ರಿತವಾಗಿದೆಯಲ್ಲದೆ ಯಾವುದೇ ಸಾಲ ವೃಕ್ಷಗಳ ಕೆತ್ತನೆ ಇಲ್ಲ.

ಬಂಡೆ ಆಶ್ರಯ (ರಾಕ್– ಶೆಲ್ಟರ್) :

ಅದೇ ಬಂಡೆಯ ಎಡೆಯಲ್ಲಿ ಬಂಡೆ ಆಶ್ರಯ (ರಾಕ್– ಶೆಲ್ಟರ್) ಕಂಡು ಬರುತ್ತದೆ. ಈ ತೆರೆದ ಬಂಡೆಯ ಆಶ್ರಯ ತಾಣವನ್ನು ಗಮನಿಸಿದಲ್ಲಿ ಅದರ ಪಶ್ಚಿಮದ ತೆರೆದ ಅಂಚಿನ ಕಡೆ ಕಲ್ಲಿನಲ್ಲಿ ನಿರ್ಮಿಸಿದ ಸುಮಾರು 060. ಮೀ.ಅಗಲ ಹಾಗೂ 10–12 ಮೀ ಉದ್ದದ, 4 ನಾಲ್ಕರಿಂದ 6 ಸಾಲು ಎತ್ತರದ ಕಲ್ಲಿನಿಂದ ನಿರ್ಮಿತವಾದ ಗೋಡೆ ಇದೆ. ಈ ಗೋಡೆಯಲ್ಲಿ ಒಂದು ಸಾಧಾರಣ ಪ್ರವೇಶ ದ್ವಾರವಿದ್ದು ಅದರಿಂದ ಪಶ್ಚಿಮದ ಕಡೆ ಇಳಿದು ಹೋಗುವಂತೆ ಪ್ರವೇಶ ಪಾವಟಿಕೆಗಳಿದ್ದು ಪ್ರಸ್ತುತ ಸ್ಥಳಪಲ್ಲಟವಾಗಿ ಕೆಳಗೆ ಜರುಗಿ ಬಿದ್ದಿವೆ. ಇವುಗಳನ್ನು ಆವರಿಸಿ ಗಿಡ–ಗಂಟೆಗಳು ಬೆಳದಿರುವುದರಿಂದ ಈ ಗುಹಾಲಯವು ತಕ್ಷಣ ಹೊರಗಿನಿಂದ ಕಂಡು ಬರುವುದಿಲ್ಲ. ಒಳಗೆ, ಉತ್ತರ–ದಕ್ಷಿಣಾಭಿಮುಖವಾಗಿರುವ ಈ ಗುಹಾಲಯವನ್ನು ಗಮನಿಸಿದಾಗ ಇದು ಒಂದು ಶಿವಾಲಯವಾಗಿರಬಹುದು ಎಂಬ ಊಹೆಗೆ ಅಲ್ಲಿರುವ ಒಂದು ನಂದಿ ವಿಗ್ರಹ, ಅಲ್ಲಿನ ಪಶ್ಚಿಮದ ಬಂಡೆಯ ತುಸು ವೇದಿಕೆಯಂತ ಗೋಡೆಯ ಭಾಗದಲ್ಲಿ ಇರುವ ಪಶ್ಚಿಮ–ಪೂರ್ವವಾಗಿ ತೆರಳುತ್ತಿರುವ, ಹೆಡೆ ಬಿಚ್ಚಿದ ಮಣಿ ನಾಗ ಗಮನ ಸೆಳೆಯುತ್ತದೆ. ನಾಗನ ಮುಂದಿದ್ದ ಒಂದು ಶಿವ ಪೀಠ ವಿಗ್ರಹ–ನಿಧಿ ಚೋರರ ಹಾವಳಿಗೆ ಒಳಗಾಗಿರುವಂತೆ ಕಂಡು ಬರುತ್ತದೆ ಮತ್ತಲ್ಲಿರುವ ವಸ್ತುಗಳು ಅವರಿಗೇನೂ ಮುದ ನೀಡಿರುವುದಿಲ್ಲ ಎಂದು ತಿಳಿದು ಬರುತ್ತದೆ.

ಶಿಲ್ಪದ ನೆಲೆ–ಹಿನ್ನೆಲೆ

ಆಮೂಲಾಗ್ರವಾಗಿ ಈ ವಿಗ್ರಹವನ್ನು ಅಭ್ಯಸಿಸಲು ತೊಡಗಿಸಿಕೊಂಡಾಗ ನಾಲ್ಕು ಧಾಮಗಳಲ್ಲಿ ಒಂದಾಗಿ, ಭಾರತೀಯ ಹಿಂದೂಗಳಿಗೆ ಅತ್ಯಂತ ಪವಿತ್ರವಾದ ಒರಿಸ್ಸಾದ ಪುರಿಯಲ್ಲಿರುವ ಜಗನ್ನಾಥ ಮನಃಪಟಲದಲ್ಲಿ ಮೂಡುತ್ತದೆ. ಉತ್ತರದಲ್ಲಿ ಬದರೀನಾಥ, ಪಶ್ಚಿಮದ ದ್ವಾರಕಾನಾಥ, ದಕ್ಷಿಣದ ರಾಮನಾಥ ಮತ್ತು ಪೂರ್ವದಲ್ಲಿ ಈ ಜಗನ್ನಾಥ "ಚಾರ್ ಧಾಮ್" ಎಂದೇ ಪ್ರಸಿದ್ಧ. ಓಡ್ರ, ಉತ್ಕಲ, ಕಳಿಂಗ ಎಂದು ಕರೆಸಿಕೊಳ್ಳುತ್ತಿದ್ದ ಒರಿಸ್ಸಾದ ಪುರಿಯ ದೇಗುಲದಲ್ಲಿರುವ ತ್ರಿಮೂರ್ತಿ ಶಿಲ್ಪಗಳಲ್ಲಿ ಪುರುಷೋತ್ತಮ ಎಂದು ಕರೆಸಿಕೊಳ್ಳುತ್ತಿರುವ ಶಿಲ್ಪವೇ ಈ ಜಗನ್ನಾಥ. ಪುರಿಯ ಜಗನ್ನಾಥ ದೇವಾಲಯ ಕ್ರಿ.ಶ. 12ನೇ ಶತಮಾನದ ಒರಿಸ್ಸಾ ವಾಸ್ತು ಶೈಲಿಯ ಅತ್ಯುತ್ತಮ ಕೃತಿ. ಇತ್ತೀಚೆಗೆ ದೊರೆತಿರುವ ತಾಮ್ರ ಪಟ ಶಾಸನಗಳಲ್ಲಿ ಪ್ರಸ್ತುತ

ದೇವಾಲಯದ ನಿರ್ಮಾಣವನ್ನು ಕಳಿಂಗ ದೊರೆ ಅನಂತವರ್ಮ ಚೋಡಗಂಗ (ಕ್ರಿ.ಶ.1078–1148)ರಲ್ಲಿ ಪ್ರಾರಂಭಿಸಿದನು. ಜಗಮೋಹನ ಮತ್ತು ವಿಮಾನವನ್ನು ಇವನ ಕಾಲದಲ್ಲಿ ನಿರ್ಮಾಣ ಮಾಡಲಾಯಿತು. 1174ರಲ್ಲಿ ಈಗಿನ ಸ್ಥಿತಿಗೆ ಅನಂಗ ಭೀಮದೇವ ಪೂರ್ಣನಗೊಳಿಸಿದನು. ದೇವಾಲಯದಲ್ಲಿ ಜಗನ್ನಾಥನ ಪೂಜೆ ಅನೂಚಾನವಾಗಿ 1558ರ ತನಕ ನಡೆದು ಬಂದಿದ್ದು ಒಡಿಸ್ಸಾ ಕಾಲಾಪಹಾಡ್ ಎಂಬ ಆಫ್ಘನಿ ಸೇನಾಪತಿಯ ಅಳ್ವಿಕೆಗೆ ಒಳಪಟ್ಟಿತು. ತದನಂತರ ಖುರ್ದ ಎಂಬ ಸ್ಥಳದಿಂದ ರಾಮಚಂದ್ರ ದೇಬ್ ಎಂಬ ದೊರೆ ಸ್ವತಂತ್ರ ರಾಜ್ಯವನ್ನು ಆಳಿದಾಗಿನಿಂದ ಮತ್ತೊಮ್ಮೆ ಪೂಜಾ ವಿಧಿಯನ್ನು ಪುನುರುಜ್ಜೀವನಗೊಳಿಸಲಾಯಿತು. ಸ್ಕಾಂದ, ಬ್ರಹ್ಮ ಮತ್ತು ಇತರೆ ಪುರಾಣಗಳು,ತದನಂತರದ ಒರಿಯಾ ಸಾಹಿತ್ಯಗಳಲ್ಲಿ ಪುರಿಯ ಜಗನ್ನಾಥನನ್ನು ಮೂಲವಾಗಿ ಶಬರ ದೊರೆ ವಿಶ್ವಾವಸು ನೀಲ ಮಾಧವನೆಂದು ಪೂಜಿಸುತ್ತಿದ್ದನೆಂದು ತಿಳಿದು ಬರುತ್ತದೆ.

ಋಷ್ಯಮೂಕದ ಜಗನ್ನಾಥ ಸಹ ಪುರಿ ಜಗನ್ನಾಥನ ವಿಗ್ರಹವನ್ನೇ ಮೂಲ ರಚನೆಯನ್ನು ಮುಖ್ಯವಾಗಿ,ಮುಖದ ಲಕ್ಷಣ ಅಥವಾ ಚಹರೆಯನ್ನು ಹೊಂದುತ್ತದೆ. ಮುಖದ ಆಕಾರದಲ್ಲಿ ಅವುಗಳು ಬೋಗುಣಿ ಆಕಾರವನ್ನು ಹೊಂದಿದ್ದು, ಒಗ್ಗೂಡಿದ ಏಕ ರೇಖಾ ಹುಬ್ಬನ್ನು ಹೊಂದಿವೆ. ದೊಡ್ಡ ಕಣ್ಣಾಪೆಗಳು, ಬಿರಿದ ಕಣ್ಣುಗಳು ಪುರಿಯ ಜಗನ್ನಾಥನದಾದರೆ ಇಲ್ಲಿನ ಜಗನ್ನಾಥನಿಗೆ ಸ್ವಲ್ಪ ಮೀನಿನಾಕಾರದ ಕಣ್ಣಿನ ರಚನೆಯಿದ್ದು ಕಣ್ಣಳತೆಗೆ ತಕ್ಕಂತೆ ಕಣ್ಣಿನ ಪಾಪೆಗಳನ್ನು ತೋರಿಸಿದ್ದಾರೆ. ಪುರಿಯ ವಿಗ್ರಹದಲ್ಲಿ ಗಡ್ಡದ ಗುರುತಿರುವಂತಿದ್ದರೆ ಇಲ್ಲಿನ ಮೂರ್ತಿಗೆ ಸಾಕಷ್ಟು ಚೆನ್ನಾಗಿಯೇ ಗಡ್ಡವನ್ನು ಬಿಡಿಸಿದ್ದಾರೆ. ಹಣೆಯ ಮೇಲೆ, ಮಧ್ಯಭಾಗದಲ್ಲಿ.

ಸ್ಥಳ ಪುರಾಣದ ಪ್ರಕಾರ ಇದು ಕೃಷ್ಣನ ನೀಲಮಣಿಯ ದ್ಯೋತಕವಾಗಿರಬಹುದೆ? ಕುಸುರಿ ಕೆಲಸ ಮಾಡಿದ ಕಿರೀಟವಿದ್ದರೆ ಮೂಲ ವಿಗ್ರಹದಲ್ಲಿ ಇಲ್ಲಿನ ಶಿಲ್ಪಕ್ಕೆ ಕಮಲ ಪುಷ್ಪಗಳ ಚಿತ್ರಣವಿರುವ ಕಿರೀಟವನ್ನು ನೋಡಬಹುದು. ಪುರಿಯ ಜಗನ್ನಾಥ ವಿಗ್ರಹದ ಶರೀರ ವಸ್ತ್ರಗಳಿಂದ ಆಚ್ಛಾದಿತವಾಗಿದ್ದರೂ ಆ ಭಾಗ ಹೇಗಿದ್ದಿರಬಹುದೆಂಬುದನ್ನು ಕೋನಾರ್ಕ್ ಭಾರತೀಯ ಪುರಾತತ್ವ ಸರ್ವೇಕ್ಷಣದ ವಸ್ತು ಸಂಗ್ರಹಾಲಯದಲ್ಲಿರುವ ಒಂದು ಬಳಪದ ಕಲ್ಲಿನ ಫಲಕ ಶಿಲ್ಪದಲ್ಲಿರುವ ಜಗನ್ನಾಥ ಮೂರ್ತಿಯನ್ನು ನೋಡಿ ಊಹಿಸಬಹುದು. ಫಲಕದಲ್ಲಿ ರಾಜ ಮೂರನೇ ಗೋವಿಂದನು ಪುರಿಯ ಜಗನ್ನಾಥ ದೇಗುಲಕ್ಕೆ ಹೋಗಿರುವಾಗ ,ಆತನನ್ನು ಎದುರುಗೊಂಡು ಶಾಸ್ತ್ರೋಕ್ತವಾಗಿ ಬರಮಾಡಿಕೊಳ್ಳುತ್ತಿರುವ ವಿದ್ಯಾಪತಿ (ಬ್ರಾಹ್ಮಣ ಪುರೋಹಿತ) ಮತ್ತು ಜಗನ್ನಾಥ ಮಂದಿರದಲ್ಲಿರುವ ಜಗನ್ನಾಥನನ್ನು ತೋರಿಸಿದ್ದಾರೆ. ವಿಶೇಷ ಅಂದರೆ ಸೂಕ್ಷ್ಮವಾಗಿ ಗಮನಿಸಿದಲ್ಲಿ ಜಗನ್ನಾಥನನ್ನು ಒಂದು ದ್ವಿತೋರಣ ಕಮಾನಿನ ಅಡಿಯಲ್ಲಿ ರೂಪಿಸಿದ್ದಾರೆ. ಇದರಲ್ಲಿ ಮೇಲಿನ ಕಮಾನಿನಲ್ಲಿ ಒಂದು ಹೂವಿನ ಚಿತ್ರಣವಿದ್ದು ಅದೇ ರೀತಿಯಲ್ಲಿ ಅಲ್ಲದಿದ್ದರೂ ಒಂದು ಕಮಲ ಪುಷ್ಪವನ್ನು ಅಪೂರ್ಣವಾದ ದ್ವಿ– ಕಮಾನಿನ ತೋರಣದಲ್ಲಿ ಕಾಣಬಹುದು. ಇದೂ ಸಹ ಇಲ್ಲಿನ ವಿಗ್ರಹ ಜಗನ್ನಾಥನದೆಂದು ಹೇಳಲು ಪರೋಕ್ಷವಾಗಿ ಸಹಾಯ ಮಾಡುತ್ತದೆ. ಜಗನ್ನಾಥನ ಬಲ ಬದಿಯಲ್ಲಿ ಒಂದು ಶಿವಲಿಂಗವೂ ಮತ್ತು ಎಡ ಬದಿಯಲ್ಲಿ ಮಹಿಷಾಸುರ ಮರ್ದಿನಿಯ ಚಿತ್ರಣ ವಿದೆ. ಈ ಮೂರ್ತಿಯ ಶರೀರದ ರಚನೆಯಲ್ಲಿ ಸ್ತಂಭಾಕಾರದ ರಚನೆ ಇದ್ದು ನಾಲ್ಕು ಹಂತದಲ್ಲಿ ಪೀಠವನ್ನು ತೋರಿಸಿ ಪಾದಗಳನ್ನು ತೋರಿಸಿದ್ದಾರೆ. ಹಂಪಿಯಲ್ಲಿನ ಜಗನ್ನಾಥನಿಗೂ ಶರೀರದ ಬದಲಿಗೆ ಸ್ತಂಭಾಕೃತಿಯ ರಚನೆ ಇದ್ದು ಪಾದಗಳನ್ನು ಒಂದು ಪೀಠದಂತೆ ಬಿಡಿಸಿ ಇಕ್ಕೆಲಗಳಲ್ಲಿ ಶ್ರೀನದೇವಿ ಮತ್ತು ಭೂದೇವಿಯರನ್ನು ತೋರಿಸಿದ್ದಾರೆ. ಇಲ್ಲಿ ಬಿಡಿಯಾಗಿಯೇ (ವಿಷ್ಣುವಿನ) ರೂಪದಲ್ಲಿ ಬಿಡಿಸಿರುವುದು ವಿಶೇಷ. ಜಗನ್ನಾಥ–ಪುರಿಯಲ್ಲಿ ಎರಡೂ ಕೈಗಳನ್ನು ಅಭಯ ವರದ ಮುದ್ರೆಯಲ್ಲಿ ಕಂಡು ಬಂದರೆ, ಹಂಪಿಯಲ್ಲಿ ಚಕ್ರ ಮತ್ತು ಶಂಖಗಳನ್ನು ಧರಿಸಿರುವಂತೆ ಕೆತ್ತಲಾಗಿದೆ.

ವಿಜಯನಗರದಲ್ಲಿ ಜಗನ್ನಾಥನ ಅನಾವರಣ :

ಸಾಮಾನ್ಯವಾಗಿ ದೊರಕುವ ದೇವತಾ ಶಿಲ್ಪಗಳಲ್ಲದೆ ಈ ವಿಶಿಷ್ಟವಾದ ಜಗನ್ನಾಥ ಮೂರ್ತಿ ಇಲ್ಲಿ ವಿಶೇಷವಾಗಿ ಒಂದು ಪರ್ವತದ ಕೋಡುಗಲ್ಲಿನಲ್ಲಿ ರೂಪುಗೊಂಡಿದ್ದರ ಔಚಿತ್ಯ? ಪುರಂದರದಾಸರ ಒಂದು ಕೃತಿಯಲ್ಲಿ 'ಧರೆಗೆ ಅಧಿಕವೆನಿ ಪ ವಿದ್ಯಾನಗರ ಒಳಿತೆಂದು ಉದಯಗಿರಿಯಿಂದ ಬಂದ ಮುದ್ದು ಬಾಲಕೃಷ್ಣ" ಎಂದು ಈಗ ಚೆನ್ನೈನಲ್ಲಿರುವ ಎಗ್ಮೋರ್ ವಸ್ತು

ಸಂಗ್ರಹಾಲಯದಲ್ಲಿರುವ ಬಾಲಕೃಷ್ಣನ ವಿಗ್ರಹವನ್ನು ಕುರಿತಾದರೂ ಪುರಿಯ ಜಗನ್ನಾಥನೂ ಹಂಪಿಯಲ್ಲಿ ಸಾಕ್ಷಾತ್ಕರಿಸಿರುವುದರಿಂದ ಈ ಹಾಡು ಅವನಿಗೂ ಅನ್ವಯಿಸುತ್ತದೆಯಲ್ಲವೆ. ಕಾರಣ ಕೃಷ್ಣದೇವರಾಯನ ಹಾಗೂ ಒರಿಸ್ಸಾ ರಾಜ್ಯದ ಗಜಪತಿಯ ನಡುವಿನ ಶತ್ರುತ್ವ ಮತ್ತು ಅವನ ಕ್ರಿ. ಶ. 1513ರಲ್ಲಿ ಮೇಲೆ ದಂಡೆತ್ತಿ ಹೋದ ತುಳುವ ದೊರೆ ಅಭೂತಪೂರ್ವ ವಿಜಯ ಸಾಧಿಸಿ ಅಮೂಲ್ಯ ವಸ್ತುಗಳೊಂದಿಗೆ ಹಿಂದಿರುಗುವಾಗ ಅತ್ಯಂತ ಸುಂದರವಾದ ಬಾಲಕ್ರಿಲಷ್ಣನ ವಿಗ್ರಹವನ್ನೂ ತಂದು ಗಜಪತಿಯ ಗರ್ವಭಂಗ ಮಾಡಿದುದು ಸರ್ವರಿಗೂ ತಿಳಿದ ವಿಷಯವೇ. ಈ ಬಾಲಕೃಷ್ಣನ ವಿಗ್ರಹಕ್ಕಾಗಿ ಒಂದು ಕೃಷ್ಣ ದೇವಾಲಯವೂ ನಿರ್ಮಾಣಗೊಂಡಿತು ಎಂಬುದು ಸರ್ವ ವಿದಿತ. ಸಾಮಾನ್ಯವಾಗಿ, ವ್ಯಾಪಾರಿಗಳು, ಕಲಾಕಾರರು, ಶಿಲ್ಪಿಗಳು ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ವಲಸೆ ಹೋಗುವುದು ಸಾಮಾನ್ಯ. ಅದರಂತೆ ಪ್ರಸ್ತುತ ಈ ವಿಗ್ರಹದ ನಿರ್ಮಾತೃಗಳು ಉದಯಗಿರಿಯಿಂದ ಬಂದು ತಮ್ಮ ಆರಾಧ್ಯ ದೈವವನ್ನು ಮಾಡಿರಲಿಕ್ಕೆ ಸಾಕು. ವಿಜಯನಗರದಲ್ಲಿ, ಸಾಸಿವೆಕಾಳು, ಕಡಲೆಕಾಳು ಗಣೇಶ, ಎದುರು ಬಸವಣ್ಣ, ಲಕ್ಷ್ಮಿ ನರಸಿಂಹ ನರಸಿಂಹ, ಬಡವಿ ಲಿಂಗ ಮತ್ತು ಉದ್ದಾನೆ ವೀರಭದ್ರ ಬೃಹತ್ ಮೂರ್ತಿಗಳು ಕಾಣಸಿಗುತ್ತವೆ ಅಲ್ಲದೆ ಕೈಗೆಟಕುವ, ಓಡಾಟದ ಹಾದಿಯಲ್ಲಿ ಕಲ್ಲುಕಟಿಗರು,ಶಿಲ್ಪಿಗಳು ಶಿವನ ಪರಿವಾರ,ಹನುಮಂತ,ವೀರ ಭದ್ರ, ಗಣೇಶ, ನಂದಿ, ನರಸಿಂಹ, ವೀರಭದ್ರ, ಮಹಿಷ ಮರ್ದಿನಿ ಮಾಡಿರುವುದನ್ನು ನಾವು ಅಲ್ಲಲ್ಲಿ ಕಾಣುತ್ತೇವೆ. ಸಾಕಷ್ಟು ಸಂಖ್ಯೆಯಲ್ಲಿ ಇವು ರಾಜವಾಸಗಳ ಅಂದರೆ ರಂಗ ಮಹಲ್ ಆವರಣದ ಗೋಡೆ, ಜನಾನ ಆವರಣ, ಆನೆ ಲಾಯ ಇತ್ಯಾದಿ ಕಡೆಗಳಲ್ಲಿ ಕಾಣ ಸಿಗುತ್ತವೆ. ಹೀಗಾಗಿ ಈ ಮೂರ್ತಿಯೂ ಆತರಹದ ಒಂದು ಚಿತ್ರಣವೇ.ಆ ಎತ್ತರದಲ್ಲಿ ಮೂಡಿಸಲು ಕಾರಣ ಜಗನ್ನಾಥನ ದೇಗುಲ ಸ್ಥಳವನ್ನು 'ನೀಲಾದ್ರಿ", 'ನೀಲಾಚಲ" ಮತ್ತು 'ನೀಲಗಿರಿ ಎಂದೂ ಕರೆಯುತ್ತಾರೆ.

ಸ್ಕಾಂದ, ಬ್ರಹ್ಮ ಮತ್ತು ಇತರೆ ಪುರಾಣಗಳು, ತದನಂತರದ ಒರಿಯಾ ಸಾಹಿತ್ಯಗಳಲ್ಲಿ ಪುರಿಯ ಜಗನ್ನಾಥನನ್ನು ಮೂಲವಾಗಿ ಶಬರ ದೊರೆ ವಿಶ್ವಾವಸು ನೀಲ ಮಾಧವನೆಂದು ಪೂಜಿಸುತ್ತಿದ್ದನೆಂದು ತಿಳಿದು ಬರುತ್ತದೆ. ಒಟ್ಟಿನಲ್ಲಿ ಹೇಳುವುದಾದರೆ, ಹಂಪಿಯ ಅಚ್ಯುತಾಪುರದ, ಚಿನಿವಾರ ಪೇಟೆಯ ಪೂರ್ವ ದಿಕ್ಕಿನಲ್ಲಿ ಋಷ್ಯಮೂಕ ಪರ್ವತದ ಪಶ್ಚಿಮ ದಿಕ್ಕಿನ ಉತ್ತರದ ಕೋಡುಗಲ್ಲಿನ ಮೇಲೆ ನೆಲದಿಂದ ಸುಮಾರು 20' ಅಡಿಗಳ ಎತ್ತರದಲ್ಲಿ ಇರುವ ವಿಸ್ಮಯಕಾರಿ ಮೂರ್ತಿ ಪುರಿಯ ಜಗನ್ನಾಥ ಎಂದು ಧಾರಾಳವಾಗಿ ಗುರುತಿಸಬಹುದು. ಕೃಷ್ಣ ದೇವರಾಯನ (ಕ್ರಿ.ಶ. 1509–1529) ಕಾಲದಲ್ಲಿ ಕಳಿಂಗದಿಂದ ಪ್ರಾಯಶಃ ಅವನೊಡನೆ ಬಂದ ಶಿಲ್ಪಿಗಳು ಒಂದು ಬಂಡೆಯ ಕೋಡುಗಲ್ಲಿನಲ್ಲಿ ಈ ಮೂರ್ತಿಯನ್ನು ಕೆತ್ತಿದ್ದುದೇ ಅಲ್ಲದೆ ವಿಜಯನಗರ ವಾಸ್ತು ಪರಿಣಿತರೊಂದಿಗೆ ಸೇರಿ ಒಂದು ದೇವಾಲಯವನ್ನೂ ನಿರ್ಮಾಣ ಮಾಡಿದರೆಂಬುದನ್ನು ಇಲ್ಲಿ ನಡೆಸಿದ ಸರ್ವೇಕ್ಷಣೆಯಿಂದ ತಿಳಿಯಬಹುದು. ಇದೇ ಅಲ್ಲದೆ ವಿಶೇಷವಾದ ವೇಂಕಟ ವರಹಗಳನ್ನು ಕೃಷ್ಣ ದೇವರಾಯನು ತನ್ನ ಕಳಿಂಗದ ಮೇಲಿನ ವಿಜಯಕ್ಕಾಗಿ, ತಿರುಪತಿಯ ವೆಂಕಟೇಶ್ವರನ ಕನಕಾಭಿಷೇಕಕ್ಕಾಗಿ ಮುದ್ರಿಸಿದನೆಂದು ತಿಳಿದು ಬರುತ್ತದೆ ಚಂದ್ರಗಿರಿಯ ಶಾಸನದಿಂದ. ಇದೇ ಅಲ್ಲದೆ ಶಾಸನ ಸಂಖ್ಯೆ 73, ಕೃಷ್ಣಸ್ವಾಮಿ ದೇವಾಲಯದ ಮುಂದಿನ ಕಲ್ಲಿನ ಶಾಸನದ –ಸಾಲು 15–16ರರಲ್ಲಿ "ರಾಜಾಧಿರಾಜ ರಾಜಪರಮೇಶ್ವರ ಶ್ರೀ ವೀರಪ್ರತಾಪ ಶ್ರೀ ವೀರ ಕೃಷ್ಣರಾಯ ಮಹಾರಾಯರು ಉದಯಗಿರಿಯಿಂದ ಬಿಜೆಮಾಡಿಸಿಕೊಂಡು ಬಂದಂಥಾ ಶ್ರೀ ಬಾಲಕ್ರಿಷ್ಣ ದೇವರ ಪ್ರತಿಷ್ಟೆಯ ಮಾಡಿ...." ಎಂದು ಹೇಳಿ ಚಂದ್ರಗಿರಿ ಅರ್ಥಾತ್ ಕಳಿಂಗದ ವಿಜಯದ ಬಗ್ಗೆ ತಿಳಿಸಿ ಕೊಡುತ್ತದೆ. (ಪುಟ 66–67; ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ:3, ಹಂಪಿಯ ಶಾಸನಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ,– 2000) ಈ ವರಹಗಳನ್ನು ಪ್ರಾಯಶಃ ವಿಜಯನಗರದ ಟಂಕಸಾಲೆಯಿಂದಲೇ ಮುದ್ರಿಸಿರಬಹುದೆಂಬ ಅಂಶವನ್ನು ಕೃಷ್ಣ ದೇವರಾಯನ ಕಾಲದಲ್ಲೇ 1513–15ರ ಆಸುಪಾಸಿನಲ್ಲಿ ಹೆಚ್ಚಿನ ಭದ್ರತೆಗಾಗಿ ನಿರ್ಮಾಣ ಹಂತದಲ್ಲಿ ಇದ್ದ ಪೂರ್ವ ದಿಕ್ಕಿನ ಎರಡನೇ ಆವರಣ ಗೋಡೆಯಲ್ಲಿ ಸಿಕ್ಕಿದ್ದು ಮತ್ತೊಂದು ಸಾಕ್ಷಿ. ಅನೇಕ ಅತ್ಯುತ್ತಮ ರಾಜಕೀಯ, ಸಾಮಾಜಿಕ, ಆರ್ಥಿಕ ಕಾರ್ಯಗಳಲ್ಲಿ ತನ್ನನು ತೊಡಗಿಸಿಕೊಂಡಿದ್ದ ಕೃಷ್ಣ ದೇವರಾಯನು ಮತ್ತೊಮ್ಮೆ ಕರ್ನಾಟಕಕ್ಕೆ, ವಿಜಯನಗರಕ್ಕೆ ಮತ್ತೊಂದು ಕಳಶಪ್ರಾಯವಾದ ಪುರಿಯ ಅಥವಾ ಕಳಿಂಗದ ಅಭಿಮಾನ ದೇವತೆಯ ಅಪೂರ್ವ ಶಿಲ್ಪವನ್ನು ಕೆತ್ತಿಸಿ ನೀಡಿದ್ದಾನೆ ಅಥವಾ ಅವನ ಕಾಲದಲ್ಲಿ ಆಗಿರಬಹುದು ಎಂದು ನಿಸ್ಸಂಶಯವಾಗಿ ಹೇಳಬಹುದು.


ಆಧಾರಸೂಚಿ :


1. ಪ್ರೊ. ಎಸ್.ಕೆ. ರಾಮಚಂದ್ರರಾಯರ **"ಮೂರ್ತಿಶಿಲ್ಪ ನೆಲೆ–ಹಿನ್ನೆಲೆ",** ಪುಟ, 335–341,1975 ಬೆಂಗಳೂರು ವಿಶ್ವ ವಿದ್ಯಾಲಯ.
2. ಡಾ. ಕೆ.ಜಿ. ಗೋಪಾಲಕೃಷ್ಣ ರಾವ್; ಲೇಖನ– **"ಲೈಫ್ ಆಫ್ ಕೃಷ್ಣದೇವರಾಯ ಇನ್ ಬ್ರೀಫ್"** ಪುಟ 46–48; ಲೈಫ್ ಅಂಡ್ ಅಚೀವ್ಮೆಂಟ್ಸ್ ಅಫ್ ಶ್ರೀ ಕೃಷ್ಣದೇವರಾಯ; ಸಂ. ಡಾ. ಅರ್. ಗೋಪಾಲ್; ರಾಜ್ಯ ಪುರಾತತ್ವ ಮತ್ತು ಸಂಗ್ರಹಾಲಯ ವಿಭಾಗ, ವಸ್ತುಪ್ರದರ್ಶನ ಆವರಣ, ಮೈಸೂರು, 2010
3. ಶ್ರೀ ಟಿ.ಎಮ್. ಕೇಶವ, ಡಾ. ಸಿ.ಎಸ್. ಶೇಷಾದ್ರಿ, ಲೇಖನ ಎಕ್ಸವೇಟೆಡ್ ರಿಮೈನ್ಸ್ ಆಫ್ ಕೃಷ್ಣದೇವರಾಯ ಅಟ್ ಸಿಟಾಡೆಲ್,ಪುಟ 58–74.; **ಲೈಫ್ ಅಂಡ್ ಅಚೀವ್ಮೆಂಟ್ಸ್ ಅಫ್ ಶ್ರೀ ಕೃಷ್ಣದೇವರಾಯ;** ಸಂ. ಡಾ. ಅರ್. ಗೋಪಾಲ್; ರಾಜ್ಯ ಪುರಾತತ್ವ ಮತ್ತು ಸಂಗ್ರಹಾಲಯ ವಿಭಾಗ, ವಸ್ತುಪ್ರದರ್ಶನ ಆವರಣ, ಮೈಸೂರು, 20104. ಡಾ. ಕೆ.ಜಿ. ಗೋಪಾಲಕೃಷ್ಣ ರಾವ್; ಲೇಖನ, "ದಿ. ಬಾಲ ಟೆಂಪಲ್ ಅಟ್ ಹಂಪಿ, ಕೃಷ್ಣಾಪುರ; ಸಮ್ ರಂಡಮ್ ನೋಟ್ಸ್", ಪುಟ, 152–156, **ಲೈಫ ಅಂಡ ಅಚೀವ್ಮೆಂಟ್ಸ್ ಅಫ್ ಶ್ರೀ ಕೃಷ್ಣದೇವರಾಯ;** ಸಂ. ಡಾ. ಆರ್. ಗೋಪಾಲ್; ರಾಜ್ಯ ಪುರಾತತ್ವ ಮತ್ತು ಸಂಗ್ರಹಾಲಯ ವಿಭಾಗ, ವಸ್ತುಪ್ರದರ್ಶನ ಆವರಣ, ಮೈಸೂರು, 2010
5. **ಕನ್ನಡ ವಿಶ್ವವಿದ್ಯಾಲಯ ಶಾಸನ** ಸಂಪುಟ: 3, **ಹಂಪಿಯ ಶಾಸನಗಳು** ಪುಟ 66–67; ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, 2000.





























36. ವಿಜಯನಗರ ಕಾಲದಲ್ಲಿಯ ಹರಿದಾಸ ಸಾಹಿತ್ಯದ ಪರಾಕಾಷ್ಠೆ

– ಡಾ. ಎಸ್.ಕೆ. ಜೋಶಿ

ವಿಷಯ :

ಭಾರತದ ಜನಮಾನಸವು ಆಧ್ಯಾಂತ ಚಿಂತನೆಯ ವ್ಯಾಪ್ತಿಯಲ್ಲಿ ಶತಶತಮಾನಗಳಿಂದ ಪ್ರಯೋಗಶೀಲವಾಗಿದೆ. ಆ ನಂತರವಾಸ ಶಾಂತಿಯ ಬಿಂದುವಿನಂತೆ ಆಕಾಶದತ್ತ ಅದರ ಶಾಂತಿಯ ಎತ್ತರವನ್ನಳೆಯಲು ಸಾಗಿದೆ. ಆಧ್ಯಾತ್ಮ ಹಾಗೂ ವೇದಗಳ, ವೇದಾಂತಗಳ, ಉಪನಿಷತ್‌ಗಳ ರಚನೆಯಲ್ಲಿ ಜ್ಞಾನ ಪೀಯೂಷವ ಕುಡಿದು, ವೇದವ್ಯಾಸ ಯಾಜವಲ್ಕ್ಯ (ಋಗ್ವೇದದ) ಪೈಲ, ವೈಶಂಪಾಯನ (ಯಜುರ್ವೇದ) ಜೈಮನಿಯು (ಸಾಮವೇದ) ಸುಮಂತನು (ಅಥರ್ವನ ವೇದ) ಶುಕ್ರಾಚಾರ್ಯ ಗಾರ್ಗಿ ಮೈತ್ರೇಯ ಇವರಿಬ್ಬರೂ ಋಷಿಕಾಗಳು, ಆದಿಶಂಕರ ಮಧ್ವ ರಾಮಾನುಜ ವಿದ್ಯಾರಣ್ಯ, ಪರಮಹಂಸ, ಶ್ರೀ ಅರವಿಂದರು ಇವರೆಲ್ಲರೂ ಅಮೃತರಾದರತ್ತಿ ಮಹಾಕಾವ್ಯ ಅರವಿಂದರು ಇವರೆಲ್ಲರೂ ಅಮೃತರಾದರತ್ತಿ, ಇಂಥ ಶುದ್ಧ ಮಂಗಲ ಮನಸ್ಸುಗಳು ವಿಶ್ವತೋಮುಖವಾಗಿ ಜ್ಞಾನ ತತ್ವಜ್ಞಾನ ಸಾಹಿತ್ಯ ಸಂಸ್ಕೃತಿ ಆಧ್ಯಾತ್ಮ ವಿಜ್ಞಾನ ಖಗೋಲ ಸುವಚನ ಹಾಗೂ ಸದಾಚಾರಗಳಲ್ಲಿ ಪಥಃಕರಿಸಿದವು.

ಇದೇ ಚಿಂತನೆಯಲ್ಲಿ ಕರ್ನಾಟಕವೂ ಕೂಡ 'ತನ್ನತನ' ದಾಖಲಿಸಿತು. ಕರ್ನಾಟಕವು ತನ್ನ ಬದುಕಿನಲ್ಲಿ ಸಾಂಸ್ಕೃತಿಕ ಐತಿಹಾಸಿಕ ಆಧ್ಯಾತ್ಮಿಕ ವಿಶ್ವರೂಪವನ್ನೆ ತೋರಿಸಿದೆ. ಇಲ್ಲಿಯ ಸಲಿಕೃತಿಕರು ಆಚಾರ್ಯರು, ದಾರ್ಶನಿಕರು, ಬಸವಾದಿ, ಶರಣರು, ಹರಿದಾಸರು ಮತ್ತು ಸೂಫಿಸಂತರು, ಆಧ್ಯಾತ್ಮ ದರ್ಶನ ಹಾಗೂ ಸಾಹಿತ್ಯದ ಸಂಪದಗಳನ್ನು ನೀಡಿದ್ದಾರೆ. ಜೀವನ್ಮರಣ ದೇವ ಮಾನವ ಪುಣ್ಯ ಪಾಪ ಲೋಕ ಪರಲೋಕಗಳು, ಅಸತ್ಯಗಳು, ಹಿಂಸೆ ಅಹಿಂಸೆಗಳು, ಅವುಗಳ ಪರಿಣಾಮಗಳು ಇವೆಲ್ಲವೂಗಳ ಬಗ್ಗೆ ಚಿಂತನೆಗಳನ್ನು ನೀಡಿದ್ದಾರೆ. ವಾಙ್ಮಯದ ಸಂಪುಷ್ಟ ತತ್ವವನ್ನು ಹರಡಿದ್ದಾರೆ.

*ಡಾ.ದ.ರಾ.ಬೇಂದ್ರೆ:ಕನ್ನಡದ ಧಾರ್ಮಿಕ ಸಂಸ್ಕೃತಿ ಪುಟ–1, 2

**ಡಾ.ಪ್ರೊ।ವಸಂತ ಕುಷ್ಟಗಿ:ದಾಸ ಸಾಹಿತ್ಯದ ತವನಿಧಿಯಲ್ಲಿ ಪುಟ–488, 489

ಪ್ರಥಃಕರಣದಲ್ಲಿ ಕರ್ನಾಟಕದ ಪಾತ್ರ ವಿಸ್ತಾರವಾಗಿದೆ ಹಾಗೂ ವಿಶಿಷ್ಠವಾಗಿದೆ. ಕುವೆಂಪು ನುಡಿದಂತೆ ಕನ್ನಡನಾಡು "ಸರ್ವಜನಾಂಗದ ಶಾಂತಿಯ ತೋಟ, ರಸಿಕರ ಕಂಗಳ ಸೆಳೆಯುವ ನೋಟ, ಹಿಂದೂ ಕ್ರೈಸ್ತ ಮುಸಲ್ಮಾನ ಪಾರಸಿನ ಜೈನರುದ್ಯಾನ.." ಹೀಗೆ ಸರ್ವ ಜನಮತಗಳ ಮಂಗಲಧಾಮವಾಗಿದೆ. ಈ ನಾಡು ಇಲ್ಲಿಗೆ ಈ ನೆಲ ವಾಸ್ತವ್ಯಕ್ಕಾಗಿ ಭಾರತ ದೇಶದ ನಾನಾ ಭಾಗಗಳಿಂದ ಶ್ರೇಷ್ಠ ಚಿಂತರು ಬಂದರು ಕರ್ನಾಟಕಕ್ಕೆ.

ಕರ್ನಾಟಕದತ್ತ ಧಾವಂತ :–

ಅಶೊಕನ ಅನುಶಾಸನದಂತೆ ಬೇಧ ಅನುಯಾಯಿಗಳು ಇಲ್ಲಿಗೆ ಬಂದರು, (ಅಶೋಕನ ಶಿಲಾ ಶಾಸನಗಳೇ ಸಾಷಿ ಹೊತ್ತಿವೆ. ಚಂದ್ರಗುಪ್ತ ಮೌರ್ಯ ತನ್ನ ರಾಜ್ಯತೊರೆದು ಜೈನ ಭಿಖ್ಖುವಾಗಿ ಭದ್ರಬಾಹು ಮುನಿಯ ಆಶ್ರಯಕ್ಕಾಗಿ ಶ್ರವಣಬೆಳಗೊಳಕ್ಕೆ ಬಂದ ಅದ್ವೈತ ಸಿದ್ದಾಂತ ಪ್ರತಿವಾದಕನಾಗಿ ಕೇರಳದ ಕಾಲಟೆಯಿಂದ ಆರ್ದಿಂತರ ಶೃಂಗೇರಿಗೆ ಬಂದರು, ದ್ವೈತ ಸಿದ್ದಾಂತ

ಸಾರಿದ ಸಾಧಕ. ಮಧ್ವರು ಕಾರ್ಯಕ್ಷೇತ್ರವನ್ನಾಗಿ ಉಡುಪಿಯನ್ನು ಆಯ್ದುಕೊಂಡರು ಶ್ರೀವೈಷ್ಣವ ಚಿಂತನೆಯನ್ನು ಹೊತ್ತುಕೊಂಡು ರಾಮನುಜರು ತಮಿಳಿಗೆ ದೇಶ ತಂಜಾವೂರಿನಿಂದ ಬಂದರು, ಮೇಲುಕೋಟೆಯಲ್ಲಿ ವಾಸ್ತವ್ಯ ಮಾಡಿದರು.

ಅದರಂತೆ ವೈಷ್ಣವ ಸಾಹಿತ್ಯವನ್ನು ಕರ್ನಾಟಕಕ್ಕೆ ತಂದ ತಾಣಗಳು ತಮಿಳುನಾಡಿನ್ಲಿ ಹೇರಳವಾಗಿವೆ. ಅದರ ಪ್ರಕಾರವಾಗಿ ವ್ಯಾಸ ಕೂಟ ಹಾಗೂ ದಾಸಕೂಟ ಎಂಬರಡು ವೈಷ್ಣವ ಸಾಹಿತ್ಯದ ಟಿಸಿಲುಗಳು ಮುಗೂಳಿದವು (ಶ್ರೀ.ಮುಗಳಿ, ಕನ್ನಡ ಸಾಹಿತ್ಯ ಚರಿತ್ರೆ, ಪು.315–316); ವೈಷ್ಣವ ಸಾಹಿತ್ಯ ತಂದ ತಾಣಗಳನ್ನು ಹೆಸರಿಸಬೇಕಾಗಿದೆ ಇಲ್ಲಿ, ತಂಜಾವೂರು ಕುಂಭಕೋಣಂ ಮುಳಬಾಗಿಲು ಶ್ರೀರಂಗ ಮಂತ್ರಾಲಯಂ ಪಾಂಡವಪುರ (ಮಹಾರಾಷ್ಟ್ರ) ಸ್ವಾದಿ (ಕರ್ನಾಟಕ) ಇತ್ಯಾದಿ ಅಲ್ಲದೇ ಮತ್ತು ಕರ್ನಾಟಕದಲ್ಲಿ ಹಂಪಿ ಮಾನ್ಯ ಖೇಟ, ಬಾಗಲಕೋಟೆ, ಲಿಂಗಸುಗೂರು ಗೋರೇಬಾಳ್ (ಡಿ ವಸಂತ ಕುಷ್ಟಗಿ ದಾಸ ಸಾಹಿತ್ಯದ ತವನಿಧಿಯಲ್ಲಿ 3,4,5) ಹಾಗೂ ಆದಿವಾಸಿ, ಹೇಲವಸಂತ ಮುಂತಾದವೂ ಇರುತ್ತವೆ. ಹರಿದಾಸರ ಹರಿವು ಮಹಾನಧಿಯಾಗಿ ವೈಷ್ಣವ ಹಾಗೂ ಸಾಗರವಾಯಿತು ಇಲ್ಲಿ.

*ಪ್ರೊ॥ ರ.ಶ್ರೀ.ಮುಗಳಿ:ಕನ್ನಡಸಾಹಿತ್ಯ ಚರಿತ್ರೆ ಪುಟ–315.316

ಕರ್ನಾಟಕದ ಹರಿದಾಸರ ವೈಶಿಷ್ಯ: ಶ್ರೀ ವಿಠ್ಠಲ ಆರಾಧ್ಯ ದೈವ:– ಕರ್ನಾಟಕದ ಹರಿದಾಸರು ಭಕ್ತಿಯ ದಾರಿಯಲ್ಲಿ ನಡೆದುದು ವೈಶೀಷ್ಯ ಅವರ ದೈವ ವಿಷ್ಣು, ವೈಷ್ಣವ ಮಯ. ವ್ರಾತ್ಯ ಸಂಪುದಾಯದ ಬ್ರಾಹ್ಮಣ ಸಮಾಜವು ದಾಸಸಾಹಿತ್ಯದ ಕೃಷಿ ಮಾಡಿದೆ. ಕನ್ನಡ ಭಾಷೆ ಬ್ರಾಹ್ಮಜ್ಞಾನದ ಭಾಷೆಯಾಗಿ ಸಂಪದ್ಭರೀತವಾಯಿತು. ಇವರ ದೈವಿಕ ಚಿಂತನೆ, ದೈವಿಕ ಆರಾದನೆ, ದೈವಿಕ ಅಭೀಷ್ಠೆಗಳು ಬೇಟಿಕೆಗಳು ಆರಾಧ್ಯ ದೈವವಾದ ವಿಷ್ಣುವಿನ ಸುತ್ತು ಹೆಣೆಯಲ್ಪಟ್ಟವು.

"ವಿಷ್ಣು","ವಿಠ್ಠಲ", "ವಿಠ್ಠಲ" ಹೀಗೆ ಈ ನಾಮವು ಬೇರೆ ಬೇರೆ ಪ್ರತ್ಯಯ ಹಾಗು ರೂಪಗಳಲ್ಲಿ (ಡಾ.ದ.ರಾ.ಬೇಂದ್ರೆ) ಕನ್ನಡ ಸಾಹಿತ್ಯದ ಸಂಪುಷ್ಟ ತಕ್ಚವಾಗಿ ಬಹಳೆಡೆಯಲ್ಲಿ, ಕೀರ್ತನೆಗಳಲ್ಲಿ ಉಗಾಭೋಗಗಳಲ್ಲಿ ಸೂಳಾದಿಗಳಲ್ಲಿ ಉಪಯೋಗಿಸಲ್ಪಟ್ಟಿತು. ಪುರಂದರ ವಿಠ್ಠಲ, ಆದಿಕೇಶವ ರಂಗವಿಠ್ಠಲ, ರಂಗ ವಿಜಯವಿಠ್ಠಲ, ಶ್ರೀಶ ವಿಠ್ಠಲ, ಜಗನಾಥವಿಠ್ಠಲ, ಎಂಬಾದಿ ವಿಷ್ಣುರೂಪಕ ನಾಮಗಳು ಕರ್ನಾಟಕದಲ್ಲಿ ಅವರು ರಚಿಸಿದ ಸಾಹಿತ್ಯಿತ ಪದ್ಯಗಳಲ್ಲಿ ಉಪಯೋಗಿಸಲಾಯಿತು. ಹಾಗೂ ಅವು ಅವರವರ ಕಾವ್ಯನಾಮಗಳಾದವು.

ಹರಿದಾಸರ ಬದುಕು ದೈವಾರಾಧನೆಯ ಪರಿಯಲ್ಲಿ ವ್ಯಷ್ಟಿಗೆ (ವ್ಯಕ್ತಿ)ಅದರ ಎತ್ತರವನ್ನೆ ಬಯಸೀತು. ಹಾಗೂ ಸಮಷ್ಠಿ ಎತ್ತರಕ್ಕೆ (ಸಮುದಾಯ) ತಲೆಕೆಡಿಸಿಕೊಳ್ಳಲಿಲ್ಲ. ಪ್ರತಿಯೊಬ್ಬ ಹರಿದಾಸನು ತನ್ನ ವೈಯಕ್ತಿಕ ಆತ್ಮೋನ್ನತಿಗೆ ಆತ್ಮೋದ್ಧಾರಕ್ಕೆ ತಪಗೈದನೆ ಹೊರತು ಇಡಿಯಾದ ಸಮಗ್ರ ಸಮಾಜಕ್ಕೆ ಚಿಂತನೆ ಮಾಡಲಿಲ್ಲ. ಆ ಚಿಂತನೆ ಸಮಾಜಕ್ಕೆ ಬಿಟ್ಟುಕೊಟ್ಟರು.

ಮದ್ಯಯುಗೀನ ದಕ್ಷಿಣ ಭಾರತದ ಇತಿಹಾಸದಲ್ಲಿ ಕ್ರಿ.ಶ. (1000 –1300 ಕ್ರಿ.ಶ.ರವರೆಗೆ ತೀರ ಪರಿಚಿತವಾದ ಇಸ್ಲಾಮ್ ನಡುವಳಿಕೆ ತೂರಿ ಬಂದು ಆಗ ಆಗುತ್ತಿರುವ ಕುಳಿರ್ಗಾಳಿಯ (weeping effect) ಪರಿಣಾಮವು ಸಮಷ್ಟಯ ಬದುಕಿಗೆ ಅಡೆತಡೆಯನ್ನು ವಡ್ಡೀತು. ಇಂಥ ಅಶಾಂತಿಯ ವಾತಾವರಣದಿಂದ ಮೇರೆದ್ದು ವ್ಯಷ್ಟಿಯು (ವ್ಯಕ್ತಿ) ಹರಿದಾಸತ್ವ ಪಡೆಯಿತು. ಹಾಗೂ ಭಕ್ತಿ ಸಾಹಿತ್ಯದ ಹರಿವನ್ನು ಹರಿಸಿದರು ಎಲ್ಲೆಡೆ, ಭಾವನ್ನಾಗಿ ಪರಿವರ್ತಿಸುವಲ್ಲಿ ದಾಸವದೇಣ್ಯರ ಸಾಲು ಉದ್ದೋಲುದ್ದ;

* ಡಾ.ಎಸ್.ಕೆ.ಜೋಶಿ : ಶಿವಶರಣರು, ಹರಿದಾಸರು ಹಾಗೂ ಸೂಫೀ ಸಂತರು. ರೇಡಿಯೋ ಟಾಕ್, ಆಕಾಶವಾಣಿ, ಧಾರವಾಡ.

ಕರ್ನಾಟಕ ಪ್ರದೇಶದಲ್ಲಿ ಹರಿದಾಸರು ತಮ್ಮ ಭಕ್ತಿ ಪಂಥನ ಪಥದಲ್ಲಿ, ಪರಿವ್ರಾಜಕರಾದರು. ಊರಿಂದೂರಿಗೆ ಬ್ರಮನಮಾಡುವಂತೆ ಭಕ್ತರಾದರು. ಅವರ ತಾಳ ತಂಬೂರಿ ಅವರ ಭಕ್ತಿ ಸಂಗೀತದ ಉಪಕರಣಗಳಾದವು, ಹಾಗೂ ಊರ ಹಿಂಗಡದ ಗುಡಿಗಳು ಅವರ ವಾಸ್ತವ್ಯದ ನೆಲೆಗಳಾದವು. ಉಡುಪಿ, ಹಂಪಿ, ಕಾಗಿನೆಲೆ, ಬೇಲೂರು, ಹಳೆಬೀಡು, ಶ್ರೀರಂಗಪಟ್ಟನ, ಮೇಲುಕೋಟೆ, ಪರುಂದರಗಡ, ಪಾಂಡವಪುರ, ಮಂತ್ರಾಲಯ, ಮುಳಬಾಗಿಲು, ಬಾಗಲಕೋಟೆ, ವಿಜಾಪುರ, ಸ್ವಾದಿ ಮಾನ್ಯಖೇಟ, ಗೋರೆಬಾರ್ಲ, ಲಿಂಗಸಗೂರು ಇತ್ಯಾದಿಗಳು ಅವರ ಸಂಚಾರದ ನೆಲೆಗಳಾದವು.

ಹಂಗಿನಾಮನೆಗಿಂತ ಹಿಂಗಡದ ಗುಡಿಲೇಸು:

ದಾಸಸಾಹಿತ್ಯವು ಯಾವುದೇ ರಾಜಾಶ್ರಯವನ್ನು ಬಯಸಲಿಲ್ಲ. ಎಲ್ಲವೂ ಭಗವಂತರ ಪ್ರೇರಣೆಯಿಂದ ಚತೇತ"ತೇಸ ವಿನ: ತೃಣಂಮಪಿ ನಚಲತಿ", ಎಂದು ದೃಢವಾಣಿ ನಂಬಿದ ಹರಿದಾಸರು ತಮ್ಮ ಕೀರ್ತನೆಗಳಿಂದ ನಿರ್ಮಲ, ನಿರ್ದಿಷ್ಟ ನಿರಾಪೇಕ್ಷ ಬದುಕನ್ನು ನೀಡಿದರು. ಇವರ ಭಾಷೆಯು ಸರಳತೆಯ ಓಪದಲ್ಲಿ ಜನಸಾಮಾನ್ಯರನ್ನು ತಲುಪಲು ಪ್ರಯತ್ನಿಸಿದೆ: ಶಿವಶರಣ ಭಾಷಯಷ್ಟು ಸುಲಳೀತಬಾಗಿ ರದೆ, ಅಲ್ಲಲ್ಲಿ ಸಂಸ್ಕೃತ ಶಬ್ದಗಳ ಚೇಂಬವಳಗಳನ್ನು ಜೋಡಿಸಿ ಆರ್ತದ ಸುಂದರ ಲಾಲಿತ್ಯದ ಶೇಯತೆಯ, ಲಯಬದ್ಧತೆಯನ್ನು ಜೋಡಿಸಿ, ಶಾಸ್ತ್ರೀಯ ಸಂಗೀತದಲ್ಲಿ, ವಿಶೇಷವಾಗಿ ಕರ್ನಾಟಕೀ ಸರಶೀತ ಪದ್ಧತಿಯಲ್ಲಿ ಹರಡಿ ಜನಸಾಮಾನ್ಯರ ಹೃದಯ ತಲುಪುವಂತಾಗಿದೆ.

ಕರ್ನಾಟಕ ಹರಿದಾಸರು ನಡೆದ ದಾರಿಯೇ ವಿಶಿಷ್ಠ. ಅವರು ನಡೆದ ದಾರಿಯಲ್ಲಿ ವಿಗ್ರಹಗಳು ಕಂಡಿವೆ. ದೇವಾಲಯಗಳು ತಲೆ ಎತ್ತಿವೆ.ದೇವಾಗಾರಗಳ ಪ್ರಂಗಣದಲ್ಲಿ ಸಂಕೀರ್ತನೆಗಳು, ಭಜನೆಗಳು ಹಾಡಲ್ಪಟ್ಟಿದೆ. ತಮ್ಮ ಸಾಧುತ್ವದ ಹಾಗೂ ತ್ಯಾಗದ ಬದುಕಿನಲ್ಲಿ ಅಸಾಧ್ಯನಾದ ಹರಿಯನ್ನು ತಮ್ಮ ಆತ್ಮ–ದರ್ಶನ–ಸಾಹಿತ್ಯದ ಮೂಲಕ ಕಂಡು ನಾಡಿಗುದ್ದಕ್ಕೂ ಜನಮಾನಸದಲ್ಲಿ ಸಾಧ್ಯವನ್ನಾಗಿ ಮಾಡಿದ್ದಾರೆ. (ಬೆಟಗೇರಿ ಕೃಷ್ಣಶರ್ಮ, ಪುರಂದರ ದಾಸರ 400ನೇ ವರ್ಷದ ಸ್ಮರಣ ಸಂಚಿಕೆ) ಇನ್ನು ಹರಿದಾಸ ಸಾಹಿತ್ಯದ ತಸೋವನದಲ್ಲಿರುವ ತಪಡ್ಡಿಗಳನ್ನು ಕಾಣುವ ಇಲ್ಲಿ,

ಕರ್ನಾಟಕದಲ್ಲಿ ಹರಿದಾಸರು ಹಾಗೂ ವೈಷ್ಣವಾಚಾರ್ಯರ ಸಂಕುಲ:

ಕರ್ನಾಟಕದ ಹರಿದಾಸ ಸಂಕುಲದ ಪಟ್ಟಿಗೆ ಇಂತಿದೆ. ಶ್ರೀಪಾದರಾಯರು (ಕ್ರಿ.ಶ.1450) ಹೂವಿನಕೆರೆ ಶ್ರೀ ವಾದಿರಾಜರು (ಕ್ರಿ.ಶ.1480–1525) ಪುರಂದರದಾಸರು (ಕ್ರಿ.ಶ.1480–1568) ಕನಕದಾಸರು ಕ್ರಿ.ಶ.1500 ಬಾಡ ಶ್ರೀ ವಿಜಯ ವಿಠ್ಠಲದಾಸರು 1682 ಕ್ರಿ.ಶ. ನವವೃಂದಾವನ ಶ್ರೀ ಗೋಪಾಲ ವಿಠ್ಠಲದಾಸರು ಕ್ರಿ.ಶ.1727, ಶ್ರೀ ಜಗನ್ನಾಥ ದಾಸರು (ಕ್ರಿ.ಶ.1727). ಶ್ರೀ ಪ್ರಾಣೇಶ್ ವಿಠ್ಠಲದಾಸರು ಶ್ರೀ ಮಹಿಪತಿ ದಾಸರು ಬಂದರೆ ಕಮಲೇಶ್ ವಿಠ್ಠಲದಾಸರು ಶ್ರೀ ವ್ಯಾಸರಾಯರು (ಕ್ರಿ.ಶ.1447), ಭಾಗಣ್ಣ ದಾಸರು (ಕ್ರಿ.ಶ.1721) ಶ್ರೀ ತಿಮ್ಮಣ್ಣದಾಸರು, ಶ್ರೀ ವೇಣುಗೋಪಾಲದಾಸರು ಶ್ರೀ ಮೋಹನದಾಸರು (ಆನೆಗುಂದಿ) ಶ್ರೀ ಪ್ರಸನ್ನ ವೆಲಕ್ಯದಾಸರು (ಕ್ರಿ.ಶ.1680), ಶ್ರೀ ರಾಘವೇಂದ್ರ ರಾಯರು ಶ್ರೀ ಅಷೋಭ್ಯ ತೀರ್ಥರು. ಶ್ರೀ ಜಯತೀರ್ಥರು, ಶ್ರೀ ಆನಂದ ತೀರ್ಥರು.

ಮಧ್ಯಂತರ: ಹಾಗೆ ಸಮೀಕ್ಷೆಯಲ್ಲಿ ನೋಡಿದಂತೆ, ಕರ್ನಾಟಕದಲ್ಲಿ ಇನ್ನುಳಿದ ಪ್ರಾಂತಗಳಿಗಿಂತ, ವೈಷ್ಣವ ಸಾಹಿತ್ಯವು ಪ್ರಬಂಧ್ಧವಾಗಿ ಬೆಳೆದು ಬಂದಿದೆ. ವಿಜ್ಞಾನಕ್ಕಿಂತ ತತ್ವಜ್ಞಾನವು ನೆಮ್ಮದಿ ನೀಡುವ ಮಾಧ್ಯಮ. ಈ ಅರಿವಿನಲ್ಲಿ ಹರಿದಾಸರು ಹಾಗೂ ವೈಷ್ಣವಾಚಾರ್ಯರು 25 ಕ್ಕಿಂತ ಹೆಚ್ಚು ಸಂಖ್ಯೆಲ್ಲಿ ಕಂಡು ಬರುತ್ತದೆ. ಅವರು ಕನ್ನಡ ಸಾಹಿತ್ಯಕ್ಕೆ ಹಾಗೂ ಭಗವಂತ ಚಿಂತನೆಗೆ ಮಹತ್ವ ಕೊಟ್ಟಿದ್ದಾರೆ. 13ನೇ ಶತಮಾನದಿಂದ 17ನೆಯ ಶತಮಾನದ ವರೆಗೂ ಅವರು ಮೇಲೆ ನೀಡಿದ ಪಟ್ಟಿಕೆಯಂತೆ, ಕಾಣಸಿಗುತ್ತಾರೆ. ಅಂಥ ವಿದ್ವತ್ ಮಹನೀಯರಲ್ಲಿ, ವಿಜಯನಗರ ಕಾಲಪಟ್ಟಕ್ಕೆ ಸಂಬಂಧಿಸಿದಂತೆ, 10–12 ಗಣನೀಯರನ್ನು ಆಯ್ದು ಕೊಂಡಿದ್ದೇನೆ. ಹಾಗೂ ಆ ಒಬ್ಬೊಬ್ಬ ಮಹನೀಯರ ಜೀವನ ಬದುದು, ಬರಹಗಳ ಬಗ್ಗೆ ಇನ್ನು ಇಲ್ಲಿ, ಪ್ರಸ್ತಾಪಿಸಲು ಪ್ರಯತ್ನ ಮಾಡಲಾಗಿದೆ. ಅದು ಹೀಗಿದೆ.

ಪ್ರೊ॥ವಸಂತ ಕುಷ್ಟಗಿ:ದಾಸ ಸಾಹಿತ್ಯದ ತವನಿಧಿಯಲ್ಲಿ ಪುಟ–478–479.

ವೈಷ್ಣವ ಕ್ರಾಂತಿಕಾರಿ ಆಚಾರ್ಯರು ಶ್ರೀ ರಾಮಾನುಜರು (ಕ್ರಿ.ಶ.1017 –1137)

ಸಾವಿರ ವರುಷಗಳು ಗಲಿಸಿದರೂ ಅಚ್ಚಳಿಯದ ಪ್ರಭಾವವನ್ನು ಉಳಿಸಿಹೋಗಿರುವ ಮಹಾನುಭಾವರು ಶ್ರೀ ರಾಮಾನುಜಾಚಾರ್ಯರು. ಭಾರತವು ಬಹು ಸಂದಿಗ್ದ ಕಾಲದಲ್ಲಿ ದಾನ, ನವಗಂಥ ರಚನೆಯ ಮೂಲಕ ವೇದಾಂತಸಾರ 'ವೇದಸೂತ್ರ, ವೇದಾಂತ ಸಂಗ್ರಹ, ಗೀತಾಭಾಷ್ಯ, ಶ್ರೀ ಭಾಷ್ಯ ಶ್ರೀರಂಗ ಗದ್ಯ, ಶರನಾಗತಿ ಗದ್ಯ ಮುಂತಾದವು. ಕರ್ಮವು ವ್ಯಕ್ತಿಯನ್ನು ದಾಸ್ಯಕ್ಕೆ ಕರೆದೊಯ್ಯುತದೆ, ಆದರೆ ಜ್ಞಾನವು ಮಾತ್ರ ಸರ್ವಜ್ಞಪದವಿ ನೀಡುತ್ತಿದೆ. ಸರ್ವರಿಗೂ ಸಮಾನ ಸ್ಥಾನ ನೀಡಿದ ಕ್ರಾಂತಿಕಾರಿ ಆಚಾರ್ಯರಿವರು.

ಶ್ರೀ ರಾಮನುಜರದು ಸಂಘರ್ಷಮಯ ಜೀವನ ಅವರ ಭಕ್ತಿಮಾರ್ಗ ಇಡೀ ಭಾರತದಲ್ಲಿ ಪ್ರಭಾವ ಬೀರಿ ಸನಾತನ ಧರ್ಮಕ್ಕೆ ಸಮಾಜ ಸಮಬಾವ ತಾಳ್ಮೆ ತೋರಿದ ಬ್ರಹ್ಮಣ್ಯದ ಬದುಕು. ಸ್ಪೃಶ್ಯಾಸ್ಪ್ರತ್ಯಗಳ, ದ್ವಂದ್ವವನ್ನು ತೊರೆಯಲು ಶ್ರೀವೈಷ್ಣವ ಮತ–ವಿಶಿಷ್ಠಾದ್ವೈತ ಮತ ಪ್ರತಿಪಾದಿಸಿದರು. ಸಮಾಜದ ಯಾವದೇ ಸ್ತರದ ವ್ಯಕ್ತಿಯಿರಲಿ ಬಡವ ಬಲ್ಲಿದನಿರಲಿ ವಿಷ್ಣಾರಾಧಕರಾದ ವಿಶಿಷ್ಟದ್ವೈತರೆಂದು ಸಾರಿ. ನಿಮ್ಮ ವರ್ಗದ ಜನರನ್ನೂ ಹತ್ತಿರ ಕರೆದರು. ಇದನ್ನೇ ಸೂತ್ರವಾಗಿ ಹಿಡಿದು ಶ್ರೀ ರಾಮನುಜರ ನಂತರ ಭಕ್ತಿಬಾಂಡಾರಿ ಬಸವನು ವ್ರಾತ್ಯ ಜೀವನದಿಂದ ಕೆಳಗಿಳಿದು ಜನಸಾಮಾನ್ಯರ ನಿಮರ ಏಳೆಗಾಗಿ ಲಿಂಗಾಯುತ ಧರ್ಮ ಸ್ಥಾಪಿಸಿದನು. ಈ ಲಿಂಗಾಯತ ಹಸ ಧರ್ಮಕ್ಕೆ ಶ್ರೀರಾಮಾನುಜರ ವಿಶಿಷ್ಟದ್ವೈತವು ಪಾರ್ಶ್ವವಾಯಿತು.

ಕರ್ನಾಟಕಕ್ಕೂ ಶ್ರೀ ರಾಮನುಜರಿಗೂ ಅವಿನಾಭಾವ ಸಂಬಂಧ, ಶ್ರೀ ರಾಮಾಣುಜರು ತಮ್ಮ ಸಹಸ್ರ ಸಹಸ್ರ ಶಿಷ್ಯ ಪರಿವೃತರಾರಿ ತಮಿಳು ನಾಡಿನಿಂದ, ಕರ್ನಾಟಕದ ಮಂಡ್ಯ ಜಿಲ್ಲೆಯ ಮೇಲುಕೋಟೆಗೆ ಬಂದು ತಮ್ಮ ವಿಶಿಷ್ಟದ್ವೈತ ಸಿದ್ಧಾಂತವನ್ನು ಉಜ್ವಲಗೊಳಿಸಿದರು. ಶ್ರೀಗಳು ಬ್ರಾಹ್ಮಣರಾದರೂ ಅವರು ನಡೆಸಿದ ಸರ್ವೇಜನರ ಸಾಮಾಜಿಕ ಒಗ್ಗೂಡುವ ಕ್ರಿಯೆ ಕೆಲ ಶಿಷ್ಠಬ್ರಾಹ್ಮಣ ವರ್ಗಕ್ಕೆ ಸರಿದೊರಲಿಲ್ಲ. ಆಗಾಗಿ ಶ್ರೀಗಳು ತಮ್ಮ ಪ್ರೀತಿಯ ಚೆಲುವ ಇಷ್ಟದೈವ ನಾರಾಯಣನನ್ನು ಬಿಟ್ಟು ದುಃಖದಿಂದ ಮೇಲುಗೋಟೆ ತ್ಯಜಿಸಿ ಮತ್ತು ತಮ್ಮ ಮೂಲನೇರ ತಮಿಳುನಾಡಿಗೆ ಹೋದರು. ಪೂರ್ವಭಾವಿಯಾಗಿ, ದಾಸಪಂಥದ ಉಗಮಕ್ಕೆ ಹಾಗೂ ವೈಷ್ಣವಾಚಾರ್ಯರ ಪಂಥಕ್ಕೆ ಈ ಮಹನೀಯರು ದಾರಿತೋರಿದ್ದಾರೆ.

*ಡಾ.ಎಸ್.ಕೆ.ಜೋಶಿ, ಬಸವನ ಬಾಗೇವಾಡಿಯಲ್ಲಿ ಜರುಗಿದ–2013, 'ಬಸವ ಚಿಂತನ' ರಾಜ್ಯಮಟ್ಟದ ವಿಚಾರ, ಸಂಕಿರಣದಲ್ಲಿ ಪ್ರಬಂಧ ಮಂಡನೆ.

**ಶ್ರೀ ಗುರುರಾಜ ಪೋಸೆಟ್ಟಿಹಳ್ಳಿ, ಧ್ಯಾನ ಧರ್ಮ–ನಮ್ಮನಡೆ ರಾಮಾನುಜರೆಡಿ, ಸಂ.ತ.ಜ್ಯೂನ್ 9, 2016.

ಶ್ರೀಪಾದರಾಯರು (ಶ್ರೀದಾಸರಾಜರು)

ಹದಿನಾಲ್ಕನೆಯ ಶತಮಾನದಲ್ಲಿ ಅವತರಿಸಿದ್ದ ಮಹಾನುಭಾವರು ಶ್ರೀ ಶ್ರೀಪಾದರಾಜರು. ಮದ್ವಾಚಾರ್ಯರ ಪರಂಪರೆಯಲ್ಲಿ ಬಂದ ಇವರು ಕನ್ನಡವೆಂದರೆ ಮೂಗು ಮುರಿಯುತ್ತಿದ್ದ ಆ ಕಾಲದಲ್ಲಿ ವೇದ ಉಪನಿಷೆತ್ತುಗಳ ತತ್ವಗಳನ್ನು "ರಂಗವಿಠ್ಠಲ" ಎಂಬ ಆತೀತ ನಾಮದಲ್ಲಿ ಸರಳ ಕನ್ನಡದಲ್ಲಿ ಹಾಡು ಉಗಾಭೋಗ ಸುಳಾದಿಗಳ ಮೂಲಕ ಜನ ಸಾಮಾನ್ಯರಿಗೆ ತಲುಪಿಸಿದವರು ಇವರು.

"ಕಂಗಲಾದ್ಯಾತಕೋ ಕಾವೇರಿ ರಂಗನ ನೋಡದೆ",

"ಇಟ್ಟಾಂಗೆ ಇರುವೆನು ಹರಿಯೇ",

"ಭೂಷಣಕ್ಕೆ ಭೂಷಣ" ಇವು ಇವರ ಕೆಲವು ಅತ್ಯಂತ ಜನಪ್ರಿಯೆ ರಚನೆಗಳು. ಇವರ ದ್ರುವನ ಅವತಾರವೆಂಬುದು ಭಕ್ತರ ನಂಬಿಕೆ.

ಭಾರತ ದೇಶದ ದಕ್ಷಿಣ ಪಥದಲ್ಲಿ ಶ್ರೀರಂಗವೆಂಬ ಪುಣ್ಯ ಕ್ಷೇತ್ರವಿದೆ. ಇಲ್ಲಿ ಕಾವೇರಿಯು ಎರಡು ಶಾಖೆಗಳಾಗಿ ಪ್ರವೇಹಿಸುತ್ತಿದ್ದಾರೆ. ಈ ತಾಣದಲ್ಲಿ ಶ್ರೀ ಪದನಾಭ ತೀರ್ಥರ ಪರಂಪರೆಯಲ್ಲಿ ಎಂಟನೆಯವರಾದ "ಲಕ್ಷ್ಮಿನಾರಾಯಣಮುನಿ" ಎಂದು ನಾಮಕರಣ ಹೊಂದಿದರು. ಅವರೇ ಹರಿದಾಸ ಸಾಹಿತ್ಯಕ್ಕೆ ಶ್ರೀಕಾರ ಬರೆದ ಶ್ರೀಪಾದರಾಯರು (ಕ್ರಿ.ಶ.1494–1502)

ಶ್ರೀಪಾದರಾಜರು, ಶ್ರೀ ಸ್ವರ್ಣವರ್ಣ ತೀರ್ಥರಿಂದ ಸಂಸ್ಥಾನ ಶ್ರೀರಂಗವನ್ನು ಪಡೆದು ಶ್ರೀ ಶ್ರೀಪಾದರಾಯರು ದಿಗ್ವಿಜಯಾರ್ಥ ಪ್ರಸ್ತಾನ ಮಾಡಿ, ಮುಳಬಾಗಿಲು, ತಿರುಪತಿ, ಹಂಪಿ ಮುಂತಾದ ಕ್ಷೇತ್ರಗಳಿಗೆ ಸಂಚರಿಸಿ, ತಮ್ಮ ವಿದ್ಯುತ್ ಪೂರ್ಣ ಉಪನ್ಯಾಸಗಲನ್ನು ನೀಡಿ ಸಾಮಾನ್ಯರನ್ನು ಪಾವನಗೊಳಿಸಿದರು. ಹಂಪಿಗೆ ಬಂದಾಗ್ಗೆ ಸಾಳುವ ನರಸಿಂಹ ದೊರೆಯಿಂದ ಪಾದಪೂಜೆ ಹಂಪಿಗೆ ಬಂದಾಗ್ಗೆ ಬಂದು ಮೈಲುಗಲ್ಲು ಇಂಥದೇ, (ಪ್ರಸಂಗ ಕ್ರಿ.ಶ. 1520ರಲ್ಲಿ ಶ್ರೀ ವ್ಯಾಸರಾಯರು ವಿಜಯನಗರ ಸಿಂಹಸದ ಮೇಲೆ ಪೂಜಿತರಾಗಿ ಶ್ರೀಕೃಷ್ಣದೇವರಾಯನ 'ಕುಹಯೋಗ'ವನ್ನು ದೂರಿಕರಿಸಿದ ಬಗ್ಗೆ ಐತಿಹಾಸಿಕ ದಾಖಲೆಯಾಗಿದೆ. ಶ್ರೀಪಾದ ರಾಜರು ದಾಸಸಾಹಿತ್ಯ ತಂದ ಭಗೀರಥನೆಂದೂ ಪ್ರಸಿದ್ಧಯಾಗಿದ್ದಾರೆ.

* ಎಚ್.ಶ್ರೀ.ಲಕ್ಷ್ಮೀನಾರಾಯಣ:ವಿಜಯವಾಣಿ, ಸಂಸ್ಕೃತಿ ನಿತ್ಯ ಜೀವನ ದರ್ಶನ,(ದಿನಾಂಕ:16/06/2016, ಪುಟ 1 ಹಾಗೂ 4

ಸೂಂದೆಯ ಸ್ವಾಮಿ ಶ್ರೀ ವಾದಿರಾಜರು (ಕ್ರಿ.ಶ.148–1545)

ವ್ಯಾಸರಾರರ ಸಮಕಾಲೀನರು ವಾದಿರಾಜರು ವ್ಯಾಸ ಕಲಾಡ ದಾಸಕೂಟ ಗಳೆರಡನ್ನೂ ಜೋಡಿಸುವಕೊಂಡಿ (ಲಿಂಕ್) ಸೊಂದೆಯ ಹಚ್ಚ ಸದಿರಿನ ಸೌಂದರ್ಯ ಮಾನವರ ಮನದ ಸೌಂದಯ್ವನ್ನು ಹೆಚ್ಚಿಸಿದೆ.

ವ್ಯಾಸರಾಯದಂತೆಯೇ ವಾದಿರಾಜರು 'ನ್ಯಾಯವೇದಾಂಗ'ಗಳಲ್ಲಿ ಪರಣೀತರು. ಇವರು ಸಂಸ್ಕೃತ ದಲ್ಲಿ 16 ಗ್ರಂಥಗಳನ್ನು ಮತ್ತು ಕನ್ನಡದಲ್ಲಿ 'ವೈಕುಂಠ ವರ್ಣನೆ', ಲಕ್ಷ್ಮಿತ್ರೋಭಾನೆ, 'ಸ್ವಪ್ನಪದ'. 'ಕೀಚರವಧೆ', 'ಕೇಶವನಾಮ' ಗ್ರಂಥಗಳಲ್ಲದೇ ಹಯವದನ ಮುದ್ರಿಕೆಯಲ್ಲಿ ಹಲವಾರು ಕೀರ್ತನೆ ಹಾಗೂ ಸೂಳಾದಿಗಳನ್ನು ಉಗಾಬೋಗಳನ್ನು ಬರೆದಿದ್ದಾರೆ. ಇವರ ಎಲ್ಲ ಗ್ರಂಥಗಳಲ್ಲಿ ಸಾಹಿತ್ಯ ಸಂಪತ್ತು ಹಾಗೂ ಮಧ್ವಮದತ ತತ್ವಗಳ ಪ್ರತಿಪಾದನೆ ಹಾಗೂ ತಾರ್ಕಿಕ ಎತ್ತರ ವಿಶೇಷವಾಗಿದೆ.

ಶಾಸ್ತ್ರೀಯ ಉಕ್ತಿಗಳನ್ನು ಸಾಹಿತ್ಯ ಮುದ್ರೆಯಿಂದ ಮನಸ್ಸಿಗೆ ನೆಡುವಂತೆ ಸರಳವಾದ ಪ್ರೇಢ ಕನ್ನಡದಲ್ಲಿ ಮುಖ್ಯ (ಪ್ರವೇಯವಾದ ಭಕ್ತಿಯಿಂದ ಶ್ರೀ ಹರಿಯನ್ನು ಬಲಿಸಿ, ಮುಕ್ತಿಯನ್ನು ಪಡೆಯಬೇದೆಂಬುದನ್ನು ಸಿದ್ದಾಂತಿಸಿದ್ದಾರೆ. ಇವೆಲ್ಲ ಪ್ರತಿಗಳ ಸ್ಥೂಲ ವಿವೇಚನೆ ಅವಶ್ಯವಾಗಿದ್ದರೂ ವಿಸ್ತಾರಭಯದಿಂದ ಬರೆಯುವ ಕೈ ಇಲ್ಲಿಗೇನೇ ನಿಲ್ಲುತ್ತದೆ.

ದಾಸಸಾಹಿತ್ಯವು ಬಂದು ಮತ್ತು ಪಂಥಕ್ಕೆ ಸೀಮಿತವಾದುದಲ್ಲ. ಆದರೆ ಬಹಳಷ್ಟು ಜನ ಕೇವಲ ಮತೀಯ ದೃಷ್ಟಿಯಿಂದ ನೋಡುವದುಂದು ಅಂತಹರಿಗೆ ಅದರ ಒಳಮಿಡಿತಗಳನ್ನು ಗುರುತಿಸುವ ವಿಶಾಳದೃಷ್ಟಿ ಬಂದಿದ್ದಾದರೆ, ಇಡೀ ಮಾನವ ಕಲ್ಯಾಣವನ್ನೇ ಬಯಸುತ್ತದೆ

ದೇವರೂಪಿಯಾದ ಶ್ರೀ ಹರಿಯು ಕುದುರೆ ರೂಪದಲ್ಲಿ ಬಂದು ಬುಟ್ಟಿಯಲ್ಲಿಟ್ಟ ಹಯಾಗ್ರೀವ (ಕಡಲೆ ಬೇಳೆ ಪಾಯಸ), ತಿನ್ನುತ್ತಿದ್ದನಂತೆ

*.ರಾ.ಸ್ವಾ.ಪಂಜಮುಖಿ:ಹರಿದಾಸ ಸಾಹಿತ್ಯ ಪುಟ–152

**.ರಾ.ಸ್ವಾ.ಪಂಜಮುಖಿ:ಹರಿದಾಸ ಸಾಹಿತ್ಯ ಪುಟ–67–68

***.ಪ್ರೋ॥ವಸಂತ ಕುಷ್ಟಗಿ:ದಾಸಸಾಹಿತ್ಯದ ತವನಿಧಿಯಲ್ಲಿ ಪುಟ–479

****.ಲೇಖಕಿ ಸ್ವರೂಪರಾಣಿ ಮಹಿಷಿ:ಹರಿದಾಸ ಸಾಹಿತ್ಯ (ಸಂ) ಕಮಲಾ ಹೆಮ್ಮಗೆ. ಪುಟ–50–56.

ಹಣದಾಸೆ ಬಿಟ್ಟು ಹರಿದಾಸರಾದರು – ಶ್ರೀಪುರಂರದಾಸರು (ಕ್ರಿ.ಶ.1480–1568)

ಪುರಂದರದಾಸರು ಮುಲತಃ ಶ್ರೀನಿವಾಸ ನಾಯಕರ ಹಂಪಿಗೆ ಪುರಂದರ ಗಡದಿಂದ ಬಂದು ಸಿರಿವಂತ ಚಿನಿವಾಲರಾದರು ನವತೋಟ ನಾರಾಯಣ ಜೀವನ ಪರಿವರ್ತನೆಯಲ್ಲಿ ದಾಸರಾದರು ತುಂಗಭದ್ರೆಯ ದಡದಲ್ಲಿ ಪರುಂದರ ಮಂಟಪ, ಅವರ ಅಮರ ಜೀವನವನ್ನು ಸ್ಮರಿಸುತ್ತದೆ. ಸಾವಿರಾರು ಸಾವಿರಾರು ಅವರ ಕೀರ್ತನೆಗಳನ್ನು ನಾಡವರ ಗುಡಿಸಲು ಗುಡಿಸಲುಗಳಲ್ಲು ಬದುಕಿನ ಮಂದಾರದ ಹೂ ಅರಳಿಸಿವೆ. ಧೈವ ಸಮರ್ಪನ ಭಾವೆ. ಕನ್ನಡ ಮಾಧ್ಯಮದ ಸುಳಿದ ಬಾಳೆಯ ಹಣ್ಣು ಅಳಿದ ಉಷ್ಣದ ಹಾಲು, ಅವರ ಕಾವ್ಯ ರಚನೆ 'ಪುರಂದರೋಪ–ನಿಷತ್ತು".

ಮಾನವನ ಬದುಕನ್ನು ಬಂಗಾರವಾಗಿರಿಸಿದ್ದಾರೆ, ಪುರಂದರ ದಾಸರು 'ಮಾನವ ಜನ್ಮ ದೊಡ್ಡದು ಎದರ ಹಾನಿ ಮಾಡಲು ಬೇಡಿ ಹುಚ್ಚಪ್ಪಗಳಿದರೆ, ಅವರ ಬದುಕಿನ ರೀಯಿಯೇ ಬೇರೆ, ಅವರ ಬದುಕು ಪೂಜೆಯಾಗಿ ಬಿಡುತ್ತದೆ. ಅಂತಹ ಪೂಜೆಯ ಸ್ವಾರಸ್ಯ ಮತ್ತು ಅದರಲ್ಲಿ ತುಂಬಿರುವ ಸದಾಚಾರ ನಿಷ್ಠೆ, ಬದುಕಿನ ಪಾರಮ್ಯಗಳನ್ನು ಪುರಂದರ ದಾಸರ ವಾಣಿಯಲ್ಲಿಯೇ ಆಲಿಸಿದರೆ, ಸಮಚಿತ್ತಕ್ಕೆ ಬೆಳಕು ** ಪ್ರೊ॥ ವಸಂತ ಕುಷ್ಟಗಿ

ಸಲಭ ಪೂಜೆಯ ಕೇಶ ಬಲವಿಲ್ಲದವರು
ಕಾಲಕಾಲದ ಕರ್ಮ ಕಮಲಾಷಗರ್ಪಿಸಿರಿ
ಎರುಳು ಹಚ್ಚುವ ದೀಪ ಹರಿಗೆ ನೀಲಾಂಜನವು

ಮರುವುಡುವ ದೋತರವು ಪರಮ ವಸ್ತ್ರ
ತಿರುಗಾಡಿ ದಣಿಯುವುದು ಹರಿಗೆ ಪ್ರದಕ್ಷಿಣೆಯು
ಮರಳಿ ಹೊಡೆಮರಳುವುದು ನೂರೆಂಟುದಂಡ.
ನುಡಿದ ಮಾತುಗಳೆಲ್ಲ ಪಾಂಡುರಂಗನ ಜಪವು
ನುಡಿದ ಮಾತುಗಳೆಲ್ಲ ಪಾಂಡುರಂಗನ ಜಪವು
ಮಡದಿ ಮಕ್ಕಳು ಎಲ್ಲಾ ಒಡೆಯನ ಪರಿವಾರ
ನಡುಮನೆಯ ಅಂಗಳವು ಉಡುಪಿ ಭೂವೈಕುಂಠ
ಎಡಮನೆಯ ಬಲದವರು ಕಡು ಭಾಗದೇತರು
ಹೀಗೆ ಬೇಗದಿ ತಿಳಿದು ಕೇಳಿ ಹೋಗುತ್ತಿದೆ. ಆಯುಷ್ಯ ಯೋಗಿ ಪುರಂದರ ವಿಠ್ಠಲ ಸಾರಿ ಹೇಳಿದನು.॥

(ಪ್ರೋ॥ ವಸಂತ ಕುಷ್ಟಗಿ:ದಾಸಸಾಹಿತ್ಯದ ತವನಿಧಿಯಲ್ಲಿ ಪು.19–20

*ಪ್ರೊ॥ವಸಂತ ಕುಷ್ಟಗಿ:ದಾಸಸಾಹಿತ್ಯದ ತವನಿಧಿಯಲ್ಲಿ ಪುಟ–64–65

** ಅದೇ:ದಾಸ ಸಾಹಿತ್ಯದ ತವನಿಧಿಯಲ್ಲಿ ಪುಟ–19.

ವ್ಯಾಸರಾಯ (ವ್ಯಾಸತೀರ್ಥ)

ವ್ಯಾಸರಾಯ ಕರ್ನಾಟಕದ ದಾಸಶ್ರೇಷ್ಠರಲ್ಲಿ ಒಬ್ಬರು ಪುರುಪರಾನುಗತವಾಗಿ ಶ್ರೀ ಮದ್ವಾಚಾರ್ಯ, ನಂತರ ಅವರ ಶಿಷ್ಯ ಶ್ರೀ ಪದ್ಮತೀರ್ಥ, ತದನಂತರ ಅವರ ಶಿಷ್ಯ ಶ್ರೀಪಾದರಾಯ, ಅನಂತರ ಬರುವವರೇ ಶ್ರೀ ವ್ಯಾಸರಾಯ.

ವ್ಯಾಸರಾಯ ಶ್ರೀಪಾದರಾಯನ ಶಿಷ್ಯೋತ್ತಮನಾಗಿ ಅಷ್ಟಿ ದೊಡ್ಡ ಪಂಡಿತನೆಂದು ಪ್ರಖ್ಯಾತನಾದನು. ವ್ಯಾಸರಾಯ ಮಠದ ಸ್ವಾಮಿಯಾದನು. ವಿಜಯನಗರದ ದೊರೆಗಳಿಂದ ವಿಶೇಷ ಮನ್ನಣೆ ಪಡೆದಂಥ ಘನ ಆಚಾರ್ಯ, ವಿಜಯನಗರದಲ್ಲಿಯ ಸಿಂಹಾಸನಕ್ಕೆ ಒದಗಲಿದ್ದ "ಕುಹಯೋಗ" ವನ್ನು ತಾವು ಅದರ ಮೇಲೆ ಕುಳಿತು, ಅದನ್ನು ದೂರೀಕರಿಸಿದ್ದಲ್ಲದೇ ಶ್ರೀ ಕೃಷ್ಣದೇವರಾಯನನ್ನು ಬದುಕಿಸಿದನು. ಕ್ಷೇತ್ರ ತೇಜವು ಕ್ಷೀಣವಾಗುವಾಗ ಬ್ರಹ್ಮತೇಜವು ಮಂಬಂದು ಶಕ್ತಿಯನ್ನು ನೀಡುತ್ತದೆ ಎಂಬುದನ್ನು ವ್ಯಾಸರಾಯನು ತೋರಿಸಿದ್ದಾನೆ.

ವ್ಯಾಸರಾಯನು ಆ ಸಾಮ್ರಾಜ್ಯದ ವೈಭವಕಾಲದಲ್ಲಿ ಅಂತರೀಯ ಶಕ್ತಿಯ ಆಧಾರವಾಗಿ ಆ ಸಾಮ್ರಾಜ್ಯವನ್ನು ಮತ್ತಿಷ್ಟು ವೈಭವೀ ಕರಿಸರಿಸುವುದಕ್ಕೆ ಕಾರಣಿ ಭೂತನಾದನು.

ಸಂಸ್ಕೃತದಲ್ಲಿ ವ್ಯಾಸರಾಯನ ತರ್ಕಶಾಸ್ತ್ರ ಹಾಗೂ ಮುದ್ವಮಠದ ಪ್ರತಿಪಾದಕ ಗ್ರಂಥಗಳು ಪ್ರಸಿದ್ದವಾಗಿದೆ. ಕನ್ನಡದಲ್ಲಿ ದೇವರ ನಾಮಗಳನ್ನು ಬರೆದು ಬರೆಯಿಸಿ ತನ್ನ ಗುರು ಅಪಾರ ರಾಯನ ಹೊಸ ಸಂಪ್ರದಾಯದಿಂದ ಶ್ರದ್ದೆಯಿಂದ ಮುಂದುವರಿಸಿದನು. ವ್ಯಾಸಕೂಟ ಹಾಗೂ ದಾಸಕೂಡ ಎಂಬ ಎರಡು ತಿಸಿಲುಗಳು ಆ ಶ್ರದ್ಧೆಗೆ ವಡೆದವು.

ವ್ಯಾಸರಾಯನು ಬರೆದ ಕೀರ್ತನೆಗಳು ಈಗ ಲುಪ್ತವಾಗಿವೆ. ಉಪಶಬ್ದವಾದವು ನೂರಾರು ಮಾತ್ರ. ಅವುಗಳಲ್ಲಿ ಅವನ ಭಕ್ತಿ ನಿರ್ಭರತ ಸಂಗೀತಜ್ಞಾನ ಜನತಾ ದೃಷ್ಟಿ ಹೊಂದಿವೆ.'ವೃತ್ತನಾಮ' ಎಂಬ ಹೆಸರಿನ ಪ್ರಕಾರವು ಶ್ರೀಪಾದರಾಯನಿಂದ ಆರಂಭವಾಗಿ ವ್ಯಾಸರಾಯನ ಕಾಲದಲ್ಲಿ ಹೆಚ್ಚು ರೂಢವಾಯಿತು. ಈ ವೃತ್ತನಾಮದಲ್ಲಿ ವ್ಯಾಸರಾಯನು ಭಗವದ್ಗೀತೆಯನ್ನು ಬರೆದಿದ್ದಾನೆ.

"ಗಾತ್ರವೇ ಮಂದಿರ ಹೃದಯವೇ ಮಂಟಪ ನೇತ್ರವೇ ಮಹದೀಪ"

ಎಂಬ ಮಾನ ಪೂಜೆಯ ರೂಪಗಳನ್ನು ನಿವೇದಿಸಿದ್ದಾರೆ. ಮಾನವ ಪೂಜೆ ಪ್ರಸ್ತುಪಿಸಿದೆ ಮಹಾವ್ಯಕ್ತಿಯಿಂದು ವ್ಯಾಸರಾಯನನ್ನು ನೆನೆಯಬೇಕು.**

*ರಾ.ಸ್ವಾ.ಪಂಚಮುಖಿ:ಹರಿದಾಸ ಸಾಹಿತ್ಯ ಪುಟ:55

**ರಂ.ಶ್ರೀ.ಮುಗಳಿ:ಕನ್ನಡ ಸಾಹಿತ್ಯ ಚರಿತ್ರೆ. ಪುಟ:299–300

ಕನಕದಾಸರು

ಧಾರವಾಡ ಜಿಲ್ಲೆಯ ಬಾಡ ಎಂಬ ಹಳ್ಳಿಯಲ್ಲಿ ಕುರುಬರ ಕುಲದಲ್ಲಿ ಜನಿಸಿ ಬೆಳೆದು ದಂಡನಾಯಕನಾದನೆಂದೂ, ಯಾವುದೋ ಬಂದು ಯುದ್ಧಕಾಲದಲ್ಲಿ ಸಂಸಾರದ ಬಗ್ಗೆ ಉಪೇಕ್ಷ ಉಂಟಾಗಿ ಭಕ್ತನಾದನೆಂದು ದಾಖಲಿಸಲ್ಪಟ್ಟಿದೆ. ಕಾಗಿನೆಲೆಯಲ್ಲಿ ಆದಿಕೇಶವನ ದೇವಾಲಯವನ್ನು ಕಟ್ಟಿಸಿ ಅವನನ್ನೇ ತನ್ನ ಆರಾಧ್ಯ ದೈವವನ್ನಾಗಿ ಮಾಡಿಕೊಂಡನು. ಪುರಂದರದಾಸ ಸರ್ವಸ್ವತ್ಯಾಗ ಮಾಡಿ ವಿಜಯನಗರದಲ್ಲಿ ಬಳಿದರೆ ಕನಕದಾಸ ತನ್ನ ನಾಯಕತ್ವವನ್ನು ತೊರೆದು ತನ್ನ ಬಡತನ ವೃತ್ತವನ್ನು ಕೈಗೊಂಡು ವ್ಯಾಸರಾಯನ ಅಚ್ಚುಮೆಚ್ಚಿಗೆ ಶಿಷ್ಯನಾದನು ಹಾಗೂ ಮದ್ವಪರಂಪರೆಯ ಭಕ್ತನಾದನು.

ಕನಕದಾಸನು ಬೆಳೆದಂತೆ ಎಲ್ಲ ಮೇಲಾದ ಭಗವತ್ ದೃಷ್ಟಿಯನ್ನು ಇಟ್ಟುಕೊಂಡು 'ಭಾಗವತ"ಸಿದ್ಧಾಂತವನ್ನು ಸ್ಥಿರಪಡಿಸಿಕೊಂಡನು. ಯಾವದೊಂದು ಪಡಿಯಚ್ಚಿನಲ್ಲಿ ಬೆಳೆಯದೆ ಎಲ್ಲ ಮತದ ಸಾರಗ್ರಾಹಿಯಾಗಿ ಪರಮ ಭಕ್ತನಾದನು.

ಕನಕ ಸಾಹಿತ್ಯವು ಆತ ರಚಿಸಿದ 1. ಹರಿಭಕ್ತಿಸಾರ 2. ರಾಮಚರಿತೆ, 3.ನಳಚರಿತ್ರೆ, ಮೋಹನ ತರಂಗಿಣಿ ಹಾಗೂ 5. ಕೃಷ್ಣಚರಿತೆ, ಕವಿಶಕ್ತಿಯ ಮೇಲ್ರತಗತಿಯನ್ನು ದರ್ಶಿಸುತ್ತದೆ.ಆತನ ಕಾವ್ಯಗಳಲ್ಲಿ ಹರಿಭಕ್ತಿಯ ಹರಿವು ಇದೆ, ಇದು ಮಾನವತೆಯ ಗುಣಮಾಲ್ಯ ತೋರುತ್ತದೆ, ಹಾಗೇಗೇ ಸಾಮಾಜಿಕ ವ್ಯವಸ್ಥೆಯ ಅಂಕು ಡೊಂಕುಗಳನ್ನು ಚಿತ್ರಿಸಿ ಸಮೃದ್ಧ ಸುಗುಣ ನಿರ್ಮಾಣಕ್ಕೆ ಮಾರ್ಗ ದರ್ಶನವಾಗಿದೆ.

"ಪುರಂದರ ದಾಸನಂತೆ, ಆದರೂ ಕೆಲಮಟ್ಟಿಗೆ ಬೇರೆಯಾಇ ಕನಕದಾಸನು ತನ್ನ ಜೀವನ ಮತ್ತು ಸಾಹಿತ್ಯಗಳ ಸಿದ್ಧಿಯಿಂದ ಕನ್ನಡಿಗರಿಗೆ ಬೆಳಕನ್ನು ನೀಡುವ ಚಿರಂತನವಾದ ಸಂಸ್ಕೃತಿ ಪ್ರದೀಪಗಳಲ್ಲಿ ಒಂದಾಗಿದ್ದಾನೆ.

*ಪ್ರೋ॥ರಂ.ಶ್ರೀ.ಮುಗಳಿ:ಕನ್ನಡ ಸಾಹಿತ್ಯ ಚರಿತ್ರೆ ಪುಟ–308–309

**ರಾ.ಸ್ವಾ.ಪಂಚಮುಖಿ:ಹರಿದಾಸ ಸಾಹಿತ್ಯ.ಪುಟ–66

ವೈಷ್ಣವ ಆಚಾರ್ಯರಲ್ಲಿ ಶ್ರೇಷ್ಠ ಆಚಾರ್ಯ ಶ್ರೀ ರಾಘವೇಂದ್ರ ಸ್ವಾಮಿಗಳು

"ಪೂಜ್ಯಾಯ ರಾಘವೇಂದ್ರಾಯ ಸತ್ಯಧರ್ಮರತಾಯಚೆ ಭಜತಾಂ ಕಲ್ಪವೃಷಯ ನಮತಾಂ ಕಾಮದೇನುವೇ॥ ಗುರು ಶ್ರೀ ರಾಘವೇಂದ್ರಾಯ ತ್ವಾಂಮಹಂ ಶರಣಂ ಗತಃ ಆಯುದಾರೋಗ್ಯಮೈಶ್ವಯಣ ದತ್ವಾತ್ವಂ ರಕ್ಷ ರಕ್ಷ ಮಾಂ"*

ಇದನ್ನು ರಚಿಸಿದವರು ಅಪ್ಪಣ್ಣ ಪಂಡಿತರು ಸದಾ ಶ್ರೀ ರಾಘವೇಂದ್ರರ ಜೋತೆಗೆ ಇವರು ಇರುತ್ತಿದ್ದರು. ಈ ಶ್ಲೋಕಗಳು ಜನಮನದಲ್ಲಿ ಸದಾ ಪಠಿಸಲ್ಪಡುತ್ತದೆ.

ಶ್ರೀ ಗುರುರಾಯರು 'ಕುಂಭಕೋಣಂ' 'ತಮಿಳುನಾಡು' ಕ್ರಿ.ಶ. 1500 ರಲ್ಲಿ ವಿದ್ವಾಂಸ ಆದರೆ ಕಡು ಬಡವಾಸ ಬ್ರಾಹ್ಮಣ ಮನೇತನದಲ್ಲಿ ಜನಿಸಿದರು. ವೇದ ವೇದಾಂಗಗಳ ಅಭ್ಯಾಸ ಹೆಂಡತಿಯನ್ನು ದುರ್ಮರಣ ಕಳೆದು ಕೊಂಡದ್ದು ಮಗನನ್ನು (8 ವರ್ಷದವ) ಕರೆದುಕೊಂಡು ಮನೆ ಬಿಟ್ಟು ಹೊರಟುದುದು. ಶ್ರೀರಂಗಂ, ಆದವಾಗಿ ತಂಜಾವೂರಗಳಲ್ಲಿ ವಾಸ್ತವ್ಯ, ಶಾಸ್ತ್ರ ಅಭ್ಯಾಸ ಮಂತ್ರಾಲಯಕ್ಕೆ ಮಠ ಸ್ಥಾಪನೆ ಜನೋದ್ದಾರದ ಕಾರ್ಯಗಳು ಧರ್ಮಯಾತ್ರ ಹಲವು ಕಡೆ ಗ್ರಂಥಗಳ ರಚನೆ ಆದವಾಗಿ ನವಾಬರಿಂದ ಬಿಜಾಪುರ ಆದಿಶ್ಯರಿಂದ ಗುರು ಪೂಜೆ ಸ್ವೀಕೃತ ಕ್ರಿ.ಶ.1568 ರಲ್ಲಿ ವೃಂದಾವನ ಪ್ರವೇಶ ಮಂತ್ರಾಲಯದಲ್ಲಿ.

ಕಲಿಯುಗದ ಕಾಮಧೇನು ಕಲ್ಪತರು ಶ್ರೀ ರಾಘತೀಂದ್ರ ಸ್ವಾಮಿಗಳು ಹರಿಭಕ್ತ ಪ್ರಹ್ಲಾದನ ಅವತಾರಿಗಳು, ವಿದ್ಯದೇವಿ ಸರಸ್ವತಿ ಇವರಿಗೆ ವಲಿದ್ದಾಳೆ. ಬಲಭಾಗದಲ್ಲಿ ಶ್ರೀ ರಾಮಚಂದ್ರ ಎಡಭಾಗದಲ್ಲಿ ಶ್ರೀ ವ್ಯಾಸರಾಯರು, ಬೆನ್ನಿನಲ್ಲಿ ಶ್ರೀ ಕೃಷ್ಣ ನಿಂತು ಇವರ ನುಡಿಯೆಲ್ಲವೂ ವೇದ, ಶ್ರೀ ಸುಧೀಂದ್ರ ಕರಕಮಲ ಸಂಜಾತರಾದ ಇವರು ಭಕ್ತರ ಕರೆಗ ಓಡೋಡಿಬಂದು ಸಂಕಟ ನಿವಾರಿಸುವ ಮಹಿಮರು, ಅವರು ಸಮಾಧಿಸ್ಥರಾಗುವ ಮೊದಲೇ ಭಕ್ತ ವೃಂದಕ್ಕೆ ಹೇಳಿದರು. "ನಾನು 700 ವರುಷ ನಿದೊಡನೆ ತೇಜೋ ರೂಪದಲ್ಲಿ ಇರುತ್ತೇನೆ", ನನ್ನನ್ನು ಸ್ಮರಿಸಿದ ನಿಮ್ಮ ಜೊತೆಗೇಗೆ ಇರುತ್ತೇನೆ. ನಿಮ್ಮ ಸಂಕ್ಷ್ಟಗಳನ್ನು ದೂರ ಮಾಡುತ್ತೇನೆ.

ಅವರ ಕೆಲವು ಅಮೃತ ನುಡಿಗಳು ನಮಗೆಲ್ಲ ದಾರಿ ತೋರುತ್ತದೆ. ಸರಿಯಾದ ಜೀವನ ಕ್ರಮವಿರಲಿ, ಮಾಡಿದ ಎಲ್ಲಾ ಕಾರ್ಯಗಳನ್ನು ಭಗವಂತನಿಗೆ ಅರ್ಪಿಸಿರಿ. ಜೀವನವೇ ಒಂದು ಪ್ರಾರ್ಥನೆ ಪವಾಡ ಸೃಷ್ಟಿಸುವವರಿಂದ ದೂರ ಇರಿ. ಪವಾಡಕ್ಕಿಂತ ಸುಜ್ಞಾನ ದೊಡ್ಡದು ಹಿರಿಯರಲ್ಲಿ ಭಕ್ತಿ ಇಡಿ. ತಾಯಿ ತಂದೆ ಗುರುಗಳನ್ನು ಗೌರವಿಸಿ. ಶಾಂತಿ ಸಮಾಧಾಣದಿಂದ ಜೀವಿಸಿರಿ ಯಾರಿಗೂ ನೋವು ಕೊಡಬೇಡಿ ಅಹಂಕಾರ ತೊರೆಯಿರಿ. ಸ್ವಾರ್ಥಿಗಳಾದ ಬೇಡಿ, ಕ್ಷಮೆ ಇರಲಿ ನಾವೆಲ್ಲ ಹಿರಿಯ ಸೇವಕರು.

ಶ್ರೀ ರಾಯರ ಕೃತಿ"'ಅಣುಭಾಷ' ಶ್ರೀಮದ್ವಾಚಾರ್ಯರ ಬ್ರಹ್ಮ ಸೂತ್ರಬಾಷ್ಯದ ಅನುವ್ಯಾಖ್ಯಾನೆ ತತ್ವಮಂಜರಿ ಮತ್ತೊಂದು ರಾಯರ ಉದಾಮ ಗ್ರಂಥ ವೇದವ್ಯಾಸರ 504 ಸೂತ್ರತಳ ಸಾರಸಂಗ್ರಹ ಇವು ದರ್ಶನಿಕ ನಿಧಿಗಳು.

**ಅಪ್ಪಣ್ಣ ಪಂಡಿತರು:ಶ್ರೀ ರಾಘವೇಂದ್ರರ ಜೊತೆಗೆ ಸದಾಕಾಲ ಇರುತ್ತಿದ್ದರು.

**ಪ್ರೇಮಾ ಅಚ್ಯುತ:ಶ್ರೀ ರಾಘವೇಂದ್ರರ ಉಪದೇಶಾಮೃತ.ಸಂತ. 12,05,16 ಪುಟ4

***ಡಾ॥ಕೆ.ಎಸ್.ಸುಮನ, ಕಲ್ಪತರು.ಗುರು ರಾಯರ ಗ್ರಂತಮಾಲಿಕೆ ಪುಟ–15–16.

ಶ್ರೀ ಜಗನ್ನಾಥದಾಸರು (ಕ್ರಿ,ಶ,1649)

ದಾಸವರ್ಯದಯಾಯುಕ್ತಂ, ದೂರೀಕೃತ ದುರಾಶಿಷಮ್ ಹರಿಕ್ರತಾಮೃತ ವಕ್ತಾರಂ, ಜಗನ್ನಾಥಗುರುಂಭಜೇ

ಜನನ್ನಾಥ ಜಗನ್ನಾಥ ಜಗನ್ನಾಥೇತಿ ನೀತ್ಯಶಃ ಸದಾಸ್ಮರತೆ ಸ;ಶ್ರೀ ಜಗನ್ನಾಥಂ ಪ್ರಪತೇತ"

ಜಗನ್ನಾಥದಾಸರು ಭಕ್ತಿ ಸಾಹಿತ್ಯದಲ್ಲಿ ಅಚ್ಚಳಿಯದ ಮಹಾಶಕ್ತಿ, ಅವರು ಅದ್ವೇತಮತ ಸ್ಥಾಪಕರಾದ ಪೀಠದಲ್ಲಿ ಬಂದ ವಿದ್ಯಾರಣ್ಯ ಸ್ವಾಮಿಗಳಂತೆ ವಿಶಿಷ್ಟದ್ವೈತಮತ ಸ್ಥಾಪಕರಾದ ರಾಮಾಣುಜಾಚಾರ್ಯರ ಪೀಠದಲ್ಲಿ ಬಂದ ವೇದಾಂತ ದೇಶಿಕರಂತೆ ಪುರಂದರದಾಸರಿಂದ ಪುನರುದೃತವಾದ ಭಾಗವತ ಧರ್ಮಕ್ಕೆ ನವ ಚೈತನ್ಯ ಉಂಟು ಮಾಡಿದ ಮಹಾಪುರುಷರು,

ಮದ್ವಾಚಾರ್ಯರ ಕಾಳದಿಂದಲೇ ಆರಂಭವಾದ ದಾಸಪರಂಪರೆಯು ಎರಡನೆಯ ಹಂತದಲ್ಲಿ ವ್ಯಾಸರಾಯರು ಪರುಂದರ ದಾಸರುಗಳಿಂದ ಉನ್ನತಿಯನ್ನು ಹೊಂದಿ ಮೂರನೇಯ ಹಂತದಲ್ಲಿ ವಿಜಯದಾಸರು ಗೋಪಾಳದಾಸರು, ಜಗನ್ನಾಥದಾಸರು ಮೊದಲಾದವರಿಂದ ವಿಸ್ತಿರವಾಗಿ ನಾಲ್ಕನೆಯ ಹಂತದಲ್ಲಿ ಕೇವಲ ಜಗನ್ನಾಥದಾಸರು ಮೊದಲಾದವರಿಂದ ಪ್ರಾಣೇಶದಾಸರು ಗುಂಪಗೊಳಗೊಂಡು ಅರಳಲಕ್ಕೆ ಸಾಧ್ಯವಾಯಿತೆಂದು ಸ್ಪಷ್ಟೀಕರಿಸಬಹುದು.

ದಾಸ ಸಾಹಿತ್ಯವು ಕನ್ನಡ ಸಾಹಿತ್ಯದ ಅದ್ಬುತ ಶಕ್ತಿಯಗಳೊಂದು ಹಿಮಾಲಯದ ಎತ್ತರದಿಂದ ಹುಟ್ಟಿ ಬಂದ 1 ಗಂಟೆ ಬಯಲು ಪ್ರದೇಶದಲ್ಲಿ ನಿರರ್ಗಳವಾಗಿ ಹರಿದು ಜನಶಕ್ತಿಗೆ ಸಂಜಿವಿಯಾಗುವಂತೆ. ಇದು ಚಿತ್ತದ ಶುದ್ದಿಯಿಂದ ಹರಿದು ಜನ ಸಾಮನ್ಯದ ಹೃದಯವನನು ಬೆಳಗಿಸುವ ಸಂಜೀವಿನಿಯಾಗಿದೆ.

ಜಗನ್ನಾಥ ದಾಸರ ತಂದೆ ನರಸಿಂಹಾಚಾರ್ಯ ತಾಯಿಯ ಹೆಸರು ಲಕ್ಷ್ಮಿಬಾಯಿ ಇವರ ತಂದೆಯವರು ರಾಯಚೂರ ಜಿಲ್ಲೆಯ ಮನವೀ ತಾಲೂಕಿನ ಭಾಗ್ಯವತ್ತೆ (ಬೇಗವಾಟ) ಎಂಬ ಗ್ರಾಮದ ಶಾನುಬೋಗರು. ಜಗನ್ನಾಥ ದಾಸರು ಬದುಕಿನಲ್ಲಿ ಪರಿವರ್ತನೆಗೊಂಡು ಪ್ರಬುದ್ಧ ದಾಸರಾಯರು(ಕ್ರಿ.ಶ.1649)

ಮೊದಮೊದಲು ಕನ್ನಡವನ್ನು ಹೀಮಾಳಿಸುತ್ತಿದ್ದ ಈ ಶ್ರೇಷ್ಟರು ವಿಜಯದಾಸ ಹಾಗೂ ಗೋಪಾಲದಾಸರ ಉಪದೇಶದಂತೆ 'ತಂತ್ರಸಾಂ' ತತ್ವಸುವಾಲಿ, ಹರಿತಥಾಮೃತಸಾರ, ಶೀತಾ ಬ್ರಹ್ಮಸೂತ್ರ ದಶೋಪನಿಷತ್ತುಗಳನ್ನು ಕನ್ನಡಿಸಿದ್ದಾರೆ. ಇವರು ಕನ್ನಡ ಸಂಸ್ಕೃತಿ ಚರಿತ್ರೆಯಲ್ಲಿ ಮನೆ ಮಾತಾಗಿದ್ದಾರೆ.

*ಪ್ರೋ॥ವಸಂತ ಕುಷ್ಟಗಿ:ದಾಸ ಸಾಹಿತ್ಯದ ತವನಿಧಿಯಲ್ಲಿ ಪುಟ:288–289

**ಅದೇ:ಪುಟ:290–291

***ಮಾಸ್ತಿ ವೆಂಕಟೇಶ ಅಯ್ಯಂಗಾರ:ವಿಮರ್ಶೇ ಪುಟ.29

ಉಪಸಂಹಾರ:– ಅಂತತ:ಹರಿದಾಸ ಸಾಹಿತ್ಯವೆಂದರೆ ಒಂದು ಮಹಾಸಾಗರವಿದ್ದಂತೆ, ಅದರಲ್ಲಿ ಸ್ವಾತಿ ಮುತ್ತುಗಳಷ್ಟೋ

ರತ್ನಗಳೆಷ್ಟೋ॥ ಈ ಪ್ರಬಂಧದಲ್ಲಿ ನಾನರಸಿದಂತೆ, ಕೆಲವೇ ಪ್ರಮುಖ ಹರಿದಾಸರನ್ನು ದೃಷ್ಟಾಂತಿಸಲಾಗಿದೆ. ಕ್ಷಮಿಸಿ ಇನ್ನುಳಿದ ಹರಿದಾಸರ ನಥನದ ಬಗ್ಗೆ, ಮುಂಬರುವ ಸಂಶೋಧಕರಿಗೆ ಬಿಟ್ಟು ಕೊಡುತ್ತೇನೆ.

ಈ ವಿಜಯನಗರ ಕಾಲಘಟ್ಟದಲ್ಲಿ ಬರುವ ದಾಸಶ್ರೇಷ್ಠರು ಶ್ರೇಷ್ಠ ಕನ್ನಡ ನುಡಿಯಲ್ಲಿ, ಶ್ರೇಷ್ಠ ಭಾವಸಾಹಿತ್ಯವನ್ನು ನಿರ್ಮಿಸಿದ್ದಾರೆಂಬುದಕ್ಕೆ ಎರಡು ಮಾತಿಲ್ಲ. ಈ ದಾಸಶ್ರೇಷ್ಠದ ಜೀವನ ದೃಷ್ಟಾಂತಗಳನ್ನು ಪರಿಗಣಿಸುವ ಮನದ ತಡವಡಕೆಯಲ್ಲಿ ನಾಣಿದ್ದಾಗ, ನನಗೆ ಇಡಿಯಾಗಿ ಕಂಡುಬಂದುದೇನೆಂದರೆ, ಮುಷ್ಯನ ಜ್ಞಾನವಿಕಾಸಕ್ಕೆ ವೈಯಕ್ತಿಕ ಪರಿಶ್ರಮವಷ್ಟೇ ಅಲ್ಲ, ಸುತ್ತಲಿನ ಪರಿಸರವೂ ಕಾರಣ, ಬಳೀತು ಕೆಡಕುಗಳ ಪಾಪ ಪುಣ್ಯಗಳ ನೀತಿ ಆ ನೀತಿಗಳ ಶೀಲಾಶೀಲಗಳ ಪರಿಷ್ಕರಣೆಯು ಅಷ್ಟೇ ಮಹತ್ವದ ಪಾತ್ರ ವಹಿಸುತ್ತದೆ. ಅನುಭವದಿಂದ ಅನುಭಾವವಲ್ಲವೇ?

ಹಿಮೂರನೇ ಶತಮಾನದಿಂದ ಪ್ರಾರಂಭವಾದ ಹರಿದಾಸ ದಾಸಸಂಪ್ರದಾಯವು ಬೆಳೆಯುತ್ತ ಬೆಳೆಯುತ್ತ ಹೋಗಿ ವಿಜಯನಗರ ಕಾಲಘಟ್ಟದಲ್ಲಿ ಪರಾಶೇಷ್ಠೆಯನ್ನು ಹೊಂದಿತು. ಭಾಗವತ ಧರ್ಮವನ್ನು ಮನನ ಮಾಡಿಕೊಂದು ಸಾವಿರಾರು ಹರಿದಾಸರು, ಸಮಾಜದ ಬುಕಿನಲ್ಲಿ ಆಗಾಗ್ಗೆ ಅವಿವೇಕದ ಮೋಡಗಳು ಕವಿದಾಸ, ಸಮಾಜದ ಸುಂದರ ಶಾಂತ ದೈವತ ಬದುಕನ್ನು ನಿರ್ಮಾಣ ಮಾಡಲು, ವಿವೇಕದ ವರ್ಷಋತುವನ್ನು ತಂದಿದ್ದಾರೆ. ಸಮಾಜದ ನಿರಂತರ ಆರೋಗ್ಯ ಕಾಪಾಡಲು ದಂಡಿಗೆ ಬೆತ್ತ ಹಿಡಿದು, ಭಿಕ್ಷನ್ನದಿಂದ ಬದುಕಿ ಹಂಗಿನ ಮನೆಗಿಂತ ಹಿಂಗಡದ ನುಡಿಲೇಸು, ಮಾನವ ಜನದೊಡ್ಡದು ಇದ್ದ ಹಾನಿ ಮಾಡಲು ಬೇಡ ಹುಚ್ಚಪ್ಪಗಳಿರಾ, "ಕುಲಕುಲವೆಂದು ಬಡದಾಡ ಬೇಡಿ ಕುಲ ಯಾವುದು ಹೇಳಿ," ಬೆನ್ನುತಟ್ಟಿದ್ದಾರೆ. ದೇವ ಚಿಂತನದ ಜೋತೆಗೆ "ಪ್ರಯತ್ನಮೇತಮ್ ಆಗ್ರತೋ ನಿಧಾಯಭೂತಿಮಾಪುಮ"ಈಸಬೇಕು ಇದ್ದು ಜಯಸಬೇಕು" ಎಂಬ ತತ್ವವನ್ನು ಅನುಷ್ಠಾನಗೊಳಿಸಲು ಪ್ರೇರೇಪಿಸಿದ್ದಾರೆ.

ಇಂಥ ಚಿಂತನೆಯನ್ನು ಮಾಡಲು ಪ್ರಬಂಧ ಬರೆಯಲು, ನನಗೆ ಅವಕಾಶ ನೀಡಿದ್ದಕ್ಕಾಗಿ ಕರ್ನಾಟಕ ಸರಕಾರದ ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಎಲ್ಲ ಅಧಿಕಾರಿಗಳಿಗೆ ನಮೊನಮಃ

ಓಂ ಶಾಂತಿ

ಆಧಾರಸೂಚಿ

ಡಾ. ದ.ರಾ. ಬೇಂದ್ರೆ : **ಕನ್ನಡದ ಧಾರ್ಮಿಕ ಸಂಸ್ಕೃತಿ** (ವಾನ್‌ಭೂಷಣ–ಹೊಸ ಸಂಪುಟ, ಧಾರವಾಡ.

ಡಾ॥ ವಸಂತ ಕುಷ್ಟಗಿ : **ದಾಸಸಾಹಿತ್ಯದ ತವನಿಧಿಯಲ್ಲಿ** ಬತ್ತೇದೇಶ ಪ್ರಕಾಶನ, ಗುಲಬರ್ಗ.

ವಿದ್ಯಾ ವಿಭೂಷಣ ಶ್ರೀ ಆರ್.ಎಸ್. ಪಂಚಮುಖಿ : **ಹರಿದಾಸ ಸಾಹಿತ್ಯ,** ಕರ್ನಾಟಕ ಇತಿಹಾಸ ಸಂಶೋಧನ ಮಂಡಲಿ, ದಾರವಾಡ.

ಪ್ರೊ॥ ರಂ.ಶ್ರೀ. ಮುಗಳಿ : **ಕನ್ನಡ ಸಾಹಿತ್ಯ ಚರಿತ್ರೆ,** ಗೀತಾ ಬುಕ್ ಹೌಸ್, ಮೈಸೂರು.

ಡಾ॥ ಬೆಟಗೇರಿ ಕೃಷ್ಣಶರ್ಮ (ಸಂ) : **ಪುರಂದರ ದಾಸರ 400ನೇ ವರ್ಷದ ಸ್ಮರಣ ಸಂಚಿಕೆ.**

ಶ್ರೀ ಗೋವಿಂದ ಪೈ, ಕುಮಾರವ್ಯಾಸನ ಕಾಲವಿಚಾರ **(ಕುಮಾರ ವ್ಯಾಸ ಪ್ರಶಸ್ತಿ)**

ಡಾ॥ ಡಿ.ಎಲ್. ನರಸಿಂಹಾಚಾರ್ಯ : **ವಿಜಯನಗರ ಕಾಲದ ಕನ್ನಡ ಸಾಹಿತ್ಯ**

ಡಾ॥ ಎಸ್.ಕೆ. ಜೋಶಿ : 'ಶಿವಶರಣರು, ಹರಿದಾಸರು ಹಾಗೂ ಸೂಫೀ ಸಂತರು' **ಇತಿಹಾಸ ದರ್ಶನ**
ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು

ಚಿತ್ರಗಳು : ಕೃಪೆ : ವಿವಿದ ಮೂಲಗಳಿಂದ ಸಂಗ್ರಹ

37. ಹಂಪಿ ಕುರಿತ ಎರಡು ವಿಶಿಷ್ಟ ಕೈಪಿಡಿಗಳು

– ಪ್ರೊ. ಲಕ್ಷ್ಮಣ್ ತೆಲಗಾವಿ

ಹಂಪಿ ವಿಜಯನಗರ ಸ್ಮಾರಕಗಳನ್ನು ಕುರಿತು ಈವರೆಗೆ ಎಷ್ಟೋ ಕೈಪಿಡಿಗಳು ಪ್ರಕಟಗೊಂಡಿವೆ. ಇವುಗಳಲ್ಲಿ ಉಪಯುಕ್ತವಾದುವೂ ಜನಪ್ರಿಯವಾದವೂ ಸೇರಿವೆ. 19ನೇ ಶತಮಾನದಿಂದಲೂ ಕೆಲವು ಇತಿಹಾಸಕಾರರು ಪ್ರವಾಸಿಗರು ಆಸಕ್ತರು ಕೃತಿಗಳು ಕೈಪಿಡಿ ಬಿಡಿಬರಹಗಳನ್ನು ಪ್ರಕಟಿಸುತ್ತಾ ಬಂದಿದ್ದಾರೆ. ಇಂಥಾ ಪ್ರಕಟಿತ ಕೈಪಿಡಿಗಳನ್ನು ಸಮಗ್ರವಾಗಿ ಗ್ರಹಿಸಿ ವ್ಯವಸ್ಥಿತವಾಗಿ ಪರಿಚಯಿಸುವ ವಿಶ್ಲೇಷಿಸುವ ಪ್ರಯತ್ನ ನಡೆಯದಿರುವುದು ಕಂಡಂತೆಯೇ ಇದೆ. ಹಿಂದಿನಿಂದಲೂ ಪ್ರಕಟಗೊಳ್ಳುತ್ತಾ ಬಂದಿರುವ ಕೈಪಿಡಿಗಳಲ್ಲಿ ಕೆಲವು ವಿಶಿಷ್ಟವಾಗಿದ್ದು, ಆಯಾ ಕಾಲದ ಅಗತ್ಯೆಗಳಿಗೆ ತಕ್ಕಂತೆ ಅವು ಪ್ರಯೋಜನಕ್ಕೆ ಬಂದಿವೆ. ಇಂಥಾ ಕೈಪಿಡಿಗಳು ವಿಜಯನಗರ ಇತಿಹಾಸದ ಬೆಳವಣಿಗೆ ಪ್ರಚಾರಗಳಿಗೆ ಎಷ್ಟರಮಟ್ಟಿಗೆ ನೆರವಾಗಿರುವೆಂಬುದನ್ನು ಅರಿತುಕೊಳ್ಳುವುದು ವಿಜಯನಗರ ಚರಿತ್ರಲೇಖನ ಶಾಸ್ತ್ರಕ್ಕೆ (Vijayanagara Historiography) ಸಂಬಂಧಿಸಿದ ಚರ್ಚೆಯಾಗುತ್ತದೆ.

ಪ್ರಸ್ತುತ ಪ್ರಬಂಧದಲ್ಲಿ ಎರಡು ವಿಶಿಷ್ಟ ಆಂಗ್ಲಭಾಷಾ ಕೈಪಿಡಿಗಳನನು ಉದಾಹರಿಸುವುದರೊಡನೆ ಇಂಥಾ ಪ್ರಯತ್ನವನ್ನು ಮುಂದುವರೆಸಬಹುದಾಗಿದೆ. ಈ ಎರಡು ಕೈಪಿಡಿಗಳೆಂದರೆ

I. H.G.Carpenter(Publisher), 1936, Vijayanagara City of Victory (A History of the Hampi Ruins), The madras & Southern Mahratta Railway co., Ltd., Madras.

II. A.K. Balasundaram, 1941, NEVER TO BE FORGOTTEN HAMPI RUINS IN PICTURES (Relics of the Glory & Grandeur of the Vijayanagar Empire in Pictures), Rayalaseena Krishnadevaraya Publishing Work, Anantapur.

ಈ ಮೇಲಿನ ಕೈಪಿಡಿಗಳ ಪರಿಶೀಲನೆಯ ಹಿನ್ನಲೆಯಲ್ಲಿ ಇಲ್ಲಿ ಪ್ರಸ್ತಾಪಿಸಬಹುದಾದ ಕೆಲವು ವಿಚಾರಗಳಿವೆ. 1856ರಲ್ಲಿ ಜೆ.ಗ್ರೀನ್ ಲಾ ಅವರು ಹಂಪಿ ಸ್ಮಾರಕಗಳ ಛಾಯಾಚಿತ್ರಗಳ ಸಂಕಲನ ಹೊರತಂದರು. ಈ ಛಾಯಾಚಿತ್ರ ಸಂಕಲನದ ಪರಿಷ್ಕೃತ ಮರು ಪ್ರಯತ್ನ ನಡೆದುದು ಜಾನ್ ಗಾಲಿಂಗ್ಸ್ ಅವರಿಂದ 1983 ರಲ್ಲಿ 1879ರಲ್ಲಿ ಎಡ್ವರ್ಡ್ ಈಸ್ಟ್‌ವಿಕ್ ಅವರು ಲಂಡನ್‌ನಿಂದ 'Murray's Hand book of the Madras Presidency' (2ನೇ ಆವೃತ್ತಿ) ಎಂಬ ಕೈಪಿಡಿಯನ್ನು ಹೊರತಂದರು. ಈಸ್ಟ್‌ವಿಕ್ 1878 ರಲ್ಲಿ ಹಂಪಿಯನ್ನು ಸಂದರ್ಶಿಸಿದ್ದರಲ್ಲದೆ, ಹಂಪಿ ಸ್ಮಾರಕಗಳೊಡನೆ ತಾವು ತಂಗಿದ್ದ ಕಮಲಾಪುರದ ಪ್ರವಾಸಿಮಂದಿರದ ಬಗೆಗೂ ಪ್ರಸ್ತಾಪಿಸಿದ್ದಾರೆ. ಡಾ. ವಸುಂಧರಾ ಫಿಲಿಯೋಜಾ ಅವರ ಪ್ರಕಾರ, ಹಂಪಿ ಸ್ಮಾರಕಗಳನ್ನು ಕುರಿತು ಎಡ್ವರ್ಡ್ ಈಸ್ಟ್ವಿಕ್ ಅವರು ನೀಡಿರುವ ವಿವರಣೆಯೇ ಖಂಡಿತವಾಗಿಯೂ ಹಂಪಿ ಕುರಿತ ಮೊಟ್ಟಮೊದಲು ಆಂಗ್ಲ ಕೈಪಿಡಿಯಾಗಿದೆ.

ಕನ್ನಡದ ಮಟ್ಟಿಗೆ 1919ರಲ್ಲಿ ಪ್ರಕಟಗೊಂಡ ಕೆ.ರಾಮಸ್ವಾಮಯ್ಯಂಗಾರ್ ಅವರ 'ಜೀರ್ಣವಿಜಯನಗರಾದರ್ಶಂ' ಎಂಬುದು ಹಂಪಿ ಕುರಿತ ಪ್ರಥಮ ಕೈಪಿಡಿಯಾಗಿದೆಯೆಂದು ತಿಳಿಯಲಾಗಿದ್ದು, ಈ ಕೈಪಿಡಿಯು 2009ರಲ್ಲಿ ಕನ್ನಡ ವಿಶ್ವವಿದ್ಯಾಲಯದಿಂದ ಮರುಪ್ರಕಟಗೊಂಡಿತು. ಇದರ ಮರುಮುದ್ರಣ ಕಾರ್ಯ ಈಡೇರಿದುದು 2015ರಲ್ಲಿ "ಜೀರ್ಣವಿಜಯನಗರಾದರ್ಶಂ' ಪ್ರಕಟಗೊಂಡ ಒಂದು ವರುಷದ ತರುವಾಯ, ಅವರ 'Hampi Ruins-Deseribed and Illustrated' ಕೈಪಿಡಿಯು ಕಲ್ಕತ್ತಾದಿಂದ ಪ್ರಕಟಗೊಂಡಿತು.

ಇನ್ನು ಇಲ್ಲಿ ಪರಿಶೀಲನೆಗೊಳಪಡಿಸಲಾತರುವ ಕೈಪಿಡಿಗಳ ಅಂತರಂಗವನ್ನು ಗಮನಿಸೋಣ.

1. Vijayanagara-City of Victory

* ಪ್ರಸ್ತುತ ಕೈಪಿಡಿಯು ಮದರಾಸು ಸರ್ಕಾರದ ಪುರಾತತ್ವ ಸರ್ವೇಕ್ಷಣ ಇಲಾಖೆಯಲ್ಲಿ ಸೂಪರಿಂಟೆಂಡೆಂಟ್ ಆಗಿದ್ದ ಎ.ಎಚ್.ಲಾಂಗ್‌ಹರ್ಸ್ಟ್ ಅವರ ಕೈಪಿಡಿಯನ್ನಾಧಿರಿಸಿದುದು.
* ಈ ಕೈಪಿಡಿಯನ್ನು ಹೊರತಂದವರು The Madras & Northern Mahratta Railway Co.Ltd ನವರು ಇದರ ಜವಾಬ್ದಾರಿ ಹೊತ್ತವರು ಈ ರೈಲ್ವೆ ಕಂಪನಿಯ Ag. Chief Commercdial Manager ಹೆಚ್.ಹಿ. ಕಾರ್ಪೆಂಟರ್ ಅವರು. 1936ರಲ್ಲಿ ಈ ಕೈಪಿಡಿಯನ್ನು ಡೆಮ್ಮಿ 1/8 ಆಕಾರದಲ್ಲಿ ವಿನ್ಯಾಸಗೊಳಿಸಿ ಮುದ್ರಿಸಿದವರು ಮದರಾಸು ಪಬ್ಲಿಷಿಂಗ್ ಹೌಸ್‌ನವರು.
* "ಸದರ್ನ್ ಮರಾಠಾ ರೇಲ್ವೆ ಕಂಪನಿಯವರು ತಮ್ಮ ಪರವಾಗಿ ಚಿಕ್ಕದಾದರೂ ಚಿತ್ತಾಕರ್ಷಕರಾದ ಐತಿಹಾಸಿಕ ಪುಸ್ತಕವನ್ನು ಹೊರಡಿಸಿ ಅದರ ಸಾವಿರಾರು ಪ್ರತಿಗಳನ್ನು ಪುಕ್ಕಟೆಯಾಗಿ ಹಚಿಚಿದರು" ಎಂಬ ವಿವರಣೆ ದೊರೆಯುತ್ತದೆ 'ವಿಜಯನಗರ ಸ್ಮಾರಕೋತ್ಸವ' (ಪು.17) ಸಂಪುಟದಲ್ಲಿ, ವಿಶೇಷಾಂಶವೆಂದರೆ, ಈ ದಕ್ಷಿಣ ಮರಾಠಾ ರೇಲ್ವೆ ಕಂಪನಿಯವರು ವಿಜಯನಗರ ಸ್ಮಾರಕೋತ್ಸವ ಸಂದರ್ಭದಲ್ಲಿ ಪ್ರಯಾಣಿಕರಿಗೆ ಪ್ರವಾಸದ ದರಗಳಲ್ಲಿ ಸವಲತ್ತುಗಳನ್ನು ಕೊಟ್ಟು ಸಹಕರಿಸಿದರು. ಆಗ ಮದರಾಸಿನಿಂದ ಹಂಪಿಗೆ ಹೋಗಿ ಬರುವ ಮರುಪ್ರಯಾಣದ ರೇಲ್ವೆ ಟಿಕೆಟ್ಟಿನ ಬೆಲೆ ಕೇವಲ 10 ರೂಪಾಯಿ ಇದ್ದಿತು. (ಪು.8)
* ಒಟ್ಟು 20 ಪುಟಗಳ ಈ ಕೈಪಿಡಿಯನ್ನು ರೈಲ್ವೆ ಕಂಪನಿಯವರು Brochure ಎಂತಲೂ Pamphlet ಎಂತಲೂ ಕರೆದಿದ್ದಾರೆ. ಗುಂತಕಲ್ಲಿನಿಂದ ಹುಬ್ಬಳ್ಳಿಗೆ ಸಾಗುವ ಮುಖ್ಯ ಮೀಟರ್‌ಗೇಜ್ ಮಾರ್ಗದಲ್ಲಿ ಪ್ರವಾಸಿಗರು ಹೊಸಪೇಟೆ ರೈಲ್ವೆ ಸ್ಟೇಷನ್‌ನಲ್ಲಿಳಿದು ಹಂಪಿಯನ್ನು ತಲುಪುವ ಬಗೆಗೆ ವಿವರವಾದ ನಕ್ಷೆಯನ್ನು ಪುಸ್ತಿಕೆಯಲ್ಲಿ ಸೇರಿಸಲಾಗಿದೆ.
* ಪೆನ್ಸಿಲ್‌ನಲ್ಲಿ ಮೂಡಿಸಲಾಗಿರುವ ವಿಠ್ಠಲ ದೇವಾಲಯದ ಕಲ್ಲಿನರಥ ಅಚ್ಯುತರಾಯ ದೇವಾಲಯ, ವಿಜಯನಗರದರಸರ ವರಾಹಲಾಂಛನ, ಕೃಷ್ಣದೇವಾಲಯ, ನರಸಿಂಹನ ಶಿಲ್ಪ, ಕಾಮಲುಗೋಪುರಗಳ ಸುಂದರ ರೇಖಾಚಿತ್ರಗಳಿವೆ. ಇವುಗಳನ್ನು ಬಿಡಿಸಿರುವ ಕಲಾವಿದ ತನ್ನ ಹೆಸರನ್ನು 'KVR' ಎಂದು ದಾಖಲಿಸಿದ್ದಾನೆ. ಕೈಪಿಡಿಯಲ್ಲಿ ಒಟ್ಟು 36 ಸ್ಮಾರಕಗಳು ಹಾಗೂ ಒಂದು ನಕ್ಷೆ ಸೇರಿರುವುದು ಪ್ರವಾಸಿಗರ ದೃಷ್ಟಿಯಿಂದ ಉಪಯುಕ್ತವೆನಿಸಿದೆ.
* ಇಪ್ಪತ್ತನೇ ಶತಮಾನದ ಆರಂಭದಲ್ಲಿ ಹಂಪಿಯ ಪ್ರಾಕೃತಿಕ ಪರಿಸರ, ಸ್ಮಾರಕಗಳ ಸ್ಥಿತಿ–ಗತಿ ಪ್ರವಾಸಿಗರು ಪಡಬೇಕಾದ ಪ್ರಯತ್ನ ಮುಖ್ಯವಾಗಿ ಮತಂಗಪರ್ವತದಿಂದ ಕಾನುವ ಸೂರ್ಯಾಸ್ತ; ಹಾಗೂ ಸಾಯಂಕಾಲದ ಬಂಗಾರವರ್ಣದ ಸೂರ್ಯರಶ್ಮಿಯಲ್ಲಿ ಎದ್ದುತೋರುವ ಸ್ಮಾರಕಗಳ ಸೌಂದರ್ಯ ಇತ್ಯಾದಿ ವರ್ಣನೆ ಕುತೂಹಲಕಾರಿಯಾದುದೆನಿಸುತ್ತದೆ. ಪ್ರವಾಸಿಗರು ತಂಗಲು ಇರುವ ವಸತಿ ವ್ಯವಸ್ಥೆ ಕುರಿತು ಇಲ್ಲಿ ಸೂಚನೆ ದೊರಕುತ್ತದೆ.
* ಕಮಲಾಪುರದಲ್ಲಿ ಹಾಳುಬಿದ್ದಿದ್ದ ದೇವಾಲಯವೊಂದನ್ನು ಬಳ್ಳಾರಿ ಜಿಲ್ಲಾ ಕಲೆಕ್ಟರ್ ಆಗಿದ್ದ ಜೆ.ಹೆಚ್.ಮಾಸ್ಟರ್ ಎಂಬವರು ಪ್ರವಾಸಿಮಂದಿರ (Travellers' Rest-House)ವಾಗಿ ಪರಿವರ್ತಿಸಿದ್ದುದನ್ನು ಹಾಗೂ ಪ್ರವಾಸಿಗರಿಗೆ ತಂಗಲು ಇಲ್ಲಿ ಅವಕಾಶ ಕಲ್ಪಿಸಿದುದನ್ನು ಈ ಕೈಪಿಡಿ ಹೇಳುತ್ತದೆ.

ವಿಶೇಷಾಂಶವೆಂದರೆ, ಡಾ.ವಸುಂಧರಾ ಫಿಲಿಯೋಜಾ ಅವರು ಈ ಪ್ರವಾಸಿಮಂದಿರವು ವಿಜಯನಗರ ಶೈಲಿಯ ದೇವಾಲಯವಾಗಿದ್ದು ಇಲ್ಲಿ ನರಸಿಂಹ ದೇವರಿಗೆ ನಿರ್ಮಿಸಿದುದೇ ಆಗಿದ್ದಿರಬೇಕೆಂದು ಸೂಚಿಸಿದ್ದಾರೆ. ಅಲ್ಲದೆ, 1878ರಲ್ಲಿ ಹಂಪಿಯನ್ನು ಸಂದರ್ಶಿಸಿದ್ದ ಎಡ್ವರ್ಡ್ ಈಸ್ಟ್‌ವಿಕ್ ಅವರು, ಹಂಪಿ ಸ್ಮಾರಕಗಳನ್ನು ಕುರಿತ ತಮ್ಮ ಗ್ರಂಥದಲ್ಲಿ ಕಮಲಾಪುರ ಪ್ರವಾಸಿಮಂದಿರ ಬಗೆಗೂ ಪ್ರಸ್ತಾಪಿಸಿದ್ದಾರೆ. ಇವರು ಇಲ್ಲಿ ತಂಗಿದ್ದರೆಂಬುದು ಮುಖ್ಯ. ಹಳೆಯ ದೇವಾಲಯವನ್ನು ಪ್ರವಾಸಿಮಂದಿರವಾಗಿ ಮಾರ್ಪಡಿ ಅದಕ್ಕೆ ಸುಣ್ಣ ಬಳಿಯಲಾಗಿದೆ, ಅದರಲ್ಲಿ ಶಯನಕ್ಕಾಗಿ ಎರಡು ಕೊಠಡಿಗಳಿದ್ದು ಇವುಗಳಲ್ಲಿ ದೊಡ್ಡ ಕೊಠಡಿಯ ಭೋಜನಾಲಯವಾಗಿರುವುದೆಂದು ಬರೆದಿರುವರು. ವಿಜಯನಗರದ ಬಹುಮುಖ್ಯ ದೇವಾಲಯವೊಂದು ಪ್ರವಾಸಿಮಂದಿರವಾಗಿ ತನ್ನ ಮೂಲ ಪಾವಿತ್ರ್ಯ ಮಹತ್ವಗಳನ್ನು ಕಳೆದುಕೊಂಡಿರುವುದು ವಿಷಾದದ ಸಂಗತಿಯನ್ನಲಡ್ಡಿಯಿಲ್ಲ.

* ಪ್ರಸ್ತುತ ಕೈಪಿಡಿಯಲ್ಲಿ ಶಾಸನಗಳ ಹಿನ್ನಲೆಯಲ್ಲಿ ವಿಜಯನಗರದ ಐತಿಹಾಸಿಕ ಹಿನ್ನಲೆಯನ್ನು ನಿರೂಪಿಸಲಾಗಿದ್ದು ಕ್ರಿ.ಶ.1310ರಲ್ಲಿ ದಕ್ಷಿಣಭಾರತದಲ್ಲಿ ಸಂಭವಿಸಿದ ಮಹಮ್ಮದೀಯರ ದಾಳಿ; ಕ್ರಿ.ಶ.1336ರಲ್ಲಿ ವಿಜಯನಗರ ಪಡೆದುಕೊಂಡ ಅಸ್ತಿತ್ವ; ಹಾಗೂ ಕ್ರಿ.ಶ.1565ರಲ್ಲಿ ತಾಳಿಕೋಟೆ (ರಕ್ಕಸಗಿ–ತಂಗಡಗಿ) ಮಹಾಕದನದಲ್ಲಿ ಅನುಭವಿಸಿದ ದುರಂತಾಂತ್ಯ ಹೀಗೆ ಒಂದು ಸಮಗ್ರಚಿತ್ರವನ್ನು ಒದಗಿಸಲೆತ್ನಿಸುತ್ತದೆ. ತಾಳಿಕೋಟೆಯುದ್ಧ ನಡೆದುದು 1565 ಜನವರಿ 23 ರಂದು ಎಂಬುದು ಈ ಕೈಪಿಡಿಗಳಲ್ಲಿ ದಾಖಲಿಸಲಾಗಿದೆ.

* ಹಂಪಿ ಸ್ಮಾರಕೋತ್ಸವದಲ್ಲಿ ಭಾಗವಹಿಸಲು ಆಗಮಿಸುವ ಪ್ರವಾಸಿಗರನ್ನು ಗಮನದಲ್ಲಿರಿಸಿ, ಮದರಾಸಿನ ರೈಲ್ವೆ ಕಂಪನಿಯು ಈ ಕೈಪಿಡಿಯನ್ನು ಸಿದ್ಧಪಡಿಸಿ ಕೊಟ್ಟದು ಪ್ರಶಂಸನೀಯ ಸಂಗತಿ. ಆದರೆ ಇದರಲ್ಲಿ ಹಂಪಿಯ ಸ್ಮಾರಕಗಳ ವಿವರಣೆಗಿಂತಲೂ ಹೆಚ್ಚಾಗಿ ವಿಜಯನಗರ ಇತಿಹಾಸದ ವಿವರಗಳನ್ನು ಸೇರಿಸಲಾಗಿದೆಯೆಂಬುದನ್ನು ಹೇಳದೇ ಇರುವಂತಿಲ್ಲ.

2. Never to be Forgotten Hampi Ruins in Pictures

* 1905ರಲ್ಲಿ ಬಿ. ಸೂರ್ಯನಾರಾಯಣರಾಯರು 'Never to be Forgotten Empire' ಕೃತಿಯನ್ನು ಪ್ರಕಟಿಸಿದಂತೆಯೇ ಅದೇ ಶೀರ್ಷಿಕೆಯನ್ನು ಬಳಸಿಕೊಂಡು ಎ.ಕೆ. ಬಾಲಸುಂದರಮ್ ಎಂಬವರು 1941ರಲ್ಲಿ ಈ ಕೈಪಿಡಿಯನ್ನು ಹೊರತಂದಿರುವರು. ಈ ಲೇಖಕರು ಬಳ್ಳಾರಿಯಲ್ಲಿ ಡಿಸ್ಟ್ರಿಕ್ಟ್ ಬೋರ್ಡ್ ಎಂಜುಕೇಷನಲ್ ಆಫೀಸರ್ ಆಗಿದ್ದು, ತಮ್ಮ ಕೈಪಿಡಿಯ ಮೂಲಕ ತಮ್ಮ ಜಿಲ್ಲೆಯ ವ್ಯಾಪ್ತಿಗೆ ಬರುವ ಹಂಪಿಯ ಇತಿಹಾಸ ಮತ್ತು ಸ್ಮಾರಕಗಳನ್ನು ಪರಿಚಯಿಸಿಕೊಟ್ಟಿದ್ದಾರೆ. ಇವರು ತಮ್ಮ ಈ ಕೈಪಿಡಿಯನ್ನು ಕನ್ನಡದಲ್ಲಿ ವಿಜಯನಗರ ಮಹಾಸಾಮ್ರಾಜ್ಯದ ಶತವೈಭವದ ಚಿತ್ರಗಳು (ಹಾಳು ಹಂಪೆಯ ಗೊಂಬೆಗಳು) ಎಂದು ಕರೆದಿದ್ದಾರೆ. ಕ್ರೌನ್ 1/4 ಆಕಾರದ ಒಟ್ಟು 40 ಪುಟಗಳ ಕೈಪಿಡಿಯಿದು. ಅನಂತಪುರದ ರಾಯಲಸೀಮಾ ಕೃಷ್ಣರಾಯ ಪಬ್ಲಿಷಿಂಗ್ ವರ್ಕ್ಸ್‌ನಿಂದ ಪ್ರಕಟಗೊಂಡಿರುವಂಥಾದ್ದು.

* ಲೇಖಕರು ಇದನ್ನು ಸಚಿತ್ರ ಕೈಪಿಡಿಯೆಂದು ಶೀರ್ಷಿಕೆಯಲ್ಲೆ ಸೂಚಿಸಿರುವುದರಿಂದ, ಈ ಕೈಪಿಡಿ ಒಳಗೊಂಡಿರುವ ರೇಖಾಚಿತ್ರ ಮತ್ತು ಛಾಯಾಚಿತ್ರಗಳತ್ತ ಸಹಜವಾಗಿಯೇ ಗಮನ ಹರಿಯುವಂತಾಗುತ್ತದೆ. ಇದರಲ್ಲಿರುವ ರೇಖಾಚಿತ್ರಗಳ ಸಂಖ್ಯೆ:46, ನಕ್ಷೆಗಳು 2 ಹಾಗೂ ಛಾಯಾಚಿತ್ರಗಳು 16. ಮಹಾನವಮಿ ದಿಬ್ಬದ ಎದುರುಪಾರ್ಶ್ವದ ಉಬ್ಬುಶಿಲ್ಪಗಳ ರೇಖಾಚಿತ್ರಗಳನ್ನು ದೊಡ್ಡಪುಟದಲ್ಲಿ ಸುಂದರವಾಗಿ ಬಿಡಿಸಲಾಗಿದೆ. ಹಾಗೆಯೇ, ಹಜಾರ ರಾಮಸ್ವಾಮಿ ದೇವಾಲಯದೊಳಗಣ ನಾಲ್ಕು ಸ್ತಂಭಗಳಲ್ಲಿರುವ ಶಿಲ್ಪಗಳ ರೇಖಾ ಚಿತ್ರಗಳು ಗಮನ ಸೆಳೆಯುತ್ತದೆ. (ಪ್ರತಿಯೊಂದು ಸ್ತಂಭದ ನಾಲ್ಕು ನುಗ್ಗುಲುಗಳಲ್ಲಿರುವ ಶಿಲ್ಪಗೆತ್ತನೆಗಳ ಯಥಾವತ್ತಾದ ರೇಖಾಚಿತ್ರಗಳು ಪ್ರತ್ಯೇಕ ಪುಟಗಳಲ್ಲಿ 49 ಹಂತಗಳಲ್ಲಿ ಮುದ್ರಿತಗೊಂಡಿದ್ದು ಕಲಾವಿದ್ಯಾರ್ಥಿಗಳಿಗೆ ಹಾಗೂ ಪ್ರವಾಸಿಗರಿಗೆ ಅತ್ಯಂತ ಉಪಯುಕ್ತವಾದುವೆನ್ನಬಹುದು.

* ವಿಜಯನಗರದ ಸಂಕ್ಷಿಪ್ತ ಐತಿಹಾಸಿಕ ಹಿನ್ನಲೆಯೊಡನೆ ಹಂಪಿಯ ಮಾರ್ಗದರ್ಶಿನಕ್ಷೆಯಲ್ಲಿ ಗುರುತಿಸಿರುವ ಸ್ಮಾರಕಗಳ ನೆಲೆಗಳಿಗೆ ಆಯಾ ಸಂಖ್ಯಾನುಸಾರ ಪ್ರತ್ಯೇಕ ಪುಟಗಳಲ್ಲಿ ವಿವರಣೆ ನೀಡಿರುವುದು ಮುಖ್ಯವಾದುದು. ಒಟ್ಟು 47 ಸ್ಮಾರಕನೆಲೆಗಳ ಬಗೆಗೆ ಇಲ್ಲಿ ನಿರೂಪಿಸಲಾಗಿದೆ.
* ಅಚ್ಯುತರಾಯ ದೇವಾಲಯದ ಬಜಾರನ್ನು ಸೂಳೆಬಜಾರು ಎಂತಲೂ ಗುರುತಿಸಲಾಗಿದ್ದು, ಲೇಖಕರು ಇದನ್ನು Dancing Girls Street ಎಂದು ಕರೆದಿದ್ದಾರೆ. ಇಲ್ಲಿದ್ದ ನೃತ್ಯಗಾರತಿಯರಿಂದ ಪ್ರತಿನಿತ್ಯವು 600 ವರಹಗಳು ಅಥವಾ 21,000 ರೂಪಾಯಿಗಳನ್ನು ವಸೂಲು ಮಾಡುತ್ತಿದ್ದು, ಈ ಹಣವು ಹಂಪಿಯ 12000 ನಗರ ರಕ್ಷಕರ (city guards) ವೆಚ್ಚವನ್ನು ನಿರ್ವಹಿಸಲು ಸಾಕಾಗುತ್ತಿದ್ದಿತೆಂಬುದನ್ನು ಇವರು ಇಲ್ಲಿ ಎತ್ತಿಹೇಳಿದ್ದಾರೆ.
* ಈ ಕೈಪಿಡಿಯ ವಿಶೇಷತೆಯಿಂದರೆ, ಹಂಪಿ ವಿಜಯನಗರ ಇತಿಹಾಸದೊಡನೆ, 19ನೇ ಶತಮಾನದಲ್ಲಿ ಹಂಪಿ ಕಮಲಾಪುರಗಳಲ್ಲಿ ಜರುಗಿದ ಮೂರು ವಿಶಿಷ್ಟ ಕಾರ್ಯಕ್ರಮಗಳನ್ನು ಕುರಿತು ದಾಖಲಿಸಿರುವುದು. ಅವುಗಳೆಂದರೆ:–
* 1936ರಿಂದ ಡಿಸೆಂಬರ್ 25 ರಿಂದ 28ರವರೆಗೆ ಹಂಪಿ ವಿರೂಪಾಕ್ಷ ಬಜಾರ್‌ನಲ್ಲಿ ಸಮಾವೇಶಗೊಂಡ ವಿಜಯನಗರ ಸಾಮ್ರಾಜ್ಯ ಷಟ್‌ಶತಮಾನೊತ್ಸವ ಸಮಾರಂಭ (The Sixth Centenary of Vijayanagara Empair) ಹಾಗೂ ವಿಜಯನಗರ ಸ್ಮಾರಕೋತ್ಸವ ಮಂಡಲದ ಪ್ರಸ್ತಾಪ;
* ಕಮಲಾಪುರದ ವಿಜಯನಗರ ಲೈಬ್ರೆರಿಯಲ್ಲಿ ಅನಾವರಣಗೊಂಡ ಶ್ರೀ ಕೃಷ್ಣದೇವರಾಯನ ಎದೆಮಟ್ಟದ ಪುತ್ಥಳಿಯ ಪ್ರಸ್ತಾಪ.
* ವಿರೂಪಾಕ್ಷನ ರಥೋತ್ಸವದ ಪ್ರಸ್ತಾಪ

ವಿಜಯನಗರ ಸ್ಮಾರಕೋತ್ಸವದ ಅಧ್ಯಕ್ಷರಾಗಿದ್ದ ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಡಾ.ಕುರ್ತಕೋಟಿಯವರು ಕಾರಿನಲ್ಲಿ ಆಗಮಿಸುತ್ತಿರುವ ಛಾಯಾ ಚಿತ್ರವನ್ನು ತಮ್ಮ ಕೈಪಿಡಿಯಲ್ಲಿ ಸೇರಿಸಿದ್ದಾರೆ ಲೇಖಕರು. ಅವರು ದಾಖಲಿಸಿರುವಂತೆ, ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಇತಿಹಾಸಾಭಿಮಾನಿಗಳ ಸಂಖ್ಯೆ:40ರಿಂದ 50 ಸಾವಿರ.

ಹಾಗೆಯೇ, ಕಮಲಾಪುರದ ವಿಜಯನಗರ ಲೈಬ್ರೆರಿಯಲ್ಲಿ ಸಿಮೆಂಟ್ನಲ್ಲಿ ಸಿದ್ದಪಡಿಸಿದ್ದ ಶ್ರೀ ಕೃಷ್ಣದೇವರಾಯನ ಎದೆಮಟ್ಟದ ವಿಗ್ರಹವನ್ನು ಅನಾವರಣಗೊಳಿಸಿದ ವಿಚಾರ. ಈ ವಿಗ್ರಹವನ್ನು ಮಾಡಿಸಿಕೊಟ್ಟವರು ಆನೆಗೊಂದಿ ಸಂಸ್ಥಾನದ ಅರಸರಾಗಿದ್ದ ಕೃಷ್ಣದೇವರಾಯರು. ಇದನ್ನು ಸಾರ್ವಜನಿಕ ಕಾರ್ಯಕ್ರಮದಲ್ಲಿ 1941 ಜೂನ್ 1 ರಂದು ಅನಾವರಣಗೊಳಿಸಿದವರು ಸಚಿಡೂರು ಸಂಸ್ಥಾನದ ಮಹಾರಾಜ ಯಶವಂತರಾವ್ ಹಿಂದೂರಾವ್ ಘೋರ್ಪಡೆಯವರು. ಈ ವಿಗ್ರಹವನ್ನು ಕೇವಲ ಹದಿನೈದು ದಿವಸಗಳಲ್ಲಿ ಸಿದ್ಧಪಡಿಸಿಕೊಟ್ಟವರು ಎ.ರಾಮಕೃಷ್ಣನಾಯ್ಡು ಎಂಬ ಸ್ಥಳೀಯ ಕಲಾವಿದರು. ವೇದಿಕೆಯಲ್ಲಿ ಇವರೆಲ್ಲರೂ ಇರುವಂಥಾ ಛಾಯಾಚಿತ್ರವನ್ನು ತಮ್ಮ ಕೈಪಿಡಿಯಲ್ಲಿ ಸೇರಿಸಿ ಉಪಕರಿಸಿದ್ದಾರೆ ಲೇಖಕರು. ಆದರೆ ಕಾಲಚಕ್ರದ ಗತಿಗೆ ಸಿಲುಕಿರುವ ಚರಿತ್ರೆ, ಈ ಶ್ರೀಕೃಷ್ಣದೇವರಾಯನ ವಿಗ್ರಹದ ಮಟ್ಟಿಗೆ ತಿರುವು ಪಡೆದುಕೊಂಡುದನ್ನು ಇಲ್ಲಿ ನೋಡಬಹುದು. 1941 ಜೂನ್ 1 ರಂದು ಸ್ಥಾಪಿಸಲಾಗಿದ್ದ ಶ್ರೀ ಕೃಷ್ಣದೇವರಾಯನ ಪುತ್ಥಳಿಯನ್ನು 70 ವರುಷಗಳ ತರುವಾಯ ಅಂದರೆ 2011 ಮೇ 9ರಂದು ಎತ್ತಿ ಹಾಕಲಾಯಿತು. ಹಿಂದಿನಂತೆಯೇ ಜರುಗಿದ ಸಾರ್ವಜನಿಕ ಕಾರ್ಯಕ್ರಮದಲ್ಲಿ ನೂತನ ಶ್ರೀ ಕೃಷ್ಣದೇವರಾಯನ ಮೂರ್ತಿಯನ್ನು ಸ್ಥಾಪಿಸಲಾಯಿತು.

ಒಟ್ಟಿನಲ್ಲಿ ವಿಜಯನಗರ ಚರಿತ್ರಲೇಖನ ಶಾಸ್ತ್ರದ ಪ್ರಕಾರ, ಈ ಮೇಲಿನ ಎರಡು ಆಂಗ್ಲಭಾಷಾ ಕೈಪಿಡಿಗಳನ್ನು ಇಲ್ಲಿ ಪರಿಶೀಲಿಸಲಾಗಿದೆ. ಇದೊಂದು ಸ್ಥೂಲ ನೋಟದ ಪ್ರಯತ್ನವಷ್ಟೆ. ಇತರ ಭಾಷೆಗಳಲ್ಲಿರುವ ಹಂಪಿ ಸ್ಮಾರಕಗಳನ್ನು ಕುರಿತ ಇಂಥಾ ಕೈಪಿಡಿಗಳನ್ನು ಶೋಧಿಸಿ, ಪರಿಶೀಲಿಸಿ ಒಂದು ಸಮಗ್ರ ನೋಟವನ್ನು ಒದಗಿಸುವ ಪ್ರಯತ್ನ ಮಾಡಬಹುದಾಗಿದೆ. ಹಂಪಿ ಸ್ಮಾರಕಗಳ ಬಗೆಗೆ ಕುತೂಹಲ ಕೆರಳಿಸುವ, ಪ್ರೀತಿ ಹುಟ್ಟಿಸುವ ಹಾಗೂ ನಮ್ಮ ಅರಿವನ್ನು ವಿಸ್ತರಿಸುವ ನಿಟ್ಟಿನಲ್ಲಿ ಇಂಥಾ ಕೈಪಿಡಿಗಳ ಕೊಡುಗೆ ಗಮನೀಯವಾದುದು. ಈಗಾಗಲೇ ಮರೆಯಾಗಿ ಹೋಗಿರುವ ಇಂಥಾ ಎಷ್ಟೋ ಕೈಪಿಡಿಗಳನ್ನು

ಬೆಳಕಿಗೆ ತರುವ ಕಾಯ್ದೆಯನ್ನು ವಿಜಯನಗರ ಇತಿಹಾಸದಲ್ಲಿ ಕೆಲಸ ಮಾಡುತ್ತಿರುವ ಸಂಶೋಧಕರು ಕೈಗೊಳ್ಳುವ ಅಗತ್ಯವಿದೆ.


ಆಧಾರ ಸೂಚಿ

* Vasundhara Filliozast (Ed.) 1999, **Vijayanagara as seen by Domingos paes and Fernado Nuniy,** National Book Trust of India, New Delhi.
* **ವಿಜಯನಗರ ಸ್ಮಾರಕೋತ್ಸವ,** ವಿಜಯನಗರ ಸಾಮ್ರಾಜ್ಯ ಸ್ಮಾರಕೋತ್ಸವ ಮಂಡಳಿ, ಧಾರವಾಡ. 1939; ಮರುಮುದ್ರಣ; ಕರ್ನಾಟಕ ಕುಲಪುರೋಹಿತ ಆಲೂರು ವೆಂಕಟರಾವ ಸ್ಮಾರಕ ರಾಷ್ಟ್ರೀಯ ಟ್ರಸ್ಟ್, ಧಾರವಾಡ, 2014
* ವಿ. ಸೀತಾರಾಮಯ್ಯ, 1990, **ಪಂಪಾಯಾತ್ರೆ,** (5ನೇ ಆವೃತ್ತಿ), ಕನ್ನಡ ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.
* ಲಕ್ಷ್ಮಣ್ ತೆಲಗಾವಿ (ಸಂ.), 2006, **ಕೆ. ರಾಮಯ್ಯಂಗಾರ್ ಅವರ ಜೀರ್ಣ ವಿಜಯನಗರಾದರ್ಶಂ,** ಕನ್ನಡ ವಿಶ್ವವಿದ್ಯಾಲಯ ಹಂಪಿ ಮುರುಮುದ್ರಣ 2015

ಭಾರತೀಯ ಸಂಸ್ಕೃತಿ ಧರ್ಮ, ಸಮಾಜೋದ್ಧಾರ, ಜನಪದದ ರಕ್ಷಣೆಯಂತಹ ಮಹಾನ್ ಧ್ಯೇಯಗಳೊಡನೆ ಸ್ಥಾಪನೆಯಾದ ಮಹಾಸಾಮ್ರಾಜ್ಯ ವಿಜಯನಗರ ಸಾಮ್ರಾಜ್ಯ. ಸುಮಾರು ನಾಲ್ಕುನೂರು ವರ್ಷಗಳ ಕಾಲ ಅತ್ಯಂತ ವೈಭವದಿಂದ ಮೆರೆದ ಈ ಸಾಮ್ರಾಜ್ಯವು ರಕ್ಕಸ-ತಂಗಡಗಿಯ ಯುದ್ಧದಲ್ಲಿ ಹಾಳಾಗಿ, ರಾಜಧಾನಿಯಾಗಿದ್ದ ಹಂಪೆಯು ಹಾಳು ಹಂಪೆಯಾದದ್ದು ಇತಿಹಾಸದ ದುರಂತಗಳಲ್ಲಿ ಒಂದು.

ಈ ಮಹಾನ್ ಸಾಮ್ರಾಜ್ಯದ ಅವಶೇಷಗಳು, ಸ್ಮಾರಕಗಳು ಅನೇಕ ಚದರ ಕಿಲೋಮೀಟರ್‌ಗಳಷ್ಟು ಪ್ರದೇಶದಲ್ಲಿ ವ್ಯಾಪಿಸಿವೆ. ಈ ಸಾಮ್ರಾಜ್ಯದ ಇತಿಹಾಸ, ಸಂಸ್ಕೃತಿ ಇತ್ಯಾದಿಗಳ ಅಧ್ಯಯನವು ಸುಮಾರು ನೂರೈವತ್ತು ವರ್ಷಗಳಷ್ಟು ಹಿಂದೆಯೇ ಆರಂಭಗೊಂಡು, ಇಂದಿಗೂ ಸತತವಾಗಿ ನಡೆಯುತ್ತಲೇ ಇದೆ. ಶಾಸನಗಳು, ನಾಣ್ಯಗಳು, ದೇವಾಲಯಗಳು, ವಾಸ್ತುಶಿಲ್ಪ, ಶಿಲ್ಪಕಲೆ, ಸಾಹಿತ್ಯ ಮುಂತಾದ ವಿಷಯಗಳಲ್ಲಿ ನಡೆಯುತ್ತಿರುವ ಹೊಸ ಶೋಧಗಳು, ಹಿಂದಿನ ಅಧ್ಯಯನಗಳ ಪುನರ್ ವಿಮರ್ಶೆಗಳು ಅಧ್ಯಯನದ ವಿಶಾಲವಾದ ಹರವನ್ನು ತೋರುತ್ತಿವೆ.

ಈ ಹಿನ್ನೆಲೆಯಲ್ಲಿ ರಾಜ್ಯ ಪುರಾತತ್ತ್ವ ಇಲಾಖೆಯ ವಿಜಯನಗರ ಅಧ್ಯಯನವೆಂಬ ವಿಚಾರ ಸಂಕಿರಣವು ಮಹತ್ತ್ವದಾಗಿದ್ದು, ಅನೇಕ ಸಂಶೋಧಕರು ತಮ್ಮ ಸಂಪ್ರಬಂಧಗಳನ್ನು ಇಲ್ಲಿ ಮಂಡಿಸಿ, ನೂತನ ವಿವರಗಳನ್ನು ಪ್ರಸ್ತುತಪಡಿಸಿದ್ದಾರೆ. ಈ ಸಂಪ್ರಬಂಧಗಳ ಸಂಪುಟವೇ ವಿಜಯನಗರ ಅಧ್ಯಯನವೆಂಬ ಹೆಸರಿನಿಂದ ಪ್ರತಿವರ್ಷವೂ ಪ್ರಕಟವಾಗುತ್ತಿದ್ದು, ಪ್ರಸ್ತುತ ಸಂಪುಟವು ಈ ಮಾಲಿಕೆಯ 21ನೆಯ ಸಂಪುಟವಾಗಿದ್ದು, ಇದರಲ್ಲಿ ಅನೇಕ ಮೌಲಿಕ ಬರಹಗಳು ಎಡೆವಡೆದಿದ್ದು, ಸಂಶೋಧಕರಿಗೆ ಪ್ರಮುಖವಾದ ಆಕರ ಸಂಪುಟವಾಗಿ ರೂಪುಗೊಂಡಿದೆ.



ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು-201